**ಕರ್ನಾಟಕ ಸಾಹಿತ್ಯ ಅಕಾಡೆಮಿ**

# ಪ್ರಬಂಧ–2014

**ಇಂದ್ರಕುಮಾರ್ ಎಚ್.ಬಿ**



# ಪ್ರಬಂಧ 2014

ಸಂಪಾದಕರು

ಇಂದ್ರಕುಮಾರ್ ಎಚ್.ಬಿ.

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.
ದೂರವಾಣಿ:080-22211730/22106460
www.karnatakasahithyaacademy.org
Email: sahithya.academy@gmail.com

**PRABHANDHA - 2014**

A Collection of Literary Essays written by various authors,

Edited by: Indrakumar H.B.

Published by

**C.H.Bhagya**

Registrar

Karnataka Sahithya Academy

Kannada Bhavana

J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

| | | |
|---|---|---|
| ಪುಟಗಳು | : | xiv+೨೮೨ |
| ಬೆಲೆ | : | ₹ ೨೩೦/– |
| ಮೊದಲ ಮುದ್ರಣ | : | ೨೦೧೬ |
| ಪ್ರತಿಗಳು | : | ೫೦೦ |

| | | |
|---|---|---|
| Pages | : | xiv+282 |
| Price | : | ₹ 230/- |
| First impression | : | 2016 |
| Copies | : | 500 |

**ಪ್ರಕಾಶಕರು:**

**ಸಿ.ಎಚ್.ಭಾಗ್ಯ**

ರಿಜಿಸ್ಟ್ರಾರ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು–560 002.

**ಮುದ್ರಕರು:**

ಸರ್ಕಾರಿ ಕೇಂದ್ರ ಮುದ್ರಣಾಲಯ

ಆರ್.ವಿ.ಕಾಲೇಜ್ ಅಂಚೆ

8ನೇ ಮೈಲಿ, ಮುತ್ತುರಾಯನಗರ

ಜ್ಞಾನಭಾರತಿ, ಮೈಸೂರು ರಸ್ತೆ

ಬೆಂಗಳೂರು–560 059.

080– 28483133 / 28484518

# ಅಧ್ಯಕ್ಷರ ನುಡಿ

ಶ್ರೀ ಇಂದ್ರಕುಮಾರ್ ಎಚ್.ಬಿ. ಇವರ ಸಂಪಾದಕತ್ವದಲ್ಲಿ ಪ್ರಬಂಧ–2014 ವಾರ್ಷಿಕವು ಮೈದುಂಬಿಕೊಂಡು ರೂಪುಗೊಂಡಿದೆ. ಐವತ್ತೊಂದು ವೈವಿಧ್ಯಮಯ ವಿಷಯಗಳನ್ನೊಳಗೊಂಡ ಸಶಕ್ತ ಪ್ರಬಂಧಗಳು ಈ ಸಂಗ್ರಹದಲ್ಲಿ ಪ್ರಕಟವಾಗುತ್ತಿರುವುದು ನನಗೆ ಸಂತಸ ತಂದಿದೆ. ಏಕೆಂದರೆ ಈ ಸಂಗ್ರಹದಲ್ಲಿ ಆಯ್ದುಕೊಂಡಿರುವ ಪ್ರಬಂಧಕಾರರು ನಾಡಿನ ಮೇಲ್ಪಂಕ್ತಿಯಲ್ಲಿರುವ, ಕವಿಗಳು, ಕತೆಗಾರರು, ವಿಮರ್ಶಕರು, ಚಿಂತಕರು. ಹಾಗಾಗಿ ಸೃಜನಶೀಲತೆಯ ಹಲವು ಮುಖಗಳನ್ನು, ರಂಗ ರೂಪಗಳನ್ನು ಈ ಪ್ರಬಂಧಗಳಲ್ಲಿ ಕಾಣಬಹುದು.

ಡಾ. ಎಚ್.ಎಸ್. ವೆಂಕಟೇಶ ಮೂರ್ತಿಯವರ 'ಚಂದ್ರನ ಕೊಂಬಿಗೆ ಬನ್ನಿ ಚಿಗುರು' ಪ್ರಬಂಧವೇ ಆಗಲಿ, ಡಾ. ಕೃಷ್ಣಮೂರ್ತಿ ಹನೂರರ 'ಕತ್ತಲ ಸೀಮೆಯ ಕಣಿವೆಯಲ್ಲಿ' ಆಗಲಿ, ಡಾ. ಚಿಂತಾಮಣಿ ಕೊಡ್ಲೆಕೆರೆ ಅವರ 'ಮಿಸ್‌ಕಾಲ್' ಆಗಲಿ, ಶ್ರೀಮತಿ ರೂಪ ಹಾಸನ ಅವರ 'ಸೃಷ್ಟಿಗೆ ಗಡಿಗಳಿವೆಯೆ?' ಆಗಲಿ– ಈ ಲೇಖಕರ ಕಲ್ಪನೆಯ, ಯೋಚನೆಯ, ಚಿಂತನೆಯ ಕ್ರಮಗಳೇ ವಿಭಿನ್ನವಾದವು. ಈ ಸಂಕಲನದಲ್ಲಿನ ಹಿರಿಯ ಕಿರಿಯ ಲೇಖಕ, ಲೇಖಕಿಯರ ಪ್ರಬಂಧಗಳನ್ನು ಓದುತ್ತಾ ಖುಷಿ ಪಟ್ಟಿದ್ದೇನೆ.

ಪ್ರಬಂಧಗಳಿಗೆ ಆಯ್ದುಕೊಂಡ ವಿಷಯಗಳ ಪಟ್ಟಿಯನ್ನು ನೋಡಿದಾಗ ನನಗೆ ಸೋಜಿಗ, ನಗೆ, ಚಿಂತೆ, ನೋವು ಹೀಗೆ ಎಲ್ಲ ಭಾವಗಳೂ ಒತ್ತಟ್ಟಿಗೆ ಬಂದವು. 'ಎಲ್ಲಿ ಹೋದವು ಆ ತಿಗಣೆ ಹೇನುಗಳು' ಆಗಲಿ, 'ಮರೆವೆಯ ಮಂತ್ರದಂಡ' ಆಗಲಿ, 'ಮಳೆ ಎಂಬ ನಕ್ಷತ್ರಿಕ' ಆಗಲಿ, 'ಗಣೇಶ ಪೆಂಡಾಲಿನ ಮೈಕಾಸುರರು'– ಹೀಗೆ ಬಹಳ ಕುತೂಹಲಕಾರಿ ವಿಷಯಗಳ ಬಗ್ಗೆ ಬರೆದಿರುವ ಪ್ರಬಂಧಗಳು ನಮ್ಮ ಗಮನ ಸೆಳೆದು ಓದುಗರನ್ನು ತಮ್ಮತ್ತ ಕರೆದೊಯ್ಯುತ್ತವೆ.

ಆಧುನಿಕ ಜೀವನದ ಆಧುನಿಕ ಸಮಸ್ಯೆಗಳು, ವಸ್ತು, ವಿನ್ಯಾಸ, ಉಡುಗೆ – ತೊಡುಗೆ ಬಗ್ಗೆ ಹಾಗೂ ವಿಜ್ಞಾನ, ಸಾಮಾಜಿಕ, ರಾಜಕೀಯ ವಿಷಯಗಳನ್ನು ಕುರಿತ ಪ್ರಬಂಧಗಳಿದ್ದರೆ ಜನಜೀವನದ ಸಂಪೂರ್ಣ ಪ್ರತಿಬಿಂಬವು ಕಣ್ಣಿಗೆ ಎಟುಕುತಿತ್ತು. 'ಸಾಹಿತ್ಯವೆಂದರೆ ಜೀವನದ ಪ್ರತಿಬಿಂಬ'– ಎಂದೆಲ್ಲಾ ಸಾಹಿತ್ಯದ ವ್ಯಾಖ್ಯಾನ ಮಾಡಿದಾಗ ಸಮಕಾಲೀನ ಬದುಕಿನ ಎಲ್ಲಾ ವಿದ್ಯಮಾನಗಳೂ ಈ ಪ್ರಬಂಧಗಳಲ್ಲಿ ಬರಬೇಕಿತ್ತು. ಕತೆ, ಕಾದಂಬರಿ. ಕವಿತೆಗಳಿಗಿಂತ ಪ್ರಬಂಧದಲ್ಲಿ ಆ ಎಲ್ಲ ವಿಷಯಗಳಿಗೆ ಮುಖದ್ವಾರ ತೆರೆದಿರುತ್ತದೆ. ಅದೇನೇ ಇದ್ದರೂ ಪ್ರಬಂಧ–2014 ತನ್ನ ಶ್ರೇಷ್ಠತೆಯನ್ನು ಆಯ್ಕೆಯಲ್ಲಿ, ಗುಣಮಟ್ಟದಲ್ಲಿ ಪಡೆದುಕೊಂಡಿದೆ. ಇದನ್ನೆಲ್ಲ ಗ್ರಹಿಸಿಯೇ

ಶ್ರೀ ಇಂದ್ರಕುಮಾರ ಎಚ್.ಬಿ.ಅವರು ಒಳ್ಳೆಯ ಪ್ರಬಂಧಗಳನ್ನು ಆಯ್ದು, ಸಂಗ್ರಹಿಸಿಕೊಟ್ಟಿದ್ದಕ್ಕೆ ಅವರಿಗೆ ಹಾರ್ದಿಕ ಕೃತಜ್ಞತೆಗಳು ಸಲ್ಲುತ್ತವೆ. ಈ ಪುಸ್ತಕವನ್ನು ಹೊರತರಲು ಸಹಕರಿಸಿ ಶ್ರಮಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀಮತಿ ಸಿ.ಎಚ್.ಭಾಗ್ಯ, ಶ್ರೀಮತಿ ವಿಜಯಲಕ್ಷ್ಮಿ ಮತ್ತು ಶ್ರೀ ಹರೀಶ್ ಹಾಗೂ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯಬಯಸುತ್ತೇನೆ.

**ಮಾಲತಿ ಪಟ್ಟಣಶೆಟ್ಟಿ**
ಅಧ್ಯಕ್ಷರು

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಎರಡನೇ ಮಹಡಿ,
ಜೆ.ಸಿ.ರಸ್ತೆ, ಬೆಂಗಳೂರು–560 002.

# ಕನ್ನಡ ಸಾಹಿತ್ಯದಲ್ಲಿ ಪ್ರಬಂಧ

1

ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಪ್ರಕಾರ ಕಾವ್ಯ, ಸಣ್ಣಕಥೆ ಮತ್ತು ಕಾದಂಬರಿ ಪ್ರಕಾರಗಳ ನಡುವೆಯೂ ಸಮೃದ್ಧವಾಗಿ ಬೆಳೆದು ಬಂದಿದೆ. ಕಾಲ್ಪನಿಕತೆಯನ್ನು ಸಾಹಿತ್ಯ ಪ್ರಕಾರವೊಂದರಲ್ಲಿ ದುಡಿಸಿಕೊಳ್ಳುವ ಮೊದಲು ಬರವಣಿಗೆಯೊಂದು ಸಾಹಿತ್ಯದ ವಸ್ತುವಾಗಿ ಉಳಿಯುವಂತೆ ಪ್ರಬಂಧ ಸಹಾಯ ಮಾಡುತ್ತದೆ. ಗೊತ್ತಿರುವ ಎಲ್ಲ ರೀತಿಯ ಪ್ರಜ್ಞೆಯನ್ನು ಶಬ್ದ-ಭಾಷೆಯ ಬಳಕೆಯಲ್ಲಿ ನಿರೂಪಣೆಯ ಶೈಲಿಯಲ್ಲಿ ಕಟ್ಟಿ ಲಾಲಿತ್ಯವೋ ನೀತಿಬೋಧೆಯೋ ವಾಸ್ತವಸ್ಥಿತಿಯ ಪ್ರದರ್ಶನವೋ ಆಗಿ ಪ್ರಬಂಧ ಓದುಗರನ್ನು ರಂಜಿಸುತ್ತದೆ. ಮುಕ್ತವಾದ ಅಭಿವ್ಯಕ್ತಿಯನ್ನು ವೃದ್ಧಿಸುವ ಪ್ರಬಂಧ ಮುಕ್ತ ಚಿಂತನೆಗೂ ಅವಕಾಶ ನೀಡುತ್ತದೆ.

ಗದ್ಯರೂಪದಲ್ಲಿರುವ ಪಠ್ಯವೊಂದನ್ನು ಪ್ರಬಂಧ ಎಂದು ಗುರುತಿಸುವಲ್ಲಿ ನಮಗೆ ಅದರಲ್ಲಿನ ಸಾಹಿತ್ಯದ ಸ್ವಾರಸ್ಯ, ಹೇಳಲು ಹೊರಟಿರುವ ವಿಷಯ ಮತ್ತು ಅದನ್ನು ನಿರ್ವಹಿಸಿರುವ ರೀತಿ, ಸಾಂಸ್ಕೃತಿಕ ಅಂಶಗಳು ನೆರವಾಗಬಲ್ಲವು. ಪ್ರಬಂಧಕಾರನಿಗೆ ಇರಬೇಕಾದ ಲಾಲಿತ್ಯ, ಸಮಯಪ್ರಜ್ಞೆ, ಹೋಲಿಕೆಯ ಗುಣ ಆ ಪ್ರಬಂಧದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಜಾಗತಿಕ ಸಾಹಿತ್ಯದ ಮಹಾನ್ ಪ್ರಬಂಧಕಾರರ ನಡುವೆ ನನಗೆ ಚಾರ್ಲ್ಸ್ ಲ್ಯಾಂಬ್‌ನ 'ಡ್ರೀಮ್ ಚಿಲ್ಡ್ರನ್ – ಎ ರೆವೆರಿ' ನೆನಪಾಗುತ್ತದೆ.

ಈ ನಡುವೆ ಬೈಟ್ಸ್, ಲಹರಿಗಳು, ಲವಲವಿಕೆಯ ಬರಹಗಳು.. ಲಲಿತ ಪ್ರಬಂಧಗಳ ಗುಂಪಿಗೆ ಬಂದು ಸೇರಿಕೊಳ್ಳಲು ಹಂಬಲಿಸುತ್ತಿವೆ. ಪ್ರಕಾರ ಹಿಗ್ಗುತ್ತಿದೆಯೋ ಪ್ರಕಾರವನ್ನೇ ಬದಲಾಯಿಸಲಾಗುತ್ತಿದೆಯೋ ಹೇಳಲಾಗುತ್ತಿಲ್ಲ. ಎಲ್ಲವೂ ಸೇರಿಕೊಂಡು ಉಳಿದೆಲ್ಲ ಸಾಹಿತ್ಯಪ್ರಕಾರಕ್ಕಿಂತಲೂ ಬಲಿಷ್ಠವಾಗುವ ಲಕ್ಷಣಗಳೂ ಇವೆ.

**2**

ಈ ಸಂಪಾದನೆಯಡಿ ಬಂದಿರುವ ವೈವಿಧ್ಯಮಯ ಪ್ರಬಂಧಗಳನ್ನು ಕುರಿತು ಹೇಳುವುದಾದರೆ ಇದು ಸಾಹಿತ್ಯದ ನಿರ್ದಿಷ್ಟ ಘಟ್ಟಗಳ ಪರಿಮಿತಿಯನ್ನು ಮೀರಿ ಬೆಳೆದ ಕಾಲ. ಇಲ್ಲಿ ಪ್ರಬಂಧಕಾರನ ಸ್ವಾತಂತ್ರ್ಯ ಹೆಚ್ಚಿನ ಪ್ರಮಾಣದಲ್ಲಿದ್ದು ತನಗೆ ತೋಚಿದ ವಿಷಯದ ಮೇಲೆ ನಿರರ್ಗಳವಾಗಿ ನಿರಾಯಾಸವಾಗಿ ತನ್ನ ಮನಸ್ಸನ್ನು ಹರಿಯಬಿಟ್ಟಿದ್ದಾನೆ. ವಿಷಯ ವೈವಿಧ್ಯತೆಯಿದ್ದಂತೆ ಕಟ್ಟುವಲ್ಲಿನ ಶ್ರದ್ಧೆ ಪ್ರಬಂಧವೊಂದನ್ನು ಸರ್ವಾಂಗಸುಂದರವಾಗಿ ಮಾಡುತ್ತದೆ.

ಹಿರಿಯ ಸಾಹಿತಿಗಳಾದ ಎಚ್.ಎಸ್ ವೆಂಕಟೇಶಮೂರ್ತಿಯವರ **'ಚಂದ್ರನ ಕೊಂಬಿಗೆ ಬನ್ನಿ ಚಿಗುರು'** ಪ್ರಬಂಧ ಯುಗಾದಿ ಹಿನ್ನೆಲೆಯಲ್ಲಿ ನಡೆಯುವ ಪ್ರಸಂಗಗಳನ್ನು ಸ್ವಾರಸ್ಯಕರವಾಗಿ ಬಿಂಬಿಸುತ್ತದೆ. ವಿಶಾಖಪಟ್ಟಣದಿಂದ ಭದ್ರಾಚಲಕ್ಕೆ ಕಾಡುಮಾರ್ಗವಾಗಿ ಹೊರಟ ಷಟಲ್ ಬಸ್ಸಿನಲ್ಲಿ ಪ್ರಯಾಣ ಆರಂಭಿಸಿದ ನಂತರ ಆಗುವ ಅನುಭವವಗಳನ್ನು ಮೂಢನಂಬಿಕೆ, ಕಂದಾಚಾರಗಳನ್ನು **'ಕತ್ತಲ ಸೀಮೆಯ ಕಣಿವೆಯಲ್ಲಿ'** ಪ್ರಬಂಧದಲ್ಲಿ ಕೃಷ್ಣಮೂರ್ತಿ ಹನೂರು ಪ್ರಸ್ತುತ ಪಡಿಸಿದ್ದಾರೆ. ಹದಿನೈದರ ಪ್ರಾಯದ ಹುಡುಗಿಯನ್ನು ಕೋಳಿಗಳಂತೆ ಕೈಕಾಲು ಕಟ್ಟಿ ಕಣಿವೆ ಕಡೆ ಪೂಜೆಗೆ ಕರೆದೊಯ್ಯುವ ಜನರ ಗುಂಪಿನ ಹಿಂದೆ ಹೋಗುವ ಪ್ರಬಂಧಕಾರರು ಇನ್ನಾದರೂ ನಮ್ಮ ಪ್ರಜ್ಞೆಯನ್ನು ಆವರಿಸಿರುವ ಹುಚ್ಚುತನವನ್ನು ಬಯಲು ಮಾಡುತ್ತಾರೆ. **'ಹಕ್ಕಿಗಳ ಸಾಕು ಪುರಾಣ'** ಶೀರ್ಷಿಕೆಯೇ ಹೇಳುವಂತೆ ಹಕ್ಕಿಗಳ ಸಾಕುವ ಕಷ್ಟಕಾರ್ಪಣ್ಯಗಳನ್ನು ಕಲೀಮ್ ಉಲ್ಲಾ ಅವರು ತಮ್ಮದೇ ಶೈಲಿಯಲ್ಲಿ ನಮ್ಮ ಮುಂದೆ ಇಡುತ್ತಾರೆ. ಸರಳ ಜೀವನದ ಪಾಠವನ್ನು ಚಿಂತಾಮಣಿ ಕೊಡ್ಲೆಕೆರೆಯವರು **'ಮಿಸ್ ಕಾಲ್'** ಪ್ರಬಂಧದ ಮೂಲಕ ಮೂಡಿಸುತ್ತಾರೆ. ಮಿಸ್‌ಕಾಲ್ ಕೊಡುವ ಮನೋಭಾವವೇ ಕೆಡುಕಿನದ್ದು ಎಂದು ಹೇಳುತ್ತಾ ಮನುಷ್ಯ ವರ್ತನೆಯ ವಿವಿಧ ಎಲ್ಲೆಗಳ ವಿಶ್ಲೇಷಣೆ ಮಾಡುತ್ತಾ ತಮ್ಮ ನಿಲುವನ್ನು ಪರಿಣಾಮಕಾರಿಯಾಗಿ ಹೇಳುತ್ತಾರೆ. ಬದಲಾದ ಜನರ ಜೀವನಶೈಲಿಯನ್ನು ನಗರದ ಬೆಳಗಿನ ಸಮಯದ ಬಿರುಸಿನ ಚಟುವಟಿಕೆಗಳನ್ನು ವೀಕ್ಷಕ ಶಕ್ತಿಯ ಆಧಾರದ ಮೇಲೆ **'ಕಾಮಾಕ್ಯ ಎಂಬ ಹಗಲ ಹೊಳೆ'** ಪ್ರಬಂಧದ ಮೂಲಕ 'ಸಂಚಯ' ಖ್ಯಾತಿಯ ಪ್ರಹ್ಲಾದ ಡಿ.ವಿಯವರು ಬದಲಾಗುತ್ತಿರುವ ನಾಗರಿಕತೆಯ ಚಿತ್ರಣವನ್ನು ಕಟ್ಟಿಕೊಡುತ್ತಾರೆ.

ಜೀವನದ ಬೆಳಗಿನ ಸಾಹಸಮಯ ಘಟನೆಯನ್ನು ಬೇದ್ರೆ ಮಂಜುನಾಥ ಅವರು ವಾಯುವಿಹಾರ ಸಮಯದ **'ಚುಮುಚುಮು ನಸುಕಿನಲಿ ಮೂರು ಕರಡಿಗಳಾಡುತ್ತಿದ್ದವು'** ಪ್ರಬಂಧದಲ್ಲಿ ಕುತೂಹಲಕಾರಿಯಾಗಿ ಪ್ರಸ್ತುತ ಪಡಿಸಿದ್ದಾರೆ. ಬೆಳಕು ಅದೆಷ್ಟು ಆಯಾಮಗಳಲ್ಲಿ ಮನುಷ್ಯನ ಪ್ರಜ್ಞೆಯನ್ನು ಮುಟ್ಟಬಲ್ಲದೆಂದು **'ಬೆಳಕಿನ ಆಸ್ತಿಕರು ನಾವೆಲ್ಲಾ'** ಪ್ರಬಂಧದಲ್ಲಿ ರಮೇಶ ಕೆದಿಲಾಯ ಅವರು ತಮ್ಮ ವಿಸ್ತೃತ ವಿವರಣಾ ಶೈಲಿಯಲ್ಲಿ ಹೇಳುತ್ತಾರೆ. **'ನಿನಗೆ ಬೇರೆ ಹೆಸರು ಬೇಕೆ?'** ಪ್ರಬಂಧದಲ್ಲಿ ಚಿದಾನಂದ ಸಾಲಿಯವರು ಹೆಣ್ಣನ್ನು ವಿವಿಧ ಆಯಾಮಗಳಲ್ಲಿ ಚಿತ್ರಿಸುತ್ತಾರೆ. **'ಬೆನ್ನಿಗೆ ಬಿದ್ದರೂ ಭಾರವಾಗದ ಅನುಪಮ ಸಂಬಂಧ'** ಪ್ರಬಂಧದಲ್ಲಿ ಸಂಬಂಧದ ಕುರಿತಾದ ಅಪರೂಪದ ಬರವಣಿಗೆಯನ್ನು ಜನಪ್ರಿಯ ಪ್ರಬಂಧಕಾರರಾದ ಎ.ಆರ್. ಮಣಿಕಾಂತ್ ಅವರು ನಿರೂಪಿಸಿದ್ದಾರೆ. ಕಂಪ್ಯೂಟರ್ ವೈರಸ್‌ಗಳಿಗೆ ಹೆದರಿ ಹೋದ ಈಗಿನ ಮನುಷ್ಯನಿಗೆ ಒಂದು ಕಾಲದ ತಿಗಣೆ, ಹೇನುಗಳೆಷ್ಟು ಕಾಟಕೊಟ್ಟಿದ್ದವೆಂದು ನೆನಪಿಸಿಕೊಡುವ

ಅಪರೂಪದ ಪ್ರಬಂಧವಾದ **'ಎಲ್ಲಿ ಹೋದವು ಆ ತಿಗಣೆ, ಹೇನುಗಳು'** ರಾಮನಮಲಿಯವರ ಗತಕಾಲವನ್ನು ಹಿಡಿದಿಡುವ ಶಕ್ತಿಯನ್ನು ಪ್ರಕಟಪಡಿಸುತ್ತದೆ. ಬಹುಮುಖ ಪ್ರತಿಭೆಯ ಛಾಯಾ ಭಗವತಿಯವರು **'ಪರಿಮಳದ ಜಾಡು ಹಿಡಿದು'** ಹೊರಟ ವಾಸನೆ ಪ್ರಪಂಚದ ಬಹುಮುಖಿ ಮಗ್ಗುಲುಗಳನ್ನು ತೆರೆದಿಡುತ್ತಾರೆ. **'ನಗರದ ಒಡಲಿಗೆ ಅನ್ನದ ಬುತ್ತಿಗಳು'** ಡಿಎಂಕುರ್ಕೆ ಪ್ರಶಾಂತ್ ಅವರು ಮಹಾನಗರವೊಂದರ ವಿಕ್ಷಿಪ್ತ ಗಳಿಗೆಯನ್ನು ಹಿಡಿಯುವ ಸಾಮರ್ಥ್ಯವನ್ನು ತೋರಿಸುತ್ತದೆ. **'ಅಪ್ಪನಾಗುವ ಕಷ್ಟ ಸುಖ'** ಪ್ರಬಂಧದ ಮೂಲಕ ಶ್ರೀನಿಧಿ ಡಿ.ಎಸ್. ಗಂಡುಜೀವಿಯಲ್ಲೂ ಹೆಣ್ಣಿಗೆ ಸಮನಾದ ಮಮತೆ, ಪ್ರೀತಿ  ತನ್ನ ಕರುಳ ಕುಡಿಯ ಮೇಲಿರುವ ವಾತ್ಸಲ್ಯ ಇರುವ ಸತ್ಯವನ್ನು ಕಾಣಿಸುತ್ತಾರೆ. **'ಅಹಿಭೋ ಅತಿಥಿ ಮಹೋದಯಾ'** ಎನ್ನುತ್ತ ಆತಿಥ್ಯ ಕುರಿತಾದ ವಿಸ್ತೃತ ವ್ಯಾಖ್ಯಾನ ಕೊಡುವ ಪ್ರಬಂಧದ ಮೂಲಕ ಮಧುರಾ ಕರ್ಣಮ್ ಅವರು ಪ್ರಸ್ತುತ ಸನ್ನಿವೇಶದ ವಿಡಂಬನೆ ಮಾಡುತ್ತಾರೆ. **'ನಮ್ ಸ್ಕೂಲೂ.. ನಮ್ ಮೇಷ್ಟ್ರು..'** ಎಂದು ತಮ್ಮ ಬಾಲ್ಯದ ನೆನಪುಗಳನ್ನು ಶಾಲೆಯ ಕಲಿಕೆಯೊಂದಿಗೆ ಬೆಸೆದು ನವಿರಾಗಿ ಹೇಳಿರುವ ಸಂತೇಬೆನ್ನೂರು ಫೈಜ್ನಟ್ರಾಜ್ ಅವರು ಶಾಲೆಗಳು ನಿಜಕ್ಕೂ ಹೇಗಿರಬೇಕು, ಹೇಗಿರುತ್ತವೆ ಎಂಬ ವಾಸ್ತವವನ್ನೂ ಹಿನ್ನೆಲೆಯಲ್ಲಿ ತೋರ್ಪಡಿಸುತ್ತಾರೆ.

**'ತೇಲುವ ಸ್ವರ್ಗದೊಳಗಿನ ಆರ್ದ್ರ ಕಥೆಗಳು'** ಎಂದು ಪ್ರಬಂಧದ ಮೂಲಕ ಹೇಳುತ್ತಾ ವೈಶಾಲಿ ಹೆಗಡೆಯವರು ಪ್ರವಾಸದ ಅನುಭವವನ್ನು ಜಾಗತಿಕ ಪ್ರಜ್ಞೆಯ ಆಧಾರದ ಮೇಲೆ ಪ್ರಸ್ತುತಪಡಿಸಿದ್ದಾರೆ. **'ಗಾಂಧಿ ಮಾರ್ಗದ ಚಹರೆಗಳು'** ಪ್ರಬಂಧದಲ್ಲಿ ಬೆಂಗಳೂರು ನಗರದಲ್ಲಿ ಗಾಂಧಿಯನ್ನು ವಿವಿಧ ಸನ್ನಿವೇಶಗಳಲ್ಲಿ ಇರಿಸಿ, ಪ್ರತಿಕ್ರಿಯೆ ನಿರೀಕ್ಷಿಸಿ, ಆಘಾತವನ್ನು ಬದಲಾದ ಪ್ರಪಂಚದ ಹಿನ್ನೆಲೆಯಲ್ಲಿ ಪದ್ಮನಾಭ ಭಟ್ ಶೇವ್ಕಾರ ಅವರು ಮಂಡಿಸುತ್ತಾರೆ. ಪ್ರಸಾದ್ ಶೆಣೈ ಅವರು **'ಬೆಕ್ಕಿಗೊಂದು ಶ್ರದ್ಧಾಂಜಲಿ'** ಪ್ರಬಂಧದಲ್ಲಿ ಮನುಷ್ಯನ ಮಾರ್ಜಾಲ ಪ್ರೀತಿಯನ್ನು ಸೊಗಸಾಗಿ ಬಿಂಬಿಸುತ್ತಾರೆ. **'ತಮ್ಮನಂತಿದ್ದ ರಾಜನನ್ನು ನೆನೆದು'** ಪ್ರಬಂಧ ಬರೆದ ಟಿ.ಎಸ್. ಗೊರವರ ಅವರು ಶೋಕಿಯ ವಸ್ತುಗಳಷ್ಟೇ ಆಗಿ ಹೋಗಿರುವ ಪೆಟ್‌ಗಳ ನಡುವೆ, ಸಾಕುಪ್ರಾಣಿಗಳ ಕೊರತೆಯನ್ನು ಅದರ ಮೆಚ್ಚತಕ್ಕ ಸ್ವಭಾವವನ್ನು ಕಳೆದುಕೊಂಡ ನೋವನ್ನು ಆರ್ದ್ರವಾಗಿ ಬಿಚ್ಚಿಡುತ್ತಾರೆ.

**'ಮರೆವು ಎಂಬ ಮಂತ್ರದಂಡ'**ವು ಕೆಲಸ ಮಾಡುವ ಬಗೆಯನ್ನು ಬಹುವೈವಿಧ್ಯವಾಗಿ ಹೇಳುವ ಗೋವಿಂದರಾಜು ಟಿ ಅವರು ಮರೆವಿಗೆ ಎಂತಹ ಶಕ್ತಿಯಿದೆಯೆಂದೂ ಅರ್ಥೈಸುತ್ತಾರೆ. ನೌಕರಿ–ಉದ್ಯೋಗ–ಕೆಲಸ–ಕೂಲಿ ಈ ದುಡಿಮೆಯ ಪ್ರಕಾರಗಳನ್ನು

ವೈಯಕ್ತಿಕ ಅನುಭವದ ಹಿನ್ನೆಲೆಯಲ್ಲಿ **'ಕೆಲಸದ ಮಾತು'** ಪ್ರಬಂಧದಲ್ಲಿ ಜಾಹ್ನವಿ ಹಳ್ಳೂರ ಅವರು ಸೊಗಸಾಗಿ ಹಿಡಿದಿದ್ದಾರೆ. **'ಎರಡು ದಿನದ ನೆಮ್ಮದಿ ಅರಸಿ'** ಹೊರಟ ಅಕ್ಷಯ್ ಪಂಡಿತ್ ಅವರು ಮನಸ್ಸು ಎರಡೇ ದಿನದಲ್ಲಿ ತನ್ನೂರಿಗೆ ಹೋಗಿ ಎಲ್ಲ ಮಮಕಾರದ ಪ್ರೇಮದ ಸಹಚರ್ಹದ ಸುಖ ಕಾಣಲು ಹವಣಿಸುವ ಬಗೆಯನ್ನು ವೈಯಕ್ತಿಕ ನೆಲೆಯಲ್ಲಿ ವಿವರಿಸಿದ್ದಾರೆ. ನನಗಂತೂ ಮೀನಂದರೆ ಆಗುವುದಿಲ್ಲ ಎನ್ನುತ್ತಲೇ ಮೀನಿನ ಕುರಿತಾದ ನಾನಾ ಪ್ರಕಾರದ ಸಂಗತಿಗಳನ್ನು **'ಮೀನು'** ಪ್ರಬಂಧದಲ್ಲಿ ನಾಗೇಂದ್ರಪ್ಪ ದಾಗಿನಕಟ್ಟೆಯವರು ಹೇಳುತ್ತಾರೆ. ಶಂಖದಿಂದ ಬಂದರೆ ಮಾತ್ರ ತೀರ್ಥ ಎನ್ನುವ ಗಮ್ಮತ್ತಿನಲ್ಲೇ ಶಂಖ ಊದಿದರೆ ಮಾತ್ರ ಭಾಗ್ಯ, ಸೌಖ್ಯ, ನೆಮ್ಮದಿ ಎನ್ನುವ ಪರಿಣಾಮವನ್ನು **'ಊದೋ ಶಂಖ!'** ಪ್ರಬಂಧದಲ್ಲಿ ವಿಜಯಾ ಶ್ರೀಧರ್ ಅವರು ಉಲ್ಲೇಖಿಸುತ್ತಾರೆ. ರುಚಿಯ ವ್ಯಾಖ್ಯಾನವನ್ನು ಬದಲಾದ ಅಭಿರುಚಿಯನ್ನು **'ಗೋಲ್ಗಪ್ಪ ಗೋಪುರದ ಸುತ್ತ...'** ಪ್ರಬಂಧದಲ್ಲಿ ಸುಶ್ರುತ ದೊಡ್ಡೇರಿಯವರು ರುಚಿಯಾಗಿ ನಮ್ಮ ಮುಂದಿಟ್ಟಿದ್ದಾರೆ. **'ರಸ್ತೆಯೆಂಬ ಸ್ವತ್ತು, ಕಸರತ್ತು ಮತ್ತು ಗಮ್ಮತ್ತು'** ರಸ್ತೆಯ ಮೇಲಿನ ಚಾಲಕನ ಪ್ರಪಂಚವನ್ನು ರಸ್ತೆ ನಿಯಮವನ್ನು ಧೂಳಿಪಟ ಮಾಡಿ ಬದುಕುತ್ತಿರುವ ನಾಗರೀಕರನ್ನು ಕುರಿತು ತುರುವೇಕೆರೆ ರವಿಶಂಕರ್ ಅವರು ಅಸಹನೆಯನ್ನೂ ಚಾಲಕರ ನಿರ್ಲಕ್ಷ್ಯತೆಗೆ ಅಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ. **'ಬುದ್ಧಿ ಬಂದಾಗ...'** ಪ್ರಬಂಧದಲ್ಲಿ ಚೈತ್ರ ಕೆ.ಎಸ್. ಅವರು ಬುದ್ಧಿ ಹಲ್ಲು ಬರುವುದರ ಮತ್ತು ಬೀಳುವುದರ ವಿಷಯವ್ಯಾಪ್ತಿಯಲ್ಲೇ ವೈದ್ಯಕೀಯ ಲೋಕದ ಸ್ವಾರಸ್ಯವನ್ನು ಉತ್ತಮವಾಗಿ ನಮ್ಮ ಮುಂದಿಟ್ಟಿದ್ದಾರೆ. **'ಮದುವೆಯ ಹಿನ್ನೆಲೆಯಲ್ಲಿ...'** ಪ್ರಬಂಧದಲ್ಲಿ ಕಾವೇರಿ ಎಸ್.ಎಸ್. ಅವರು ಮದುವೆಯ ಹಿನ್ನೆಲೆ, ಮುನ್ನೆಲೆಗಳಲ್ಲಿ ಘಟಿಸುವ ಅಸಂಖ್ಯ ಸಂಭ್ರಮದ ಚಟುವಟಿಕೆಗಳಲ್ಲಿನ ಕೆಲವು ವಿಶಿಷ್ಟ ಸಂಗತಿಗಳ ಕುರಿತು ಮನಬಿಚ್ಚಿ ಮಾತನಾಡಿದ್ದಾರೆ. **'ಶ್ರಾವಣ ಬಂತು ನಾಡಿಗೆ'** ಪ್ರಬಂಧದಲ್ಲಿ ಶ್ರಾವಣದ ಆಗಮನಕ್ಕೆ ತನ್ನೂರಿನಲ್ಲಿ ತನ್ನ ಮನೆಯಲ್ಲಿ ಪ್ರಬಂಧದಲ್ಲಿ ಆಗುವ ಜೀವಸಂಚಲನದ ಬಗೆಯನ್ನು ಅಪ್ಪಟ ದೇಸೀ ಸೊಗಡನ್ನು ಪರಿಚಯಿಸುವಂತೆ ರಶ್ಮಿ ಎಸ್ ಅವರು ಹೇಳಿದ್ದಾರೆ. ದೈನಿಕ ಸಂಗತಿಗಳು ಬಹು ಆಪ್ತವಾಗಿ ಮೂಡಿಬಂದಿವೆ.

ಗೃಹಿಣಿಯರ ಅಂತರಂಗವನ್ನು ತಮ್ಮ ಪ್ರಬಂಧಗಳ ಮೂಲಕ ಸಶಕ್ತವಾಗಿ ಹೇಳುತ್ತ ಬಂದಿರುವ ಸ್ಮಿತಾ ಅಮೃತ್‌ರಾಜ್ ಅವರು **'ಬದುಕು ಮತ್ತು ಮಳೆ ಹಾತೆ'** ಪ್ರಬಂಧದ ಮೂಲಕ ಮಳೆ ಹಾತೆಯೆಂಬ ಕೀಟವೊಂದರ ಸುತ್ತ ಬದುಕಿನ ನೇಯ್ಗೆಯ ತಾತ್ವಿಕತೆಯನ್ನು ಮಾರ್ಮಿಕವಾಗಿ ಮೂಡಿಸಿದ್ದಾರೆ. **'ಮಳೆ ಎಂಬ ನಕ್ಷತ್ರಿಕ'** ಮಳೆಯ ಬಗ್ಗೆ ಹೊಸ ಆಯಾಮದಲ್ಲಿ ಹುಟ್ಟಿಕೊಂಡ ಪ್ರಬಂಧಕ್ಕೆ ಮನಸ್ಸು ಮುಟ್ಟುವ ಶಕ್ತಿಯಿದೆ. ಹಾಗೆಯೇ ಭಾವುಕ ಕ್ಷಣವೊಂದನ್ನು ಮಾನಸಿಕ ಸ್ಪಂದನೆಯ ಮೂಲಕ ಹಿಡಿಯುವ

ಪ್ರಬಂಧ **'ಕಣ್ಣಂಚಿನಲ್ಲಿ ತೇವಗೊಳ್ಳುವ ಪುಳಕ'**. ರೂಪ ಹಾಸನ ಅವರು **'ಸೃಷ್ಟಿಗೆ ಗಡಿಗಳಿವೆಯೆ?'** ಎಂಬ ಪ್ರಶ್ನೆಗೆ ಉತ್ತರವನ್ನು ನಿರೀಕ್ಷಿಸುತ್ತಲೇ ಓದುಗನಲ್ಲಿ ಪರಿಣಾಮಕಾರಿ ಆಲೋಚನೆಯನ್ನು ಬೆಳೆಸುವ ಪ್ರಬಂಧವನ್ನು ಕೊಟ್ಟಿದ್ದಾರೆ. **'ಸ್ವಪ್ನ ಸುಂದರಿ ನ್ಯೂಯಾರ್ಕ್'** ಅಮೆರಿಕಾದ ನಗರಗಳಲ್ಲಿಯೆ ಅತಿರಂಜಿತ ವರ್ಣನೆಯನ್ನು ಇಟ್ಟುಕೊಂಡ ನ್ಯೂಯಾರ್ಕ್ ವಿಭಿನ್ನ ದೃಷ್ಟಿಕೋನದಲ್ಲಿ ಪ್ರಬಂಧಕಾರರಿಗೆ ಕಂಡುಬಂದಿದೆ.

**'ದ ಮೇಕಿಂಗ್ ಆಫ್ ಉಪ್ಪಿನ ಕಾಯಿ'** ಜಿಹ್ವಾಲೋಕದ ಸ್ವಾದಿಷ್ಟ ಬರಹ! ಮಲೆನಾಡು–ಮಾವಿನಕಾಯಿ ಎಂದಿನ ಸಂಬಂಧ. ಅದೂ ಉಪ್ಪಿನಕಾಯಿಯ ತಯಾರಿ, ಅದರ ಪ್ರಕ್ರಿಯೆಯೆಂದರೆ ಕೇಳಬೇಕೆ? ಅದರ ಕುರಿತ ಮಾತುಕತೆ–ಮಕ್ಕಳಾಟದ ತಪ್ಪು–ಒಪ್ಪುಗಳು, ಕಳ್ಳಸುಳ್ಳುಗಳು ಪೆದ್ದುಮಾತುಗಳು ಲಾಲಿತ್ಯಮಯವಾಗಿ ಈ ಪ್ರಬಂಧದಲ್ಲಿ ಮೂಡಿಬಂದಿವೆ. **'ಮೂಗಾಯಣ'**ವು ಮುಖದ ಸೌಂದರ್ಯದ ಸಂಕೇತವಾದ ಮೂಗಿನ ಸುತ್ತಲಿನ ಎಲ್ಲ ವಿವರಗಳನ್ನು ಒಳಗೊಂಡಿದೆ. ಆಕಾರ ಗಾತ್ರ ಆಧಾರಿತ ಸ್ಥಳೀಯ ವರ್ಗೀಕರಣ, ಸೌಂದರ್ಯಮೀಮಾಂಸೆ, ರೋಗಗಳು ಇತ್ಯಾದಿ ವೈವಿಧ್ಯಮಯವಾದ ವಿಷಯವ್ಯಾಪ್ತಿಯ ಹಂದರ ಹೊಂದಿದೆ. ನಿರಂತರವಾಗಿ ಬರೆಯುತ್ತಿರುವ ಶಾರದಾ ವಿ ಮೂರ್ತಿಯವರು **'ಮರಳಿನಿಂದ ಮರಳಿಗೆ'** ಪ್ರಬಂಧದಲ್ಲಿ ತಮ್ಮ ಕಾಲದ ಕಲಿಯುವ ಕಲಿಸುವ ಪರಿಯನ್ನು ಸದ್ಯದ ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಕಲಿಕೆಯ ಜೊತೆ ವೈನೋದಿಕ ಶೈಲಿಯಲ್ಲಿ ತುಲನೆ ಮಾಡಿದ್ದಾರೆ. ತಮ್ಮ ಬರೆವಣಿಗೆಯ ಪ್ರಕ್ರಿಯೆ ಕಾಲಕಾಲಕ್ಕೆ ಬದಲಾದದ್ದನ್ನು ತಮ್ಮ ಬುದ್ಧಿ–ಪ್ರಜ್ಞೆ ಅನಿವಾರ್ಯತೆಗೆ ಒಗ್ಗಿಕೊಂಡಿದ್ದನ್ನು ಹೇಳುತ್ತಾರೆ.

ಉಷಾ ನರಸಿಂಹನ್ ಅವರು **'ಯಡತೊರೆ ಕಲ್ಲೇಶಿಯೂ ಕವನ ಸ್ಪರ್ಧೆಯೂ..'** ಪ್ರಬಂಧದ ಮೂಲಕ ಯಡತೊರೆ ಕಲ್ಲೇಶಿ ಎಂಬ ವಿಶಿಷ್ಟ ಪಾತ್ರವನ್ನೂ ದುಡ್ಡುಕೊಟ್ಟು ಬಹುಮಾನ ಖರೀದಿಸಿಕೊಳ್ಳುವ, ಸನ್ಮಾನ ಮಾಡಿಸಿಕೊಳ್ಳುವವರ ಬಂಡವಾಳವನ್ನೆಲ್ಲವನ್ನೂ ವ್ಯಂಗ್ಯಮಾಡುತ್ತ, ಸದ್ದಿಲ್ಲದೆ ಬೆಳೆಯುತ್ತಿರುವ ಈ ತರಹದ ಚಟುವಟಿಕೆಗಳ ಗುಟ್ಟು ಬಯಲು ಮಾಡಿದ್ದಾರೆ. **'ನಮೋ ನಮೋ ಕಲ್ಪತರುವೇ'** ಪ್ರಬಂಧದಲ್ಲಿ ಸತ್ಯವತಿ ಹರಿಕೃಷ್ಣನ್ ಅವರು ತೆಂಗಿನ ಮರವನ್ನು ಕಡಿಸುವ ಅನಿವಾರ್ಯತೆ ಮತ್ತು ಕಡಿಸಿದ ನಂತರ ಹುಟ್ಟಿಕೊಳ್ಳುವ ಪಾಪಪ್ರಜ್ಞೆಯನ್ನು ಸುತ್ತಲಿನ ಸಮಾಜದ ಧೋರಣೆಯ ಆಧಾರದ ಮೇಲೆ ನವಿರಾಗಿ ಚಿತ್ರಿಸಿದ್ದಾರೆ. **'ರೊಟ್ಟಿ ದೇವರ ಮುಂದೆ'** ಪ್ರಬಂಧದಲ್ಲಿ ಸಿದ್ದು ಸತ್ಯನ್ನನವರ ಉತ್ತರಕರ್ನಾಟಕದ ಜೀವಾಮೃತವಾದ ರೊಟ್ಟಿಯ ಕುರಿತು ತಮ್ಮ ಪ್ರೇಮವನ್ನು ಹಂಚಿಕೊಂಡಿದ್ದಾರೆ. ರೊಟ್ಟಿ ಬರಿ ಆಹಾರವಷ್ಟೇ ಆಗಿರದೆ ಅದು ಆರೋಗ್ಯವೂ, ವ್ಯಕ್ತಿತ್ವವೂ, ಮೌಲ್ಯವೂ ಹೌದೆನ್ನುತ್ತಾರೆ.

ರಾಮಮಂದಿರವು ಹರಿಪ್ರಸಾದ್ ಅವರ **'ರಾಮಂದ್ರ'** ಪ್ರಬಂಧದಲ್ಲಿ ವಿವಿಧ ರೂಪಗಳನ್ನು ದಾಟಿ ಹೋಗುವ ಕಥನವನ್ನು ಹೊಂದಿದೆ. ಮಂದಿರವಷ್ಟೇ ಆಗಿರದೆ ಶಾಲೆಯೂ ಆಗಿ ಪ್ರಬಂಧಕಾರರ ಬಾಲ್ಯದ ಶಿಕ್ಷಣದ ಮರೆಯಲಾರದ ನೆನಪೂ ಆಗಿದೆ. **'ಅರವಿಂದರ ಏಕಾಂತ ಮತ್ತು ಭಾನುವಾರವೆಂಬ ಕಾಕ್‌ಟೇಲ್'** ಪ್ರಬಂಧದಲ್ಲಿ ಕೈದಾಳ್ ಕೃಷ್ಣಮೂರ್ತಿಯವರು ಅರವಿಂದರೆಂಬ ಮಾಸ್ತರರ ಭಾನುವಾರ ಕಳೆಯುವ ಪರಿಯನ್ನು ವ್ಯಕ್ತಿಚಿತ್ರದ ಮಾದರಿಯಲ್ಲಿ ಹೇಳುತ್ತಾ ಹೋಗುತ್ತಾರೆ. ವಿವಾಹಿತ ಬ್ರಹ್ಮಚಾರಿಯಂತಹ ಮಾಸ್ತರರ ವೈಚಾರಿಕ ವ್ಯಕ್ತಿತ್ವಕ್ಕೆ ಸುತ್ತಲಿನ ಯಾರೂ ಸರಿಬರದೆ ಅವರು ಏಕಾಂಗಿಯಾಗಿಯೇ ತಮ್ಮಷ್ಟಕ್ಕೆ ತಾವೆ ಸ್ವಗತದಲ್ಲಿ ಭಾನುವಾರವನ್ನು ತನ್ನಿಷ್ಟದಂತೆ ಕಳೆಯಲಾಗದ ಸಂಕಟವನ್ನು ವೈನೋದಿಕ ಶೈಲಿಯಲ್ಲಿ ಬಿಚ್ಚಿಡುತ್ತಾರೆ.

ತನ್ನಪ್ಪನ ಐಡೆಂಟಿಟಿ ಮತ್ತು ತನ್ನ ಮುಖ್ಯ ನೆನಪಿನ ಅಂಶವಾದ ಬಗೆಯನ್ನು ಅನಿತಾ ನರೇಶ್ ಮಂಚಿ ಅವರು **'ಅಪ್ಪನ ಸ್ಕೂಟರ್'** ಪ್ರಬಂಧದಲ್ಲಿ ನಾಸ್ಟಾಲ್ಜಿಕ್ ಧಾಟಿಯಲ್ಲಿ ದಾಖಲಿಸುತ್ತಾರೆ. ಹೊಸ ಜನರೇಶನ್ ಜನರಲ್ಲಿ ಉಳಿಸಿಕೊಳ್ಳುವ, ಕಾಪಾಡಿಕೊಳ್ಳುವ ಮೌಲ್ಯ ಕಳೆದು ಹೋಗುತ್ತಿರುವ ಹಿನ್ನೆಲೆಯಲ್ಲಿ ಪ್ರಬಂಧಕಾರರ ಅಪ್ಪ ತನ್ನ ಸ್ಕೂಟರ್ ಎಷ್ಟೇ ಶಿಥಿಲವಾಗಿದ್ದರೂ ಹಳತಾಗಿದ್ದರೂ ಅದನ್ನು ಪ್ರೀತಿಯಿಂದ ಕಾಪಾಡಿಕೊಳ್ಳುತ್ತಿದ್ದ ಕಥನ ಸೂಕ್ಷ್ಮವಾದ ಸಂಗತಿಗಳನ್ನು ಹೇಳುತ್ತದೆ.

ಬಹುದಿನದ ಕನಸು ಪೂರೈಸಿಕೊಳ್ಳುವಂತಹ ಸಂದರ್ಭವನ್ನೂ ನಿರ್ದಾಕ್ಷಿಣ್ಯವಾಗಿ ತಳ್ಳಿಹಾಕುವಂತಹ ಮಾನವೀಯ ಕಾಳಜಿಯನ್ನು **'ನನ್ನ ಗೋವಾ ಪ್ರವಾಸ'** ಪ್ರಬಂಧದಲ್ಲಿ ಸಹನಾ ಕಾಂತಬೈಲು ಅವರು ಬರೆಯುತ್ತಾರೆ. ಬಾಲ್ಯದಿಂದಲೂ ಕಾಡುವ ದೆವ್ವವನ್ನು ಲೇಖಕರು ಕೊಂದ ಬಗೆಯನ್ನು ವೈನೋದಿಕ ಶೈಲಿಯಲ್ಲಿ ಹನುಮಂತ ಹಾಲಿಗೇರಿ ಅವರು **'ದೆವ್ವದೊಂದಿಗೆ ನನ್ನ ಹೆಣಗಾಟ'** ಪ್ರಬಂಧದಲ್ಲಿ ಹೇಳುತ್ತಾರೆ. **'ಆಮಂತ್ರಣ ಮಾಡಿದ ಅವಾಂತರ'** ಶೀರ್ಷಿಕೆಯೇ ಹೇಳುವಂತಹ ಗಲಿಬಿಲಿ–ಗೊಂದಲವನ್ನು ತಿರುಪತಿ ಭಂಗಿಯವರು ಹಾಸ್ಯಮಯವಾಗಿ ತೋರ್ಪಡಿಸಿದ ಪ್ರಬಂಧವಾಗಿದೆ. ದಯಾನಂದ ಅವರು ಮೈಕಾಸುರರ ರುದ್ರನರ್ತನಕ್ಕೆ ಕಂಗಾಲಾಗಿ ಹೋದ ಅಸಮಾಧಾನವನ್ನು **'ಗಣೇಶ ಪೆಂಡಾಲಿನ ಮೈಕಾಸುರರು'** ಪ್ರಬಂಧದಲ್ಲಿ ವ್ಯಕ್ತಪಡಿಸಿದ್ದಾರೆ. ಕಳ್ಳತನ ವಿದ್ಯೆ ಎಂದಿನಿಂದಲೂ ಜನರ ಪೊರೆಯುತ್ತಿದೆ ಅಂತೆಯೇ ಕಾಡುತ್ತಿದೆಯೆನ್ನುತ್ತ ವಿಶಿಷ್ಟ ವಿವರಗಳನ್ನು ಮುಂದಿಡುವ ಪ್ರಬಂಧ **'ಕಳ್ಳರಪ್ಪ ಕಳ್ಳರು!'**. ಮುದ್ದು ತೀರ್ಥಹಳ್ಳಿಯವರು ಕಳ್ಳತನದ ವಿವಿಧ ಮಗ್ಗುಲುಗಳನ್ನು ತೋರಿಸುತ್ತ ಕಳ್ಳರ ಸ್ವಭಾವಕ್ಕೆ ಕಾರಣಗಳನ್ನೂ ಹೇಳುತ್ತಾರೆ.

**'ಹಳದಿಹೂಗಳ ಅಮಲ್ತಾಸ್'** ಮರ ಬಾಲ್ಯವನ್ನು ಬಾಲ್ಯದ ನೆಚ್ಚಿನ ಗೆಳೆಯನನ್ನು ನೆನಪಿಗೆ ತರುವುದು, ಅವನ ಸದ್ಯದ ಬದುಕು ಮತ್ತೆ ತೆರೆದುಕೊಳ್ಳುವುದನ್ನು **'ಕಡುಬೇಸಿಗೆಯ ಅಮಲ್ತಾಸ್'** ಪ್ರಬಂಧದಲ್ಲಿ ಆತ್ಮವೃತ್ತಾಂತದ ಶೈಲಿಯಲ್ಲಿ ಚಿತ್ರಿಸಲಾಗಿದೆ. ರೇಣುಕಾ ನಿಡಗುಂದಿಯವರು ಈ ಪ್ರಬಂಧದಲ್ಲಿ ಹೆಂಡತಿಯ ಜೊತೆ ದೆಹಲಿಗೆ ಬಂದ ಬಾಲ್ಯಸಖನ ನೋಡುತ್ತಲೇ ಗತಿಸಿಹೋದ ಗೋಲ್ಡನ್ ಮೆಮೊರಿಗಳನ್ನು ಕೆದಕಿಕೊಂಡು ಮನದಿಂಗಿತವನ್ನು ಸದಾ ಕಾಡುವಂತಹ ಆಕರ್ಷಕತೆಯಲ್ಲಿ ಪ್ರಬಂಧವನ್ನು ಕಟ್ಟಿಕೊಟ್ಟಿದ್ದಾರೆ.

**3**

ಬರೆದದ್ದು ಕಥೆ ಕಾದಂಬರಿಯಾಗದಿದ್ದರೆ ಅದು ಪ್ರಬಂಧ ಎನ್ನುವ ಬಾಲಿಶ ನಿಲುವನ್ನೂ ಮೀರಿ ಸಶಕ್ತ ಪ್ರಬಂಧಗಳು ಬೆರಳೆಣಿಕೆಯಲ್ಲಿದ್ದರೂ ಬೆಳೆಯುತ್ತಿವೆ. ದಿನಪತ್ರಿಕೆಗಳ ಸಂಖ್ಯೆ ಹೆಚ್ಚುತ್ತಾ ಅದರಲ್ಲಿ ಏನಾದರೂ ತುಂಬಿಸಬೇಕೆನ್ನುವ ಕಾರಣಕ್ಕೆ ಏನನ್ನಾದರೂ ಬರೆಸಿ, ಬರೆದು ಅದು ಪ್ರಬಂಧವೆಂದು ಗುರುತಿಸಿಕೊಳ್ಳುವ ಸ್ಥಿತಿಯೂ ನಿರ್ಮಾಣವಾಗಿದೆ. ಪ್ರಬಂಧದ ಮೂಲಕ ಸಾಹಿತ್ಯ ಲೋಕ ಪ್ರವೇಶಿಸುವ ಆಸಕ್ತರಿಗೆ ಉತ್ತಮ ಮಾದರಿಗಳು ಸಿಗುವುದು ಕಷ್ಟವಾಗಿದೆ.

ನಿರ್ದಿಷ್ಟ ಚೌಕಟ್ಟುಗಳನ್ನು ಹೊಂದಲೊಲ್ಲದ ಎಲ್ಲತನ್ನೂ ಒಳಗೊಳ್ಳಲು ಹಪಹಪಿಸುವ ಈ ಸಾಹಿತ್ಯ ಪ್ರಕಾರ ತನ್ನ ಗಟ್ಟಿತನವನ್ನು ಉಳಿಸಿಕೊಳ್ಳಲಿ. ಅಸಂಖ್ಯ ಮಾರ್ಪಾಡುಗಳಾದರೂ ಪ್ರಕಾರದ ಸಾಂಸ್ಕೃತಿಕ ವಿನ್ಯಾಸ ಹಾಳಾಗದಿರಲಿ. ಹೊಸ ಆಯಾಮ ಸೃಷ್ಟಿಯಾಗಲಿ, ಹೊಸ ಲೋಕ ತೆರೆದುಕೊಳ್ಳಲಿ...

ಈ ಅವಕಾಶವನ್ನು ನನಗೆ ಕೊಟ್ಟ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಂಪಾದಕ
**ಇಂದ್ರಕುಮಾರ್ ಎಚ್.ಬಿ.**
#164, ಮಾತೃ ಪಿತೃ ನಿಲಯ,
ಡಿ.ಸಿ.ಎಂ ಟೌನ್‌ಶಿಪ್,
ಸಿ–ಬ್ಲಾಕ್,
ದಾವಣಗೆರೆ 577003
indakumarhb@gmail.com

# ಪರಿವಿಡಿ


ಅಧ್ಯಕ್ಷರ ನುಡಿ iii

ಕನ್ನಡ ಸಾಹಿತ್ಯದಲ್ಲಿ ಪ್ರಬಂಧ v

1. ಚಂದ್ರನ ಕೊಂಬಿಗೆ ಬನ್ನಿ ಚಿಗುರು! – ಎಚ್.ಎಸ್. ವೆಂಕಟೇಶಮೂರ್ತಿ 1
2. ಕತ್ತಲ ಸೀಮೆಯ ಕಣಿವೆಯಲ್ಲಿ – ಕೃಷ್ಣಮೂರ್ತಿ ಹನೂರು 7
3. ಭಾನುವಾರದ ಆಟದ ಮೈದಾನ – ಸತ್ಯನಾರಾಯಣ ಕೆ. 15
4. ಮಿಸ್ ಕಾಲ್ – ಚಿಂತಾಮಣಿ ಕೊಡ್ಲೆಕೆರೆ 21
5. ಹಕ್ಕಿಗಳ ಸಾಕು ಪುರಾಣ – ಕಲೀಮ್ ಉಲ್ಲಾ 27
6. ಕಾಮಾಕ್ಯ ಎಂಬ ಹಗಲ ಹೊಳೆ – ಪ್ರಹ್ಲಾದ ಡಿ.ವಿ. 41
7. ಚುಮುಚುಮು ನಸುಕಿನಲಿ ಮೂರು ಕರಡಿಗಳಾಡುತ್ತಿದ್ದವು – ಬೇದ್ರೆ ಮಂಜುನಾಥ 48
8. ಬೆಳಕಿನ ಆಸ್ತಿಕರು ನಾವೆಲ್ಲಾ – ಕೆದಿಲಾಯ 55
9. ನಿನಗೆ ಬೇರೆ ಹೆಸರು ಬೇಕೆ? – ಚಿದಾನಂದ ಸಾಲಿ 59
10. ಬೆನ್ನಿಗೆ ಬಿದ್ದರೂ ಭಾರವಾಗದ ಅನುಪಮ ಸಂಬಂಧ – ಎ.ಆರ್. ಮಣಿಕಾಂತ್ 69
11. ಎಲ್ಲಿ ಹೋದವು ಆ ತಿಗಣೆ, ಹೇನುಗಳು? – ಡಿ. ರಾಮನಮಲಿ 74
12. ಪರಿಮಳದ ಜಾಡು ಹಿಡಿದು – ಛಾಯಾ ಭಗವತಿ 79
13. ನಗರದ ಒಡಲಿನ ಅನ್ನದ ಬುತ್ತಿಗಳು – ಡಿ.ಎಂ.ಕುರ್ಕೆ ಪ್ರಶಾಂತ 84
14. ಅಪ್ಪನಾಗುವ ಕಷ್ಟ ಮತ್ತು ಸುಖ – ಶ್ರೀನಿಧಿ ಡಿ.ಎಸ್. 87
15. ಅಹಿಭೋ ಅತಿಥಿ ಮಹೋದಯಾ – ಮಧುರಾ ಕರ್ಣಮ್ 92
16. ನಮ್ ಸ್ಕೂಲೂ ಮತ್ತು ನಮ್ ಮೇಷ್ಟ್ರುಗಳೂ! – ಸಂತೆಬೆನ್ನೂರು ಫೈಜ್ನಟ್ರಾಜ್ 97
17. ತೇಲುವ ಸ್ವರ್ಗದೊಳಗಿನ ಆರ್ದ್ರ ಕತೆಗಳು – ವೈಶಾಲಿ ಹೆಗಡೆ 103
18. ಗಾಂಧಿ ಮಾರ್ಗದ ಚಹರೆಗಳು – ಪದ್ಮನಾಭ ಭಟ್, ಶೇವ್ಕಾರ 109
19. ಬೆಕ್ಕಿಗೊಂದು ಶ್ರದ್ಧಾಂಜಲಿ – ಪ್ರಸಾದ್ ಶೆಣೈ ಆರ್.ಕೆ. 114
20. ತಮ್ಮನಂತಿದ್ದ 'ರಾಜ'ನನ್ನು ನೆನೆದು – ಟಿ.ಎಸ್. ಗೊರವರ 118
21. ಮರೆವು ಎಂಬ ಮಂತ್ರದಂಡ – ಗೋವಿಂದರಾಜು ಟಿ 121
22. ಕೆಲಸದ ಮಾತು – ಜಾಹ್ನವಿ ಹಳ್ಳೂರ 127
23. ಎರಡು ದಿನದ ನೆಮ್ಮದಿ ಅರಸಿ – ಅಕ್ಷಯ್ ಪಂಡಿತ್ 133
24. ಮೀನು – ನಾಗೇಂದ್ರಪ್ಪ ದಾಗಿನಕಟ್ಟೆ 136

25. ಊದೋ ಶಂಖ! – ವಿಜಯಾ ಶ್ರೀಧರ್ 146
26. ಗೋಲ್ಗಪ್ಪ ಗೋಪುರದ ಸುತ್ತ... – ಸುಶ್ರುತ ದೊಡ್ಡೇರಿ 150
27. ರಸ್ತೆಯೆಂಬ ಸ್ವತ್ತು, ಕಸರತ್ತು ಮತ್ತು ಗಮ್ಮತ್ತು!
– ತುರುವೇಕೆರೆ ರವಿಶಂಕರ್ 153
28. ಬುದ್ಧಿ ಬಂದಾಗ! – ಕೆ.ಎಸ್. ಚೈತ್ರ 158
29. ಮದುವೆ ಹಿನ್ನೆಲೆಯಲ್ಲಿ... – ಕಾವೇರಿ ಎಸ್.ಎಸ್. 162
30. ಶ್ರಾವಣ ಬಂತು ನಾಡಿಗೆ – ರಶ್ಮಿ ಎಸ್ 165
31. ಬದುಕು ಮತ್ತು ಮಳೆ ಹಾತೆ – ಸ್ಮಿತಾ ಅಮೃತ್‌ರಾಜ್ ಸಂಪಾಜೆ 169
32. ಮಳೆ ಎಂಬ ನಕ್ಷತ್ರಿಕ – ದೀಪ್ತಿ ಭದ್ರಾವತಿ 173
33. ಕಣ್ಣಂಚಲ್ಲಿ ತೇವಗೊಳ್ಳುವ ಪುಳಕ – ಎಚ್.ಕೆ. ಶರತ್ 178
34. ಸೃಷ್ಟಿಗೆ ಗಡಿಗಳಿವೆಯೆ? – ರೂಪ ಹಾಸನ 180
35. ಸ್ವಪ್ನಸುಂದರಿ ನ್ಯೂಯಾರ್ಕ್ – ಧರ್ಮಶ್ರೀ ಬಿ. ಅಯ್ಯಂಗಾರ್ 183
36. ದ ಮೇಕಿಂಗ್ ಆಫ್ ಉಪ್ಪಿನಕಾಯಿ – ವಿದ್ಯಾರಶ್ಮಿ ಪೆಲತ್ತಡ್ಕ 190
37. ಮೂಗಾಯಣ – ದೊಡ್ಡಬಸಪ್ಪ ಬಳೂರಗಿ 195
38. ಮರಳಿನಿಂದ ಮರಳಿಗೆ – ಶಾರದಾ ವಿ ಮೂರ್ತಿ 201
39. ಯಡತೊರೆ ಕಲ್ಲೇಶಿಯೂ.. ಕವನ ಸ್ಪರ್ಧೆಯೂ..
– ಉಷಾ ನರಸಿಂಹನ್ 208
40. ನಮೋ ನಮೋ ಕಲ್ಪತರುವೇ! – ಸತ್ಯವತಿ ಹರಿಕೃಷ್ಣನ್ 212
41. ರೊಟ್ಟಿ ದೇವರ ಮುಂದೆ... – ಸಿದ್ದು ಸತ್ಯನ್ನನವರ 219
42. ರಾಮಂದ್ರ – ಹರಿಪ್ರಸಾದ್ ಕೆ.ಆರ್. 226
43. ಅರವಿಂದರ ಏಕಾಂತ ಮತ್ತು ಭಾನುವಾರವೆಂಬ ಕಾಕ್‌ಟೇಲ್
– ಕೈದಾಳ್ ಕೃಷ್ಣಮೂರ್ತಿ 235
44. ಅಪ್ಪನ ಸ್ಕೂಟರ್ – ಅನಿತಾ ನರೇಶ್ ಮಂಚಿ 243
45. ನನ್ನ ಗೋವಾ ಪ್ರವಾಸ – ಸಹನಾ ಕಾಂತಬೈಲು 248
46. ದೆವ್ವದೊಂದಿಗೆ ನನ್ನ ಹೆಣಗಾಟ – ಹನುಮಂತ ಹಾಲಗೇರಿ 251
47. ಆಮಂತ್ರಣ ಮಾಡಿದ ಅವಾಂತರ –ತಿರುಪತಿ ಭಂಗಿ 255
48. ಗಣೇಶ ಪೆಂಡಾಲಿನ ಮೈಕಾಸುರರು – ದಯಾನಂದ 258
49. ಕಳ್ಳರಪ್ಪ ಕಳ್ಳರು – ಮುದ್ದು ತೀರ್ಥಹಳ್ಳಿ 260
50. ಕಡುಬೇಸಿಗೆಯ ಅಮಲ್ತಾಸ್ – ರೇಣುಕಾ ನಿಡಗುಂದಿ 265
51. ಈಗ ಟೈಮ್ ಎಷ್ಟು? ಪ್ಲೀಸ್ ಹೇಳಿ...–ಇಂದ್ರಕುಮಾರ್ ಎಚ್.ಬಿ. 269
52. ಲೇಖಕರ ವಿಳಾಸಗಳು 272

# ಚಂದ್ರನ ಕೊಂಬಿಗೆ ಬನ್ನಿ ಚಿಗುರು!

ವರ್ಷಾವರಿ ಹಬ್ಬವೆಂದರೆ ನಮ್ಮಲ್ಲಿ ಯುಗಾದಿಯೇ. ಆ ಜಾತಿ, ಈ ಜಾತಿ ಎನ್ನದೆ, ಬಡವರು, ಬಲ್ಲಿದರು ಎನ್ನದೆ ನಮ್ಮೂರಲ್ಲಿ ಊರೊಟ್ಟು ಹಬ್ಬವಾಗಿ ಯಗಾದಿಯ ಆಚರಣೆ ನಡೆಯುತ್ತಾ ಇತ್ತು. ನಮ್ಮೂರು ಬಸ್ಸು ಹಾಯುವ ಮುಖ್ಯ ರಸ್ತೆಯಿಂದ ಎರಡು ಮೈಲಿ ಒಳ ಪ್ರಾಂತ್ಯದಲ್ಲಿತ್ತು. ಊರಿಂದ ರಾಜರಸ್ತೆಗೆ ಹೋಗುವ ಕಿರು ಬಂಡಿ ಜಾಡಲ್ಲಿ ಎರಡೂ ಪಕ್ಕ ಯಾರೋ ಪುಣ್ಯಾತ್ಮರು ಹೊನ್ನೆ, ಬಾಗಿ, ಬುಗುರಿ, ಬೇವು, ತುಗ್ಗಲಿ ಮರಗಳನ್ನು ಬೆಳೆಸಿದ್ದರು. ಹಾಗಾಗಿ ಬಿರು ಬಿಸಿಲಲ್ಲೂ ನಾವು ಉರಿಯುವ ಬೇಸಿಗೆಯ ಮಧ್ಯಾಹ್ನವೂ ತಣ್ಣಗೆ ಎರಡು ಮೈಲು ನಡೆದು ಬಸ್ ಸ್ಟಾಂಡ್ ತಲಪಬಹುದಿತ್ತು.

ನಾವು ಸಾಮಾನ್ಯವಾಗಿ ಗಾಡಿ ಕಟ್ಟಿಸಿಕೊಂಡೇ ಬಸ್ ಸ್ಟಾಂಡಿಗೆ ಹೋಗುತ್ತಾ ಇದ್ದೆವು. ನಮ್ಮೂರ ಒಗ್ಗಾಲಿ ರಸ್ತೆಯಲ್ಲಿ ಅಪಾಯವಿಲ್ಲದೆ ಗಾಡಿ ಪ್ರಯಾಣ ಮಾಡುವುದೆಂದರೆ ಅಷ್ಟು ಸುಲಭವಲ್ಲ. ನಾವೆಲ್ಲಾ ಗಾಡಿಯಲ್ಲಿ ಪೂರ್ವಾಭಿಮುಖವಾಗಿಯೇ ಕೂಡುತ್ತಿದ್ದೆವು. ಪಶ್ಚಿಮಕ್ಕೆ ಮುಖ ಮಾಡಿದರೆ ಮಣ್ಣಿನ ದೂಳನ್ನು ಬಂಡಿಯ ಚಕ್ರ ನಮ್ಮ ಮುಖಕ್ಕೇ ಉಗ್ಗುತ್ತಾ ಕಣ್ಣು ಮುಚ್ಚಿಕೊಂಡೇ ಕುಳಿತುಕೊಳ್ಳುವುದು ಅನಿವಾರ್ಯವಾಗುತ್ತಿತ್ತು. ಈವತ್ತು ರಾಯಲ್ ಬಸ್ಸಿಗೆ ನಮ್ಮ ಭೀಮಜ್ಜಿ ಕೆಲ್ಲೋಡಿಂದ ಯುಗಾದಿಗೆ ನಮ್ಮೂರಿಗೆ ಬರುವವರಿದ್ದರು.

ಅವರನ್ನು ಕರೆತರುವುದಕ್ಕಾಗಿ ನಾನು ಮತ್ತು ಅಜ್ಜ, ಬಸಣ್ಣನ ಬಂಡಿ ಮಾಡಿಕೊಂಡು ಬಸ್ ಸ್ಟಾಂಡಿಗೆ ಹೊರಟಿದ್ದೆವು. ಗಾಡಿಯ ಮೇಲೆ ಸಣ್ಣಗೆ ಭತ್ತದ ಹುಲ್ಲು ಹರಡಿ ಅದರ ಮೇಲೆ ಪಟ್ಟಾಪಟ್ಟಿ ಜಮಖಾನ ಹಾಸಲಾಗಿತ್ತು. ಭೀಮಜ್ಜಿಯ ಸ್ವಾಗತಕ್ಕೆ ಅಷ್ಟಾದರೂ ಮಾಡದಿದ್ದರೆ ಹೇಗೆ? ನಾಳೆ ಯುಗಾದಿಯಲ್ಲಿ ಮುಖ್ಯ ಭೂಮಿಕೆ ವಹಿಸುವುದು ಭೀಮಜ್ಜಿಯೇ ಎಂಬುದು ನಮ್ಮ ಮನೆಯಲ್ಲಿ ಎಲ್ಲರಿಗೂ ಗೊತ್ತಿತ್ತು. ನಮ್ಮ ಭೀಮಜ್ಜಿ ಸಿನಿಮಾ ತಾರೆಯ ಹಾಗೆ ಬೆಳ್ಳಗೆ ನೋಡಲಿಕ್ಕೆ ತುಂಬ ವರ್ಚಸ್ವಿಯಾಗಿದ್ದರು. ನಮ್ಮ ಹಳ್ಳಿಯಲ್ಲಿ ಮ್ಯಾಚಿಂಗ್ ಕುಬುಸ ತೊಡುತ್ತಿದ್ದವರು ಅವರೊಬ್ಬರೇ. ಆ ಕುಬುಸ ಭುಜದ ಮೇಲೆ ಭುಜಕೀರ್ತಿಯಂತೆ ಕೂರುತ್ತಾ ಇತ್ತು. ಅದಕ್ಕೆ ಗುಬ್ಬಿ ಕುಬುಸ ಎಂದು ಕರೆಯುತ್ತಿದ್ದರು. 'ಈವತ್ತೂ ನಮ್ಮ ಭೀಮಜ್ಜಿ ಗುಬ್ಬಿ ಕುಪುಸ ಹಾಕಿಕೊಂಡೇ ಬರೋದು ಸೈ! ಅಲ್ಲವಾ ಅಜ್ಜ?' ಎಂದು ನಾನು ನಮ್ಮ ಅಜ್ಜನನ್ನು ಕೇಳಿದೆ. 'ಹುಂ ಹುಂ... ಆದರೆ ನಿಮ್ಮ ಭೀಮಜ್ಜಿ ಬಾಳ ಜುಗ್ಗು ಕಣೋ... ನಿನ್ನ ಗುಬ್ಬಿ ಒಂದು ದಿನ ನಿನ್ನ ತಂಗಿಗೆ ಕೊಡೆ ಅಂದರೆ ಕೊಟ್ಟಾಳಾ?'.

ನಮ್ಮಜ್ಜ, ಭೀಮಜ್ಜಿ ಮತ್ತು ಅಜ್ಜನ ಹೆಂಡತಿ ಸೀತಜ್ಜಿ ಇಬ್ಬರಿಗೂ ಸೋದರ ಮಾವ ಆಗಬೇಕು. ಹಾಗಾಗಿ ಅವರಿಗೆ ಭೀಮಜ್ಜಿಯಲ್ಲಿ ಸಲುಗೆ ಇತ್ತು. 'ನನ್ನ ಮೂತಿ ಸೊಲ್ಪ ಹನುಮಂತನ ಮೂತಿ, ಒಪ್ತುತ್ತೇನೆ... ಕಿವಿ ಸೊಲ್ಪ ಸುಮಾರು... ಅದನ್ನೂ ಒಪ್ತುತ್ತೇನೆ... ಆದರೆ ನೀನು ನನ್ನನ್ನು ಬಿಟ್ಟು ನನ್ನ ತಮ್ಮನ್ನ ಮದುವೆಯಾದದು ಮಾತ್ರ ಮಹಾ ಅಪರಾಧ ಅಂತೀನಿ ನಾನು... ಕ್ರಮ ತಪ್ಪಿಸಿದೆಯಲ್ಲೇ ನೀನು... ನಾನು ದೊಡ್ಡೋನು... ನೀನು ದೊಡ್ಡೋಳು. ನಮ್ಮಿಬ್ಬರ ಮದುವೆ ಆಗಬೇಕಿತ್ತು. ಆ ಶ್ರೀನಿವಾಸ ಸುಣ್ಣದ ಗೋಡೇ ಹಾಗೆ ಬಿಳಿಚಿಕೊಂಡಿದ್ದ... ನೀನು ಗುಬ್ಬಿ ಸಮೇತ ಅವನ ತೋಳಿಗೆ ಬಿದ್ದೆ... ನಿನ್ನ ತಂಗಿ ಕಾಗೆ ಮರಿಯಂಥ ಸೀತೆ ನನ್ನ ಜೋಡಿ ಆದಳು... ಜನ್ಮೇಪಿ ಮರೆಯೋದಿಲ್ಲ ನಾನು ಅದನ್ನ...!'

ಈ ಮಾತು ಕಥೆ ನಡೆಯುವಾಗ ಭೀಮಜ್ಜಿ, ಸೀತಜ್ಜಿ, ನಮ್ಮ ಅಜ್ಜ ಎಲ್ಲರೂ ಯಥಾಶಕ್ತಿ ಮುದುಕರಾಗಿದ್ದವರೇ! ಹಾಗಾಗಿ ಮಾತು ತನ್ನ ಒಗರೆಲ್ಲ ಕಳೆದುಕೊಂಡು ಕೇವಲ ನಗೆಚಾಟಿಕೆಯ ಮಾತಾಗಿ ಪರಿಣಮಿಸಿತ್ತು! ಭೀಮಜ್ಜಿ ಗಟ್ಟಿಯಾಗಿ ನಕ್ಕು, 'ಅಲ್ಲವೋ ಮಾವ... ನಿನಗೆ ಕಿವಿ ಯಾವತ್ತಿನಿಂದಲೂ ಕೇಳುತಾ ಇಲ್ಲ! ಪ್ರಸ್ತದ ದಿನ ನಿನ್ನ ಹತ್ತಿರ ಮಾತಾಡೋದು ಹ್ಯಾಗೋ?' ಎಂದು ಗೊಳ್ಳೆಂದು ನಗುತ್ತಾ ಇದ್ದಳು. ಹಾಗೆ ನಗುವಾಗ ಅವಳ ಗೋಧಿ ಬಣ್ಣದ ಮುಖ ಕೊಂಚ ಕೆಂಪಾಗುತ್ತಾ ಇತ್ತು. ಅಗಲವಾದ ಕಿವಿಯ ಮೇಲ್ಭಾಗ ಕೆಂಡದಂತೆ ಥಳ ಥಳ ಹೊಳೆಯುತ್ತಾ ಇತ್ತು.

ಆಮೇಲೆ ಮಾತು 'ಹಬ್ಬದ ತಯಾರಿಯೆಲ್ಲಾ ಮುಗಿದದೋ?' ಎಂದು ಲೋಕಾಭಿರಾಮದ ಕಡೆ ಹೊರಳುತ್ತಾ ಇತ್ತು. ಭೀಮಜ್ಜಿ ಗಾಡಿಯ ಕೊಳ್ಳು ಹರಿದ ಮೇಲೆ, ತನ್ನ ತಿಂಡಿಯ ಗಂಟು ಬಿಚ್ಚುತ್ತಾ ಇದ್ದಳು.

ಅದರಲ್ಲಿದ್ದ ರವಾವುಂಡೆ, ಚಕ್ಕುಲಿ, ಕೋಡಬಳೆ, ನಿಪ್ಪಟ್ಟು ಇತ್ಯಾದಿ ನಮ್ಮ ಬಾಯಲ್ಲಿ ನೀರೂರಿಸುತ್ತಾ ಇದ್ದವು. ಎಲ್ಲರೂ ತಿಂಡಿ ಮುಕ್ಕಿದ್ದಾದ ಮೇಲೆ ಸೀತಜ್ಜಿ ಇದ್ದಿಲೊಲೆ ಮೇಲೆ ಕಾಫಿಗೆ ಇಡುತ್ತಿದ್ದಳು. ಇದ್ದಿಲೊಲೆಯನ್ನು ಮುಸುರೆ ತಾಗದಂತೆ ದೂರ ಪ್ರತ್ಯೇಕವಾಗಿ ಕಡಗೋಲಿನ ಪಕ್ಕ ಸ್ಥಾಪಿಸಿದ್ದರು. ಕಾಫಿ, ಹಾಲು, ಟೀ ಮೊದಲಾದ ಮಡಿ ವಸ್ತುಗಳನ್ನು ಮಾತ್ರ ಆ ಒಲೆಯಲ್ಲಿ ತಯಾರಿಸುತ್ತಿದ್ದರು.

ನಮ್ಮದು ಐದು ಅಂಕಣದ ಭಾಳ ದೊಡ್ಡ ಮನೆ. ಯುಗಾದಿಗೆ ಇನ್ನು ವಾರ ಇದೆ ಅನ್ನುವಾಗಲೇ ಹಬ್ಬದ ಸೌರಣೆ ಶುರುವಾಗುತ್ತಾ ಇತ್ತು.

ಬಿದಿರು ಕೋಲಿಗೆ ಪೊರಕೆ ಕಟ್ಟಿಕೊಂಡು ನಮ್ಮಜ್ಜ ತೊಲೆಗಳ ಮೇಲೆ ಸರ್ಕಸ್ ಮಾಡುತ್ತಾ ಬೆಂಗಟೆಗೆ ಹತ್ತಿದ ಜೇಡಮಾಲೆ, ದೂಳು, ಇಲಿ ಪಿಚಕಿ, ಹಕ್ಕಿಗಳು ತಂದಿಟ್ಟ ಹುಲ್ಲಿನ ಗುಪ್ಪೆ – ಎಲ್ಲವನ್ನೂ ಧುಸ್ ಧುಸ್ ಎಂದು ಉಸಿರು ಬಿಡುತ್ತಾ ಝಾಡಿಸುತ್ತಾ ಇದ್ದರು. ಈ ಕೆಲಸ ಇಡೀ ದಿನ ಹಿಡಿಯುತ್ತಿತ್ತು. ಆ ಧೂಳಿಗೆ ಎಂಥವರಿಗೂ ನೆಗಡಿ ಕೆಮ್ಮು ಹಿಡಿಯಲೇ ಬೇಕು. ನಮ್ಮಜ್ಜ ನಾಟಿವೈದ್ಯನೂ ಆಗಿದ್ದುದರಿಂದ ಧೂಳು

ಝಾಡಿಸಿದ್ದಾದ ಮೇಲೆ ಈರುಳ್ಳಿ – ಬೆಲ್ಲ ಇಡಿಯಾಗಿ ಅಗಿದು ತಿಂದು ಹಾಯ್ ಹಾಯ್ ಅಂತ ಉಸಿರು ಬಿಡುತ್ತಾ ನೆಗಡಿಗೆ ಔಷಧಿ ಮಾಡಿಕೊಳ್ಳುತ್ತಾ ಇದ್ದರು. ರಾತ್ರಿ ನೆಲದ ಮೇಲೆ ಬಿದ್ದ ಮಂಕರಿಗಟ್ಟಲೆ ದೂಳನ್ನು ಹಿತ್ತಲ ತಿಪ್ಪೆಗೆ ಅಡಕುವುದು ಸೀತಜ್ಜಿಯ ಕೆಲಸ. ಸಂಜೆ ಅಜ್ಜಿ ಗುರುಬಸಣ್ಣನ ಅಂಗಡಿಗೆ ಹೋಗಿ ಎರಡು ಮಣ ಸುಣ್ಣದ ಕಲ್ಲು ತಂದಿರೋಳು. ಹಿತ್ತಲ ಜಗಲಿಯ ಪಕ್ಕ ಒಂದು ಮಣ್ಣಿನ ಪಿಪಾಯಿ ಇತ್ತು.

ಅದರಲ್ಲಿ ಅರ್ಧದಷ್ಟಕ್ಕೆ ನೀರು ತುಂಬಿ ಅಜ್ಜ ಸುಣ್ಣದ ಕಲ್ಲು ಸುರುವಿದರೆಂದರೆ ಶುರುವಾಗುತ್ತಿತ್ತು ನೋಡಿ, ಮಡಕೆಯಲ್ಲಿ ಒಂದು ದೊಡ್ಡ ಕಾರ್ಖಾನೆ. ಕೊತ ಕೊತ ಕುದಿಯುತ್ತಾ, ಸುಣ್ಣದ ಕಲ್ಲು ಅರಳಿ, ಸಿಡಿಯುತ್ತಾ, ಭಯ ಹುಟ್ಟಿಸುವಂತೆ ಕುದಿ ಸದ್ದು ಮಾಡುತ್ತಾ ಸುಣ್ಣ ಬೆಂದು ಹೂವಾಗುವುದು ಭಾಳ ಚಮತ್ಕಾರದ ಸಂಗತಿ ಬಿಡಿ. ಮಾರನೆ ಬೆಳಿಗ್ಗೆ ಮಡಕೆ ತೆಗೆದು ನೋಡಿದರೆ ಬೆಣ್ಣೆಯಂತೆ ಮಿದುವಾದ ಬೆಳ್ಳನೆ ಸುಣ್ಣ. ಬೆಳಿಗ್ಗೆ ಬೇಗ ಬೇಗ ತಿಂಡಿ ಮುಗಿಸಿ ಭೀಮಜ್ಜಿ, ಸೀತಜ್ಜಿ ಮನೆಗೆ ಸುಣ್ಣ ಬಳಿಯುವುದಕ್ಕೆ ಶುರು ಹಚ್ಚುತ್ತಿದ್ದರು. ಎತ್ತರದ ಗೋಡೆಗೆ ಏಣಿ ಹಾಕಿ ಅಮರಿಕೊಂಡು ಸುಣ್ಣ ಬಳಿಯುವವಳು ನಮ್ಮ ಸೀತಜ್ಜಿಯೇ. ನಮ್ಮ ಭೀಮಜ್ಜಿಯದು ಕೆಳಗಿನ ಗೋಡೆಗಳು ಮಾತ್ರ! ಐದೂ ಬೆರಳುಗಳಿಗೆ ಬಿಳೀ ಬಟ್ಟೆ ಸುತ್ತಿಕೊಂಡು, ಗೋಣಿ ತಟ್ಟು ಅದ್ದಿ ಅದ್ದಿ ಅವರು ಗೋಡೆಗೆ ಸುಣ್ಣ ಬಳಿಯುತ್ತಿದ್ದರು.

ರಾತ್ರಿಯ ವೇಳೆಗೆ ಸುಣ್ಣದ ಕೆಲಸ ಮುಗಿಯಿತೆಂದರೆ ಪಾಪ ಅವರ ಸೊಂಟ ಬಿದ್ದು ಹೋಗಿರೋದು. ರಾತ್ರಿ ಮೆಲ್ಲಗೆ ಬೆರಳಿಗೆ ಸುತ್ತಿದ ಬಟ್ಟೆ ಬಿಚ್ಚಿ ನೋಡಿದರೆ, ಅದು ಹೇಗೋ ಸುಣ್ಣ ಒಳಗೆ ನುಗ್ಗಿ ಬೆರಳ ತುದಿಯಲ್ಲಿ ಕೆಂಪಗೆ ಪೋಟುಗಳಾಗಿರೋವು. ಅವು ವಾಸಿಯಾಗುವತನಕ ಬಿಸಿ ಮುಟ್ಟೊ ಹಾಗಿಲ್ಲ. ಮನೆಯ ಸುಣ್ಣ ಮುಗಿದ ಮೇಲೆ, ನೆಲದಿಂದ ಮೊಣಕಾಲು ಮಟ್ಟದ ತನಕ ಕಿಗ್ಗಾರಣೆ ಅಂತ ಮತ್ತೆ ಸುಣ್ಣ ಬಳಿಯೋರು. ಅದರ ಮೇಲೆ ಕಾರಣೆ ತೆಗೆಯೋದು. ಹುರಿಮಂಜು ನಮ್ಮ ಸಾಬಣ್ಣ ಸಂತೆಗೆ ತರೋನು. ಹುರಿಮಂಜಿಂದ ಮೈ ಮತ್ತು ತೊಟ್ಟ ಬಟ್ಟೆಯಲ್ಲ ಕೆಂಪಾಗಿರುವ ಸಾಬಣ್ಣನ ಒರಿಜಿನಲ್ ಕಲರ್ ಯಾವುದಿತ್ತೆಂದು ನಮ್ಮ ಹಳ್ಳಿಯಲ್ಲಿ ಯಾರಿಗೂ ತಿಳಿಯದು. ಈಚಲು ಚಿಗುರು ಜಜ್ಜಿಕೊಂಡು ನಾನಾ ಬಗೆಯ ಚಿತ್ರ ವಿಚಿತ್ರ ಕಾರಣೆ ತೆಗೆಯುವುದರಲ್ಲಿ ನಮ್ಮ ಅಮ್ಮ ಮತ್ತು ದೊಡ್ಡಜ್ಜಿ ಫೇಮಸ್ಸಾಗಿದ್ದರು. ನಮ್ಮ ಕಾರಣೆ ಗುಟ್ಟು ನಾಡಿಗರ ಮನೆಗೆ, ಸುಬ್ಬಜ್ಜಿ ಮನೆಗೆ ತಿಳಿಯಬಾರದಲ್ಲ.

ಅದರಿಂದ ರಾತ್ರೋ ರಾತ್ರಿ ಕಾರಣೆಯ ಕೆಲಸ ನಡೆಯುತ್ತಾ ಇತ್ತು. ಮಾರನೆ ಬೆಳಿಗ್ಗೆ ಯುಗಾದಿ ಅಲ್ಲವೇ? ಚುಮುಚುಮು ಬೆಳಗಾಗುವಾಗ ಹಚ್ಚನೆ ಹಸುವಿನ ಸೆಗಣಿಗೆ ಇದ್ದಿಲು ಪುಡಿ ಬೆರೆಸಿ ಜಗಲಿ ಸಾರಿಸಿ, ದೊಡ್ಡಜ್ಜಿ, ಅಮ್ಮ ಒಳಗೆ ಬರುತ್ತಾ ಇದ್ದರು. ಸೂರ್ಯ ಹುಟ್ಟಿದ ಮೇಲೆ, ಜಗಲಿಯ ಸೆಗಣಿ ಒಣಗಿದ ಮೇಲೆ ಅಕ್ಕಿ

ಹಿಟ್ಟು ಪುಡಿಮಾಡಿಕೊಂಡು ಅದರ ಪಾಕ ಸೋಸಿ, ಅದನ್ನು ಒಂದು ಬಿಳಿಯ ಬಟ್ಟೆಯಲ್ಲಿ ಇಟ್ಟುಕೊಂಡು ಮೆಲ್ಲಗೆ ಅದನ್ನು ಒತ್ತುತ್ತಾ, ತೋರುಬೆರಳಲ್ಲಿ ಬೆಳ್ಳನೆಯ ಎಳೆ ಬಿಡಬೇಕು. ಅದನ್ನೆಲ್ಲಾ ನಾನು ಕಣ್ಣಲ್ಲಿ ಕಣ್ಣಿಟ್ಟು ನೋಡುತಾ ಇದ್ದೆ. ಹೆಣ್ಣುಮಕ್ಕಳು ಈ ಕೆಲಸ ಮಾಡುತ್ತಿದ್ದರೆ ನಮ್ಮ ಅಜ್ಜ ಮಾವಿನ ಸೊಪ್ಪು, ಬೇವಿನ ಸೊಪ್ಪು ತಂದು ಅವನ್ನು ಸರಿಯಾಗಿ ಕತ್ತರಿಸಿ ಜೋಡಿಸಿ ಮನೆಯ ಅಷ್ಟು ಬಾಗಿಲುಗಳಿಗೆ ತೋರಣ ಕಟ್ಟುತ್ತಿದ್ದರು. ತೋರಣ ಕಟ್ಟಿದ್ದಾದ ಮೇಲೆ ಬಾಗಿಲ ಎರಡೂ ಪಕ್ಕ ಮಾವು ಮತ್ತು ಬೇವಿನ ಟೊಂಗೆ ಸಿಕ್ಕಿಸುತ್ತಾ ಇದ್ದರು. ಲಕ್ಷಣವಾದ ಹುಡುಗಿಯ ಹಲ್ಲುಗಳಂತೆ ಆ ತೋರಣ ಸಮವಾಗಿ ಕಂಗೊಳಿಸುತ್ತಾ ಇದ್ದವು. ಒಂದು ಎಲೆ ಉದ್ದ, ಒಂದು ಗುತ್ತಾ ಆಗುವಂತಿಲ್ಲ.

ಇತ್ತ ಅಡುಗೆ ಮನೆಯಲ್ಲಿ ಅದ್ಯಾವ ಮಾಯದಲ್ಲೋ ಎಣ್ಣೆ ಸ್ನಾನ ಮುಗಿಸಿ ಅಜ್ಜಿ ಹಬ್ಬದ ಅಡುಗೆ ಶುರು ಮಾಡಿರುತ್ತಿದ್ದರು. ಹುಡುಗರಿಗೆ ಉಪವಾಸ ಕೆಡವಬಾರದೆಂದು ಇದ್ದಿಲೊಲೆಯಲ್ಲಿ ಉಪ್ಪಿಟ್ಟು ಬೇಯಿಸುವ ಕೆಲಸ ದೊಡ್ಡಜ್ಜಿಯದು. ನಮ್ಮ ಅಮ್ಮ ನನ್ನನ್ನು ಬಲವಂತವಾಗಿ ಸೆರೆ ಹಿಡಿದು, ನಿರ್ಲಜ್ಜೆಯಿಂದ ನನ್ನ ವಸ್ತ್ರಾಪಹರಣ ಮಾಡಿ ಮೈಗೆಲ್ಲ ತೊಪ ತೊಪ ಎಣ್ಣೆ ಬಡಿಯುತ್ತಿದ್ದಳು. ಅದು ಹರಳೆಣ್ಣೆ ಮಾರಾಯರೇ. ಈವತ್ತಿನ ಮಕ್ಕಳಿಗೆ ಹಚ್ಚುವ ನಾಜೂಕಾದ ಕೊಬ್ಬರಿ ಎಣ್ಣೆಯಲ್ಲ. ದೇಹದ ನವನಾರು ಸಂಧಿಗಳಿಗೂ ಎಣ್ಣೆ ತಲಪಿಸದೆ ಅಮ್ಮನಿಗೆ ತೃಪ್ತಿಯೆಂಬುದಿಲ್ಲ. ನಾನು ನಾಚಿಕೊಂಡರೆ ನಾನು ಕಾಣದ್ದಲ್ಲ ಬಿಡೋ ಎಂದು ಹಿಡಿದು ಜಗ್ಗುವುದು ಬೇರೆ! ಎಣ್ಣೆಯ ವಾಸನೆಗೇ ನಮಗೆ ವರ್ರ್ ಎನ್ನುವಂತಾಗುತ್ತಿತ್ತು. ಗಣೇಶನ ಬಾವಿಯಿಂದ ನಮ್ಮ ಬಸವ ನೀರು ಅಡಕುತ್ತಿದ್ದ. ಧಗ ಧಗ ಚಿಪ್ಪು ಒಡ್ಡಿ ಉರಿಸುವ ನೀರೊಲೆ! ಚಿಪ್ಪು ಉರಿಯುವಾಗ ನಾನಾ ಬಗೆಯ ರಾಗಾಲಾಪ ಬೇರೆ ನಡೆಯುತ್ತಾ ಇತ್ತು. ನೀರು ತಳಮಳ ಕುದಿಯಲು ತೊಡಗಿದೆ ಅನ್ನುವಾಗ 'ಅಜ್ಜಯ್ಯನ ಅಭ್ಯಂಜನ' ಶುರು! ಆಗ ಹೈಸ್ಕೂಲಲ್ಲಿ ಆ ಪ್ರಬಂಧ ನಮಗೆ ಓದಲು ಇತ್ತು. ನಮ್ಮ ಮನೆಯಲ್ಲೂ ಅದೇ ಅನುಭವ ಬಿಡಿ! ದೇವರೇ ಅಂತ ಬಿಗಿಯಾಗಿ ಕಣ್ಮುಗಿದುಕೊಂಡು ಜಾರುವ ಬಚ್ಚಲಲ್ಲಿ ಹಾಕಿದ್ದ ಅಂಟಂಟು ಮಣೆಯ ಮೇಲೆ ಈ ಮಹಾ ಮಸ್ತಕಾಭಿಷೇಕ ಮಹೋತ್ಸವ! ಆ ಮಹಾಪರ್ವದ ರಸಶೃಂಗ ಎಂದರೆ ಸೀಗೆ ಹಚ್ಚಿ ತಲೆಯಿಂದ ಎಣ್ಣೆ ತೆಗೆಯುವ ಕರಚಪಲ.

ಅಮ್ಮ ಗಸಗಸ ತಲೆ ತಿಕ್ಕುತ್ತಾ ಇದ್ದರೆ, ಎಷ್ಟೇ ಬಿಗಿಯಾಗಿ ಕಣ್ಮುಚ್ಚಿರಲಿ ಅದು ಹೇಗೋ ಆ ಸೀಗೆಯ ರಸ ಎಂಬ ಪಾಪಿ ಕಣ್ಣಿಗೆ ಇಳಿದೇ ಬಿಡುತ್ತಿತ್ತು! ಶುರುವಾಗುತ್ತಿತ್ತು ಶಂಖವಾದ್ಯ! ಹೇಗೋ ಅಭ್ಯಂಜನ ಮುಗಿದು, ಅಮ್ಮ ಆಶೀರ್ವಾದದ ಏಳು ತಂಬಿಗೆಯನ್ನೂ ಹಾಕಿದ ಮೇಲೆ, ಮೈತುಂಬ ಬಿಸಿಬಿಸಿ ಹಬೆ ಹಾಯುತ್ತಾ ಬಚ್ಚಲಿಂದ

ಹಾರಿ ದೊಡ್ಡಜ್ಜಿಯ ಬಳಿಗೆ ಓಡುತ್ತಿದ್ದೆ. ಕಣ್ಣೆಲ್ಲಾ ಸೀಗೆ ಬಿದ್ದು ಕೆಂಪಗೆ ಕೆಂಡವಾಗಿ ಉರಿಯುತ್ತಾ ಇದ್ದವು. 'ಒಂದು ಸಣ್ಣ ನಿದ್ದೆಮಾಡು ಎಲ್ಲಾ ಸರಿಹೋಗತ್ತೆ' ಅಂತ ನಮ್ಮ ದೊಡ್ಡಜ್ಜಿ! ಐದು ನಿಮಿಷ ನಾನು ಮಲಗಿರಬಹುದು. ಬೀದಿಯಲ್ಲಿ ಲಗ್ಗೆ ಚಂಡು ಪ್ರಾರಂಭವಾಗೋದು. ಅದರ ಅಬ್ಬರ, ಕೂಗಾಟ ವರ್ಣನಾತೀತ. ಆಡುತ್ತಿದ್ದವರು ಹುಡುಗರೇನಲ್ಲ. ಇಪ್ಪತ್ತು ಮೂವತ್ತು ವರ್ಷದ ಮುದಿಕೋಣಗಳೂ ಬರೀ ಒಂದು ಚಡ್ಡಿಯಲ್ಲಿ, ಮೈತುಂಬ ತಲೆತುಂಬ ಹರಳೆಣ್ಣೆ ಸುರಿಸುತ್ತಾ ಲಗ್ಗೆಯಾಟದಲ್ಲಿ ತೊಡಗಿರುತ್ತಿದ್ದರು.

ಈ ಆಟ ಜಗಲಿಯ ಮೇಲೆ ಕೂತು ನೋಡುತ್ತಾ, 'ಆಹ ನಮ್ಮ ರೇವಣ್ಣನನ್ನ ಈ ಆಟದಲ್ಲಿ ಮೀರಿಸೋರು ಯಾರು' ಎಂದು ಹುಗ್ಗಿ ರೇವಣ್ಣನನ್ನು ಹೊಗಳುತ್ತಾ ಆಟ ಮುಗಿದು ಮನೆಯೊಳಗೆ ಬಂದರೆ ಅಜ್ಜನ ಪೂಜೆ ಗಂಟೆಯ ಅಬ್ಬರದಲ್ಲಿ ಜೋರಾಗಿ ನಡೆದಿರುತ್ತಿತ್ತು. ಅವರಿಗೆ ಸಂಧ್ಯಾವಂದನೆ ಮಂತ್ರ ಬಿಟ್ಟು ಬೇರಾವ ಮಂತ್ರವೂ ಬರದಿದ್ದ ಕಾರಣ ತಮ್ಮ ಮಂತ್ರದ ಐಬನ್ನೆಲ್ಲಾ ಘಂಟಾಘೋಷದಲ್ಲಿ ಮುಳುಗಿಸಿ ಮಹಾಮಂಗಳಾರತಿಯ ಘಟ್ಟಕ್ಕೆ ಬಂದೇ ಬಿಡುತ್ತಿದ್ದರು. ನಾನು ದೊಡ್ಡಜ್ಜಿಯ ಮರೆಯಲ್ಲಿ ನಿಂತು ಅಜ್ಜಿ ಒಲೆಯ ಮೇಲೆ ಬೇಯಿಸುತ್ತಿದ್ದ ಹೋಳಿಗೆಯನ್ನು ಒಮ್ಮೆ, ಹೂವಿಟ್ಟು ಅಲಂಕಾರ ಮಾಡಿದ ಪರ್ವತೇಶ್ವರನನ್ನು ಒಮ್ಮೆ ನೋಡುತ್ತಾ ಬಾಯಲ್ಲಿ ಉಗುಳು ನುಂಗುತ್ತಾ ನಿಲ್ಲುತ್ತಿದ್ದೆ.

ಗಡದ್ದು ಊಟವಾಗಿ ಸ್ವಲ್ಪ ಗೊರಕೆ ಹೊಡೆದದ್ದಾದ ಮೇಲೆ ಚಂದ್ರ ದರ್ಶನಕ್ಕೆ ಊರಿಗೆ ಊರೇ ಸಿದ್ಧವಾಗುತ್ತಿತ್ತು. ಜಗಲಿಯ ಮೇಲೆ ಹೊಸ ಬಟ್ಟೆ ಧರಿಸಿ ನಾವೆಲ್ಲಾ ಕುಳಿತುಕೊಳ್ಳುತ್ತಿದ್ದೆವು. ಕೆಲವರು ದೇವಸ್ಥಾನದ ಪೌಳಿ ಹತ್ತುತ್ತಿದ್ದರು. ಕೆಲವರು ಬತೇರಿ ಹತ್ತಿ ನಾವು ಮೊದಲು ಯುಗಾದಿ ಚಂದ್ರನನ್ನು ನೋಡೋಣವೆಂದು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಪಶ್ಚಿಮ ದಿಕ್ಕನ್ನೇ ನೋಡುತ್ತಾ ನಿಲ್ಲುತ್ತಿದ್ದರು. ನಮ್ಮ ಊರ ಜನ ಬನ್ನಿಯ ಸೊಪ್ಪು ಯಥೇಚ್ಛವಾಗಿ ಕಿತ್ತು ಆಗಲೇ ಸಿದ್ಧಮಾಡಿಕೊಂಡಿರುತ್ತಿದ್ದರು.

ಚಂದ್ರ ಯಾವ ಕೇರಿಯಲ್ಲಿ ಮೊದಲು ಕಂಡರೂ ಕೇಕೆ ಕೂಗಾಟದಿಂದ ಊರಿಗೆ ಊರೇ ಸಂಭ್ರಮಿಸುತ್ತಿತ್ತು. 'ನೋಡ್ರಿ... ಅಲ್ರೀ... ಆ ತೆಂಗಿನ ಮರದ ಮೂರನೇ ಗರಿಯ ಬಲಕ್ಕೆ ಎರಡು ಮಾರು ಬಿಟ್ಟು ನೋಡ್ರಿ' ಮುಂತಾಗಿ ಎಲ್ಲರೂ ಮಾರ್ಗದರ್ಶನ ಮಾಡುವವರೇ! ಚಂದ್ರ ದರ್ಶನ ಆದವರಂತೂ ಇಷ್ಟಗಲ ಹಲ್ಲೆಲ್ಲಾ ಕಿಸಿದು ನಗುತ್ತಾ... 'ಯಜಮಾನ್ರೇ ನಿಮಗೆ ದರ್ಶನ ಆಯ್ತೋ... ತಗೊಳ್ಳಿ... ಬನ್ನಿ ತಗೊಂಡು ಬಂಗಾರದಂಥ ಮಾತಾಡಿ' ಎನ್ನುತ್ತಾ ಕಾಲು ಮುಟ್ಟಿ ಎದುರು ಬಂದವರಿಗೆ ನಮಸ್ಕಾರ ಮಾಡುತ್ತಿದ್ದರು.

ಪಾರ್ಟೀ ಜಗಳ ಆಗಿ ಹೊಡೆದಾಡಿಕೊಂಡವರೂ ಎದುರಿಗೆ ಬಂದಾಗ ಬನ್ನಿ ಕೊಟ್ಟು ಶರಣು ಮಾಡುವುದು ಮಾತ್ರ ಮರೆಯುತ್ತಿರಲಿಲ್ಲ.

ನಮ್ಮ ದೊಡ್ಡಜ್ಜಿಯಂತೂ ಆಡಂಬರದ ಒಂದು ಸೀರೆ ಉಟ್ಟುಕೊಂಡು ಉಚ್ಚಂಗಮ್ಮನಂತೆ ಜಗಲಿಯ ಮೇಲೆ ನೆರಿಗೆ ಚೆಲ್ಲಿಕೊಂಡು ಕುಳಿತಿರುತ್ತಿದ್ದಳು. ಅವತ್ತೊಂದು ದಿನ ಯಾರೂ ಮಡಿ ಮೈಲಿಗೆ ನೋಡುತ್ತಿರಲಿಲ್ಲ. ರಾತ್ರಿ ಬಾಗಿಲು ಹಾಕಿಕೊಂಡು ಒಳಗೆ ಬಂದಾಗ 'ಸೀತೇ ನಿನಗೆ ಎಷ್ಟು ಜನ ನಮಸ್ಕಾರ ಮಾಡಿದೆ' ಎಂದು ಭೀಮಜ್ಜಿ ತಂಗಿಯನ್ನು ಕೇಳುತ್ತಿದ್ದಳು. ಆ ಪ್ರಶ್ನೆ ಕೇಳುವ ಗತ್ತಿನಲ್ಲಿ ನಾನು ಈವತ್ತು ಶರಣು ಮಾಡಿಸಿಕೊಂಡು ಸಂಪಾದಿಸಿದ ಬನ್ನಿಸೊಪ್ಪು ಹೆಚ್ಚು ಎನ್ನುವ ಪೊಗರು ತಾನೇ ತಾನಾಗಿ ಕಾಣುತ್ತಾ ಇತ್ತು!

**ಎಚ್. ಎಸ್. ವೆಂಕಟೇಶಮೂರ್ತಿ**

ಪ್ರಜಾವಾಣಿ 30.03.2014

# ಕತ್ತಲ ಸೀಮೆಯ ಕಣಿವೆಯಲ್ಲಿ

ವಿಶಾಖಪಟ್ಟಣದ ಸ್ಟಾಂಡಿನಲ್ಲಿ ಬಸ್ಸು ಹಿಡಿದವನು, ಕಂಡಕ್ಟರ್‌ಗೆ ಭದ್ರಾಚಲಕ್ಕೆ ಒಂದು ಟಿಕೇಟು ಎಂದೆ. ಆತ ಟಿಕೇಟು ಹರಿಯದೆ ಒಂದು ಘಳಿಗೆ ನನ್ನನ್ನೇ ನೋಡಿದ. ಯಾಕೆ ಎಂದೆ. ತೆಲುಗಿನಲ್ಲಿ, ಯಾರೂ ಅಲ್ಲಿಯವರೆಗೆ ಈ ಷಟ್ಲು ಬಸ್ಸಿನಲ್ಲಿ ಪ್ರಯಾಣಿಸುವುದಿಲ್ಲ. ಹತ್ತುವವರೆಲ್ಲ ಕಟ್ ಸೀಟುಗಳು ಎಂದ. ಭದ್ರಾಚಲಕ್ಕೆ ಎಷ್ಟು ಹೊತ್ತಿಗೆ ಹೋಗುತ್ತದೆಂದೆ. ಅವನು ಈಗ ಬೆಳಗ್ಗೆ ಎಂಟು. ರಾತ್ರಿ ಹತ್ತು ಗಂಟೆಯ ಮೇಲಾಗಬಹುದು. ಹೋಗುವ ಮಾರ್ಗ ಫಾರೆಸ್ಟು ರೂಟು, ಮಧ್ಯ ಹಳ್ಳಿಪಳ್ಳಿಗಳು ಸಿಗುತ್ತವೆಂದ. ಹಾಗಾದರೆ ಟಿಕೇಟು ಕೊಡಿ ಎಂದೆ.

ನಿರ್ವಾಹಕ ಹೇಳಿದಂತೆ ವಿಶಾಖಪಟ್ಟಣ ಬಿಟ್ಟು ಒಂದೆರಡು ಗಂಟೆಗಳಲ್ಲಿಯೇ ಬಸ್ಸು ಅರಣ್ಯಮಾರ್ಗ ಪ್ರವೇಶಿಸಿತು. ಆಂಧ್ರದ ಕರಾವಳಿಯ ಬಿಸಿಲು ಕಡಿಮೆಯಾಯಿತು. ದಾರಿ ಸಾಗಿದಂತೆ, ಬಹುಶಃ ಈ ಅರಣ್ಯ ಮಧ್ಯಪ್ರದೇಶ ಮತ್ತು ಆಂಧ್ರದ ಗಡಿಭಾಗಗಳನ್ನು ಕೂಡಿಸುವ ಭಾರತದ ನಟ್ಟನಡುಭಾಗ, ರಾಮಲಕ್ಷ್ಮಣರು ಅಲೆದಾಡಿದ ದಂಡಕಾರಣ್ಯವಿರಬೇಕೆನಿಸಿತು.

ರಾತ್ರಿ ಹತ್ತಾದರೂ ಬಸ್ಸು ಭದ್ರಾಚಲಂ ಮುಟ್ಟುವ ಸೂಚನೆ ಕಾಣಲಿಲ್ಲ. ಒಂಬತ್ತರ ಸುಮಾರಿಗೆ ದಟ್ಟ ಅರಣ್ಯದ ನಡುವೆ ಗುಡಿಸಲ ಹೋಟೆಲ್ ಮುಂದೆ ಊಟಕ್ಕೆ ಬಸ್ಸು ನಿಂತಂತಾಯಿತು. ನಾವಿದ್ದವರು ಹದಿನೈದು ಇಪ್ಪತ್ತು ಜನ ಪ್ರಯಾಣಿಕರು. ದಟ್ಟಕತ್ತಲು, ಆಕಾಶದ ನಕ್ಷತ್ರಗಳನ್ನ ಬಿಟ್ಟರೆ ಬೆಳಕೆಂಬುದಿಲ್ಲ. ಗುಡಿಸಲು ಹೋಟೆಲ್ ಒಳಗೆ ಎರಡು ಬಲ್ಬ್‌ಗಳು ಇನ್ನೇನು ಆರಿಯೇ ಹೋಗುವಂತೆ ಉರಿಯುತ್ತಿದ್ದವು. ಹೋಟೆಲಿನಲ್ಲಿ ಹೆಂಗಸೊಬ್ಬಳದು ಅಡಿಗೆಯ ಕೆಲಸವಾಗಿ, ಗಂಡನದು ಸಪ್ಲೈ, ಮಕ್ಕಳದು ಕ್ಲೀನಿಂಗ್.

ನಾನು ಊಟದ ನಂತರ ಬಸ್ಸು ಹತ್ತುವುದೋ ಬೇಡವೋ ಎಂದು ಯೋಚಿಸಿದೆ. ಭದ್ರಾಚಲಂ ಇನ್ನೂ ಐವತ್ತು ಕಿಲೋಮೀಟರು. ಇದರ ವೇಗ ಮತ್ತು ನಿಲ್ದಾಣಗಳ ಸಂಖ್ಯೆ ನೋಡಿದರೆ ಗುರಿಮುಟ್ಟುವುದು ಅರ್ಧ ರಾತ್ರಿಯಾಗಬಹುದೆನಿಸಿ ಹೋಟೆಲಿನವನನ್ನು ಮಲಗಲು ಜಾಗ ಕೇಳಿದೆ. ಅದಕ್ಕೆ ಅವನು ಇಷ್ಟುಹೊತ್ತಿನಲ್ಲಿ ಭದ್ರಾಚಲದಲ್ಲಿ ಜಾಗ ಹುಡುಕುವುದು ಕಷ್ಟ. ಇಲ್ಲಿಯೇ ಮಲಗಿದ್ದು ಬೆಳಗ್ಗೆ ಬಸ್ಸೋ, ಲಾರಿಯೋ, ವ್ಯಾನೋ ಹಿಡಿದು ಹೋಗಬಹುದು ಎಂದು ಹಗ್ಗದ ಮಂಚ ತೋರಿಸಿದ.

ಬಸ್ಸು ಹೊರಟು, ನಾನು ಅಲ್ಲೇ ಉಳಿದು ಹತ್ತಿಪ್ಪತ್ತು ನಿಮಿಷವಾಗಿರಬೇಕು. ತಮಟೆ, ಕೊಂಬು, ಕಹಳೆಯ ದನಿ ಕೇಳಿಸಿತು. ನೋಡಿದರೆ ಮೂವತ್ತು ನಲವತ್ತು ಜನರ ಗುಂಪು ಯಾವುದೋ ಮೆರವಣಿಗೆ ಯಾತ್ರೆ ತೆಗೆದಂತಿತ್ತು. ಇಬ್ಬರು ಮೂವರ ಕೈಯಲ್ಲಿ ಪೆಟ್ರೋಮ್ಯಾಕ್ಸ್ ಲೈಟು. ಸುಮಾರು ಹದಿನೈದು ವರ್ಷದ ಹೆಣ್ಣುಮಗಳ

ಕೈಕಾಲು ಕಟ್ಟಿದ್ದು ಅವಳನ್ನು ಒಬ್ಬ ಗಂಡಸು ಹೊತ್ತುಕೊಂಡಿದ್ದ. ಮತ್ತೆ ಕೆಲವು ಹೆಂಗಸರ ಹೆಗಲ ಮೇಲೆ ಮಲಗಿದ್ದ ಹಸುಗೂಸುಗಳು. ಇನ್ನು ಕೆಲವು ಗಂಡಸರು ಎಡಬಲಗೈಗಳಲ್ಲಿ ಕಾಲು ಕಟ್ಟಿದ ಕೋಳಿಗಳನ್ನು ನೇತಾಡಿಸಿ ನಡೆಯುತ್ತಿದ್ದರು. ಅವು ಸಮಯ ಬಿದ್ದಾಗಲೆಲ್ಲ ರೆಕ್ಕೆ ಬಡಿದು ಬಿಡುಗಡೆಗಾಗಿ ಕೊಕ್ಕರೆಯುತ್ತಿದ್ದವು.

ಹೋಟೆಲಿನವ, ಗುಂಪು ಹೋಗುತ್ತಿರುವುದು ಕಣಿವೆಯ ಕಡೆ ಪೂಜೆಗೆ ಎಂದ. ನನ್ನ ಕುತೂಹಲ ಕಂಡು ನಿನ್ನದೂ ಏನಾದರೂ ಹರಕೆ, ಕೇಳಿಕೆ ಇದ್ದರೆ ಹೋಗಬಹುದು. ಆ ದೇವತೆ ಹೇಳಿದ್ದೆಲ್ಲ ನಿಜ ಆಗುತ್ತದೆ. ಭಾರಿ ಕುರಿತೇಟು, ಇತ್ತಲ ಸೀಮೆಯವರೆಲ್ಲ ಆ ದೇವತೆಗೆ ಭಯ ಭಕ್ತಿಯಿಂದ ನಡೆದುಕೊಳ್ಳುವುದುಂಟು ಎಂದ. ನಾನು ದೇವತೆ ಇರುವುದು ಎಲ್ಲಿ ಎಂದೆ. ಇಲ್ಲೇ ಬೆಟ್ಟದ ಕೆಳಭಾಗದ ಕಣಿವೆಯಲ್ಲಿ, ತೊರೆಯ ದಡದಲ್ಲಿ ಆಲದಮರವುಂಟು, ಅಲ್ಲಿ ಎಂದ.

ಉಂಡ ಹೊಟ್ಟೆಗೆ ಇರುವೆ ಬಿಟ್ಟುಕೊಂಡವನಂತೆ ಎದ್ದೆ. ನನ್ನ ಬ್ಯಾಗಿನಲ್ಲಿ ಅಂಥದ್ದೇನೂ ಇರಲಿಲ್ಲವಾದ್ದರಿಂದ ಹೋಟೆಲಿನವನಿಗೆ ಅದು ಇಲ್ಲೇ ಇರಲಿ ಎಂದೆ. ಗುಡಿಸಲ ಬಾಗಿಲು ತೆರೆದೇ ಇರುತ್ತದೆ. ಕೇಳಿಕೆ, ಪೂಜೆ ಆದ ಮೇಲೆ ಬನ್ನಿ. ಇದೇ ಹಗ್ಗದ ಮಂಚದ ಮೇಲೆ ರೆಸ್ಟುಮಾಡಿ, ಬೆಳಗ್ಗೆ ನಾಸ್ತಾ ಆಗಿ ಮುಂದೆ ಹೋಗಬಹುದೆಂದ. ಇಷ್ಟು ಮಾತಾಗುವ ಹೊತ್ತಿಗೆ ಆ ಗುಂಪು ಒಂದಷ್ಟು ದೂರ ನಡೆದೇಬಿಟ್ಟಿತ್ತು. ನಾನು ಸರಸರ ಹೆಜ್ಜೆ ಹಾಕಿ ಗುಂಪು ಸೇರಿದೆ. ಕೊಂಚ ವಿದ್ಯೆ ಬಲ್ಲವರಂತಿದ್ದ, ಷರಟು, ಪ್ಯಾಂಟು ಹಾಕಿದ ಏಳೆಂಟು ಮಂದಿ ಹುಡುಗರೂ ಗುಂಪಿನಲ್ಲಿದ್ದರು.

ತೆಲುಗು ಮಾತಾಡಿದುದರಿಂದ ನಾನು ಅದೇ ದೈವದ ಭಕ್ತನಿರಬೇಕೆಂದುಕೊಂಡರು. ಬನ್ನಿ ಹೋಗುವ ಎಂದರೇ ಹೊರತು ಯಾರೂ ಹೆಚ್ಚೇನೂ ಮಾತಾಡುವಂತಿರಲಿಲ್ಲ. ತಮಟೆ, ಕೊಂಬು, ಕಹಳೆ ದನಿ ಜೋರಿತ್ತು. ಹೆಂಗಸರು ಗುಂಪಿನಲ್ಲಿ ದೇವತೆಯ ಸ್ತುತಿ ಗೀತೆಗಳನ್ನು ಹಾಡುತ್ತಿದ್ದರು. ಹೆಗಲ ಮೇಲೆ ಕೈಕಾಲು ಕಟ್ಟಿಸಿಕೊಂಡಿದ್ದ ಹೆಣ್ಣುಮಗಳು ಆಗಾಗ ಜ್ಞಾನ ಬಂದವಳಂತೆ ವಿಕಾರವಾಗಿ ಕೂಗಾಡುತ್ತಿದ್ದಳು. ಅವಳ ತಲೆಮುಡಿಯೆಲ್ಲ ಕೆದರಿ ಚೆಲ್ಲಿಕೊಂಡಿತ್ತು.

ಬಾಯಲ್ಲಿ ನೊರೆ ಉಕ್ಕಿ ಚೆಲ್ಲುತ್ತಿತ್ತು. ಎಲ್ಲರಿಗಿಂತ ಮುಂದೆ ಪೂಜಾರಿ ನಡೆಯುತ್ತಿದ್ದ. ಆ ದಾರಿ ಎಲ್ಲರಿಗೂ ಪರಿಚಯವಿದ್ದುದರಿಂದ ಸರಾಗ ನಡೆಯುತ್ತಿದ್ದರು. ಅತ್ತ ಇತ್ತ ಕೈಚಾಚಿದರೂ ಸಿಗುವ ಅರಣ್ಯ. ಜೀರುಂಡೆಗಳ ಭಯಂಕರ ಸದ್ದು. ಕಾಲುದಾರಿ ಮಾತ್ರ ಕಾಣುತ್ತಿತ್ತು. ಹೋಟೆಲಿನವ ಹೇಳಿದಂತೆ ಪೂಜಾಸ್ಥಳ ಹತ್ತಿರದಲ್ಲೇನೂ ಇರಲಿಲ್ಲ. ಗುಡ್ಡ ಇಳಿದು ಪಾತಾಳ ಮುಟ್ಟುತ್ತಿದ್ದೇವೋ ಎನ್ನುವ ಅನುಭವ. ರಾತ್ರಿಯ ಅಸ್ಪಷ್ಟತೆಯಲ್ಲಿ ನನಗೆ ಕಂಡುಬಂದಂತೆ ಎರಡು ಬೆಟ್ಟಗಳ ಆಳದ ಕಣಿವೆಗೆ ಬಂದು ಸೇರಿದ್ದೆವು. ಅಲ್ಲೊಂದು ಸಣ್ಣ ತೊರೆ. ಎಲ್ಲರೂ ಅದರಲ್ಲಿ ಕೈಕಾಲು, ಮುಖಮಾರ್ಜನ ಮಾಡಿ ಬಂದರು.

ಪೂಜಾರಿಯಾದರೋ ಆಗಲೇ ನೀರಲ್ಲಿ ಮುಳುಗೆದ್ದು, ಉದ್ದನೆಯ ಮಂಡೆಕೂದಲು ಬಿಟ್ಟು ಮೈಕೈಗೆಲ್ಲ ವಿಭೂತಿ ಬಳಿದು, ಹಣೆಗೆ ಅರಿಷಿಣ ಕುಂಕುಮ ಮೆತ್ತಿ ಅಲ್ಲೇ ಬೆಳೆದ ಬೂರುಗದ ಮರದ ಕಟ್ಟೆಯ ಮೇಲೆ ಕೂತ. ತಾನೇ ತಂದಿದ್ದ ಲೋಹದ ತಗಡಿನ ದೇವತೆಯನ್ನು ಪ್ರತಿಷ್ಠಾಪಿಸಿದ. ಜತೆಗೆ ಆ ಕಟ್ಟೆಯಲ್ಲೇ ಇದ್ದ ಕಲ್ಲಿನ ದೇವತೆಗಳಿಗೆಲ್ಲ ನೀರು ಚಿಮುಕಿಸಿ ಅರಿಷಿಣ ಕುಂಕುಮ ಚೆಲ್ಲಿ, ಹೂವಿನ ಮಾಲೆ ಸೂಡಿದ. ಗಂಟೆ ಅಲ್ಲಾಡಿಸಿ, ಊದುಗಡ್ಡಿ ಹಚ್ಚಿದ ಮೇಲೆ ಮಂಗಳಾರತಿ ಬೆಳಗುವ ಹೊತ್ತಿಗೆ ಅವನಿಗೆ ದೈವದ ಆವಾಹನೆ ಆಗಿಬಿಟ್ಟಿತು.

ಕುಣಿಕುಣಿದು, ಮರದ ಬುಡ ಬಳಸುತ್ತ ಮಂಗಳಾರತಿಯ ಕರ್ಪೂರವನ್ನು ಬಾಯಿಗೆ ಹಾಕಿಕೊಂಡ. ಕೇಕೆ ಹಾಕಿ ಅಬ್ಬರಿಸಿದ. ಮರದ ಮೇಲಿನ ಪಕ್ಷಿಗಳು ರೆಕ್ಕೆಬಡಿದು ರಾತ್ರಿಯ ಕತ್ತಲಲ್ಲಿ ಎತ್ತಲೂ ಹಾರಲಾಗದೆ ಹೆದರಿ ಮುದುರಿದವು. ಸುತ್ತಲಿದ್ದ ಜನ ಕತ್ತಲಿಗೆ, ಅರಣ್ಯಕ್ಕೆ, ಸುತ್ತ ಮಲಗಿರಬಹುದಾದ ಪ್ರಾಣಿ, ಜಂತುಗಳಿಗೆ ಅಳುಕದೆ, ಪೂಜಾರಿಗೆ ಹೆದರುವಂತಾದರು. ಅವನು ಆಡುತ್ತಿದ್ದ ಮಾತು, ಉದುರಿಸುತ್ತಿದ್ದ ಮಂತ್ರ ಅರ್ಥವಾಗುವಂತಿರಲಿಲ್ಲ.

ಮೊದಲು ಮಕ್ಕಳ ತಾಯಂದಿರನ್ನು ಬರಹೇಳಿದ. ಬರುವಾಗಲೇ ಅಂಗೈ ಮುಂಗೈಗೆ ಇಳಿಬಿಟ್ಟುಕೊಂಡಿದ್ದ ತಗಡಿನ ಯಂತ್ರಗಳನ್ನು ಒಂದೊಂದಾಗಿ ಬಿಚ್ಚಿ ಎಂಟು ಹತ್ತು ಮಕ್ಕಳ ಕೊರಳಿಗೆ ಕಟ್ಟಿದ. ಆ ಮಕ್ಕಳೆಲ್ಲ ಆಗಲೇ ಅನಾರೋಗ್ಯದಿಂದ ನಿತ್ರಾಣವಾಗಿ ತಾಯಂದಿರ ಹೆಗಲ ಮೇಲೆ ಮಲಗಿದ್ದವು. ಅವನ್ನು ಕೊಂಚ ಎಚ್ಚರಿಸಿದಂತೆ ಮಾಡಿ ಪೂಜಾರಿಯಿಂದ ಯಂತ್ರ ಕಟ್ಟಿಸಿದರು. ತಾಯಂದಿರನ್ನೆಲ್ಲ ಒಟ್ಟಿಗೆ ನಿಲ್ಲಿಸಿ, ಗಿಂಡಿಯ ತೀರ್ಥವನ್ನು ಮಕ್ಕಳ ಮುಖಕ್ಕೆ ಪಟಾರ್ ಪಟಾರನೆ ಎರಚಿದ.

ಅವು ಕಿಟಾರನೆ ಕಿರುಚಿಕೊಂಡು ಜೀರುಂಡೆಗಳಿಗಿಂತ ಬಲವಾಗಿ ಅತ್ತವು. ಇನ್ನು ಎರಡನೆಯ ಸುತ್ತು ಹೆಣ್ಣುಗಂಡಿನ ಸಂಬಂಧ ಕೇಳಲು ಬಂದಿದ್ದವರು. ಅವರನ್ನೆಲ್ಲ ಒಂದು ಗುಂಪು ಮಾಡಿ ಅಪ್ಪ ಅಮ್ಮ ಬಂದಿದ್ದರೆ ಅವರ ಕೈಯಿಂದ, ವರ ಬಂದಿದ್ದರೆ ಅವನಿಂದ, ವಧು ಬಂದಿದ್ದರೆ ಅವಳ ಹಸ್ತ ಕವಡೆ ಬಿಡಿಸಿದ. ಕಣ್ಣುಮುಚ್ಚಿ ಹೂಂಕರಿಸಿದ, ಲೆಕ್ಕ ಸರಿಹೋಗಲಿಲ್ಲವೆಂದ. ಉಹ್ಞೂ, ಉಹ್ಞೂ, ಅಪ್ಪಣೆಕೊಡು, ಏನು ಹೇಳು ಎಂದು ಸಿಟ್ಟು ಮಾಡಿಕೊಂಡ.

ಅಸಮಾಧಾನಗೊಂಡವನಂತೆ ತಾಯಿ ಮಾತಾಡುತ್ತಿಲ್ಲ, ಉತ್ತರ ಕರುಣಿಸುತ್ತಿಲ್ಲ. ನೀವು ಮುಂದಿನ ಸರ್ತಿ ಹಾಜರಾಗಿ ಎಂದ. ಆ ಗುಂಪಿನವರೆಲ್ಲ ದೇವಿಗೆ ಯಾರೋ ತಮ್ಮಲ್ಲೇ ಅಸಮಾಧಾನ ಉಂಟು ಮಾಡಿರಬೇಕು. ಇಲ್ಲದಿದ್ದರೆ ಹೀಗಾಗುತ್ತಿರಲಿಲ್ಲವೆಂದುಕೊಂಡರು. ಮೂರನೆಯ ಸುತ್ತು ಅಲ್ಲೇ ಕಟ್ಟಿ ಮಲಗಿಸಿದ್ದ ಹದಿನೈದು ವರ್ಷದ ಹೆಣ್ಣುಮಗಳದು. ಕಟ್ಟು ಬಿಚ್ಚಲು ಹೆಣ್ಣುಮಗಳು ಒಮ್ಮೆಲೇ ಎದ್ದು ಅರಚುತ್ತ ಕಂಡಕಡೆ ಓಡಲು ನೋಡಿದಳು. ಅವಳು ಈ ಜನ ಸಮೂಹಬಿಟ್ಟು ಅರಣ್ಯದ ಒಳಭಾಗಕ್ಕಾದರೂ ಸರಿಯೇ ಓಡಲು ಸಿದ್ಧವಿದ್ದಳು.

ಓಡುತ್ತಿದ್ದವಳನ್ನು ಹಿಡಿಯಲು ಅವಳ ಮನೆಯವರು ಪ್ರಯತ್ನಪಟ್ಟರು. 'ಕರೆದುಕೊಂಡು ಬಂದಿದ್ದೀರಲ್ಲಾ, ಬಿಡೀ, ಅವಳನ್ನು ನನ್ನ ಕೈಗೆ ಕೊಡಿ' ಎಂದು, ನಿತ್ರಾಣಳಾಗಿದ್ದರೂ ಎದ್ದು ಓಡಲು ಪ್ರಯತ್ನಿಸುತ್ತಿದ್ದ ಆ ಹೆಣ್ಣಿನ ಮುಡಿಯ ನೀಳಕೂದಲನ್ನು ಪೂಜಾರಿ ಬಲವಾಗಿ ಹಿಡಿದ. ಕೈಯಲ್ಲಿದ್ದ ಗಂಟುಗಂಟಾದ ಕೋಲಿನಿಂದ ಅವಳ ಮೈಕೈಗೆಲ್ಲ ಬಾರಿಸಿದ. ಹುಡುಗಿ ಪೂಜಾರಿಯ ಮೇಲೆ ಬೀಳಲು ನೋಡಿದಳು. 'ನಾ ಮೀದನೇ ನೀ ರೋಷಮಾ, ಯಲಾ ವೆದವಾ, ಯವರು ನುವು ಚೆಪ್ಪು' ಎಂದು ಬಾರಿಸತೊಡಗಿದ.

ಅವಳ ತಲೆಯ ಮೇಲೆ ಕಟ್ಟೆಯ ಕಲ್ಲು ಎತ್ತಿಟ್ಟ. ಆ ಕಲ್ಲನ್ನು ಅವನ ಮೇಲೇ ಎಸೆಯಲು ನೋಡಿದಳು. ಅಷ್ಟುಹೊತ್ತಿಗೆ ಬಂಧುಗಳು ಅವಳ ತಲೆಯ ಮೇಲೇ ಕಲ್ಲು ಹೊರಿಸಿ ಕಾಲುದಾರಿಯಲ್ಲಿ ಕರೆದುಕೊಂಡು ಹೋಗಿ ಹಾಕಿಸಿಬಂದರು. ಅವಳಿಗೆ ಹಿಡಿದಿರುವ ದೆವ್ವ ಹೆಣ್ಣಲ್ಲ, ಗಂಡು. ಸುಲಭಕ್ಕೆ ಕಡೆ ಹಾಯುವವನಲ್ಲ. ನಿನ್ನಲ್ಲಿ ಎಷ್ಟು ಬಲವಿದ್ದರೆ ನನಗೇನು ಭಯ. ನನ್ನದು ದುರ್ಗಾಶಕ್ತಿ. ಅಮ್ಮ ನಿನ್ನಂಥಾ ಕೊಣಮಿಣಿಗೆ ಅಂಜುವುದಲ್ಲ ಎಂದು ಬೆತ್ತದಿಂದ ಹುಡುಗಿಗೆ ಇನ್ನಷ್ಟು ಬಾರಿಸಿದ. ಬಾಯಲ್ಲಿ ನೊರೆ ಸುರಿಸಿ ಹುಡುಗಿ ನೆಲ ಕಚ್ಚಿಬಿಟ್ಟಳು. ನೋಡಿ, ಈಗ ದೆವ್ವ ನೊರೆಬರಿಸಿ, ನಡುಮುರಿದುಕೊಂಡು ಬಿದ್ದಿತು ಎಂದು ಗಿಂಡಿಯ ನೀರನ್ನು ಅವಳ ಮೈಮೇಲೆ ರಪರಪನೆ ಎರಚಿದ. ಮನೆಯವರೆಲ್ಲ ದೆವ್ವ ಅರುಗಾಯಿತೆಂದು ಸಮಾಧಾನಬಿದ್ದರು.

ಆಮೇಲೆ ಇನ್ನೊಬ್ಬ ಆಸಾಮಿ ಹೆಂಡತಿಯೊಂದಿಗೆ ಪೂಜಾರಿಯ ಮುಂದೆ ಹಾಜರಾಗಿ ತನ್ನ ಕಷ್ಟ ತೋಡಿಕೊಂಡ. ತನಗೆ ನಾಲ್ಕು ಜನ ಹೆಣ್ಣು ಮಕ್ಕಳೆಂದೂ, ಒಂದಾದರೂ ಗಂಡು ಕರುಣಿಸಬೇಕೆಂದು ಅಂಜಲಿಬದ್ಧನಾಗಿ ನಿಂತ. ಅವರ ಹಣೆಗೆ ಅರಿಷಿಣ, ಕುಂಕುಮ, ವಿಭೂತಿ ಬಳಿದು ಹೆಂಗಸಿನ ಕೈಗೆ ಬಾಳೆಹಣ್ಣು ನೀಡಿದ. ಇದೇ ಮುಂದೆ ನಿನಗೆ ಹುಟ್ಟುವ ಬಾಲನ ಫಲ ಎಂದ. ಹೆಂಗಸು ಅದೇ ಗಂಡು ಕೂಸು ಎಂಬಂತೆ ಮಡಿಲಿಗೆ ಇಟ್ಟು, ಪೂಜಾರಿಯ ಕಾಲಿಗೆ ಬಿದ್ದಳು. ಇದರ ನಡುವೆ ಪೂಜಾರಿ ದೈವಬಲ ಏರಿದವನಂತೆ ಎದ್ದೆದ್ದು ಕುಣಿಯುತ್ತಿದ್ದ. ಏದುಸಿರು ಹೆಚ್ಚಾಗುವಲ್ಲಿ ನಿಂತು ಸುಧಾರಿಸಿಕೊಳ್ಳುತ್ತಿದ್ದ. ಆ ರಾತ್ರಿಯಲ್ಲೂ ಅವನ ಮೈಯೆಲ್ಲ ಬೆವರು ಸಾಲುಗಟ್ಟಿ ಹರಿಯುತ್ತಿತ್ತು.

ಕೊನೆಯದಾಗಿ ಪ್ಯಾಂಟು, ಷರಟು ತೊಟ್ಟ ಹುಡುಗರ ಸರದಿ. ತಮ್ಮ ನಾಯಕನಿಗೆ ಇದೀಗ ನಡೆಯುತ್ತಿರುವ ಎಲೆಕ್ಷನ್ನಿನಲ್ಲಿ ಜಯ ಗಳಿಸಿಕೊಡಬೇಕೆಂದು ಅಡ್ಡಬಿದ್ದವರು, ದೇವಿಗೆ ಸಮರ್ಪಿಸಬೇಕೆಂದು ಬಾಸ್ ಇದನ್ನೆಲ್ಲ ಕಳಿಸಿದ್ದಾರೆಂದು ಹಣ್ಣುಕಾಯಿ, ವೀಳೆಯದೆಲೆ, ದುಡ್ಡಿನ ಲಕೋಟೆ ಎಲ್ಲ ಕೊಟ್ಟರು. ಮಿಕ್ಕ ಭಕ್ತರು ತಂದ ಕೋಳಿ ಪಿಳ್ಳೆಗಳಿಗಿಂತಲೂ ಈ ಯುವಭಕ್ತರು ತಂದ ಕಾಣಿಕೆಯಿಂದ ಪೂಜಾರಿ ಸುಪ್ರೀತನಾದ. ಅವರಿಗಾಗಿ ದೇವತೆಯನ್ನು ಪ್ರತ್ಯೇಕವಾಗಿಯೇ ಆಹ್ವಾನ ಮಾಡಿಕೊಂಡಂತೆ ಕುಣಿದ.

ಬೆತ್ತದಿಂದ ತಾನೇ ಹೊಡೆದುಕೊಂಡು ಮರ ಸುತ್ತಿದ. ಕಣ್ಣು ಮುಚ್ಚಿ, ಕಣ್ಣು ಅರಳಿಸಿದ. ಸೂರ್ಯ ಹುಟ್ಟಿ ಮೇಲೇರಿಬರುವನು. ಹೂವು ಅರಳುತ್ತವೆ. ದೇವತೆ ನುಡಿಸುತ್ತಿದ್ದಾಳೆ.

ನಿಮ್ಮ ಯಜಮಾನ ಲೋಕ ಬೆಳಗುತ್ತಾನೆ. ಇದು ಸುಳ್ಳಾದರೆ ನಾನು ಸುಳ್ಳು, ನನ್ನ ದೇವತೆ ಸುಳ್ಳು, ಸೂರ್ಯಚಂದ್ರರು ಸುಳ್ಳು, ಉಹ್ಹೂ ಉಹ್ಹೂ ಖಂಡಿತಾ ಸುಳ್ಳಾಗದು. ಸಮುದ್ರದ ಅಲೆಯಂತೆ ಧೀರ ಎದ್ದು ಬರುವನೆಂದು ದೇವಿ ಹೇಳುತ್ತಿರುವಳು. ನಿಮ್ಮ ಬಾಸ್ ಮುಂದಿನ ತಿಂಗಳೇ ಇಲ್ಲಿಗೆ ರಾಜನಂತೆ ಬರುವನು. ದೇವಿಗೆ ಹರಕೆ ತೀರಿಸುವನು, ತಾಯಿ ಧೈರ್ಯ ಕೊಡುತ್ತಿದ್ದಾಳೆ, ಭಯವಿಲ್ಲ, ನಿಶ್ಚಿಂತೆ, ನಿಶ್ಚಿಂತೆ ಎಂದ. ಅವರು ಕೊಟ್ಟ ಕಾಯಿ, ಬಾಳೆಹಣ್ಣಿಗೇ ಅರಿಷಿಣ, ಕುಂಕುಮ ಹಚ್ಚಿ ವಾಪಸು ಕೊಟ್ಟ.

ಇದೀಗ ಹೇಳಿಕೆಯೆಲ್ಲ ಮುಗಿದು ದೇವತೆ ಅವನ ಮೈಯಿಂದ ವಿಸರ್ಜನೆಯಾಗಬೇಕೆಂಬ ಹೊತ್ತು ಬಂದಿತೆಂದು ಎಲ್ಲ ಅಂದುಕೊಳ್ಳುವಲ್ಲಿ, ಪೂಜಾರಿ ಕಟ್ಟೆಯ ಕೆಳಗಿನ ತಗಡಿನ ದೇವತೆಯನ್ನು ಎತ್ತಿ ತಲೆಯ ಮೇಲೇರಿಸಿಕೊಂಡು ಬಲಗೈಯ ಬೆತ್ತ ಆಡಿಸುತ್ತ ತೊರೆಯ ದಂಡೆಯಲ್ಲಿ ಓಡಿದ. ಓಡುತ್ತ ಎಲ್ಲರಿಗೂ ಕೇಳುವಂತೆ 'ಯಲಾ ಯಲಾ ನಾಯಿಯೇ ನೀನು ಕಣ್ಣರಳಿಸಿ, ಬಾಯಗಲಿಸಿ ಹಸಿದು ನನ್ನ ಭಕ್ತರ ಮೇಲೆ ಬೀಳಬಂದಲ್ಲಿ ನಾನು ಬಿಡುವೆನೆ. ಹೆಂಗಸಿನ ಮೈಮೇಲೆ ಬಂದ ದೆವ್ವ ಓಡಿಯಾಡಿಸಿದಂತೆ, ನಿನ್ನ ದಿಕ್ಕುಗೆಡಿಸುವೆ' ಎನ್ನುತ್ತ ಹಾರಿದ. ಕಾಡಿನ ಪೊದೆಯೊಳಗೆ ಮರೆಯಾಗಿಬಿಟ್ಟ. ಎಷ್ಟು ಹೊತ್ತಾದರೂ ವಾಪಸಾಗಲಿಲ್ಲ. ಹೊತ್ತು ಆಗಲೇ ಅರ್ಧರಾತ್ರಿಯ ಹನ್ನೆರಡು ದಾಟುತ್ತಿತ್ತು.

ಬಂದಿದ್ದವರೆಲ್ಲ ಬಲಿಕೊಟ್ಟಿದ್ದ ಕೋಳಿಗಳೆಲ್ಲ ರುಂಡಮುಂಡ ಬೇರೆಯಾಗಿ ಕಟ್ಟೆಯ ಸುತ್ತ ಬಿದ್ದಿದ್ದವು. ಎಷ್ಟೋ ಹೊತ್ತಿನ ಮೇಲೆ ಆವೇಶ ತಗ್ಗಿದವನಂತೆ ಪೂಜಾರಿ ವಾಪಸಾದ. ಎಲ್ಲರೂ ನಿರಾಳವಾದರು. ಎಲ್ಲರಿಗಿಂತ ಹೆಚ್ಚಾಗಿ ಅವನೇ ನಿರಾಳವಾಗಿದ್ದಂತೆ ಕಂಡಿತು. ನಿಮಗೆಲ್ಲ ಎಂಥ ಆಪತ್ತು ಕಾದಿತ್ತು. ಯಲ ಯಲಾ ಗಂಡು ಹುಲಿ ನಾಲಿಗೆ ಸವರಿಕೊಂಡು ಇತ್ತಲೆ ಬಂದದ್ದು ನಿಮಗಾರಿಗೂ ಕಾಣಲಿಲ್ಲ. ದೇವಿಯ ಮಹಿಮೆ, ಅದರ ಉರಿಯುವ ಕಣ್ಣು, ನಾಲಿಗೆ ನನಗೆ ಕಂಡುಬಿಟ್ಟಿತಲ್ಲ! ಬಿಡುವೆನೆ, ಮೈಲಿದೂರ ಅಟ್ಟಿಸಿಕೊಂಡು ಹೋಗಿ ಬಿಟ್ಟು ಬಂದೆ.

ನೀವು ಧೈರ್ಯದಿಂದ ನಿಮ್ಮ ದಾರಿ ಹಿಡಿಯಿರಿ ಎಂದವನು ಕೋಳಿಯ ಮುಂಡಗಳನ್ನೆಲ್ಲ ಆಯ್ದು ಚೀಲಕ್ಕೆ ತುಂಬಿಕೊಂಡ. ಪೂಜೆಗೆ ಬಂದ ಸಾಮಾನು ಸರಂಜಾಮನ್ನೆಲ್ಲ ಇನ್ನೊಂದು ಕೈಚೀಲಕ್ಕೆ ತುಂಬಿದ. ದುಡ್ಡನ್ನೆಲ್ಲ ಗಂಟುಕಟ್ಟಿ ಜೋಪಾನವಾಗಿ ಬುಟ್ಟಿಗೆ ಇಟ್ಟ. ಸದ್ಯ ನಿಮ್ಮ ಯಾರನ್ನೂ ಹುಲಿ ಮೆಟ್ಟಿಕೊಳ್ಳಲಿಲ್ಲವಲ್ಲ. ಅದೇ ನನಗೆ ಸಮಾಧಾನ. ಊರಕಡೆ ನಡೆಯಿರಿ, ಯಾವ ಭಯ ಬೇಡ ಎಂದ.

ಬಂದ ಭಕ್ತರೆಲ್ಲ ಬಂದ ಹಾದಿ ಹಿಡಿದಿದ್ದರು. ಗುಂಪಿನಲ್ಲೆಲ್ಲ ಹುಲಿಯದೇ ಮಾತು. ಯಲಾ ಅದು ನರ ಭಕ್ಷಕ ಹುಲಿ ಇರಬಹುದು. ನಮ್ಮ ವಾಸನೆ ಹಿಡಿದೇ ಬಂದಿದೆ. ಸದ್ಯ ಅದು ಪೂಜಾರಿಯ ಕಣ್ಣಿಗೆ ಬಿದ್ದಿತ್ತಲ್ಲ! ತಾಯಿಯೇ ಅವನ ಕೈಗೆ ಕತ್ತಿಕೊಟ್ಟು ಓಡಿಸುವಂತೆ ಮಾಡಿದಳು ಎಂದು ಪೂಜಾರಿಯ ಮೇಲೆ ಇನ್ನಷ್ಟು ಭಯ–ಭಕ್ತಿ ತಂದುಕೊಂಡರು. ಹುಲಿ ಅವರ ಮನಸ್ಸಿನಿಂದ ದೂರವಾಗುವಂತಿರಲಿಲ್ಲ.

ನಾನು ಪೂಜಾರಿ ಇಬ್ಬರೇ ವಾಪಸಾದೆವು. ಅವನು ಆ ದಟ್ಟ ಕತ್ತಲೆಯಲ್ಲೇ ಆ ಕಾಲುಹಾದಿಯಲ್ಲಿ ಅನುಭವದ ಮೇಲೆ ನಡೆಯಬಲ್ಲಂತಿದ್ದ. ನನ್ನದು ಪೂಜೆಯ ವೇಳೆ ಏನೂ ಕೇಳಿಕೆ ಇಲ್ಲದ್ದರಿಂದ ಅವನನ್ನು ಮಾತನಾಡಿಸುವ ಅವಕಾಶವೇ ಬಂದಿರಲಿಲ್ಲ. ಅವನೊಂದಿಗೆ ಪರಿಚಯದ ಮಾತುಗಳನ್ನಾಡುತ್ತಾ ಬರುವಲ್ಲಿ, ದೇವಿಯ ಮಹಿಮೆಯನ್ನೆಲ್ಲ ಪವಾಡ ಕಥೆಗಳಂತೆ ಬಣ್ಣಿಸಿದ. ಆ ಕಾರಣಕ್ಕೆ ಈ ಸುತ್ತಿನ ಜನರೆಲ್ಲ ಪಕ್ಷಕ್ಕೆ, ಮಾಸಕ್ಕೆ ಬರುವರೆಂದ. ಆಶ್ಚರ್ಯವೆಂದರೆ ಪೂಜಾರಿ ನಾನು ತಂಗಿದ್ದ ಹೋಟೆಲಿಗೇ ನುಗ್ಗಿದ.

ಓನರ್ ಎದ್ದು ಬರಲು, ಬ್ಯಾಗಿನ ಕೋಳಿಗಳನ್ನೆಲ್ಲ ಲೆಕ್ಕ ಮಾಡಿಕೊಟ್ಟ. ದುಡ್ಡು ಈಸಿಕೊಂಡ. ದುಡ್ಡು ಕೊಡುವಾಗ ಹೋಟೇನವನು ಹೋದಸರ್ತಿ ಕೋಳಿಗಳು ಬಲಿತುಬಿಟ್ಟಿದ್ದವು. ಗಿರಾಕಿ ಕಂಪ್ಲೆಂಟು ಮಾಡಿದರು ಎಂದ. ಸರಿಯಾಗಿ ನೋಡು ಈಸರ್ತಿ ಎಲ್ಲಾ ಎಳೆಯ ಕೋಳಿಗಳನ್ನೇ ತರಲು ಹೇಳಿದ್ದೇನೆಂದ. ಒಂದು ಕರಿಯ ಕೋಳಿಯ ಮುಂಡವನ್ನು ವಾಪಸು ತೆಗೆದುಕೊಂಡು, 'ಕೊಡು ಇಲ್ಲಿ ಇದು ನನ್ನ ಹೆಂಡತಿಗೆ ಇಷ್ಟ' ಎಂದು ಬ್ಯಾಗಿಗೆ ಹಾಕಿಕೊಂಡ.

ಇನ್ನೇನು ಪೂಜಾರಿ ತನ್ನ ಮನೆ ಕಡೆಯ ದಾರಿ ಹಿಡಿಯುತ್ತಾನೆನ್ನುವಲ್ಲಿ ನಾನೂ ಅವನೊಡನೆ ಅಷ್ಟುದೂರ ಜಲಬಾಧೆ ಮುಗಿಸಿ ಬರುವವನಂತೆ ಹೋದೆ. ಮಕ್ಕಳಿಗೆ ಕಟ್ಟಿದ ಯಂತ್ರದಲ್ಲಿ ನೀನು ಬರೆದಿದ್ದು ಏನು ಎಂದು ಕೇಳಿದೆ. ಅಷ್ಟು ಹೊತ್ತಿಗೆ ದಾರಿಯಲ್ಲಿ ಬರುತ್ತ ನಾನು ದೇವಿಗೆ ಸಲ್ಲಬೇಕಾದ ಕಾಣಿಕೆ ನೀಡಿದ್ದರಿಂದ ನನ್ನೊಂದಿಗೆ ಅವನೇ ನಿಜ ಹೇಳುವ ಭಕ್ತನಂತಾಗಿಬಿಟ್ಟಿದ್ದ. ಜತೆಗೆ ನಾನು ತೆಲುಗು ಮಾತನಾಡಿದರೂ, ಮಾತುಕತೆಯ ಧಾಟಿಯಲ್ಲೇ ನನ್ನ ಗುರುತು ಹಿಡಿದ. ಎಲ್ಲಿಂದ ಬಂದದ್ದು ಎಂದು ಕೇಳಿದ.

ನಾನು ತೆಲುಗು ನಾಡಿನವನಲ್ಲವೆಂದು ತಿಳಿದು ಧೈರ್ಯವಹಿಸಿ ನಿಜ ಹೇಳಿದರೂ ಬಾಧಕವಿಲ್ಲವೆಂಬಂತೆ ಮಾತಿಗೆ ತೊಡಗಿದ. ಮಗುವಿನ ಯಂತ್ರದಲ್ಲಿ ಬರದದ್ದೇನು ಎಂಬ ಪ್ರಶ್ನೆಗೆ, 'ಅಯ್ಯೋ ಆ ತಗಡಿನ ಯಂತ್ರದಲ್ಲಿ ಆ ಕೂಸಿನ ಹೆಸರು, ದೇವಿಯ ಹೆಸರು ಬರೆದು ಅರಿಷಿಣ ಮೆತ್ತಿದ್ದೆ ಅಷ್ಟೇ' ಎಂದ.

ಸರಿ, ವಧುವರರ ಜೋಡಿಯ ಕಥೆ ಏನು ಎಂದೆ. ಅದಕ್ಕೆ ಹೆಂಗೂ ಅವರು ವಧು ವರರನ್ನು ಹುಡುಕುತ್ತಿರುವವರು ತಾನೆ? ಒಂದಲ್ಲ ಒಂದುದಿನ ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ಸಿಕ್ಕಲೇಬೇಕಲ್ಲ.

ಹಾಗೆ ಸಿಕ್ಕು ತಿರುಗಿ ಬಂದೇ ಬರುತ್ತಾರೆ. ಅದಕ್ಕೆ ನಾನು ಮುಂದಿನ ಸರ್ತಿ ಬನ್ನಿ ಆಗ ಅಮ್ಮಾ ಎಲ್ಲಾ ಸರಿ ಮಾಡಿಸುತ್ತಾಳೆ ಎಂದು ಕವಡೆ ಬಿಟ್ಟು ಹೇಳಿರುತ್ತೇನಲ್ಲಾ ಎಂದ. ಅವನ ಸಮಜಾಯಿಷಿಗಾಗಿ ತಲೆದೂಗಿ, ಮಕ್ಕಳು ಪಡೆಯುವ ವಿಚಾರ ಎಂದೆ. ಅಯ್ಯೋ ಅವನಿಗೆ ಮಕ್ಕಳಾಗುವುದು ನನ್ನ ಕೈಯಲ್ಲೆಲ್ಲಿದೆ, ಅದು ಆ ಗಂಡಹೆಂಡತಿಯರಿಗೇ ಬಿಟ್ಟ ಸಮಾಚಾರ ಎಂದು ನಕ್ಕ. ಒಂದಿಷ್ಟು ತಡೆದು ಪಾಪ ಆ ಹೆಣ್ಣು ಮಗಳನ್ನು ನೀನು ಹಿಂಸೆಕೊಟ್ಟು ಕಲ್ಲು ಹೊರಿಸಿದೆ, ಅದಾಗಬಾರದಿತ್ತು ನೋಡು ಎಂದೆ.

ಮನೆಯವರು ಅದನ್ನೆಲ್ಲ ಮಾಡಿಕೊಂಡೇ ಬಂದು ನನ್ನ ಕೈಯಲ್ಲೂ ಅದೇ ಪಾಪ ಮಾಡಿಸುತ್ತಾರೆ ನೋಡು ಎಂದ. ಹಿಂದಿನಿಂದ ಬಂದದ್ದನ್ನು ಮಾಡದೇ ಹೋದರೆ ಜನ ಬಿಡುತ್ತಾರೆಯೆ? ಹೊಡೆದಾಟದ ಸಾವನ್ನೇ ನಾವು ಎಷ್ಟೋ ವರ್ಷಗಳಿಂದ ಗೆಲುವು, ಜಯ ಅಂದುಕೊಂಡು ಬಂದಿಲ್ಲವೆ, ಅಂದ. ಹೊಡೆತ ತಿಂದದ್ದೇ ಒಳ್ಳೆಯದಕ್ಕೆ ಅಂತ ಅಂದುಕೊಳ್ಳುತ್ತಾರಲ್ಲ. ಮನೆಯ ಮಕ್ಕಳನ್ನು ಅವರಪ್ಪ ಅವ್ವ ನೋಡಿಕೊಳ್ಳದೇ ಹೋದ ಮೇಲೆ ದೇವತೆ ನೋಡಿಕೊಳ್ಳುವುದುಂಟೇ ಎಂದು ನನ್ನನ್ನೇ ಕೇಳಿದ.

ಇನ್ನು ನೀನು ಹೇಳಿದಂತೆ ಆ ಎಲೆಕ್ಷನ್, ಕಾರ್ಯಕರ್ತರು ಬಂದಿದ್ದರಲ್ಲಾ, ಅವರ ಬಾಸ್ ಗೆಲ್ಲುವುದುಂಟಾ ಎಂದು ಕೇಳಿದೆ. ಅದೆಲ್ಲ ಜನರ ಕೈಯಲ್ಲಿರುವುದಲ್ಲಾ ಎಂದ. ಮತ್ತೆ ನೀನು ಸಮುದ್ರದ ಅಲೆಯಂತೆ ಗೆದ್ದು ಎದ್ದುಬರುವನು ಎಂದೆಯಲ್ಲಾ ಎಂದೆ. ಹೇಳಿದ್ದು ನಿಜ! ಅವನು ಗೆದ್ದರೆ ಸರಿ. ಸೋತರೆ ನೀನು ದೇವಿಯ ದರ್ಶನಕ್ಕೆ ಖುದ್ದಾಗಿ ಬಂದು ಆಶೀರ್ವಾದ ಪಡೆದೆಯಾ? ನೀನು ಕಳಿಸಿದ್ದು ಯಾರನ್ನು? ಎರಡನೆಯವರನ್ನು, ದೇವಿಗೆ ನಿನ್ನ ಮೇಲೆ ಸಿಟ್ಟಾಗಿದೆ, ಲೋಪವಾಗಿದೆ ಎನ್ನುತ್ತೇನೆ ಎಂದ.

ಅದು ಸರಿ. ಪೂಜೆ ಮುಗಿದ ಸಮಯದಲ್ಲಿ ಹುಲಿ ಬಂದದ್ದು ನಿಜವೇ, ಆ ಸಮರಾತ್ರಿ ಹೊತ್ತಿನಲ್ಲಿ ಜನರ ಗುಂಪಿನ ಕಡೆ ಹುಲಿ ಬರುವುದುಂಟಾ? ಅದೂ ಅಲ್ಲದೆ ಈ ಗುಂಪಿನವರ ತಮಟೆಸದ್ದು ಸಾಮಾನ್ಯವಿತ್ತಾ, ಮನುಷ್ಯನಿಗಿರುವಷ್ಟೇ ಭಯ ಹುಲಿಗೂ ಇರುತ್ತದಲ್ಲಾ ಎಂದೆ. ಅವನು ಅಯ್ಯೋ ಇವತ್ತು ಮಧ್ಯಾಹ್ನ ಅಲ್ಲೊಬ್ಬ ಭಕ್ತರ ಮನೆಯಲ್ಲಿ ಹನ್ನೊಂದನೇ ದಿನದ ಪ್ರೇತದ ಊಟಕ್ಕೆ ಹೋಗಿದ್ದೆ. ಹೊಟ್ಟೆ ಗಡಸಾಗಿ, ಮಲಬಾಧೆಯಾಗಿಬಿಟ್ಟಿತು. ಕತ್ತಲೆ ನೋಡಿ, ಭಯ, ಏನು ಮಾಡುವುದು ತಲೆಯ ಮೇಲೆ ದೇವತೆ ಕೂರಿಸಿಕೊಂಡು ಬೆತ್ತ ಬಡಿದುಕೊಂಡು ಓಡಿಬಿಟ್ಟೆ. ದಾರಿಯಲ್ಲೇನಾದರೂ ಹುಳಹುಪ್ಪಟೆ ಅಂತ ಹೆದರಿ ಉದ್ದಕ್ಕೂ ಬೆತ್ತ ಬಡಿದು ಓಡಿದೆ ಅಷ್ಟೆ. ಭಯ ಯಾರನ್ನ ತಾನೇ ಕಾಡದೇ ಬಿಟ್ಟಿದೆ ಅಂದ.

ಮಲಬಾಧೆ ಮಾಡುವಾಗ ದೇವರು ಕೈಯಲ್ಲಿರಬಾರದಲ್ಲ ಅಂತ ಅಲ್ಲೆಲ್ಲೋ ಇಟ್ಟೆ. ಕತ್ತಲೆಯಲ್ಲಿಟ್ಟದ್ದು ಹುಡುಕಿದರೆ ಆಮೇಲೆ ಸಿಗಲೇ ಇಲ್ಲ. ಅದಕ್ಕೆ ಈಗ

ಬೆಳಗಾಗುತ್ತಿದ್ದಂತೆ ಹೋಗಿ ಮೊದಲು ದೇವತೆಯನ್ನು ಹುಡುಕಿ ತರಬೇಕು. ಆ ತಗಡು ದೇವತೆಯೇ ನನ್ನ ಬಂಡವಾಳ ಎಂದ. ಅರೇ ಈ ಪೂಜಾರಿ ನಾನು ಕೊಟ್ಟ ದುಡ್ಡಿಗೆ ಎಲ್ಲ ನಿಜ ಹೇಳಿದ, ಅವರು ಕೊಟ್ಟ ಕಾಣಿಕೆಗೆಲ್ಲ ಬರಿಯ ಸುಳ್ಳನ್ನೇ ಹೇಳಿದನಲ್ಲ ಎಂದುಕೊಳ್ಳುತ್ತ ಹಗ್ಗದ ಮಂಚದತ್ತ ಬಂದು ಕೂರುವಲ್ಲಿ ಮತ್ತೆ ಅದೇ ಕತ್ತಲ ಕಣಿವೆಯ ವಿದ್ಯಮಾನಗಳ ನೆನಪು. ಬೆಳಕು ಹರಿಯಲು ಇನ್ನೂ ಎಷ್ಟು ಹೊತ್ತು ಎನಿಸಿತು.

**ಕೃಷ್ಣಮೂರ್ತಿ ಹನೂರು**
ಪ್ರಜಾವಾಣಿ 12.01.2014

# ಭಾನುವಾರದ ಆಟದ ಮೈದಾನ

ಕಳೆದ ಭಾನುವಾರ ಬೆಳಗ್ಗೆ ಬೇಗ ಬೇಗ ಎದ್ದವನೇ ವಾಕಿಂಗ್ ಮುಗಿಸಿ ಮನೆಗೆ ಬಂದು ವಾರಾಂತ್ಯದ ಓದಿಗೆಂದು ವಿಶೇಷವಾಗಿ ಕೊಳ್ಳುವ ಏಳೆಂಟು ದಿನಪತ್ರಿಕೆಗಳನ್ನು ಮೊದಲಿನಿಂದ ತುದಿಯತನಕ ಓದಿ, ಇಷ್ಟು ಸಾಲದೆಂಬಂತೆ ಇನ್ನು ಕೆಲವು ಪತ್ರಿಕೆಗಳನ್ನು ಇಂಟರ್‌ನೆಟ್‌ನಲ್ಲಿ ನೋಡಿ ಸುಸ್ತಾಗಿ, ಬೇಸರವಾಗಿ ಆಕಳಿಸಿದೆ. ಸುದ್ದಿ, ವಿಶ್ಲೇಷಣೆ, ಅಂಕಣ, ಕಥೆ, ವಿಮರ್ಶೆ, ಕಾವ್ಯ, ವಾರಭವಿಷ್ಯ, ವಿಜ್ಞಾನ ವಾರ್ತೆ, ಸ್ತ್ರೀಲೋಕ ಅದರಲ್ಲೂ ಪುನರಾವರ್ತನೆ, ಒಂದು ಇನ್ನೊಂದರ ನಕಲು. ಓದುವುದಕ್ಕೆ ಮುಂಚೆ ಮತ್ತು ಓದಿದ ನಂತರ ನನ್ನ ಭಾವನೆಯಲ್ಲಾಗಲೀ ವಿಚಾರದಲ್ಲಾಗಲೀ, ಧೋರಣೆಯಲ್ಲಾಗಲೀ ಯಾವ ರೀತಿಯ ವ್ಯತ್ಯಾಸವೂ ಕಾಣಬರಲಿಲ್ಲ. ನಾನು, ನನ್ನ ಗೆಳೆಯರು ನಿರಂತರವಾಗಿ ಬರೆಯುತ್ತಲೇ ಇರುವ ಅಂಕಣ, ಕಥೆ, ಪ್ರಬಂಧ, ಚಿಂತನಾ ಬರಹಗಳ ಬಗ್ಗೆ ಓದುಗರಿಗೂ ಹೀಗೇ ಅನ್ನಿಸಿ ಅವರು ಕೂಡ ಆಕಳಿಸುತ್ತಿರಬಹುದು, ನಟಕೆ ಮುರಿಯುತ್ತಿರಬಹುದು. ಹೀಗೆಲ್ಲಾ ಆದಾಗ ನಾನು ಮನೆಯಿಂದ ಹೊರಗಡೆ ಹೊರಟು ಅಂಗಡಿ ಬೀದಿಗೋ ಬೀದಿ ಕೊನೆಗೋ, ಸೋಮಾರಿ ಕಟ್ಟೆಯ ಬಳಿಯೋ, ಸಲೂನ್ ಅಂಗಡಿಯ ಹತ್ತಿರವೋ ಹೋಗಿ ನಿಲ್ಲುತ್ತೇನೆ. ಒಳಗಿನ ತಳಮಳ ಒಂದು ನಿಲುಗಡೆಗೆ ಬರುವ ತನಕ. ಕಳೆದ ಭಾನುವಾರ ಇಂತಹ ಪ್ರಯತ್ನದಲ್ಲಿ ಕೂಡ ವಿಫಲನಾಗಿ ಮೂರು ಕ್ರಾಸ್ ಆಚೆ ಇರುವ ಸ್ಕೂಲ್ ಮೈದಾನದ ಹತ್ತಿರ ಹೋದೆ. ಹೋಗಿ ಬಂದ ಮೇಲೆ ಮತ್ತೆ ಮತ್ತೆ ಅನ್ನಿಸಿತು ಏಕೆ ಇಷ್ಟು ದಿನ ಈ ಮೈದಾನದ ಹತ್ತಿರ ಹೋಗಿರಲಿಲ್ಲ. ಏಕೆ ಮೈದಾನದ ಪವಿತ್ರ ದರ್ಶನ ಪಡೆದಿರಲಿಲ್ಲ? ಇಡೀ ವಾರ ಬೆಳಗ್ಗೆಯೆನ್ನದೆ, ಸಂಜೆಯೆನ್ನದೆ ಮತ್ತೆ ಮತ್ತೆ ಹೋಗಿದ್ದೇನೆ ಆ ಮೈದಾನಕ್ಕೆ, ಅದೇ ಮೈದಾನಕ್ಕೆ. ಭಾನುವಾರ ಮೈದಾನವು ಕೃಪೆ ಮಾಡಿ ನನಗೆ ತೋರಿಸಿದ ಜೀವನದ ದೃಶ್ಯ ನನ್ನೊಳಗೆ ಭದ್ರವಾಗಿ ಜತನ ಮಾಡಿಟ್ಟುಕೊಳ್ಳಲು.

ಈ ಶ್ರೀ ಮೈದಾನವು ಸರ್ಕಾರಿ ಶಾಲೆಯ ಮೈದಾನವೇ ಹೌದು. ಮೈದಾನಕ್ಕೆ ಹೊಂದಿಕೊಂಡಿರುವ ರಂಗಮಂದಿರಕ್ಕೆ ಹಿಂದಿನ ಪ್ರಧಾನ ಮಂತ್ರಿಯವರ ಹೆಸರಿದೆ. ಸರ್ಕಾರಿ ಮೈದಾನದ ಪಕ್ಕದಲ್ಲಿ ಒಂದು ಉತ್ತಮರ ಶಾಲೆಯಿದೆ. ಶಾಲೆಯೆನ್ನುವುದಕ್ಕಿಂತ ಜೈಲು ಎನ್ನಬಹುದು. ಏಕೆಂದರೆ ಜೈಲಿಗಿರುವಂತೆ ಈ ಶಾಲೆಗೂ ತುಂಬಾ ಎತ್ತರವಾದ ಗೋಡೆಗಳು, ಕಬ್ಬಿಣದ ಬೃಹತ್ ಗೇಟುಗಳು.

ಮೈದಾನವನ್ನು ಪ್ರವೇಶಿಸುತ್ತಿದ್ದಂತೆ ಎಡಗಡೆ ಕಸದ ರಾಶಿ ಸ್ವಾಗತಿಸುತ್ತದೆ. ಈ ಕಸದ ರಾಶಿಯಲ್ಲಿ ಸಿಮೆಂಟ್, ಇಟ್ಟಿಗೆಯ ತುಂಡುಗಳು, ಸಿಪ್ಪೆ, ತರಕಾರಿ, ರದ್ದಿ, ಮುರಿದ ಮನೆ  ಸಾಮಾನು, ಊಟದ ಎಲೆ, ನಾನಾ ರೀತಿಯ ಪ್ಲಾಸ್ಟಿಕ್ ಡಬ್ಬಗಳು, ಹರಿದ ಬಟ್ಟೆ, ಹಳೆ ಪುಸ್ತಕ, ಔಷಧಿಯ ಬಾಟಲು, ನನಗೆಂದು ಆವತ್ತು ಕಂಡ ಒಂದು

ಹರಿದ ಭೂಪಟ ಎಲ್ಲವೂ ಇದೆ. ಇದನ್ನೇನು ತಿಪ್ಪೆ ಎನ್ನಬೇಕೆ ಇಲ್ಲ ವಸ್ತುಪ್ರದರ್ಶನದ ಮಳಿಗೆ ಎಂದು ಕರೆಯಬೇಕಾ? ಎರಡನೆಯದೆ ಸರಿಯಿರಬೇಕು. ಏಕೆಂದರೆ ತಿಪ್ಪೆಯಾಗಿದ್ದರೆ ಕಾರ್ಪೊರೇಷನ್ನಿನವರು ಖಂಡಿತವಾಗಿ ಲಾರಿಯಲ್ಲಿ ಕಸವನ್ನು ತೆಗೆದುಕೊಂಡು ಹೋಗುತ್ತಿದ್ದರು. ಮೈದಾನಕ್ಕೆ ಪ್ರವೇಶಿಸುವವರಿಗೆ ಖಾಯಂ ಆಗಿ ಸ್ವಾಗತಮಳಿಗೆಯಂತೆ ಒಂದು ವಸ್ತು ಪ್ರದರ್ಶನವಿರಬೇಕೆಂಬ ನಿಲುವಿನಿಂದಲೇ ಈ ಪ್ರವೇಶದ್ವಾರವನ್ನು ಹೀಗೇ ಉಳಿಸಿಕೊಳ್ಳಲಾಗಿದೆ ಎಂದು ಕಾಣುತ್ತದೆ. ಇದೇನು ನನ್ನ ಕುಚೋದ್ಯವಲ್ಲ. ಈ ವೈವಿಧ್ಯಮಯ ತಿಪ್ಪೆಯ ರಾಶಿಯ ಪಕ್ಕದಲ್ಲೇ ಗುಲ್‌ಮೊಹರ್ ಮರಗಳಿವೆ. ಈ ಮರಗಳಿಂದ ಹೊರಟ ಕೆಂಪು ಕೆಂಪು ಹೂಗೊಂಚಲು ನಮ್ಮನ್ನು ಮಾತ್ರ ಸ್ವಾಗತಿಸದೆ ವಸ್ತು ಪ್ರದರ್ಶನದ ಮಳಿಗೆಯಲ್ಲಿರುವ ಭಗವಂತನು ಸೃಷ್ಟಿಸಿದ ಎಲ್ಲ ರೀತಿಯ ವಸ್ತು ಮತ್ತು ಕಚಡಾ ಪದಾರ್ಥಗಳ ಮೇಲೆ ಮುಗುಳ್ನಗುತ್ತಾ ಸಂತೋಷದಿಂದ ತೊನೆದಾಡುತ್ತಾ, ಆಶೀರ್ವದಿಸುತ್ತಿವೆ. ಏಕೆ ಈ ರೀತಿಯ ವೈಚಿತ್ರ್ಯ, ವೈದೃಶ್ಯ ಎಂದು ಯೋಚಿಸುತ್ತೇನೆ. ವರಕವಿ ಬೇಂದ್ರೆಯವರ ಲೀಲೆಯಲಿ ಯಾವುದೂ ವಿಫಲವಲ್ಲ ಎಂಬ ಸಾಲುಗಳು ನೆನಪಿಗೆ ಬರುತ್ತವೆ. ನಿಜವಿರಬೇಕು, ಏಕೆಂದರೆ ಗುಲ್‌ಮೊಹರ್ ಮರಗಳ ಕೆಳಗಡೆಯೇ ಜಲ್ಲಿಕಲ್ಲಿನ ಮತ್ತು ಮರಳಿನ ರಾಶಿಯಡಿ, ಕೊಚ್ಚೆ ನೀರು ಕೂಡ ಪವಿತ್ರ ಕಲ್ಯಾಣಿಯಂತೆ ಗಂಭೀರವಾಗಿ ತನ್ನ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ದೂರವಾಣಿ, ವಿದ್ಯುಚ್ಛಕ್ತಿ ಇಲಾಖೆ ತಂತಿಗಳು ಇವುಗಳ ಮೇಲೆಲ್ಲಾ ತೇಲಾಡುತ್ತಾ, ಓಲಾಡುತ್ತಾ ಹಾಗೆ ತೇಲಾಡುವುದು, ಓಲಾಡುವುದು, ನರ್ತಿಸುವುದು ಮಾತ್ರವೇ ತಮ್ಮ ಕೆಲಸವೇನೋ ಎಂಬಂತೆ ಕರ್ತವ್ಯನಿರತವಾಗಿವೆ. ಇದೆಲ್ಲವೂ ಇಲ್ಲಿ ಹೀಗಿರಬೇಕು, ಈ ಚೌಕಟ್ಟಿನಲ್ಲಿ ಕಾಣಿಸಿಕೊಳ್ಳಬೇಕು ಎನ್ನುವ ಕಾರಣಕ್ಕೇ ಇದೆಲ್ಲ ಇಲ್ಲಿದೆಯೆ ಹೊರತು ಕಾರ್ಪೊರೇಷನ್‌ನವರ ಅದಕ್ಷತೆ ಮತ್ತು ಸೋಮಾರಿತನದಿಂದಲ್ಲ. ಪ್ರತಿಯೊಂದು ಜೀವರಾಶಿಗೂ ಈ ವಿಶ್ವದಲ್ಲಿ ಒಂದು ಉದ್ದೇಶವಿರುವಂತೆ ಪ್ರತಿಯೊಂದು ದೃಶ್ಯಕ್ಕೂ ಕೂಡ ಒಂದು ಉದ್ದೇಶವಿರುತ್ತದೆ. ಹಾಗಿಲ್ಲದಿದ್ದರೆ ಈ ದೃಶ್ಯವೇಕೆ ನಮ್ಮ ಕಣ್ಣಿಗೆ ಬೀಳುತ್ತದೆ? ಇರುವುದು ಮತ್ತು ಕಾಣುವುದು ಬೇರೆ ಬೇರೆ ಎಂಬುದು ಒಂದು ಹುಸಿ ವಿಚಾರ. ಇರುವುದು ಕಾಣಿಸಿಕೊಳ್ಳುವುದು ಕಂಡಾಗಲೇ ಇರುವುದು ಮತ್ತು ಅಸ್ತಿತ್ವಕ್ಕೆ ಬರುವುದು, ಹಾಗಾಗಿ ಇಲ್ಲಿ ಇರುವುದು ಮತ್ತು ಕಾಣುವುದು ಬೇರೆ ಬೇರೆಯಲ್ಲ. ನಿರಂತರವಾಗಿ ಸೃಷ್ಟಿಯಲ್ಲಿ ನಡೆಯುತ್ತಲೇ ಇರುವ ಒಂದು ಕ್ರಿಯೆ, ಇಲ್ಲ ಲೀಲೆ.

ಇಲ್ಲಿಂದ ಮುಂದಕ್ಕೆ ಹೋದರೆ ದಿಕ್ಕು ದಿಕ್ಕಿಗೂ ಗೌರವವಿರಬೇಕೆನ್ನುವ ಆಶಯಕ್ಕನುಗುಣವಾಗಿ ಇನ್ನೊಂದು ಕಸದ ರಾಶಿ. ರಾಶಿಯಲ್ಲಿರುವ ಕಸದ ವಿವರ ವೈವಿಧ್ಯಗಳು ಪ್ರವೇಶದ್ವಾರದಲ್ಲಿರುವ ರಾಶಿಯ ಸ್ವರೂಪದ್ದೇ ಆದರೂ ಭಿನ್ನವಾಗಿ ಕಾಣುತ್ತಿವೆ. ಕಾರಣವೇನೆಂದು ನೋಡಿದರೆ ರಾಶಿಯ ಮಧ್ಯೆಯೇ ಧ್ವಜಸ್ತಂಭ. ಅಂದರೆ ರಾಷ್ಟ್ರಧ್ವಜ ಕೂಡ ಕಾಲ ಕಾಲಕ್ಕೆ ಗರಿಗೆದರಿದಾಗ ಈ ಕಸದ ರಾಶಿಗೆ ಗೌರವ

ಸಲ್ಲಿಸುತ್ತದೇನೋ. ರಾಶಿಯ ಪಕ್ಕದಲ್ಲೇ ನಾಲ್ಕು ತೆಂಗಿನ ಮರ, ಎಂದೂ ತೆರೆಯದ ಸಾರ್ವಜನಿಕ ಶೌಚಾಲಯ, ನಿಂಬೆಗಿಡ, ಕ್ರಿಸ್‌ಮಸ್ ಮರ, ಹೂವಿನ ಕುಂಡ ಹಾಗೇ ಮುಂದಕ್ಕೆ ಬಂದರೆ ಸೈಕಲ್ ಸ್ಟ್ಯಾಂಡ್, ಸ್ಕೂಟರ್ ಸ್ಟ್ಯಾಂಡ್, ನಂತರ ಜಗುಲಿ, ಜಗುಲಿಯೇ ಸ್ಟೇಡಿಯಂ ಕೂಡ. ಎದುರಿಗೇ ಪ್ರವೇಶದ್ವಾರದ ಹತ್ತಿರ ಕಂಡ ರಂಗ ಮಂದಿರ. ಬಲಭಾಗದಲ್ಲಿ ನಾಟ್ಯರಾಣಿ ಶಾಂತಲಾ, ಎಡಗಡೆ ನಟರಾಜನ ದೊಡ್ಡಚಿತ್ರ.

ಮೈದಾನದ ಮಧ್ಯಭಾಗವೇ ಮೈದಾನದ ಕೇಂದ್ರ. ಈ ಮೈದಾನ ಯಾವ ಆಟಕ್ಕಿರಬಹುದು ಎಂದು ಯೋಚಿಸುತ್ತಾ ಮೈದಾನದ ತುಂಬಾ ತುಂಬಿಕೊಂಡಿದ್ದ ಆಟಗಾರರ ಭಂಗಿ, ಕೂಗಾಟ, ಚೀತ್ಕಾರಗಳನ್ನು ಗುರುತಿಸಿದೆ. ಎಂಟು–ಹತ್ತು ಕ್ರಿಕೆಟ್ ತಂಡಗಳು ಒಟ್ಟಿಗೇ ಆಡುತ್ತಿದ್ದವು. ಬೇರೆ ಬೇರೆ ವಯೋಮಾನದವರದ್ದು ಮಾತ್ರವಲ್ಲ, ಆಟಕ್ಕೆ ಉಪಯೋಗಿಸುತ್ತಿದ್ದ ಬ್ಯಾಟು, ಬಾಲು, ವಿಕೆಟ್‌ಗಳು ಕೂಡ ಬೇರೆ ಬೇರೆ ಸ್ವರೂಪದವು. ಸುಸಜ್ಜಿತ ಬ್ಯಾಟು, ಬ್ಯಾಟ್ ರೀತಿ ಕಾಣುವ ಹಲಗೆಯ ತುಂಡು, ಸೌದೆ ತುಂಡು, ಹಾಗೆಯೇ ಮೂರು ವಿಕೆಟ್‌ಗಳು ಕೂಡ. ಒಂದು ತಂಡ ಸ್ಕೂಟರನ್ನೇ ವಿಕೆಟ್ ಬದಲಾಗಿ ನಿಲ್ಲಿಸಿತ್ತು. ಇನ್ನೊಂದು ತಂಡ ವಕ್ರವಕ್ರವಾಗಿ ಕಡ್ಡಿಗಳನ್ನು ಊರಿತ್ತು. ಮತ್ತೊಂದು ತಂಡ ಚಪ್ಪಡಿ ಕಲ್ಲು ಮತ್ತು ದಿಂಡುಗಲ್ಲುಗಳನ್ನು ಜೋಡಿಸಿ ವಿಕೆಟ್‌ಗಳನ್ನು ನಿರ್ಮಿಸಿತ್ತು. ಚೆಂಡು ಕೂಡ ಬೇರೆ ಬೇರೆಯೇ. ರಬ್ಬರ್ ಬಾಲು, ಟೆನ್ನಿಸ್ ಬಾಲು, ಕಾರ್ಕ್ ಬಾಲು. ಆಟಗಾರರ ಬಟ್ಟೆಬರೆಯಲ್ಲಿ ಕೂಡ ಇದೇ ರೀತಿ ಶ್ರೇಣೀಕರಣ. ಪಂಚೆ, ಪೈಜಾಮ, ಚಡ್ಡಿ, ಜೀನ್ಸ್, ಪ್ಯಾಂಟ್, ಹೀಗೆ. ಯಾರು ಯಾವ ತಂಡದ ಆಟಗಾರರು ಎಂಬುದೇ ಗೊತ್ತಾಗುತ್ತಿರಲಿಲ್ಲ. ಯಾವ ತಂಡ ಮೈದಾನದ ಯಾವ ಭಾಗವನ್ನು ಆಟಕ್ಕಾಗಿ ಬಳಸುತ್ತಿದೆ ಎಂಬುದು ಕೂಡ ಗೊತ್ತಾಗುತ್ತಿಲ್ಲ. ಎಲ್ಲರೂ ಎಲ್ಲ ತಂಡಕ್ಕೆ ಸೇರಿದಂತೆ ಕಾಣುತ್ತಿದ್ದಾರೆ. ಆಟಗಾರರ ಸಂತೋಷದ ಉದ್ಗಾರ ಆಟಗಾರ ರನ್‌ಔಟ್ ಆದದ್ದಕ್ಕೋ, ಇಲ್ಲ ಸಿಕ್ಸರ್ ಹೊಡೆದದ್ದಕ್ಕೋ ಗೊತ್ತಾಗುವುದಿಲ್ಲ. ಏಕೆಂದರೆ ಎರಡೂ ವಿದ್ಯಮಾನಗಳು ಒಟ್ಟಿಗೇ ಕಾಣಿಸುತ್ತವೆ. ಚೆಂಡು ಕೂಡ ಹಾಗೆಯೇ. ಒಟ್ಟಿಗೆ ಎರಡು ಮೂರು ಚೆಂಡುಗಳು ಆಕಾಶದ ಕಡೆ ನುಗ್ಗುತ್ತವೆ. ವಿಮಾನ ನಿಲ್ದಾಣದ ಬಳಿ ಬಂದು ನಿಂತುಕೊಂಡು ಆಕಾಶದ ಕಡೆ ದೃಷ್ಟಿ ಹಾಯಿಸಿದರೆ ಮೂರು–ನಾಲ್ಕು–ಆರು ವಿಮಾನಗಳ ರೆಕ್ಕೆಗಳು ಒಟ್ಟಿಗೆ ಕಾಣುತ್ತವಲ್ಲ ಹಾಗೆ. ಹೀಗೆ ಒಂದೇ ಮೈದಾನದಲ್ಲಿ ಏಕಕಾಲ ಹತ್ತಾರು ತಂಡಗಳು ನಾನಾ ಸ್ತರದ ಕ್ರಿಕೆಟ್ ಆಡುವ ಸೋಜಿಗವನ್ನು, ಸತ್ಯವನ್ನು ಎಲ್ಲಿ ಒಟ್ಟಿಗೆ ಕಾಣಲು ಸಾಧ್ಯ ಎಂದುಕೊಂಡು ಮೈದಾನವನ್ನು ವಿವರವಾಗಿ ಗಮನಿಸುತ್ತೇನೆ. ಮೈದಾನದ ಉದ್ದಗಲಕ್ಕೂ ಎಷ್ಟೊಂದು ಉಬ್ಬು ತಗ್ಗು, ಹಳ್ಳಕೊಳ್ಳ. 'ಜನನ–ಮರಣಗಳ ಉಬ್ಬು ತಗ್ಗುಗಳ ಉರುಳುರುಳುಳಾಟವಲ್ಲಿ' ಎಂದು ಅಡಿಗರು ಬರೆದಾಗ ಈ ಮೈದಾನದ ಉಬ್ಬು ತಗ್ಗುಗಳು ಕವಿಗೆ ಹೊಳೆದಿರಬಹುದು. ಹಾಗೆ ಗಮನಿಸಿದರೆ ಇನ್ನೊಂದು ದೊಡ್ಡ ಆಶ್ಚರ್ಯ. ಒಂದು ತಂಡದ ಪಿಚ್ ಉದ್ದಕ್ಕೂ

ಚಪ್ಪಡಿ ಕಲ್ಲಿದೆ. ಇಷ್ಟೊಂದು ತಂಡ, ಇಷ್ಟೊಂದು ಆಟಗಾರರ ಮಧ್ಯೆ ನಾನೊಬ್ಬ ಸೇರಿಕೊಂಡರೆ ಹೇಗೋ ಯಾರಿಗೂ ಗೊತ್ತಾಗುವುದಿಲ್ಲ ಎಂದು ಹೊಳೆದು ಪಿಚ್ ಹತ್ತಿರ ಹೋದೆ. ಪಿಚ್ ಭೂಮಿಯೊಳಗಿಂದ ಉದ್ಭವವಾಗಿರುವಂತೆ ಕಂಡಿತು. ಈ ರೀತಿಯ ಚಪ್ಪಡಿ ಕಲ್ಲಿನ ಪಿಚ್ ಇನ್ನು ಯಾವ ದೇಶದ ಯಾವ ಮೈದಾನದಲ್ಲಿ ಇರಬಹುದು ಎಂದು ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ. ಇನ್ನೊಂದು ಸ್ತರದಲ್ಲಿ ಈ ಮೈದಾನ ಆಸ್ಟ್ರೇಲಿಯಾದ ಮೈದಾನಗಳನ್ನು ಮೀರಿಸಿತ್ತು. ಆ ಮೈದಾನದಲ್ಲಿ ಆಗಾಗ್ಗೆ ರಾಶಿರಾಶಿ ಪಾರಿವಾಳಗಳು ಕಾಣಿಸುವುದುಂಟು. ಇಲ್ಲಿ ನಮ್ಮ ಮೈದಾನದಲ್ಲಿ ಇಷ್ಟೊಂದು ಆಟದ ಸಂಭ್ರಮಗದ್ದಲ್ದ ನಡುವೆಯೇ ಒಂದು ತೊಂಡು ದನ ಮತ್ತು ದೊಡ್ಡ ಎಮ್ಮೆ ಪರಚಿಂತೆ ನಮಗೇಕೆ ಅಯ್ಯ ಎಂದು ಧ್ಯಾನಿಸುತ್ತ ಆರಾಮವಾಗಿ ಮಲಗಿವೆ. ನಾಲ್ಕಾರು ನಾಯಿಗಳೂ ಕೂಡ ರಾಜಠೀವಿಯಲ್ಲಿ ತಂಡ ತಂಡಗಳ ನಡುವೆ ರಾಯಭಾರಿಗಳಂತೆ ಠಳಾಯಿಸುತ್ತಿವೆ. ಇಷ್ಟು ಹೇಳಿದಾಕ್ಷಣ ಈ ಮೈದಾನ ಕ್ರಿಕೆಟ್‌ಗೆ ಮಾತ್ರ ಮೀಸಲಾಗಿದೆ ಎಂದು ತಿಳಿಯಬಾರದು. ಕಬಡ್ಡಿ ಕೋರ್ಟ್‌ನಲ್ಲಿ ಬ್ಯಾಂಡ್ಮಿಂಟನ್ ಜರುಗುತ್ತಿದೆ. ಎರಡು ಕ್ರಿಕೆಟ್ ತಂಡಗಳ ಮಧ್ಯೆ ಲಾಂಗ್‌ಜಂಪ್‌ಗೆ ತರಬೇತಿ ನಡೆಯುತ್ತಿದೆ. ದೇಸೀವಾದಿಗಳು ಆಡುತ್ತಿರುವ ಚಿನ್ನಿದಾಂಡಿನ ಪಂದ್ಯದಲ್ಲಿ ರಭಸದಿಂದ ಹೊಡೆದ ಚಿನ್ನಿ ಕ್ರಿಕೆಟ್ ಬಾಲ್‌ಗಳಿಗಿಂತ ಇನ್ನೂ ಮೇಲಕ್ಕೆ ಆಕಾಶದ ಕಡೆ ಚಿಮ್ಮುತ್ತಿದೆ. ಪಕ್ಕದಲ್ಲೇ ತಮ್ಮ ಲಂಗದ ನಿರಿಗೆಗಳನ್ನು ನಾಜೂಕಾಗಿ ಹಿಡಿದ ಹೆಣ್ಣು ಮಕ್ಕಳು ಕುಂಟೋಬಿಲ್ಲೆ ಆಡುತ್ತಿದ್ದಾರೆ. ಎಲ್ಲ ಆಟಗಳ ಎಲ್ಲ ಆಟಗಾರರಲ್ಲೂ ಒಂದು ರೀತಿಯ ತನ್ಮಯತೆ, ಇನ್ನೊಂದು ರೀತಿಯ ತಾದಾತ್ಮ್ಯ. ಎಲ್ಲರೂ ಜೀವನ್‌ಮಗ್ನರು ಸ್ವಮಗ್ನರಲ್ಲ. ಈ ಎಲ್ಲ ಆಟಗಾರರು ಸುತ್ತಮುತ್ತಲ ಬಡಾವಣೆಗಳಿಂದ ಬಂದವರಂತೆ ಕಾಣುತ್ತಿಲ್ಲ. ಮೈದಾನದ ಒಳಗಡೆಯಿಂದಲೇ ಹುಟ್ಟಿದವರಂತೆ ಕಾಣುತ್ತಿದ್ದಾರೆ. ಇಲ್ಲ ಇಲ್ಲ ಹಾಗೆ ತಿಳಿಯುವುದೂ ಕೂಡ ತಪ್ಪಾಗುತ್ತದೆ. ಜೀವರಸದ ಪ್ರವಾಹವೇ ತನ್ನ ನಾಡಿಮಿಡಿತ ತೀವ್ರವಾದಾಗ ಆಕಾಶದಿಂದ ಕೆಳಗಿಳಿದು ಈ ಮೈದಾನವಾಗಿ, ಈ ಆಟಗಾರರ ಸಂಭ್ರಮವಾಗಿ ಇಲ್ಲಿ ಮಿಡಿಯುತ್ತಿರಬಹುದೇ? ಕತ್ತೆತ್ತಿ ಆಕಾಶದ ಕಡೆ ನೋಡಿದರೆ ಮೋಡದ ಮರೆಯಿಂದ ದೇವರು, ಪಿತೃಗಳು, ಪಾಂಡವ, ಕೌರವರೆಲ್ಲ ಈ ಮೈದಾನದ ಜೀವನ ನಾಟಕವನ್ನು ಹೃತ್ಪೂರ್ವಕವಾಗಿ ಗಮನಿಸುತ್ತಿರುವಂತಿದೆ. ಸ್ಟೇಜ್, ಪಡಸಾಲೆ, ಕೈಸಾಲೆ ಎಲ್ಲವೂ ಒಟ್ಟಿಗೇ ಆಗಿರುವ ಪೆವಿಲಿಯನ್ ಕಡೆಗೆ ಹೊರಡುತ್ತೇನೆ. ಇಲ್ಲಿ ಎಲ್ಲರೂ ಒಟ್ಟಿಗೇ ಮಾತನಾಡುತ್ತಿದ್ದಾರೆ. ಒಟ್ಟಿಗೇ ಉದ್ಗಾರ ತೆಗೆಯುತ್ತಿದ್ದಾರೆ. ಪಕ್ಕದವರ ಪರಿವೆಯೇ ಇಲ್ಲ. ನನ್ನ ಕಡೆ ಯಾರು ಗಮನ ಕೊಡುತ್ತಾರೆ, ಏಕೆ ಕೊಡಬೇಕು. ಮೈದಾನದಿಂದ ಹೊರಬಂದ ಎಷ್ಟೋ ಹೊತ್ತಿನ ನಂತರವೂ PULSATION OF LIFE ಎಂದು ನಾವು ಯಾವ ವಿದ್ಯಮಾನವನ್ನು ಕರೆಯುತ್ತೇವೆಯೋ ಅದು ಸೂಚಿಸುವ ಚಡಪಡಿಕೆ, ತಳಮಳ, ಉತ್ಕರ್ಷಭಾವ ನನ್ನ

ದೇಹ ಮನಸ್ಸು ಮಿದುಳೆಲ್ಲ ವ್ಯಾಪಿಸಿರುವಂತೆ ಭಾಸವಾಗುತ್ತದೆ. ಕೈಬೀಸು, ನಡಿಗೆಯಲ್ಲಿ ಚುರುಕು, ಸಿಳ್ಳು ಹಾಡಿನಲ್ಲಿ ಇದೆಲ್ಲ ವ್ಯಕ್ತವಾಗುತ್ತದೆ. ಈ ಭಾವ ಧರ್ಮಪೂರ್ಣವಾಗಲೆಂಬಂತೆ, ಎಷ್ಟೋ ದಿನ ಇದೇ ಬೀದಿಗಳಲ್ಲಿ ಓಡಾಡಿದ್ದರೂ ಇದುವರೆಗೆ ಕಾಣದೆ ಹೋಗಿದ್ದ ಮನೆ ಮುಂದಿನ ರಂಗೋಲಿ ಚಿತ್ತಾರಗಳು ಈಗ ಕಾಣುವುದು ಮಾತ್ರವಲ್ಲ, ಹೊಳೆಯುತ್ತ ನರ್ತಿಸುತ್ತವೆ ಕೂಡ. ಅದೇ ಬೀದಿಯ ಅದೇ ಹೆಣ್ಣುಮಕ್ಕಳು ಈವತ್ತು, ಈಗ, ಇನ್ನಷ್ಟು ಸುಂದರವಾಗಿ ಕಾಣುತ್ತಾರೆ. ಎಲ್ಲವೂ, ಎಲ್ಲರೂ ಮತ್ತೆ ಯಾವುದೋ ಇನ್ನೊಂದು ಸ್ತರಕ್ಕೆ ಹೊರಳಿಕೊಳ್ಳುತ್ತಿರುವಂತೆ, ಜಿಗಿಯುತ್ತಿರುವಂತೆ ಕಾಣುತ್ತದೆ.

ನಂತರದ ದಿನಗಳಲ್ಲಿ ನನ್ನ ಶಿಷ್ಟ ಪ್ರಜ್ಞೆಗನುಗುಣವಾಗಿ ಈ ಮೈದಾನವನ್ನು ಇನ್ನು ಹೇಗೆ ಶುಚಿಗೊಳಿಸಬಹುದು ಆಧುನಿಕಗೊಳಿಸಬಹುದು ಎಂದೆಲ್ಲಾ ಯೋಚಿಸಲು ಪ್ರಾರಂಭಿಸಿದೆ. ಆದರೆ ನಗರದ ಯಾವುದೇ ಬಡಾವಣೆಗಳಿಗೆ ಹೋದರೂ ಇದೇ ರೀತಿಯ ಮೈದಾನಗಳು ಕಾಣುತ್ತಿದ್ದವು. ಕೆಲವು ಮೈದಾನಗಳಲ್ಲಿ ನಾನಾ ರೀತಿಯ ಕ್ರೀಡೆಗಳ ಜೊತೆ ಒಂದು ರೀತಿಯ ಜಾತ್ರೆ ಕೂಡ ಸೇರಿಕೊಂಡಿತ್ತು. ಇನ್ನು ಕೆಲವು ಮೈದಾನಗಳಲ್ಲಿ ದೇವರ ಉತ್ಸವ ಮೆರವಣಿಗೆ ಕೂಡ ನಡೆಯುತ್ತಿತ್ತು. ಈ ಮಧ್ಯೆ ನಗರದಿಂದ ಹೊರಗಡೆ ಕೆಲದಿನಗಳ ಮಟ್ಟಿಗೆ ಪ್ರವಾಸ ಹೊರಡಬೇಕಾಯಿತು. ಹಾಗೆ ಹೋದಾಗ ಬೇರೆ ಬೇರೆ ನಗರಗಳಲ್ಲೂ ಗ್ರಾಮಗಳಲ್ಲೂ ಇದೇ ರೀತಿಯ ಮೈದಾನಗಳು ಇನ್ನೂ ವಿಜೃಂಭಿಸಿದ ಸ್ಥಿತಿಯಲ್ಲಿ ಕಂಡವು.

ಹೀಗೆ ಎಲ್ಲ ದಿಕ್ಕುಗಳಲ್ಲೂ, ಎಲ್ಲ ಊರುಗಳಲ್ಲೂ ಭಾನುವಾರದ ಆ ಮೈದಾನವೇ ಕಾಣುತ್ತಿರಬೇಕಾದರೆ, ಎಷ್ಟೋ ಕಾಲದಿಂದ ಹೀಗೇ ಉಳಿದಿರಬೇಕಾದರೆ ಇದರಲ್ಲೂ ಒಂದು ಘನವಾದ ಉದ್ದೇಶವಿರಬೇಕೆಂದು ಮೂರ್ತವಾಗಿ, ಅಮೂರ್ತವಾಗಿ, ಅರೆಮೂರ್ತವಾಗೆಲ್ಲ ಯೋಚಿಸಿದೆ. ಬಂಧುಗಳು ಮಿತ್ರರ ಹತ್ತಿರವೆಲ್ಲ ಚರ್ಚಿಸಿದೆ. ಸಿಕ್ಕ ಸಮಾಧಾನ, ಉತ್ತರಗಳೆಲ್ಲ ಅಂತಿಮವೂ ಅಲ್ಲ ತೃಪ್ತಿಕರವೂ ಅಲ್ಲ ಎಂದು ಗೊತ್ತಿದ್ದರೂ ಕೆಲವನ್ನು ಓದುಗರೊಡನೆ ಹಂಚಿಕೊಳ್ಳಬಹುದೇನೋ.

ನಮ್ಮ ಸಮಾಜದಲ್ಲಿ, ದೇಶದಲ್ಲಿ ಪ್ರತಿಕ್ಷಣವೂ ಜರುಗುತ್ತಲೇ ಇರುವ ವಿದ್ಯಮಾನಗಳಲ್ಲಿ ವೈವಿಧ್ಯವೂ ಜಾಸ್ತಿ. ವೈರುಧ್ಯಗಳು ಜಾಸ್ತಿ – ಮೇಲುನೋಟಕ್ಕೆ. ಇದುವರೆಗೆ ನಮ್ಮ ದೇಶಕ್ಕೆ ಬಂದು ಪ್ರವಾಸ ಕಥನ ರಚಿಸಿರುವವರಿಗೆಲ್ಲ, ನಮ್ಮ ಸಮಾಜದ ಪ್ರತಿನಿತ್ಯದ, ಪ್ರತಿಕ್ಷಣದ ವಿದ್ಯಮಾನಗಳಲಿ ಒಂದು ರೀತಿಯ ಅರಾಜಕತೆ ಕಂಡಿದೆ. ಸಮಾಜಶಾಸ್ತ್ರಜ್ಞರೊಬ್ಬರು ಗ್ರಾಮವೊಂದಕ್ಕೆ ಅಧ್ಯಯನಕ್ಕೆಂದು ಹೊರಟಿದ್ದರಂತೆ. ಗ್ರಾಮವನ್ನು ಆತ ತಲುಪಲೇ ಇಲ್ಲ. ದಾರಿಯ ರಸ್ತೆಯೇ ಆತನಿಗೆ ಸಂಶೋಧನೆಗೆ ಸಾಕಾಯಿತು. ಏಕೆಂದರೆ ಆತನ ತಿಳುವಳಿಕೆಯ ಪ್ರಕಾರ ರಸ್ತೆ ಇರುವುದು ವಾಹನಗಳು ಚಲಿಸಲು, ಮನುಷ್ಯರು ಓಡಾಡಲು ಮಾತ್ರ. ಆದರೆ ನಮ್ಮ ದೇಶದಲ್ಲಿ ರಸ್ತೆಗಳು

ಜನರು ಮಲಗುವ, ಊಟಮಾಡುವ ಸ್ಥಳವಾಗಿ, ಭತ್ತದ ಕಣಜವಾಗಿ, ಹಣ್ಣುತರಕಾರಿ ಕಾಳುಗಳನ್ನು ಒಣಗಿಸುವ ಜಾಗವಾಗಿ ಶಾಲೆಯ ತರಗತಿ ಕೊಠಡಿಯಾಗಿ, ಬಟ್ಟೆ ಒಣಗಿ ಹಾಕುವ ಪ್ರದೇಶವಾಗಿ ರಸ್ತೆಯೇ ಒಂದು ವಿಶಿಷ್ಟ ಸಂಸ್ಥೆಯಾಗಿ ಆತನಿಗೆ ಕಂಡು ಅದರ ಸಂಶೋಧನೆಯಲ್ಲೇ ಮುಳುಗಿಹೋದ. ಮೈದಾನಗಳು ಕೂಡ ಹಾಗೆ. ನಮ್ಮ ನೆಲದಲ್ಲಿ ಸ್ವಭಾವದಲ್ಲಿ ಅಂತರ್ಗತವಾಗಿರುವ ಅರಾಜಕತೆ, ಅಶಿಸ್ತು ಮತ್ತು ಈ ಅರಾಜಕತೆ, ಅಶಿಸ್ತುಗಳಲ್ಲೇ ಇರುವ ಜೀವಂತಿಕೆ, ಜೀವನ ಸೌಂದರ್ಯವನ್ನು ಸೂಚಿಸುತ್ತದೆ. ಮೈದಾನದಲ್ಲಿರುವ ಅರಾಜಕತೆ, ಅಶಿಸ್ತನ್ನು ನೀವು ರಿಪೇರಿ ಮಾಡಲು ಹೊರಟರೆ ನೂರಾ ಇಪ್ಪತ್ತೈದು ಕೋಟಿ ಜನರಿಗೆ ಸುಸಜ್ಜಿತವಾದ ಮೈದಾನವನ್ನು ಎಲ್ಲಿ ನಿರ್ಮಿಸಲು ಸಾಧ್ಯ? ಒಂದು ಸ್ಟೇಡಿಯಂ ನಿರ್ಮಿಸಲು ಹೊರಟರೆ ಸಾಕು ಹತ್ತಾರು ಹಗರಣ, ತನಿಖೆ, ಆಮೇಲೆ ನೀವು ನಿರ್ಮಿಸುವ ಯಾವುದೇ ಸುಸಜ್ಜಿತ ಆಧುನಿಕ ಮೈದಾನದಲ್ಲೂ ಒಟ್ಟೊಟ್ಟಿಗೆ ಚಿನ್ನಿದಾಂಡು, ಕಬಡ್ಡಿ, ಕ್ರಿಕೆಟ್ ಎಲ್ಲವನ್ನೂ ಏಕಕಾಲದಲ್ಲಿ ಆಡಲು ಸಾಧ್ಯವಿಲ್ಲ ಹಾಗೆ ಕಷ್ಟಪಟ್ಟು ಕಾನೂನು ಮಾಡಿ ಆಡಿಸಿದರೂ ಅಂತಹ ಮೈದಾನಗಳಲ್ಲಿ ಇದೆಲ್ಲ ಸಹಜವಾಗಿ, ಜೀವಂತವಾಗಿ ಕಾಣುವುದಿಲ್ಲ. ಇದನ್ನು ತಿಳಿದೇ ನಮ್ಮ ದೇಶಕ್ಕೆ ಹಿಂದೆ ಅಮೆರಿಕದ ರಾಯಭಾರಿಯಾಗಿ ಬಂದಿದ್ದ ಗಾಲ್‌ಬ್ರೈತರು ಈ ಅರಾಜಕತೆಯನ್ನು FUNCTIONAL ANARCHY ಎಂದು ಕರೆದರು. ಆತನ ಪ್ರಕಾರ ಈ ಸ್ವಭಾವದ ಅರಾಜಕತೆಯನ್ನು ನೀವು ನಿವಾರಿಸಲು ಹೊರಟರೆ ಇಡೀ ವ್ಯವಸ್ಥೆಯೇ ಕುಸಿದು ಹೋಗುತ್ತದೆ. ಹಾಗೆಂದೇ ನಮ್ಮ ಹಿರಿಯರು ತಲೆಮಾರುಗಳುದ್ದಕ್ಕೂ ಈ ರೀತಿಯ ಅರಾಜಕತೆಯನ್ನು ಜೀವಂತವಾಗಿ ಉಳಿಸಿಕೊಂಡೇ ಬಂದಿದ್ದಾರೆ.

ಆ ಭಾನುವಾರ ಮಾತ್ರವಲ್ಲ, ಎಲ್ಲ ಭಾನುವಾರ, ಎಲ್ಲ ವಾರದ ದಿನಗಳಲ್ಲೂ ನಾನು ದಿನಪತ್ರಿಕೆಗಳನ್ನು ಓದಿದ ನಂತರ ದೇಶದಲ್ಲಿನ ವಿದ್ಯಮಾನಗಳು, ಗೊಂದಲಗಳಿಂದ ಮನಸ್ಸು ಅಸಹಾಯಕವಾದಾಗ ಮತ್ತೆ ಮತ್ತೆ ಭಾನುವಾರದ ಜೀವನ ದರ್ಶನ ನೀಡಿದ ಮೈದಾನದ ಎದುರೇ ಹೋಗಿ ನಿಲ್ಲುತ್ತೇನೆ. ಕಣ್ಣು, ಮನಸ್ಸು, ಹೃದಯ, ದರ್ಶನ, ಎಲ್ಲವೂ ತನಗೆ ತಾನೇ ತುಂಬಿಕೊಳ್ಳುತ್ತದೆ. ಇನ್ನು ನಿಮ್ಮ ಮತ್ತು ನಿಮ್ಮ ಭಾನುವಾರದ ಮೈದಾನದ ಸರದಿ.

**ಕೆ. ಸತ್ಯನಾರಾಯಣ**
ವಿಜಯವಾಣಿ, ಆಗಸ್ಟ್ ೨೦೧೪

# ಮಿಸ್ ಕಾಲ್

ಕೆಲವು ವರ್ಷಗಳ ಹಿಂದಿನ ಮಾತು. ಯಾವುದೊ ಕೆಲಸದ ಮೇಲೆ ಬೆಂಗಳೂರಿನ ಮೆಜೆಸ್ಟಿಕ್ ಕಡೆ ಬಂದಿದ್ದೆ. ನಾನು ಬಂದಿದ್ದ ವಾಹನದ ಡ್ರೈವರ್ ಹೇಳಿದ, 'ಸರ್, ಇಲ್ಲೆಲ್ಲೂ ಪಾರ್ಕಿಂಗ್ ಇಲ್ಲ. ಅರ್ಧ ಕಿ.ಮೀ. ದೂರದಲ್ಲಿ ಒಂದೆಡೆ ಕಾರನ್ನು ನಿಲ್ಲಿಸಿಕೊಳ್ಳಬಹುದು. ನಿಮ್ಮ ಕೆಲಸ ಮುಗಿದದ್ದೇ ಒಂದು ಮಿಸ್ ಕಾಲ್ ಕೊಡಿ ಸಾಕು ಬಂದು ಬಿಡುತ್ತೇನೆ.

'ಮಿಸ್ ಕಾಲ್ ಹಾಗೆಂದರೇನ್ರಿ?' ಎಂದೆ. 'ಅದೇ ಸಾರ್ ನನ್ನ ನಂಬರಿಗೆ ನೀವೊಂದು ಕಾಲ್ ಕೊಡಿ. ನಾನು ಉತ್ತರಿಸುವುದಿಲ್ಲ – ಸೀದಾ ಬರುತ್ತೇನೆ ಅಷ್ಟೆ. ಈ ಕಾಲ್‌ಗೆ ಮಿಸ್ ಕಾಲ್ ಎನ್ನುವುದು' ಡ್ರೈವರ್ ವಿವರಿಸಿದ. ಒಂದು ಹೊಸ ಪದವೂ, ಪದ್ಧತಿಯೂ ನನಗೆ  ಪರಿಚಯವಾಯಿತು. ಆಯ್ತು ನಾನೇನೋ ನಿನಗೆ ಮಿಸ್ ಕಾಲ್ ಕೊಡುತ್ತೇನೆ. ಆದರೆ ನಿನಗೆ ತಿಳಿಯಿತೆಂದು ನನಗೆ ತಿಳಿಯುವುದು ಹೇಗೆ? ಎಂದೆ. 'ನಾನೂ ಒಂದು ಮಿಸ್ ಕಾಲ್ ಕೊಡುತ್ತೀನಿ, ಸರ್' ಎಂದ. ಎರಡು ಮಿಸ್ ಕಾಲ್‌ಗಳ ಈ ಒಪ್ಪಂದ ಯಶಸ್ವಿಯಾಯಿತು. ಈಗಲೂ ಟೂರ್‌ಗಳಿಗೆ ಹೋದಾಗ ಡ್ರೈವರ್ ಜೊತೆ ಸಂಪರ್ಕ ಸಾಧಿಸಲು ಕಾಲ್‌ಗಳಲ್ಲ, ಮಿಸ್‌ಕಾಲ್‌ಗಳೇ ಯಶಸ್ವಿ ಮಾಧ್ಯಮ. ರೂಢಿಗೆ ಬಂದ ಮೇಲೆ ಇಷ್ಟು ಕನಿಷ್ಟ ಅವಧಿಯಲ್ಲಿ ಇಂಥ ಸುಪ್ರಸಿದ್ಧಿ ಇನ್ಯಾವ ಶಬ್ದಕ್ಕೂ ದೊರೆತಿರಲಾರದು. ಈ ಕಾಲವೆಲ್ಲ ಕಾಲ್‌ಗಳದು, ಮಿಸ್ ಕಾಲ್‌ಗಳದು. ದಯವಿಟ್ಟು ಗಮನಿಸಬೇಕು. ಮಿಸ್‌ಕಾಲ್‌ಗಳು ಮಿಸ್ಡ್ ಕಾಲ್‌ಗಳಲ್ಲ. ಮಿಸ್ಡ್  ಕಾಲ್‌ಗಳು ಒಂದು ಅಂಗೀಕೃತ ಏರ್ಪಾಡು ನಮ್ಮ ಮೊಬೈಲ್ ಹ್ಯಾಂಡ್‌ಸೆಟ್‌ಗಳಲ್ಲೇ ಅವುಗಳನ್ನು ಪ್ರತ್ಯೇಕವಾಗಿ ದಾಖಲಿಸುವ ವ್ಯವಸ್ಥೆ ಇದೆ. ಮೀಟಿಂಗುಗಳಲ್ಲಿ ಕುಳಿತಾಗಲೋ, ನಿದ್ದೆ ಹೋದಾಗಲೋ ನಮಗೆ ಬಂದ ಕರೆಗಳನ್ನು ಸ್ವೀಕರಿಸಿರುವುದಿಲ್ಲ. ಆ ಕಾಲ್‌ಗಳನ್ನು ನೀವು ಮಿಸ್ ಮಾಡಿಕೊಂಡಿರಿ. ಮಿಸ್‌ಕಾಲ್‌ಗಳು ಹಾಗಲ್ಲ, ಇವುಗಳ ಹಿಂದೆ ಉದ್ದೇಶ ಅಥವಾ ದುರುದ್ದೇಶ ಇದೆ. ನಮ್ಮ ಹ್ಯಾಂಡ್‌ಸೆಟ್ ಅದನ್ನು 'ಮಿಸ್ಡ್ ಕಾಲ್' ಎಂದೇ ದಾಖಲಿಸುತ್ತದೆ. ಆದರೆ ಅದು ಅನಿವಾರ್ಯವಾಗಿ ಮಿಸ್ ಆಗಲಿಲ್ಲ. ಮಿಸ್ ಮಾಡಲಾಯಿತು. ನನ್ನ ಗಮನವೆಲ್ಲ ಈ ಮಿಸ್‌ಕಾಲ್‌ಗಳ ಬಗೆಗೆ. ಈ ಶಬ್ದದಲ್ಲೊಂದು ಮೋಹಕತೆ ಇದೆ. ಅದು ನನ್ನನ್ನು ತನ್ನೆಡೆಗೆ ಸೆಳೆಯುತ್ತಿದೆ, ನನ್ನನ್ನು ಇಡಿಯಾಗಿ ನೋಡು ಎಂದು ಒತ್ತಾಯಿಸುತ್ತಿದೆ. ವಾಸ್ತವಿಕವಾಗಿ ಈ ಪದ ಸಮಸ್ತ ಭರತವರ್ಷವನ್ನೇ ತನ್ನೆಡೆಗೆ ಆಕರ್ಷಿಸಿದೆ. ಅದರ ಮಾಯೆಗೆ ಮರುಳಾಗದವರು ಯಾರು? ಮಿಸ್‌ಕಾಲ್ ಎಂದರೇನೆಂದು ಒಬ್ಬ ಅನಕ್ಷರಸ್ಥನಿಗೂ ಗೊತ್ತು, ಪುಟ್ಟ ಮಗುವಿಗೂ ಗೊತ್ತು. ಪದಗಳ ಜನಪ್ರಿಯತೆ ಕುರಿತು ಸ್ಪರ್ಧೆ ಏರ್ಪಡಿಸಿದರೆ ನಿಸ್ಸಂಶಯವಾಗಿ ಮಿಸ್‌ಕಾಲ್ ಮೊದಲ ಸ್ಥಾನ ಪಡೆಯುತ್ತದೆ. ಆದರೆ ಈ ಕುರಿತು ಒಂದು ಇಡಿಯಾದ ಲಲಿತ

ಪ್ರಬಂಧ ರಚನೆಯಾಗುತ್ತಿರುವುದು ಈಗಲೇ. ಈ ಲೇಖಕನೂ ಇಂತಹ ಜನಪ್ರಿಯ ಪದದ ಕುರಿತು ಬರೆಯುವ ಮೂಲಕ ತಾನೂ ಜನಪ್ರಿಯ ಲೇಖಕನಾಗಲು ಹವಣಿಸುತ್ತಿದ್ದಾನೆ ಎಂದು ಕೆಲವರು ತಪ್ಪು ತಿಳಿಯುವ ಸಾಧ್ಯತೆ ಇದೆ. ಹಾಗೆಂದುಕೊಂಡೇ ನಮ್ಮ ಅನೇಕ ಲೇಖಕರು ಈ ಪದವನ್ನು ದೂರ ಇಟ್ಟಿದ್ದಾರೆ. ಹನಿಗವಿಗಳು ಕೂಡ ಈ ಪದಕ್ಕೆ ನ್ಯಾಯ ಒದಗಿಸಿಲ್ಲ. ಸಾಮಾಜಿಕ ಜೀವನದಲ್ಲಿ ಇಷ್ಟೊಂದು ಆದರ ಪಡೆದಿರುವ ಈ ಪದದ ಕುರಿತು ನಮ್ಮ ಬರಹಗಾರರು ತೋರಿಸುತ್ತಿರುವ ಅಸಡ್ಡೆ ಅಕ್ಷಮ್ಯವಾದುದು. ಇದೂ ಒಂದು ಬಗೆಯ ಶೋಷಣೆಯೇ ಸರಿ. ನಾನು ಮಿಸ್ ಕಾಲ್ ಕುರಿತು ಬರೆಯುವುದರ ಹಿಂದೆ ಇಂಥ ಘನ ಉದ್ದೇಶವಿದೆ. ಇದನ್ನು ತಿಳಿಯದೆ ನನ್ನ ಗೆಳೆಯರು ನನ್ನ ಹಿಂದುಗಡೆ ಈ ಕುರಿತು ಹಾಸ್ಯ ಮಾಡುತ್ತಿದ್ದಾರೆಂದು ತಿಳಿದುಬಂದಿದೆ.

ಅನೇಕರು ಗಂಟೆಗಟ್ಟಲೆ ಮಾತನಾಡಿದಾಗಲೂ ಕಡೆಗೆ ಏನೂ ಉಳಿದಿರುವುದಿಲ್ಲ. ಮಿಸ್‌ಕಾಲ್‌ಗಳು ಹಾಗಲ್ಲ ಹೇಳದೆಯೂ ಅನೇಕ ಸಂಗತಿಗಳನ್ನು ಹೇಳುತ್ತವೆ. ಇಂಥದೊಂದು ಪದಕ್ಕೆ ನಮ್ಮ ಕನ್ನಡದ್ದೇ ಆದ ಸೂಕ್ತ ಪದವಿಲ್ಲದಿದ್ದರೆ ಹೇಗೆ? 'ಹುಸಿಕರೆ' ಎಂಬ ಅನುವಾದ ನಿಮಗೆ ಒಪ್ಪಿಗೆಯೆ? ಕರೆಯ ಉದ್ದೇಶ ಮಾತನಾಡುವುದು. ಆದರೆ 'ಹುಸಿಕರೆ'ಯಲ್ಲಿ ಮಾತಿಲ್ಲ. ನಿಮ್ಮ ಗೆಳೆಯರ ಮೊಬೈಲ್ ಸದ್ದು ಮಾಡುವ ಮಟ್ಟಿಗೆ ಮಾತ್ರ ದೂರವಾಣಿ ಸಂಸ್ಥೆ ರಚಿಸಿದ ಕರೆಯ ತಂತ್ರಜಾಲವನ್ನು ಉಪಯೋಗಿಸಿಕೊಳ್ಳುತ್ತೀರಿ. ವಾಸ್ತವವಾಗಿ ಮಾತುಕತೆ ನಡೆಯುವುದಿಲ್ಲವಾದ್ದರಿಂದ ಈ ಕರೆಗೆ ವೆಚ್ಚ ಏಕಿಲ್ಲ ಎಂದರೆ ನೀವು 'ಸಂಪರ್ಕ' ಏರ್ಪಡಿಸಿಕೊಳ್ಳಲಿಲ್ಲ. ಏರ್ಪಡಲಿಲ್ಲವೆ? ಏರ್ಪಟ್ಟಿದೆ ಅಂದರೆ ಈ ತರ್ಕದಲ್ಲಿ ಸುಳ್ಳಿನ ಒಂದು ಎಳೆಯನ್ನು ಬಹು ಜಾಣತನದಿಂದ ನೇಯಲಾಗಿದೆ. ಕಾಲ್ ಅಲ್ಲದೆಯೂ ಕಾಲೇ ಆಗಿರುವ ಈ ಕರೆಗಳಿಗೆ ಹುಸಿಕರೆ ಅನ್ವರ್ಥಕನಾಮ. ಒಂದೇ ಗೀತೆಯನ್ನು ಹಿಡಿದು ದ್ವೈತಿಗಳೂ, ಅದ್ವೈತಿಗಳೂ, ವಿಶಿಷ್ಟಾದ್ವೈತಿಗಳೂ ತಮ್ಮ ತತ್ವದ ಸಮರ್ಥನೆ ಮಾಡಿಕೊಳ್ಳಲುವ ದೇಶವಿದು. ಹುಸಿಕರೆಯನ್ನೊಂದು ಬಗೆಯ ಕರೆಯನ್ನಾಗಿ ಮಾಡಿ, ಅದಕ್ಕೆ ವೆಚ್ಚ ತಗುಲದಂತೆ ಮಾಡಿ, ವೆಚ್ಚವಿಲ್ಲವಾದ್ದರಿಂದ ಅದೊಂದು ಕರೆಯಲ್ಲವೆನಿಸಿ, ನೀ ಮಾಯೆಯೊಳಗೋ, ನಿನ್ನೊಳು ಮಾಯೆಯೋ ನೀ ದೇಹದೊಳಗೊ ನಿನ್ನೊಳು ದೇಹವೋ... ಉಸುರಲೆನ್ನಳವಲ್ಲ; ಎಲ್ಲ ನಿನ್ನೊಳಗೊ ಹರಿಯೆ!

ಸುಳ್ಳೇಕೆ ಹೇಳಲಿ? ನಮ್ಮಲ್ಲಿ ಪ್ರತಿಯೊಬ್ಬರು ಬಹುತೇಕ ಪ್ರತಿದಿನವೂ ಒಂದಾದರೂ ಮಿಸ್‌ಕಾಲ್ ಮಾಡಿರುತ್ತೇವೆ. ಇಲ್ಲವೇ ಸ್ವೀಕರಿಸಿರುತ್ತೇವೆ. ನಮ್ಮ ದೈನಿಕದ ಭಾಗವಾಗಿಬಿಟ್ಟಿರುವ ಮಿಸ್‌ಕಾಲ್‌ಗಳನ್ನು ವಿಮರ್ಶಿಸದೆ ಒಪ್ಪಿಕೊಂಡುಬಿಟ್ಟಿದ್ದೇವೆ. ಆಹಾರದ, ವಾತಾವರಣದ ಅಶುದ್ಧಿ, ಕಲಬೆರಕೆಗಳ ಅನಿವಾರ್ಯತೆಯಂತೆಯೆ ಹುಸಿ

ಕರೆಯೂ ಅಶುದ್ಧಿಯೂ ಸಹ ಎಂದು ನಮ್ಮ ಅಜಾಗೃತ ಮನಸ್ಸಿನಲ್ಲಿ ದಾಖಲೆಯಾಗಿಬಿಟ್ಟಿದೆ.

ಒಂದು ಬಸ್ ಮಿಸ್ಸಾದಾಗ ನಾವು ಅಷ್ಟು ಸಮಯ, ಆ ಅವಕಾಶ, ಆ ಪ್ರವಾಸ.. ಹೀಗೇ ಏನೋ ಒಂದನ್ನು ಕಳೆದುಕೊಳ್ಳುತ್ತೇವೆ. ಒಳ್ಳೆಯ ಸಂಗೀತದ ಕಾರ್ಯಕ್ರಮ ಮಿಸ್ಸಾದಾಗಲೂ ಅಷ್ಟೇ, ಅಂಥದೊಂದು ಸುಂದರ ಸಂದರ್ಭ ಕಳೆದುಕೊಂಡೆವು. ಆದರೆ ಮಿಸ್ ಆದ ಕರೆಯಲ್ಲಿ? ಮಿಸ್ ಮಾಡಿಕೊಳ್ಳುತ್ತಿರುವವರು ಬೇರೊಬ್ಬರು, ಈ ವ್ಯವಸ್ಥೆ ನಿರ್ಮಿಸಿದ ದೂರವಾಣಿ ಸಂಸ್ಥೆಯವರು. ನಾವು ಏನೂ ಮಿಸ್ ಮಾಡಿಕೊಂಡಿರುವುದಿಲ್ಲ. ನಮ್ಮ ಹುಸಿಕರೆಯ ಧ್ವನ್ಯರ್ಥ – ಕರೆಯ ಎರಡೂ ತುದಿಗಳಲ್ಲಿರುವವರಿಗೆ ತಿಳಿದಿರುತ್ತದೆ. ನಾವು ಮಾತನಾಡದೆಯೂ ಮಾತನಾಡಿದೆವು. 'ಹುಸಿಯ ನುಡಿಯಲು ಬೇಡ' ಎಂದರು ಬಸವಣ್ಣನವರು. ಅವರು ಈ ಹುಸಿಕರೆಗಳ ಕಾಲಕ್ಕಿಂತ ಬಹು ಹಿಂದಿನವರು. ಅವರೀಗ ಇದ್ದುದಾದರೆ 'ಹುಸಿಯ ಕರೆಯ ಮಾಡಲೂ ಬೇಡ' ಎಂದು ಖಂಡಿತವಾಗಿ ಹೇಳುತ್ತಿದ್ದರು. ನಮ್ಮ ಅಧಃಪತನ ದಾರ್ಶನಿಕರ ಕಲ್ಪನೆಗೂ ನಿಲುಕದ ಪಾತಾಳದತ್ತ!

ಹುಸಿ ಕರೆಗಳ ನಿಜ ಅಭಿಮಾನಿಯಾದ ನನ್ನ ಗೆಳೆಯರು 'ಶುದ್ಧತಾವಾದಿ' ಎಂದು ನನ್ನನ್ನು ಟೀಕಿಸುತ್ತಾರೆ. ಹುಸಿಕರೆ ಒಂದು ನಿರುಪದ್ರವಿ ಕೃತ್ಯ ಎಂದು ಅವರ ವಾದ. ಎಲ್ಲ ಕೆಟ್ಟ ಚಟಗಳೂ ಪ್ರಾರಂಭದಲ್ಲಿ ನಿರಪಾಯಕಾರಿಗಳಾಗಿಯೇ ಕಂಡವು, ಹುಸಿ ಕರೆಗಳ 'ಹುಸಿ'ಯೂ ಈಗ ಹಾಗೇ ಕಾಣುತ್ತಿದೆ. ಆದರೆ ಅದರೊಡನೆ ಒಂದು ಬಗೆಯ ಸುಳ್ಳಿಗೆ ನಮ್ಮ ಬದುಕಿನಲ್ಲಿ ಜಾಗ ಕೊಟ್ಟೆವು. ಅದೂ ಒಂದು ಬಗೆಯ ಗೌರವದ ಸ್ಥಾನವನ್ನೇ ಕೊಟ್ಟೆವು. ಮೊಬೈಲ್ ದೂರವಾಣಿ ತಂತ್ರಜ್ಞಾನದ ಶ್ರೇಯಸ್ಸು ಯಾರದೇ ಆಗಿರಲಿ – ಮಿಸ್‌ಕಾಲ್‌ನ ಪರಿಕಲ್ಪನೆ ಮಾತ್ರ ಅಚ್ಚ ಸ್ವದೇಶಿ. ಕೆಲ ವರ್ಷಗಳ ಹಿಂದೆ ಅಮೇರಿಕಾದ ಅರ್ಥ ವ್ಯವಸ್ಥೆ ಕುಸಿದಾಗ ಭಾರತೀಯರ ಉಳಿತಾಯ ಮಿತವ್ಯಯಗಳ ಕುರಿತು ಮೆಚ್ಚುಗೆಯ ಮಾತುಗಳು ಕೇಳಿಬಂದವು. ನಮ್ಮ ಮಿತವ್ಯಯದ ಹುಡುಕಾಟದಲ್ಲಿಯೇ ಮಿಸ್‌ಕಾಲ್ ಅವತರಿಸಿತೇನೋ! ಅಂದರೆ ಈ ಆವಿಷ್ಕಾರದ ಹಿರಿಮೆ ನಮ್ಮದು, ನಮ್ಮ ಅಸಾಮಾನ್ಯ ಪ್ರಜ್ಞಾ ಪ್ರವಾಹದ್ದು. ಯಾವುದೇ ಒಬ್ಬ ವ್ಯಕ್ತಿಗಳ ಇಡೀ ಭಾರತೀಯ ಸಮುದಾಯಕ್ಕೆ ಇದರ ಶ್ರೇಯಸ್ಸು ಸಲ್ಲಬೇಕು ಎಂದು ನನ್ನ ಊಹೆ.

ಮಿತವ್ಯಯ ಒಂದು ಮೌಲ್ಯ ಎಂದು ತಿಳಿದು ಬದುಕಿದವರು ನಾವು. ಮಿತವ್ಯಯ ಜಿಪುಣತನವಲ್ಲ. ಚಿಕ್ಕಂದಿನಲ್ಲಿ ನಾನು ಹಿಂದಿನ ವರ್ಷದ ಕ್ಯಾಲೆಂಡರನ್ನು ಅಚ್ಚುಕಟ್ಟಾಗಿ ಕತ್ತರಿಸಿ ಅದರ ಬೆನ್ನು ಭಾಗದಲ್ಲಿ ಕಚ್ಚಾ ಲೆಕ್ಕ ಮಾಡಿಕೊಳ್ಳುತ್ತಿದ್ದೆ. ಅದನ್ನು ನೋಡಿ ಇದು ಮಿತವ್ಯಯದ ಒಳ್ಳೆಯ ಮಾದರಿ ಎಂದು ನನ್ನ ತಂದೆಯವರು ತಲೆದೂಗಿದ್ದರು. ಆದರೆ, ಕ್ಯಾಲೆಂಡರುಗಳನ್ನು ತಯಾರಿಸುವವರಿಗೆ ಈ ವಿಷಯ ಅದು ಹೇಗೋ

ತಿಳಿದುಹೋಯಿತು. ಅವರು ಆರೇ ಹಾಳೆಗಳಲ್ಲಿ ಕ್ಯಾಲೆಂಡರ್ ತಯಾರಿಸತೊಡಗಿದರು. ಅಂದರೆ ಪ್ರತಿ ಹಾಳೆಯ ಎರಡೂ ಕಡೆ ಮುದ್ರಿಸತೊಡಗಿದ್ದರಿಂದ ನನ್ನ ಕಚ್ಚಾ ಲೆಕ್ಕಕ್ಕೆ ಚ್ಯುತಿ ಉಂಟಾಯಿತು. ಆಗ ನನಗೆ ಇನ್ನೂ ಒಂದು ಪ್ರಚಂಡ ಯೋಚನೆ ಬಂತು. ಬೇಸಗೆ ದಿನಗಳಲ್ಲಿ ಮನೆ ಎದುರು ಕೆಂಪು ಮಣ್ಣಿನ ಒರೆದ ಅಂಗಳ ಮಾಡುತ್ತಿದ್ದರು. ಶಾಲೆಯಲ್ಲಿ ಎಸೆದ ಮೊಟ್ಟ ಚಾಕ್‌ಪೀಸ್‌ಗಳನ್ನು ಕಿಸೆಯಲ್ಲಿಟ್ಟುಕೊಂಡು ಬಂದು ಅಂಗಳದಲ್ಲಿ ಲೆಕ್ಕ ಬರೆದು ರೂಢಿಮಾಡಿಕೊಳ್ಳತೊಡಗಿದೆ. ಇದು ಇನ್ನೂ ಕಡಿಮೆ ವೆಚ್ಚದ ಕಾರ್ಯಕ್ರಮವಾಗಿತ್ತು. ಇದಕ್ಕೂ ನನ್ನ ತಂದೆಯವರು ಶಹಭಾಷ್ ಎಂದರು. ಆಗ ಅವರು ತಾನು ತೀರ್ಥಹಳ್ಳಿ ಯಲ್ಲಿ ಓದುತ್ತಿದ್ದಾಗ ತುಂಗಾನದಿಯ ದಡದ ಕಲ್ಲು ಬಂಡೆಗಳ ಮೇಲೆ ಲೆಕ್ಕ ಮಾಡುತ್ತಿದ್ದೆನೆಂದು ನೆನಪಿಸಿಕೊಂಡರು. ಅಂದರೆ ನನ್ನ ಮಿತವ್ಯಯದ ಪ್ರಯೋಗವು ಏಕಕಾಲಕ್ಕೆ ಸ್ವಯಾರ್ಜಿತವೂ, ಪಿತ್ರಾರ್ಜಿತವೂ ಆಗಿತ್ತು.

ನನ್ನ ಮೂವತ್ನಾಲ್ಕನೇ ವಯಸ್ಸಿನ ಹೊತ್ತಿಗೆ ರಮಣರ ಆಧ್ಯಾತ್ಮಿಕ ಚಿಂತನೆಗಳಿಗೆ ಮಾರುಹೋದೆ. ಏನಾಶ್ಚರ್ಯ! ನನ್ನ ಈ ಆಧ್ಯಾತ್ಮಿಕ ಗುರುಗಳೂ ಪರಮ ಮಿತವ್ಯಯಿಗಳು! ಅವರಿಗೆ ಬಂದ ಅಂಚೆ ಕಾಗದಗಳನ್ನು ಜೋಡಿಸಿಟ್ಟು ಅವುಗಳ ಹಿಂಭಾಗದಲ್ಲಿ ಬರೆಯುತ್ತಿದ್ದರಂತೆ. ದೇವರಿಗೆ ಅರ್ಪಿಸುವ ಗುಲಾಬಿ ಹೂಮಾಲೆಗಳನ್ನು ಮರುದಿನ ತೋಟದಲ್ಲಿ ಎಸೆದು ಬಿಟ್ಟರೆ ಅವರಿಗೆ ತುಂಬ ಬೇಸರ. ಒಂದು ದಿನ ತಾವೇ ನಿಂತು, ಗುಲಾಬಿ ಪಕಳೆಗಳನ್ನು ಪಾಯಸಕ್ಕೆ ಹಾಕಿಸಿ ಅದರ ರುಚಿ ತೋರಿಸಿದರಂತೆ. ಬದನೆಕಾಯಿಯ ಚೊಟ್ಟಿನ ಭಾಗವನ್ನೂ ಅಡುಗೆಗೆ ಬಳಸಲು ಸಾಧ್ಯವಿದೆಯೆಂದು ಅವರು ಸ್ವತಃ ಮಾಡಿ ತೋರಿಸಿದ ಮೇಲೆಯೇ ಜನರಿಗೆ ಮನವರಿಕೆಯಾಗಿದ್ದು. ಮಹರ್ಷಿಗಳ ತತ್ತ್ವದರ್ಶನದ ಮಾತಂತಿರಲಿ, ನಿತ್ಯಜೀವನದಲ್ಲಿ ಅವರು ಅನುಸರಿಸಿದ ಮಿತವ್ಯಯದ ಆದರ್ಶ ಅನುಸರಿಸಿದರೂ ಅದೊಂದು ದೊಡ್ಡ ಸಾಧನೆಯೇ. ತಲೆಗೆ ಹಾಕಿದ ಎಣ್ಣೆನೀರು ಅತ್ತಿತ್ತ ಚೆಲ್ಲದೆ ಇಡೀ ದೇಹದ ಸುತ್ತ ಹರಿದು ನೆಲ ಸೇರುವಂತೆ ಮೀಯುತ್ತಿದ್ದರಂತೆ ಮಹರ್ಷಿಗಳು. ಅವರ ಆಧ್ಯಾತ್ಮ ಸಂದೇಹವೆಲ್ಲವೂ 'ನಾನು ಯಾರು?' ಎಂಬ ಹೆಸರಿನ ಹದಿನಾರು ಪುಟದ ಪುಸ್ತಿಕೆಯಲ್ಲಿದೆ. ಆಸಕ್ತರಿಗೆ ಅತಿ ಕಡಿಮೆ ಬೆಲೆಯಲ್ಲಿ ಸಿಗಬೇಕೆಂದು ರಮಣರ ಆಸೆ. ಕೆಲವು ವರ್ಷಗಳ ಹಿಂದೆ ನಾನು ಕೊಂಡಾಗಲೂ ಅದರ ಬೆಲೆ ಕೇವಲ ಒಂದು ರೂಪಾಯಿ. ಈಗ ಅಂತರ್ಜಾಲದಲ್ಲಿ ಉಚಿತವಾಗಿ ಓದಬಹುದು. ಒಂದಷ್ಟು ಸಾವಿರ ರೂಪಾಯಿಗಳನ್ನು ಕೊಟ್ಟರೆ ಎಂತೆಂಥದೋ 'ದರ್ಶನ'ಗಳನ್ನು ಮಾಡಿಸುವ ಭರವಸೆಯ ಹಲವು ಕೋರ್ಸುಗಳು ಈಗ ತಲೆಯೆತ್ತಿವೆ. ಅವುಗಳ ಕುರಿತು ನಾನೇನೂ ಹೇಳಬಯಸುವುದಿಲ್ಲ. ಆಧ್ಯಾತ್ಮ ಸಾಧನೆಯ ನೇರ ಮಾರ್ಗವನ್ನು ರಮಣರು ಕೆಲವೇ ಮಾತುಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಅದು ಇಡೀ ಜೀವನದ ಸಾಧನೆಯನ್ನು ಬಯಸುವ ಶೋಧನೆ ಎಂಬುದೇನೋ ನಿಜವೇ. ಹಾಗಿದ್ದೂ ಯಾವ ವ್ಯಂಗ್ಯವೂ ಇಲ್ಲದೆ

ಹೇಳಬೇಕೆಂದರೆ ಅದು ಆಧ್ಯಾತ್ಮದ ಒಂದು ಮಿತವ್ಯಯದ ಪಥ.

ನನ್ನ ಮಗಳ ಜೊತೆ ಓದುತ್ತಿದ್ದ ಒಬ್ಬ ಹುಡುಗ ನಿಜಕ್ಕೂ ಕಲ್ಪನಾತೀತ ಮಿತವ್ಯಯಿ. ತರಗತಿಯ ಟಿಪ್ಪಣಿಗಳನ್ನು ಅವರು ಪೆನ್ಸಿಲ್‌ನಲ್ಲಿ ಬರೆದುಕೊಳ್ಳುತ್ತಿದ್ದರಂತೆ. ರಬ್ಬರಿನಿಂದ ಒರೆಸಿ ಮುಂದಿನ ತರಗತಿಯಲ್ಲಿ ಅದೇ ನೋಟ್‌ಬುಕ್ ಬಳಸುವುದು! ನನ್ನ ಮಗಳ ಅಸಹಕಾರದಿಂದ ಆ ಹುಡುಗನನ್ನು ನಾನು ನೋಡಲಾಗಲಿಲ್ಲ. ನಾನೇನಾದರೂ ಅವನನ್ನು ನೋಡಿದರೆ ನನ್ನ ಮಿತವ್ಯಯದ ಪ್ರಯೋಗಗಳು ಉಲ್ಬಣಗೊಂಡು ಜಿಪುಣಾವಸ್ಥೆಗೆ ಮಾರ್ಪಡಬಹುದೆಂದು ಅವಳ ಬಾಲಬುದ್ಧಿಯಲ್ಲೆಲ್ಲೋ ಅವ್ಯಕ್ತವಾಗಿ ಹೊಳೆದು ಹೋಗಿರಬೇಕು.

ಜಿಪುಣತನದ ವಿಷಯ ಬಂದಾಗ ಶ್ರೀನಿವಾಸ ನಾಯಕ ನೆನಪಾಗುತ್ತಾರೆ. ಮಹಾಲೋಭಿ, ಜಿಪುಣಾಗ್ರೇಸರ ಶ್ರೀನಿವಾಸ ನಾಯಕನ ಜೀವನದಲ್ಲಿ ನಡೆದ 'ಮೂಗುತಿ ಪ್ರಕರಣ' ಅವನನ್ನು ಪುರಂದರದಾಸರನ್ನಾಗಿಸಿತು. ಕಡುಲೋಭವೂ ಒಂದು ತಪಸ್ಸೆನ್ನುವಂತೆ ಗಾಂಧಿ, ವಿನೋಬಾ ಮತ್ತಿತರ ಸತ್ಯಾಗ್ರಹಿಗಳು ಮಿತವ್ಯಯದ ಪ್ರಯೋಗ ನಡೆಸಿದ್ದರು. ಮನುಷ್ಯ ಎಷ್ಟು ಕಡಿಮೆ ಹಣದಲ್ಲಿ ನಿರೋಗಿಯಾಗಿ ಬದುಕಬಹುದು ಎಂಬುದರ ಕುರಿತು ಅವರೆಲ್ಲ ಗಂಭೀರ ಪ್ರಯತ್ನ ನಡೆಸಿದ್ದರು. ನಾವೀಗ ಅಂಥ ಮಾದರಿಗಳನ್ನು ಮರೆತಿದ್ದೇವೆ. ಭೋಗಪರವಾದ ನಮ್ಮ ಜೀವನದಲ್ಲಿ ಅನೇಕ ಹುಸಿ ಅಗತ್ಯಗಳಿಗಾಗಿ ಖರ್ಚು ಮಾಡುತ್ತಿದ್ದೇವೆ. ಜಾಹೀರಾತುಗಳು ಅನವಶ್ಯಕ ಅಗತ್ಯಗಳನ್ನು ಗ್ರಾಹಕರ ಮನಸ್ಸಿನಲ್ಲಿ ಬಿತ್ತುತ್ತವೆ. ಅಂದರೆ ಇಂಥ ವ್ಯಾಪಾರೀ ಸಂಸ್ಥೆಗಳು ನಮ್ಮ ಮನಸ್ಸುಗಳ ಸೂಕ್ಷ್ಮ ವಲಯದೊಳಗೆ 'ಹುಸಿಕರೆ'ಗಳನ್ನು ಮಾಡುತ್ತಾ ಸರಳವಾಗಿದ್ದ ನಮ್ಮ ಜೀವನವನ್ನು ದುಸ್ಸಹವಾಗಿಸಿವೆ. 'ಮಿಸ್‌ಕಾಲ್'ಗಳ ಮೂಲಕ ನಾವು ಮಾಡುತ್ತಿರುವ ಕೃತಕ ಉಳಿತಾಯದ ಹಿಂದಿರುವುದು ಈ ಬಗೆಯಾಗಿ ಮಲಿನಗೊಂಡ ಮನಸ್ಸು. ಇದು ಜಿಪುಣತನವೂ ಅಲ್ಲ, ಮಿತವ್ಯಯವೂ ಅಲ್ಲ, ಒಂದು ಅಸಂಬದ್ಧ ಮತ್ತು ಅಸಮರ್ಪಕ ನಡತೆ. ಇಂಥವರಲ್ಲಿ ಅನೇಕರು ತಮ್ಮ ಇತರ ಎಲ್ಲ ಚಟುವಟಿಕೆಗಳೆಲ್ಲ ದುಂದುವೆಚ್ಚದವೇ. 'ಕುಂಬಳಕಾಯಿ ಕೊಳೆತರೆ ನೋಡುವವರಿಲ್ಲ, ಸಾಸಿವೆಕಾಳು ಹೆಕ್ಕಲು ಹೋದ' ಎಂಬ ಜಾತಿಯವರೇ.

ನನ್ನ ಗೆಳೆಯರೊಬ್ಬರು ಕ್ಯಾಂಟೀನ್ ನಡೆಸುತ್ತಿದ್ದರು. ಅವರದೊಂದು ಅನುಭವ ವಿಚಿತ್ರವಾಗಿದೆ. ಆ ಆಫೀಸಿನಲ್ಲಿ ಮಧ್ಯಾಹ್ನದ ಹೊತ್ತು ಎಲ್ಲರೂ ಒಟ್ಟಾಗಿ ಚಾ ಕುಡಿಯುವ ವ್ಯವಸ್ಥೆ ಇತ್ತು. ಬಿಸ್ಕೀಟನ್ನು ಒಂದು ಪ್ಲೇಟಿನಲ್ಲಿರಿಸುತ್ತಿದ್ದರು. ಚಹಾದ ಜೊತೆ, ಎರಡೋ ಮೂರೋ ಬಿಸ್ಕೀಟ್ ತಿನ್ನುವುದೊಂದು ರೂಢಿಯ ನಡತೆ. 'ಆದರೆ ಸರ್, ಕೆಲವು ದೊಡ್ಡ ಆಫೀಸರ್ ಅನ್ನಿಸಿಕೊಂಡವರು, ಯಾರಿಗೂ ತಿಳಿಯದಂತೆ ಎರಡೋ ಮೂರೋ ಬಿಸ್ಕೀಟ್ ಕಿಸೆಗೆ ಹಾಕಿಕೊಳ್ಳುತ್ತಿದ್ದರು. ಇಲ್ಲಿ ತಿನ್ನುವ ಬಿಸ್ಕೀಟ್ ಹೊರತುಪಡಿಸಿ ಅದೇಕೆಂದು ನನಗೆ ಅರ್ಥವಾಗಲಿಲ್ಲ'. ಈ ಬಿಸ್ಕೀಟುಗಳಿಂದಾಗಿ ನಮ್ಮ ಗೆಳೆಯರಿಗೇನೂ

ನಷ್ಟವಾಗಲಿಲ್ಲ. ಆದರೆ ಈ ನಡತೆ ಅವರಿಗೆ ತಂದಿದ್ದ ಸಂದಿಗ್ಧತೆಗೆ, ನನ್ನ ಬಳಿ ಉತ್ತರವಿರಲಿಲ್ಲ. ಮಿಸ್‌ಕಾಲ್‌ಗಳು ಈ ನಡತೆಯ ಒಂದು ಭಾಗವೆ ಇರಬಹುದು ಎಂದು ನನ್ನ ಭಾವನೆ. ಮಿಸ್‌ಕಾಲ್‌ಗಳಿಂದ ಖಂಡಿತ ಯಾರಿಗೂ ದೊಡ್ಡ ನಷ್ಟವಾಗಲಿಲ್ಲ. ಮಿಸ್‌ಕಾಲ್‌ಗಳನ್ನು ಮಾಡಿದವರಿಗೆ ಮಹಾನ್ ಲಾಭವೂ ಆಗಿರಲಾರದು. ಮೊದಲೇ 'ಮಿಥ್ಯಾಲೋಕ'ವಿದೆಂದು ತಿಳಿದವರು ಹೇಳಿದ್ದಾರೆ. ಇನ್ನು ಮಿಥ್ಯಾಕರೆಗಳ ಲೋಕವಿದೆಂದೂ ಹೇಳಬೇಕಾಗುತ್ತದೆ.

'ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು?' ಹಿರಿಯ ಕವಿ ಅಡಿಗರ ಈ ಸುಪ್ರಸಿದ್ಧ ಭಾವಗೀತದ ಸಾಲು ಒಮ್ಮೆಲೆ ನೆನಪಾಗಿ ಮನಸ್ಸು ಉಮ್ಮಳಿಸುತ್ತಿದೆ. ಹೂವು ಹಾಸಿಗೆ, ಬಾಹು ಬಂಧನ, ಒಲಿದ ಮಿದುವೆದೆ, ಇಷ್ಟೇ ಸಾಕೆಂದಿದ್ದ ಜೀವವೊಂದು ಇದ್ದಕ್ಕಿದ್ದಂತೆ ಯಾವುದೋ ಮೋಹನ ಮುರಲಿಯ ನಾದ ಕೇಳಿಸಿಕೊಂಡು ಪರವಶವಾಗಿದೆ. ಆ ಜೀವದ ಸಖನೋ, ಸಖಿಯೋ ಈ ಹೊರಳು ಹಾದಿಯ ಪಯಣವನ್ನು, ಮೊಳೆಯದಲೆಗಳ ಮೂಕ ಮರ್ಮರವನ್ನು ಅರಿಯಲಾರದಾಗಿದೆ. ಈ ಹಾಡು, ಈ ಸಂಕಟ, ಕಂಠದಿಂದ ಕಂಠಕ್ಕೆ ಹಾದು ಬಂದಿದೆ. ನನಗೀಗ ಸಂದಿಗ್ಧ : ಹುಸಿಕರೆಗಳ ಈ ಕಾಲದಲ್ಲಿ ನಮಗೆ ಮೋಹನ ಮುರಲಿಯ ನಾದ ಕೇಳಬಹುದೆ? ಕೇಳಿದರೂ ಆವೇಶದಲ್ಲಿ ಹುಸಿಕರೆಯೆಂದು ನಾವು ತಿಳಿದುಬಿಡಬಹುದೆ?

ಎಲ್ಲ ಬಗೆಯ ಸುಳ್ಳುಗಳಿಂದ ನಾವು ಪಾರಾಗಬೇಕು. ಸುಳ್ಳು ಕರೆಗಳಿಂದ ಕೂಡ.

**ಚಿಂತಾಮಣಿ ಕೊಡ್ಲೆಕೆರೆ**

ಮಯೂರ, ಜೂನ್ ೨೦೧೪

# ಹಕ್ಕಿಗಳ ಸಾಕು ಪುರಾಣ

ನಾವು ವಾಸವಿದ್ದ ಬಾಡಿಗೆ ರೂಮಿನ ಎದುರು ಒಂದು ಹುಣಸೆ ಮರವಿತ್ತು. ಆ ಮರದ ಹಿಂದೆ ಭದ್ರಾ ನದಿಯ ನಾಲೆ ಹರಿಯುತ್ತಿತ್ತು. ಅಲ್ಲಿಗೆ, ಊಟ, ತಿಂಡಿಗಾಗಿ ಅನೇಕ ಬೆಳ್ಳಕ್ಕಿಗಳ ಹಿಂಡು ಬರುತ್ತಿದ್ದವು. ಹಾಗೆ ಬಂದ ಈ ಅತಿಥಿಗಳು ಈ ಹುಣಸೆ ಮರವನ್ನು ತಮ್ಮ ಸ್ವಂತ ಹಕ್ಕೆದಾಣ ಮಾಡಿಕೊಂಡಿದ್ದವು. ನಮ್ಮಂತೆಯೇ ಊರು ಬಿಟ್ಟು ಬಂದ ಆ ನೀರ ಹಕ್ಕಿಗಳ ಹಾರಾಟ, ಚೀರಾಟ ಕೇಳಲು ಕಿತ್ತಾಟ, ಕಾದಾಟ ನೋಡಲು ತುಂಬಾ ಹಿತವೆನಿಸುತ್ತಿತ್ತು.

ಸೋಂಬೇರಿಗಳಾದ ನಾನು ನನ್ನ ಗೆಳೆಯ ಮಲ್ಲಿಕಾರ್ಜುನ ಕಬ್ಬೂರು ಏಳುವ ಹೊತ್ತಿಗಾಗಲೇ ಅವು ಹಾರಿ ಹೋಗಿರುತ್ತಿದ್ದವು. ಸಂಜೆಯಾದರೆ ಅವುಗಳ ರಸಮಂಜರಿ ಕಾರ್ಯಕ್ರಮ ಶುರುವಾಗುತ್ತಿತ್ತು. ಒಂದರ್ಧ ಗಂಟೆ ಅವುಗಳ ಸಡಗರ, ಕೂಗಾಟ, ನಿಂತು ನೋಡಿದರೆ ನಮ್ಮ ಎಂ.ಎ. ಓದಿನ ಆಯಾಸವೆಲ್ಲಾ ಅಲ್ಲೇ ಮರೆತೇ ಹೋಗುತ್ತಿತ್ತು. ಟಿ.ವಿ. ರೇಡಿಯೋ ಎರಡೂ ಇಲ್ಲದ ನಮ್ಮ ಪಾಲಿಗೆ ಇವೇ ಮನರಂಜನೆಯಾಗಿದ್ದವು. ಬಾಡಿಗೆ ಇಲ್ಲದ ಪ್ರಕೃತಿಯ ಮನೆಯಲ್ಲಿ ಸುಖವಾಗಿ ಬದುಕುವ ಅವುಗಳ ಸಂತೋಷ, ಸ್ವಾತಂತ್ರ್ಯಗಳ ನೋಡಿ ಹೊಟ್ಟೆಕಿಚ್ಚಾಗುತ್ತಿತ್ತು. ಮಾತು ಬಾರದ, ನಗಲು, ಅಳಲು ಸಾಧ್ಯವಾಗದ ಅವು ಹೆಚ್ಚು ಸುಖವಾಗಿದ್ದಾವೆ ಎಂದು ನಾವು ಅಂದುಕೊಳ್ಳುತ್ತಿದ್ದೆವು. ಪಾಪ ಅವುಗಳ ಸಂಕಟ, ನೋವಿನ ಹಕ್ಕೀಕತ್ತು ಏನೇನಿದೆಯೋ? ಯಾರಿಗೆ ಗೊತ್ತು! ಬೇರೆ ಜೀವಿಗಳ ಬಗ್ಗೆ ಮನುಷ್ಯ ಪ್ರಾಣಿ ತಳೆಯುವ ಸುಲಭ ತೀರ್ಮಾನ ಯಾವಾಗಲೂ ಹೀಗೆ ಉಡಾಫೆಯಾಗಿತ್ತದೆ.

ಆ ಬೀದಿಯ ಮಕ್ಕಳಿಗೆ ಬೇಸಿಗೆ ರಜೆ ಬಂದಾಗಲೇ ಹಾಳಾದ ನಮ್ಮ ಪರೀಕ್ಷೆಗಳು ವಕ್ಕರಿಸುತ್ತಿದ್ದವು. ನಮಗೆ ಸಂಕಷ್ಟದ ಸಮಯವಾದರೆ; ಅವರಿಗೆ ಸ್ವಾತಂತ್ರ್ಯದ ಸಡಗರ. ಶಾಲೆ, ಪಾಠ, ಪರೀಕ್ಷೆ, ಎಲ್ಲವನ್ನು ಬಿಸಾಡಿ ಪಕ್ಕಾ ಬೀಡಾಡಿ ಕರುಗಳಾದ ಅವರನ್ನು ನಿಯಂತ್ರಿಸುವುದು ಆನೆಗೆ ಚಡ್ಡಿ ತೊಡಿಸಿದಂತೆ. ದಿನವಿಡೀ ಬೀದಿಯಲ್ಲಿ ಗಲಾಟೆ ಎಬ್ಬಿಸಿಕೊಂಡು, ನಾನಾ ಥರದ ವಿಚಿತ್ರ ಆಟಗಳನ್ನು ಆಡುತ್ತಿದ್ದರು. ಅವರ ಆಟಕ್ಕಿಂತ ಕೂಗಾಟ, ಕಿರಿಚಾಟ, ಹುಡಿ ಜಗಳಗಳೇ ಮೇಲುಗೈ ಪಡೆಯುತ್ತಿದ್ದವು. ಮೈಮರೆತು ಕೇಕೆ ಹಾಕುವ ಇವರನ್ನು ಗದರಿಸಿ ಓಡಿಸುವುದು ನಿತ್ಯದ ತಲೆನೋವಾಗಿತ್ತು. ಶಾಲೆಗಳು ಮಕ್ಕಳಿಗೆ ರಜೆ ಕೊಡುವುದೇ ಅವು ದೊಡ್ಡವರಿಗೆ ಸಜೆ ಕೊಡಲಿ ಎಂದಿರಬೇಕು. ಇಂಥ ಸುವರ್ಣ ಅವಕಾಶ ಸಿಕ್ಕಾಗ ಅವು ಸುಮ್ಮನಿರುವುದುಂಟೆ?

ನಮ್ಮ ಬಾಯಿ ಗದ್ದಲಕ್ಕೆ ಹೆದರಿ ಕೊಂಚ ಮರೆಯಾಗುತ್ತಿದ್ದ ಆ ಪುಂಡರು ಮತ್ತೆ ಬಂದು ಯಥಾಪ್ರಕಾರ ಅರೆಚಾಡಿ ನಮ್ಮ ಗೋಳು ಹೊಯ್ದುಕೊಳ್ಳುತ್ತಿದ್ದರು. ನಮ್ಮ

ಓದಿನ ಏಕಾಗ್ರತೆಗೆ ಅವು ಅಡ್ಡಿಯಾಗಿವೆ ಎಂದು ನಾವು ಕೊರಕೊರ ಎಂದರೆ, ಅವರ ಆಟಕ್ಕೆ ನಾವು ಕಂಟಕರಾಗಿದ್ದೇವೆಂದು ಅವು ಗೊಣಗಾಡುತ್ತಿದ್ದವು. ಆ ಹುಣಸೆ ಮರದಲ್ಲಿ ಅಪ್ಪ ಅಮ್ಮ ಬಿಟ್ಟು ಹೋದ ಮರಿಗಳ ಕೀಚ್..ಕೀಚ್ ಹಾಡಿಗೆ, ಈ ಬೀದಿಯ ಹೈಕಳ ಅಬ್ಬಬ್ಬೋ ತಾಳವೂ ಸೇರಿ ಬೀದಿ ವಾರದ ಸಂತೆ ಮೈದಾನವೇ ಆಗುತ್ತಿತ್ತು.

ಹೀಗಿರುವಾಗ ಒಂದು ದಿನ ಕೆಲ ಹುಡುಗರು ಒಂದು ಕೊಕ್ಕರೆಯ ಮರಿಯನ್ನು ಹಿಡಿದು ತಂದು ಯರ್ರಾಬಿರ್ರಿ ಆಡಿಸುತ್ತಿದ್ದರು. ಇನ್ನೂ ಸಾಕಷ್ಟು ಬೆಳೆಯದ, ನೆಟ್ಟಗೆ ಹಾರುವುದಕ್ಕೂ ಬಾರದ ಎಲ್.ಕೆ.ಜಿ. ವಯಸ್ಸಿನ ಹಕ್ಕಿಯದು. ಪುಟಾಣಿ ರೆಕ್ಕೆ ಬಿಡಿಸಿ ಹಾರಲೆತ್ನಿಸಿ ಸಾಧ್ಯವಾಗದೆ ಬಂದು ಬೀದಿಯಲ್ಲಿ ಇಳಿದಿತ್ತು. ಆಗ ಮಕ್ಕಳೆಲ್ಲಾ ಸೇರಿ ಸುಲಭದಲ್ಲಿ ಅದನ್ನು ಸೆರೆ ಹಿಡಿದಿದ್ದರು. ಅದರ ಕಾಲಿಗೆ ಸಣ್ಣ ಹಗ್ಗ ಬಿಗಿದು ಗಾಳಿ ಪಟದಂತೆ ಅದನ್ನು ಹಾರಿಸಲು ಯತ್ನಿಸುತ್ತಿದ್ದರು. ಹುಡುಗರು ಸೂಚಿಸುತ್ತಿದ್ದ ಯಾವ ಕೆಲಸಗಳನ್ನೂ ಮಾಡಲರಿಯದೆ ಕಕ್ಕಾಬಿಕ್ಕಿಯಾದ ಕೊಕ್ಕರೆ ಬೆಪ್ಪತಕ್ಕಡಿಯಂತೆ ಮಂಕಾಗಿ ನಿಂತಿತ್ತು. ಏನಾದರೂ ಮಾಡಿ ಅದನ್ನು ಆಕಾಶಕ್ಕೆ ಹಾರಿಸಿ ಮಜಾ ತೆಗೆದುಕೊಳ್ಳಬೇಕೆಂಬುದು ಮಕ್ಕಳ ಇರಾದೆಯಾಗಿತ್ತು. ಅವರು ಕಟ್ಟಿದ ಹಗ್ಗವು ತುಸು ಭಾರವಾಗಿ, ಹೆಚ್ಚು ಎತ್ತರಕ್ಕೆ ಹಾರಲಾಗದ ಆ ಬಡಪಾಯಿ ಸೋತು ಮತ್ತೆ ರೆಕ್ಕೆ ಬಡಿದು ನೆಲಕ್ಕೆ ಫಟಾರೆಂದು ಬೀಳುತ್ತಿತ್ತು. ಅದನ್ನು ಮತ್ತೆ ಮತ್ತೆ ಹಿಡಿದಿಡಿದು ಚಿಳ್ಳೆಗಳು ಆಕಾಶದ ಮುಖಕ್ಕೆ ಎಸೆದು ಕಿರುಚಾಡುತ್ತಿದ್ದವು. ಅವರ ಕೈಯಲ್ಲಿ ಸಿಕ್ಕು ಅಕ್ಷರಶಃ ನಲುಗಿ ಹೋಗಿದ್ದ ಕೊಕ್ಕರೆ ಕಣ್ಣೀರು ತುಂಬಿಕೊಂಡು ಕಾಪಾಡಿ ಎಂದು ಬೇಡಿಕೊಳ್ಳುವಂತೆ ಕಾಣುತ್ತಿತ್ತು.

ಹಕ್ಕಿಯ ಈ ದುರವಸ್ಥೆ ನೋಡಿ ನನಗೆ ಇನ್ನಿಲ್ಲದ ಕನಿಕರ ಉಕ್ಕಿ ಬಂದಿತು. ಆ ಕೊಕ್ಕರೆಯ ಆಕಾರದ ನೂರಾರು ಕೋಳಿಗಳನ್ನು ಕೊಯ್ದು ತಿನ್ನುವಾಗ ಇಲ್ಲದ ಕರುಣೆ ಈಗ ವಕ್ಕರಿಸಿದ್ದು ವಿಚಿತ್ರವೆನಿಸಿತು. ಆ ಹೈಕಳನ್ನು ಗದರಿಸಿ ಅಂತೂ ಹಕ್ಕಿಯನ್ನು ವಶಕ್ಕೆ ಪಡೆದುಕೊಂಡೆ. ನನ್ನ ಈ ಆಕ್ರಮಣದಿಂದ ಸಿಟ್ಟಾದ ಅವರು ವ್ಯಾಜ್ಯಕ್ಕೆ ನಿಂತರು. "ಅದು ನಮ್ಮ ಹಕ್ಕಿ ಕಂಡ್ರಿ... ನಾವು ಸ್ವಂತ ಹಿಡಿದದ್ದು. ನಮ್ಮ ಶಿಕಾರಿ ಅದು ಬಿಟ್ ಕೊಡ್ರಿ" ಎಂದು ಆ ಗುಂಪಿನಲ್ಲಿ ಕಟ್ಟುಮಸ್ತಾಗಿದ್ದ ಹುಡುಗನೊಬ್ಬ ನನಗೆ ರೋಫ್ ಜಡಿದನು. ಅವನ ಮೇಲೆ ಕಿಡಿಗೊಳಿಸಿದ ಕೆಂಗಣ್ಣು ಬಿಟ್ಟು ಒಮ್ಮೆ ಗುರಾಯಿಸಿ ನೋಡಿದೆ. ನನ್ನ ಸಿಟ್ಟಿಗೆ ಅವನೇನೂ ಸೊಪ್ಪು ಹಾಕಿದಂತೆ ಕಾಣಲಿಲ್ಲ. "ಹೋಗ್ತಿರೋ ಇಲ್ವೋ ಬಡ್ಡಿಮಕ್ಳ ಒಬ್ಬೊಬ್ಬನ್ನೂ ಚಚ್ಚಿಹಾಕ್ತಿನಿ. ಪಕ್ಷಿ ಸುದ್ದಿಗೆ ಬಂದ್ರೆ ಕೈಕಾಲು ಮುರಿತೀನಿ" ಎಂದು ಮಾರಾಮಾರಿಯ ಭಾಷೆ ಬಳಸಿಯೂ ಗದರಿಸಿ ನೋಡಿದೆ. ಅವು ಜಪ್ಪಯ್ಯ ಎನ್ನಲಿಲ್ಲ. ನನ್ನ ಮಾತಿನ ವರ್ಝುನ್ ಅವರ ಮೇಲೆ ಪರಿಣಾಮ ಬೀರಿಲ್ಲ ಎನ್ನುವುದು ಖಾತ್ರಿಯಾದ ಮೇಲೆ "ಎಲ್ರು ಮೇಲೂ ಪೊಲೀಸ್ ಕಂಪ್ಲೇಂಟ್

ಕೊಡ್ತೀನಿ ಹುಶಾರ್" ಎಂದು ಹೆಚ್ಚುವರಿ ಆವಾಜ್‌ವೊಂದನ್ನು ಬೀಸಿ ಒಗೆದೆ. ನನ್ನ ಸುಳ್ಳು ಧಮಕಿಯನ್ನು ನಿಜವೆಂದು ಅರಿತ ಒಬ್ಬ ಪುಕ್ಕಲ ಹುಡುಗ ಒಂದು ಹೆಜ್ಜೆ ಹಿಂದೆ ಸರಿದು ನಿಂತ. ನನಗೆ ಅಷ್ಟು ಸಾಕಿತ್ತು. ಆಗ ನನ್ನ ರೌಡಿಸಂನ ಮೇಲೆ ಒಂದಿಷ್ಟು ನಂಬಿಕೆ ಹುಟ್ಟಿತು. ಇನ್ನು ಇವರನ್ನು ಸುಲಭವಾಗಿ ಹೆದರಿಸಬಹುದೆಂಬ ನಂಬಿಕೆಯೂ ಹುಟ್ಟಿತು.

ಗುಂಪಿನಲ್ಲಿ ಉಳಿದ ಅಳ್ಳೆಚಿಳ್ಳೆಗಳ ಮೇಲೆ ನಾನೂ ಮಲ್ಲಿಕಾರ್ಜುನ ಕಬ್ಬೂರು ಮುಗಿಬಿದ್ದು ತಾರಕಸ್ವರದಲ್ಲಿ ಅಬ್ಬರಿಸಾಡಿದೆವು. ನಮ್ಮ ರಕ್ಕಸ ನಾಲಿಗೆಗೆ ನಡುಗಿದ ಅವು ಚದುರಿ ಓಡಿ ಹೋದವು. ನಮ್ಮ ವಿಕಟ ಧ್ವನಿಗೆ ಹೆದರಿದ ಆ ಬೆಳ್ಳಕ್ಕಿಯೂ ಇಲ್ಲೆಲ್ಲಾದರೂ ಬಾಂಬು ಗೀಂಬು ಬಿತ್ತೆ ಎನ್ನುವಂತೆ ಒಮ್ಮೆ ತಡಕಾಡಿಕೊಂಡು ರೆಕ್ಕೆ ಬಡಿಯಿತು.

ಸೂಕ್ಷ್ಮವಾಗಿ ಹಕ್ಕಿಯನ್ನೊಮ್ಮೆ ಹಿಡಿದು ಗಮನಿಸಿದೆ. ಹಗ್ಗ ಬಿಗಿದ ಜಾಗದಲ್ಲಿ ಕಾಲಿನ ಚರ್ಮ ಕಿತ್ತು ಹೋಗಿತ್ತು. ಹುಡುಗರ ಕೈಯಲ್ಲಿ ಸಿಕ್ಕು ಹೈರಾಣಾಗಿದ್ದ ಕೊಕ್ಕರೆಯ ಕಾಲಿನ ಹಗ್ಗ ಮೊದಲು ತೆಗೆದು ಬಿಸಾಡಿದೆ. ಅದು ಮತ್ತೆ ಹಾರುವ ಸ್ಥಿತಿಯಲ್ಲೂ ಇರಲಿಲ್ಲ. ಗಾಯದ ಜಾಗಕ್ಕೆ ಕೈಗೆ ಸಿಕ್ಕ ಯಾವುದೋ ಚರ್ಮವ್ಯಾಧಿಯ ಮುಲಾಮೊಂದನ್ನು ಹಚ್ಚಲು ಯತ್ನಿಸಿದೆ. ನನ್ನನ್ನೂ ವಿಲನ್ ಎಂದೇ  ಭಾವಿಸಿದ ಕೊಕ್ಕರೆ ನನ್ನ ಕೈಯ ಹಿಡಿತದಲ್ಲಿ ನಿಲ್ಲಲು ತಕರಾರು ತೆಗೆಯಿತು. ತೀರಾ ಗಾಬರಿಗೊಂಡಿದ್ದ ಅದನ್ನು ಈಗಲೇ ಒಯ್ದು ಆ ಮರದ ಬಳಿ ಬಿಟ್ಟರೆ ಹೇಗೆಂದೂ ಒಮ್ಮೆ ಯೋಚಿಸಿದೆ. ಆದರೆ ಯಾಕೋ ಮನಸ್ಸು ಬರಲಿಲ್ಲ.

ಮಧ್ಯಾಹ್ನದ ಸಮಯವಾಗಿದ್ದರಿಂದ ಈ ಹಕ್ಕಿಯ ಅಪ್ಪ ಅಮ್ಮ ಆ ಹುಣಸೆ ಮರದ ಮೇಲೆ ಇರಲಿಲ್ಲ. ಮೇವು ತರಲು ಹೋಗಿದ್ದವು. ಈ ಹಕ್ಕಿಯ ಅಣ್ಣ ತಮ್ಮಂದಿರು, ಅಕ್ಕ ತಂಗಿಯರು ಮಾತ್ರ ಚಿಂಯ್ಯೋ.. ಪಿಂಯ್ಯೋ ಎಂದು ಬೊಂಬಡ ಬಜಾಯಿಸುತ್ತಿದ್ದವು. ಹೆರಿಗೆ ಆಸ್ಪತ್ರೆಯಂತಿದ್ದ ಆ ಮರದ ಕೆಳಗೆ ಇದನ್ನು ಒಯ್ದು ಬಿಟ್ಟರೆ ಈ ಹುಡುಗರು ಮತ್ತೆ ಸೆರೆ ಹಿಡಿಯಬಹುದು ಎಂಬ ಆತಂಕ ಹುಟ್ಟಿತು. ಇವುಗಳನ್ನೆ ಹಿಡಿದು ತಿಂದು ಕಾಲಾಯಾಪನೆ ಮಾಡುವ ಕಳ್ಳ ಬೆಕ್ಕುಗಳೂ, ಖದೀಮ ನಾಯಿಗಳೂ ಆ ಮರದ ಬುಡದಲ್ಲೇ ಡೇರೆ ಹಾಕಿಕೊಂಡಿದ್ದವು. ಈ ಹಿಂದೆ ಅವು ಹಿಡಿದು ಜಗಿದು ತಿಂದ ಅನೇಕ ಅಮಾಯಕ ಮರಿಗಳನ್ನು ನಾನೇ ಕಣ್ಣಾರೆ ಕಂಡಿದ್ದೆ. ಹೀಗಾಗಿ ಅದನ್ನು ತಕ್ಷಣದಲ್ಲಿ ಬಿಡುವುದು ಸರಿಯಲ್ಲ ಅಂತನ್ನಿಸಿತು. ಒಂದಿಷ್ಟು ಆರೈಕೆ ಮಾಡಿ ಗಾಯವಾಸಿಯಾದ ಮೇಲೆ ಬಿಟ್ಟರಾಯಿತೆಂದು ಯೋಚಿಸಿ ಸುಮ್ಮನಾದೆ. ಅಷ್ಟಕ್ಕೂ ಅವು ತಮ್ಮೂರಿಗೆ ಹಾರಿ ಹೋಗಲು ಇನ್ನೂ ಸಾಕಷ್ಟು ಸಮಯವಿತ್ತು.

ಹಕ್ಕಿ ಹಿಡಿದು ತಂದ ಕಿತಾಪತಿ ಹುಡುಗರು ಇನ್ನು ನಿಂತಿದ್ದು ನನ್ನ ವೈದ್ಯೋಪಚಾರವನ್ನು ದೂರದಿಂದ ಗಮನಿಸುತ್ತಿದ್ದರು. ಆಗ ಆ ಗುಂಪಿನಲ್ಲಿ ಸಣ್ಣ

ಚರ್ಚೆಯೊಂದು ಶುರುವಾಗಿತ್ತು. “ಅಯ್ಯೋ ಪಾಪಚ್ಚಿ ಕಣೋ. ಅದರಮ್ಮ ಈ ಪಾಪು ಇಲ್ಲದ್ದು ನೋಡಿ ಅದೆಷ್ಟೋ ಅಳುತ್ತೋ ಏನೋ” ಎಂದು ಕರುಣೆಯಿಂದ ಒಬ್ಬ ಸಣ್ಣ ಹುಡುಗ ಅವಲತ್ತುಕೊಂಡ. ಇನ್ನೊಬ್ಬ “ಇದು ಹೋರ್ದ್ರು ಪರ್ವಾಗಿಲ್ಲ ಕಣೋ ಅದರ ಹತ್ರ ಇನ್ನೂ ಎಷ್ಟೊಂದು ಮರಿಗಳಿದ್ದಾವೆ ಗೊತ್ತಾ” ಎಂದು ಲೆಕ್ಕಾಚಾರದ ಮಾತನ್ನಾಡಿದ. “ಅದು ಮತ್ತೆ ಸಿಕ್ರೆ ಚಿಂದಿ ಉಡೀಸ್ ಮಾಡೋಣ ಕಣೋ” ಎಂದು ಕಟ್ಟುಮಸ್ತಾದ ಹುಡುಗ ಹಕ್ಕಿ ಮತ್ತೆ ಸಿಕ್ಕೇ ಸಿಗುತ್ತೆ ಎನ್ನುವ ನಿರೀಕ್ಷೆಯಲ್ಲೇ ಗೊಣಗಾಡುತ್ತಿದ್ದ.

ಆ ಗುಂಪಿನ ಎಳೆಯ ಹುಡುಗನೊಬ್ಬ ಮಾತ್ರ ಮುಗ್ಧವಾಗಿ ಹತ್ತಿರ ಬಂದು “ಈ ಹಕ್ಕಿಯನ್ನು ಈಗ ನೀವೇನು ಮಾಡ್ತಿರಿ ಅಂಕಲ್” ಎಂದು ನಯವಾಗಿ ಕೇಳಿದ. ಅಷ್ಟರಲ್ಲಿ ಗುಂಪು ಕೊಂಚ ಹತ್ತಿರ ಬಂದಿತು. ನಾನವನಿಗೆ ಉತ್ತರ ಕೊಡುವ ಮೊದಲೆ ಮತ್ತೊಬ್ಬ ಪೋರ “ಇನ್ನೇನ್ ಮಾಡ್ತಾರೆ, ನಾವು ಹೋದ್ಮೇಲೆ ಸುಟ್ಕೊಂಡು ತಿಂತಾರೆ” ಎಂದು ಖಾರವಾಗಿ ತನ್ನ ತೀರ್ಮಾನವನ್ನು ಪ್ರಕಟಿಸಿದ. ಅವನ ಆ ಮಾತಿಗೆ ನಾನೊಮ್ಮೆ ನಕ್ಕೆ. ನನ್ನ ನಗು ಅವರಲ್ಲಿ ಸಲುಗೆ ಹೆಚ್ಚಿಸಿತು. ಇದೇ ನೆವ ಮಾಡಿಕೊಂಡು ತೀರಾ ಹತ್ತಿರಕ್ಕೆ ಬಂದು ನಿಂತಿತು.

ಆದರೂ, ನಾನೇನು ಮಾತಾಡದೆ ಸುಮ್ಮನೆ ಅವರ ಮಾತುಗಳ ಹಕ್ಕಿ ಆರೈಕೆ ಮಾಡುತ್ತಲೇ ಕೇಳುತ್ತಿದ್ದೆ. “ಅದನ್ನ ಸಾಕಿ ಮೊಟ್ಟೆ ಇಟ್ಟು ಮರಿ ಮಾಡಿಸ್ತಾರೆ ಕಣೋ. ಆಮೇಲೆ ಕೊಯ್ಕೊಂಡು ತಿಂತಾರೆ” ಎಂದು ಮತ್ತೊಬ್ಬ ಪೋಕರಿ ತನ್ನ ಸಮಜಾಯಿಷಿ ವಿಸ್ತರಿಸಿದ. ಆ ಹಕ್ಕಿಯ ಜೊತೆ ಮುಂದೆ ನಾನು ಏನೇನು ಮಾಡಬಹುದು ಎಂಬುದನ್ನೆಲ್ಲಾ ಅವರವರೇ ಊಹಿಸಿಕೊಂಡು ಬಾಯಿಗೆ ಬಂದಂತೆ ಮಾತಾಡಿಕೊಳ್ಳುತ್ತಿದ್ದರು.

ಅವರು ಕೊಂಚ ಮೌನವಾದ ಮೇಲೆ “ನಿಮಗೂ ಹೀಗೆ ಹಗ್ಗ ಹಾಕಿ ಯಾರಾದರೂ ಎಳ್ಕೊಂಡು ಹೋದ್ರೆ ನಿಮ್ಮಪ್ಪ ಅಮ್ಮ ಏನ್ಮಾಡ್ತಾರೆ ಹೇಳ್ರಿ” ಎಂದು ಕೇಳಿದೆ. ಅದಕೊಬ್ಬ “ಅಳ್ತಾರೆ” ಎಂದ. ಮತ್ತೊಬ್ಬ “ನಮ್ಮಪ್ಪ ಕೋಲು ತಗೊಂಡು ಹೊಡಿತಾರೆ” ಎಂದ. ಆಗ ನಾನು “ನೋಡಿ ನಿಮ್ಮನ್ನು ಯಾರಾದ್ರೂ ಹಿಡ್ಕೊಂಡು ಹೋದ್ರೆ ನಿಮ್ಮಪ್ಪ ಅಮ್ಮನಿಗೆ ಎಷ್ಟು ಬೇಜಾರಾಗುತ್ತೋ ಅಷ್ಟೇ ಈ ಪಕ್ಷಿಯ ಅವ್ವ ಅಪ್ಪನಿಗೂ ನೋವಾಗುತ್ತಲ್ವ. ಮನುಷ್ಯರಿಗೆ ಬಾಯಿ ಇದೆ ಎಲ್ಲಾ ಹೇಳ್ಕೋತೀವಿ. ಆದರಿವು ಮೂಕ ಪಕ್ಷಿಗಳು ತಾನೆ ತಮ್ಮ ಕಷ್ಟ ಹೆಂಗೆ ಹೇಳ್ಕೋತಾವೆ ನೀವೆ ಹೇಳಿ? ಅದಕ್ಕೆ ಇದರ ಅಪ್ಪ ಅಮ್ಮನ ಹತ್ರ ಇದನ್ನ ವಾಪಸ್ಸು ಕಳಿಸ್ತೀನಿ. ಅವುಕ್ ಮಾತ್ರ ಇದರ ಭಾಷೆ, ಬೇಜಾರು, ಅಳು, ಕಷ್ಟ ಎಲ್ಲಾ ಅರ್ಥವಾಗುತ್ತೆ. ಅಂದಹಾಗೆ ನೀವಿನ್ನು ಹೋಗಿ. ಹಕ್ಕಿ ವಿಷಯಾನ ಇಲ್ಲಿಗೆ ಬಿಟ್ಟು ಬಿಡಿ. ಬೇರೆ ಏನಾದ್ರೂ ಆಟ ಇದ್ರೆ ಆಡ್ಕೊಳ್ಳಿ ಹೋಗಿ” ಎಂದು ಮತ್ತೊಮ್ಮೆ ಹದವಾಗಿ ಗದರಿಸಿ ಅವರನ್ನೆಲ್ಲಾ ಸಾಗ ಹಾಕಿದೆ.

ಹಕ್ಕಿಯನ್ನು ಹೀಗೆ ಪುಕ್ಕಟೆ ಬಿಟ್ಟು ಹೋಗಲು ಅವರ್‍ಯಾರಿಗೂ ಮನಸ್ಸೇ ಇರಲಿಲ್ಲ. ಆದರೂ ನಾನು "ಪೊಲೀಸ್ ಕಂಪ್ಲೇಂಟ್ ಕೊಡ್ತಿನಿ" ಎಂಬ ಬೆದರಿಕೆಯ ಮಾತೇ ಅವರಲ್ಲಿ ಗಟ್ಟಿಯಾಗಿ ಬೇರೂರಿ ಹೋಗಿತ್ತು. ಇನ್ನು ಹೆಚ್ಚು ಇವನ ಹತ್ತಿರ ಮಾತಾಡಿ ಏನೇನೂ ಪ್ರಯೋಜನವಿಲ್ಲವೆಂದು ಅರಿತ ಅವರು ಗೊಣಗಾಡುತ್ತಾ ಮತ್ತೊಂದು ಹಕ್ಕಿಯ ಬೇಟೆಗೆ ಆ ಹುಣಸೆ ಮರದ ಕಡೆ ಓಡಿ ಹೋದವು.

ಜಲಚರಗಳನ್ನು ತಿಂದು ಬದುಕುವ ಕೊಕ್ಕರೆಗೆ ಏನು ತಿನ್ನಿಸಬೇಕು ಅನ್ನೋದು ನನಗೂ ಗೊತ್ತಿರಲಿಲ್ಲ. ದ್ರವ ರೂಪದ ಯಾವುದಾದರೂ ಆಹಾರ ಕೊಟ್ಟರೆ ಒಳ್ಳೆಯದೇನೋ ಎಂದುಕೊಂಡೆ. ರೂಮಿನಲ್ಲಿ ಕಾದು ತಣ್ಣಗಾಗಿದ್ದ ಹಾಲಿತ್ತು. ಇಂಕು ಹಾಕುವ ಫಿಲ್ಲರ್ ಬಳಸಿ ಅದರ ಬಾಯಿಗೆ ಹನಿಹನಿಯಾಗಿ ಹಾಲನ್ನು ಬಿಟ್ಟೆ. ಎಳೆದರೆ ರಬ್ಬರ್ ಟ್ಯೂಬಿನಂತೆ ಹಿಗ್ಗುವ ಅದರ ಉದ್ದ ಕುತ್ತಿಗೆಯಲ್ಲಿ ಹಾಲು ಗಳಗಳಾಂತ ಇಳಿದು ಕ್ಷಣಾರ್ಧದಲ್ಲಿ ಮಾಯವಾಗುತ್ತಿತ್ತು. ಅದರ ಬಾಯನ್ನು ಪೂರ್ತಿ ಕಳಚಿ ಒಳಗೆ ಇಣುಕಿದರೆ ಸುರಂಗ ಮಾರ್ಗದಂತೆ ಉದ್ದನೆಯ ಕೊಳವೆ ಕಾಣುತ್ತಿತ್ತು. ಬಾಯಿಂದ ವಿಚಿತ್ರ ದುರ್ವಾಸನೆಯೂ ಬರುತ್ತಿತ್ತು. ಮೀನು, ಹುಳ ಹುಪ್ಪಡಿ ತಿನ್ನುವ ಅದಕ್ಕೆ ಹಾಲು ಸವಿ ಎನಿಸಿತೋ, ಇಲ್ಲವೋ? ನಾನು ಯೋಚಿಸಲಿಲ್ಲ. ನನ್ನ ಬಲವಂತಕ್ಕೆ ಬೆಪ್ಪು ತಕ್ಕಡಿಯಂತೆ ಮುಖಮಾಡಿಕೊಂಡ ಅದು ಹಂತ ಹಂತವಾಗಿ ಎರಡು ಲೋಟ ಹಾಲನ್ನೂ ಸೊರಸೊರನೆ ಸೆಳೆದುಕೊಂಡಿತು.

'ಅಬ್ಬ! ಸ್ವಲ್ಪ ಹಾಲಾದರೂ ಕುಡೀತಲ್ಲ' ಎಂದು ಒಂದಿಷ್ಟು ಸಮಾಧಾನವಾಯಿತು. ಅಲ್ಲಿ ಹರಡಿಕೊಂಡಿದ್ದ ಮುಲಾಮು, ಲೋಟ, ಬಟ್ಟೆ, ಹಾಲಿನ ಪಾತ್ರೆ, ಎಲ್ಲಾ ಒಳಗೆ ಎತ್ತಿಡುವುದಿತ್ತು. ಆ ಪಕ್ಷಿಯನ್ನು ರೂಮಿನ ಒಂದು ಮೂಲೆಗೆ ಕೂರಿಸಿ ಒಳಗೆ ಹೋಗಿ ಮತ್ತೆ ಬಂದು ನೋಡುತ್ತೇನೆ. ಬಡ್ಡೀಮಂಗದು ಪಕ್ಷಿ ರಂಪರಾಣವನ್ನೇ ಮಾಡಿಬಿಟ್ಟಿತ್ತು. ಕುಡಿಸಿದ ಹಾಲನ್ನೆಲ್ಲಾ ನೆಲದ ಮೇಲೆ ಕಾರಿಕೊಂಡು ಅದರಲ್ಲೇನಾದರೂ ಪುಡಿ ಮೀನು ಸಿಗುತ್ತದೆಯೋ ಎಂದು ಕೊಕ್ಕಿನಿಂದ  ಕುಕ್ಕಿ ಕುಕ್ಕಿ ಹುಡುಕುತ್ತಿತ್ತು. ಕುಡಿಸಿದ ಹಾಲನ್ನು  ವಾಂತಿ ಮಾಡಿ, ಕೆಸರು ನೀರಲ್ಲಿ ಆಹಾರ ಹುಡುಕುವಂತೆ ವರ್ತಿಸುತ್ತಿದ್ದ ಅದರ ಅತಿರೇಕ ನೋಡಿ ನನಗೆ ಸಿಟ್ಟು ಬಂದಿತು.

'ಅನ್ಯಾಯವಾಗಿ ಸಂಜೆ ಟೀ ಮಾಡಿಕೊಂಡು ಕುಡಿಯುವ ಒಳ್ಳೆ ಗಟ್ಟಿಹಾಲನ್ನೇ ಮಣ್ಣು ಪಾಲು ಮಾಡಿತಲ್ಲ' ಎಂದು ಅದರ ಕಡೆ ಗುರಾಯಿಸಿ ನೋಡಿ ತಲೆಯ ಮೇಲೆ ರಪ್ಪೆಂದು ಬಡಿದೆ. ಏನೂ ಅರಿಯದೆ, ಮುಗ್ಧವಾಗಿ ನಿಂತಿದ್ದ ಅದು ಸಾವರಿಸಿಕೊಂಡು ಮರುಕದಿಂದ ನನ್ನೆಡೆಗೆ ನೋಡಿತು. ಪಾಪ ಅದು ಊಟ ಮಾಡುವ ಸ್ವಭಾವವನ್ನಲ್ಲಿ ಸಾದರಪಡಿಸಿತ್ತು. ಆದರೂ ಅದರ ಆ ಅಸಭ್ಯ ವರ್ತನೆ ನನಗೆ ತಕ್ಷಣಕ್ಕೆ ಸರಿತೋರಲಿಲ್ಲ. ಸುಖಾಸುಮ್ಮನೆ ಗ್ರಹಚಾರ ಮೈಮೇಲೆ ಎಳೆದುಕೊಂಡೆನಲ್ಲ! ಇದನ್ನು ಸಾಕುವ ರೀತಿಯಾದರೂ ಹೇಗಿದ್ದೀತು; ಅದರ ತಾಯಿ ಇದಕ್ಕೆ ಪೂರ

ಶಿಕ್ಷಣ ಕೊಟ್ಟಿದೆಯೋ, ಇಲ್ಲವೋ? ಪ್ರಕೃತಿ ಅದಕ್ಕೆ ಕರುಣಿಸಿರುವ ರೀತಿನೀತಿಯಂತೆ ಅದು ಬದುಕು ಕಲಿತಿದೆ. ಅದರಿಂದ ಮನುಷ್ಯನ ರೀತಿರಿವಾಜುಗಳನ್ನು ನಿರೀಕ್ಷಿಸುತ್ತಿರುವ ನಾನೊಬ್ಬ ಪೆಕರನಲ್ಲವೇ? ಅದಕ್ಕೆ ಪಥ್ಯವೇ ಆಗದ ಆಹಾರ ಕೊಟ್ಟರೆ ಪಾಪ ಅದೇನು ಮಾಡೀತು? ನಾಟಿಕೋಳಿಗಳನ್ನಷ್ಟೆ ಸಾಕಿದ ಅನುಭವ ಇರುವ ನಾನು ಈ ಶನಿಯನ್ನು ಯಾಕಾದರೂ ಮೈಮೇಲೆ ಎಳೆದುಕೊಂಡೆನೋ? ಇದನ್ನು ಆ ಹುಡುಗರಿಂದ ಕಿತ್ತುಕೊಂಡದ್ದೇ ಒಂದು ಅಪರಾಧವಾಯಿತಲ್ಲ? ಮುಂದೇನಪ್ಪ ಮಾಡುವುದು ಎಂಬ ಕೆಟ್ಟಚಿಂತೆಯಲ್ಲಿ ಸುಮ್ಮನೆ ನಿಂತುಕೊಂಡು ಯೋಚಿಸಿತೊಡಗಿದೆ.

ಆಗ ಗೆಳೆಯ ಕಬ್ಬೂರು "ಲೇ ಮಂಗ ನಿನಗೆ ಮಾಡೊಕ್ಕೆ ಕೆಲ್ಸ ಇಲ್ವೇನೋ? ಪರೀಕ್ಷೆ ಹತ್ರ ಇಟ್ಕೊಂಡು ಓದೋದು ಬಿಟ್ಟು ಅದ್ಯಾವುದೋ ಸುಡುಗಾಡು ಕೊಕ್ಕರೆ ಹಿಡ್ಕೊಂಡು ಬಂದು ಬಾಣಂತನ ಮಾಡ್ತಾ ನಿಂತಿದ್ದೀಯಲ್ಲ ನಿನಗೆ ಬುದ್ದಿ ಐತೆನೋ ತಿಕಲ. ಅದರ ತಂದೆ ತಾಯೀನೆ ಅವುನ್ನ ಸಾಕಕ್ಕೆ ಆಗದೆ ಒದ್ದಾಡ್ತವೆ. ಅಂಥದ್ರಲ್ಲಿ ನೀನು ಅದನ್ನು ಸಾಕಕ್ಕೆ ಆಗುತ್ತೇನಲೇ? ಮೊದ್ಲು ಹೊರ್ಗೆ ತೊಗೊಂಡು ಹೋಗಿ ಬಿಡು. ಪ್ರಕೃತೀನೆ ಅದಕ್ಕೆ ಬದಕೋದನ್ನ ಕಲಿಸುತ್ತೆ. ನೇಚರ್ ಕೆಲಸಾನ ನೀನು ನಾನು ಮಾಡಕ್ಕಾಗುತ್ತೇನೊ? ನಾವೇ ಎಲ್ರಿಗೂ ಕಲ್ಸೀತ್ತೀವಿ, ಎಲ್ಲವನ್ನೂ ನಿಯಂತ್ರಿಸ್ತೀವಿ ಅಂತ ಮನುಷ್ಯರಾದ ನಾವು ಅಂದ್ಕೊಳ್ತೀವಿ ನೋಡು ಅದೇ ನಮ್ಮ ದೊಡ್ಡ ಮೂರ್ಖತನ. ಮನುಷ್ಯನಿಗಿರೋ ಪರಮ ದುರಂಹಕಾರ ಅಂದ್ರೆ ಇದೇ ನೋಡು. ಒಂದು ಇರುವೆ ಸಾಕೋ ಯೋಗ್ಯತೇನೂ ನಮಗಿಲ್ಲ ಕಣೋ. ಮುಚ್ಕೊಂಡು ಅದರ ಪಾಡಿಗೆ ಅದನ್ನ ಬಿಟ್ಟು ಬಿಡು. ಪಾಪ ಯಾಕದರ ಪ್ರಾಣ ತೆಗೀತೀಯಾ?" ಎಂದು ವೇದಾಂತಿಯಂತೆ ನನಗೆ ಪ್ರವಚನ ನೀಡಿದನು.

ಅವನೆಷ್ಟೇ ನೀತಿ ಪಾಠ ಒದರಿದರೂ ನನಗೆ ಒಂದೆರಡು ದಿನವಾದರೂ ಈ ಹಕ್ಕಿಯನ್ನು ಸಾಕಲೇಬೇಕೆಂಬ ಹುಚ್ಚುತನ ತಲೆಗೆ ಮೆತ್ತಿ ಹೋಗಿತ್ತು. ಗಾಯಾಳುವಾದ ಇದನ್ನು ಈ ಸ್ಥಿತಿಯಲ್ಲಿ ಹೊರಗೆ ಬಿಟ್ಟರೆ ಆಪತ್ತಿಗೆ ಸಿಲುಕಬಹುದು ಎಂಬ ಹೆದರಿಕೆಯೂ ಇತ್ತು. ಹೀಗಾಗಿ, ಆಗಿದ್ದಾಗಲಿ ಎಂದು ಗೆಳೆಯನ ವೇದವಾಕ್ಯವನ್ನು ಧಿಕ್ಕರಿಸಿ ನಿಂತೆ. ಸಾಕುವ ಹುಂಬುತನ ನನ್ನಲ್ಲಿ ಪ್ರಬಲವಾಗತೊಡಗಿತು.

ಸಂಜೆ ಹೊತ್ತಿಗೆ ನಾಲೆಯ ಕಡೆ ತಿರುಗಾಡಿಕೊಂಡು ಹೋಗಿ ಒಂದಿಷ್ಟು ಪುಡಿ ಮೀನುಗಳನ್ನು ಬೇಟೆಯಾಡಿಕೊಂಡು ತಂದೆ. ಸತ್ತ ಮೀನನ್ನು ತಿನ್ನುವುದೋ, ಇಲ್ಲವೋ? ಎಂದು ದಿಗಿಲಾಗಿ ಪ್ಲಾಸ್ಟಿಕ್ ಕವರಿನೊಳಗೆ ನೀರು ತುಂಬಿಕೊಂಡು ಸಣ್ಣಮೀನು ಮರಿಗಳನ್ನು ಜೀವಂತವಾಗಿರಿಸಿಕೊಂಡು ಬಂದಿದ್ದೆ. ಕೊಕ್ಕರೆ ಮರಿಯ ಚಿಮಟದಂತಹ ಬಾಯನ್ನು ಬಿಡಿಸಿ ಒಂದೊಂದೇ ಜೀವಂತ ಮೀನುಗಳನ್ನು ಅದರ ಗಂಟಲಿಗೆ ಪೋಣಿಸಿದೆ. ಕೊಳವೆಯಾಕಾರದ ಸುರಂಗದಲ್ಲಿ ಮೀನುಗಳು ಪುಳಕ್ಕೆಂದು ಹಾರಿ, ದಾರಿ ಸಿಕ್ಕಿತೆಂಬ ಸಂಭ್ರಮದಲ್ಲಿ ಸಾವಿನ ಮನೆಗೆ ಓಡಿ ಹೋದವು. ಆ ಮರಿ

ಮೀನುಗಳು ಸ್ವತಂತ್ರವಾದೆವು ಎಂಬ ಭ್ರಮೆಯಲ್ಲಿದ್ದವು. ಸಧ್ಯ ಬಚಾವಾಗಿ ಮತ್ತೆ ನೀರಿನ ಸೆಲೆಗೆ ಸೇರುತ್ತಿದ್ದೇವೆ ಎಂಬ ಬಿಡುಗಡೆಯ ಭಾವ ಅವುಗಳಲ್ಲಿ ಎದ್ದು ಕಾಣುತ್ತಿತ್ತು. ಉಸಿರು ನಿಲ್ಲಿಸುವ ಉದರಕ್ಕೆ ಹೋಗುತ್ತಿದ್ದೇವೆ ಎಂಬ ಕಿಂಚಿತ್ತು ಅರಿವೂ ಅವಕ್ಕಿರಲಿಲ್ಲ.

ನೀರಿನಿಂದ ತೆಗೆದಾಗ ಒದ್ದಾಡಿ, ಎಗರಾಡುತ್ತಿದ್ದ ಅವು ಹೈವೆ ರಸ್ತೆಯಲ್ಲಿ ಬೈಕುಗಳು ಓಡುವಂತೆ ಅವಸರವಾಗಿ ಕೊಕ್ಕರೆಯ ಜಠರಾಗ್ನಿಗೆ ನುಗ್ಗಿ ಹೋದವು. ಬಾಯನ್ನು ಅಗಲಿಸಿಕೊಂಡು ಅಮಾಯಕವಾಗಿ ನಿಂತಿದ್ದ ಕೊಕ್ಕರೆ ಒಂದೊಂದು ಗುಕ್ಕಿಗೂ ಹಿತವಾಗಿ ಮುಗುಳ್ನಗುತ್ತಿತ್ತು. ಅದರ ಹೆತ್ತವ್ವನೂ ಇಷ್ಟೊಂದು ಮೀನುಗಳನ್ನು ಒಟ್ಟಿಗೆ ತಿನ್ನಿಸಿರಲಿಕ್ಕಿಲ್ಲ! ಹದಿನೈದಕ್ಕೂ ಮಿಕ್ಕಿ ಪುಡಿಮೀನುಗಳನ್ನು ಅದಕ್ಕೆ ತುರುಕಿದ ಮೇಲೆ ನನಗೂ ಒಂದಿಷ್ಟು ಸಮಾಧಾನವಾಯಿತು. ಆಮೇಲೆ ಒಂದಿಷ್ಟು ನೀರನ್ನೂ ಕುಡಿಸಿದೆ. ರಾತ್ರಿ ಹೊತ್ತು ಹಾರಿ ಹೋಗದಿರಲೆಂದು ಪಕ್ಕದ ಮನೆಯ ಪದ್ಮಕ್ಕನವರ ಮನೆಯಿಂದ ಕೋಳಿ ಮುಚ್ಚುವ ಒಂದು ಕಕ್ಕೆ ಕಡ ತಂದು ಅದರ ಮೇಲೆ ಕವುಚಿದೆ. ಈ ಅಸಂಬದ್ಧ ಕೆಲಸಗಳನ್ನೆಲ್ಲಾ ತಣ್ಣನೆಯ ಅಸಹನೆಯಿಂದ ಗಮನಿಸುತ್ತಿದ್ದ ಗೆಳೆಯ “ಬಾಳೆಹಣ್ಣು, ಬೀಡಾ, ಸಿಗರೇಟು, ಏನಾದ್ರೂ ಬೇಕಂತಾ....! ಅದ್ನೂ ಒಂದು ಮಾತು ಹಂಗೆ ಕೇಳಿ ಬಿಡು” ಎಂದು ಕಿಚಾಯಿಸಿದ. “ಅದೆಲ್ಲಾ ಅದಕ್ಕಿನ್ನೂ ಅಭ್ಯಾಸ ಆಗಿಲ್ಲವಂತೆ; ಕನ್ನಡ ಎಂ.ಎ. ಓದೋಕೆ ಈ ಯೂನಿವರ್ಸಿಟಿಗೆ ಬರುತ್ತಲ್ಲ ಆಗ ಪ್ರಾಕ್ಟೀಸ್ ಮಾಡುತ್ತಂತೆ” ಎಂದು ವ್ಯಂಗ್ಯದಿಂದ ನಕ್ಕೆ. ನನ್ನ ತಲೆಹರಟೆಯ ಪ್ರಯೋಗಗಳು ಅವನಿಗೂ ಸಖತ್ ಕಿರಿಕಿರಿ ತಂದಿದ್ದವು. “ನೀನು ಮೆಂಟಲ್ ಕಣೋ” ಎಂದು ಗೊಣಗಾಡಿಕೊಂಡು ಕಬ್ಬೂರು ಅಡಿಗೆ ಮನೆ ಕಡೆ ರಾತ್ರಿಯ ಊಟ ಬೇಯಿಸಲು ಎದ್ದು ಹೋದ

ಮಾರನೆಯ ದಿನ ಎದ್ದು ನೋಡಿದರೆ ಕೊಕ್ಕರೆ ಮತ್ತೊಂದು ಹೊಸ ರಂಪ ಮಾಡಿ ಕೂತಿತ್ತು. ನೆಲದ ತುಂಬಾ ಕಕ್ಕದ ರಾಡಿಯನ್ನೇ ಎಬ್ಬಿಸಿತ್ತು. ಕೆಂಪು ಗಾರೆ ನೆಲದ ಮೇಲೆ ತೆಳ್ಳಗೆ ಬಿಳಿ ಮಾಸಲು ಬಣ್ಣದ ದೋಸೆಗಳನ್ನು ಹೊಯ್ದಿತ್ತು. ಹತ್ತಿರ ಹೋದರೆ ಗಬ್ಬು ವಾಸನೆಯೂ, ಮೀನಿನ ಗಮಟು ನಾತವೂ ಮೂಗಿಗೆ ಅಮರುತ್ತಿತ್ತು. ಮುಚ್ಚಿದ ಕುಕ್ಕೆಯನ್ನು ಆಟದ ಸಾಮಾನಿನಂತೆ ರೂಮಿನ ತುಂಬಾ ತಳ್ಳಾಡಿಕೊಂಡು ದೊಡ್ಡ ಚಿತ್ರಶಾಲೆಯನ್ನೇ ಅದು ಸೃಷ್ಟಿಸಿತ್ತು.

“ತಿಂದದ್ದನ್ನೆಲ್ಲಾ ಸುಣ್ಣದಂತೆ ಬೆಳ್ಳಗೆ ಮಾಡುವ ಇದರ ವಿಸ್ಮಯ ವಿಸರ್ಜನೆ ಕ್ರಿಯೆ ನೋಡು ಮಿತ್ರ” ಎಂದು ಕಬ್ಬೂರಿಗೆ ಕರೆದು ತೋರಿಸಿದೆ. “ಬೆಳಗ್ಗೆ ಬೆಳಿಗ್ಗೇನೆ ಎದ್ದು ಆ ಸುಡುಗಾಡು ಕರ್ಮಾನ ನನಗೆ ತೊರ್ಸ್ತಿದ್ದಿಯಲ್ಲ? ನಿನ್ನ ನಟ್ಟು ಬೋಲ್ಟು ಪೂರ್ತಿ ಬಿದ್ದೋಗಿದ್ದಾವೆ ಕಣೋ! ಮೊದಲು ಅದನ್ನ ತೆಗೆದು ಹೊರಗೆ ಎಸೀತಿಯೋ? ಇಲ್ಲ ನಾನೇ ಬಿಸಾಕಲೋ? ಆ ಅನಿಷ್ಟಾನ” ಎಂದು ಮತ್ತೆ ಉಗ್ರನಾದ. “ಇರಲಿ ಬಿಡಲೇ, ಒಂದು ಪಕ್ಷಿಯನ್ನ ಆಪತ್ ಕಾಲದಲ್ಲಿ ಕಾಪಾಡಿ ಸಾಕಿದ ಪುಣ್ಯನಾದ್ರೂ

ಸಿಗುತ್ತೆ. ನೋಡೋ ಮಂಗಳೂರಿನ ಕಡೆ ಹಾಕೊ ನೀರ್ ದೋಸೆನ ಎಷ್ಟು ಕಲಾತ್ಮಕವಾಗಿ ಹಾಕಿದೆ. ಗಮನವಿಟ್ಟು ನೋಡು ಅದರಲ್ಲಿ ಆನೇಕ ನವ್ಯ ಶೈಲಿಯ ಚಿತ್ರಗಳು ಕಾಣುತ್ತವೆ" ಎಂದು ನನ್ನ ಒಣವೇದಾಂತ ಬಿಚ್ಚಿದೆ. ನನ್ನ ಮಾತಿನಿಂದ ಮುಖವನ್ನು ಅಸಹ್ಯ ಮಾಡಿಕೊಂಡ ಅವನು; ರಾತ್ರಿಯೆಲ್ಲಾ ಪಕ್ಷಿ ನಿರ್ವಹಿದ್ದ ಕೆಲಸವನ್ನೇ ತಾನೂ ಪೂರೈಸಲು ಹಿತ್ತಲ ಕಡೆಗೆ ನೀರಿಡಿದು ಹೊರಟನು.

"ಆಸರೆಗೆ ಕವುಚಿಕೊಳ್ಳಲು ಪುಟ್ಟಿ ಏನಾದ್ರೂ ಬೇಕಾದ್ರೆ ಇಲ್ಲಿದೆ ತಗೊಂಡು ಹೋಗಲೇ" ಎಂದು ಹೇಳಿ ನಾನವನ ಸಿಟ್ಟನ್ನು ಮತ್ತಷ್ಟು ಉರಿಸಿದೆ. ಅವನು ಎರ್ರಾಬಿರ್ರಿ ಹೊಸ ಬಗೆಯ ಬೈಗುಳ ಒಗೆಯುತ್ತಾ ಹೊರಟು ಹೋದನು. ಆಮೇಲೆ ಬಿಳಿ ಕೊಕ್ಕರೆ ಮರಿ ಮಾಡಿಟ್ಟಿದ್ದ ಫಜೀತಿಯನ್ನೆಲ್ಲಾ ಬಳಿದು ಬಿಸಾಡಿದೆ. ಫೆವಿಕಲ್ಲಿನಂತೆ ಅಂಟಿದ್ದ ಕಕ್ಕವನ್ನು ಕೆಲವು ಕಡೆ ಕೆರೆಕೆರೆದು ತೆಗೆಯಬೇಕಾಯಿತು. ಇದನ್ನು ತಾಜಾ ಸಂಗ್ರಹಿಸಿದರೆ ಪುಸ್ತಕಗಳಿಗೆ ಅಂಟಿಸಲು ಒಳ್ಳೆ ಗೋಂದಾಗುವುದಲ್ಲ ಎಂಬ ಐಡಿಯಾವೂ ಹೊಳೆಯಿತು. ಬಾಲ್ಯದಲ್ಲಿ ಬೇವಿನ ಮರದ ಬೊಡ್ಡೆಯಲ್ಲಿ ಸುರಿಯುವ ಮೇಣವನ್ನು ತಂದಿಟ್ಟುಕೊಂಡು ಬಳಸುತ್ತಿದ್ದ ಸಂದರ್ಭಗಳು ನೆನಪಾದವು.

ಹಕ್ಕಿಗೆ ಲಕ್ಸ್ ಸೋಪು ತಿಕ್ಕಿ ಒಂದು ಸೊಗಸಾದ ಮಜ್ಜನ ಮಾಡಿಸಿದೆ. ಜೀವಮಾನದಲ್ಲಿ ಸೋಪಿನ ಮುಖವೇ ನೋಡದ ಆ ಹಕ್ಕಿ ಪೆಕರನಂತೆ ನಿಂತು ಹಠ ಮಾಡದೆ ಸ್ನಾನ ಮಾಡಿಸಿಕೊಂಡಿತು. ನಂತರ ರೆಕ್ಕೆ ಬಡಿದುಕೊಂಡು ಕೊಕ್ಕಿನಲ್ಲಿ ತಾನೇ ಮೈ ನೀವಿಕೊಂಡು ಪುಕ್ಕಗಳ ಸರಿ ಮಾಡಿಕೊಂಡಿತು. ಎರಡು ಸಲ ಮೈ ಕೊಡವಿಕೊಂಡು ಉಳಿದ ತುಂತುರು ಹನಿಗಳ ರೂಮಿನ ತುಂಬಾ ಪನ್ನೀರಿನಂತೆ ಸಿಡಿಸಿತು.

ಅವತ್ತು ಬೆಳಗ್ಗೆ ಬೇಗ ತರಗತಿಗೆ ಹೋಗಬೇಕಾಗಿತ್ತು. ಹೀಗಾಗಿ ಚಾನೆಲ್ ಕಡೆ ಹೋಗಿ ಪುಡಿಮೀನು ಹಿಡಿದು ತರುವಷ್ಟು ಪುರುಸೊತ್ತು ಇರಲಿಲ್ಲ. ಭೂತಾಯಿ ಮೀನು ತಂದು ಬೆಳಿಗ್ಗೆ ಬೆಳಿಗ್ಗೇನೆ ಬೀದಿಗೆ ಬಂದು ಮಾರುವ ಮಲೆಯಾಳಿ ಕಾಕನಿಂದ ಎರಡು ಮೀನು ಕೇಳಿ ಪಡೆದುಕೊಂಡೆ. ಆ ಬೀದಿಯ ಎಲ್ಲಾ ಬೆಕ್ಕುಗಳಿಗೂ ಹಳಸಿದ ಮೀನನ್ನು ಉಚಿತವಾಗಿ ಎಸೆಯುವ ಕಾಕ ಪಕ್ಷಿಗೆ ಎಂದಿದ್ದಕ್ಕೆ ನನಗೂ ಪುಕ್ಕಟ್ಟೆಯಾಗಿ ಕೊಟ್ಟ. ಯಾವ ಹಕ್ಕಿಗೆ ಏನು ಎತ್ತ ಎಂದೆಲ್ಲಾ ವಿಚಾರಿಸುವಷ್ಟು ಪುರುಸೊತ್ತು ಅವನಿಗಿರಲಿಲ್ಲ.

ಮಲೆಯಾಳಿ ಕಾಕನ ಪೊಂಯ್ ಪೊಂಯ್ ಹಾರನ್ನಿನ ಶಬ್ದ ಕೇಳಿದರೆ ಸಾಕು ಎಲ್ಲೆಲ್ಲೋ ಸತ್ತು ಬಿದ್ದಂತಿರುವ ಬೆಕ್ಕುಗಳು ಎದ್ದುಬಿದ್ದು ಬೀದಿಗೆ ಓಡೋಡಿ ಬರುತ್ತವೆ. ಅವನು ಪೂರ್ತಿ ಮೀನುಗಳನ್ನು ಮಾರಿ ಬೀದಿ ಬಿಡುವ ತನಕವೂ ಅವನ ಹಿಂದೆ ರಚ್ಚೆ ಹಿಡಿದ ಮಕ್ಕಳಂತೆ ಆ ಬೆಕ್ಕುಗಳು ತಿರುಗಾಡುತ್ತವೆ. ಆ ಬೆಕ್ಕುಗಳ ಕಂಡರೆ

ಅವನಿಗೂ ಎಂಥದ್ದೋ ವಿಚಿತ್ರ ಪ್ರೀತಿ. ಬೆಕ್ಕುಗಳ ಬೆಳಗಿನ ಭೋಣಿ ತಿಂಡಿ ಶುರುವಾಗುವುದೇ ಕಾಕಾನ ಭೂತಾಯಿ ಮೀನುಗಳಿಂದ. ನಮ್ಮ ಬೀದಿಯ ಬೆಕ್ಕುಗಳಿಗೆ ಕಾಕ ಹೆತ್ತ ಅಪ್ಪನಂತಿದ್ದ.

ಕಾಕ ಕೊಟ್ಟ ಮೀನುಗಳನ್ನು ಸುಲಿದು, ಮುಳ್ಳು ತೆಗೆದು ಬಿಸಾಡಿ, ಸಣ್ಣ ಚೂರುಗಳ ಮಾಡಿ ಕೊಕ್ಕರೆ ಮರಿಗೆ ತಿನ್ನಿಸಿದೆ. ನದಿಯ ಮೀನು ತಿಂದು ಮಾತ್ರ ಅಭ್ಯಾಸವಿದ್ದ ಅದಕ್ಕೆ ಈ ಸಮುದ್ರದ ಐಸಿನ ಮೀನು ಹಿಡಿಸಿತೋ ಇಲ್ಲವೋ? ಗೊತ್ತಾಗಲಿಲ್ಲ. ತುರುಕ್ಕಿದ್ದನ್ನು ದುಸರ ಮಾತಾಡದೆ ಸ್ವೀಕರಿಸಿತು. ನನಗೂ ಅದರ ಹೊಟ್ಟೆ ತುಂಬಿಸಿದ ಸಮಾಧಾನ ಸಿಕ್ಕಿತು. ಕಾಲಿನ ಗಾಯ ನೋಡಿದೆ. ಒಂದಿಷ್ಟು ವಾಸಿಯಾದಂತೆ ಕಂಡಿತು. ಆದರೂ, ನಡೆಯುವಾಗ ಅದು ಸಣ್ಣಗೆ ಕುಂಟುತಿತ್ತು. "ಸಂಜೆ ತನಕ ಇದು ನಮ್ಮಲ್ಲೇ ಇರಲಿ ಆಮೇಲೆ ಇದರ ಬಗ್ಗೆ ಯೋಚಿಸೋಣ" ಎಂದು ಗೆಳೆಯನಿಗೆ ಸಮಾಧಾನ ಹೇಳಿದೆ. ಬೆಳಿಗ್ಗೆ ಎದ್ದು ಅಡಿಗೆ ಮಾಡಿ, ಸುಸ್ತಾಗಿ ಮೂಖವೂದಿಸಿಕೊಂಡಿದ್ದ ಅವನು "ನೀನು ನಿನ್ನ ಆ ಹಲ್ಕಟ್ ಪಕ್ಷಿ ಏನಾದ್ರೂ ಮಾಡ್ಕೊಂಡ್ರು ಸಾಯ್ರಿ. ನಿಮಗೆ ಯಾವ ನನ್ಮಗ ಬುದ್ಧಿ ಹೇಳ್ತಾನೆ" ಎಂದು ಮತ್ತೆ ಸದ್ದು ಮಾಡಿದನು.

ಮತ್ತೆ ಬಿದಿರಿನ ಕುಕ್ಕೆಯಲ್ಲಿ ಮುಚ್ಚಿ ಹಾಕಿದರೆ ಪಕ್ಷಿ ಸ್ವತಂತ್ರವಾಗಿರಲು ಸಮಸ್ಯೆಯಾದೀತೆಂದು ಯೋಚಿಸಿದೆ. ದಿನವಿಡೀ ಕುಕ್ಕೆಯಲ್ಲಿ ಕೂತು ಬೋರಾಗುವ ಬದಲು ಅದು ಇಡೀ ರೂಮಿನಲ್ಲಿ ಸ್ವೇಚ್ಛೆಯಾಗಿ ಓಡಾಡಿಕೊಂಡಿರಲಿ ಎಂದು ಹಾಗೇ ಬಿಟ್ಟು ರೂಮಿಗೆ ಬೀಗ ಜಡಿದುಕೊಂಡು ತರಗತಿಗೆ ಹೊರಟು ಹೋದೆ. ಪಕ್ಷಿ ಕುಂತ ಜಾಗದಲ್ಲೇ ಕೂತಿರುತ್ತೆ. ರೂಮಿನಲ್ಲಿ ಅದಕ್ಕೇನೂ ಅಂಥ ಘನಂದಾರಿ ಕೆಲಸವಿರಲ್ಲ. ಗಡದ್ದಾಗಿ ಮೀನು ಊಟ ಕೂಡ ಬಾರಿಸಿರುವ ಅದು ಸೋಂಬೇರಿಯಾಗಿ ಬಿದ್ದುಕೊಂಡು ದಿನವಿಡೀ ನಿದ್ದೆ ಮಾಡಬಹುದು ಎಂದು ನಾನೇ ಅದರ ಪರವಾಗಿ ನಿರ್ಣಯ ತೆಗೆದುಕೊಂಡೆ. ನನ್ನ ನಂಬಿಕೆಗೆ ವಿರುದ್ಧವಾಗಿ ಕೊಕ್ಕರೆ ನಡೆದುಕೊಳ್ಳುತ್ತದೆ ಎಂದು ನಾನು ಊಹಿಸಿರಲಿಲ್ಲ. ಸಂಜೆ ಹೊತ್ತಿಗೆ ಪಕ್ಷಿ ತನ್ನ ಕರಾಮತ್ತು ತೋರಿಸಿತ್ತು. ದೊಡ್ಡ ಎಡವಟ್ಟೇ ಅಲ್ಲಾಗಿತ್ತು.

ಸಂಜೆ ಬಂದು ನೋಡುವಷ್ಟರಲ್ಲಿ ಬೆಳ್ಳಕ್ಕಿ ರೂಮಿನಲ್ಲಿ ದೊಡ್ಡ ದೊಡ್ಡ ಅನಾಹುತಗಳನ್ನೇ ಸೃಷ್ಟಿಸಿತ್ತು. ನಾವು ಓದುತ್ತಾ ಟೇಬಲ್ ಮೇಲೆ ಹಾಗೆ ಹರುವಿ ಹೋದ ಕನ್ನಡದ ಶ್ರೇಷ್ಠ ಲೇಖಕರ ಪುಸ್ತಕಗಳ ಮೇಲೆಲ್ಲಾ ತೆಳ್ಳನೆಯ ಬಿಳುಪಾದ ಅಂಟು ಮಲವನ್ನು ಪಿಚಕಾರಿಯಂತೆ ಬಾರಿಸಿತ್ತು. ಇಡೀ ರೂಮನ್ನೇ ತನ್ನ ಟಾಯ್ಲೇಟ್ ಬೇಸಿನ್ ಎಂದು ಭಾವಿಸಿದ ಪಕ್ಷಿ ಮನಸ್ಸಿಗೆ ಬಂದಂತೆ ಕಂಡಕಂಡಲ್ಲಿ ಕುಣಿಕುಣಿದಾಡಿ ವಿಸರ್ಜನೆ ಮಾಡಿತ್ತು. ಇಡೀ ರೂಮನ್ನೇ ರಾಡಿ ಎಬ್ಬಿಸಿ ಧೂಳಿಪಟ ಮಾಡಿಹಾಕಿತ್ತು.

ಅಡಿಗೆ ಮನೆಯ ಪಾತ್ರೆಗಳ ಮೇಲೆಲ್ಲಾ ಓಡಾಡಿ ಸಂಜೆಗೆ ಮಾಡಿಟ್ಟಿದ್ದ ಸಾರನ್ನೂ ಚೆಲ್ಲಿತ್ತು. ಆ ಚೆಲ್ಲಿದ ಸಾರಿನಲ್ಲಿ ಮೀನುಗಳು ಏನಾದರೂ ಇವೆಯೇ ಎಂದು

ಹುಡುಕಾಟವನ್ನೂ ನಡೆಸಿತ್ತು. ಸಾರು ಮೆತ್ತಿದ ಕಾಲುಗಳಲ್ಲೇ ಓಡಾಡಿ ನೆಲ, ಹಾಸಿಗೆ, ನೋಟ್ಸುಗಳ ಮೇಲೆಲ್ಲಾ ಚಿತ್ರಕಲಾ ಶಾಲೆಯನ್ನೇ ತೆರೆದಿತ್ತು. ಇತ್ತ ಸಾಂಬಾರ್ ವಾಸನೆ; ಅತ್ತ ಪಕ್ಷಿ ಸ್ಪ್ರೇ ಮಾಡಿದ ವಿಸರ್ಜನೆಯ ವಾಸನೆ ಎರಡೂ ಮಿಳನವಾಗಿ ರೂಮಿನೊಳಗೆ ಒಂದು ವಿಶೇಷ ಬಗೆಯ ಹೊಸ ಘಾಟು ತುಂಬಿಕೊಂಡಿತ್ತು. ಇಡೀ ರೂಮಿನ ನಕಾಶೆಯನ್ನೇ ಬದಲಿಸಿದ ಆ ದುಷ್ಟ ಪಕ್ಷಿಯ ಮೇಲೆ ಕಬ್ಬೂರನಿಗೆ ಸಿಟ್ಟು ಉಕ್ಕಿ ಬಂದು ಬಿಟ್ಟಿತು. ನನ್ನ ಯಾವ ಮಾತಿಗೂ ಕಿವಿಗೊಡದೆ ಆ ಹಕ್ಕಿ ಮರಿಯನ್ನು ಕಸದಂತೆ ಎತ್ತಿಕೊಂಡು ಹೋಗಿ ಅದೇ ಹುಣಸೆ ಮರದ ಹತ್ತಿರ ಬಿಸಾಡಿ ಬಂದನು. ನಾನೂ ಗಪ್‌ಚಿಪ್ ಎನ್ನದೆ ಅವನು ಹಿಂತಿರುಗಿ ಬರುವಷ್ಟರಲ್ಲಿ ಮಳ್ಳನಂತೆ ರೂಮನ್ನು ಕ್ಲೀನು ಮಾಡತೊಡಗಿದ್ದೆ.

ಕಾಡಿನ ಪಕ್ಷಿಗಳನ್ನು ನಾವು ಸಾಕಲು ಸಾಧ್ಯವೇ ಇಲ್ಲವೇನೋ? ಅವುಗಳ ಆಹಾರ ಪದ್ಧತಿ, ಜೀವನ ಕ್ರಮ ಇತ್ಯಾದಿಗಳ ಪರಿಚಯವೇ ಇಲ್ಲದ ನಾವು ಮನುಷ್ಯರಂತೆಯೇ ಅವುಗಳನ್ನೂ ಟ್ರೀಟ್ ಮಾಡಲು ಹೋಗಿ ಫಜೀತಿ ಮಾಡಿಕೊಳ್ಳುತ್ತೇವೆ. ಎಷ್ಟೇ ತೊಂದರೆ ಅನುಭವಿಸಿದರೂ ನಮ್ಮ ಮಂಗ ಬುದ್ಧಿ ಪ್ರಯೋಗಗಳನ್ನು ನಿಲ್ಲಿಸುವುದಿಲ್ಲ. ಇನ್ನೊಂದು ಸಲವೂ ಇಂತದ್ದೇ ಪ್ರಯೋಗ ಮಾಡಲು ಹೋಗಿ ಮತ್ತೆ ಎಡವಟ್ಟು ಮಾಡಿಕೊಂಡೆ.

ಒಮ್ಮೆ ಕುಂದಾದ್ರಿಯ ಬೆಟ್ಟಕ್ಕೆ ನಾನು ನನ್ನ ಗೆಳೆಯರು ಹೋಗುವಾಗ ದಾರಿಯಲ್ಲಿ ಕಾಡುಕೋಳಿಯೊಂದು ಆರಾಮಾಗಿ ಮೇಯ್ಯುತ್ತಿತ್ತು. ಅದರ ಜೊತೆ ಐದಾರು ಪುಟಾಣಿ ಮರಿಗಳೂ ಇದ್ದವು. ನಿರ್ಜನ ಪ್ರದೇಶದಲ್ಲಿ ಯಾರೂ ಓಡಾಡುವುದಿಲ್ಲವೆಂದು ಭಾವಿಸಿ ಹಾಯಾಗಿ ಮೇಯ್ಯುತ್ತಿದ್ದ ಕೋಳಿಗೆ ಧುತ್ತೆಂದು ನಾವು ಬಂದದ್ದು ಗಾಬರಿ ಹುಟ್ಟಿಸಿ ಬಿಟ್ಟಿತು. ಅಪಾಯದ ಸೂಚನೆ ಅರಿತ ಕಾಡುಕೋಳಿ ಛಂಗನೆ ನೆಗೆದು ಕ್ಕೊಕ್ಕೋಕೋ.. ಎಂದು ಅರಚುತ್ತಾ ಕಾಡಿನ ಪೊದೆಯೊಳಗೆ ಓಡಿ ಹೋಯಿತು. ಕೆಲ ಮರಿಗಳೂ ತಾಯಿಯನ್ನು ಹಿಂಬಾಲಿಸಿ ಎದ್ದು ಬಿದ್ದೂ ಓಡಿ ಹೋದವು. ಆದರೆ ಅದರಲ್ಲಿನ ಒಂದೆರಡು ಪಿಳ್ಳೆಗಳಿಗೆ ಮಾತ್ರ ತಕ್ಷಣಕ್ಕೆ ದಿಕ್ಕೇ ತೋಚಲಿಲ್ಲ. ಕಾಳನ್ನೋ, ಹುಳವನ್ನೋ, ಹಿಡಿದು ಮುಕ್ಕುವುದರಲ್ಲಿ ಮಗ್ನವಾಗಿದ್ದ ಅವು ಏನೊಂದೂ ತೋಚದೆ ಹೆದರಿ ಕುಂತಲ್ಲೇ ಗಪ್‌ಚಿಪ್ ಎಂದು ಕೂತು ಬಿಟ್ಟವು. ನಾನು ಕೋಳಿಯ ಜೊತೆಗೇ ಎಲ್ಲಾ ಮಕ್ಕಳು ಪರಾರಿಯಾದವೆಂದು ಭಾವಿಸಿದ್ದೆ. ಆದರೆ ಅಲ್ಲಿ ಹಾಗಾಗಿರಲಿಲ್ಲ.

ಆ ಎರಡು ಮರಿಗಳು ಇದ್ದ ಜಾಗದಲ್ಲೇ ನೆಲವನ್ನು ಗಟ್ಟಿ ಹಿಡಿದು ಮಿಸುಕಾಡದೆ ಕೂತಿದ್ದವು. ನನಗೆ ಅವುಗಳ ಇರುವಿಕೆ ಫಕ್ಕನೆ ಕಾಣುತ್ತಿರಲಿಲ್ಲ. ನನ್ನ ಜೊತೆಯಿದ್ದ ಗೆಳೆಯ ರೇಣುಕಪ್ಪ ನನ್ನ ಭುಜ ಎಳೆದು ಪಿಸುದನಿಯಲ್ಲಿ "ಏಯ್! ಅಲ್ನೊಡೋ, ಎರಡು ಕೋಳಿ ಪಿಳ್ಳೆ ಕೂತಿದ್ದಾವೆ" ಎಂದು ಅತ್ತ ಕಡೆ ಕೈ ತೋರಿಸಿದ. ನನಗೂ ಗೆಳೆಯ ಚಂದ್ರುವಿಗೂ ಅಲ್ಲಿ ಕಲ್ಲು ಮಣ್ಣು ಮತ್ತು ಕೆಲ ಕ್ಷುದ್ರ ಗಿಡಗಳು ಬಿಟ್ಟರೆ

ಮತ್ತೇನೂ ಕಾಣುತ್ತಿರಲಿಲ್ಲ. "ಎಲ್ಲೋ ಏನೂ ಕಾಣ್ತಾನೇ ಇಲ್ವಲ್ಲೋ ಕುಳ್ಳ" ಎಂದು ಚಂದ್ರು ರೇಣುವನ್ನು ಕಿಚಾಯಿಸಿದ. ಅದಕ್ಕವನು "ಏಯ್ ಕಜ್ಜಿ ಚಂದ್ರ ಅಲ್ಲಿ ಕಣ್ ಬಿಟ್ಟು ನೋಡೋ, ಆ ಸಣ್ಣ ಕಲ್ಲುಗಳ ಹತ್ರಾನೆ ರೆಪ್ಪೆ ಬಡೀದೆ ನೋಡ್ತಿರೋ ಕಾಣ್ತಾವೆ" ಎಂದು ಮೆತ್ತಗೆ ಹೇಳಿದನು. ಅವನ ಮಾತು ಸುಳ್ಳೆಂದು ಭಾವಿಸಿದ ನಾವು "ಈ ನನ್ಮಗ ಫೂಲ್ ಮಾಡ್ತಿದ್ದಾನೆ ಕಣೋ" ಎಂದು ಉಡಾಫೆ ಮಾಡಿದೆವು. ಏಕೆಂದರೆ ಅವನು ನಿರ್ದೇಶಿಸುತ್ತಿದ್ದ ಜಾಗದಲ್ಲಿ ಕಲ್ಲು ಮಣ್ಣು ಬಿಟ್ಟರೆ ನಮಗೆ ಮತ್ತೇನೂ ಕಾಣಿಸುತ್ತಲೇ ಇರಲಿಲ್ಲ.

ನಾನು ಮತ್ತೊಮ್ಮೆ ಆ ಕಾಡಿನ ದಾರಿಯನ್ನು ದಿಟ್ಟಿಸಿ ನೋಡುತ್ತಾ ನಿಂತೆ. ರೇಣುಕಪ್ಪ ಹೇಳಿದ್ದು ಅಕ್ಷರಶಃ ನಿಜವಾಗಿತ್ತು. ಅಬ್ಬಾ ಎಂಥ ಅದ್ಭುತ ದೃಶ್ಯವದು. ಈ ಪ್ರಕೃತಿಯ ಕಲರ್ ಮ್ಯಾಚಿಂಗ್ ನೋಡಿ ನಾನು ವಿಸ್ಮಿತನಾಗಿ ಹೋದೆ. ಆ ಪುಟಾಣಿ ಮರಿಗಳಿಗೂ ಅಲ್ಲಿನ ಮಣ್ಣಿನ ಬಣ್ಣಕ್ಕೂ ಒಂದೇ ಹೋಲಿಕೆ. ವಾವ್! ರೆಕ್ಕೆ ಪುಕ್ಕ ಎಲ್ಲಾ ಮಣ್ಣಿನ ಬಣ್ಣವೆ. ಪ್ರಕೃತಿ ತನ್ನ ಮಣ್ಣಿನ ಬಣ್ಣದ ಬಟ್ಟೆಯನ್ನೇ ಅವುಗಳ ಮಾನ ಪ್ರಾಣದ ರಕ್ಷಣೆಗೆ ಹೊಲಿಸಿ ಕೊಟ್ಟಿದೆ. "ದೇವ್ರಾಣೆಗೂ ಹೇಳ್ತೀನಿ. ನಿಜವಾದ ಮಣ್ಣಿನ ಮಕ್ಕಳು ಅಂದ್ರೆ ಇವೇ ಕಂಡ್ರಯ್ಯ. ಅದ್ರೆ ನೋಡೋಕ್ ಮಾತ್ರ ನಿಮ್ಮ ಫ್ಯಾಮಿಲಿ ಮೆಂಬರ್‌ಗಳಂಗೆ ಕುಳ್‌ಕುಳ್ಳಕ್ಕೆ, ಮೋಟ್‌ಮೋಟ್ ಬಾಡಿ ಮೆಂಟೈನ್ ಮಾಡಿದ್ದಾವಲ್ಲೋ" ಎಂದು ಚಂದ್ರು ಅಂಥ ಹೊತ್ತಿನಲ್ಲೂ ರೇಣುವಿನ ಗೋಳು ಹುಯ್ದುಕೊಂಡನು. ದೇಹಗಳ ಅಲುಗಾಡಿಸದೆ ಮಾತುಗಳನ್ನಷ್ಟೆ ಚಲ್ಲಾಡುತ್ತಿದ್ದ ನಮ್ಮಿಂದ ಯಾವ ಅಪಾಯದ ಸೂಚನೆಯೂ ಸಿಗದ ಅವು ಉಸಿರು ಬಿಗಿ ಹಿಡಿದು ತಮ್ಮ ಇರುವಿಕೆ ಪ್ರಕಟಿಸದೆ ಧ್ಯಾನಸ್ಥ ಸ್ಥಿತಿಯಲ್ಲಿ ಕೂತಿದ್ದವು.

ಆ ತಕ್ಷಣಕ್ಕೆ ಗೆಳೆಯ ರೇಣುಕಪ್ಪನಿಗೆ ಅವುಗಳನ್ನು ಹಿಡಿಯುವ ಆಸೆ ಉಂಟಾಯಿತು. ನೋಡು ನೋಡುತ್ತಿದ್ದಂತೆ ರೇಣು ಛಂಗನೆ ನೆಗೆದು ಅವುಗಳತ್ತ ಹಾರಿದ. ಅಲ್ಲೀ ತನಕ ಕಲ್ಲಿನ ತುಂಡುಗಳಂತೆ ಅಲ್ಲಾಡದೆ ಕೂತಿದ್ದ ಮರಿಗಳು ರೇಣುವಿನ ಕ್ಷಿಪ್ರ ಚಲನೆಯ ಸೂಕ್ಷ್ಮ ಗೊತ್ತಾಗುತ್ತಲೇ, ಮಿಂಚಿನಂತೆ ಎದ್ದು ಅಡ್ಡಾದಿಡ್ಡಿಯಾಗಿ ಓಡತೊಡಗಿದವು. ಅವುಗಳ ಮೇಲೆ ಹಾರಿ ಬೀಳುತ್ತಾ, ಹಿಡಿಯಲಾಗದೆ ಬಿದ್ದು ಒದ್ದಾಡುತ್ತಿದ್ದ ರೇಣುಕಪ್ಪನ ಆವೇಶಕ್ಕೆ ಆ ಕಚ್ಚಾರಸ್ತೆಯೇ ನಲುಗಿ ಹೋಯಿತು. ಅಷ್ಟು ಸುಲಭಕ್ಕೆ ಅವು ಸಿಕ್ಕಿ ಬೀಳುವ ಆಸಾಮಿಗಳಾಗಿರಲಿಲ್ಲ. ಒಂದು ಕಡೆಯಿಂದ ಚಂದ್ರು ಮತ್ತೊಂದು ಕಡೆಯಿಂದ ನಾನೂ ರೇಣುವಿನ ಹುಚ್ಚು ಸಾಹಸಕ್ಕೆ ಕೈಜೋಡಿಸಿದೆವು. ಅವುಗಳನ್ನು ಅಟ್ಟಾಡಿಸಿ, ಗೋಳಾಡಿಸಿದ ರೇಣು ಅಂತೂ ಇಂತು ಕೊನೆಗೊಂದು ಕಾಡುಕೋಳಿ ಪಿಳ್ಳೆಯನ್ನು ಟವಲ್ಲು ಎಸೆದು ಕವುಚಿದನು. ಅದೇ ಗಡಿಬಿಡಿಯಲ್ಲಿ ಮತ್ತೊಂದು ಪಿಳ್ಳೆ ಕಾಡಿನ ಪೊದೆಗಳಲ್ಲಿ ಬಿದದು ಎತ್ತಲೋ ಮಾಯವಾಗಿ ಬಿಟ್ಟಿತು. ಇತ್ತ ಬಿದ್ದೆದ್ದು ಮೂತಿ ಕೆತ್ತಿಕೊಂಡು ರೇಣುಕಪ್ಪ ಮಿನಿ ಆಂಜನೇಯನಂತೆ ವಿಜೃಂಭಿಸುತ್ತಿದ್ದ.

ಕೆಂದೂಳಿನಿಂದ ಕಂಗಾಲಾಗಿದ್ದ ರೇಣುವಿನ ಮುಸುಡಿ ನೋಡಿ ಅಣಕಿಸುತ್ತಿದ್ದ ಚಂದ್ರು ಬಿದ್ದೂ ಬಿದ್ದೂ ನಗುತ್ತಿದ್ದ. ನಾನೂ ನಕ್ಕರೆ ರೇಣುವಿಗೆ ಅವಮಾನವಾದೀತೆಂದು ಅತ್ತ ನಗುವೂ ಅಲ್ಲ ಇತ್ತ ವಿಷಾದವೂ ಇಲ್ಲದ ಹುಸಿ ಮಂದಹಾಸವನ್ನು ಕೊಸೆಯುತ್ತಾ ನಿಂತುಕೊಂಡೆ.

ರೇಣುಕಪ್ಪ ಕಷ್ಟಪಟ್ಟು ಹಿಡಿದ ಆ ಕೋಳಿ ಪಿಳ್ಳೆ ನೋಡಲು ತುಂಬಾ ಸುಂದರವಾಗಿತ್ತು. ನಾವು ದಸ್ತಗಿರಿ ಮಾಡಿದ್ದರಿಂದ ಅದು ಗಾಬರಿಗೊಂಡಿತ್ತು. ಎರಡೂ ಕೈಗಳಲ್ಲಿ ಮುಚ್ಚಿ ಹಿಡಿದು ಕತ್ತಲು ಮಾಡಿಟ್ಟುಕೊಂಡರೆ ತೆಪ್ಪಗಿರುತ್ತಿತ್ತು. ಬೆಳಕಿಗೆ ತೆರೆದು ಹಿಡಿದುಕೊಂಡರೆ ಚಿಂಯ್ಯೋ ಪಂಯ್ಯೋ ಎಂದು ಕೀರಲು ದನಿಯಲ್ಲಿ ಅರಚಾಡುತ್ತಿತ್ತು. ಅದು ನೋಡಲು ಪುಟಾಣಿಯಾದರೂ, ಸೌಂಡ್ ಬಾಕ್ಸ್ ಮಾತ್ರ ಭರ್ಜರಿಯಾಗಿತ್ತು. ಮೈಕ್‌ಸೆಟ್ಟಿನಂತೆ ಶಕ್ತಿಯುತವಾಗಿತ್ತು.

"ಈ ಕಾಡಿನ ಜೀವ ಸಾಕೋಣ ಕಂಡ್ರೋ. ಬೆಳೆದ ಮೇಲೆ ಬಿರಿಯಾನಿ ಮಾಡಿ ತಿನ್ನೋಣ" ಎಂದು ಪ್ಲಾನು ಹೊಸೆಯುತ್ತಾ ಹಾಗೆ ಕುಂದಾದ್ರಿ ಬೆಟ್ಟವನ್ನೂ ಹತ್ತತೊಡಗಿದೆವು. "ನಾನು ಮಾತ್ರ ಬಿರಿಯಾನಿ ತಿನ್ನಲ್ಲ. ನಾನು ಪ್ಯೂರ್ ವೆಜ್. ನನಗೆ ಅದರ ಮೊಟ್ಟೆ ಮಾತ್ರ ಸಾಕು" ಎಂದು ರೇಣುಕಪ್ಪ ಬೇಡಿಕೆ ಇಡುತ್ತಿದ್ದ. ಅದಕ್ಕೆ ಚಂದ್ರು "ಹೆಂಗೋಳಿ ಆದ್ರೆ ಮೊಟ್ಟೆ. ಒಂದ್ವೇಳೆ ಹುಂಜ ಆಗ್ಬಿಟ್ರೆ ಅದರ ಒಣ ಲದ್ದಿ ತಿಂತಿಯಾ. ಬಿರ್ಯಾನಿಗೇ ಒಪ್ಕೊಳ್ಳೋ ಕುಳ್ಳ ಸೇಫರ್ ಸೈಡಲ್ಲಿ ಇರ್ತಿಯಾ" ಎಂದು ರೇಣುವನ್ನು ಗೋಳಾಡಿಸುತ್ತಿದ್ದನು. ಹೀಗೆ ನಮ್ಮದೇ ಹರಟೆ, ತಮಾಷೆಗಳಲ್ಲಿ ಆ ಕಾಡಿನ ಪಿಲ್ಲುಪಿಳ್ಳೆಯನ್ನು ಬಂಧಿಸಿಟ್ಟುಕೊಂಡು ಮುಂದುವರೆಯುತ್ತಿದ್ದವು. ಆಕಸ್ಮಾತ್ ಆಗಿ ನಮ್ಮ ಬೆನ್ನ ಹಿಂದಿನಿಂದ ಕೇಳಿ ಬಂದ ಒಂದು ಶಬ್ದ ಗಕ್ಕನೆ ನಮ್ಮ ಮಾತುಗಳಿಗೆ ಬ್ರೇಕ್ ಜಡಿಯಿತು. ಮೌನವಾಗಿ ಹಿಂತಿರುಗಿ ನಿಂತು ನೋಡುತ್ತೇವೆ. ಓಹ್! ಮತ್ತೊಂದು ಪರಮಾಶ್ಚರ್ಯ. ನಿಜಕ್ಕೂ ಅದೊಂದು ಅದ್ಭುತ. ನಮ್ಮ ಕಣ್ಣುಗಳನ್ನೇ ನಾವು ನಂಬಲಾಗಲಿಲ್ಲ ಅಂಥ ದೃಶ್ಯವದು.

ತಾಯಿ ಕೋಳಿ ನಮ್ಮನ್ನೇ ಹಿಂಬಾಲಿಸಿಕೊಂಡು ಕಾಡಿನಂಚಿನ ದಾರಿಯಲ್ಲಿ ನಡೆದು ಬರುತ್ತಿತ್ತು. ತನ್ನ ಮರಿಯ ದನಿಯ ಜಾಡು ಹಿಡಿದು ಅದು ಹಿಂಬಾಲಿಸಿ ಬರುತ್ತಿತ್ತು. ನಾವು ಹಿಂತಿರುಗಿ ನಿಂತು ನೋಡಿದ ತಕ್ಷಣ ಗಾಬರಿಯಿಂದ ಕೂಗಿಕೊಂಡು ಮತ್ತೆ ಕಾಡಿನೊಳಗೆ ಓಡಿ ಮರೆಯಾಗುತ್ತಿತ್ತು. ಮತ್ತೆ ಸ್ವಲ್ಪ ದೂರ ಹೋಗುತ್ತಲೂ ಅದೇ ಹೆದರಿಕೆಯಲ್ಲೇ ಕ್ಕೊ..ಕ್ಕೋಕ್ಕೋ.. ಎಂದು ಹಿಂಬಾಲಿಸಿಕೊಂಡು ಬರುತ್ತಿತ್ತು. ತಾಯಿಯ ಈ ಹಂಬಲ ನಿಜಕ್ಕೂ ನಮ್ಮನ್ನು ಬೆರಗುಗೊಳಿಸಿತು. ತನ್ನ ಮಗುವನ್ನು ಉಳಿಸಿಕೊಳ್ಳಲು ಅದು ಮಾಡುತ್ತಿರುವ ಪ್ರಯತ್ನ ಶಹಬ್ಬಾಸ್ ಎನ್ನಿಸಿತು. ಪ್ರಕೃತಿ ಅದಕ್ಕೆ ಕರುಣಿಸಿರುವ ಧೈರ್ಯಕಂಡು ವಿಸ್ಮಯ ಎನಿಸಿತು. "ಹೋಗಲಿ ಪಾಪ ಬಿಡೋಣವೇ" ಎಂದು ನಾನು ರೇಣು ಹೇಳುವಾಗ ಚಂದ್ರು "ಇವರವ್ವನಿಗೆ ಇನ್ನೂ

ಎಂಟ್ಹತ್ತು ಮಕ್ಕಳಿದ್ದಾವೆ. ಅವನ್ನೇ ನೆಟ್ಟಗೆ ನೋಡ್ಕಳ್ಳಿ ಸಾಕು. ಇದನ್ಯಾಕೆ ಬಿಡೂದು. ಸಿಕ್ಕಿದ ಶಿಕಾರಿ ಹಂಗೆಲ್ಲಾ ಬಿಡಬಾರದು ಮನುಷ್ಯ ಕುಲಕ್ಕೆ ಅವಮಾನವಾಗುತ್ತೆ" ಎಂದು ತಕರಾರು ತೆಗೆದನು.

ಕಾಡು ಕೋಳಿಯ ತಾಯಿ ಪ್ರೇಮ ಕಂಡು ನಾನು ರೇಣುಕಪ್ಪ ಇನ್ನೂ ಕರಗುತ್ತಲೇ ನಿಂತಿದ್ದಾಗ ಕಿಲಾಡಿ ಚಂದ್ರು ಒಂದು ಹೊಸ ಪ್ಲಾನು ಹೆಣೆದನು. "ನೋಡ್ರೋ... ಒಂದು ಐಡಿಯಾ ಮಾಡೋಣ. ಈ ಪಿಳ್ಳೇನಾ ಇಲ್ಲೇ ಕಟ್ಟಿ ಹಾಕನ. ಹೆಂಗೂ ಅದರವ್ವ ಮರೀನ ಬಿಡಿಸಿಕೊಳ್ಳಾಕೆ ಅಂತ ಬಂದೇ ಬರ್ತಾಳೆ. ಆಗ ಪಿಳ್ಳೆ ಬಿಟ್ಟು ತಾಯೀನೇ ಕ್ಯಾಚ್ ಹಾಕಾನ. ಹೆಂಗೈತೆ ನನ್ನ ಐಡಿಯಾ" ಎಂದನು. ಅಷ್ಟೊತ್ತು ಕರುಣೆಯ ಕೂಪದಲ್ಲಿದ್ದ ನಮಗೆ ತಾಯಿ ಕೋಳಿಯ ಕಂಡ ಮೇಲೆ ನಾಲಿಗೆ ಮೇಲೆ ರುಚಿಯ ಹೊಗೆ ಮೂಡತೊಡಗಿದವು. "ಹಂಗೆ ಆಗಲಿ" ಎಂದು ಒಪ್ಪಿಗೆ ಸೂಚಿಸಿದೆವು.

ಕೋಳಿ ಮರಿಯನ್ನು ಕಟ್ಟಿ ಹಾಕಲು ನಮ್ಮಲ್ಲಿ ಹಗ್ಗದಂತಹ ಯಾವ ಪರಿಕರಗಳೂ ಇರಲಿಲ್ಲ. ಆಗ ಚಂದ್ರು ಪರಿಹಾರ "ನನ್ನ ಉಡುದಾರ ಇದೆ ಬೇಕಾದ್ರೆ ಬಿಚ್ತೀನಿ ಇರು" ಎಂದು ತನ್ನ ಸೊಂಟಕ್ಕೆ ಕೈ ಹಾಕಿದನು. ಆಗ ಎಚ್ಚೆತ್ತ ರೇಣುಕಪ್ಪ "ಲೇ ಕಜ್ಜಿ ದಯವಿಟ್ಟು ಅಂಥ ಅನಾಹುತ ಮಾತ್ರ ಮಾಡ್ಬೇಡ ಮಾರಾಯ. ನಿನ್ನ ಉಡದಾರ ಮಾತ್ರ ಯಾವ ಕಾರಣಕ್ಕೂ ಬಿಚ್ಚಬೇಡ. ನಿನ್ನ ದರಿದ್ರ ಒಳಚಡ್ಡಿ ದುರ್ವಾಸನೆಗೆ ಕೋಳಿ ವಂಶಾನೇ ನೆಗೆದ್ ಬಿದ್ದು ಹೋಗುತ್ತೆ. ಕೋಳಿ ಕಥೆ ಒತ್ತಟ್ಟಿಗಿರಲಿ, ಉಡಿದಾರ ಇಲ್ಲದೆ ಪ್ಯಾಂಟು ಹೆಂಗಲೆ ಸೊಂಟದ ಮೇಲೆ ನಿಲ್ಲುಸ್ತೀ ಕಡ್ಡೀ ನನ್ಮಗನೇ. ಸ್ವಲ್ಪ ಹೆಚ್ಚೂ ಕಮ್ಮಿಯಾದ್ರೂ ನಾವು ನೋಡಬಾರದ ಅನಿಷ್ಟಾನೆ ನೋಡಬೇಕಾಗುತ್ತೆ. ಅದ್ಯಾರಿಗೆ ಬೇಕು ಕರ್ಮ. ತಾವು ತೆಪ್ಪಗಿದ್ರೆ ಅಷ್ಟೇ ಸಾಕು ಕಡ್ಡಿ ಪ್ರಭುಗಳೇ" ಎಂದು ಕಿಚಾಯಿಸಿದನು. "ಹಾಳಾಗೋಗಿ ನನ್ಮಕ್ಕಳ ಒಳ್ಳೆ ಐಡಿಯಾ ಕೊಟ್ರೆ ಬ್ಯಾಡಾಂತೀರ" ಎಂದು ಚಂದ್ರು ಮುಖ ಕೀಲಿಸಿಕೊಂಡನು.

ನಾನು "ಆ ಪ್ರಯೋಗ ಬ್ಯಾಡ ಬಿಡ್ರೋ. ಈ ಜುಜುಬಿ ಪಿಳ್ಳೆ ಹಿಡಿಯೋಕೆ ಹೋಗಿನೆ ಈ ರೇಣು ಮುಖ, ಮುಸುಡಿ ಎಲ್ಲಾ ಕೆತ್ಕೊಂಡಿದ್ದಾನೆ. ಇನ್ನು ತಾಯೀನ ಹಿಡಿಯೋ ದುಸ್ಸಾಹಸಕ್ಕೆ ಹೋದ್ರೆ ಏನೇನು ಅನಾಹುತ ಆಗುತ್ತೋ ಏನೋ. ಬಿಟ್ಹಾಕಿ ನಡೀಲ್ರಲೇ" ಎಂದು ಉಡುದಾರಕ್ಕೆ ಕೈ ಹಾಕಿಕೊಂಡೇ ನಿಂತಿದ್ದ ಚಂದ್ರುವನ್ನು ತಳ್ಳಿಕೊಂಡು ಮಂದೆ ನಡೆದೆನು.

ನಾವು ಉಪೇಕ್ಷಿಸಿ ಹೋದರೂ ಬಿಡದೆ ತಾಯಿ ಕುಕ್ಕಟ ನಮ್ಮ ಹಿಂಬಾಲಿಸಿಕೊಂಡು ಸುಮಾರು ದೂರ ಬಂದಿತು. ಒಮ್ಮೆ ರೇಗಿ ಗದರಿಸಿದ ಮೇಲೆ ಹೆದರಿಕೊಂಡು ಪುರ್‍ರೆಂದು ಹಾರಿ ಕಾಡಿನೊಳಗೆ ಸೇರಿಕೊಂಡಿತು. ಮತ್ತೆ ಹಿಂತಿರುಗಿ ನೋಡಿದಾಗ ಅದು ನಮ್ಮನ್ನು ಹಿಂಬಾಲಿಸುತ್ತಿರಲಿಲ್ಲ. ಹಸಿರಾಗಿ ಹಬ್ಬಿದ್ದ ವಿಶಾಲ ವನರಾಶಿಯಲ್ಲಿ ಮೌನವಾಗಿತ್ತು. ಮರಿ ಪಿಳ್ಳೆ ಮಾತ್ರ ಆಗಾಗ ತಾಯ ನೆನೆದು ಕೂಗುವುದು ನಿಲ್ಲಿಸಿರಲಿಲ್ಲ.

ಅದರ ಕೂಗಿಗೆ ಮತ್ತ್ಯಾರೋ ಆಕಾಶದಿಂದ ಇಣುಕಿ ನೋಡುತ್ತಿರುವಂತೆ ಕಾಣಿಸಿತು. ನೋಡಿದರೆ ಪಿಳ್ಳೆಯ ಶಬ್ದ ಗ್ರಹಿಸಿದ ಹದ್ದು ಆಗಸದಿಂದ ಟಳಾಯಿಸುತ್ತಿತ್ತು. ಸಣ್ಣ ಶಬ್ದಕ್ಕೂ ಕಾಡಿನಲ್ಲಿ ಎಷ್ಟೊಂದು ಅರ್ಥಗಳು. ತಾಯಿಯ ಪಾಳಿಗೆ ಹೃದಯವಿದ್ರಾವಕ ಎನಿಸಿದ ಮರಿಯ ಧ್ವನಿ ಕ್ಷಣ ಮಾತ್ರದಲ್ಲೇ ಹದ್ದುವಿಗೆ ಖುಷಿಯ ನಿನಾದವಾಗಿತ್ತು. ಕಾಡು ಭಾಷೆಯಲ್ಲೇ ಗೋಳಾಡುತ್ತಿದ್ದ ಆ ಕಾಡಿನ ಕೋಳಿ ಪಿಳ್ಳೆಯನ್ನು ಕಷ್ಟಪಟ್ಟು ಮನೆಗೆ ತಂದು ಸಾಕಲು ಯತ್ನಿಸಿದೆ. ನನ್ನ ಪ್ರಯತ್ನ ಫಲಕಾರಿಯಾಗಲಿಲ್ಲ. ಮಾರನೆಯ ದಿನ ಬೆಳಿಗ್ಗೆ ನೋಡುವ ಹೊತ್ತಿಗೆ ಅದು ಸತ್ತೇ ಹೋಗಿತ್ತು. ಕೆಂಪು ಇರುವೆಗಳು ಹತ್ತಿ ಕೂತು ಅದರ ಅಸಹಾಯಕ ಕಣ್ಣನ್ನು ಬೆಣ್ಣೆ ಬಿಸ್ಕತ್ತಿನಂತೆ ತಿಂದು ಮುಗಿಸಿದ್ದವು.

**ಕಲೀಮ್ ಉಲ್ಲಾ**

ಮಯೂರ ಡಿಸೆಂಬರ್ ೨೦೧೪

# ಕಾಮಾಕ್ಯ ಎಂಬ ಹಗಲ ಹೊಳೆ

ಊರಿದ್ದ ಮೇಲೆ ಅದಕ್ಕೊಂದು ಹೊಳೆಯೂ ಇರಬೇಕು ಅಂದುಕೊಳ್ಳುವುದು ಎಷ್ಟು ಚೆಂದ? ತಮ್ಮ ಊರಿಗಂಟಿದ ಹಾಗೆ 'ಹೊಳೆ' ಇರುವವರು ಈ ವಿಷಯಕ್ಕೆ ಹೆಮ್ಮೆ ಪಟ್ಟು ಬೀಗಿದರೂ, ಉಳಿದವರು ಊರುಗಳೇ ಹೊಳೆಗಳೆಂದು ಹೊಳೆಯ ಹಾಗೆಂದು ನೆಮ್ಮದಿ ಪಡಬಹುದು. ನಿಜವಲ್ಲವೆ? ಕಾಲದ ಅನಂತ ಪ್ರವಾಹದಲ್ಲಿ ಮೀಯುತ್ತಾ ಬದಲಾಗುತ್ತಾ ಒಮ್ಮೊಮ್ಮೆ ಬರಡಾಗುತ್ತಾ ಮಳೆಗಾಲಕ್ಕೆ ತುಂಬಿ ಬಂದು ಸೊಕ್ಕಿ ಹರಿಯುವ ಗುಣ ಊರುಗಳಿಗೂ ಇರುವುದರಿಂದ ಅವು ಹೊಳೆಗಳೇ ಅಲ್ಲವೇ?

ಈಗ ನಾನು ಹೇಳ ಹೊರಟಿರುವ ಹೊಳೆ ಅಂತಿಂಥಾದಲ್ಲ ಬಿಡಿ. ಈ ಕಾಂಕ್ರೀಟ್ ಕಾಡೆನ್ನುವ ಬೆಂಗಳೂರಿಗೆ ಈಗ ಯಾವ ಹೊಳೆ ಬರಬೇಕು? ದುಡ್ಡು, ಸಾಫ್ಟ್‌ವೇರಿನ ಜನರ ಹೊಳೆ ಹರಿದ ಮೇಲೆ? ಇದ್ದ ಬಿದ್ದ ಅರ್ಕಾವತಿ, ವೃಷಭಾವತಿ ಎಂಬ ನದಿಗಳನ್ನೆಲ್ಲ ನಾರುವ ಮೋರಿಗಳನ್ನಾಗಿ ಮಾಡಿದ ಮಹಾನ್ ನಗರ ನಮ್ಮದು, ಸದ್ಯಕ್ಕಂತೂ ಅವು ಕಾಲದ ಮುಸುಕಿನ ಪರದೆ ಹಿಂದೆ ಮರೆಯಾಗಿವೆ. ಅರವತ್ತರ ದಶಕದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ತನ್ನ ಹೊಸದಾದ ಜ್ಞಾನಭಾರತಿ ಆವರಣಕ್ಕೆ ಸ್ಥಳಾಂತರಗೊಂಡಾಗ, ಲೇಖಕ ನಿರಂಜನರು 'ವೃಷಭಾವತಿ ದಂಡೆಯಲ್ಲಿರುವ ಸುಂದರ ಆಶ್ರಮದಂತಿದೆ' ಎಂದು ಬರೆದಿದ್ದರು. ಈಗ ಅದು ಗಬ್ಬು ನಾರುವ ಮೋರಿಯ ಪಕ್ಕದಲ್ಲಿದೆ ಅಂತ ತಿದ್ದಿ ಬರೆಯಬೇಕಿದೆ. ಈಗ ನಾನು ತೋರಹೊರಡುವ ಬೆಂಗಳೂರ ಹಗಲ ಹೊಳೆ ಅಂಥಾದಲ್ಲ ಬಿಡಿ. ಮುಂಬೆಳಗಿಗೆ ಜೀವತಳೆದು ಮಧ್ಯಾಹ್ನಕ್ಕೆ ಮೈದುಂಬಿ ಸಂಜೆಗೆ ಭೋರ್ಗರೆದು ರಾತ್ರಿಗೆ ಬತ್ತುವ ನದಿ. ಅದಕ್ಕೆ ಪ್ರತಿದಿನವೂ ಯೌವ್ವನ, ವೃದ್ಧಾಪ್ಯ, ನಿತ್ಯವೂ ಮರಣ ಜನನ. ರಿಂಗ್‌ರೋಡುಗಳ ಉಕ್ಕಿ, ಸೊಕ್ಕಿ ಹರಿಯುವ ಟ್ರಾಫಿಕ್ಕಿನ ನದಿ ಈಗಿನ ಬೆಂಗಳೂರಿನ ಜೀವನದಿ, ಜೀವನಾಡಿ. ಹದಿನೈದು ವರ್ಷಗಳ ಹಿಂದೆ ನಮ್ಮ ಕತ್ರಗುಪ್ಪೆಯವರು, ಇಲ್ಲಿ ರಿಂಗ್ ರೋಡು ಬರುತ್ತದಂತೆ ಸೀದಾ ಮೈಸೂರು ರಸ್ತೆಗೆ ತಲುಪಬಹುದು ಅಂತೆಲ್ಲಾ ಜಲ್ಲಿ ರಾಶಿ ತೋರಿಸಿ ಮಾತನಾಡುತ್ತಿದ್ದಾಗ ಅದು ಯಾವುದೋ ದೂರದ ಕನಸಿನ ಮಾತು ಅನ್ನಿಸುತ್ತಿತ್ತು. ಈಗ ಅದು ನಮ್ಮ ಕಣ್ಣೆದುರಿನ ಕಟುವಾಸ್ತವ. ಹೆಬ್ಬಾವಿನ ಹಾಗೆ ಬುಸುಗುಡುತ್ತ, ಉದೋ ಉದ್ದ ಮಲಗಿರುವ ರೋಡಿನ ಮೇಲೆ ರಾತ್ರಿ ಇಡೀ ಲಾರಿಗಳು ಗುಟುರು ಹಾಕುತ್ತಾ ಚಲಿಸುತ್ತವೆ. ಅದರ ಹಗಲಿನ ವೈಭವ ಮಾತ್ರ ಬೇರೆಯೇ ಆಗಿರುತ್ತದೆ.

ಹಕ್ಕಿಗಳು ಚಿಲಿಪಿಲಿಗುಟ್ಟುವ ಹೊತ್ತಿಗೆ, ನಂಬಿಸ್ವಾಮಿ, ಬೆಂಗಳೂರಿನಂಥ ಊರಿನಲ್ಲಿ ಇನ್ನೂ ಪಕ್ಷಿಗಳು ಚಿಲಿಪಿಲಿಗುಡುತ್ತವೆ! ಕೆಲವು ಜಾಗಗಳಲ್ಲಿನ್ನೂ ಅಲ್ಪ ಸಂಖ್ಯೆಯಲ್ಲಾದರೂ ಗುಬ್ಬಿಗಳೂ ಉಳಿದಿವೆ. ಇನ್ನೂ ಕತ್ತಲೆ ಉಳಿದಿರುವ ಮುಂಬೆಳಗಿಗೇ ಬಂದಿಳಿಯುವ

ಬಿಸಿಬಿಸಿ ಸುದ್ದಿಯ ಪತ್ರಿಕೆಗಳು, ತಮ್ಮ ಯಾವತ್ತಿನ ಕೇಕೆ, ಸಿಡುಕುತನ ವೃತ್ತಿ ನಿರತೆಯ ನಡುವೆಯೆ ಎಷ್ಟೊಂದು ಹುಡುಗರ ಸೈಕಲ್ಲುಗಳ ಬೆನ್ನೇರಿ ನಿಮ್ಮ ಮನೆ ತಲುಪುವುದಿಲ್ಲ? ಈ ನಡುವೆ ಎಷ್ಟೊಂದು ಕೈಗಳು ಅದರ ಹಿಂದೆ ಬದಲಾಗಿರುತ್ತದೆ? ಹುಡುಗ ಬಾರದ ದಿವಸ ತನ್ನ ದಡೂತಿ ದೇಹವನ್ನು ಬೈಕಿನ ಮೇಲೆ ಹೇರಿಕೊಂಡು, ಅಂಬಾರಿ ಹಾಗಿರುವ ದೊಡ್ಡ ಪೇಪರು ಬಂಡಲಿನ ಹಿಂದೆ ಕೂತ ಏಜಂಟು ಮೈಸೂರು ಮಹರಾಜನ ಹಾಗೆ, ಆಡುವ ಹಾಗೂ ಇಲ್ಲದೆ ಅನುಭವಿಸುವ ಹಾಗೂ ಇಲ್ಲದೆ ಬುಸುಗುಡುತ್ತ ಓಡಾಡುತ್ತಾನೆ, ಒಪ್ಪಿಕೊಂಡ ಮನೆಗಳಿಗೆ ತಪ್ಪದೇ ಪೇಪರ್ ತಲುಪಿಸುತ್ತಾನೆ. ಚುಮು ಚುಮು ಬೆಳಕು ಮೂಡುವ ಹೊತ್ತಿಗೆಲ್ಲಾ ಬಣ್ಣ ಬಣ್ಣದ ವಾಹನಗಳು ರಸ್ತೆಯನ್ನು ಆಕ್ರಮಿಸಿ ನದಿಯಂತೆ ರಿಂಗ್‌ರೋಡಿನ ಉದ್ದಕ್ಕೂ ಭೋರ್ಗರೆಯುತ್ತವೆ. ಈ ನದಿಗೆ ಜೀವ ತುಂಬಿಕೊಳ್ಳುವುದೇ ಇಲ್ಲಿಂದ. ಚಲನೆಯ ನದಿಗೆ ಸಾವಿರಾರು ಕಿರುತೊರೆಗಳು ಕೂಡಿಕೊಳ್ಳುತ್ತವೆ. ಎಷ್ಟೊಂದು ವಿಧದ, ಬಣ್ಣದ, ಗಾತ್ರದ ಗಾಡಿಗಳು, ವ್ಯಾನುಗಳು, ಬಸ್ಸುಗಳು, ಕ್ಯಾಬುಗಳು, ಆಟೋರಿಕ್ಷಾಗಳು, ಬೈಕು ಸ್ಕೂಟರುಗಳು ಅವುಗಳ ಥರಾವರಿ ಮಾಡೆಲ್ಲು, ಅವುಗಳ ವೇಗ ವಯ್ಯಾರ... ಅವುಗಳ ಮೇಲೆ ಧಾವಿಸುವ ಮನುಷ್ಯರು ಅವರ ಅಸಂಖ್ಯ ಗುರಿಗಳು ವಾರೆವ್ಹಾ ಜಗತ್ತೆ! ಒಂದರ ಬೆನ್ನಿಗಂಟಿದ ಹಾಗೆ ಮತ್ತೊಂದು. ಎಡದಿಕ್ಕಿನವು ಊರ ಒಳಕ್ಕೆ ಹೊರಟರೆ ಬಲದಿಕ್ಕಿನವು ಊರ ಹೊರಕ್ಕೆ ಸಾಗುತ್ತವೆ. ತ್ರಿಜ್ಯದಿಂದ ಕೇಂದ್ರದ ಕಡೆಗೂ, ಕೇಂದ್ರದಿಂದ ಅಂಚಿನವರೆಗೂ ಧಾವಿಸುವುದೇ ಅಲ್ಲವೆ ನಗರದ ಬದುಕು?

ಬೋರ್ ಎಂಬ ವಿಜ್ಞಾನಿ ಅಣುವಿನ ಮೂಲ ಸ್ವರೂಪದ ಬಗ್ಗೆ ತನ್ನ ಸಂಶೋಧನೆ ಮಂಡಿಸಿದ್ದ; ಪರಮಾಣುವಿನೊಳಗಿನ ಸಣ್ಣ ಕಣಗಳು ತಮ್ಮ ಒಳಗೇ ಒಂದು ಶಕ್ತಿಯ ನೆಲೆಯಿಂದ ಮತ್ತೊಂದಕ್ಕೆ ಧಾವಿಸುತ್ತಿರುತ್ತವೆ. ಹೀಗೆ ಸುಮ್ಮನೆ ಹತ್ತಿಳಿಯುವ ಧಾವಂತದಲ್ಲೇ ಅವು ತಮ್ಮ ಶಕ್ತಿಯನ್ನು ಪಡೆದುಕೊಳ್ಳುವ ಹಾಗೂ ಕಳೆದುಕೊಳ್ಳುವ ಎರಡೂ ಕ್ರಿಯೆ ಏಕಕಾಲಕ್ಕೆ ಜರುಗುತ್ತಿರುತ್ತದೆ. ಪರಮಾಣುಗಳಿಂದಾದ ನಾವು, ನಮ್ಮ ಜಗತ್ತು, ನಾವು ಕಟ್ಟಿಕೊಂಡ ಊರುಗಳು, ಹೀಗೇ ತಮ್ಮ ಮೂಲಸ್ವಭಾವಕ್ಕೆ ಬಂಧಿಗಳಲ್ಲವೆ? ಕಾವಾಕ್ಯದಿಂದ ವೈಟ್‌ಫೀಲ್ಡ್‌ಗೂ, ಕಮ್ಮನಹಳ್ಳಿಯಿಂದ ಗೊಟ್ಟಿಗೆರೆಗೂ ಹನುಮೋಲ್ಲಂಘನ! ಬೆಂಗಳೂರಿಗರ ಬದುಕು ಸೀಮೋಲ್ಲಂಘನ ಮಾಡುವ ಸೀಮೆ ಇದ್ದವರ ಬಾಬತ್ತು.

ಕಾಮಾಕ್ಯ ಅಸ್ಸಾಮಿನ ಒಂದು ಜಿಲ್ಲೆಯ ಹೆಸರು. ಅದರ ಹೆಸರಿನ ಶಕ್ತಿಪೀಠವೂ ಸುಪ್ರಸಿದ್ಧ. ಆದರೆ, ನಮ್ಮ ಬೆಂಗಳೂರಿನದ್ದು ಮಾತ್ರ ಹಳೇ ಕತ್ರಗುಪ್ಪೆ ಗ್ರಾಮದ ಕಾಮಾಕ್ಯ ಸಿನಿಮಾ ಟೆಂಟಿನ ಮರು ರೂಪಾಂತರ. ಈಗೆಲ್ಲಾ ಬೆಂಗಳೂರಿನ ಸುತ್ತಮುತ್ತಲ ಸಿನಿಮಾ ಟೆಂಟುಗಳು ಕಾಂಕ್ರೀಟು ಕಟ್ಟಡಗಳನ್ನು ಹೊಂದಿ ಥಿಯೇಟರುಗಳಾಗಿ ರೂಪಾಂತರ ಹೊಂದಿವೆ, ಮಲ್ಟಿಪ್ಲೆಕ್ಸ್‌ಗಳ ಎದುರು ಏದುಸಿರು ಬಿಡುತ್ತಲೇ ತಮ್ಮ

ಸ್ಪರ್ಧೆ ನೀಡುತ್ತಿವೆ. ಇವೆಲ್ಲಾ ಏನೇ ಇದ್ದರೂ ನಮ್ಮೂರಿನ ಕಾಮಾಕ್ಯವೂ ಒಂದು ಶಕ್ತಿಪೀಠವೇ.

ನೀವು ಹೊತ್ತಾರೆಗೇ ಎದ್ದು ನಿಮ್ಮ ಎಲ್ಲಾ ಅಹಂಕಾರಗಳನ್ನು, ಪೇಟೆಯವರು ಹಳ್ಳಿಯವರು ಎಂಬ ಬಡಿವಾರಗಳನ್ನು ಬದಿಗಿಟ್ಟು ಬಿಚ್ಚುಮನಸ್ಸಿನಿಂದ ಇಲ್ಲಿ ನಿಂತರೆ ಸಾಕು, ಭೋರ್ಗರೆಯುವ ನದಿ ನಿಮ್ಮ ಅನುಭವಕ್ಕೆ ಬಾರದಿದ್ದರೆ ನನ್ನಾಣೆ. ಬೆಂಗಳೂರಿಗರ ಗಡಿಬಿಡಿಯ ಬೆಳಗು ಅದರ ಸೌಂದರ್ಯ ಕಾಣಲಿಕ್ಕೂ ಒಂದು ಸ್ಪೆಷಲ್ ಕಣ್ಣು ಬೇಕು. ಅದೂ ಈ ಕಾಮಾಕ್ಯ ಎಂಬ ಹಗಲ ಹೊಳೆಗೆ ಉಳಿದ ಸಣ್ಣಪುಟ್ಟ ರೋಡುಗಳಿಂದ ಸಾಗಿ ಬರುವ ವಾಹನ – ಜನಪ್ರವಾಹ ನೋಡಬೇಕು. ಇದು ಹಲವು ವೃತ್ತಿಯ ಹಲವು ರೀತಿಯ, ವಯೋಮಾನದ ಮನುಷ್ಯರ ಕೂಡಲ ಸಂಗಮ.

ಹೀಗೆ ಬನ್ನಿ, ನೋಡಿ ನಮ್ಮ ಕಾರ್ಪೊರೇಷನ್ನಿನ ಕಸಗುಡಿಸುವ ಸುಂದರಿಯನ್ನ. ಬಿಗಿಯಾಗಿ ಹೆಣೆದ ಜಡೆ, ನೀಟಾಗಿ ಉಟ್ಟ ಸೀರೆಯ ಮೇಲೊಂದು ಅಂಗಿ ತೊಟ್ಟು, ತನ್ನ ಪೊರಕೆಯನ್ನ ಪಕ್ಕದಲ್ಲಿ ನಿಧಾನಕ್ಕೆ ವಿಶ್ರಮಿಸಲು ಬಿಟ್ಟು, ರಸೆ ಬದಿಯ ಗಾಡಿಯಿಂದ ಕೊಂಡ ಟೀ ಕುಡಿಯುತ್ತಿದ್ದಾಳೆ. ಅವಳು ಮತ್ತವಳ ಗೆಳತಿಯ ಹಾಗೆ ಇಬ್ಬರ ಪೊರಕೆಗಳು ಅಕ್ಕಪಕ್ಕ ವಿರಮಿಸಿವೆ. ಟೀ ಮುಗಿಸಿದ ನಂತರ ಯಾವತ್ತಿನ ಸಾವಕಾಶದಲ್ಲೆ ತನ್ನ ಕೆಲಸ ಆರಂಭಿಸಿದ್ದಾಳೆ. ಒಂದಷ್ಟು ಗುಡಿಸಿ ನಂತರ ಎದ್ದ ಧೂಳಿನ ಮೋಡದ ಆಚೆಬದಿಗೆ ನಿಂತ ಅವಳಿಗೆ ಈಗ ಒಂದು ಬ್ರೇಕ್. ಒಂದು ವೀಳ್ಯದೆಲೆಯನ್ನು ಅರ್ಧ ಹರಿದು, ಉಳಿದರ್ಧ ಜೋಪಾನ ಮಡಿಸಿ ಬಾಯಿಗಿಟ್ಟು, ಅಡಕೆ ಜಗಿದು ಅವಳ ಮುಂದೆ ನೋವಾಗದಂತೆ, ಅರ್ಧ ಕಸ ಬಂದೂ ಬಾರದಂತೆ ಗುಡಿಸುವುದನ್ನು ನೀವು ನೋಡಿಯೂ ನೋಡದಂತಿರಬೇಕು!

ಇನ್ನು ಹಗಲ ಹೊಳೆಯ ಈ ದಂಡೆಯ ಮೇಲೆ, ಥೂ! ಸರಳವಾಗಿ ಫುಟ್‌ಪಾತೂ ಅನ್ನಿ, ಸಾಫ್ಟ್‌ವೇರಿಗಳ ಸಂಭ್ರಮ; ಬಣ್ಣ ಬಣ್ಣದ ಬಟ್ಟೆಗಳಲ್ಲಿ ಉಕ್ಕುವ ಯೌವ್ವನಸ್ಥರಾದ ಆ ಹುಡುಗಿಯರ, ಅರೆ ಆಂಟಿಯರ ಸೊಗಸು–ಬಿನ್ನಾಣ, ವಿವರಿಸಿದರೆ ಅದೇ ಒಂದು ಕತೆಯಾದೀತು. ಇಲ್ಲಿನ ಹುಡುಗಿಯರ ಛಮಕ್ಕಿನ ಎದುರು ಹುಡುಗರದ್ದು ಪಕ್ಕವಾದ್ಯ ಅಷ್ಟೇ. ಮುಂಚೆಗೆ ಬಂದ ಕೆಲವರು, ತಮ್ಮ ಬಸ್ಸು ಗಾಡಿಗಳ ದಿಕ್ಕಿಗೆ ಕಣ್ಣು ನೆಟ್ಟು ಬಕಧ್ಯಾನದಲ್ಲಿ ತೊಡಗಿದ್ದಾರೆ, ಬಂದ ಕೂಡಲೇ ಗಬಕ್ಕನೆ ಎಗರಿಕೊಳ್ಳುವುದಕ್ಕೆ, ತಮ್ಮ ದಾರಿಗೆ ಸೇರಿಕೊಳ್ಳುವುದಕ್ಕೆ, ಮತ್ತೆ ಕೆಲವರು ಕೈಕಟ್ಟಿ ನಿಂತು ಕುದಿಯುತ್ತಿದ್ದಾರೆ, ಕೆಲವರ ಕಿವಿಗಳಲ್ಲಿ ಐಪಾಡು ಮೊಬೈಲುಗಳ ಈಯರ್ ಫೋನುಗಳ ಸಂಗೀತ, ಅವರಿಗೂ ಇಲ್ಲಿನ ಆಗುಹೋಗುಗಳಿಗೂ ಸಂಬಂಧವೇ ಇಲ್ಲದ ಹಾಗೆ ಬಂದ ತಮ್ಮ ಗಾಡಿಗಳೊಳಗೆ ತೂರಿಕೊಳ್ಳುವ ಅವರು ತಮ್ಮೊಳಗೇ ನಿಮಗ್ನರು.

ಸ್ವಲ್ಪ ತಾಳಿ, ಈಗ ಬರುತ್ತಿದ್ದಾಳೆ 'ಲೇಟ್ ಲತೀಫ್'. ದಿನವೂ ಅವಳದ್ದು ಮುಗಿಯದ

ಮೇಕಪ್ಪು. ಬಸ್ಸು ಬಂದು ನಿಂತು ಕಾಯತೊಡಗಿದ ಮೇಲೆ ತನ್ನ ಹೊಂಡಾ ದ್ವಿಚಕ್ರದಲ್ಲಿ ಧಾವಿಸಿ ಬರುತ್ತಾಳೆ. ರಸ್ತೆ ಬದಿಗೆ ಚರ್ರನೆ ಬ್ರೇಕು ಹಾಕಿ ಗಾಡಿ ನಿಲ್ಲಿಸುತ್ತಲೇ ಅದರಿಂದ ಛಂಗನೆಗರಿ ಜಿಂಕೆಮರಿಯ ಹಾಗೆ ಬಸ್ಸಿಗೆ ಓಡುತ್ತಾಳಲ್ಲ ಅದನ್ನ ನೋಡುವುದೇ ಒಂದು ಛಂದ, ತನ್ನನ್ನ ಎಲ್ಲರೂ ನೋಡುತ್ತಾರೆ ಎಂದು ಗೊತ್ತಿದ್ದೇ ಇನ್ನಷ್ಟು ವಯ್ಯಾರದಿಂದ ತನ್ನ ಬಸ್ಸಿಗೆ ಅವಳು ಧಾವಿಸುವುದು ನಿತ್ಯ ನಡೆಯುವ ಜಗನ್ನಾಟಕ! ಅರೆ ಅವಳು ಬೇಡದ ಬಾಯ್‌ಫ್ರೆಂಡಿನ ಹಾಗೆ ಬಿಟ್ಟು ಹೋದ ಬೈಕಿನ ಗತಿ ಹೇಗೆ? ಅಂತ ನೀವಂದುಕೊಂಡಿರಾ?

ಸ್ವಲ್ಪ ತಾಳಿ, ಇನ್ನೂ ಹತ್ತು ಹದಿನೈದು ನಿಮಿಷದಲ್ಲಿ ನಿಧಾನವಾಗಿ, ಇಬ್ಬರೂ ತೂರಬಹುದಾದ ಟೀ ಷರ್ಟಿನಲ್ಲಿ ಒಬ್ಬರೇ ವಾಕಿಂಗ್ ಬರುವ ಅವಳಪ್ಪ ಆ ನಿಷ್ಪಾಪಿ ಸ್ಕೂಟರನ್ನು ವಾಪಸ್ಸು ಒಯ್ಯುತ್ತಾರೆ.

ಇನ್ನೊಂದು ಸ್ಕೂಟರಿನ ಅಪ್ಪ ಮಕ್ಕಳ ಡ್ರಾಮ ಬೇರೆ ಥರದ್ದು. ಇಬ್ಬರದ್ದೂ ಒಂದೇ ಥರದ ಕಪ್ಪು ಮುಖ, ಒಂದಕ್ಕೆ ಕಪ್ಪು ಮೀಸೆ ಇನ್ನೊಂದಕ್ಕೆ ಬಿಳಿಯದು, ಅಪ್ಪನಿಗೆ ಬಾಯ್ ಕೂಡಾ ಎಸೆಯದೆ, ಬಸ್ಸಿಗೆ ಧಾವಿಸಿದ ಮಗ, ಅಪ್ಪ ಮಾತ್ರ ಹೆಮ್ಮೆಯ ನೋಟ ನಿರುಕಿಸಿ ಗಾಡಿ ಮನೆಯ ಕಡೆಗೆ ಬಿಡುತ್ತಾನೆ. ಇನ್ನು ಆ ಗಂಡ ಹೆಂಡಿರ ಡ್ರಾಮ ಮತ್ತೊಂದು ವಿಚಿತ್ರ. ನೈಟಿಯಲ್ಲೆ ಗಂಡನನ್ನು ಬಸ್ಸು ಹತ್ತಿಸಲು ಬಂದ ಅವಳು ಅವನು ಇಳಿದ ನಂತರ ತನ್ನತ್ತ ತಿರುಗಬಹುದು ಎಂದು ಒಂದೆರಡು ಕ್ಷಣ ಕಾಯುತ್ತಾಳೆ. ಆದರೆ ಪತಿರಾಯ ಮಾತ್ರ ಇವಳ ಸಹವಾಸ ತಪ್ಪಿದರೆ ಸಾಕು ಅನ್ನುವವನ ಹಾಗೆ ತಿರುಗಿ ನೋಡದೆ ಬಸ್ಸಿಗೇ ತುಂಬಿಕೊಳ್ಳುತ್ತಾನೆ. ಇನ್ನು ಈ ಹೊಸಾ ಜೋಡಿಯದ್ದು ಮತ್ತೊಂದು ಕತೆ. ಅವಳಿಗೆ ತನ್ನ ಬಸ್ಸು ಬರುವ ತನಕ ನಿಂತು ಕಾಯುವ ಉತ್ಸಾಹವಿಲ್ಲ, ತನ್ನ ಗಂಡನ ಬೆನ್ನು ಬಿಡುವ ಮನಸ್ಸಿಲ್ಲ. ಮತ್ತೊಬ್ಬಳದ್ದು ಇನ್ನೊಂದು ಬಿಕ್ಕಟ್ಟು. ಅವಳ ಗಂಡನ ಬಸ್ಸು ಸಾಗಿ ಹೋದ ಮೇಲೆ ತನ್ನಷ್ಟೇ ಎತ್ತರವುಳ್ಳ ಆ ಸ್ಕೂಟರ್ ತಿರುಗಿಸಿಕೊಂಡು ಮತ್ತೆ ಮನೆತನಕ ಹೋಗುವುದು ಅವಳಿಗೊಂದು ಸಾಹಸ ಮತ್ತು ಪುಳಕ. ಆ ಹೊಸಾ ಸ್ಕೂಟರಿನ ಬಣ್ಣ ಮಿನುಗು ಎಲ್ಲಾ ಅವಳ ಹೊಸ ದಾಂಪತ್ಯಷ್ಟೇ ಹೊಸತು ಹೊಸತು.

ಈ ಕಡೆ ಗಮನಿಸಿ. ಯಾರನ್ನೂ ಕೇರು ಮಾಡದಂತಿರುವ ಆಂಟಿಯರ ಠೋಳಿ, ತಂತಮ್ಮ ಮಕ್ಕಳನ್ನೆಲ್ಲಾ ಸ್ಕೂಲುಬಸ್ಸುಗಳಿಗೆ ತುರುಕಿದ ನಂತರ, ಈಗ ಅವಧಿಗೆ ಒಂದು ಇನ್ನಿಂಗ್ಸ್ ಮುಗಿಸಿದ ನಿರಾಳತೆ. ಅವಳು ತಮ್ಮ ತಂಗ್ಲೀಷಿನಲ್ಲಿಯೇ ಉಲಿಯುತ್ತಿದ್ದಾರೆ. (ಶೇ. 10 ತಮಿಳು ಶೇ 90 ಇಂಗ್ಲೀಷು ಅದಕ್ಕೆ ಅದು ತಂಗ್ಲೀಷು) ಮಕ್ಕಳ ಸ್ಕೂಲುಗಳು ಅವುಗಳ ಪಾಠಗಳು ಅದನ್ನು ಕಲಿಸಲು ಪಟ್ಟ ಪಡಿಪಾಟಲುಗಳು ಒಂದೆ ಎರಡೆ ಅವರ ಮಾತಿನ ದಾಳಿಗೆ. ನಮಗೆ ಮಕ್ಕಳಾಗುವುದು ಎಂದರೆ ಎಲ್ಲ

ಮಕ್ಕಳ ಮೂಲಕ ನಮ್ಮ ಮಕ್ಕಳೂ, ನಮ್ಮ ಮಕ್ಕಳ ಮೂಲಕ ಎಲ್ಲ ಮಕ್ಕಳೂ ಅನುಭವಕ್ಕೆ ಬರುವುದೇ ಅಲ್ಲವೆ?

ಬಿಸಿಲ ಕೋಲುಗಳು ಬಲಿಯ ತೊಡಗಿದ ಹಾಗೆಲ್ಲ ಬಿಸಿಲ ಹಂದರ ಈಗ ರೂಪುಗೊಳ್ಳುತ್ತಿದೆ, ಮುಂಜಾವಿನ ಚೈತನ್ಯ ಎಲ್ಲೆಡೆ ಹಬ್ಬುತ್ತಿದೆ. ಬಸ್ಸಿನ ನಂತರ ಬಸ್ಸುಗಳು ಗಾಡಿಗಳು ಸ್ಕೂಟರುಗಳು ಸ್ಕೂಲು ಬಸ್ಸುಗಳ ಕರ್ಕಶ ಹಾರನ್ನು ಪರಸ್ಪರ ಅಸಹನೆ ಅವಸರಗಳು, ಕೆಲವು ಸಲ ಒಬ್ಬಿಬ್ಬರ ನಿಧಾನ ಬೇಜವಾಬ್ದಾರಿಗಳಿಗೆ ಹಿಂದೆ ಹಿಂಡು ಹಿಂಡು ಗಾಡಿಗಳು ಸಾಲುಗಟ್ಟಿ ನಿಲ್ಲಬೇಕಾಗುತ್ತದೆ. ಮುಂದಿನವನ ನಿಧಾನಕ್ಕೆ ಹಿಂದಿನವನ ಅವಸರ ಬೈಗುಳ ಧಾವಂತಗಳು. ಸಾಧ್ಯವಾದರೆ ಮುಂದಿನ ಗಾಡಿಯವನನ್ನ ತನ್ನ ಹಾರನ್ನಿನ ಸದ್ದಿನಿಂದಲೇ ಕೊಂದು ಬಿಡುವಷ್ಟು ಅಕಾರಣ ಸಿಟ್ಟು ಹಿಂದಿನವನಿಗೆ.

ಈ ಗೊಂದಲ ಗದ್ದಲಗಳ ನಡುವೆಯೆ ದ.ರಾ ಬೇಂದ್ರೆಯವರ ಕವಿತೆಯೊಂದರ ಸಾಲು ಮನಸ್ಸಿನ ಭಿತ್ತಿಯೊಳಗೆ ಮೂಡುತ್ತಿದೆ, 'ಹೊನ್ನ ಹೂ ಬಿಸಿಲ ಹಂದರ ಕೆಳಗಾಡುವರು ಚಿನ್ನಾಟದಲಿ ಚನ್ನ ಚೆನ್ನೆಯರು'. ಈ ಮಕ್ಕಳು, ಯುವಕರು, ಮುದುಕರು, ಅಮ್ಮಂದಿರು  ಎಲ್ಲಾ ಈ ಹೂಬಿಸಿಲ ಹಂದರದ ಕೆಳಗೆ ಚಿನ್ನಾಟವಾಡುವ ಚೆನ್ನ ಚೆನ್ನೆಯರಾಗಿ ಕಾಣುತ್ತಿದ್ದಾರೆ. ಇವರ ಕರಸ್ಪರ್ಶದಿಂದ ಮಣ್ಣಿಗೆ ಹೊನ್ನ ಬೆಲೆ ಬಂದಿತಂತೆ. ಕಾಳಿಂಗರಾಯರು ಸುಶ್ರಾವ್ಯವಾಗಿ ಹಾಡಿರುವ ಈ ಹಾಡು ಈ ಕ್ಷಣಕ್ಕೆ ಈ ಹೊತ್ತಿನ ಸ್ಥಿತಿಗೆ ಎಷ್ಟೊಂದು ಸೂಕ್ತವಾಗಿ ಹೊಂದುತ್ತಿದೆ. ಬೇಂದ್ರೆ ಎಂಥಾ ಮುನ್ನೋಟದ ಕವಿ! ಬೆಂಗಳೂರಿನ ರೀಯಲ್ ಎಸ್ಟೇಟು ಬಳ್ಳಾರಿಯ ಗಣಿಗಾರಿಕೆಯ ಬಗೆಗೂ ಅನ್ವಯಿಸಬಲ್ಲ ದಾರ್ಶನಿಕತೆ ಹೊಂದಿದ್ದ ಕವಿತೆಯನ್ನು ಆ ಕಾಲಕ್ಕೇ ಬರೆದಿದ್ದಾರಲ್ಲ ಎಂದೆಲ್ಲ ಅನ್ನಿಸತೊಡಗುತ್ತದೆ.

ಈಗ ಧಾವಿಸಿ ಬರತೊಡಗಿದ್ದಾಳೆ ಆ ಸಾಫ್ಟ್‌ವೇರ್ ಅಮ್ಮ, ಅರೆನಿದ್ದೆಯ ಮಗುವನ್ನ ಹೆಗಲ ಮೇಲೆ ಮಲಗಿಸಿಕೊಂಡು. ಆ ಟ್ರಾಫಿಕ್ಕಿನ ನದಿಯ ದಡಕ್ಕೆ ಅರ್ಧ ನಡೆಯುತ್ತ ಮತ್ತರ್ಧ ಓಡುತ್ತಿದ್ದಾಳೆ. ಆಚೆ ಬದಿಗೆ ಕಾಯುತ್ತಿರುವವಳು ಅವಳ ತಂಗಿಯಿರಬೇಕು. ಇವಳು ಈ ವೈತರಣಿಯನ್ನು ದಾಟುವುದನ್ನು ಕೈಕಟ್ಟಿಕೊಂಡು ಎಲ್ಲೋ ನೋಟ ನೆಟ್ಟ ವಿವೇಕಾನಂದರ ಹಾಗೆ ನಿಂತಿದ್ದಾಳೆ. ಅವಳ ಪರಿಸ್ಥಿತಿಯ ಬಗ್ಗೆ ಇವಳ ತುಟಿಯಂಚಿನಲ್ಲಿ ಒಂಚೂರು ನಗುವೂ ಇದೆ. ಮಗುವನ್ನು ಅವಳ ಕೈಗೆ ವರ್ಗಾಯಿಸಿದ ಅಮ್ಮನೀಗ ನಿರಾಳ. ಇನ್ನೇನು ಬರಲಿರುವ ಅಥವಾ ಬಂದು ನಿಂತು ಗಂಟಲು ಹರಿದುಕೊಳ್ಳುತ್ತಿರುವ ಬಸ್ಸಿನ ಮತ್ತೊಂದು ದಡಕ್ಕೆ ಧಾವಿಸಿದ್ದಾಳೆ. ಅವಸರದಲ್ಲಿ ಮರೆತಿರುವ ಕೇಶಾಲಂಕಾರ ಈಗ ಅವಳಿಗೆ ನೆನಪಾಗಿದೆ. ಕ್ಲಿಪ್ಪು ಬಿಡಿಸಿ ಕೂದಲು ಝಾಡಿಸಿ ಅಲ್ಲೆ ಅವಸರದ ಮೇಕಪ್ಪು ಆರಂಭಿಸಿದ್ದಾಳೆ.

ಆಹಾ! ಈಗ ಬಂತೈ ನೋಡಿ ಅಪ್ಪ, ಮಗಳು ಮತ್ತು ಟಾಮಿ. ಸ್ಕೂಟರಿನ ಮುಂಭಾಗದಲ್ಲಿ ಮೂತಿ ಎತ್ತಿಕೊಂಡು ಗತ್ತಿನಿಂದ ಕೂರುವ ನಾಯಿ ಹಿಂದೆ ಯಜಮಾನ

ಮತ್ತವನ ಮಗಳು. ಮಗಳು ಸ್ಕೂಟರ್ ಇಳಿದು ಅಪ್ಪನ ಜೊತೆ ಹರಟಿ ನಾಯಿಯನ್ನು ಮುದ್ದಿಸಿ ಅಪ್ಪನಿಗೂ ನಾಯಿಗೂ ಜೈ ಹೇಳಿದ್ದಾಳೆ. ಅದನ್ನು ನೋಡುತ್ತಿರುವ ಕೆಲವರಿಗೆ ಆ ನಾಯಿಯ ಬಗೆಗೆ ಹೊಟ್ಟೆಕಿಚ್ಚಾಗುತ್ತಿದೆ. ಅಕ್ಕ ಪಕ್ಕ ನಿಂತ ಸ್ಕೂಲು ಮಕ್ಕಳಿಗೂ ಈ ನಾಯಿಯ ಬಗೆಗೆ, ಛೆಛೆ ಟಾಮಿಯ ಬಗೆಗೆ ಕುತೂಹಲ. ಅವೂ ಇದರ ಮೈತಡವಿ 'ಬೌ' ಅನ್ನಿಸಿ ಖುಷಿ ಪಡುತ್ತಿವೆ, ಯುದ್ಧ ಜಯಿಸಿದ ಸಂಭ್ರಮದಲ್ಲಿ ಮಗಳನ್ನು ಬೀಳ್ಕೊಟ್ಟ ಅಪ್ಪ ಟಾಮಿ ಹಾಗೂ ಸ್ಕೂಟರನ್ನು ಹಿಂದಕ್ಕೆ ತಿರುಗಿಸಿದ್ದಾನೆ.

ಆಫೀಸಿಗೆ ಹೊರಟ ಒಬ್ಬೊಬ್ಬರದು ಒಂದೊಂದು ಭಾವ, ಭಂಗಿ. ಅವನು ತನ್ನ ಬೆನ್ನ ಬ್ಯಾಗಿನ ಸಮೇತ ಹೊಟ್ಟೆಯನ್ನು ಹೊತ್ತುಕೊಂಡು ಬಸ್ಸಿಗೋಡಬೇಕಾದ ಸಂಕಟಕ್ಕೀಡಾದರೆ, ಈ ಕುಂಕುಮಧಾರಿ ನಿಧಾನಕ್ಕೆ ವಧಾಸ್ಥಾನಕ್ಕೆ ಹೊರಟ ಕುರಿ ಹಾಗೆ ಹೆಜ್ಜೆಯ ಮೇಲೊಂದು ಹೆಜ್ಜೆ ಇಡುತ್ತಿದ್ದಾನೆ.

ಇನ್ನು ಈ ಹುರುಪುಗೊಂಡ ಬೆಳಗಿನ ಧಾವಂತದಲ್ಲಿ ಕೊಂಚ ಬಿಡುವಾಗಿರುವವರು ಅಂದರೆ ಹಿರಿಯರೇ. ಒಬ್ಬರು ತಮ್ಮ ನಿತ್ಯದ ನಿಷ್ಠೆಯಿಂದ ಕೊಂಡ ಪೇಪರನ್ನು ಅಂಗಡಿಯಿಂದ ಮನೆತನಕ ಓದಿಕೊಂಡೇ ರೋಡು ಸವೆಸಿದರೆ ಮತ್ತೊಬ್ಬರು ತಮ್ಮ ನಾಯಿಯ ಜೊತೆ ವಾಕಿಂಗ್ ಬಂದಿದ್ದಾರೆ. ಬಾಂಡ್ಲಿಯಂಥಾ ಕಿರ್ಮಾನಿ ಟೋಪಿ, ದೊಗಳೆ ನಿಕ್ಕರ್, ಷೂ, ಬಗಲಿಗೊಂದು ಬಟ್ಟೆ ಬ್ಯಾಗು (ಹಾಲಿಗಿರಬೇಕು) ಆ ದೊಡ್ಡ ನಾಯಿಯ ಹಿಂದೆ ಯಜಮಾನ ಯಾರು ಅಂತಲೇ ಅನುಮಾನ. ಅದು ಅವನನ್ನು ಎಳಕೊಂಡು ರೋಡಿಗಿಳಿದರೆ ದೇವರೇ ದಿಕ್ಕು. ಈಗ ಬರುತ್ತಿದ್ದಾರೆ ಹಳೆಯ ತೆಲುಗು ಸಿನಿಮಾದ ಹೀರೋ, ರಾಜ್‌ಕಪೂರ್ ಮೀಸೆ, ಗುಪ್ಪೆ ಬಾಚಿದ ಬಿಳಿಗೂದಲ ಕ್ರಾಪು, ಅವರ ವಯಸ್ಸು, ನಿಲುವಿಗೆ ತಾಳೆಯಾಗದ ಬಿಗ್ಗ ಬಿಗಿ ಜೀನ್ಸು ಕೈಲೊಂದು ಸ್ಟೀಲಿನ ವಾಕಿಂಗ್ ಸ್ಟಿಕ್ಕು, 'ಸಾಕ್ಷಾತ್ಕಾರ'ದ ರಾಜ್‌ಕುಮಾರ್ ನೆನಪಾಗುವ ಹಾಗೆ ಜೋತಾಡುವ ಮಫ್ಲರ್ ಈ ಸೆಖೆಯ ಕಾಲಕ್ಕೆ ನೋಡುವವರ ಬೆವರಿಸುತ್ತಿದೆ.

ಬರುತ್ತಿವೆ ನೋಡಿ ವಿವಿಧ ವಾಕಿಂಗು ಗುಂಪುಗಳು. ಒಂದೇ ಥರದ ಟೀ ಷರ್ಟು, ಟ್ರ್ರಾಕ್ ಸ್ಯೂಟ್ ತೊಟ್ಟ ಅಜ್ಜ ಅಜ್ಜಿಯರು ಈಗಷ್ಟೆ ವ್ಯಾಯಾಮ ಮುಗಿಸಿ ಹೊರಟಿದ್ದಾರೆ. ಯೂನಿಫಾರಮ್ ತೊಟ್ಟ ಮಕ್ಕಳೊಂದಿಗೆ ಅವರೂ ಸ್ಪರ್ಧೆಗಿಳಿದ ಹಾಗೆ ಕಾಣತೊಡಗಿದೆ. ಇನ್ನೊಂದು ಜೋಡಿ; ಗಂಡ ತಾಳೆ ಮರವಾದರೆ ಹೆಂಡತಿ ತುಂಬೆ ಗಿಡ. ಅವನು ದಾಪುಗಾಲಿಟ್ಟು ದಾರಿ ಸವೆಸಿ ಬೆವರಿಳಿಸುತ್ತಿದ್ದರೆ, ಅವಳು ಅವನ ಸಮಕ್ಕೆ ನಡೆಯುವಂತೆ ಓಡುತ್ತಿದ್ದಾಳೆ. ಇನ್ನೊಂದು ಗುಂಪು ಸರ್ಕಾರಿ ನೌಕರರದ್ದು, ಅಲ್ಲಿನ ಕೆಲವರ ಗತ್ತು ಬೆಳಗಿನಲ್ಲೂ ಹೊಳೆಯುವ ರ್‍ಯಾಡೋ ವಾಚು, ದಪ್ಪ ಷೂಸು, ಅದಕ್ಕಿಂತ ಪಾಪ ಆ ಯಜಮಾನರು ಆಫೀಸಿನಿಂದ ಬಂದೇ ಇಲ್ಲ. ಎತ್ತಿದ ಅವರ ಮುಖದ ಗತ್ತು ಸೆಳೆದ ಮೈ ಹಾಗೇ ಇದೆ. ಗಾಡಿಯಿಲ್ಲದೆ ಬಾಡಿ ಮಾತ್ರ ವಾಕಿಂಗ್ ಬಂದಿದೆ, ಅಲ್ಲಲ್ಲ ಅದು ದೇವರ ಕೆಲಸ ಮಾಡುತ್ತಿದೆ.

ಇನ್ನು ಕೆಲವರು ರಸ್ತೆ ಬದಿಯ ತರಕಾರಿ ಆಟೋದಿಂದ ಟೊಮೆಟೋ ಎಗರಿಸಿ ತಿನ್ನುತ್ತಿದ್ದಾರೆ. ಹಸಿ ಕರಿಬೇವಿನ ಸೊಪ್ಪು, ಕದ್ದು ತಿಂದ ಟೊಮೆಟೋ ರುಚಿಕರ– ಆರೋಗ್ಯವರ್ಧಕ ಎನ್ನುವಂತೆ. ಕಳೆದುಹೋದ ಬಾಲ್ಯವನ್ನು ಮತ್ತೆ ಮರುಕಳಿಸಿ ಅನುಭವಿಸುತ್ತಿದ್ದಾರೆ. ಯಾಕೋ ಇಷ್ಟೊತ್ತಾದರೂ ಆ ಮೇಷ್ಟ್ರು ತಾತ ಬರಲಿಲ್ಲ. ಹತ್ತು ಹನ್ನೊಂದು ತಿಂಗಳ ಮೊಮ್ಮಗುವಿನೊಂದಿಗೆ ತಾತ ವಾಕಿಂಗ್‌ಗೆ ಬರುತ್ತಾರೆ. ಹೆಡ್ ಮೇಷ್ಟ್ರಾಗಿದ್ದವರು ತಮ್ಮ ಪುಟಾಣಿ ಮೊಮ್ಮಗುವಿನ ನೆಪದಲ್ಲಿ ಬಸ್ಸಿಗೆ ನಿಲ್ಲುವ ಎಲ್ಲಾ ಮಕ್ಕಳ ಸ್ಕೂಲು ಓದುಗಳ ಬಗ್ಗೆ ವಿಚಾರಿಸುತ್ತಾರೆ. ಕಳೆದುಹೋದ ತಮ್ಮ ದೈನಿಕದ ಯಾವುದೋ ಒಂದು ನೆಮ್ಮದಿಯನ್ನು ಮೊಮ್ಮಗುವಿನ ನೆಪದಲ್ಲಿ ಮಕ್ಕಳ ಜೊತೆ ಮಾತಾಡಿ ತುಂಬಿಕೊಳ್ಳುತ್ತಿದ್ದಾರೆ. ದೇವರೇ ಈ ಹಗಲಿನ ಬಿಸುಪು ಖುಷಿ ಮುಗ್ಧತೆ ಮನುಷ್ಯನ ನಡುವಿನ ಆರ್ದ್ರತೆ ಹೀಗೇ ಇರಲಿ... ಮತ್ತೆ ನೆನಪಾಗುತ್ತಿದೆ ಬೇಂದ್ರೆಯವರ ಕವಿತೆಯ ಸಾಲು– 'ಲೀಲೆಯಲಿ ಯಾವುದೂ ವಿಫಲವಲ್ಲ...'.

ನದಿ ದಡದಲ್ಲಿ ನಡೆವ ಈ ಲೀಲೆಯಲ್ಲಿ, ಹರಿವಿನಲ್ಲಿ ಬದುಕಿನ ತಂತುಗಳನ್ನು ಒಂದಕ್ಕೊಂದು ಬೆಸೆಯುವ ಎಲ್ಲವೂ, ಎಲ್ಲರ ಕ್ಷಣಗಳೂ ಸಫಲ.

**ಡಿ.ವಿ. ಪ್ರಹ್ಲಾದ**

ಮಯೂರ ಮಾಸಿಕ ಮೇ ೨೦೧೪

## ಚುಮು ಚುಮು ನಸುಕಿನಲಿ ಮೂರು ಕರಡಿಗಳಾಡುತ್ತಿದ್ದವು......

ಒಂದು ಕಾಡಿನ ಮಧ್ಯದೊಳಗೆ
ಎರಡು ಮರಗಳ ನಡುವೆ ಮಲಗಿ
ಮೂರು ಕರಡಿಗಳಾಡುತ್ತಿದ್ದವು
ನಾಲ್ಕು ಮರಿಗಳ ಸೇರಿಸಿ......

ಜಿ.ಪಿ. ರಾಜರತ್ನಂ ಅವರ ಈ ಶಿಶುಗೀತೆ ಪ್ರಾಥಮಿಕ ತರಗತಿಗಳಲ್ಲಿ ಕಲಿತ ನೆನಪಿರಬಹುದು. ಕಾಡಿನ ಮಧ್ಯದಲ್ಲಿ ಹೋಗಿ ಕರಡಿಗಳನ್ನು ಎಣಿಸುತ್ತಾ ಆಡುವವರು ಯಾರಾದರೂ ಇದ್ದರೆ ಅವರು ಸಾಹಸಿಗಳೇ ಸೈ. ಹಾಂ! ಅಂತಹ ಸಾಹಸ ತನ್ನಷ್ಟಕ್ಕೇ ತಾನೇ ಒದಗಿ ಬಂದರೆ?

ಮೊನ್ನೆ ಮೊನ್ನೆಯಷ್ಟೇ ಗುಡಾಣದಂತಹ ಹೊಟ್ಟೆಯನ್ನು ಕರಗಿಸಲು ನಾಲ್ಕಾರು ಮೈಲು ನಡೆಯಲೇಬೇಕು ಎಂದು ಫ್ಯಾಮಿಲಿ ಡಾಕ್ಟರ್ ಪ್ರಿಸ್ಕ್ರೈಬ್ ಮಾಡಿದ ಮೇಲೆ ಬೆಳಗ್ಗೆ, ಸಂಜೆ ಒಂದಷ್ಟು ಕೈಕಾಲಾಡಿಸುತ್ತಾ ಓಡಾಡಲೇಬೇಕಾದ ಪರಿಸ್ಥಿತಿ ಉದ್ಭವಿಸಿತು. ಹತ್ತಿರದಲ್ಲೇ ಇರುವ, ಆ್ಯಂಗ್ರಿ ಯಂಗ್‌ಮ್ಯಾನ್ ವಿಷ್ಣುವರ್ಧನ್ ನಾಗರ ಹಾವು ಸಿನಿಮಾದಲ್ಲಿ ಕುಳಿತಿದ್ದ ಸರ್ಕಾರಿ ಕಾಲೇಜಿನ ಕ್ರೀಡಾಂಗಣದಲ್ಲಿ, ಸೂರ್ಯನ ಸುತ್ತಲೂ ಗ್ರಹಗಳು ಸುತ್ತುತ್ತಿರುವಂತೆ ಗರಗರ ಸುತ್ತುತ್ತಿರುವ ಹತ್ತಾರು ಡ್ರಮ್ಮಿನಾಕಾರಾದ ಮಮ್ಮಿಗಳನ್ನು, ಗುಂಡಪ್ಪ ಗುಂಡಮ್ಮಗಳನ್ನು ನೋಡಿ ತಲೆ ಸುತ್ತುಬಂತು. ಗುಡುಗುಡು ನಾಲ್ಕು ಸುತ್ತುಹಾಕಿದ ಶಾಸ್ತ್ರ ಮಾಡಿ, ಕತ್ತಲಾಗುವಷ್ಟರಲ್ಲೇ ಮನೆಗೆ ಓಡಿ, ದೊಡ್ಡ ಕಪ್ ಟೀ ಹೀರಿದ ಮೇಲಷ್ಟೇ ಸಮಾಧಾನವಾಗಿ ಸಾಯಂಕಾಲದ ವಾಕಿಂಗ್ ಪ್ಯಾಕ್‌ಅಪ್ ಮಾಡಲು ತೀರ್ಮಾನಿಸಿದ್ದಾಯಿತು.

ಸರಿ, ಬೆಳಗ್ಗೆ ಹೋಗಬಹುದು ಎಂದುಕೊಂಡಾಗ, ಮತ್ತೆ ಅದೇ ಜಾಗ, ಅದೇ ದೃಶ್ಯ ಮರುಕಳಿಸುವ ಭಯದಿಂದ ಬೇರೆ ಸ್ಥಳದ ಅನ್ವೇಷಣೆಗೆ ಕೊಲಂಬಸ್‌ನಂತೆ ಉತ್ಸುಕನಾಗಿ ಜೋಗಿಮಟ್ಟಿ ಗಿರಿಧಾಮದ ಕಣಿವೆ, ಹಿಮವತ್ ಕೇದಾರ, ಆಡುಮಲ್ಲೇಶ್ವರ ವನೋದ್ಯಾನ, ದುರ್ಗದ ಬೆಟ್ಟ, ಕೋಟೆ, ಚಂದ್ರವಳ್ಳಿ ಕೆರೆ, ಧವಳಪ್ಪನ ಗುಡ್ಡದ ಸುತ್ತಲಿನ ಪ್ರದೇಶಗಳನ್ನು ಪಟ್ಟಿಮಾಡಿ, ಅಳೆದೂ ಸುರಿದೂ, ಕೊನೆಗೆ ಜೋಗಿಮಟ್ಟಿಗೆ ಹೋಗುವ ದಾರಿಯಲ್ಲಿನ ಸೇತುವೆಯ ಬಳಿ ಬೈಕ್ ನಿಲ್ಲಿಸಿ, ಬೆಟ್ಟ ಹತ್ತಿ, ಆಡುಮಲ್ಲೇಶ್ವರದ ಮಾರ್ಗ ಆರಿಸಿಕೊಂಡದ್ದಾಯಿತು.

ಚುಮುಚುಮು ಚಳಿಯಲ್ಲಿ, ಕತ್ತಲು ಹರಿದು ಬೆಳಕು ಮೂಡುವ ಹೊತ್ತಲ್ಲಿ, ಮೈತುಂಬಾ ಓವರ್‌ಕೋಟ್, ತಲೆಗೊಂದು ಮಂಕಿಕ್ಯಾಪು, ದಪ್ಪ ಅಟ್ಟೆಯ ಜಾಗಿಂಗ್ ಷೂ ಧರಿಸಿ, ಗೆಳೆಯ ಆಂಜಿನಪ್ಪನನ್ನು ಎಳೆದುಕೊಂಡು ವಾಕಿಂಗ್‌ಗಾಗಿ ಬೈಕಿಂಗ್ ಮಾಡಿ, ಜೋಗಿಮಟ್ಟಿ ದಾರಿಯ ಸೇತುವೆಯ ಬಳಿ ಬೈಕ್ ಬಿಟ್ಟು ಕಾಲೇಶ್ವರ ಎಕ್ಸ್‌ಪ್ರೆಸ್‌ನಲ್ಲಿ ಬೆಟ್ಟವೇರಲು ಆರಂಭಿಸಿದೆ. ಒಂದು ಫರ್ಲಾಂಗ್ ಹೋಗುವಷ್ಟರಲ್ಲಿ ಬೆಟ್ಟದ ಕಡೆಯಿಂದ

ಊರಿನ ಕಡೆಗೆ ಒಂದಷ್ಟು ವಾಕರ್ ಆಂಟಿ ಅಂಕಲ್‌ಗಳು ವಾಕಿಂಗ್ ಮುಗಿಸಿ ಮರಳುತ್ತಿದ್ದರು. ಬೆಳಕು ಹರಿಯುವ ಮೊದಲೇ ವಾಪಸ್ಸಾಗುತ್ತಿದ್ದಾರೆಂದರೆ ಬಹುಶಃ ಇವರೆಲ್ಲಾ ಬ್ರಾಹ್ಮೀ ಮುಹೂರ್ತದಲ್ಲೇ ಬೆಟ್ಟಕ್ಕೆ ಹೋಗಿದ್ದರೇನೋ! ಅವರೆಲ್ಲರ ಕೈಯಲ್ಲಿ ದಪ್ಪನೆಯ ಲಾಠಿ, ಟಾರ್ಚ್ ಇತ್ತು. ಆತ್ಮರಕ್ಷಣೆಗೆ ಇರಬೇಕು!

ಒಂದರ್ಧ ಮೈಲಿ ನಡೆದ ಮೇಲೆ ದೊಡ್ಡ ಕಬ್ಬಿಣದ ಗೇಟ್ ಎದುರಾಯಿತು. ಪಕ್ಕದಲ್ಲೇ ಗಾರ್ಡ್ ಬೋರಯ್ಯನ ಆವಾಸ. ಒಬ್ಬರು ಮಾತ್ರವೇ ಪ್ರವೇಶಿಸಬಹುದಾದಷ್ಟು ಜಾಗ ಬಿಟ್ಟು ಗೇಟಿನ ಎರಡೂ ಪಾರ್ಶ್ವಗಳನ್ನು ಸರಪಳಿಯಿಂದ ಕಟ್ಟಲಾಗಿತ್ತು. ನೇರ ಮೇಲಕ್ಕೆ ಹತ್ತು ಕಿಲೋಮೀಟರ್ ಹೋದರೆ ಜೋಗಿಮಟ್ಟಿ ಗಿರಿಧಾಮದ ನೆತ್ತಿ ಸಿಗುತ್ತದೆ. ಗೇಟಿನ ಬಲಕ್ಕೆ ಹೊರಳಿ ಒಂದು ಕಿಲೋಮೀಟರ್ ನಡೆದರೆ ಆಡುಮಲ್ಲೇಶ್ವರ ವನೋದ್ಯಾನ ತಲುಪುತ್ತೇವೆ. ಅರ್ಧ ಮೈಲಿ ಏರಿಬರುವಷ್ಟರಲ್ಲೇ ಅರ್ಧ ಮೇಲುಸಿರು ಬಿಡುತ್ತಿರುವ ನಮಗೆ ಹತ್ತು ಕಿಲೋಮೀಟರ್ ಏರಿಹೋಗುವಷ್ಟು ಉತ್ಸಾಹವಾಗಲೀ, ಕಛೇರಿಗೆ ದೌಡಾಯಿಸಲೇಬೇಕಾದ ಅನಿವಾರ್ಯತೆಯಿಂದಾಗಿ ಪುರುಸೊತ್ತಾಗಲೀ ಇಲ್ಲದ್ದರಿಂದ ಆಡುಮಲ್ಲೇಶ್ವರದ ದಾರಿಯನ್ನೇ ಆರಿಸಿಕೊಂಡು ದಣಿವಾರಿಸಿಕೊಳ್ಳುತ್ತಾ ವಾಕಿಂಗ್ ಮಾಡಬೇಕಾಯಿತು.

ಕುವೆಂಪು ಅವರು ಕುಳಿತಿದ್ದ ನವಿಲುಕಲ್ಲು ಮಲೆನಾಡಿನಲ್ಲಿದ್ದರೆ ಈ ಬಯಲುನಾಡಿನ ಹಸಿರಿನ ಕಣಿವೆ ಜೋಗಿಮಟ್ಟಿಯಲ್ಲೂ ಒಂದು ನವಿಲುಕಲ್ಲು ಎಂಬ ಬೃಹತ್ ಬಂಡೆ ಇದೆ. ಅದರ ಮೇಲಿನ ನೀರಿನ ದೊಣೆಯಲ್ಲಿರುವ ನೀರಿಗಾಗಿ ನವಿಲುಗಳು ಅಲ್ಲಿಗೆ ಬರುತ್ತವೆ. ಅಕ್ಕ ಪಕ್ಕದಲ್ಲೂ ದೊಡ್ಡ ದೊಡ್ಡ ಬಂಡೆಗಳ ಸಾಲು ಇರುವುದರಿಂದ ಒಂದರಿಂದ ಇನ್ನೊಂದಕ್ಕೆ ಅವು ಹಾರಿ, ನೆಗೆದು, ಕುಪ್ಪಳಿಸಿ ಕುಣಿಯುತ್ತಾ ಸಾಗುವುದನ್ನು ನೋಡುವುದೇ ಚೆಂದ! ಈ ನವಿಲುಕಲ್ಲಿನ ಸುತ್ತಲೂ ಹಬ್ಬಿರುವ ನೀಲಗಿರಿ ತೋಪಿನ ಮರಗಳ ಮೇಲೆ ನವಿಲುಗಳು ಸಾಲಾಗಿ ಕುಳಿತು ವಿಶ್ರಾಂತಿ ತೆಗೆದುಕೊಳ್ಳುತ್ತಾ ಕಷ್ಟ–ಸುಖ ವಿಚಾರಿಸಿಕೊಳ್ಳುತ್ತವೆ. ನಮ್ಮಂತಹ ಆಗಂತುಕರನ್ನು ನೋಡಿದ ಕೂಡಲೇ ಘುರ್ರನೇ ಹೆಲಿಕ್ಯಾಪ್ಟರ್‌ನಂತೆ ಹಾರಿ ದೂರ ಸಾಗುತ್ತವೆ. ವೀಡಿಯೋ ಕ್ಯಾಮೆರಾ ಇದ್ದರೆ ಈ ಎಲ್ಲಾ ಕಣ್ತಣಿಯುವ ದೃಶ್ಯಗಳನ್ನು ಸೆರೆಹಿಡಿಯಬಹುದು.

ಈ ನವಿಲುಕಲ್ಲಿನ ಸುತ್ತ ಮುತ್ತಲೂ ಒಂದೆರಡು ಫರ್ಲಾಂಗ್ ದೂರದಲ್ಲಿ ಬೇರೆ ಬೇರೆ ಬೆಟ್ಟದ ಓರೆಗಳು, ಮುಂದು ಹೋದರೆ ದುರ್ಗದ ಕೋಟೆಯ ಮುಂದುವರಿದ ಭಾಗ ಇರುವ ಬೆಟ್ಟಗಳು, ಧವಳಪ್ಪನ ಗುಡ್ಡ, ಭೀಮನ ಬಂಡೆ, ಕಿರುಬನ ಕಲ್ಲು, ಪಾಂಡವರ ಗುಹೆಗಳು ಸಿಗುತ್ತವೆ. ಕೋಟೆಯ ಕಡೆಗೇ ಹೋಗುವ ಕವಲು ದಾರಿಯಲ್ಲಿ ಮುಂದುವರೆದರೆ ತಿಮ್ಮಣ್ಣನಾಯಕನ ಕೆರೆ, ಒಡ್ಡುಗಳು, ವಿಶಾಲ ಅಂಗಳ, ಕುರುಚಲು ಕಾಡು ಎಲ್ಲವೂ ಇವೆ. ಇಲ್ಲಿಯೇ ಬೇಟೆಗಾರ ನಾಗಣ್ಣ ತಮ್ಮ ಬೇಟೆಯ ದಿನಗಳಲ್ಲಿ ಸುಮಾರು ಹನ್ನೆರಡು ಹುಲಿಗಳನ್ನು, ಮೂವತ್ತಕ್ಕೂ ಹೆಚ್ಚು ಚಿರತೆಗಳನ್ನು ಬೇಟೆಯಾಡಿದ್ದರಂತೆ!

ಮೊದಲ ಬಾರಿ ಈ ನವಿಲು ಕಲ್ಲು ನೋಡಿ ಥ್ರಿಲ್ ಆದ ನಾವಿಬ್ಬರು ನರವಾನರರು ಅಲ್ಲಿಯೇ ಕುಳಿತು ಒಂದಷ್ಟು ಪ್ರಾಣಾಯಾಮದ ಪ್ರಾಕ್ಟೀಸ್ ಮಾಡಿ, ದಣಿವಾರಿಸಿಕೊಂಡು ಹಿಂದಿರುಗಿ, ಕಛೇರಿಯಲ್ಲೆಲ್ಲಾ ಅದನ್ನು ಬಣ್ಣ ಕಟ್ಟಿ ಹೇಳಿದ್ದೇ ಹೇಳಿದ್ದು. ಅದೇ ಜಾಗಕ್ಕೆ ಕುಡುಕರ ದಿಣ್ಣೆ, ಎಣ್ಣೆ ಪಾರ್ಟಿಗಳ ಬಂಡೆ ಎಂಬ ಹೆಸರೂ ಇದೆ ಎನ್ನುವುದು ನಮ್ಮಲ್ಲಿನ ಎಂಡ್ಕುಡ್ಕ ರತ್ನ ಹೇಳಿದಾಗಲೇ ಗೊತ್ತಾದದ್ದು. ದಿನಾ ಸಂಜೆ ಆ ದಾರಿಯಲ್ಲಿ ಹೋಗಿ, ಕತ್ತಲಾಗುವವರೆಗೂ ಅಲ್ಲಿ ಕೂತು, ಇಸ್ಪೀಟ್ ಆಡಿ, ಪ್ಯಾಕ್ ಮಾಡಿ ಒಯ್ದ ಬಿರಿಯಾನಿ, ಟಿನ್‌ನಲ್ಲಿನ ಬಿಯರ್, ಬ್ರಾಂದಿ ಹೀರಿ ಬರುವುದಕ್ಕಾಗಿ ಬಳಸುವ ಪ್ರಶಸ್ತ ಸ್ಥಳವಂತೆ ಅದು. ಒಮ್ಮೊಮ್ಮೆ 'ಜಂಬೂ' ಅನ್ನೋ ಕರಡಿಯೊಂದು ಇವರಿರುವಲ್ಲಿಗೇ ಬಂದು ಗುರಾಯಿಸುತ್ತಾ ನಿಂತಿರುತ್ತಂತೆ. ಅಳಿದುಳಿದ ತಿಂಡಿಯನ್ನೋ, ಬ್ರೆಡ್, ಬನ್ ಏನೋ ಒಂದನ್ನು ನೀಡಿದರೆ ಸುಮ್ಮನೇ ಬಂದು, ತಿಂದು ಹೋಗುತ್ತಂತೆ. ಅಯ್ಯೋ! ನಮ್ಮ ಸುಂದರ ನವಿಲುಕಲ್ಲಿಗೆ ಎಂತಹ ಕೆಟ್ಟ ಕೆಸರು!

ಸುತ್ತಲಿನ ಬೆಟ್ಟಗಳನ್ನು ನೋಡುತ್ತಾ, ಕಣಿವೆಯೊಳಗೆ ಇಳಿಯುತ್ತಾ ಹೋಗುವಾಗ ಕಾಣಿಸುವ ಸುಂದರ ದೃಶ್ಯಗಳನ್ನು ಸವಿಯುತ್ತಾ, ಹಕ್ಕಿಗಳ ಇನಿದನಿ ಕೇಳುತ್ತಾ, ನವಿಲುಗಳನ್ನು ನೋಡುತ್ತಾ, ನವಿಲುಕಲ್ಲಿನ ಮೇಲೆ ಕುಳಿತಿರುವಾಗ ಎದುರಿನಲ್ಲಿ ಒಮ್ಮೆ ಗಾಳಿಯಲ್ಲಿ ಅಚ್ಚಬಿಳಿಯ ಹಾವಿನಾಕಾರವೊಂದು ತೇಲಿಹೋದಂತಾಯಿತು. ಇದೇನಪ್ಪಾ, ಹಾರುವ ಹಾವು ಕೇಳಿದ್ದೇವೆ. ಆದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಲೀಸಾಗಿ ಹಕ್ಕಿಯಂತೆ ಹಾರಿಹೋದದ್ದು ಇದ್ಯಾವ ಪ್ರಾಣಿ ಎಂಬ ಸಂಶಯ, ಹೆದರಿಕೆ ಒಟ್ಟಿಗೇ ಅನುಭವಿಸಿದೆವು. ಸ್ವಲ್ಪ ಹೊತ್ತಿನಲ್ಲಿಯೇ ಕಂದು-ಕಪ್ಪು ಬಣ್ಣದ ಮತ್ತೊಂದು ಅಂತಹದೇ ಆಕಾರ ಗಾಳಿಯಲ್ಲಿ ತೇಲಿ ಹೋಯಿತು. ಈ ಬಾರಿ ಅದರ ಗಾತ್ರ ಚಿಕ್ಕದಾಗಿತ್ತು. ದೂರದ ಪೊದೆಯಲ್ಲಿ ಹೋಗಿ ಕುಳಿತಿದ್ದರಿಂದ ಕಾಣುತ್ತಿರಲಿಲ್ಲ. ಗಾಬರಿಯನ್ನು ಕಛೇರಿಯಲ್ಲಿ ಹಂಚಿಕೊಂಡಾಗ ಈಗಾಗಲೇ ಜೋಗಿಮಟ್ಟಿಯ ಅರಣ್ಯಗಳಲ್ಲಿ ಸುತ್ತಾಡಿ ಅಭ್ಯಾಸವಿದ್ದ ಸಯ್ಯದ್ ಮತ್ತು ಶ್ಯಾಮ, "ಅದು ಬರ್ಡ್ ಆಫ್ ಪ್ಯಾರಡೈಸ್ ಎನ್ನುವ ಪುಟ್ಟ ಹಕ್ಕಿ. ಹಕ್ಕಿಗಿಂತ ಅದರ ಬಾಲವೇ ಆರುಪಟ್ಟು ಜಾಸ್ತಿ ಇರುತ್ತೆ. ಕಂದು ಅಥವಾ ಕಪ್ಪು ಬಣ್ಣದ್ದಾದರೆ ಅದರ ಗಾತ್ರ ಚಿಕ್ಕದು ಮತ್ತು ಅದು ಹೆಣ್ಣು ಪಕ್ಷಿ. ಬಿಳಿ ಬಣ್ಣದ್ದಾದರೆ ಕೊಂಚ ದೊಡ್ಡದು. ವಯಸ್ಸಾದಂತೆಲ್ಲಾ ಅದು ಬೂದಿ ಬಣ್ಣಕ್ಕೆ ತಿರುಗುತ್ತದೆ" ಎಂಬ ವಿವರಣೆ ಕೊಟ್ಟರು. ಓಹೋ! ನಾವು ನೋಡಿದ್ದು ಸ್ವರ್ಗದ ಹಕ್ಕಿಯನ್ನು. ವಿವರಗಳನ್ನು ಬೆಂಗಳೂರಿನ ಪಕ್ಷಿಮಿತ್ರ ನವೀನನಿಂದ ತರಿಸಿಕೊಳ್ಳಬೇಕಾಯಿತು. ಫೋಟೋಗಳನ್ನು ಕ್ಲೆಮೆಂಟ್ ಫ್ರಾನ್ಸಿಸ್‌ನ ಅಂತರಜಾಲತಾಣದಿಂದ ತೆಗೆದುಕೊಳ್ಳಬೇಕಾಯಿತು.

ನಮ್ಮ ದೈನಂದಿನ ವಾಕಿಂಗ್ ಷೆಡ್ಯೂಲ್‌ನಲ್ಲಿ ಆಗಾಗ ಏರುಪೇರು ಆಗುತ್ತಿತ್ತು. ಶೀತ, ಕೆಮ್ಮು, ನೆಗಡಿ ಅಂಟಿಕೊಂಡದ್ದೇನೂ ವಿಶೇಷ ಅಲ್ಲ, ಬಿಡಿ. ಹೆಂಡತಿಯ

ತಲೆಶೂಲೆ ಕಾರಣದಿಂದ ಮುತ್ತೆತ್ತಿರಾಯ ಜೊತೆ ಸಿಗುತ್ತಿರಲಿಲ್ಲದ ದಿನಗಳಲ್ಲಿ ಒಬ್ಬನೇ ಹೋಗುವುದನ್ನು ರೂಢಿಸಿಕೊಳ್ಳಬೇಕಾಯ್ತು. ಬೆಂಗಳೂರು, ಮಂಗಳೂರುಗಳಲ್ಲಿ ಓದುತ್ತಿದ್ದ ಟೆಕ್ಕಿ–ಬುಕ್ಕಿಗಳು, ಪತ್ರಿಕಾಮಿತ್ರರ ಪಟಾಲಂ ಊರಿಗೆ ಬಂದಾಗ ಬೆಳಗಿನ ವಾಕಿಂಗ್ ಹಿಮವತ್ ಕೇದಾರದ ತಂಪಿನ ಕಣಿವೆಗೂ ಮುಂದುವರೆಯುತ್ತಿತ್ತು. ದಾರಿಯಲ್ಲಿನ ಪಗರೆ (ಪರಗೆ!), ಬೋರೆ ಹಣ್ಣುಗಳು ಬಾಯಿ ತುಂಬಿ, ಜೇಬು ಸೇರುತ್ತಿದ್ದವು. ಮಳೆಗಾಲದ ನಂತರದ ದಿನಗಳಲ್ಲಿ ಹಿಮ್ಮತ್ತಿಯಲ್ಲಿನ ತೊರೆಯೂ ತುಂಬುವ ಕಾರಣ ಈಜುಹೊಡೆಯುವಷ್ಟು ನೀರು ಅಲ್ಲಿ. ಮೇಲಿಂದ ಬೀಳುವ ಧಾರೆಗೆ ತಲೆಯೊಡ್ಡಿ, ತಣ್ಣನೆಯ ನೀರಿನಲ್ಲಿ ತೊಯ್ದು, ಗಡಗಡ ನಡುಗುತ್ತಲೇ ಮಜಾಮಾಡುವ ಟೆಕ್ಕಿಗಳು, ಶೀತ, ನೆಗಡಿ ಹತ್ತಿಸಿಕೊಂಡು, ಮನೆಯಲ್ಲಿ ವಿಕ್ಸ್ ತಿಕ್ಕಿಕೊಂಡು, ಮನೆಯವರಿಂದ ನಮಗೆ ಸಹಸ್ರನಾಮಾರ್ಚನೆ ಮಾಡಿಸುತ್ತಿದ್ದದ್ದು ಜಾಹೀರಾದ ಸತ್ಯ. ಕ್ಯಾಮೆರಾ ಕಣ್ಣುಗಳಲ್ಲಿ, ಈ ಸಂದರ್ಭಗಳಲ್ಲಿ ಸೆರೆಯಾಗಿ, ಪತ್ರಿಕೆಗಳಲ್ಲೂ ಅಚ್ಚಾದ ಸುಂದರ ದೃಶ್ಯಗಳು ಅದೆಷ್ಟೋ!

ಬೆಳಕು ಹರಿಯುವ ಮೊದಲೇ ಜೋಗಿಮಟ್ಟಿಯ ಹಾದಿಯಲ್ಲಿ ಹೋಗುವ ತಂಡಗಳು ಒಂದೆರಡು ಚೆಕ್‌ಡ್ಯಾಂಗಳನ್ನು ದಾಟಿ, ಒಂದಷ್ಟು ಕಸರತ್ತು ಮಾಡಿ ಮರಳುತ್ತಿದ್ದರೆ ಆಡುಮಲ್ಲೇಶ್ವರದ ಹಾದಿಯಲ್ಲಿ ದೂರದವರೆಗೆ ಹೋಗುವವರು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಕಾಡುಪ್ರಾಣಿಗಳ ಓಡಾಟ ಈ ದಾರಿಯಲ್ಲಿದ್ದುದರಿಂದ ಹೆದರಿಕೆಯಂತೆ! ಜನಜಂಗುಳಿಯನ್ನು ಇಷ್ಟಪಡದ ನಾನು ಈ ನಿರ್ಜನ ರಸ್ತೆಯಲ್ಲಿ ಮನಸ್ಸಿಗೆ ಬಂದಂತೆ ಕುಂಟುತ್ತಾ, ಕುಣಿಯುತ್ತಾ, ಸ್ಕಿಪ್ಪಿಂಗ್ ಮಾಡುತ್ತಾ, ದೌಡಾಯಿಸುತ್ತಿದ್ದೆ ನವಿಲುಕಲ್ಲಿನ ಬಳಿಗೆ. ನಾನು ಆ ಬಂಡೆ ಏರುವ ಸಮಯಕ್ಕೆ ಸರಿಯಾಗಿ ಸುತ್ತಲೆಲ್ಲೋ ಮರಗಳ ಮೇಲೆ ಕುಳಿತಿದ್ದ ನವಿಲುಗಳು ಗಾಬರಿಗೊಂಡು ಘುರ್ರನೇ ಹಾರಿ ಪೊದೆಗಳಲ್ಲಿ ಮರೆಯಾಗಿಬಿಡುತ್ತಿದ್ದವು. ಇದನ್ನು ಗಮನಿಸಿ ನಿಧಾನಕ್ಕೆ ತಲೆತುಂಬಾ ಮಂಕಿಕ್ಯಾಪ್ ಎಳೆದುಕೊಂಡು, ಕಳ್ಳಹೆಜ್ಜೆಯಿರಿಸಿ ಬಂಡೆಯಮೇಲೆ ಕುಳಿತುಕೊಳ್ಳಲು ಆರಂಭಿಸಿದ ಮೇಲೆ ಅವುಗಳಿಗೂ ಅಪಾಯ ಏನೂ ಇಲ್ಲ ಈ ಮಂಕಿಯಿಂದ ಅನ್ನಿಸಿದ್ದರಿಂದಲೋ ಏನೋ, ತೆಪ್ಪಗೇ ಮರದ ಮೇಲೆಯೇ ಕುಳಿತು ತಮ್ಮ ಕೊಕ್ಕುಗಳಿಂದ ಪುಕ್ಕ ಸರಿಮಾಡಿಕೊಳ್ಳುವುದನ್ನು ಮುಂದುವರೆಸಿದವು. ವಿವಿಧ ಭಂಗಿಗಳಲ್ಲಿ ತಿರುಗಿ ಕುಳಿತುಕೊಳ್ಳುವ ಬಣ್ಣ ಬಣ್ಣದ ರಾಷ್ಟ್ರಪಕ್ಷಿಗಳನ್ನು ನೋಡುವುದು ಕಣ್ಣಿಗೆ ಹಬ್ಬವಲ್ಲದೆ ಮತ್ತೇನು?

ಮಾಗಿಯ ಚಳಿಯ ಅದೊಂದು ಮುಂಜಾನೆ ನಸುಬೆಳಕಿನಲ್ಲಿ ನವಿಲುಕಲ್ಲಿನ ಮೇಲೆ ಕುಳಿತು ಪ್ರಾಣಾಯಾಮ ಮಾಡುತ್ತಿದ್ದಾಗ ಅತಿ ಸಮೀಪದಲ್ಲಿಯೇ ಇದ್ದ ಮರದ ಮೇಲಿನ ಸೆವೆನ್ ಸಿಸ್ಟರ್ಸ್ ಹಕ್ಕಿಗಳ ಕಲರವ ವಿಪರೀತವಾಯ್ತು. ಏನಪ್ಪಾ ಇವು ಇಷ್ಟೊಂದು ಗಲಾಟೆ ಮಾಡ್ತಾ ಇವೆ ಅಂದ್ರೆ, ಹತ್ತಿರ ಎಲ್ಲಾದ್ರೂ ಹಾವು ನೋಡಿರ್ತವೆ ಇಲ್ಲ ಏನೋ ಅಪಾಯದ ಮುನ್ಸೂಚನೆ ಕೊಡ್ತಾ ಇದ್ದಾವೆ ಅಂದುಕೊಂಡು ಎದ್ದು ನಿಂತು ಸುತ್ತಲೂ ನೋಡಿದಾಗ ದೂರದಲ್ಲಿ ಕರಡಿಯೊಂದು ರಸಗುಂಟ

ನಡೆದುಕೊಂಡು ಬರುತ್ತಾ ಇದೆ! ನಾನು ಎತ್ತರದಲ್ಲಿದುದರಿಂದ ಅದರ ದೃಷ್ಟಿ ನನ್ನೆಡೆಗೆ ಇರಲಿಲ್ಲ. ತನ್ನಪಾಡಿಗೆ ತಾನು ಕತ್ತುಬಗ್ಗಿಸಿ ಗುರ್ರ್... ಗುರ್ರ್... ಗುಟುರು ಹಾಕುತ್ತಾ ನಡೆದಿದ್ದ ಜಾಂಬವಂತ! ನನಗೆ ಎಚ್ಚರಿಕೆ ನೀಡಿದ ಹಕ್ಕಿಗಳಿಗೆ ಎಷ್ಟು ಥ್ಯಾಂಕ್ಸ್ ಹೇಳಿದರೂ ಸಾಲದು. ಒಂದು ಬಂಡೆಯ ಹಿಂದೆ ಬಚ್ಚಿಟ್ಟುಕೊಂಡು ಅದು ಅಲ್ಲಿಂದ ಮುಂದೆ ಹೋಗುವುದನ್ನೇ ನೋಡುತ್ತಿದ್ದೆ. ಅಷ್ಟರಲ್ಲೇ ಪೋಲಿಸ್ ಡಾಗ್ ಸ್ಕ್ವಾಡ್‌ನ ವ್ಯಾನ್ ಆ ದಾರಿಯಾಗಿ ಭರ್ರನೇ ಬಂದಿದ್ದರಿಂದ ರಸ್ತೆ ಇನ್ನೊಂದು ಬದಿಯ ಪೊದೆಯಲ್ಲಿ ಕರಡಿ ಹೊರಳಿಕೊಂಡಿತು. ಅಬ್ಬಾ! ಬದುಕಿದೆ ಆವತ್ತು.

ಒಮ್ಮೊಮ್ಮೆ ನವಿಲುಗಳು ಆಡುಮಲ್ಲೇಶ್ವರದ ಹಾದಿಯಲ್ಲಿ ಅಲ್ಲಲ್ಲಿ ಗುಂಪಾಗಿ ವಾಕಿಂಗ್ ಮಾಡುತ್ತಿರುವಂತೆ ಕಾಣಿಸುತ್ತವೆ. ಒಬ್ಬನೇ ಆ ಹಾದಿಯಲ್ಲಿ ಹೋಗುವ ಸಂದರ್ಭದಲ್ಲಿ ಸಾಧ್ಯವಾದಷ್ಟು ಸದ್ದಿಲದಂತೆ ನಡೆಯುತ್ತೇನೆ. ತೀರಾ ಹತ್ತಿರ ಬರುವವರೆಗೂ ಅವೂ ತಮ್ಮಷ್ಟಕ್ಕೆ ತಾವು ನಡೆದುಕೊಂಡು ಹೋಗುವಷ್ಟು ಪರಿಚಯ ಬೆಳೆಯಿತು ಅನ್ನಿಸುತ್ತೆ. ತಮ್ಮಂತೆಯೇ ಇನ್ನೊಂದು ಕಾಡಾಡಿ ಇಲ್ಲಿದೆ ಅಂದುಕೊಂಡಿದ್ದರಿಂದಲೋ ಏನೋ, ಈಗೀಗ ಅವೇನೂ ಗಾಬರಿಯಿಂದ ಓಡುತ್ತಿಲ್ಲ. ನವಿಲುಕಲ್ಲಿನ ಮೇಲೆ ಪದ್ಮಾಸನ ಹಾಕಿ ಪ್ರಾಣಾಯಾಮದ ಪ್ರಾಕ್ಟೀಸ್ ಮಾಡುತ್ತಿದ್ದಾಗ ಎದುರಿಗೆ ರತ್ನಪಕ್ಷಿ (ಸಾಂಬಾರ ಕಾಗೆ / ಕೆಂಬೂತ) ಹಾರಿ ಹೋಯಿತು. ರತ್ನಪಕ್ಷಿ ಕಂಡಾಗಲೆಲ್ಲಾ ಏನೋ ಒಳಿತಾಗುತ್ತೆ ಅಂತ ಅವರೂರಿನಲ್ಲಿ ಜನ ಕೈ ಮುಗೀತಾರೆ ಅಂತ ಟೆಕ್ಕಿ ಪ್ರಶಾಂತ್ ಚಿನ್ನಪ್ಪನವರ್ ಹೇಳಿದ್ದ ಒಮ್ಮೆ. ಈಗ ರತ್ನಪಕ್ಷಿ ಎದುರಿನ ಮರದ ಮೇಲೆ ಕುಳಿತು ಪುಕ್ಕ ಸವರಿಕೊಳ್ಳುತ್ತಿದೆ! ನನಗೇನೋ ಲಕ್ ಗ್ಯಾರಂಟಿ ಅಂದುಕೊಳ್ಳುವಷ್ಟರಲ್ಲೇ ಅದರ ಪಕ್ಕದ ಮರದ ಟೊಂಗೆಗಳಲ್ಲಿದ್ದ ಮೈನಾ ಹಕ್ಕಿ ಒಂದೇ ಸಮನೇ ಅರಚಿಕೊಳ್ಳತೊಡಗಿತು. ಪ್ರಾಣಿ ಪಕ್ಷಿಗಳು ಸುಮ್ಮ ಸುಮ್ಮನೇ ವಿಚಿತ್ರವಾಗಿ ವರ್ತಿಸುವುದಿಲ್ಲ. ಏನಾದರೂ ಅಪಾಯದ ಮುನ್ಸೂಚನೆ ಸಿಕ್ಕಾಗ ವಿಪರೀತವಾಗಿ ಕಿರುಚುತ್ತವೆ. ಹಿಂದೊಮ್ಮೆ ಸೆವೆನ್ ಸಿಸ್ಟರ್ಸ್ ಹಕ್ಕಿಗಳು ಇದೇ ರೀತಿ ವರ್ತಿಸಿದ್ದನ್ನು ಜ್ಞಾಪಿಸಿಕೊಂಡು ಥಟ್ಟನೇ ಎದ್ದು ಸುತ್ತಲೂ ಕಣ್ಣು ಹಾಯಿಸಿದೆ. ಹಿಂಬದಿಯಲ್ಲಿನ ಬೆಟ್ಟದ ಇಳಿಜಾರಿನಲ್ಲಿ ಕರಡಿಯೊಂದು ನಿಧಾನಕ್ಕೆ ಇಳಿದು ಬರುತ್ತಿತ್ತು. ಅದು ಗಂಡೋ, ಹೆಣ್ಣೋ ನನಗೆ ತಿಳಿಯಲಿಲ್ಲ. ತಿಳಿಯಲು ನಾನೇನು ಪ್ರಾಣಿವಿಜ್ಞಾನಿಯೋ, ಪಶುವೈದ್ಯನೋ ಅಲ್ಲವಲ್ಲಾ! ಅದು ಇಳಿಜಾರಿನಲ್ಲಿ ಇಳಿದು ನವಿಲುಕಲ್ಲಿನ ಬಳಿ ಬರುವಷ್ಟರಲ್ಲಿ ನಾನಾಗಲೇ ಠಣ್ಣೆಂದು ಬಂಡೆಯಿಂದ ಜಿಗಿದು ಓಟಕಿತ್ತಿದ್ದೆ!

ಬೆಳಗಿನ ವಾಯುವಿಹಾರದಲ್ಲಿ ತಣ್ಣನೆಯ ಗಾಳಿ, ಹಕ್ಕಿಗಳ ಕಲರವ, ಜೀರುಂಡೆಗಳ ಸದ್ದು, ಸಮುದ್ರದ ಮೊರೆತದಂತೆ ಕೇಳಿಸುವ ಗಾಳಿಯಂತ್ರಗಳ ಬಳಿ ಬೀಸುವ ಗಾಳಿಯ ಭೋರ್ಗರೆತ, ಅಲ್ಲೊಂದು ಇಲ್ಲೊಂದು ನವಿಲು, ಕಾಡುಕೋಳಿ, ದೂರದಲ್ಲೆಲ್ಲೋ ಪುಟಿದು ಓಡುವ ಮೊಲ, ಆಗೊಮ್ಮೆ ಈಗೊಮ್ಮೆ ದರ್ಶನಕೊಡುತ್ತಿದ್ದ

ಒಂಟಿ ಕರಡಿ ಈಗ ಎರಡು ಚಂದದ ಮರಿಗಳೊಂದಿಗೆ ಆಟ ಆಡುತ್ತಾ ದಾರಿಯಲ್ಲಿ ಅಡ್ಡ ಹೋಗುತ್ತಿದ್ದುದು, ಎಲ್ಲವೂ ಮನಸ್ಸಿಗೆ ಮುದನೀಡುತ್ತಿದ್ದುದರಿಂದ ವಾಕಿಂಗ್ ತಪ್ಪಿಸಲು ಮನಸ್ಸೇ ಬರುತ್ತಿರಲಿಲ್ಲ. ದಾರಿಯುದ್ದಕ್ಕೂ ಕೋಲಾರದ ಜಿಲ್ಲೆ ಹೊಸಕೋಟೆ ಸುತ್ತಲಿನ ಆಂಜಿನಪ್ಪ ಆಡಿ ಬೆಳೆದ ಹಳ್ಳಿ, ಕಾಡು, ತೊರೆ, ದಿನ್ನೆ, ಹಕ್ಕಿಗಳ ಬೇಟೆ, ಹಳ್ಳಿಯ ಹಬ್ಬ ಹರಿದಿನ, ಸೊಪ್ಪು, ತರಕಾರಿಗಳು, ಬೆಳೆ ಇತ್ಯಾದಿಗಳ ವರ್ಣನೆ ಕೇಳುತ್ತಾ, ಆಡುಮಲ್ಲೇಶ್ವರದ ದಾರಿಯಲ್ಲಿ ನಡೆಯುತ್ತಾ ಹೋದ ದಿನಗಳೆಷ್ಟೋ! ಆಂಜಿನಪ್ಪನ ಜೊತೆ ಹೋದದಕ್ಕಿಂತ ಒಬ್ಬನೇ ಹೋದದ್ದೇ ಜಾಸ್ತಿ.

ಇತ್ತೀಚೆಗೆ ಚಳಿ ಜಾಸ್ತಿ ಇದ್ದ ಮುಂಜಾವಿನಲ್ಲಿ ತಲೆ ಪೂರ್ತಿ ಕ್ಯಾಪ್ ಹಾಕಿಕೊಂಡು, ಜರ್ಕಿನ್ ತೊಟ್ಟು, ನವಿಲುಕಲ್ಲಿನ ಮೇಲೆ ಕುಳಿತು ಯೋಗಾಸನ, ಪ್ರಾಣಾಯಾಮ ಅಭ್ಯಾಸ ಮಾಡುತ್ತಿದ್ದಾಗ ರಾಷ್ಟ್ರೀಯ ಯೋಗಾಸನ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿರುವ ಆಂಜಿನಪ್ಪ ವಿಧವಿಧವಾದ ಯೋಗಾಸನದ ಭಂಗಿಯಲ್ಲಿ ಕುಳಿತು ಅದರ ಪ್ರಾಮುಖ್ಯತೆ ವಿವರಿಸುತ್ತಿದ್ದ. ಅವನಿಗೆ ಎದುರಾಗಿ, ತುಸು ದೂರದಲ್ಲಿನ ಸಪಾಟಾದ ಬಂಡೆಯ ಮೇಲೆ ಪದ್ಮಾಸನದಲ್ಲಿ ಕುಳಿತು ಅವನನ್ನೇ ನೋಡುತ್ತಾ, ವಿವರಣೆ ಕೇಳುತ್ತಾ ಇದ್ದುದರಿಂದ ಸುತ್ತಲೂ ಅಷ್ಟಾಗಿ ಗಮನ ಹರಿಸಿರಲಿಲ್ಲ. ನವಿಲುಗಳು ದೂರದ ಬಂಡೆಯೊಂದಕ್ಕೆ ಬಿಡಾರ ಬದಲಾಯಿಸಿದ್ದರಿಂದ ನಮ್ಮ ಪಾಡಿಗೆ ನಾವು ವ್ಯಾಯಾಮ ಮುಂದುವರೆಸಿದ್ದೆವು. ಬಂಡೆಯ ಮೇಲೆ ತುಸು ಎತ್ತರದಲ್ಲಿ ಕುಳಿತಿದ್ದ ಆಂಜಿನಪ್ಪನಿಗೆ ಕೆಳಗಿನ ಪೊದೆಗಳಲ್ಲಿ ಏನೋ ಚಲಿಸಿದ್ದು ಗೋಚರವಾಗಿ ಅತ್ತ ಗಮನಹರಿಸಿದ. ಆ ಭಾಗ ನನ್ನ ಬೆನ್ನಿಗೆ ಇದ್ದುದರಿಂದ ನಾನೂ ತಿರುಗಿ ನೋಡುವಷ್ಟರಲ್ಲಿ ಮಿರ ಮಿರ ಮಿಂಚುವ ಕರ್ರನೇ ಕೂದಲಿನ ಮುದ್ದಾದ ಎರಡು ಮರಿಗಳ ಸಹಿತ ತಾಯಿ ಕರಡಿ ನವಿಲುಕಲ್ಲಿನ ಬುಡಕ್ಕೇ ಬಂದಿತ್ತು! ಬಂಡೆಯಿಂದ ಇಳಿದರೆ ಕರಡಿಯ ಕೈಗೆ ಸಿಗುವುದು ಖಚಿತ!

ಮನುಷ್ಯರಿಗಿಂತ ಕಾಡು ಪ್ರಾಣಿಗಳಿಗೆ ನೀಯತ್ತು ಜಾಸ್ತಿಯಂತೆ. ಬಹುಶಃ ಹಿಂದಿನ ಸಂಜೆ ಕುಡುಕ ರತ್ನರುಗಳ ಕೈಯಿಂದ ತಿನ್ನಲಿಕ್ಕೆ ಸಿಕ್ಕ ಖುಷಿಯನ್ನು ಮರಿಗಳಿಗೆ ತೋರಿಸಲು ಅವುಗಳನ್ನು ಕರೆತಂದಿತ್ತೋ, ಅಥವಾ ಸುತ್ತಲಿನ ಪೊದೆಗಳಲ್ಲಿ ಯಥೇಚ್ಛವಾಗಿ ಬೆಳೆದಿದ್ದ, ಕರಡಿಯ ಇಷ್ಟದ ಪಗರೆ ಹಣ್ಣುಗಳನ್ನು ತಿನ್ನಲಿಕ್ಕೆಂದು ಬಂದಿತ್ತೋ ಕರಡಿಗೇ ಗೊತ್ತು! ಕತ್ತು ತಿರುಗಿಸಿ ನೋಡಿದಾಗ ಥ್ರಿಲ್ ಆದದ್ದು ಸತ್ಯ. ಜೇಬಿನಲ್ಲಿದ್ದ ಮೊಬೈಲ್‌ನಲ್ಲಿ ಅವುಗಳ ಚಿತ್ರ ಸೆರೆಹಿಡಿಯಲು ಆ ಕ್ಷಣದಲ್ಲಿ ಜ್ಞಾಪಕಕ್ಕೆ ಬರಲೇ ಇಲ್ಲ! ಕರಡಿಗಳನ್ನು ತೀರಾ ಹತ್ತಿರದಲ್ಲಿಯೇ ನೋಡಿದ್ದು ಇದೇ ಮೊದಲಾದರೂ ಅವು ಯಾರಿಗೂ ದಾಳಿ ಮಾಡಿದ ದಾಖಲೆ ಇಲ್ಲದ್ದು ಸಮಾಧಾನ ತಂದಿತು. ಅವುಗಳಿಗೂ ಗಾಬರಿ. ನಾವು ಬಂಡೆಯ ಮೇಲೆ ದೈತ್ಯರಂತೆ ನಿಂತಿದ್ದೇವೆ. ಸರಾಸರಿ ನೂರು ಕೇಜಿ ತೂಕ ಇರುವ ನಾನು ಜರ್ಕಿನ್, ಮಂಕಿ ಕ್ಯಾಪ್‌ನಲ್ಲಿ ದೈತ್ಯ ಪಾಂಡಾದಂತೆಯೇ ಕಂಡಿರಬೇಕು ಅವುಗಳಿಗೆ! ಗಾಬರಿಗೊಳ್ಳುವ ಸನ್ನಿವೇಶವೇ ಆದರೂ ಬಂಡೆಯ ಮೇಲಿನಿಂದ ಇನ್ನೊಂದು ಕಡೆಗೆ

ಹಾರಿ, ಓಡುವ ದಾರಿ ಪಾವ್ಲೋವ್‌ನ ರಿಫ್ಲೆಕ್ಸ್ ಆಕ್ಷನ್ ಮೂಲಕ ಮಿದುಳು ಆಗಲೇ ಕಂಡುಹಿಡಿದಿತ್ತು. ಕರಡಿಗಳೂ ಪಾಪ ತಮ್ಮಷ್ಟಕ್ಕೇ ತಾವು ಪಗರೆ ಹಣ್ಣು ತಿನ್ನಲಿಕ್ಕೆ ಅಂತ ಬಂದು ನಮ್ಮನ್ನು ನೋಡಿ ದಿಗ್ಮೂಢರಾಗಿದ್ದವೇನೋ! ಅವುಗಳು ಮುಂದೆ ಹೆಜ್ಜೆ ಇಡುವಷ್ಟರಲ್ಲೇ ನಾವು ಠಣ್ಣನೇ ಜಿಗಿದು ಓಡಿ, ಒಂದೈವತ್ತು ಅಡಿ ದೂರದ ಅಂತರ ಕಾಯ್ದುಕೊಂಡು ಅವುಗಳನ್ನು ನೋಡುತ್ತಾ ನಿಂತೆವು. ಅವೂ ಕೂಡ ಸಾವಧಾನವಾಗಿಯೇ, ಅದೇ ರಸ್ತೆಯಲ್ಲಿ ವಾಕಿಂಗ್ ಬಂದವು. ನಾವು ಮುಂದೆ ಮುಂದೆ, ಅವು ಹಿಂದೆ ಹಿಂದೆ!

'ಒಂದು ಕಾಡಿನ ಮಧ್ಯದೊಳಗೆ ..... ಮೂರು ಕರಡಿಗಳಾಡುತ್ತಿದ್ದವು.....' ಎನ್ನುವ ರಾಜರತ್ನಂ ಅವರ ಪದ್ಯ ಇದೇ ಸಂದರ್ಭದಲ್ಲಿ ಜ್ಞಾಪಕಕ್ಕೆ ಬಂದು ಎಷ್ಟು ಜನರಿಗೆ ಈ ಸಾಕ್ಷಾತ್ಕಾರ ಸಾಧ್ಯ ಅನ್ನಿಸಿತು. ಅಂದಿನಿಂದ ಮತ್ತೆ ಅವು ಅಲ್ಲಲ್ಲಿ ಸಿಗುತ್ತಲೇ ಇವೆ. ಫೋಟೋಗೆ ಮಾತ್ರ ದಕ್ಕುತ್ತಿಲ್ಲ. ಬರ್ಡ್ ಆಫ್ ಪ್ಯಾರಡೈಸ್, ಮಿಂಚುಳ್ಳಿ, ಕಪೋತ, ಬೆಳವ, ಗಿಡುಗ, ಬೆಳ್ಳಕ್ಕಿ, ಕೋಗಿಲೆ, ರತ್ನಪಕ್ಷಿ, ಮರಕುಟಿಕ, ಹೂಪೇ, ಬ್ಲಾಕ್ ಬಸ್ಟರ್ಡ್, ಗೂಬೆ, ಹಾಲಕ್ಕಿ, ಮಕರಂದ ಹೀರುವ ಪುಟ್ಟ ಕೊಳವೆ ಬಾಯಿಯ ಪಕ್ಷಿ, ಚಿಟ್ಟೆಗಳು ಹೀಗೆ ನಾನಾ ಪಕ್ಷಿ, ಪ್ರಾಣಿಗಳನ್ನು ನೋಡುತ್ತಾ, ಗಿಡ, ಮರ, ಬಳ್ಳಿಗಳ ಜೊತೆ ಶ್ರೀಗಂಧದ ಮರಗಳನ್ನು ಎಣಿಸುತ್ತಾ ಜೋಗಿಮಟ್ಟಿಯ ಕಣಿವೆಗಳಲ್ಲಿ ವಾಕಿಂಗ್ ಮಾಡುವ ಭಾಗ್ಯ ಅದೆಷ್ಟು ಜನರಿಗೆ ಸಿಕ್ಕೀತು? ಧನ್ಯ ಬಯಲುಸೀಮೆಯ ನವಿಲುಕಲ್ಲೇ!

**ಬೇದ್ರೆ ಮಂಜುನಾಥ**

ಅನಂತ ಪ್ರಕಾಶ ಮಾಸಪತ್ರಿಕೆ ೨೦೧೪

# ಬೆಳಕಿನ ಆಸ್ತಿಕರು ನಾವೆಲ್ಲಾ

ನಾವಿರುವುದು ಬೆಳಕಿನ ಸಾಮ್ರಾಜ್ಯದಲ್ಲಿ. ಇಲ್ಲಿರುವುದು ಬರೀ ಬೆಳಕಿನ ರಾಜ್ಯಭಾರ. ಅಷ್ಟೇ ಅಲ್ಲ, ಇಲ್ಲಿನ ರಾಜನೂ ಬೆಳಕೆ! ಪ್ರಜೆಗಳೂ ಬೆಳಕೆ! ಬೆಳಕು ಬೆಳಕನ್ನು ಆಳುವ ಆಡಳಿತವಲ್ಲದ ಆಡಳಿತ ಇಲ್ಲಿದೆ! ಆಳುವವನಿಗೆ ತಾನು ಆಳುತ್ತಿದ್ದೇನೆ ಎನ್ನುವ ಅಹಂಕಾರ ಇಲ್ಲವೇ ಇಲ್ಲ! ಅಹಂಕಾರ ಇರುವಲ್ಲಿ ಅಂಧಕಾರವಿರುತ್ತದೆ! ಆಡಳಿತಕ್ಕೆ ಒಳಪಟ್ಟವರಿಗೆ ಬೆಳಕು ದಬ್ಬಾಳಿಕೆ ನಡೆಸುತ್ತಿದೆ ಎನ್ನುವ ಕಿಂಚಿತ್ ಚಿಂತನೆಯೂ ಇಲ್ಲಿಲ್ಲ! ಬೆಳಕು ನಿರಂಕುಶಿಯಲ್ಲ, ಹೇರುವುದರಲ್ಲಿ ಬೆಳಕಿಗೆ ಖುಷಿಯೂ ಇಲ್ಲ! ಬೆಳಕು ಇರುವುದೆ ತೋರುವುದಕ್ಕೆ.

ಅದಕ್ಕೇ ಇರಬೇಕು ನಾವೆಲ್ಲಾ ಬೆಳಕಿನ ಆಸ್ತಿಕರು! ನಾವು ಬೆಳಕನ್ನು ನಂಬುತ್ತೇವೆ! ಎಷ್ಟು ಎಂದರೆ ನಮ್ಮ ಉಸಿರಿನಷ್ಟು. ಬೆಳಕಿನಲ್ಲಿ ನಂಬಿಕೆಯಿಲ್ಲ ಎಂದವ ಬದುಕಿನಲ್ಲಿ ನಂಬಿಕೆಯನ್ನೇ ಕಳೆದುಕೊಳ್ಳುತ್ತಾನೆ. ಬೆಳಕು ಬೇರೆಯಲ್ಲ. ಹೀಗಾಗಿಯೇ ಬೆಳಕಿನ ನಾಸ್ತಿಕನನ್ನು ಹುಡುಕುವುದು ಅಸಾಧ್ಯ ಎನ್ನುವಷ್ಟು ಕಷ್ಟ.

ನಮಗೆ ಸೂರ್ಯೋದಯದಲ್ಲಿ ನಂಬಿಕೆಯಿದೆ! ಆ ನಂಬಿಕೆಯಿಂದಲೆ ನಾವು ಇರುಳಿನ ಇಳಿಜಾರಿನಲ್ಲಿ ನಿದ್ರೆಗೆ ಜಾರುತ್ತೇವೆ! ಜಾರಿದರೆ ಎಷ್ಟು ಜಾರಿಯೇವು? ಮುಂಜಾವಿನ ತನಕ ತಾನೆ. ಆಮೇಲೆ ಸಿಗುವುದು ಬೆಳಕೆಂದು ನಮಗೆ ಗೊತ್ತು. ನಮಗೆ ಬೆಳದಿಂಗಳಲ್ಲಿ ನಂಬಿಕೆಯಿದೆ. ಚಂದ್ರ ನಮಗೆ ಆಪ್ತವಾಗುವುದು ಇರುಳಿನ ಬೆಳಕಿನ ಒಸರಾಗಿ! ನಮಗೆ ನಕ್ಷತ್ರಗಳ ಬೆಳಕಿನಲ್ಲೂ ವಿಶ್ವಾಸವಿದೆ. ಹೆಸರೇ ಗೊತ್ತಿಲ್ಲದ ನಕ್ಷತ್ರಗಳೂ ನಭವನ್ನು ತೋರಿಸುತ್ತವೆಯಲ್ಲಾ? ಹೀಗಾಗಿ ಆ ಬೆಳಕನ್ನು ನಾವು ನಂಬುತ್ತೇವೆ. ಒಂದು ಮಾತಿದೆ. ನಾವು ಉಸಿರೆಳೆದುಕೊಳ್ಳುವಾಗ ಬ್ರಹ್ಮಾಂಡದ ಬೆಳಕೆಲ್ಲಾ ಒಳ ಸೇರಿ ಜೀವ ಪ್ರಾಣವಾಗುತ್ತದೆ. ಪ್ರಾಣವೆ ಬೆಳಕಾಗುತ್ತದೆ.

ನಮಗೆ ನಂದಾದೀಪದ, ಆರತಿಯ, ಕರ್ಪೂರದ ಬೆಳಕಿನಲ್ಲೂ ನಂಬಿಕೆಯಿದೆ. ದೇವರೆದುರು ದೀಪ ಬೆಳಗುವವರು ನಾವೇ ಅಲ್ಲವೆ? ನಮ್ಮೊಳಗೆ ಬೆಳಕೇ ಇಲ್ಲದಿರುತ್ತಿದ್ದರೆ ಆರತಿ ಬೆಳಗುತ್ತಿರಲಿಲ್ಲ. ಕರ್ಪೂರ ಉರಿಯುತ್ತಿರಲಿಲ್ಲ. ಹಣತೆಯೊಂದು ಹಚ್ಚಿಕೊಳ್ಳುತ್ತಲೂ ಇರಲಿಲ್ಲ! ಇಲ್ಲಿ ಉರಿದದ್ದು, ಬೆಳಕಾದದ್ದು ಎಣ್ಣೆ ಮತ್ತು ಬತ್ತಿಯಲ್ಲ; ನಮ್ಮ ಬೆಳಕಿನ ನಂಬಿಕೆ. ದೇವರು ಎನ್ನುವ ಶಕ್ತಿಗೆ ಭಕ್ತಿಯಿಂದ ಆರತಿ ಬೆಳಗುವಾಗಲೂ ಬೆಳಕಿನ ಆವರಣ ಅನಾವರಣಗೊಳ್ಳುವುದು ನಮ್ಮ ಅಂತರಂಗದ ಒಳಗೇ ಅಲ್ಲವೇ? ಅಂದಹಾಗೆ ಹೊರಗಿನ ಬಗೆಗೂ ನಮಗೆ ನಂಬಿಕೆಯಿರುವುದು ನಮ್ಮೊಳಗೇ!

ಹಾಗಿದ್ದರೆ ಬೆಳಕೇ ದೇವರೆ? ಅಥವಾ ದೇವರೆ ಬೆಳಕೆ? ನಾವು ಇಷ್ಟದಿಂದ ಕರೆಯುವ ಶಿವ, ಸದಾಶಿವ, ಕೃಷ್ಣ, ರಾಮ, ವೆಂಕಟೇಶ, ದುರ್ಗೆ, ಮಹಾಲಕ್ಷ್ಮಿಯರೆಲ್ಲಾ

ಬೆಳಕಿನ ಬೇರೆ ಬೇರೆ ಹೆಸರುಗಳೆ ಇರಬಹುದೊ ಏನೋ! ಯಾಕೆಂದರೆ ಬೆಳಕನ್ನು ಯಾವ ಹೆಸರಿನಿಂದ ಕರೆದರೂ ಅದು ಬೆಳಕೇ. ಬೆಳಕಿರುವುದು ಒಂದೇ. ದೇವರೂ ಹಾಗೇಯೇ ಅಲ್ಲವೇ? ಹೆಸರು ಬೇರೆ ಬೇರೆ ಉಸಿರು ಒಂದೇ! ಬೆಳಕು ಜಾತ್ಯಾತೀತ; ಅದಕ್ಕೆ ಜಾತಿ ಮತದ ಹಂಗೇ ಇಲ್ಲ! ನಮ್ಮೊಳಗಿನ ಬೆಳಕು ನಿಮ್ಮೊಳಗೂ ಇದೆ. ನಿಮ್ಮೊಳಗಿನ ಪ್ರಕಾಶ ನನ್ನೊಳಗೂ ಇದೆ! ಬೆಳಕು ಗಿಡಕ್ಕೂ ಬೇಕು ಬಳ್ಳಿಗೂ ಬೇಕು. ಹಕ್ಕಿಗೂ ಬೇಕು, ಹುಲಿಗೂ ಬೇಕು, ಹುಲ್ಲಿಗೂ ಬೇಕು!

ನಾವೆಲ್ಲ ಬೆಳಕಿನ ಕೃಷಿಕರೆ. ಬೆಳಗಿನ ಬೆಳೆ ತೆಗೆಯುವ ರೈತರೆ! ಒಂದಿಷ್ಟು ಬೆಳಕನ್ನು ಹಿಡಿಯದವ ಇಲ್ಲಿ ಇಲ್ಲವೇ ಇಲ್ಲ! ಕೆಲವರ ಬೆಳಕಿನ ಫಸಲು ಕಡಿಮೆ ಇರಬಹುದು. ಅದು ಅವರ ಮಣ್ಣಿನ ಋಣ. ಕೆಲವರು ಬೆಳಕಿನ ಮೂರು ಬೆಳೆ ತೆಗೆದಾರು. ನೋಡಿದ ಹೊರಗಿನವರು ಅವನನ್ನು ಮಾದರಿ ಕೃಷಿಕ ಎಂದಾರು. ಅದು ಅವನ ಮಣ್ಣಿನ ಗುಣ. ಆತ ಬೆಳಕಿನ ಆಳಕ್ಕೆ ಇಳಿದಾನು, ಬೆಳಕಿನ ಹನಿ ಹನಿ ನೀರನ್ನು ಉಣಿಸಿ ನೆಲವನ್ನು ತಣಿಸಿಯಾನು. ಬೆಳಕಿನ ಮಿಶ್ರಬೆಳೆ ತೆಗೆದು ತಾನೂ ಕುಣಿದಾನು! ನಿಜಕ್ಕೂ ಬೆಳಕಿಗೆ ಕುಣಿಸುವ ಶಕ್ತಿ ಇದೆ. ಬೆಳಕು ಸಂಗೀತ, ಬೆಳಕು ನೃತ್ಯ, ಬೆಳಕು ದೃಶ್ಯಕಾವ್ಯ, ಬೆಳಕು ಭವ್ಯ, ದಿವ್ಯ! ಅದು ಕೇಳುವ ಬೆಳಕು, ರಾಗದ ಬೆಳಕು, ನೃತ್ಯದ ಹೆಜ್ಜೆಗಳಲ್ಲಿ ಮುದ್ರೆಗಳಲ್ಲಿರುವುದೂ ಬೆಳಕೆ! ಅದು ಕುಣಿದಾಡುವ ಬೆಳಕು!

ಬೆಳಕನ್ನು ಆಪ್ತವಾಗಿ ಆಲಂಗಿಸಿದವನಿಗೆ ಅದೊಂದು ಹಬ್ಬ. ವಿಜಯೋತ್ಸವ, ಸಂಭ್ರಮಾಚರಣೆ! ಬೆಳಕು, ಹಬ್ಬವಾಗಲು ಬಯಸುವುದಿಲ್ಲ. ಅದಕ್ಕೆ ಇರುವುದು ಮಾತ್ರ ಗೊತ್ತು. ಇರುವ ಹಾಗೆ ಇರುವುದಕ್ಕೆ ನಿತ್ಯೋತ್ಸವ!

ಆದರೆ ಬೆಳಕಿನ ಆಸ್ತಿಕರಿಗೆ ಹಬ್ಬ ಬೇಕು, ಪೂಜೆ ಪುನಸ್ಕಾರ ಬೇಕು; ಉಪಚಾರ ಉಪವಾಸಗಳೂ ಬೇಕು! ಬೆಳಕಿಗೆ ಹಿತವಾದ, ಹದವಾದ ಸಿಹಿ ಬೆರೆಯಲು ಪಾಯಸ, ರಸಾಯನ, ಲಾಡು ಹೋಳಿಗೆಗಳೆಲ್ಲಾ ಬೇಕೇ ಬೇಕು! ಎಲೆಗೆ ಸುರಿದ ಪಾಯಸವನ್ನು ಕೈಯಳತೆಯಲ್ಲಿ ಹಿಡಿದು ಬಾಯಿಗಿಳಿಸುವಾಗ ಒಳ ಸೇರುವುದು ಬೆಲ್ಲದ ಸಿಹಿಯೇ? ಬದುಕಿನ ಬೆಳಕೋ? ಬೆಳಕನ್ನು ನೇರವಾಗಿ ತಿನ್ನುವಂತಿಲ್ಲ! ಅದಕ್ಕೇ ಖಾದ್ಯಗಳ ವಾದ್ಯ ಸಹಿತ ಮೆರವಣಿಗೆ ಬೇಕು!

ಬೆಳಕೂ ಅದೆಷ್ಟು ದೂರದಿಂದ ನಮ್ಮ ಬಳಿಗೆ ಬರುತ್ತದೆ? ಅದೆಷ್ಟು ವೇಗವಾಗಿ ಬರುತ್ತದೆ? ನಮಗೋ ಬಂದು ಮುಟ್ಟಿದ್ದಷ್ಟೇ ಗೊತ್ತಾಗುತ್ತದೆ! ದೂರ ಮತ್ತು ವೇಗ ವರ್ತಮಾನದಲ್ಲಿ ಬೆಳಕಾಗುವಾಗ ಉಳಿದದ್ದೆಲ್ಲಾ ನಗಣ್ಯವಾಗಿಬಿಡುತ್ತದೆ! ಅಷ್ಟೇ ಅಲ್ಲ ನಮ್ಮ ನಿತ್ಯದ ಸತ್ಯದಲ್ಲಿ ೬.೨೫ಕ್ಕೆ ಉದಯ ಎನ್ನುತ್ತೇವೆ. ಹಾಗಿದ್ದರೆ ಅದಕ್ಕೂ ಮೊದಲು ಬೆಳಕಿರಲಿಲ್ಲವೆ? ೬.೧೦ಕ್ಕೆ ಅಸ್ತ ಎನ್ನುತ್ತೇವೆ. ಹಾಗಿದ್ದರೆ ಆ ಮೇಲೆ ಬೆಳಕಿರುವುದಿಲ್ಲವೆ? ಬೆಳಕಿಗೆ 'ಸಮಯ'ದ ಸಂಗ ಇದ್ದೂ ಇಲ್ಲದಂತೆ! ಯಾಕೆಂದರೆ ಬೆಳಕೆ ಸಮಯ! ಬೆಳಕಿಗೊಂದು ಬೆರಗಿನ 'ಮೈ ಗಡಿಯಾರ' ಕಟ್ಟಿದವರು ನಾವೇ!

ನಮಗೆ ಬೆಳಕನ್ನೂ ಕಾಲದಿಂದ ಕೂಡಿ ಕಳೆಯುವ ಹುಚ್ಚು! ಬೆಳಕಿನ ನೆರಳಾಗುವ ತನಕ 'ಉದಯ–ಅಸ್ತ' ಅಂಟಿಕೊಂಡಿರುತ್ತದೆ! ನಿಜಕ್ಕಾದರೂ ಉದಯದ ಮೊದಲು ಬೆಳಕಿತ್ತು, ಅಸ್ತದ ನಂತರವೂ ಇರುತ್ತದೆ. ಈಗ ಇದ್ದು ಆಮೇಲೆ ಇರದಿದ್ದರೆ ಅದು ಬೆಳಕೇ ಅಲ್ಲ!

ನಮಗೆ ನಮ್ಮದೇ ಸ್ಕೂಟರಿನ, ಕಾರಿನ ಹೆಡ್‌ಲೈಟ್ ಬಿಂಬಿಸುವ ಬೆಳಕಲ್ಲೂ ನಂಬಿಕೆಯಿದೆ. ಇಷ್ಟೇ ಇಷ್ಟು ದೂರಕ್ಕೆ ಬೀಳುವ ಬೆಳಕನ್ನೇ ನೆಚ್ಚಿಕೊಂಡು, ಮೆಚ್ಚಿಕೊಂಡು ನೂರಿನ್ನೂರು ಕಿ.ಮೀ. ಪಯಣವನ್ನು ಇರುಳಿನಲ್ಲೇ ಸಾಗಿಸುವ ನಂಬಿಕೆಯದು. ಇಲ್ಲಿ ಬೆಳಕಿನೊಂದಿಗೆ ಒಂದಿಷ್ಟು ಆಟವೂ ನಡೆಯುತ್ತದೆ. ಬೆಳಕನ್ನು ಡಿಮ್‌ಡಿಪ್ ಮಾಡುತ್ತಾ ದಾರಿಯ ದಾರಿ ಬಿಡಿಸುವಾಗ ಸಿಗುವುದು ನಂಬಿಕೆಯ ಗುರಿಯೇ ಇರಬಹುದೋ ಏನೋ?

ಆಶ್ಚರ್ಯವೆಂದರೆ ನಮಗೆ ಮದ್ದಿನ ಔಷಧದ ಬೆಳಕಿನಲ್ಲೂ ವಿಶೇಷವಾದ ನಂಬಿಕೆಯಿದೆ! ಈ ಮದ್ದಿನ ಮಾತ್ರೆಗಳಿವೆಯಲ್ಲಾ ಅವುಗಳು ಗಂಟಲು ದಾಟಿ, ಹೊಟ್ಟೆ ಸೇರಿ ಕರಗುವಾಗ ಬಿಟ್ಟುಕೊಡುವುದು ಬೆಳಕನ್ನೇ. ಅವು ಬೆಳಕಿನ ಗುಳಿಗೆಗಳು. ಈ ಬಿಳಿ ಬಿಳೀ ಬೆಳಕಿನ ಗುಳಿಗೆಗಳು ಯಾವುದೋ ಒಂದು ನೋವನ್ನು ನಿವಾರಿಸುತ್ತವೆ ಎನ್ನುವ ನಂಬಿಕೆಯಿರುವುದರಿಂದಲೇ ಅವು ಮದ್ದಾಗಿ ಕೆಲಸ ಮಾಡುತ್ತವೆ. ಈ ಗುಳಿಗೆಗಳ ಬಣ್ಣ ಕಪ್ಪೋ, ಕೆಂಪೋ, ಬೂದು ಬಣ್ಣವೋ ಆದಾಗ ಮನಸ್ಸು ಒಂದಷ್ಟು ಸಡಿಲವಾಗುವುದೂ ಇದೆ. 'ಬಿಳಿ' ಔಷಧದ ಸಹಜ ಬಣ್ಣವೇ ಆಗಿದೆ ಎನ್ನುವಷ್ಟು ವಿಶ್ವಾಸ ನಮ್ಮೊಳಗಿದೆ. ಅಂದಹಾಗೆ ದಾದಿಯರ ಬಿಳಿ ಉಡುಗೆ, ಡಾಕ್ಟರ್ ಹಾಕಿಕೊಳ್ಳುವ ಬಿಳಿ ಕೋಟು, ನಿರ್ಮಲ ಬಿಳಿ ಬಣ್ಣದ ಹತ್ತಿಗಳೆಲ್ಲಾ ಬೆಳಕಿಗೆ ಅತಿ ಸಮೀಪದಲ್ಲೇ ಇರುತ್ತವೆಯೋ ಏನೋ? ಹತ್ತಿಯಂತೂ ಹಾರುವ ಬೆಳಕಿನ ಹಾಗೆ ಭಾಸವಾಗುತ್ತದೆ.

ಅಂದಹಾಗೆ ಎಲ್ಲವನ್ನೂ ನೋಡುವ ಆ ದೃಷ್ಟಿಯ ಬೆಳಕು ಬರುವುದು ಎಲ್ಲಿಂದ? ಹೊರಗಿನ ಬೆಳಕಿನಿಂದಲೋ? ಒಳಗಿನ ಬೆಳಕಿನಿಂದಲೋ? ಒಳ–ಹೊರಗನ್ನು ಬೆಸೆಯುವುದೂ ಬೆಳಕೇ ಅಲ್ಲವೇ? ಬೆಳಕಿಗೆ ಇದು ಬಾಹ್ಯ ಅದು ಆಂತರ್ಯ ಎನ್ನುವ ದ್ವೈತವಿರುವುದು ಸಾಧ್ಯವೇ ಇಲ್ಲ. ಬೆಳಕು ಶುದ್ಧ ಅದ್ವೈತ, ನಾನೇ ಬೆಳಕು ಎಂದೂ ಸಾರುವಷ್ಟು ಅದ್ವೈತ. ನಮ್ಮ ನಮ್ಮ ಲೌಕಿಕದಲ್ಲಿ ಈ ಸತ್ಯ ಗೋಚರಿಸದೆ ಇರಬಹುದು. ಆದರೆ ಅಗೋಚರದಲ್ಲಿರುವ ಸತ್ಯದ ಪ್ರಕಾಶವೇ ಅದ್ಭುತವಾದುದು. ಅದು ಒಂದಲ್ಲ ಒಂದು ದಿನ, ಒಂದು ಗಳಿಗೆ ಪ್ರತಿಯೊಬ್ಬನಿಗೂ ಗೋಚರಿಸುತ್ತದೆ. ಆಗ ನಾನೇ ಪ್ರಕಾಶ, ನಾನೇ ಪ್ರಭೆ, ನಾನೇ ಬೆಳಕಾಗುತ್ತೇನೆ!

ಒಂದು ಮಾತಿದೆ. ನಮ್ಮ ನಮ್ಮ ಕಥೆಗಳನ್ನು ನಾವೇ ಬರೆಯುತ್ತೇವಂತೆ. ಅದೂ ಎಂಥ ಕಥೆ? ನಾನು ಯಾವುದಕ್ಕೂ ಪ್ರಯೋಜನವಿಲ್ಲ, ನನ್ನಿಂದ ಏನೂ ಆಗುವುದಿಲ್ಲ. ನನ್ನ ಕನ್ನಡ ಸರಿಯಿಲ್ಲ, ಇಂಗ್ಲಿಷ್ ತೀರಾ ಕಳಪೆ ಎನ್ನುವ ಕಥೆಗಳನ್ನು ಬರೆದು ಅವನ್ನೇ

ನಂಬಿ ಬದುಕುತ್ತಿರುತ್ತೇವೆ. ಇವೆಲ್ಲಾ ಕತ್ತಲೆ ಕಥೆಗಳು. ಕಥೆಗಳ ಬದಲಾವಣೆಯಾಗದೇ ಬದುಕು ಬದಲಾಗುವುದಿಲ್ಲ. ಈ ಕ್ಷಣದಿಂದ ನಾವು ಬೆಳಕಿನ ಕಥೆಗಳನ್ನು ಬರೆಯಲು ಪ್ರಾರಂಭಿಸಬೇಕಕು. ಇಲ್ಲಿರುವುದೆಲ್ಲಾ ಬೆಳಕೇ ಎನ್ನುವ ಕಥೆ. ನಮ್ಮೊಳಗೆ ತುಂಬಿ ತುಳುಕುತ್ತಿರುವ ಬೆಳಕೇ ಎನ್ನುವ ಕಥೆ. ನನ್ನ ಕಣ್ಣುಗಳಲ್ಲಿ ಹೊಳೆಯುತ್ತಿರುವ ಮುಗ್ಧ ಪ್ರೀತಿ ಎನ್ನುವ ಕಥೆ ಹೊಳೆದರೂ ಸಾಕು ಕತ್ತಲ ಹೊಳೆ ದಾಟಿ ಬೆಳಕಿನ ದಡ ಮುಟ್ಟಬಹುದು.

ಕತ್ತಲಾಗುವುದು ಬೆಳಕಿನ ನಿದ್ರೆಗೆ ಜಾರಲು! ಮತ್ತೆ ಬೆಳಕಾಗುವುದು ಬೆಳಕಿನ ಮೆಟ್ಟಿಲುಗಳನ್ನು ಏರಲು. ಇರುಳಾಗುವುದು ಸ್ವಪ್ನಲೋಕವನ್ನು ಪ್ರವೇಶಿಸಿ ಬಣ್ಣ ಬಣ್ಣದ ಕನಸುಗಳನ್ನು ಕಾಣಲು. ಮತ್ತೆ ಸೂರ್ಯ ಮೂಡಿ ಬರುವುದು ಕಂಡ ಕನಸುಗಳನ್ನು ನನಸಾಗಿಸಲು. ಸೂರ್ಯಾಸ್ತವಾಗುವುದು ವ್ಯಸ್ತ ಬದುಕಿಗೆ ಆರಾಮ ನೀಡಿ ಬೆಳಕಿನ ಹೊದಿಕೆ ಹೊದಿಸಲು. ಮತ್ತೆ ಉದಯ ರವಿ ರಾರಾಜಿಸುವುದು ನಿತ್ಯದ ಬಾಳಿಗೆ ವಿನಯದಿಂದ ವಂದಿಸಲು.

ನಾನು ವೈದ್ಯರ ಬಳಿಗೆ ಹೋಗಿ ಹೇಳಿದೆ. ನನ್ನೊಳಗೆ ನೂರಾರು ದೋಷಗಳಿವೆ. ಅವನ್ನೆಲ್ಲಾ ನೀನು ಒಂದಾಗಿ ಕೂಡಿಸಬಲ್ಲೆಯಾ? ಮತ್ತು ಆ ಒಂದಕ್ಕೆ ಚಿಕಿತ್ಸೆ ನೀಡಬಲ್ಲೆಯಾ?

–ರೂಮಿ

**ಎಚ್. ರಮೇಶ ಕೆದಿಲಾಯ**

ಕನ್ನಡ ಪ್ರಭ ದೀಪಾವಳಿ ವಿಶೇಷಾಂಕ ೨೦೧೪

# ನಿನಗೆ ಬೇರೆ ಹೆಸರು ಬೇಕೆ?

ನಮಗೆ ಎರಡನೆ ಮಗಳು ಹುಟ್ಟಿದಾಗ ನನಗಾದ ಅನುಭವಗಳು ಹೆಣ್ಣಿನ ಕುರಿತಾಗಿ ಲೋಕಕ್ಕೆ ಇರುವ ಗ್ರಹಿಕೆಗಳ ಕುರಿತು ಸಾಕಷ್ಟು ಭಿನ್ನ ಬಗೆಯ ತಿಳಿವಳಿಕೆಗಳನ್ನು ನೀಡಿದವು. ಆ ದೃಷ್ಟಿಯಿಂದ ಅವಳು ನನಗೆ 'ಪೊರೆಗಳ ಹರಿದು ಹೊಸಲೋಕ ಕಾಣಿಸಿದ ಕಣ್ಣಾಗಿ' ಗೋಚರಿಸಿದಳು. ಮುದ್ದಾದ ಮಗು ಅದಕ್ಕಿಂತ ಮುದ್ದಾದ ಪ್ರಶಾಂತ ಭಂಗಿಯಲ್ಲಿ ನಿದ್ದೆ ಮಾಡುತ್ತಿದ್ದರೆ, ಪಕ್ಕದಲ್ಲಿ ಮಲಗಿದ ನನ್ನವಳು ಖಿನ್ನವದನಳಾಗಿದ್ದಳು. ಮೊತ್ತಮೊದಲ ಬಾರಿಗೆ ಅತ್ತೆ ನನ್ನ ಮುಂದೆ ಕಣ್ಣೀರು ಹಾಕಿದಳು. ಅಮ್ಮನಾದರೋ "ಸತ್ತು ಹೋಗಿರೋ ನಿಮ್ಮಪ್ಪ ಮತ್ತೆ ಹುಟ್ಟಿ ಬರ್ತಾನ ಅಂದ್ಕೊಂಡಿದ್ನೆಪ. ಇರ್ಲಿ ಬುಡು. ಆ ಶಾಂಭವಿ ಸತ್ಯುಳ್ಳಕಿ ಆಗಿದ್ರೆ ಮುಂದಿನ ವರ್ಷ ಗಂಡೇ ಹುಟ್ತಾದ!" ಅಂದಳು – ಒತ್ತಿಕೊಂಡು ಬರುತ್ತಿದ್ದ ನಿರಾಶೆಯ ದುಃಖವನ್ನು ಕಣ್ಣಿಂದ ಕೆಳಗುರುಳದಂತೆ ಹತ್ತಿಕ್ಕಲು ವ್ಯರ್ಥಪ್ರಯತ್ನ ಪಡುತ್ತ. ಗಂಡು ಮಗುವಾಗಬೇಕೆಂಬ ನಮ್ಮ ಕೋರಿಕೆಯನ್ನು ಈಡೇರಿಸಲಿಕ್ಕೆ ಶಾಂಭವಿ ಎಂಬ ಹೆಣ್ಣು ದೇವರ ಸತ್ಯವನ್ನೇ ಅವಳು ಪಣಕ್ಕಿಟ್ಟದ್ದು ಮಾತ್ರ ನನಗೆ ಒಂದು ಸೋಜಿಗದ ಸಂಗತಿಯಾಗಿ ತೋರಿತು.

ಇದು ಎರಡನೇ ಸಿಸೇರಿಯನ್ ಹೆರಿಗೆಯಾದ್ದರಿಂದ ಕುಟುಂಬಯೋಜನೆಯ ಶಸ್ತ್ರಚಿಕಿತ್ಸೆಯನ್ನೂ ಈಗಲೇ ಮಾಡಿಬಿಡಿ ಎಂದು ಆಪರೇಷನ್ ಮಾಡಿದ ಪ್ರಸೂತಿ ತಜ್ಞೆ ಡಾಕ್ಟರರಿಗೆ ಕೇಳಿದರೆ ಆಕೆಯ ಪ್ರತಿಕ್ರಿಯೆ ಇನ್ನೂ ಕುತೂಹಲಕರವಾಗಿತ್ತು. ಅವರೆಂದರು– "ಮಾಡೋಣ. ಆದರೆ ಸದ್ಯಕ್ಕೆ ಬೇಡ. ಒಂದು ಆರು ತಿಂಗಳಾಗಲಿ. ಆಮೇಲೆ ನೋಡೋಣ". ಈ ನೋಡೋಣ–ಮಾಡೋಣ ಎಂಬ ರಾಜಕಾರಣದ ಮಾದರಿಯ ಮಾತಿನ ಹಿಂದೆ ಏನೋ ತಥ್ಯ ಅಡಗಿರುವಂತೆ ಕಂಡು ದಾದಿಯೊಬ್ಬಳನ್ನು ಪುಸಲಾಯಿಸಿ ಕೇಳಿದೆ. ಆಕೆ ಹೇಳಿದಳು– "ಏ ಅದಕ್ಯಾಕ್ರೀ ಅಷ್ಟೊಂದು ಅವಸರ ಮಾಡ್ತೀರಿ? ಆಪರೇಷನ್ ಆದ್ಮೇಲೆ ಮೂರನೇ ಮಗು ಬೇಕು ಅನಿಸಿದ್ರೆ ಆಗ ಏನೂ ಮಾಡಕಾಗಲ್ಲ. ಮೊದಲು ಮನೆಯೊಳಗೆ ಎಲ್ಲರ ಜೊತೆ ಡಿಸ್ಕಸ್ ಮಾಡ್ರಿ ಬ್ರದರ್. ಆಮೇಲೆ ಪೇಚಾಡಬಾರದು ಅಂತ್ಲೇ ಎರಡೂ ಹೆಣ್ಣಾದವರಿಗೆ ನಾವು ತಕ್ಷಣಕ್ಕೆ ಫ್ಯಾಮಿಲಿ ಪ್ಲಾನಿಂಗ್ ಮಾಡಲ್ಲ. ಅದಾಗಿ ಮೂರನೇ ಸಿಸೇರಿಯನ್ ಅನ್ನೋದೊಂದು ದೊಡ್ಡ ವಿಷ್ಯನೇ ಅಲ್ಲ. ಎಷ್ಟೋ ಕೇಸ್‌ಗಳಿಗೆ ನಾವೇ ಮಾಡಿದೀವಲ್ಲ. ಒಂದರ ಗಂಡು ಮಗು ಇಲ್ಲಾಂದ್ರ ಹೆಂಗ? ಈಗ ನಿಮ್ಮ ಮಾತು ಕೇಳಿ ಆಪರೇಷನ್ ಮಾಡಿ ಆಮೇಲೆ ನೀವು ನಮ್ಮನ್ನು ಬೈದುಕೊಳ್ಳೋದಕ್ಕಿಂತ, ಈಗ ಬೈಕೊಂಡ್ರೂ ಪರವಾಗಿಲ್ಲ ಆಮೇಲೆ ನೀವೇ ನಮ್ಮ ಮಾತು ಸರಿ ಅಂತೀರಿ. ಇಂಥವು ಎಷ್ಟೋ ಆಗ್ತಾವ".

ಆಲೋಚಿಸಿ ನೋಡಿದರೆ ಹೆಣ್ಣು ಮಗು ಹುಟ್ಟಿದಾಗ ಲೊಚಗುಡುವವರೆಲ್ಲ ಬಹುತೇಕ ಹೆಂಗಸರೇ ಆಗಿದ್ದರು. ಗಂಡು ಮಗುವಾಗಲಿ ಅಂತ ಗಂಡಸರಿಗಿಂತ

ಹೆಚ್ಚು ಅವರೇ ಆಸೆಪಡುತ್ತಾರೋ ಅಥವಾ ಗಂಡಸರ ಮನೋಕಾಮನೆಯನ್ನೇ ಯಥಾವತ್ತಾಗಿ ತಮ್ಮದಾಗಿಸಿಕೊಂಡು ಅವರನ್ನು ಸಂಪ್ರೀತಗೊಳಿಸಲಿಕ್ಕೆ ಹೆಂಗಸರು ಹೀಗೆ ಆಡುತ್ತಾರೋ ಖಚಿತವಾಗಿ ಗೊತ್ತಿಲ್ಲ. ಹೆಣ್ಣಾಗಿ ಹುಟ್ಟಿದ್ದಕ್ಕೆ ತಾವು ಅನುಭವಿಸಬೇಕಾಗಿ ಬಂದ ಎಲ್ಲ ಕಷ್ಟಕೋಟಲೆಗಳು ಅವರಿಂದ ಈ ಮಾತನ್ನು ಆಡಿಸಿರುವ ಸಾಧ್ಯತೆಗಳನ್ನಂತೂ ತಳ್ಳಿಹಾಕಲಾಗದು. ಜಾನಪದ ಮತ್ತು ಶಿಷ್ಟ ಎರಡೂ ಬಗೆಯ ಸಾಹಿತ್ಯದಲ್ಲೂ ಈವರೆಗೆ ನಮಗೆ ಸಿಕ್ಕಿರುವ, ದಕ್ಕಿರುವ ಸ್ತ್ರೀಚಿತ್ರಣ ಕೂಡ ಈ ಮಾತಿಗೆ ಪುಷ್ಟಿ ನೀಡುವಂತಿದೆ. ಒಂದೋ ಅವಳನ್ನು ದೈವತ್ವಕ್ಕೇರಿಸಿ ಶಕ್ತಿಸ್ವರೂಪಿಣಿಯಾಗಿ ವಿಜೃಂಭಿಸಲಾಗಿದೆ ಇಲ್ಲವೆ ಚರಣದಾಸಿಯನ್ನಾಗಿಸಿ ಪಾತಾಳಕ್ಕೆ ತುಳಿಯಲಾಗಿದೆ. ನಮ್ಮ ಸಹಚರಳಂತೆ, ಮನುಷ್ಯಳಂತೆ ಅವಳನ್ನು ಸರಿಸಮನಾಗಿ ಗ್ರಹಿಸಿ ಅವಳ ಮಿತಿ ಮತ್ತು ಮಹತ್ವಗಳನ್ನು ಅರಿಯುವ ಕೆಲಸ ಕಡಿಮೆ ಪ್ರಮಾಣದಲ್ಲಾಗಿದೆ. ಮನೆ–ಮನಗಳನ್ನು ವಯಸ್ಸು–ಲಿಂಗ–ಪ್ರದೇಶ–ಸಾಕ್ಷರತೆಗಳ ಭೇದವಿಲ್ಲದೆ ತಲುಪಿದ ಚಲನಚಿತ್ರಗೀತೆಗಳ ಸಾಹಿತ್ಯವಂತೂ ಹೆಣ್ಣನ್ನು ಅಲಂಕಾರಿಕ ಪದಗಳಲ್ಲಿ ಹೊಗಳಿ ಅಟ್ಟಕ್ಕೇರಿಸುತ್ತಲೇ ಒಂದಿಡೀ ತಲೆಮಾರಿನ ಗ್ರಹಿಕಾಸಾಮರ್ಥ್ಯದ ಮೇಲೆ ಸವಾರಿ ಮಾಡಿದೆ. ಚಿತ್ರಸಾಹಿತಿಗಳೆಲ್ಲರೂ ಪುರುಷರೇ ಆಗಿದ್ದುದು ಕೂಡ ಇದಕ್ಕೊಂದು ಕಾರಣವಾಗಿರುವ ಸಾಧ್ಯತೆಯಿದೆ ಎಂದು ನನ್ನ ಊಹೆ. 'ಜಾಣೆಯಾಗಿರು ನನ್ನ ಮಲ್ಲಿಗೆ; ನೀ ಹೆಣ್ಣಾಗಿ ಬಂದಿರುವೆ ಇಲ್ಲಿಗೆ'; 'ಈ ನಿಮ್ಮ ಪಾದದಾಣೆ; ನಿಮ್ಮ ಪೂಜೆ ಹೂವು ನಾನೇ'; 'ಗಂಡಾಗಿ ನೀನು ಹುಟ್ಟಿ ಬಂದ ಮೇಲೆ; ಮೀಸೆ ಮೇಲೆ ಕೈ, ಎಲ್ಲಾದಕ್ಕೂ ಸೈ'; 'ಬಾಳೆಂಬ ವನದಿ ನೀ ದೇವರಾದೆ; ಈ ದೇವರಿಗೆ ನಾ ಪೂಜಾರಿಯಾದೆ'; 'ಹೂವು ಎಂದಿಗೂ ಮುಡಿಪು ದೇವರಿಗೆ ಏಕೆ ಅವಸರ?; ನಾನು ನಿನ್ನವಳು, ನೀನು ನನ್ನವನು ಏಕೆ ಕಾತರ?' ಈ ಸಾಲುಗಳ ಹಿಂದಿರುವ ಪುರುಷಪ್ರಧಾನ ಆಲೋಚನೆಗಳೇ ನಮ್ಮ ನೋಡುವ ಕ್ರಮವನ್ನು ಬೆರಳು ಮಾಡಿ ತೋರಿಸುತ್ತಿರುವಂತಿವೆ. ಹೆಂಗಸರೇ ಚಿತ್ರಸಾಹಿತಿಗಳಿದ್ದರೆ ಈ ಸಾಲುಗಳು ಹೇಗಿರುತ್ತಿದ್ದವೆಂಬ ಬಗ್ಗೆ ನನಗೆ ಕುತೂಹಲವಿದೆ. ಇರಲಿ, ಇದಕ್ಕೆ ವ್ಯತಿರಿಕ್ತವಾಗಿ 'ಈ ಶತಮಾನದ ಮಾದರಿ ಹೆಣ್ಣು, ಸ್ವಾಭಿಮಾನದ ಸಾಹಸಿ ಹೆಣ್ಣು; ಗುಲಾಮಳಿವಳಲ್ಲ, ಸಲಾಮು ಹೊಡೆಯಲ್ಲ'ದಂಥ ಸಾಲುಗಳು ಮಿಣುಕುಹುಳದಂತೆ ಅಲ್ಲೊಂದು ಇಲ್ಲೊಂದು ಬಂದೂ ಹೋಗಿವೆಯೆನ್ನಿ. ಒಟ್ಟಾರೆಯಾಗಿ ಶಿಲ್ಪಿಗಳು, ಚಿತ್ರಕಾರರು, ನಿರ್ದೇಶಕರು ಪುರುಷರಾಗಿದ್ದರೆ ಅವರು ಚಿತ್ರಿಸುವ ಹೆಣ್ಣೇ ಬೇರೆ; ಸ್ವತಃ ಹೆಣ್ಣಾಗಿರುವವಳು ಅವಳನ್ನು ಪರಿಭಾವಿಸುವ, ಗ್ರಹಿಸುವ, ಚಿತ್ರಿಸುವ ರೀತಿಯೇ ಬೇರೆಯೆಂಬುದಂತೂ ಸೂರ್ಯಸ್ಪಷ್ಟ ಸಂಗತಿ. ರಾಜಾ ರವಿವರ್ಮ ಸೇರಿದಂತೆ ಬಹುತೇಕ ಕಲಾವಿದರು ಚಿತ್ರಿಸುವ ಹೆಂಗಸರು ಮತ್ತು ಯಾವುದೇ ಶಿಲ್ಪಿಯು ಕೆತ್ತಿರುವ ಯಾವುದೇ ಸ್ತ್ರೀ ದೇವತೆಯ ವಿಗ್ರಹಗಳೂ ಸುಪುಷ್ಟ ಅಂಗಸೌಷ್ಠವ ಹೊಂದಿರುವ ಸುಂದರ ಸ್ತ್ರೀಮೂರ್ತಿಗಳೇ ಆಗಿದ್ದು ಅವರೆಲ್ಲ ಒಂದೇ ಅಚ್ಚಿನ ಬೇರೆ ಬೇರೆ ರೂಪಗಳಂತೆ ಕಾಣಿಸುವುದಿಲ್ಲವೆ? ಕಾಳಿಯಂಥ

ಉಗ್ರದೇವತೆಯ ಚಿತ್ರವನ್ನು ಅಥವಾ ಶಿಲ್ಪವನ್ನು ಮುಖ ಹೊರತುಪಡಿಸಿ ನೋಡಿದಾಗ ಅಲ್ಲೂ ನಮಗೆ ಒಂದು ಸುಂದರ ಸ್ತ್ರೀಯ ಆಕರ್ಷಕ ಮೈಮಾಟವೇ ಕಾಣಸಿಗುವುದು. ಇದಕ್ಕೆ ಕಾರಣ ಆ ಕಲಾಕಾರನ ಪುರುಷಕೇಂದ್ರಿತ ಸೌಂದರ್ಯಪ್ರಜ್ಞೆಯೇ ತಾನೆ? ಅಲ್ಲವೆಂದು ಹೇಗೆ ಹೇಳುವುದು?

ಹೆಣ್ಣು ಅಂದ ತಕ್ಷಣ ಒಂದು ಸೆಕ್ಸ್ ಸಿಂಬಲ್ ಆಗಿ ಅವಳು ನಮ್ಮೆದುರು ಬರುವಂಥ ವಾತಾವರಣದಲ್ಲಿ ನಾವು ಬದುಕುತ್ತಿದ್ದೇವೆ. ಅವಳನ್ನು ಒಲಿಸಿಕೊಳ್ಳುವುದರಿಂದ ಹಿಡಿದು, ಅವಳನ್ನು ತೃಪ್ತಿಪಡಿಸುವವರೆಗೆ ಗಂಡಸಿನ ಭಾವಕೋಶದ ಬಹುಭಾಗವನ್ನು ಅವಳು ಆವರಿಸಿಕೊಂಡಿದ್ದಾಳೆ. ಹೆಣ್ಣನ್ನು ಆದಿಶಕ್ತಿ, ಪರಾಶಕ್ತಿಗೆ ಹೋಲಿಸಿದ ಗಂಡಸಿನ ಮನಸಿನ ಆಳದಲ್ಲೆಲ್ಲೋ ಅವಳನ್ನು ಗೆಲ್ಲಲಾಗದ, ಮೀರಲಾಗದ ವಾಸ್ತವಪ್ರಜ್ಞೆಯು ಕೆಲಸ ಮಾಡಿರಬಹುದೆಂಬ ಅನುಮಾನ ನನಗೆ. ಸೌಂದರ್ಯ, ಶಕ್ತಿ, ಜ್ಞಾನ ಅಷ್ಟೇಕೆ ಅನ್ನದ ಅಧಿದೇವತೆಯೂ ಸ್ತ್ರೀಯೇ ಆಗಿದ್ದಾಳೆ. ಮಿಲನದ ವಿಚಾರಕ್ಕೆ ಬಂದರೆ ಹೆಣ್ಣು ಮತ್ತು ಗಂಡಿನ ಸಂಬಂಧವನ್ನು ಪಥ ಮತ್ತು ಪಥಿಕನ ಸಂಬಂಧದ ರೂಪಕದ ಮೂಲಕ ಹಿಡಿದಿಡಬಹುದೆನಿಸುತ್ತದೆ. ಧರ್ಮ, ಅರ್ಥಗಳಂತೆ ಕಾಮವೂ ಮೋಕ್ಷದ ಹಾದಿಯಾಗಿದೆ. ಪಥಿಕನು ಗುರಿ ತಲುಪಲು ಪಥವೊಂದು ಬೇಕು. ಗುರಿ ಒಂದೇ ಇದೆ. ಆದರೆ ದಾರಿಗಳು ಹಲವಿವೆ. ಒಂದು ದಾರಿಯ ಹಿಡಿದು ನಡೆಯುತ್ತ ಸಾಗುವ ಒಬ್ಬ ಪಥಿಕನಿಗೆ ದಣಿವಿಲ್ಲ. ದಾರಿ ಬದಲಿಸುತ್ತ ಇರುವವನಿಗೆ ಗುರಿಯ ದೂರ ಹೆಚ್ಚುತ್ತ ಸಾಗುವುದಲ್ಲದೆ ದಣಿವಾಗುವುದು. ಒಂದೇ ದಾರಿ ಹಿಡಿದು ನಡೆದು ಗುರಿ ತಲುಪಿದ ಹಲವರಿದ್ದಾರೆ. ಹಲವು ದಾರಿಗಳ ಹಿಡಿದು ನಡೆದು ಗುರಿ ತಲುಪಿದ ಒಬ್ಬನೂ ಇಲ್ಲ. ಏಕೆಂದರೆ ಇಲ್ಲಿ ದಾರಿಗೆ ದಣಿವಿಲ್ಲ. ದಾರಿಹೋಕನಿಗಿದೆ. ಅದೇ ರೀತಿಯಾಗಿ ದಾರಿಗೆ ಇಷ್ಟಾನಿಷ್ಟಗಳ ಹಂಗಿಲ್ಲ. ಇಷ್ಟವಿಲ್ಲದೆಯೂ ಅದು ಒಬ್ಬ ಪಥಿಕನಿಗೆ ತೆರೆದುಕೊಳ್ಳುವುದು. ಆದರೆ ದಾರಿಹೋಕನೊಬ್ಬ ಇಷ್ಟವಿಲ್ಲದ ಹಾದಿಯಲ್ಲಿ ಅಥವಾ ಇಷ್ಟವಿರುವ ಹಾದಿಯಲ್ಲಿಯೇ ಆದರೂ ಮನಸಿಗೆ ಇಷ್ಟವಿಲ್ಲದಿರುವಾಗ ನಡೆಯಲಾರ. ಇದು ಸೂಕ್ಷ್ಮವಾಗಿ ದಾರಿಯ ಶಕ್ತಿ ಮತ್ತು ದಾರಿಹೋಕನ ಮಿತಿಗಳನ್ನು ಸೂಚಿಸುತ್ತಿರುವಂತಿದೆ. ಶಕ್ತಿ ಮತ್ತು ಆಸಕ್ತಿಗಳ ವಿಷಯವಾಗಿ ಇವೆರಡರಲ್ಲಿ ಅಥವಾ ಈ ಇಬ್ಬರಲ್ಲಿ ಒಂದು ಮೂಲಭೂತ ವ್ಯತ್ಯಾಸವಿದೆ. ಅದೆಂದರೆ ದಾರಿಗೆ ಶಕ್ತಿ ಜಾಸ್ತಿ, ಆಸಕ್ತಿ ಕಡಿಮೆ. ದಾರಿಹೋಕನಿಗೆ ಆಸಕ್ತಿ ಜಾಸ್ತಿ, ಶಕ್ತಿ ಕಡಿಮೆ. ಈ ಮಾತನ್ನು ಹೇಳುತ್ತಿರುವಾಗ "ಈ ಭೂಮಿಯು ತಿರುಗುತ್ತಿರುವುದು ಸೂರ್ಯನ ಸುತ್ತ ಅಲ್ಲ, ವಿಮೆನ್ ಸೆಕ್ಸುವಾಲಿಟಿಯ ಸುತ್ತ" ಎಂಬ ಯಾವುದೋ ಕವಿಯ ಸಾಲುಗಳು ನೆನಪಾಗ್ತಿವೆ. ಓಶೋ ಅಂತೂ ಸಂಭೋಗದ ಮೂಲಕವೇ ಧ್ಯಾನದ ಔತ್ತರೀಯ ಸ್ಥಿತಿಯಾದ ಸಮಾಧಿ ಸ್ಥಿತಿಯನ್ನು ತಲುಪಬಹುದೆಂದು ತಮ್ಮದೇ ಆದ ಒಂದು ವಿಶಿಷ್ಟ ಅಧ್ಯಾತ್ಮಿಕ ಪ್ರಮೇಯವನ್ನು ಮಂಡಿಸಿದ್ದಾರೆ. ಹೆಣ್ಣಿನ ದೈಹಿಕ ಮತ್ತು ಮಾನಸಿಕ ಸಾಂಗತ್ಯಗಳಿಂದ

ತಮಗೆ ಬೇಕಾದ ಪ್ರಾಣಚೈತನ್ಯವನ್ನು ವಿವಿಧ ಸ್ತರಗಳಲ್ಲಿ ಅವರವರ ಶಕ್ತ್ಯಾನುಸಾರ ಅವರವರು ಪಡೆದಿದ್ದರೆ ಓಶೋ ಸಮಾಧಿಯನ್ನೇ ಪಡೆದಿದ್ದಾರೆ.

ಸಾಹಿತಿಗಳಂತೂ ಹೆಣ್ಣಿನ ಬಗ್ಗೆ ಲೋಡುಗಟ್ಟಲೆ ಬರೆದಿದ್ದಾರೆ, ಬರೆಯುತ್ತಿದ್ದಾರೆ, ಬರೆಯಲಿದ್ದಾರೆ. ಜಿ.ಎಸ್.ಶಿವರುದ್ರಪ್ಪನವರು 'ನಿನಗೆ ಬೇರೆ ಹೆಸರು ಬೇಕೆ?; ಸ್ತ್ರೀ ಎಂದರೆ ಅಷ್ಟೇ ಸಾಕೆ?' ಎಂದಿದ್ದರೆ, ಲಂಕೇಶ್ 'ನನ್ನವ್ವ ಫಲವತ್ತಾದ ಕಪ್ಪು ನೆಲ' ಎಂದಿದ್ದಾರೆ. ತೆಲುಗಿನ ಕೆ. ಶಿವಾರೆಡ್ಡಿಯವರು 'ಬೀಜವಲ್ಲ ಬರಿಯ ಬೆರಳಿಟ್ಟರೂ ಮೊಳಕೆಯೊಡೆಯುವ ಫಲದಾಯಿನಿ' ಎಂದು ಹೆಣ್ಣನ್ನು ಚಿತ್ರಿಸಿದ್ದಾರೆ. ಅವರು ಹೆಣ್ಣಿನ ಬಗ್ಗೆ ಬರೆದಿರುವ ಕವಿತೆಗಳು ಎಷ್ಟಿವೆಯೆಂದರೆ ವಿವಿಧ ಸಂಕಲನದಿಂದ ಅಂಥವನ್ನೆಲ್ಲ ಆಯ್ದು 'ಆಮೆ ಎವರೈತೆ ಮಾತ್ರಂ (ಆಕೆ ಯಾರಾದರೆ ಮಾತ್ರ) ಎಂಬ ಪ್ರತ್ಯೇಕ ಸಂಕಲನವನ್ನೇ ಪ್ರಕಟಿಸಿದ್ದಾರೆ. ಎಷ್ಟು ಬಗೆಗಳಲ್ಲಿ ಕಂಡರಿಸಿದರೂ ನಮ್ಮ ದೃಷ್ಟಿಕೋನಕ್ಕೊಂದು ಮಿತಿ ಇರುವಂತಿರುವುದು ಲಲಿತಾ ಸಿದ್ಧಬಸವಯ್ಯ ಅವರ 'ಧನ್ಯವಾದಗಳು' ಪದ್ಯ ಓದಿದಾಗ ನನಗನ್ನಿಸಿತು. ಅದರಲ್ಲಿ ಅವರು ಈ ಜಗವನ್ನು ಅನುವಾದಿಸುವ ಅವಕಾಶವನ್ನು ತಮಗೆ ಮಾತ್ರ ನೀಡಿದ್ದಕ್ಕೆ ದೇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾರೆ. ವಿಜಾಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಯೊಂದರಲ್ಲಿ ಮಾತಾಡುತ್ತ ವೀಣಾ ಬನ್ನಂಜೆಯವರು "ಗಂಡಸು ಅಪೂರ್ಣನಾಗಿರುವುದರಿಂದ ತನ್ನ ಸಂತಾನವನ್ನು ಮುಂದುವರಿಸುವ ಮಗನೇ ಬೇಕೆಂದು ಬಯಸುತ್ತಾನೆ. ಅವನು ಹುಟ್ಟಿದ ಮೇಲೆ ತಾನು ಪೂರ್ಣಗೊಂಡಂತೆ ಭಾವಿಸುತ್ತಾನೆ. ಆದರೆ ಹೆಣ್ಣು ತನ್ನಷ್ಟಕ್ಕೇ ತಾನು ಸ್ವಯಂಪರಿಪೂರ್ಣಳಿದ್ದಾಳೆ. ಹಾಗಾಗಿ ಅವಳಿಗೆ ಎಲ್ಲ ಮಕ್ಕಳೂ ಒಂದೇ" ಎಂದಿದ್ದು ತಲೆಯಲ್ಲಿ ಗುಂಗಿಹುಳದಂತೆ ಕೊರೆಯುತ್ತಿದೆ. ಖುಷ್ವಂತ್‌ಸಿಂಗ್ ಇದೇ ಮಾತನ್ನೇ ಮದುವೆಗೆ ಅನ್ವಯಿಸಿ "ಎ ಮ್ಯಾನ್ ಇಸ್ ಎ ಸೆಮಿಸರ್ಕಲ್ ಬಿಫೋರ್ ಮ್ಯಾರೇಜ್; ಅಂಡ್ ಹಿ ಇಸ್ ಫಿನಿಶ್‌ಡ್ ಆಫ್ಟರ್ ಇಟ್" ಎಂದು ತಮಾಷೆಯಾಗಿ ಹೇಳಿದ್ದನ್ನು ನಾನು ಎಲ್ಲೆಂದರಲ್ಲಿ ಉಲ್ಲೇಖಿಸುತ್ತ ಹೆಂಗಸರನ್ನು ಕಾಡಿಸುತ್ತಿದ್ದೆ. ಫಿನಿಶ್‌ಡ್ ಎಂಬ ಪದವನ್ನು ಖುಷ್ವಂತ್‌ರು 'ಅವನ ಕಥೆ ಅಲ್ಲಿಗೆ ಮುಗಿದಂತೆ' ಎಂಬರ್ಥದಲ್ಲಿ ಪಂಚ್ ಮಾಡಲು ಬಳಸಿದ್ದರು. ವೀಣಾ ಬನ್ನಂಜೆಯವರ ಮಾತು ಕೇಳಿದ ಮೇಲೆ ನನಗೆ ಇದೇ ಮಾತು "ಮದುವೆಗೆ ಮುಂಚೆ ಅರ್ಧವೃತ್ತ ಮಾತ್ರವಾಗಿದ್ದ ಗಂಡಸು, ನಂತರ ಪೂರ್ಣವೃತ್ತನಾಗುತ್ತಾನೆ ಯಾನೆ ಪರಿಪೂರ್ಣನಾಗುತ್ತಾನೆ" ಎಂಬ ಅರ್ಥ ಹೊತ್ತು ನನ್ನೊಳಗೆ ಹೊಳೆದು ಬೆಳೆಯತೊಡಗಿತು. ಸಂಚಿಯ ಹೊನ್ನಮ್ಮನಂತೂ ಹೆಣ್ಣನ್ನು ಕೀಳಾಗಿ ಕಾಣುವವರಿಗೆ ಎಂದೋ ಹೇಳಿಯಾಗಿದೆ–'ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವಿರಿ, ಹೆಣ್ಣಲ್ಲವೆ ನಿಮ್ಮ ಹೆತ್ತ ತಾಯಿ?' ಎಂದು.

ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ಎಂದ ಮನುವಿನ ಕಾಲದಿಂದಲೂ ಹೆಣ್ಣನ್ನು ಅಬಲೆಯಾಗಿ, ಆಶ್ರಿತಳಾಗಿಯೇ ನೋಡುತ್ತ ಬರಲಾಗಿದೆ. ಕಾಲ ಬದಲಾಗಿ ಆಕೆ ಪುರುಷನಿಗಿಂತ ಹೆಚ್ಚು ದುಡಿಯುತ್ತಿದ್ದಾಳೆ. ಸಂಸಾರದಲ್ಲಿ, ಉದ್ಯೋಗದಲ್ಲಿ, ವ್ಯವಹಾರದಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ಆದಾಗ್ಯೂ ಆಕೆಯ ಕುರಿತ ಧೋರಣೆ ಬದಲಾಗಿಲ್ಲ. ಆಕೆ ಎಷ್ಟಿದ್ದರೂ ಹೆಣ್ಣೇ. ಬಾಲ್ಯದಲ್ಲಿ ತಂದೆಯ, ಯೌವನದಲ್ಲಿ ಗಂಡನ, ಮುಪ್ಪಿನಲ್ಲಿ ಮಗನ ಆಸರೆ ಬೇಕೇ ಬೇಕು ಎಂಬ ಮಾತು ನಮ್ಮ ಸುತ್ತ ಕೇಳುತ್ತಲೇ ಇರುತ್ತದೆ. ಆಲೋಚಿಸಿ ನೋಡಿದರೆ ಗಂಡಿನ ಸ್ಥಿತಿಯೇನೂ ಇದಕ್ಕಿಂತ ಭಿನ್ನವಾಗಿಲ್ಲ ಎನಿಸುತ್ತದೆ. ಬಾಲ್ಯದಲ್ಲಿ ತಾಯಿಯ, ಯೌವನದಲ್ಲಿ ಹೆಂಡತಿಯ, ಮುಪ್ಪಿನಲ್ಲಿ ಸೊಸೆ ಅಥವಾ ಮಗಳ ಆಸರೆಯಿಲ್ಲದೆ ಅವನಾದರೂ ಹೇಗೆ ತಾನೇ ಇರಬಲ್ಲ? ಪರಸ್ಪರರಿಗೆ ಪೂರಕರೂ ಪ್ರೇರಕರೂ ಆಗಿರುವ ಸೃಷ್ಟಿಯ ಈ ಎರಡು ಕಣ್ಣುಗಳಲ್ಲಿ ಒಂದು ಶ್ರೇಷ್ಠ ಮತ್ತೊಂದು ಕನಿಷ್ಠ ಆದುದಾದರೂ ಹೇಗೆ? ಇದೊಂದು ವ್ಯವಸ್ಥಿತ ಯೋಜನೆ. ಒಂದೆಡೆ ಅವಳನ್ನು ಆದಿಶಕ್ತಿ, ಪರಾಶಕ್ತಿ ಎಂದು ವೈಭವೀಕರಿಸಿ ಅಟ್ಟದಲ್ಲಿ ಕೂರಿಸಲಾಯಿತು. ಮತ್ತೊಂದೆಡೆ ಅವಳು ನಾಜೂಕು, ಸುಕೋಮಲೆ, ಅಬಲೆ ಎಂದು ಕೋಣೆಯಲ್ಲಿ ಕೂಡಿಹಾಕಲಾಯಿತು. ಅಷ್ಟಕ್ಕೂ ಮೀರಿ ಗೆರೆ ದಾಟಿ ಬಂದವರನ್ನು 'ಹೆಣಮಕ್ಕಳ ಬುದ್ಧಿ ಮೊಣಕಾಲ ಕೆಳಗೆ', 'ಹೆಣಮಕ್ಕಳ ಕೈಯಾಗ ಹಿರಿತನ ಕೊಟ್ರ ಹಾಳಾಗಲಾರ್ದ ಇನ್ನೇನಾಗ್ತದ?' ಎಂಬಂಥ ಮಾತುಗಳ ಮೂಲಕ ಧೈರ್ಯಗುಂದಿಸಲಾಯಿತು. ನಮ್ಮ ಸಮನಾಗಿ ನಿಲ್ಲಿಸಿಕೊಂಡು ನೋಡಲಿಲ್ಲ ಅಥವಾ ನೋಡುವ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಮಾಡಲಿಲ್ಲ. ಬಹುಶಃ ಇದರ ಹಿಂದೆ ಕಳೆದುಕೊಳ್ಳುವ ಭೀತಿ ಮತ್ತು ಒಡೆತನದ ಅಹಂಗೆ ಬಲವಾದ ಪೆಟ್ಟು ಬೀಳುವ ಭಯಗಳು ಇದ್ದಿರಬಹುದು. ಅವರ ಧೈರ್ಯ, ಶಕ್ತಿ ಮತ್ತು ಜಾಣ್ಮೆಗಳ ಬಗ್ಗೆ ಒಳಗೊಳಗೆ ಇರುವ ಭಯವೂ ಕಾರಣವಾಗಿದ್ದಿರಬಹುದು. ಅವರ ದೃಢತೆಯ ಬಗ್ಗೆ ಇಲ್ಲೊಂದು ಮಾತು ಹೇಳಬೇಕು. ಆತ್ಮಹತ್ಯೆಗಳು ಮತ್ತು ಆತ್ಮಹತ್ಯಾ ಪ್ರಯತ್ನದ ಪ್ರಕರಣಗಳ ವಿಚಾರವಾಗಿ ಹೆಂಗಸರು ತಮ್ಮ ತೀರ್ಮಾನದ ಬಗ್ಗೆ ಹೆಚ್ಚು ಖಚಿತವೂ ಮತ್ತು ದೃಢವೂ ಆದ ನಿರ್ಧಾರ ಹೊಂದಿರುತ್ತಾರೆ ಎಂದು ಅಪರಾಧಶಾಸ್ತ್ರ ಹೇಳುತ್ತದೆ.

ಪ್ರಕೃತಿ ಕೂಡ ಹೆಣ್ಣಿಗೆ ಈ ಶಕ್ತಿ ಮತ್ತು ದೃಢತೆಯನ್ನು ಹುಟ್ಟಿನಿಂದಲೇ ಕೊಟ್ಟು ಕಳಿಸಿರುತ್ತದೆ ಅಂತ ಕಾಣಿಸುತ್ತದೆ. ಒಬ್ಬ ತಾಯಿಯನ್ನು ಇದರ ಬಗ್ಗೆ ಕೇಳಿ ನೋಡಿದೆ. ಆಕೆ ಸೋದಾಹರಣವಾಗಿ ನನಗೆ ಹೀಗೆ ತಿಳಿಸಿ ಹೇಳಿದಳು– "ಹುಟ್ಟಿದ ಮಗು ಹೆಣ್ಣಾಗಿದ್ದರೆ ಬಾಣಂತಿಯು ಹೆಚ್ಚು ಬಾಯಿಕಟ್ಟಬೇಕಾದ ಅಗತ್ಯವಿಲ್ಲ. ಅದಕ್ಕೆ ವಿಶೇಷ ಜೋಪಾನವೂ ಬೇಕಿಲ್ಲ. ಅದೇ ಮಗುವು ಗಂಡಾಗಿದ್ದರೆ ಬಾಣಂತಿ ತುಂಬಾ ನಾಜೂಕಾಗಿರಬೇಕು. ಬಾಯಿ ರುಚಿ ಅಂತ ಬಾಣಂತಿ ಒಂದು ಸ್ವಲ್ಪ ಹೆಚ್ಚು ಕಡಿಮೆ ಉಂಡಳೋ; ಹಾಲು ಕುಡಿದ ಮಗುವಿಗೆ ಹೇಲಾಟ ಶುರುವೇ ಅಂತ ತಿಳಿಯಿರಿ. ಬಲು ಜತನದಿಂದ ಕಾಯಬೇಕು. ನೋವನ್ನು ಸಹಿಸುವ, ರೋಗವನ್ನು ನಿರೋಧಿಸುವ

ಗುಣ ಹೆಣ್ಣಿಗೆ ಪ್ರಕೃತಿದತ್ತವಾಗಿ ಬಂದಿರುತ್ತದೆ". ಒಂದೇ ಸಲಕ್ಕೆ ನಮ್ಮ ನೂರಾರು ಮೂಳೆಗಳನ್ನು ಕಣ್ಣೆದುರಿಗೇ ನಿಧಾನವಾಗಿ ಮುರಿಯುತ್ತ ಹೋದರೆ ಆಗುವ ನೋವಿಗಿಂತ ನೂರು ಪಟ್ಟು ಹೆಚ್ಚು ನೋವು ಹೆರಿಗೆ ಸಮಯದಲ್ಲಾಗುವುದೆಂದು ಎಲ್ಲೋ ಓದಿದ್ದ ನೆನಪು. ಇಂಥ ನೋವನ್ನು ನೂರು ಬಾರಿ ಅನುಭವಿಸಿ, ನೂರು ಮಕ್ಕಳನ್ನು ಹೆತ್ತ ಗಾಂಧಾರಿಯ ಪಾತ್ರ ನಮ್ಮ ಮಹಾಭಾರತದಲ್ಲಿ ಬರುತ್ತದೆ. ಅದೆಲ್ಲ ಕಲ್ಪನೆ ಅಂತ ತಳ್ಳಿಹಾಕಿದರೂ ಹತ್ತಿಪ್ಪತ್ತು ಮಕ್ಕಳನ್ನು ಹಡೆದ ತಾಯಂದಿರು ಎಷ್ಟೋ ಜನರನ್ನು ನಾವೇ ನೋಡಿದ್ದೇವೆ. ಆದರೆ ಗಂಡು ಹಾಗಲ್ಲ. ಒಬ್ಬ ಹುಡುಗಿ ಕೈ ಕೊಟ್ಟರೂ ಸಾಕು, ಜೀವಮಾನ ಪೂರ್ತಿ ಅದರ ನೋವುಣ್ಣುತ್ತಾನೆ. ಅದನ್ನು ಮೀರಲಾಗದೆ ಒದ್ದಾಡುತ್ತಾನೆ. ಕುಂಡಿಗೆ ಒರೆಸಿಕೊಂಡು ಮರೆತುಬಿಡಬಹುದಾದ ಸಂಗತಿಯನ್ನು ಮುಂದೆ ಹರವಿಕೊಂಡು ಗೋಳಾಡುತ್ತಾನೆ. ನನ್ನ ಗೆಳೆಯನೊಬ್ಬ ನೆನಪಾಗ್ತಿದಾನೆ. ಹುಡುಗಿ ಕೈ ಕೊಟ್ಟಳು ಅಂತ ಅವನು ಕೊರಗ್ತಾ ಮತ್ತೊಬ್ಬಳನ್ನು ಪ್ರೀತಿಸಿದ. ಕೈ ಮೇಲೆ ಹಾಕಿಸಿಕೊಂಡಿದ್ದ ಮೊದಲಿನವಳ ಹೆಸರಿನ ಹಚ್ಚೆಯನ್ನು ಅಳಿಸಿ ಅದರ ಮೇಲೆ ಮತ್ತೆ ಇವಳ ಹೆಸರು ಹಾಕಿಸಿಕೊಂಡ. ಇವಳೂ ಕೈ ಕೊಟ್ಟಳು. ಹೀಗೆ ಅವನ ಕೈ ಮೇಲಿನ ಹಚ್ಚೆಯಲ್ಲಿ ನಾಲ್ಕು ಹೆಸರು ಬದಲಾಗಿ, ಯಾವುದೂ ಊರ್ಜಿತವಾಗದ ಕೊರಗಿನಲ್ಲಿ ಕುಡಿತಕ್ಕೆ ಬಲಿಯಾಗಿ ಸತ್ತೇ ಹೋದ. ಹೆಣ್ಣಿನ ಹೆರಿಗೆಯ ಆ ನೋವು ದೈಹಿಕವಾದುದು ಮತ್ತು ಗಂಡಿನ ಈ ಬಗೆಯ ದುಃಖ ಮಾನಸಿಕವಾದುದು ಎಂದು ಕೈಕೊಡವಿಬಿಡಬಹುದಾದಷ್ಟು ಸುಲಭದಲ್ಲೂ ಇದು ಇಲ್ಲ ಅಂತ ನನಗನಿಸುತ್ತೆ. ಅದಕ್ಕೇ ಒಂದು ಮಗುವಿನ ಜೊತೆಗೆ ಒಬ್ಬ ತಾಯಿಯೂ 'ಹುಟ್ಟುತ್ತಾಳೆ' ಎನ್ನುವುದು. ಸ್ವಲ್ಪ ಹೆಚ್ಚು ಕಮ್ಮಿಯಾದರೂ ಅವಳು ಸತ್ತು ಮಗು ಹುಟ್ಟಬೇಕಾಗುತ್ತದೆ. ಸಾವಿರ ಪಾಲು ಸಾವಿನ ಬಾಗಿಲೇ ಆಗಿರುವ ಹೆರಿಗೆಯನ್ನು ಒಬ್ಬ ಹೆಂಗಸು ನೂರು ಬಾರಿ ಅನುಭವಿಸಿ ಗೆಲ್ಲಬಲ್ಲಳು. ಆದರೆ ಜೈವಿಕವಾಗಿ ಸಾವಿಗೆ ಸಮೀಪವೂ ಇಲ್ಲದ ಪ್ರೇಮವೈಫಲ್ಯವು ಎರಡಲ್ಲದೆ ಮೂರು ಸಾರಿ ಅವನ ಜೀವನದಲ್ಲಿ ಘಟಿಸಿತೆನ್ನಿ ಅವನು ಹರೋಹರ ಅನ್ನುವುದು ಗ್ಯಾರಂಟಿ. ನೂರು ನೋವು ನುಂಗಿ ನಗುವ ಅವಳ ಕೋಪಕ್ಕೆ ಹಾಗಾಗಿಯೇ ಜಗವನ್ನು ಸುಡುವ ಶಕ್ತಿಯಿರುವುದು.

ಗಂಡಸು ಮತ್ತು ಹೆಂಗಸರಲ್ಲಿರುವ ಮತ್ತೊಂದು ಮೂಲಭೂತ ವ್ಯತ್ಯಾಸ ಕರುಳಿಗೆ ಸಂಬಂಧಿಸಿದ್ದು. ತುಂಬಾ ಅಕ್ಕರೆಯ, ಮಾನವೀಯ ಗುಣಗಳ ಮನುಷ್ಯನನ್ನು ಹೆಂಗರುಳಿನವನು ಎನ್ನುತ್ತೇವೆ. ಇದೊಂದು ಇತ್ಯಾತ್ಮಕವಾದ ಗುಣವಿಶೇಷಣ. ಆದರೆ ಸ್ವಲ್ಪ ಜೋರಾಗಿರುವ ಹೆಂಗಸರನ್ನು ಗಂಡುಬೀರಿ ಎಂಬ ನೇತ್ಯಾತ್ಮಕ ಧ್ವನಿಯಿರುವ ಗುಣವಿಶೇಷಣ ಹಚ್ಚಿ ಗುರುತಿಸಲಾಗುತ್ತದೆ. ಮಕ್ಕಳಾದ ಮೇಲೆ ಗಂಡಸು ಅಪ್ಪ 'ಆಗುತ್ತಾನೆ'; ಆದರೆ ಹೆಣ್ಣು ಹುಟ್ಟಿದಾಗಲೇ ಅಮ್ಮ 'ಆಗಿರುತ್ತಾಳೆ'. ಮಕ್ಕಳು ಹುಟ್ಟಿದ ಮೇಲೆ ಜೀವಿಗಳಲ್ಲಿ ಕೆಲವು ಜೈವಿಕ ಬದಲಾವಣೆಗಳಾಗುವುದನ್ನು ಕಾಣುತ್ತೇವೆ. ಒರಟನಾದ ಗಂಡ ಮಕ್ಕಳಾದ ಮೇಲೆ ಮೃದುವಾಗುತ್ತಾನೆ. ಅದರಲ್ಲೂ ಹೆಣ್ಣು ಮಗುವಿನ

ತಂದೆಯಾದರೆ ಹೆಚ್ಚು ಮೃದುವಾಗುತ್ತಾನೆ. ಶಹಾಪುರದ ಹಿರಿಯ ಮಕ್ಕಳ ಸಾಹಿತಿ ಚಂದ್ರಕಾಂತ ಕರದಳ್ಳಿಯವರು ಹೇಳಿದ್ದು ನೆನಪಾಗ್ತಿದೆ– "ಮಗನೋ ಮಗಳೋ ಹುಟ್ಟಿದಾಗ ಸಹಜವಾಗಿ ಜೈವಿಕವಾಗಿ ಗಂಡಸಿನಲ್ಲಿ ಪೇರೆಂಟಲ್ ಭಾವ ಚಿಗುರೊಡೆಯುತ್ತದೆ. ಹೆಣ್ಣಿಗೆ ಹಾಗಲ್ಲ. ಅವಳು ತಾನು ಮಗುವಾಗಿದ್ದಾಗಲೂ ಒಬ್ಬ ಪುಟ್ಟ ತಾಯಿಯೇ. ನಿರ್ಜೀವ ಗೊಂಬೆಗಾದರೂ ಸ್ನಾನ ಮಾಡಿಸಿ, ತಲೆ ಬಾಚಿ, ಮಮ್ಮು ಉಣಿಸಿ, ಜೋ ಮಾಡಿ ಮಲಗಿಸುವವಳು. ಗೊಂಬೆ ಸಿಕ್ಕಿಲ್ಲವೆಂದರೆ ಕಲ್ಲನ್ನೋ ಕಟ್ಟಿಗೆಯನ್ನೋ ಕೂಸಾಗಿ ಭಾವಿಸಿ ಅದರ ಭಾವಲೋಕದಲ್ಲಿ ಇಳಿಯಬಲ್ಲಳಾಕೆ. ಅದೇ ಗಂಡು ಹುಡುಗರ ಆಟಿಕೆಗಳೇನಿದ್ದರೂ ಜೀಪು, ಲಾರಿ, ಗನ್‌ಮೆಷಿನ್ನುಗಳೇ. ಇದಕ್ಕೆ ಕಾರಣ ಹೆಣ್ಣು ಮೂಲತಃ ತಾಯಿಯೇ, ಹಡೆದಾಗ ಅವಳ ತಾಯ್ತನ ಜೈವಿಕವಾಗಿ ಪ್ರಕಟಗೊಳ್ಳುತ್ತದೆ ಅಷ್ಟೆ. ಗಂಡು ಹಾಗಲ್ಲ. ಅವನು ಅಪ್ಪ ಆಗುವುದೇ ಅವನಿಗೆ ಮಗು ಹುಟ್ಟಿದಾಗ. ಅಷ್ಟಾಗಿಯೂ ಮಗನ ತಂದೆಯಾದವನು ಮತ್ತು ಮಗಳ ತಂದೆಯಾದವನು ಈ ಇಬ್ಬರ ನಡುವೆ ಸಾಕಷ್ಟು ಸೂಕ್ಷ್ಮ ವ್ಯತ್ಯಾಸಗಳಂತೂ ಇರ್ತವೆ. ಮಗ ಅವನ ಪುರುಷತ್ವ ಮತ್ತು ವಾರಸುದಾರಿಕೆಯ ಅಹಂನ ಮುಂದುವರಿಕೆ ಅಥವಾ ವಿಸ್ತರಣೆಯಾಗಿದ್ದರೆ, ಮಗಳು ಅವನಲ್ಲಿ ಮಾತೃತ್ವ ಮತ್ತು ಮಗುತನಗಳನ್ನು ಬಿತ್ತುವ ಬೀಜವಾಗಿ ಉದಿಸಿರುತ್ತಾಳೆ. ಯಾವುದೇ ತಂದೆ ತನ್ನ ಮಗನಿಗೆ ಲೇ, ಕಳ್ಳ, ಬದ್ಮಾಶ್, ಒದೀತೀನಿ ಅಂತ ತಮಾಷೆಗಾದರೂ ಅನ್ನಬಹುದು. ಆದರೆ ಮಗಳನ್ನು ಮಾತ್ರ 'ಅಮ್ಮಾ' ಎಂದೇ ಕರೆಯುತ್ತಾನೆ, ಕರೆಯಬೇಕಾಗುತ್ತದೆ". ಎಂಥ ಸತ್ಯವಾದ ಮಾತು. ಅವರ ಮಾತುಗಳನ್ನು ಕೇಳಿದಾಗ ತೆಲುಗಿನ ಮಹೆಜಬೀನ್ ಎಂಬ ಕವಯಿತ್ರಿ ಬರೆದಿರುವ ಚಿಕ್ಕತಾಯಿ ಎಂಬ ಪದ್ಯದ ನೆನಪಾಯಿತು. ಮನೆಗೆಲಸಕ್ಕೆ ಬರುವ ಹುಡುಗಿ ಹೇಗೆ ತನ್ನ ಪಾಲಿಗೆ ಚಿಕ್ಕತಾಯಿ ಎಂಬುದನ್ನಾಕೆ ಅಲ್ಲಿ ವಿವರಿಸಿದ್ದಾರೆ.

ದೈಹಿಕ ಕ್ಷಮತೆಯ ವಿಚಾರಕ್ಕೆ ಬಂದರೆ ಹೆಂಗಸರೇ ಹೆಚ್ಚು ಶಕ್ತಿಶಾಲಿಗಳೆಂದು ಹಲವಾರು ಅಧ್ಯಯನಗಳು ಹೇಳಿವೆ. ಬಾಕ್ಸಿಂಗ್, ಅಥ್ಲೆಟಿಕ್ಸ್, ಪರ್ವತಾರೋಹಣ, ಜಂಪಿಂಗ್‌ನಂಥ ಆಟಗಳಲ್ಲಿ ಅವರು ಸಾಧಿಸಿ ತೋರಿಸಿದ್ದು ನಮ್ಮ ಕಣ್ಮುಂದೇ ಇದೆ. ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತವನ್ನು ಅತಿ ಹೆಚ್ಚು ಕಾಲ ಆಳಿದ ಖ್ಯಾತಿ ಕೂಡ ಇಂದಿರಾಗಾಂಧಿಯ ಹೆಸರಿನಲ್ಲಿದೆ. ಕಾರ್ಯಾಂಗದಲ್ಲೂ ಮೇಲಿನಿಂದ ಕೆಳಗಿನವರೆಗೆ ಇಂದು ಹೆಂಗಸರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡು ಬಂದಿದೆ. ಆದರೆ ಗ್ರಾಮೀಣ ಭಾಗದ ಮಹಿಳೆಯರ ಸ್ಥಿತಿಗತಿಯಲ್ಲಿ ಅಂಥ ಮಹತ್ತರ ಬದಲಾವಣೆಯೇನೂ ಆದಂತೆ ಕಾಣುತ್ತಿಲ್ಲ. ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲೂಕಿನ ಕೊಂಚಾವರಂ, ಒಂಟಿಗುಡ್ಡಿ, ಒಂಟಿಚಿಂತಾ ಮತ್ತು ಭಿಕ್ಕುನಾಯಕ ಮುಂತಾದ ತಾಂಡಾಗಳಲ್ಲಿ ನಡೆದ ಹೆಣ್ಣು ಶಿಶುಗಳ ಮಾರಾಟ ಇದಕ್ಕೊಂದು ಜ್ವಲಂತ ನಿದರ್ಶನ. ಹೆಣ್ಣು ಕೂಸು ಜನಿಸಿದರೆ ಅದಕ್ಕೆ ಹಾಲೂಡಿಸದೆ ಸಾಯಿಸಿದ ಮತ್ತು ನವಜಾತ ಶಿಶುವಿನ ಗಂಟಲಿಗೆ ಹತ್ತಿಯನ್ನು ತುರುಕಿ ಹಾಲೂಡಿ ಸಾಯಿಸಿದ ಘಟನೆಗಳು

ವರದಿಯಾದಾಗ ಕನಲಿಹೋಗಿದ್ದೆ. ಹೆಣ್ಣು ಶಿಶು ಕೆಟ್ಟದ್ದೆಂದು ಅವರ ತಲೆಯಲ್ಲಿ ತುಂಬಿದವರ್ಯಾರೊ? ಸರಿಸುಮಾರು ಅದೇ ಕಾಲಕ್ಕೆ ರಾಯಚೂರು ಜಿಲ್ಲೆ ಲಿಂಗಸೂಗೂರಿನಿಂದ ಬೇರೊಂದು ಬಗೆಯ ಸುದ್ದಿ ವರದಿಯಾಗಿತ್ತು. ಅಲ್ಲಿನ ಖೈರವಾಡಗಿ ತಾಂಡಾದ ಈಶಪ್ಪ ಚವ್ಹಾಣರ ಕುಟುಂಬಕ್ಕೆ ಎರಡು ಎಕರೆ ಜಮೀನೇನೋ ಇದೆ, ಆದರೆ ಉಳಲು ಎತ್ತುಗಳಿಲ್ಲ. ಹೀಗಿರುವಾಗ ಇನ್ನೂ ಎರಡು ಎಕರೆ ಪಕ್ಕದವರ ಹೊಲವನ್ನು ಲೀಸಿಗೆ ಪಡೆದು ಒಟ್ಟು ನಾಲ್ಕು ಎಕರೆ ಜಮೀನಿನಲ್ಲಿ ಕೃಷಿ ಮಾಡುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಪತ್ನಿ ಗೋಗಿಬಾಯಿ ಮತ್ತು ಮಗಳು ಸುಮಿತ್ರಾ ಎತ್ತುಗಳ ಬದಲಿಗೆ ತಾವು ನೊಗಕ್ಕೆ ಹೆಗಲು ಕೊಟ್ಟು ಉಳುಮೆ ಮಾಡುತ್ತಿದ್ದಾರೆ. ಗೋಗಿಬಾಯಿ ಮತ್ತು ಸುಮಿತ್ರಾ ಕೂಡ ಹೆಂಗಸರೇ. ಕೇಶಪ್ಪ ಚವ್ಹಾಣ ಕೂಡ ಲಂಬಾಣಿಗರೇ.

ಹೊಂದಾಣಿಕೆಯ ಗುಣವು ಬದುಕಿನ ಅವಿಭಾಜ್ಯ ಅಂಗವೆಂದು ಮನೋವಿಜ್ಞಾನ ಗುರುತಿಸುತ್ತದೆ. ಹೆಂಗಸರಲ್ಲಿ ಅದು ಪ್ರಥಮ ಮತ್ತು ಪರಮ ಎನ್ನಬಹುದಾದ ಮಟ್ಟದಲ್ಲಿ ಕಾಣಿಸಿಕೊಳ್ಳುವುದು. ಆಕೆಗೆ ಎರಡು ಮನೆಗಳು. ಎರಡು ದಡಗಳು. ಹುಟ್ಟಿದ ಮನೆಯಿಂದ ಕೊಟ್ಟ ಮನೆಗೆ ಹೆಸರು ಬದಲಾಯಿಸಿಕೊಂಡು, ಅಸ್ಮಿತೆ ಬದಲಾಯಿಸಿಕೊಂಡು ಬರುವ ಆಕೆ ಈ ಎರಡರಲ್ಲೂ ಒಂದುಗೂಡುವ ಒಂದಾಗಿರುತ್ತ, ಈ ಎರಡನ್ನೂ ಒಂದಾಗಿಸುವ ಒಂದು ಕೆಲಸದಲ್ಲಿ ತೊಡಗಿಕೊಂಡಿರುತ್ತಾಳೆ. ಅತ್ತೆ ಬೈದರೆ ಬೈಸಿಕೊಂಡು, ಮಾವ ಅಂದರೆ ಅನಿಸಿಕೊಂಡು, ನಾದಿನಿ ಸೆಟಗೊಂಡರೆ ಸೈರಿಸಿಕೊಂಡು, ಗಂಡ ತಾಚಿಕಾರ ಮಾಡಿದರೆ ನುಂಗಿಕೊಂಡು, ತವರಿನ ಆಸೆ ಅದುಮಿಟ್ಟುಕೊಂಡು ಹೊಸ ಪರಿಸರದಲ್ಲಿ ಸದ್ದಿಲ್ಲದೆ ಒಂದು ಸ್ಥಾನ ಸಂಪಾದಿಸಿಕೊಳ್ಳುತ್ತಾಳೆ. ಸಮಾಯೋಜನೆಗೆ ಮತ್ತೊಂದು ಹೆಸರು ಅವಳು. ಅತ್ತ ತವರು ಇತ್ತ ತನ್ನವರು ಎರಡೂ ಭಾವಲೋಕಗಳನ್ನು ತನ್ನೊಳಗೆ ಸರಿಸಮನಾಗಿ ತೂಗಿಕೊಂಡು ಹೋಗುವ ಹೆಣ್ಣಿಗೆ ಒಳಗೆಲ್ಲೋ ತವರಿನ ಕಡೆಗೇ ಒಂದು ಗುಲಗಂಜಿ ತೂಕ ವಾಲಿಕಿ ಜಾಸ್ತಿ ಅನಿಸುತ್ತೆ. ಕೊಟ್ಟ ಹೆಣ್ಣು  ಕುಲಕ್ಕೆ ಹೊರಗು ಅಂತಾರೆ. ಆದರೆ ಹಾಗೆ ಹೊರಗೆ ಹೋದ ಆಕೆಗೆ ಒಳಗಿನ ಬಗ್ಗೇ ಚಿಂತೆ. ಎಲ್ಲ ಹೆಣಮಕ್ಕಳೂ ಮದುವೆಯಾಗಿ ಗಂಡನ ಮನೆ ಸೇರಿದ ಮೇಲೂ ತಮ್ಮ ತವರುಮನಿ ತಣ್ಣಗಿರಲೆಂದು  ಹಾರೈಸುತ್ತಾ ಇರುತ್ತಾರೆ. ಗಂಡಸರು ಮದುವೆಯಾದ ನಂತರ ಅಪ್ಪ ಅಮ್ಮಂದಿರನ್ನು ಬಿಟ್ಟು ಹೆಂಡತಿಯೊಂದಿಗೆ ಹೊಸಮನೆ ಮಾಡುತ್ತಾರೆ. ಅದಕ್ಕೇ ಇರಬೇಕು ಹಿರಿಯರು ಹೆಣ್ಣು ಹೆತ್ತ ಮನೆ ತಣ್ಣಗಿರುತ್ತೆ ಅಂತಾರೆ. ನಾಲ್ಕು ಜನ ಬೆಟ್ಟದಂಥ ಗಂಡು ಮಕ್ಕಳಿರುವ ಬಸ್ಸಪ್ಪ ತಾತ ನನಗೆ ಹೇಳಿದ್ದು ನೆನಪಾಗ್ತದೆ "ನೀನೇ ಪುಣ್ಯವಂತನಪ್ಪ. ಸತ್ತರೆ ನನ್ನ ಹೆಣದ ಮುಂದೆ ಭೋರ್ಯಾಡಿ ಅಳಾಕ ಈ ಪಾಪಿ ಜನ್ಮಕ್ಕ ಒಬ್ಬ ಮಗಳಿಲ್ಲ. ಹೆಣ್ಣು ಮಕ್ಕಳಿದ್ರೆ ಅಪ್ಪ ಆದವನು ಸತ್ರೂ ಬದುಕಿರ್ತಾನಪ. ಬರೇ ಗಂಡು ಮಕ್ಕಳಿದ್ರೆ ಸತ್ತ ದಿವಸಕ್ಕೇ ಮುಗೀತು ಸಂತೆ". ಈ ಮಾತಿನಲ್ಲೂ ತಥ್ಯವಿದೆ ಅನ್ನಿಸಿತು ನನಗೆ. ಮೊಮ್ಮಕ್ಕಳನ್ನು ಕಂಡಿರುವ ನನ್ನ ಅಮ್ಮ, ಅಕ್ಕಿಯಲ್ಲಿ

ಹಳ್ಳು ಆರಿಸುತ್ತ, ಈಗಲೂ ಗತಿಸಿ ಹೋಗಿರುವ ತನ್ನ ಅಪ್ಪ, ಅಮ್ಮ, ತಮ್ಮನನ್ನು ನೆನೆಸಿಕೊಂಡು ಆಗಾಗ ಕಣ್ಣೀರಾಗುತ್ತಾಳೆ. ಚೆಲುವೆಯಾದ ತನ್ನಮ್ಮ ಸುಖಕ್ಕಿಂತ ಹೆಚ್ಚು ಕಷ್ಟವನ್ನೇ ಅನುಭವಿಸಿದಳೆಂದೂ; ಕಣ್ಣೀರಿನಲ್ಲಿ ಕೈ ತೊಳೆಯುತ್ತ ಬಾಳಿದ ಆಕೆ ಇನ್ನೂ ನಾಲ್ಕಾರು ವರ್ಷ ಇರಬೇಕಾಗಿತ್ತೆಂದು ನುಡಿಗೆ ನೂರು ಸಲ ಹೇಳುತ್ತಿರುತ್ತಾಳೆ. ಒಂದೇ ಮಾತಲ್ಲಿ ಹೇಳಬೇಕೆಂದರೆ ಜಗತ್ತಿನ ಎಲ್ಲ ಸಾಧಕರ ಸಾಧನೆಯಲ್ಲಿ ಅವರ ತಾಯಿ ಅಥವಾ ಪತ್ನಿಯ ಪ್ರೀತಿ ಮತ್ತು ತ್ಯಾಗಗಳ ಸಿಂಹಪಾಲಿದೆ. ಹಾಗೆಯೇ ಮನೆ ಬಿಟ್ಟು ಓಡಿ ಹೋದ ಮಕ್ಕಳಿಗೆ ಅಪ್ಪನ ಭಯ ಅಥವಾ ಅಮ್ಮನ ವಾತ್ಸಲ್ಯದ ಕೊರತೆಯೇ ಪ್ರಮುಖ ಕಾರಣವಾಗಿದೆ.

ಇದಲ್ಲದೆ ನಾವು ಕಾಣದಿರುವ ಮುಖ ಅಥವಾ ಕಂಡೂ ಕಾಣದಂತಿರುವ, ಕೇಳಿಯೂ ಕೇಳದಂತಿರುವ ಮುಖವೂ ಅವಳಿಗಿದೆ. ಆಕೆಯಲ್ಲಿ ಸಣ್ಣತನಗಳಿಗೇನೂ ಕೊರತೆಯಿಲ್ಲ. ನೀಚರು, ಖದೀಮರು, ಕೊಲೆಗಡುಕರು, ಧನದಾಹಿಗಳು, ಪತಿಪೀಡಕರು, ಪರಮಲೋಭಿಗಳು ಅಲ್ಲಿಯೂ ಇದ್ದಾರೆ. ಗಂಡಸರಲ್ಲಿರುವಂತೆ. ಆದರೆ ಅಪರಾಧ ಪ್ರಕರಣಗಳಲ್ಲಿ ಮಹಿಳೆಯರ ಬಳಕೆಯ ಹಿಂದೆ ಹೆಂಗಸರನ್ನು ಅಪರಾಧಿಯಾಗಿ ನೋಡಲು ಇನ್ನೂ ತಯಾರಿರದ ಸಾಮಾಜಿಕ ಮನಃಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳುವ ಬಯಕೆ ಒಂದು ತಂತ್ರವಾಗಿ ಕೆಲಸ ಮಾಡಿರುವಂತಿದೆ. ಶೇಕ್ಸ್‌ಪಿಯರ್ ಎಂದೋ "ಓ ವುಮನ್, ದೈ ನೇಮ್ ಈಸ್ ಜಲಸಿ" ಎಂದಿದ್ದಾನೆ. ನೀವು ಬೇಕಾದರೆ ಗಮನಿಸಿ, ಬಸ್ಸಿನಲ್ಲಿ ಯಾರಿಗಾದರೂ ಸೀಟು ಬಿಡಬೇಕಾಗಿ ಬಂದರೆ ಬೇಕೆಂದೇ ಮತ್ತಷ್ಟು ಅಗಲವಾಗಿ ಕೂತು, ಕೆಳಗಿದ್ದ ಬ್ಯಾಗನ್ನು ಸೀಟ್ ಮೇಲಿಟ್ಟು, ನಿಂತಿರುವ ಮಕ್ಕಳನ್ನು ಬಲವಂತದಿಂದ ಕೂರಿಸಿ ಸೀಟಿಲ್ಲ ಎನ್ನುವುದು ಅವರೇ. ಎಲ್ಲೇ ಆಗಲಿ ಹೇಳಿಸಿಕೊಂಡ ಮೇಲೇ ಅವರು ಸೀಟು ಬಿಡುವುದು, ಅದೂ ಗೊಣಗುತ್ತ. ಇರಲಿ, ಅವಳಿಂದಾಗಿಯೇ ರಾಮಾಯಣ ಜರುಗಿದೆ, ಅವಳಿಂದಾಗಿಯೇ ಮಹಾಭಾರತ ನಡೆದಿದೆ. ರಾಜ್ಯಗಳು ಅರಳಿವೆ. ರಾಜ್ಯಗಳು ಉರುಳಿವೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಪತ್ನಿಪೀಡಿತ ಪತಿಗಳ ಒಂದು ಸಂಘಟನೆಯೇ ಅಸ್ತಿತ್ವಕ್ಕೆ ಬಂದಿದ್ದು, ಕೌಟುಂಬಿಕ ದೌರ್ಜನ್ಯ, ಮಾನಸಿಕ ಹಿಂಸೆ, ವರದಕ್ಷಿಣೆ–ಅತ್ಯಾಚಾರದ ಕಾನೂನುಗಳ ದುರ್ಬಳಕೆಯಿಂದ ತಮ್ಮನ್ನು ರಕ್ಷಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ವರದಿಯಾಗಿದೆ. ಅವಿಭಕ್ತ ಕುಟುಂಬದ ಕಾಲದಲ್ಲಿ ಹಾಗಿತ್ತು, ಅತಿ ಚಿಕ್ಕ ಕುಟುಂಬಗಳ ಕಾಲದಲ್ಲಿ ಹೀಗಾಗಿದೆ. ಈಗಂತೂ ಅವಳು ಸದಾ ಉರಿಯುವ ಒಂದು ಬೆಂಕಿಯಾಗಿದ್ದಾಳೆ. ಅಲ್ಲಿ ಆನಂದ ಮತ್ತು ಅಪಾಯಗಳು ಒಂದರೊಳಗೊಂದು ಬಿಡಿಸಲಾಗದಂತೆ ಬೆರೆತು ನಿಂತಿವೆ. ಅವಳು ಸಂತಸದಾಯಿನಿಯಾಗಿರುವಂತೆ ಸಂಘರ್ಷಕ್ಕೆ ಸನ್ನದ್ಧಳಾಗಿಯೂ ಇದ್ದಾಳೆ. ಅವಳು ಮಾಯೆ. ಅವಳು ತಾಯಿ. ಅವಳು ಮಹಾಂಕಾಳಿಯೂ! "ಕವಿಯು ಶಿವನಂತೆ ಅರ್ಧನಾರೀಶ್ವರ; ಅವನೊಳಗೆ ಅರ್ಧ ಅಥವಾ ಅರ್ಧಕ್ಕಿಂತ ಹೆಚ್ಚೇ ಸ್ತ್ರೀ ಇದ್ದಾಳೆ" ಎಂದರು ತೆಲುಗು ಕವಿ ಕೆ. ಶಿವಾರೆಡ್ಡಿ. ಆ

ಮಾತು ನನ್ನನ್ನು ಗಾಢವಾಗಿ ತಾಕಿತು. ಆಲೋಚಿಸಿ ನೋಡಿದೆ. ನಮ್ಮ ಪುರಾಣಗಳಲ್ಲೆಲ್ಲೂ ಯಾವ ಹೆಣ್ಣು ದೇವತೆಯೂ ತನ್ನೊಳಗೆ ಅರ್ಧವಾಗಿ ಪುರುಷನನ್ನು ಪರಿಭಾವಿಸಿಕೊಂಡ ಚಿತ್ರಣವಿಲ್ಲ. ಅಂದರೆ ಇಡಿಯಾಗಿ ಅವಳಿದ್ದಾಳೆ. ಬಿಡಿಯಾಗಿ ಇರುವ ಅವನು ಇಡಿಯಾಗಿರುವ ಅವಳಲ್ಲಿ ಹಿಡಿಯಷ್ಟು ಜಾಗ ಪಡೆದು ಇಡಿಯೇ ತಾನಾದ ಭ್ರಮಾಭಾವದಲ್ಲಿದ್ದಾನೆ. ಆದರೆ ನಿಜದಲ್ಲಿ ಯಾವುದು ಪೂರ್ಣವೋ ಅದು ಅಂಶವೂ ತಾನಾಗಿದೆ ಸಿಂಧುವಿನಂತೆ. ಆದರೆ ಯಾವುದೋ ಅಂಶವೋ ಅದು ಪೂರ್ಣವೂ ತಾನಾಗಿರುವಂತೆ ಗೋಚರಿಸುತ್ತ, ಪೂರ್ಣದ ಒಂದಂಶ ಮಾತ್ರವಾಗಿ ತಾನಿದೆ– ಒಂದು ಬಿಂದುವಿನಂತೆ. ಕಂಡೇನೆಂದರೆ ಬಿಂದುವಿಗೆ ಉದ್ದವಿಲ್ಲ, ಅಗಲವಿಲ್ಲ, ವಿಸ್ತೀರ್ಣವಿಲ್ಲ, ಘನಫಲವಿಲ್ಲ. ಆದರೆ ಬಿಂದುವಿಲ್ಲದ ಬದುಕೇ ಇಲ್ಲ. ಸಿಂಧುವಿಗೆ ಹಾಗಲ್ಲ. ಹಲವು ಸಾವಿರ ಬಿಂದುಗಳು ಒಂದಾಗಿ ಘನೀಭವಿಸಿ ಉಂಟಾದ ಇದಕ್ಕೆ ಉದ್ದ, ಅಗಲ, ಎತ್ತರ, ಆಳ, ವಿಸ್ತೀರ್ಣ, ಘನಫಲಗಳೆಲ್ಲ ಗೋಚರಸ್ವರೂಪದಲ್ಲೇ ಉಂಟು. ಬಿಂದುವಿಲ್ಲದೆ ಸಿಂಧುವಿಲ್ಲ; ಸಿಂಧು ಒಳಗೊಳ್ಳದ ಬಿಂದುವಿಲ್ಲ. ಅವೆರಡೂ ಭಿನ್ನ ಬೇಧವ ಮರೆತು ಏಕೋಭಾವದಲ್ಲಿ ಸಂಧಿಸಿದಾಗ ಹಿಂದು–ಮುಂದುಗಳೆಲ್ಲ ಇಂದು ಎಂಬಲ್ಲಿ ಒಂದುಗೂಡಿ ಒಂದೆಂಬ ಭಾವವನ್ನು ಹಡೆಯುವವು. ಈ ಜಗದ, ಮನುಕುಲದ, ಅಷ್ಟೇಕೆ ಸಕಲ ಜೀವಸಂಕುಲದ ಕಲ್ಯಾಣವು ಈ ಭಾವದಲ್ಲಿ ಬೀಜವಾಗಿ ಹುದುಗಿ ಕುಳಿತಿದೆ. ಯಾವುದೂ ಹೆಚ್ಚಲ್ಲದ, ಯಾವುದೂ ಕಡಿಮೆಯಲ್ಲದ ಈ ಸರ್ವಸಮ ಭಾವದ ಅರಿವಿನಲ್ಲಿ ಜಗವು ಹೆಣ್ಣನ್ನು ಎದುರುಗೊಳ್ಳಬೇಕಾಗಿದೆ.

**ಚಿದಾನಂದ ಸಾಲಿ**

ಸಖಿ ಅಗಸ್ಟ್ ೨೦೧೪

# ಬೆನ್ನಿಗೆ ಬಿದ್ದರೂ ಭಾರವಾಗದ ಅನುಪಮ ಸಂಬಂಧ

ಮನೆಯಲ್ಲಿ ಅಪ್ಪ–ಅಮ್ಮನೊಂದಿಗೆ ಇದ್ದದ್ದು ನಾವಿಬ್ಬರೇ: ನಾನು–ತಮ್ಮ. ಅವನು ನನಗಿಂತ ಮೂರು ವರ್ಷ ಚಿಕ್ಕವನಿದ್ದ. ಕೊನೆಯ ಮಗ ಎಂಬ ಕಾರಣಕ್ಕೆ ಮುದ್ದು ಮಾಡಿದ್ದ ಕಾರಣಕ್ಕೋ ಏನೋ; ಓದಿನಲ್ಲಿ ನನಗಿಂತ ಸ್ವಲ್ಪ ವೀಕ್ ಇದ್ದ. ನಾನು ಏಳನೇ ತರಗತಿಯಲ್ಲಿದ್ದಾಗ, ಗೆಳತಿಯರೆಲ್ಲ ದಿನಕ್ಕೊಂದು ಥರದ ಹ್ಯಾಂಡ್‌ಕರ್ಚೀಫ್ ತರ್ತಾ ಇದ್ರು. ನನಗೂ ಒಂದೆರಡು ಹ್ಯಾಂಡ್‌ಕರ್ಚೀಫ್ ತೆಗೆದುಕೊಡಮ್ಮಾ ಎನ್ನುತ್ತಾ ಅಮ್ಮನ ಎದುರು ನಿಂತೆ. 'ನೋಡೂ, ಶೋಕಿಗೆ ಹೆಣ್ಣು ಮಕ್ಕಳ ಮನಸ್ಸು ಮುಂದಾಗುವುದೇ ಇಂಥ ಸಣ್ಣ ಆಸೆಗಳಿಂದ. ನಿಂಗೆ ಹ್ಯಾಂಡ್‌ಕರ್ಚೀಫ್‌ಗಳ ಅಗತ್ಯವಾದ್ರೂ ಏನಿದೆ? ಇಂಥ ವಸ್ತುಗಳ ಖರೀದಿಯಿಂದ ದುಡ್ಡು ವೇಸ್ಟು. ಅದೆಲ್ಲಾ ಕೇಳಬಾರ್ದು ನೀನು ಎಂದು ಅಮ್ಮ ಕಡ್ಡಿ ಮುರಿದಂತೆ ಹೇಳಿಬಿಟ್ಟಳು. ಆದರೂ ನನಗೆ ಹ್ಯಾಂಡ್‌ಕರ್ಚೀಫ್ ಮೇಲಿನ ಮೋಹ ಹೋಗಲಿಲ್ಲ. ಅಂಗಡಿಯಲ್ಲಿ ವಿಚಾರಿಸಿದಾಗ, ೨ ಹ್ಯಾಂಡ್‌ಕರ್ಚೀಫ್‌ಗಳ ಬೆಲೆ ೧೦ ರೂಪಾಯಿ ಎಂದು ತಿಳಿದುಬಂತು. ಪಾಕೆಟ್‌ಮನಿಯಿಂದ ಮಕ್ಕಳು ಕೆಟ್ಟು ಹೋಗ್ತಾರೆ ಎಂಬುದು ಅಪ್ಪನ ನಂಬಿಕೆಯಾಗಿತ್ತು. ಜೊತೆಗೆ, ಈಗಾಗಲೇ ಅಮ್ಮ, ಹ್ಯಾಂಡ್‌ಕರ್ಚೀಫ್ ಬೇಡ ಎಂದಿದ್ದರಿಂದ, ಅದೇ ವಿಷಯಕ್ಕೆ ಅಪ್ಪನ ಬಳಿ ಹಣ ಕೇಳಲು ಸಾಧ್ಯವೇ ಇರಲಿಲ್ಲ. ಈ ಸಂದರ್ಭದಲ್ಲಿಯೇ ನಾನು ಒಂದು ಕೆಟ್ಟ ಕೆಲಸ ಮಾಡಿದೆ: ಅಪ್ಪನ ಜೇಬಿನಿಂದ ೧೦ ರೂಪಾಯಿ ಕದ್ದು ಬಿಟ್ಟೆ. ಅಪ್ಪನ ಜೇಬು ಸದಾ ನೋಟುಗಳಿಂದಲೇ ತುಂಬಿರುವುದು ನನಗೆ ಗೊತ್ತಿತ್ತು. ಹಾಗಾಗಿ, ಈ ಹತ್ತು ರೂಪಾಯಿ ಕಳುವಾಗಿರುವುದು ಅಪ್ಪನಿಗೆ ಗೊತ್ತಾಗಲಾರದು ಎಂದೇ ಭಾವಿಸಿದ್ದೆ. ಆದರೆ, ನಾನು ಅಂಗಡಿಗೆ ಹೋಗುವ ಮೊದಲೇ ಹಣ ಕಳುವಾಗಿರುವ ವಿಷಯ ಅಪ್ಪನಿಗೆ ಗೊತ್ತಾಗಿ ಹೋಯ್ತು. ಅವರು ನಮ್ಮಿಬ್ಬರನ್ನೂ ಕರೆದು, ಒಂಟಿ ಕಾಲಲ್ಲಿ ನಿಲ್ಲಿಸಿದರು. ಆನಂತರ ಬಿದಿರುಕಡ್ಡಿಯನ್ನು ಕೈಗೆತ್ತಿಕೊಂಡು' ಮೊನ್ನೆ ೧೦ ರೂಪಾಯಿ ಕಳುವಾಗಿದೆ. ನಿಮ್ಮಿಬ್ಬರಲ್ಲಿ ಯಾರು ತಗೊಂಡ್ರಿ ಅಂತ ಹೇಳಿದ್ರೆ ಏಟು ಬೀಳಲ್ಲ. ಹುಂ, ಬೇಗ ಉತ್ತರ ಹೇಳಿ' ಅಂದರು. ನಾನು ಹೆದರಿಕೆಯಿಂದ ತತ್ತರಿಸಿ ಹೋಗಿದ್ದೆ. ಮಾತೇ ಹೊರಡದೆ ನಡುಗುತ್ತಾ ನಿಂತಿದ್ದೆ. ತಮ್ಮನ ಪರಿಸ್ಥಿತಿ ನನಗಿಂತ ಭಿನ್ನವಾಗಿರಲಿಲ್ಲ. ಐದು ನಿಮಿಷ ಕಳೆದರೂ ನಾವು ಮಾತೇ ಆಡದ್ದರಿಂದ ಸಿಟ್ಟಾದ ತಂದೆಯವರು, ಒಳ್ಳೆಯ ಮಾತಲ್ಲಿ ಹೇಳಿದ್ರೆ ನೀವು ಬಾಯಿ ಬಿಡಲ್ಲ. ಈಗ ಇಬ್ಬರಿಗೂ ಪೆಟ್ಟು ಕೊಡ್ತೇನೆ. ಬಾಯಿ ಬಿಡದವರಿಗೆ ಅದೇ ಸರಿಯಾದ ಶಿಕ್ಷೆ ಎಂದು ಅಬ್ಬರಿಸುತ್ತಾ ಮೇಲೆದ್ದರು. ಮರುಕ್ಷಣವೇ ಅವರ ಮುಂದೆ ನಿಂತ ತಮ್ಮ 'ಅಪ್ಪಾ, ದುಡ್ಡು ಕದ್ದಿದ್ದು ನಾನೇ. ಸಾರಿ ಕಣಪ್ಪಾ' ಅಂದುಬಿಟ್ಟ. ತಂದೆಯವರ

ಸಿಟ್ಟು ನೆತ್ತಿಗೇರಿತು. ಇಷ್ಟು ಹೊತ್ತೂ ಮೂಗನ ಥರಾ ನಿಂತಿದ್ಯಲ್ಲೋ ಕತ್ತೆ ಭಡವಾ, ಈ ಚಿಕ್ಕ ವಯಸ್ಸಿಗೇ ಕದಿಯೋದು ಕಲಿತೆಯೇನೋ, ಇನ್ನೊಂದ್ಸಲ ಹೀಗೆ ಮಾಡ್ತೀಯೇನೋ ಎಂದು ಬೈಯ್ಯುತ್ತಾ ಕೋಲು ಮುರಿದು ಹೋಗುವವರೆಗೂ ಹೊಡೆದರು. ಅವತ್ತು ರಾತ್ರಿ ತಮ್ಮನ ಇಕ್ಕೆಲಗಳಲ್ಲಿ ನಾನು, ಅಮ್ಮ ಇದ್ದೆವು. ಬಾಸುಂಡೆಗಳಿಂದ ಅವನ ಮೈ ಪೂರಾ ಊದಿಕೊಂಡಿತ್ತು. ಅಮ್ಮ ಉಪ್ಪಿನ ಶಾಖ ಕೊಡುತ್ತಾ– ಅಂಥ ಕೆಟ್ಟ ಬುದ್ಧಿ ನಿನಗೇಕೆ ಬಂತೋ ರಾಜಾ ಎಂದು ಬಿಕ್ಕಳಿಸಿದರು. ಊಹುಂ, ಆಗಲೂ ತಮ್ಮ ಮಾತಾಡಲಿಲ್ಲ. ಮಧ್ಯರಾತ್ರಿ ನಾನು ದಿಢೀರನೆ ಎದ್ದು ಕೂತು, 'ಹೋ' ಎಂದು ಅಳಲು ಪ್ರಾರಂಭಿಸಿದೆ. ಆಗ ತಮ್ಮ ಹೇಳಿದ: 'ಅಕ್ಕಾ, ಆಗಿದ್ದು ಆಗಿಹೋಯ್ತು. ಈಗ ಅತ್ತು ಪ್ರಯೋಜನವಿಲ್ಲ. ಪ್ಲೀಸ್, ಈಗ ನೆಮ್ಮದಿಯಾಗಿ ನಿದ್ರೆ ಮಾಡು...' ಹೀಗೇ ವರ್ಷಗಳು ಉರುಳಿದವು. ಈ ನಡುವೆ ಆಗೊಮ್ಮೆ ಈಗೊಮ್ಮೆ ತಮ್ಮನೊಂದಿಗೆ ಕೋಳಿ ಜಗಳ ನಡೆಯುತ್ತಿತ್ತು. ಹೆಚ್ಚಿನ ಸಂದರ್ಭಗಳಲ್ಲಿ ಅವನೇ ಸೋಲುತ್ತಿದ್ದ. ಆಗೆಲ್ಲ, ಹಣ ಕದಿಯದಿದ್ದರೂ, ಹಿಂದೊಮ್ಮೆ ಅವನು ಏಟು ತಿಂದ ಸಂದರ್ಭ ನೆನಪಾಗಿ ನಾಚಿಕೆಯೂ, ಸಂಕಟವೂ ಒಟ್ಟಿಗೇ ಆಗುತ್ತಿತ್ತು. ಹೀಗಿರುವಾಗಲೇ ನಾನು ಪಿಯುಸಿ ಮುಗಿಸಿದ್ದೆ. ತಮ್ಮ ಎಸ್ಸೆಸ್ಸೆಲ್ಸಿಗೆ ಬಂದಿದ್ದ. ಆ ವರ್ಷ ಅಪ್ಪನಿಗೆ ಮೇಲಿಂದ ಮೇಲೆ ಸೋಲುಗಳು ಎದುರಾಗಿದ್ದವು. ವ್ಯಾಪಾರದಲ್ಲಿ ಲಾಸ್ ಆಗಿತ್ತು. ಇಬ್ಬರಿಗೂ ಡೊನೇಷನ್ ಹಣ ಹೊಂದಿಸುವುದು ಹೇಗೆಂದು ತಿಳಿಯದೆ ಅಪ್ಪ ಕಂಗಾಲಾಗಿದ್ದರು. ಅದೊಂದು ಮುಂಜಾನೆ ಮಾಂಗಲ್ಯ ಸರವನ್ನು ಅಪ್ಪನ ಕೈಗಿಟ್ಟು, ಇದನ್ನು ಮಾರಿ ಬಂದ ಹಣದಿಂದ ಮಕ್ಕಳನ್ನು ಓದಿಸೋಣ ಅಂದಳು ಅಮ್ಮ. 'ಇದನ್ನು ಮಾರುವುದರಿಂದ ಬರುವ ಹಣ ಒಬ್ಬರ ವಿದ್ಯಾಭ್ಯಾಸಕ್ಕೂ ಸಾಲುವುದಿಲ್ಲ' ಎನ್ನುತ್ತಾ ಅಪ್ಪ ಕಣ್ತುಂಬಿಕೊಂಡಿದ್ದರು. ಇದನ್ನೆಲ್ಲ ಕೇಳಿಸಿಕೊಂಡ ತಮ್ಮ, ತಂದೆಯವರ ಮುಂದೆ ನಿಂತು ಹೇಳಿಬಿಟ್ಟ: 'ಅಪ್ಪಾ, ಅಕ್ಕನನ್ನು ಓದಿಸು. ನಾನು ಯಾವುದಾದ್ರೂ ಕೆಲಸಕ್ಕೆ ಸೇರಿ ನಿನಗೆ ಸಹಾಯ ಮಾಡ್ತೇನೆ.' ಕುಲಪುತ್ರ ಅನ್ನಿಸಿಕೊಂಡ ಮಗ ಹೀಗೆ ಮಧ್ಯೆ ಪ್ರವೇಶಿಸಿ ಮಾತಾಡಿದ್ದು ಅಪ್ಪನಿಗೆ ಇಷ್ಟವಾಗಲಿಲ್ಲ. ಅವರು ಏಕಾಏಕಿ ಸಿಟ್ಟಾದರು. ಎದುರು ನಿಂತಿದ್ದ ತಮ್ಮನ ಕೆನ್ನೆಗೆ ಛಟೀರ್ ಎಂದು ಹೊಡೆದು 'ಶಾಲೆ ಬಿಡ್ತೇನೆ ಎಂದು ನನಗೇ ಹೇಳುವಷ್ಟು ಧೈರ್ಯ ಬಂತೇನೋ? ನಾನು ಮನೆ ಮನೇಲಿ ಭಿಕ್ಷೆ ಬೇಡಿದ್ರೂ ಪರವಾಗಿಲ್ಲ. ನಿಮ್ಮಿಬ್ಬರನ್ನೂ ಓದಿಸ್ತೇನೆ' ಎಂದರು. ನಮ್ಮಿಬ್ಬರ ವಿದ್ಯಾಭ್ಯಾಸಕ್ಕೆ ಹಣ ಹೊಂದಿಸುವ ಉದ್ದೇಶದಿಂದ ಅಪ್ಪ, ಮರುದಿನದಿಂದಲೇ ಗೆಳೆಯರು ಹಾಗೂ ಬಂಧುಗಳ ಮನೆಯ ಬಾಗಿಲು ಬಡಿಯತೊಡಗಿದರು. ಎಲ್ಲರ ಮುಂದೆ ದೇಹೀ ಎಂದು ಅಂಗಲಾಚಿದ್ದೇ ಬಂತು. ನಯಾ ಪೈಸೆಯ ಪ್ರಯೋಜನವಾಗಲಿಲ್ಲ. ಈ ಸಂದರ್ಭದಲ್ಲಿ 'ಅಕ್ಕಾ, ಡಿಗ್ರಿ ಮುಗಿಸಬೇಕು ಎಂಬುದು ಎಲ್ಲರ ಕನಸಾಗಿರುತ್ತೆ. ನೀನೀಗ ಆ ಸ್ಟೇಜ್‌ನಲ್ಲಿ ನಿಂತಿದೀಯ. ನಾನೂ ಮನೇಲಿದ್ರೆ ನಿನ್ನನ್ನು ಕಾಲೇಜು ಬಿಡಿಸಿ ನನ್ನನ್ನು ಓದಿಸ್ತಾರೆ. ಹಾಗಾಗೋದು ಬೇಡ. ನಾನು ಎಲ್ಲಾದ್ರೂ ಕೆಲ್ಸ ಮಾಡಿ ಬದುಕ್ತೇನೆ.

ಹೆತ್ತವರಿಗೆ ಹೊರೆಯಾಗಲು ನನಗೆ ಇಷ್ಟವಿಲ್ಲ' ಎಂದು ನನಗೊಂದು ಪತ್ರ ಬರೆದಿಟ್ಟು, ಪುಟ್ಟ ಲಗೇಜಿನೊಂದಿಗೆ ನನ್ನ ತಮ್ಮ ಮನೆ ಬಿಟ್ಟು ಓಡಿ ಹೋಗಿದ್ದ. ಈ ಘಟನೆಯಿಂದ ಶಾಕ್‌ಗೆ ಒಳಗಾದ ಅಪ್ಪ–ಅಮ್ಮ ಒಂದೆರಡು ದಿನ ಗೋಳಾಡಿದರು. ತಮ್ಮನ ಹುಡುಕಾಟಕ್ಕೆ ನಿಂತರು. ಆತ ಸಿಗದೇ ಹೋದಾಗ ತಮ್ಮ ಹಣೆಬರಹವನ್ನು ಹಳಿದುಕೊಂಡರು. ಕೆಲದಿನಗಳ ನಂತರ, ಪದವಿ ಓದುವ ಉದ್ದೇಶದಿಂದ ನಾನು ನಗರದಲ್ಲಿದ್ದ ಹಾಸ್ಟೆಲ್ ಸೇರಿಕೊಂಡೆ. ಅವತ್ತು ನೋಟ್ಸ್ ಬರೆಯುತ್ತಾ ಕೂತಿದ್ದಾಗ ವಾಚ್‌ಮನ್ ಬಂದು ಹೇಳಿದ: 'ಮೇಡಂ ಯಾರೋ ಹಳ್ಳಿಯಿಂದ ನಿಮ್ಮನ್ನು ನೋಡಲು ಬಂದಿದ್ದಾರೆ. ಗೇಟ್‌ನಿಂದಾಚೆ ನಿಂತಿದ್ದಾರೆ... 'ಯಾರು ಬಂದಿರಬಹುದು ಎಂದು ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ. ಕುತೂಹಲದಿಂದಲೇ ಹೊರಗೆ ಬಂದು ನೋಡಿದರೆ ಅಲ್ಲಿ ನಿಂತಿದ್ದವನು ನನ್ನ ತಮ್ಮ! ಆತ ಕೃಶನಾಗಿದ್ದ. ಕೊಳೆ ಬಟ್ಟೆಗಳನ್ನು ಧರಿಸಿದ್ದ. ಅವನನ್ನು ಆಕ್ಷೇಪಿಸುತ್ತಾ ಕೇಳಿದೆ: 'ಯಾರೋ ಹಳ್ಳಿಯವರು ಬಂದಿದ್ದಾರೆ' ಅಂತ ಯಾಕೋ ಹೇಳಿದೆ? ನಮ್ಮ ಅಕ್ಕನನ್ನು ಕರೆಯಿರಿ ಅಂದಿದ್ರೆ ನಿನ್ನ ಗಂಟು ಹೋಗ್ತಿತ್ತಾ?' ಅವನು ಒಮ್ಮೆ ನಸು ನಕ್ಕು ಹೇಳಿದ: 'ಒಂದ್ಸಲ ನನ್ನ ಬಟ್ಟೆ ನೋಡು. ಅವು ಪೂರ್ತಿ ಗಲೀಜಾಗಿವೆ. ನಾನು ಕೊಳಕನ ಥರಾನೇ ಇದೀನಿ. ಇಂಥವನು ನಿನ್ನ ತಮ್ಮ ಅಂದ್ರೆ ನಿನ್ನ ಫ್ರೆಂಡ್ಸ್ ಎಲ್ಲಾ ನಗ್ತಾರೆ. ನಿನ್ನನ್ನು ಆಡಿಕೋತಾರೆ ಅನ್ನಿಸ್ತು. ಅದಕ್ಕೇ ಹಳ್ಳಿಯವನು ಅಂತ ಹೇಳ್ದೆ...' ಹೀಗೆಂದವನು ಪ್ಯಾಂಟ್ ಜೇಬಿನಿಂದ ಒಂದು ಪುಟ್ಟ ಕವರ್ ತೆಗೆದುಕೊಟ್ಟ. ಅದರಲ್ಲಿ ಬಣ್ಣಬಣ್ಣದ ಹೇರ್‌ಕ್ಲಿಪ್, ಕಡಗ ಹಾಗೂ ನಾನಾ ಡಿಸೈನ್‌ನ ಓಲೆಗಳಿದ್ದವು. 'ಕಾಲೇಜಿಗೆ ಹೋಗುವ ಹೆಚ್ಚಿನ ಹುಡುಗಿಯರು ಇಂಥದನ್ನು ಹಾಕ್ಕೊಂಡು' ಓಡಾಡ್ತಾರೆ. ಇಂಥವನ್ನು ಹಾಕ್ಕೊಂಡ್ರೆ ನೀನೂ ಮುದ್ದಾಗಿ ಕಾಣಿಸ್ತೀಯ ಅನ್ನಿಸ್ತು. ಅದಕ್ಕೆ ತಗೊಂಡ್‌ಬಂದೆ' ಅಂದ. ಅವನ ಪರಿಶುದ್ಧ ಮನಸ್ಸು ಕಂಡು ಕಣ್ತುಂಬಿ ಬಂತು. ನಾನು ನಿಂತಿರೋದು ಲೇಡಿಸ್ ಹಾಸ್ಟೆಲ್‌ನ ಹೊರಗೆ ಎಂಬುದನ್ನು ಮರೆತು, ಅವನನ್ನು ತಬ್ಬಿಕೊಂಡು ಅತ್ತು ಹಗುರಾದೆ. ಬೀಳ್ಕೊಡುವ ಮುನ್ನ ಅವನ ವಿಳಾಸ ತಗೊಂಡೆ. ವಾರದ ನಂತರ ಅವನು ತಂದೆಯವರನ್ನು ಭೇಟಿಯಾದ ಸುದ್ದಿ ಬಂತು. ಡಿಗ್ರಿ ಮುಗೀತಿದ್ದಂತೆಯೇ, ಶ್ರೀಮಂತ ವರನೊಂದಿಗೆ ನನ್ನ ಮದುವೆ ನಿಶ್ಚಯವಾಯಿತು. ನನ್ನ ಪರೀಕ್ಷೆ ಮುಗಿದ ಮರುದಿನವೇ ಗಂಡಿನ ಕಡೆಯವರೆಲ್ಲ ಮನೆಗೆ ಬಂದರು. ನಾನು ಹಿಂದಿನ ದಿನವಷ್ಟೇ ಮನೆ ತಲುಪಿದ್ದೆ. ಈ ವೇಳೆಗೆ, ವಯಸ್ಸಿನ ಕಾರಣದಿಂದ ಅಪ್ಪ–ಅಮ್ಮ ನಿತ್ರಾಣರಾಗಿದ್ದರು. ಆದರೆ ನಮ್ಮ ಮನೆ ಲಕಲಕ ಹೊಳೆಯುತ್ತಿತ್ತು. ಗಂಡಿನ ಕಡೆಯವರು ಮನೆಯ ಅಂದ ಚೆಂದ ಕಂಡು ಖುಷಿಯಾಗಿದ್ದರು. ಅವತ್ತು ಇಡೀ ದಿನ ತಮ್ಮ ಕಾಣಿಸಲೇ ಇಲ್ಲ. ಗಂಡಿನ ಕಡೆಯವರೆಲ್ಲ ಹೋದ ನಂತರ ಅಮ್ಮನ್ನು ಕೇಳಿದೆ. 'ಸರಭರನೆ ಹತ್ತು ಹೆಜ್ಜೆ ಹೋಗುವುದಕ್ಕೂ ತುಂಬಾ ಕಷ್ಟಪಡ್ತೀಯ. ಹಾಗಿದ್ರೂ ಮನೆಯನ್ನು ಇಷ್ಟೊಂದು ನೀಟ್ ಆಗಿ ಇಟ್ಟಿದ್ದೀಯ. ಇದು ನಿನಗೆ ಹೇಗೆ ಸಾಧ್ಯವಾಯ್ತು?' 'ಇದೆಲ್ಲಾ ನಿನ್ನ ತಮ್ಮನ ಕೆಲಸ ಕಣಮ್ಮಾ. ಗಂಡಿನ ಕಡೆಯವರು

ಬರ್ತಾರೆ ಅಂತ ಗೊತ್ತಾದ ದಿನದಿಂದ ಅವನು ಹಗಲೂ ರಾತ್ರಿ ದುಡಿದ. ನಿನ್ನೆ ಆಯತಪ್ಪಿ ಜಾರಿ ಬಿದ್ದು ಆಸ್ಪತ್ರೆ ಸೇರಿದ್ದಾನೆ' ಎಂದಳು ಅಮ್ಮ. ತಕ್ಷಣವೇ ಬಿಟ್ಟ ಬಾಣದಂತೆ ಆಸ್ಪತ್ರೆಗೆ ಹೋದೆ. ಕೈ–ಕಾಲಿಗೆ ಬ್ಯಾಂಡೇಜ್ ಹಾಕಿಸಿಕೊಂಡು ಮಲಗಿದ್ದವನನ್ನು ಕಂಡು–'ಏನು ಮಾಡಿಕೊಂಡ್ಯೋ, ಏನಿದೆಲ್ಲಾ? ತುಂಬಾ ನೋವಿದೆಯಾ?' ಎಂದು ಪ್ರಶ್ನಿಸಿದರೆ, ಅವನು ಹೇಳಿದ: 'ಅಕ್ಕಾ, ನಿನ್ನ ನೆಮ್ಮದಿಯ ಬದುಕಿಗಾಗಿ ಇಂಥ ಸಾವಿರ ಪೆಟ್ಟು ಮಾಡಿಕೊಳ್ಳಲೂ ನಾನು ಸಿದ್ಧ!' ಮದುವೆಯಾದ ಕೆಲವೇ ದಿನಗಳಲ್ಲಿ ಯಜಮಾನರೊಂದಿಗೆ ನಮ್ಮ ಮನೆಯ ಕಥೆ ಹೇಳಿಕೊಂಡೆ. ಅವರು, ನಮ್ಮ ತಂದೆ–ತಾಯಿಯ ಎದುರು ನಿಂತು ಹೇಳಿದರು: 'ನೀವೂ ನಮ್ಮೊಂದಿಗೆ ಉಳಿದುಕೊಳ್ಳಿ. ಅದರಿಂದ ಯಾರಿಗೂ ತೊಂದರೆಯಿಲ್ಲ...' ಈ ಆಹ್ವಾನವನ್ನು ಅಪ್ಪ–ಅಮ್ಮ ನಯವಾಗಿಯೇ ನಿರಾಕರಿಸಿದರು. ೨ ದಿನಗಳ ನಂತರ ದಿಢೀರ್ ಎದುರಾದ ತಮ್ಮ ಹೇಳಿದ: 'ನಮ್ಮ ಮನೆಯವರಿಗಾಗಿ ಯಾವುದಕ್ಕೂ ಪ್ರಾರ್ಥಿಸಬೇಡ. ಹಾಗೇನಾದ್ರೂ ಮಾಡಿದ್ರೆ ಮದುವೆ ಆಗ್ತಿದ್ದಂಗೇ ಗಂಡನನ್ನು ಬುಟ್ಟಿಗೆ ಹಾಕ್ಕೊಂಡ್ಳು ಎಂಬ ಅಪಖ್ಯಾತಿ ನಿನ್ನದಾಗುತ್ತೆ... 'ಈ ಮಧ್ಯೆ ನನ್ನವರಿಗೆ ಕಂಪನಿಯ ಎಂ.ಡಿ. ಹುದ್ದೆಗೆ ಪ್ರಮೋಷನ್ ಸಿಕ್ಕಿತು. 'ನಾನೀಗ ಒಳ್ಳೆಯ ಪೋಸ್ಟಲ್ಲಿ ಇದ್ದೀನಿ. ಕಂಪನಿಗೆ ಮ್ಯಾನೇಜರ್‌ಗಳನ್ನು ನೇಮಕ ಮಾಡಿಕೊಳ್ಳುವ ಸ್ವಾತಂತ್ರ್ಯ ನನಗಿದೆ. ನಾನೇ ಕೆಲಸ ಕೊಡ್ತೇನೆ. ಪ್ಲೀಸ್ ಬನ್ನಿ' ಎಂದು ಪ್ರೀತಿಯಿಂದಲೇ ನನ್ನವರು ಕರೆದರು. ಆದರೂ ಅವನು ಬರಲಿಲ್ಲ. ಇದಾಗಿ ಹತ್ತೇ ದಿನಕ್ಕೆ, ಮನೆ ಕಟ್ಟಿಸುವ ಕೆಲಸದ ಗುತ್ತಿಗೆ ಹಿಡಿದಿದ್ದ ತಮ್ಮ, ಎರಡಂತಸ್ತಿನ ಬಿಲ್ಡಿಂಗ್‌ನಿಂದ ಬಿದ್ದು ತೀವ್ರವಾಗಿ ಗಾಯಗೊಂಡಿದ್ದಾನೆ ಎಂದು ಸುದ್ದಿ ಬಂತು. ಎಲ್ಲರೂ ಆಸ್ಪತ್ರೆಗೆ ಧಾವಿಸಿದೆವು. ನನಗೆ ದುಃಖ ತಡೆಯಲು ಸಾಧ್ಯವಾಗಲಿಲ್ಲ. ಅವನ ಕೈ ಹಿಡಿದುಕೊಂಡು ಬಿಕ್ಕಳಿಸುತ್ತಲೇ ಹೀಗೆಂದೆ: ಇದೆಲ್ಲಾ ನಿನಗೆ ಬೇಕಿತ್ತಾ? ನನ್ನ, ಯಜಮಾನರ ಮಾತಿನಂತೆ ನಡೆದಿದ್ರೆ ಕಂಪನಿಯ ಮ್ಯಾನೇಜರ್ ಆಗಿ ನೆಮ್ಮದಿಯಿಂದ ಇರಬಹುದಿತ್ತು ಅಲ್ವಾ? ಇದೆಂಥ ಹಠ ನಿನ್ನದು?ನನ್ನ ತಮ್ಮ ಆಗಲೂ ಸಂಯಮ ಕಳೆದುಕೊಳ್ಳಲಿಲ್ಲ. ಅದೇ ಶಾಂತ ಸ್ವರದಲ್ಲಿ ಹೇಳಿದ: 'ಅಕ್ಕಾ, ಒಮ್ಮೆ ಸೂಕ್ಷ್ಮವಾಗಿ ಯೋಚಿಸು. ಭಾವನಿಗೆ ಈಗ ತಾನೆ ಪ್ರಮೋಷನ್ ಸಿಕ್ಕಿದೆ. ಅವರಿಗೆ ಶತ್ರುಗಳು ಹಾಗೂ ಮಿತ್ರರು ಸಮ–ಸಮ ಎಂಬಂತೆ ಇರುತ್ತಾರೆ. ಅಂಥ ಸಂದರ್ಭದಲ್ಲಿ ನಾನು ಮ್ಯಾನೇಜರ್ ಎಂದು ಸೇರಿಕೊಂಡಿದ್ದರೆ, ಭಾವನ ಮೇಲೆ ಅಧಿಕಾರ ದುರುಪಯೋಗದ ಆರೋಪ ಬರುತ್ತಿತ್ತು. ಅವರ ಮರ್ಯಾದೆ ಹೋಗುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಒಂದು ದೊಡ್ಡ ಕಂಪನಿಯ ಮ್ಯಾನೇಜರ್ ಆಗಬೇಕಾದರೆ ಕನಿಷ್ಠ ಡಿಗ್ರಿ ಆಗಿರಬೇಕು. ಆ ಅರ್ಹತೆ ನನಗಿಲ್ಲ. ಇದೆಲ್ಲ ಗೊತ್ತಿದ್ದೂ ನಾನು ಮ್ಯಾನೇಜರ್ ಆಗಿದ್ದಿದ್ರೆ ಭಾವನ ವಿಷಯವಾಗಿ ಹೇಗೆಲ್ಲಾ ರೂಮರ್‌ಗಳು ಹಬ್ಬಿರುತ್ತಿದ್ದವೋ ಅಂದಾಜು ಮಾಡಿಕೋ...' ಅವನ ದೂರದೃಷ್ಟಿಯನ್ನು ಅರ್ಥ ಮಾಡಿಕೊಂಡ ಮೇಲೆ ಏನು ಮಾತಾಡಬೇಕೆಂದು ಯಾರಿಗೂ ಹೊಳೆಯಲಿಲ್ಲ.ಆನಂತರದಲ್ಲಿ ತಮ್ಮ ತುಂಬ ಬೇಗನೆ ಚೇತರಿಸಿಕೊಂಡ.

ಕೆಲಸದಲ್ಲಿ ಅವನಿಗಿರುವ ಶ್ರದ್ಧೆಯನ್ನು ಗಮನಿಸಿದ ಶ್ರೀಮಂತರೊಬ್ಬರು, ಮನೆ ಅಳಿಯನನ್ನಾಗಿ ಮಾಡಿಕೊಳ್ಳಲು ಮುಂದೆ ಬಂದರು. ಮದುವೆಯ ರಿಸೆಪ್ಶನ್‌ನಲ್ಲಿ ತಮ್ಮನ ಕೈಗೆ ಮೈಕ್ ಕೊಟ್ಟು, ಆರ್ಕೆಸ್ಟ್ರಾ ತಂಡದ ಮುಖ್ಯಸ್ಥರು ಕೇಳಿದರು: 'ಜೀವನದಲ್ಲಿ ನೀವು ಯಾವತ್ತೂ ಮರೆಯಲಾಗದಂಥ ವ್ಯಕ್ತಿ ಯಾರು? ಮದುವೆಯ ಈ ಸಂದರ್ಭದಲ್ಲಿ ಅವನು ಹೆಂಡತಿಯ ಹೆಸರು ಹೇಳುತ್ತಾನೆಂದೇ ಎಲ್ಲರೂ ಭಾವಿಸಿದ್ದರು. ನಾನೂ ಹಾಗೇ ಅಂದುಕೊಂಡಿದ್ದೆ. ಆದರೆ ಎಲ್ಲರ ನಿರೀಕ್ಷೆಗೆ ವಿರುದ್ಧವಾಗಿ ಉತ್ತರಿಸಿದ ನನ್ನ ತಮ್ಮ–ಸಾಯುವವರೆಗೂ ನಾನು ಮರೆಯಲಾಗದಂಥ ವ್ಯಕ್ತಿಯೆಂದರೆ ನಮ್ಮ ಅಕ್ಕ' ಎಂದು ಬಿಟ್ಟ. ಅವನ ಉತ್ತರದಿಂದ ಎಲ್ಲರಿಗೂ ಶಾಕ್ ಆಯಿತು. ಅದನ್ನು ಗಮನಿಸಿದ ಆತ ಹೀಗೆಂದ: 'ಬಾಲ್ಯದಲ್ಲಿ ನಾನು ಪರಮತುಂಟನಾಗಿದ್ದೆ. ಸಾಕ್ಸ್, ಶೂ, ಪೆನ್ನು, ಪೆನ್ಸಿಲ್, ಬ್ಯಾಗು... ಹೀಗೆ ಪ್ರತಿಯೊಂದನ್ನೂ ಹಾಳು ಮಾಡುತ್ತಿದ್ದೆ. ಇಂಥ ಸಂದರ್ಭಗಳಲ್ಲಿ ತನ್ನ ವಸ್ತುಗಳನ್ನೆಲ್ಲ ನನ್ನ ಮುಂದಿಟ್ಟು ನನ್ನ ಸಂತೋಷವನ್ನು ಹೆಚ್ಚಿಸಿದವಳು ನನ್ನ ಅಕ್ಕ. ನನಗೆ ಶೂ ಬಿಚ್ಚಿಕೊಟ್ಟ ಕಾರಣದಿಂದ ಆಕೆಯ ಪಾದಗಳಿಗೆ ಮುಳ್ಳು ಚುಚ್ಚಿಕೊಂಡವು. ಆಕೆಯ ಪೆನ್ನು, ಪೆನ್ಸಿಲ್, ಜಾಮಿಟ್ರಿ ಬಾಕ್ಸ್‌ಗಳು ನನ್ನಲ್ಲಿದ್ದುದರಿಂದ ಶಿಕ್ಷಕರಿಂದ ಆಕೆಗೆ ಪದೇ ಪದೆ ಪೆಟ್ಟು ಬಿದ್ದವು. ಇಂಥದಕ್ಕೆಲ್ಲ ಒಮ್ಮೆಯೂ ಬೇಸರ ಮಾಡಿಕೊಳ್ಳದ ತಾಯಿ ಮನಸ್ಸು ಅವಳದು. ಈಗ ಹೇಳಿ; ಅಂಥವಳನ್ನು ನಾನು ಮರೆಯುವುದಾದರೂ ಹೇಗೆ?'ತಮ್ಮನ ಮಾತುಗಳನ್ನು ಕೇಳಿದ ಜನ ಭಾವುಕರಾಗಿ ಕಣ್ತುಂಬಿಕೊಂಡರು. ನಂತರ ಒಂದೇ ಸಮನೆ ಚಪ್ಪಾಳೆ ಹೊಡೆದರು.

**ಎ.ಆರ್. ಮಣಿಕಾಂತ್**

ಕನ್ನಡ ಪ್ರಭ ೨೦೧೪

# ಎಲ್ಲಿ ಹೋದವು ಆ ತಿಗಣೆ, ಹೇನುಗಳು?

ಸುಮಾರು ಐವತ್ತು, ಅರವತ್ತು ದಶಕಗಳ ಲಾಗಾಯ್ತು ಎಂಬತ್ತು ದಶಕಗಳ ಕೊನೆಯವರೆಗೆ ಈ ಭಾರತ ದೇಶದ ಗ್ರಾಮೀಣ ಪ್ರದೇಶದಲ್ಲಿ ಒಂದು ಹಳ್ಳಿಯಲ್ಲಿ ಒಂದೋ ಅಥವಾ ಎರಡೋ ರೇಡಿಯೋಗಳಿರುತ್ತಿದ್ದವು. ಮೂರ್‍ನಾಲ್ಕು ಸೈಕಲ್ಲುಗಳಿರುತ್ತಿದ್ದವು, ಯಾರದಾದರೂ ಒಂದು ಟೂ ವೀಲ್ಡರ್ ಇದ್ದರೆ ಅದು ಒಂದು ಸೋಜಿಗದ ಸಂಗತಿಯೇ ಸರಿ. ಹೀಗಾಗಿ ಆ ಕಾಲಘಟ್ಟದಲ್ಲಿ ಮನೆಗಳೆಲ್ಲವೂ ಈಗಿನಂತೆ ಇಟ್ಟಿಗೆ, ಸಿಮೆಂಟಿನ, ಆರ್‌ಸಿಸಿ ಮೇಲ್ಛಾವಣಿಯ ಮನೆಗಳಾಗಿರದೆ, ಕಲ್ಲು ಮಣ್ಣಿನ ಗೋಡೆಯ ಮಣ್ಣಿನ ಮೇಲ್ಮುದ್ದಿಯ ಮನೆಗಳಾಗಿರುತ್ತಿದ್ದವು. ಯಾರದಾದರೂ ಒಬ್ಬಿಬ್ಬರವು ಆರ್ ಸಿ ಸಿ ಮನೆಗಳಿದ್ದರೆ ಅವರು ಉಳ್ಳವರೇ ಎಂದು ಭಾವಿಸಲಾಗುತ್ತಿತ್ತು. ಮಣ್ಣಿನ ಮೇಲ್ ಮುದ್ದಿಯ, ನಾಲ್ಕಂಕಣದ, ಆರಂಕಣದ ತೊಲೆ ಕಂಬಗಳಿಂದ ನಿರ್ಮಿಸಿದ ನೆಲಕ್ಕೆ ಸಗಣಿ ರಾಡಿ ಸಾರಿಸುತ್ತಿದ್ದ ಮನೆಗಳೇ ಹೆಚ್ಚು, ನೆಲಕ್ಕೆ ಪಾಟೀಕಲ್ಲು ಹಾಕಿರುತ್ತಿದ್ದ ಮನೆಗಳು ವಿರಳ ಎಂದೇ ಹೇಳಬಹುದು. ಇಂಥ ಮನೆಗಳ ಮೂಲವೇ ಈ ನನ್ನ ಪ್ರಬಂಧದ ಆಶಯವಾಗಿದೆ. ಸರಿ ಸುಮಾರು ತೊಂಬತ್ತರ ದಶಕದ ಕೊನೆಯವರೆಗೂ, ಅಂದರೆ ಈ ಮೂರ್ಖರ ಪೆಟ್ಟಿಗೆ ಲಗ್ಗೆ ಇಡಲು ಎಂದು ಪ್ರಾರಂಭ ಮಾಡಿತೋ ಅಲ್ಲಿಯವರೆಗೂ ಮಣ್ಣಿನ, ತೊಲೆ ಕಂಬದ ಮನೆಗಳು ಢಾಳಾಗಿ ವಿಜೃಂಭಿಸಿದ್ದವು. ಅಲ್ಲಿಯವರೆಗೂ ಈ ತಿಗಣೆಗಳೆಂಬ ಮನುಷ್ಯನ ರಕ್ತ ಹೀರುವ ಜೀವಿಗಳೂ ಎಲ್ಲೆಲ್ಲಿಯೂ ನಾವೇ ಎನ್ನುವ ಹಾಗೆ ಇರುಳಿನಲ್ಲಿ ಯುದ್ಧ ಸನ್ನದ್ಧರಾದ ಯೋಧರಂತೆ ನಮ್ಮ ಮೇಲೆ ಮುಗಿಬೀಳುತ್ತಿದ್ದವು.

ಹಗಲೆಲ್ಲಾ ತೊಲೆ ಕಂಬಗಳ ಸಂದಿನಲ್ಲಿ, ಗೋಡೆಗಳ ಸಂದಿನಲ್ಲಿ ಮಾಡುಗಳ ಮೂಲೆ ಮುರುಕಟ್ಟಿನಲ್ಲಿ, ಹಾಸಿಗೆ ದಿಂಬುಗಳ ಸಂದು ಗೊಂದುಗಳಲ್ಲಿ, ನಮ್ಮ ಅಂಗಿಯ ಕೈಕಪ್ಪಿನಲ್ಲಿ ಕಾಲರುಗಳಲ್ಲಿ,ಎಲ್ಲೆಲ್ಲಿಯೂ ನಾವೇ ನಾವು ಎನ್ನುವ ಹಾಗೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿರುತ್ತಿದ್ದವು. ರಾತ್ರಿಯಾಗುವದನ್ನೇ ಕಾಯುತ್ತಿದ್ದ ಇವುಗಳು ನಿದ್ರಾದೇವಿಯ ವಶವಾಗುತ್ತಿದ್ದ ನಮ್ಮ ಮೇಲೆ ಅಟ್ಯಾಕ್ ಮಾಡಲು ಸನ್ನದ್ಧವಾಗುತ್ತಿದ್ದವು. ಅಲ್ಲಿ ಪುಳುಪುಳು ಇಲ್ಲಿ ಪುಳುಪುಳು ಎಂದು ಹರಿದಾಡಿಕೊಂಡು ನಲಿದಾಡಿಕೊಂಡು ಕುಣಿದಾಡಿಕೊಂಡು ಬಂದು ನಿದ್ರೆಯ ಮಂಪರಿನಲ್ಲಿರುತ್ತಿದ್ದ ನಮ್ಮ ರಕ್ತ ಹೀರಿಕೊಂಡು ಡೊಣಪನಾಗುತ್ತಿದ್ದವು. ಎಚ್ಚರವಿಲ್ಲದೆ ಗೊರಕೆ ಹೊಡೆಯುತ್ತಿದ್ದವರು ಸಿಕ್ಕರಂತೂ ಈ ತಿಗಣೆಗಳಿಗೆ ಬೆಳ್ಳಂಬೆಳತನಕ ಸುಗ್ಗಿಯೋ ಸುಗ್ಗಿ. ಅಕಸ್ಮಾತ್ ಕಡಿತದಿಂದ ಕೆರೆದುಕೊಳ್ಳುವಾಗ ಕೈಗೆ ಸಿಕ್ಕರೆ ರಕ್ತದ ತಿಲಾಂಜಲಿ, ಇಲ್ಲದಿದ್ದರೆ ಒಂದಕ್ಕೆ ಹತ್ತು, ನೂರಕ್ಕೆ ಇನ್ನೂರರಂತೆ ಶೀರುಗಳ ಸೃಷ್ಟಿಸಿಕೊಂಡು ವಂಶಾಭಿವೃದ್ಧಿಮಾಡುತ್ತಿದ್ದವು. ರಾತ್ರಿಯೆಲ್ಲ ಕಾರ್ಯ ಚಟುವಟಿಕೆ ಮಾಡಿಕೊಂಡು ಹಗಲೆಲ್ಲಾ ಮುಗುಮ್ಮಾಗಿರುತ್ತಿದ್ದವು. ಪ್ರತಿಯೊಬ್ಬರ ಮನೆಯಲ್ಲಿ ಚತುಷ್ಪಾದಿಗಳಾದ ಸಾಕಿಕೊಂಡ ನಾಯಿ ಬೆಕ್ಕುಗಳಿರುವಂತೆ

ಎಲ್ಲಿಂದಲೋ ಬಂದು ಮನೆಯಾಶ್ರಯಿಸಿಕೊಂಡು ನಿಮ್ಮ ಹಂಗು ನಮಗೇಕೆ ನಿಮ್ಮ ರಕ್ತದ ರುಚಿಯೊಂದಿದ್ದರೆ ಸಾಕು ಎನ್ನುವ ಕಿಲಾಡಿ ಜೀವಿಗಳು ಇವು. ಸಾಕು ನಾಯಿಯಾದರೆ ಒಂದು ತುಣುಕು ರೊಟ್ಟಿ ಹಾಕಿದರೆ ಮನೆ ಕಾಯುತ್ತಾ ಬಿದ್ದಿರುತ್ತದೆ. ಸ್ವಲ್ಪ ಹಾಲು ಮೊಸರು ಮಮ್ಮು ಹಾಕಿದರೆ ಬೆಕ್ಕು ಕೂಡ ಉಪದ್ರವಿ ಜೀವಿಗಳಾದ ಇಲಿ ಹೆಗ್ಗಣ ಇಲ್ಲದಂತೆ ಮಾಡುತ್ತಿದ್ದ ಪ್ರಾಣಿಗಳು. ನಾವು ಈ ಚತುಷ್ಪಾದಿಗಳಿಗೆ ಆಹಾರ ಹಾಕಿದರೆ ನಮ್ಮ ಹಿತ ಚಿಂತನೆ ಮಾಡುತ್ತವೆ. ಆದರೆ ಈ ತಿಗಣೆಗಳೆಂಬ ನಿಶಾಚರಿಗಳು ನಮಗೆ ಉಪಕಾರ ಮಾಡುವದಿರಲಿ ನಮ್ಮ ರಕ್ತವನ್ನೇ ಹೀರುವ ಉಪದ್ರವಿಗಳು.

ಒಂದೊಂದು ವೇಳೆ ತಮ್ಮ ಆಹಾರವನ್ನು (ನಮ್ಮ ರಕ್ತ) ಅರಸಿಕೊಂಡು ಬರುವ ಈ ತಿಗಣೆಗಳು ನಾವು ಮಲಗಿದ್ದಾಗ ಮಧ್ಯದಲ್ಲಿ ಸಿಕ್ಕಿ ಬಿದ್ದಿರುವ ವೈರಿ ಸೈನಿಕನಂತೆ ಸುತ್ತಲೂ ಅಟ್ಯಾಕ್ ಮಾಡಿಕೊಂಡು ಕೈ, ಕಾಲು, ದೇಹ, ಎಲ್ಲೆಂದರಲ್ಲಿ ರಕ್ತ ಹೀರಲುಪಕ್ರಮಿಸುತ್ತವೆ. ನವೆಯಿಂದ ಕೆರೆದುಕೊಳ್ಳಲು ಜಾಣತನದಿಂದ ಮಸುಗಿಕೊಳ್ಳುತ್ತವೆ, ಬಚಾವಾಗುತ್ತವೆ. ನಮಗೆ ಮಂಪರು ಕವಿಯುತ್ತಲೆ ಮತ್ತೇ ತಮ್ಮ ಕಾಯಕ ಸುರು ಮಾಡುತ್ತವೆ. ಪುನರಪಿ ಕಾಯಕಂ ಪುನರಪಿ ಸ್ಥಗಿತಂ ಎನ್ನುವ ಧೋರಣೆ. ಯಾವಾಗ ಬೆಳಕು ಹರಿಯುತ್ತದೆಯೋ ಆಗ ಈ ನಿಷ್ಪಾಪಿ ಜೀವಿಗಳು ಕದನ ವಿರಾಮ ಮಾಡಿಕೊಳ್ಳುತ್ತವೆ. ಆಗ ನಮ್ಮಿಂದ "ರಾತ್ರಿ ಎಲ್ಲಾ ಏನ್ ತಗಣಿ ಕಡದವು ಲೇ ಯಪ್ಪಾ ಈಗ ಬೆಳ್ಗಾ ಮುಂಜಾಲೆ ನಿದ್ದಿ ಹತ್ತಿತ್ತು ನೋಡ್ ಎನ್ನುವ ಗೆಳೆಯರ ಮಾತು ಕೇಳಬೇಕು. ಇದು ನಿದ್ದಿ ರಾತ್ರಿಯಲ್ಲಾ ಸಖತ್ತಾಗಿ ಮಾಡದವರ ಅನಿಸಿಕೆ, ಹೀಗಾಗಿ ಇಲ್ಲಿ ತಿಗಣಿಗಳು ಬಚಾವಾಗಿ ತಮ್ಮ ಅಸ್ತಿತ್ವ ಉಳಿಸಿಕೊಂಡಿರುತ್ತವೆ. ಕೆಲವೊಮ್ಮೆ ಕಡಿಸಿಕೊಳ್ಳುವ ತುರಿಯಾವಸ್ಥೆಯಲ್ಲಿಯೂ ನಿದ್ರಾಭಂಗ ಮಾಡಿ ಕಾಟ ಕೊಡುವ ಈ ಜೀವಿಗಳ ಮೇಲೆ ಕಣ್ಣು ಬಿದ್ದು, ಎದ್ದು ಲೈಟು ಹಚ್ಚಿಕೊಂಡು ಕುಳಿತನೆಂದರೆ ತನ್ನ ಅಮೂಲ್ಯ ರಕ್ತ ಹೀರಿಕೊಂಡ ಉಪದ್ರವಿಗಳು ಓಡಲು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತವೆ. ತನ್ನ ತೋರು ಬೆರಳುಗಳಿಂದ ಒರೆಯಲು ಹಚ್ಚಿದರೆ ಎಲ್ಲೆಂದರಲ್ಲಿ ರಕ್ತದ ಓಕುಳಿ ನಡೆಯುತ್ತದೆ. ಅವು ಎಷ್ಟೆಷ್ಟು ರಕ್ತ ಹೀರಿಕೊಂಡು ಡೊಣಪವಾಗಿರುತ್ತಿದ್ದವೋ, ಪ್ರಾಣಾರ್ಪಣೆ ಮಾಡಿಕೊಳ್ಳುವಾಗ ಅಷ್ಟು ರಕ್ತವೇ ಅಲ್ಲಿ ಚೆಲ್ಲಿರುತ್ತಿತ್ತು. ಒಂದೊಂದು ಬಾರಿ ರಾತ್ರಿಯೆಲ್ಲಾ ನಿದ್ದೆ ಕೆಡಿಸಿ ರಕ್ತ ಹೀರಿಕೊಂಡು ಅವು ಸಿಕ್ಕು ಬಿದ್ದಾಗ ನಿದ್ದೆಗಣ್ಣಿನಲ್ಲಿ ಸಿಟ್ಟಿನಿಂದ ಗೋಡೆಗೋ ನೆಲಕ್ಕೋ ಅವುಗಳ ಮಾರಣಹೋಮ ಮಾಡಿ ಬೆಳಿಗ್ಗೆ ನೋಡಿದಾಗ ಗೋಡೆ ಒಂದು ಕೆಂಪು ವರ್ಣದ ಅಪೂರ್ವ ಕಲಾಕೃತಿ ಆಗಿರುತ್ತಿತ್ತು. ರೋಗಿಯ ರಕ್ತ ಪರೀಕ್ಷೆ ಮಾಡಲು ಸೀರಿಂಜಿನಿಂದ ಕ್ರಮಬದ್ಧವಾಗಿ ಹೀರಿಕೊಳ್ಳುವ ವೈದ್ಯನಂತೆ, ತನ್ನ ಸೂಕ್ಷ್ಮಾತಿ ಸೂಕ್ಷ್ಮ ರಂಧ್ರಗಳಿಂದ ಮನುಷ್ಯನ ರಕ್ತವನ್ನು ತನ್ನ ಆಹಾರಕ್ಕಾಗಿ ಹೀರಿಕೊಂಡು ಸುಖಿಸುವ ತಿಗಣಿಗಳು ಇವು. ಆದಷ್ಟು ನಮ್ಮ ಹಾಸಿಗೆಗಳಲ್ಲಿಯೇ ಜೀವಿಸುವ ಕಾಲ ನೂಕುವ ಇವುಗಳ

ಶಾಶ್ವತ ಉಚ್ಚಾಟನೆಗೆ ಹಗಲಿನಲ್ಲಿ ಸುಡು ಬಿಸಿಲಿನಲ್ಲಿ ಹಾಸಿಗೆಗಳನ್ನು ಹಾಕಿ ತಿಗಣೆಗಳ ಮಾರಣಹೋಮ ಮಾಡಲು ನಾವು ಪ್ರಯತ್ತಿಸುತ್ತೇವೆ.ಇಂಥ ಸಂದರ್ಭದಲ್ಲೂ ಕೆಲವಾದರೂ ತಮ್ಮ ಅಸ್ತಿತ್ವ ಉಳಿಸಿಕೊಂಡು, ಮತ್ತೆ ರಕ್ತ ಬೀಜಾಸುರರಂತೆ ಮನಷ್ಯರ ರಕ್ತ ಹೀರಲು ಹೆಣಗುತ್ತವೆ.

ಕೆಲವಾದರೂ ಬಚಾವಾಗಿ ತಲೆದಿಂಬಿನ ಮೂಲೆ ಮುರುಕಟ್ಟಿನಲ್ಲಿ, ಕಟ್ಟಿಗೆಯ ಮಂಚಗಳ ಸಂದುಗೊಂದುಗಳಲ್ಲಿ ಅಡಗಿ ರಕ್ಷಿಸಿಕೊಂಡು, ಊಟವಿಲ್ಲದೆ ಒಣಕಲು ಕಟಿಗೆಯಂತಾಗುವ ಮನುಷ್ಯನಂತಾಗುತ್ತವೆ ಒಂದೆರಡು ದಿನ ತಮ್ಮ ಗಮ್ಯ ಸ್ಥಾನದಿಂದ ಹೊರಗೆ ಬರದೇ, ಕಾರ್ಯಾಚರಣೆ ಮಾಡದೆ ರಕ್ತಹೀನತೆಯಿಂದ ಬಿಳಿ ಸಿಪ್ಪೆಯಂತಾಗಿರುತ್ತವೆ. ಮತ್ತೆ ಒಂದು ರಾತ್ರಿಯೇನಾದರೂ ಅವಕಾಶ ಸಿಕ್ಕರೆ ಅದರಲ್ಲೂ ಕುಂಭಕರ್ಣರಂತವರು ಸಿಕ್ಕರಂತೂ ಸಿಪ್ಪೆಯಂತಿದ್ದ ತಿಗಣೆಯೇ ರಕ್ತಮಯವಾಗಿ ಬಿಡುತ್ತದೆ.

ತಿಗಣೆಯೆಂದರೆ ಆಗಿನ ಕಾಲದ ಜನರ ಜೀವನದ ಅವಿಭಾಜ್ಯ ಅಂಗದಂತಿದ್ದವು. ಅವುಗಳಿಂದ ಕಡಿಸಿಕೊಳ್ಳುವುದು ಒಂದು ರೀತಿಯ ಉಪದ್ರವ ಆದರೆ, ಅವುಗಳ ನಾಶಕ್ಕೆ ಹಗಲು ರಾತ್ರಿ ಶ್ರಮಿಸುವುದು ಇನ್ನೊಂದು ರೀತಿಯ ಬವಣೆ ಆಗಿರುತ್ತಿತ್ತು. ತೊಲೆ ಕಂಬ ಮಾಡು ಕಟ್ಟಿಗೆ ಮಂಚಗಳಿಗೆ ಡಿ.ಡಿ.ಟಿ. ಸ್ಪ್ರೇ ಮಾಡುವುದು, ಹಾಸಿಗೆ ದಿಂಬು ಸ್ವಚ್ಛ ಮಾಡುವುದು ಕಾಲಕಾಲಕ್ಕೆ ಮಾಡಬೇಕಿತ್ತು. ಇಲ್ಲದಿದ್ದರೆ ಅವುಗಳಿಗೆ ರಕ್ತಾರ್ಪಣೆ ಮಾಡಬೇಕಿತ್ತು. ಆಗಿನ ಕಾಲದ ಲಾಜಿಂಗಗಳಲ್ಲಿ ಮತ್ತು ಸಿನಿಮಾ ಮಂದಿರಗಳಲ್ಲಿ ತಿಗಣೆಗಳು ಅಲ್ಲಿಯೂ ಕೂಡ ವಿಜೃಂಭಿಸಿ ಮೆರೆಯುತ್ತಿದ್ದವೆಂದರೆ ಅದು ಅವುಗಳ ವೈಭವದ ಕಾಲಘಟ್ಟವೇ ಸರಿ.

ಕೇವಲ ಮನುಷ್ಯರ ರಕ್ತವನ್ನೇ ಆಹಾರ ಮಾಡಿಕೊಂಡಿದ್ದ ತಿಗಣೆಗಳು ಸರ್ವಾಂತರ್ಯಾಮಿ ಆಗಿರುತ್ತಿದ್ದವು. ತಿಗಣೆಗಳ ಕಡಿತದಿಂದ ಆ ದಿನಮಾನದ ಮನುಷ್ಯರು ಸದಾ ಪ್ರಜ್ಞಾವಸ್ಥೆ ಯಲ್ಲಿರುತ್ತಿದ್ದರೆಂದು ಹೇಳಬಹುದೇನೋ! ಎಲ್ಲಿ ಹೋದವು ಆ ಉಪದ್ರವಿ ಜೀವಿಗಳು?

ತಿಗಣೆಯ ವಾಸಸ್ಥಾನ ಇಡೀ ಮನೆಯ ಎಲ್ಲಿ ಬೇಕೆಂದರಲ್ಲಿ ಸರ್ವವ್ಯಾಪಿಯಾಗಿತ್ತು. ತಮ್ಮ ಆಹಾರಕ್ಕಾಗಿ ಮನುಷ್ಯನ ಪೂರ್ತಿ ದೇಹವನ್ನೇ ಆಶ್ರಯಿಸಿದ್ದವು [ತಲೆ ಒಂದನ್ನು ಬಿಟ್ಟು] ಆದರೆ ಹೇನುಗಳೆಂಬ ಜೀವಿಗಳು ಹಾಗಲ್ಲ, ಮನುಷ್ಯರ ತಲೆಯನ್ನೇ ಆಶ್ರಯಿಸಿಕೊಂಡು ತಲೆಯನ್ನೇ ತಿನ್ನುವ ಕ್ರಾಂತಿಕಾರಿಗಳು. ಇವು ಮನುಷ್ಯರಲ್ಲಿಯೇ ಸ್ವಲ್ಪ ಭಿನ್ನ ಭೇದ ಮಾಡುತ್ತಿದ್ದವು. ಗಂಡಸರಿಗಿಂತ ಹೆಂಗಸರನ್ನು ಜಾಸ್ತಿ ಪ್ರೀತಿ ಮಾಡುತ್ತಿದ್ದವು. ಹೆಂಗಸರಿಗೆ ಡೊಂಟ್ ಕೇರ್ ಮಾಡದೇ ಅವರ ಉದ್ದುದ್ದ ಕೂದಲುಗಳಲ್ಲಿ ನಿರುಮ್ಮಳವಾಗಿರುತ್ತಿದ್ದವು. ತಮ್ಮ ಆಹಾರಕ್ಕೆ ಮತ್ತು ವಂಶಾಭಿವೃದ್ಧಿಗೆ [ಶೀರುಗಳು] ನೀಳ ವೇಣಿಯರ ತಾಣ ಪ್ರಶಸ್ತವೆಂದು ಅವು

ಭಾವಿಸಿರಲಿಕ್ಕೆ ಸಾಕು. ನಾರಿಯರು ಪ್ರತಿದಿನ ತಲೆ ಬಾಚಿಕೊಳ್ಳದೆ ವಾರಕ್ಕೊಮ್ಮೆಯೋ, ಎರಡು ಬಾರಿಯೋ ಬಾಚಿಕೊಳ್ಳುವವರಿದ್ದರೆ ಹೇನುಗಳಿಗೆ ಸುಗ್ಗಿಯೋ ಸುಗ್ಗಿ. ಹೇನುಗಳು ತಲೆ ತಿನ್ನುತ್ತಿದ್ದರೆ ಬೆರಳುಗಳ ಉಗುರುಗಳಿಂದ ಲಯಬದ್ಧವಾಗಿ ಪರಪರ ಕೆರೆಯುವ ಹಿತ ನೋಡಬೇಕು. ಅಕಸ್ಮಾತ್ ಕೆರೆಯುವ ಪರಿಗೆ ಉಗುರ ಸಂದಿಯಲ್ಲಿ ಬಲೆ ಬಿದ್ದ ಹೇನುಗಳಿಗೆ ಮುಕ್ತಿ ಸಿಕ್ಕಂತೆಯೇ ಸೈ. ನೆಲಕ್ಕೆ ಹಾಕಿ ಅದೇ ಉಗುರಿನಿಂದ ವರೆದರೆ ಚಟ್ ಪಟ್ ಎಂದು ಹೇನುಗಳು ಸಾಯುತ್ತಿದ್ದವು.

ಈ ಹೇನುಗಳ ಸಮೃದ್ಧತೆಯಿಂದ ಹೆಂಗಸರಿಗೆ ಕೆಲಸ ಮಾಡಲು ಹಿಂಸೆ. ಬಿಟ್ಟೂ ಬಿಡದಂತೆ ತಲೆ ಕೆರೆಯುವುದು ಒಂದು ರೀತಿಯಾದರೆ, ಹೋದಲ್ಲಿ ಬಂದಲ್ಲಿ ಬೇರೆಯವರ ಎದುರಿಗೆ ತಲೆ ತುರಿಸಿಕೊಳ್ಳುವುದೆಂದರೆ ಇನ್ನೊಂದು ರೀತಿಯ ಅಸಹ್ಯವಾಗಿರುತ್ತಿತ್ತು. ಅದಕ್ಕಾಗಿ ಅವುಗಳ ಸರ್ವ ನಾಶಕ್ಕಾಗಿ ಇಬ್ಬಿಬ್ಬರು ಹೆಣ್ಣು ಮಕ್ಕಳು ಕೂಡಿಕೊಂಡು ತಾಯಿ ಮಗಳೋ, ಅತ್ತೆ ಸೊಸೆಯೋ, ನಾದಿನಿಯರೋ ಸೇರಿಕೊಂಡು ತಮ್ಮ ತಮ್ಮ ತಲೆಯನ್ನು ತಿನ್ನುವುದಲ್ಲದೇ, ತುರಿಕೆಯಿಂದ ತಮಗೆ ಸಾರ್ವತ್ರಿಕವಾಗಿ ಅಸಹ್ಯ ಉಂಟು ಮಾಡುತ್ತಿರುವ ಹೇನುಗಳ ಮಾರಣಹೋಮಕ್ಕೆ ತಯಾರಾಗುತ್ತಿದ್ದರು. ತಲೆಗೆ ಚೆನ್ನಾಗಿ ಕೊಬ್ಬರಿ ಎಣ್ಣೆ ಲೇಪಿಸಿಕೊಂಡು ಒಬ್ಬರು ತಲೆ ಬಗ್ಗಿಸಿ ಕುಳಿತುಕೊಂಡರೆ, ಇನ್ನೊಬ್ಬರು ಕಟ್ಟಿಗೆಯ ಸೀರುಣಿಗೆಯಿಂದ ಬಾಚುತ್ತಿದ್ದರೆ ಹೇನುಗಳು ಕೆಳಗೆ ಪುತು ಪುತು ಉದುರುತ್ತಿದ್ದವು. ಕೆಳಗೆ ಬಿದ್ದ ಹೇನುಗಳು ಇನ್ನೊಬ್ಬರು ಕೈಗಳಿಂದ ಕುಕ್ಕುತ್ತಿದ್ದರೆ ಚಟ್ ಪಟ್ ಎಂದು ಸಣ್ಣ ಪಟಾಕಿಯ ಶಬ್ದದಂತೆ ಸಾವನ್ನಪ್ಪುತ್ತಿದ್ದವು.

ಕೆಲವೊಮ್ಮೆ ಸೀರುಣಿಗೆಯಿಂದ ಎಷ್ಟು ಬಾಚಿದರೂ ಯುದ್ಧದಲ್ಲಿ ಜಾಣ್ಮೆಯಿಂದ ತಪ್ಪಿಸಿಕೊಳ್ಳುವ ಸೈನಿಕರಂತೆ ಅಲ್ಲೊಂದು ಇಲ್ಲೊಂದ ಉಳಿದು ಮತ್ತೇ ತಮ್ಮ ವಂಶಾಭಿವೃದ್ಧಿ ಮಾಡುತ್ತಿದ್ದವು. ಹಳ್ಳಿಗಳಲ್ಲಿ ಹಬ್ಬ ಹುಣ್ಣಿಮೆಗಳಲ್ಲಿ, ಜಾತ್ರೆಗಳಲ್ಲಿ ಮನೆಗೆ ಬೀಗರು ಸ್ನೇಹಿತರು ಬರುವುದು ಪದ್ಧತಿ. ಜಾತ್ರೆ ಹಬ್ಬ, ಕಾರ್ಯಕ್ರಮ ಮುಗಿಸಿಕೊಂಡು ಹೋದ ಮೇಲೆ ಮಹಿಳಾಮಣಿಯರಿಗೆ ತಲೆಯಲ್ಲಿ ಕೆರೆತ ಸುರುವಾದರೆ, "ಆಕಿ ಜೊತೆ ಮಕ್ಕಂಡಿದ್ದೆ ನನ್ನ ತಲ್ಯಾಗೂ ಹೇನು ಆಗ್ಬಿಟ್ಟು ನೋಡು" ಎಂದು ಸರೀಕರ ಜೊತೆಯಲ್ಲಿ ಆರೋಪ ಮಾಡುವದು ಸಹಜವಾಗಿರುತ್ತಿತ್ತು. ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಬೇಸಿಗೆ ರಜೆಗೆಂದು ಹಳ್ಳಿಗೆ ಬರುತ್ತಿದ್ದೆ. ಆಗ ನಾನು ಪರ ಪರ ತಲೆ ಕೆರೆಯುವದನ್ನು ನೋಡಿ ನನ್ನ ತಾಯಿ "ಏ ಬಾರೋ ಯಪ್ಪಾ ಯಾರ್‍ಯಾರೋ ಉಡುಗ್ರು ಸೇರಿ ಅತ್ತತ್ರ ಮಲಗಿಕೊಂಡಿರ್ತೀರಿ, ಹೇನು ಏನಾರ ಆಗ್ಯಾವನ ನೋಡನು ಬಾ" ಎಂದು ಸೀರುಣಿಗೆಯಿಂದ ಬಾಚುತ್ತಿದ್ದಳು. ಒಂದರ್ಧ ಗಂಟೆಯಲ್ಲಿ ಅಸಖ್ಯಾತ ಸೈನಿಕರು ಕೋಟೆಯ ಮೇಲಿನಿಂದ ಬೀಳುವಂತೆ ನನ್ನ ಹಿಪ್ಪಿ ತಲೆಗೂದಲಿನಿಂದ ಪ್ರಾಣಾರ್ಪಣೆ ಮಾಡಿಕೊಳ್ಳುವ ಸೈನಿಕರಂತೆ ಜೈ [ಚಟ್ ಪಟ್] ಎನ್ನುತ್ತಾ ಹೇನುಗಳು ಸಾಯುತ್ತಿದ್ದವು.

ಹೇರಳ ಕೂದಲು ಬೆಳಸುವದೇ ಆಗಿನ ಕಾಲದ ಹೆಂಗಳೆಯರ ಇಷ್ಟ ಮತ್ತು ಪ್ರೀತಿ ಆಗಿತ್ತು. ತಲೆ ತುಂಬಾ ಹೂವು ಮುಡಿಯುವುದು ಇನ್ನೂ ಹಚ್ಚಿನ

ಹವ್ಯಾಸ ಮತ್ತು ಗೌರವ ಆಗಿತ್ತು. ಜಡೆಯೇ ಜಡವೆಂದು ಜರಿಯುವ, ಹೂವುಗಳೇ ಭಾರವೆಂದು ಭಾವಿಸುವ ಬಾಬ್ ಕಟ್ ಸಂಸ್ಕೃತಿಯ ಈಗಿನ ಕಾಲದ ಯುವತಿಯರಿಗೆ, ಹೆಂಗಳೆಯರಿಗೆ ಹೇನುಗಳ ಕಾಟವಾದರೂ ಎಲ್ಲಿಂದ ಬರಬೇಕು?.

**ಡಿ. ರಾಮನಮಲಿ**
ಜುಲೈ ಆಗಸ್ಟ್ 2014ರ ಸಂಕ್ರಮಣ

# ಪರಿಮಳದ ಜಾಡು ಹಿಡಿದು

ಬದುಕು ಹೂವಿನ ಹಾಗೆ, ಸುಂದರ! ಜೀವಿಸುವ ಕ್ಷಣಗಳು ಮಧುರ ಪರಿಮಳದಂತೆ ಸುವಾಸಿತ, ಮಂದಸ್ಮಿತ, ಅನುಪಮ ಅಂತೆಲ್ಲ ಏನೇನೇನೇನೋ ಉಪಮೆಗಳನ್ನು ಕೊಟ್ಟುಕೊಂಡು, ಮಾರುವವರ ಬಳಿ ಹೂಗಳನ್ನೂ ಕೊಂಡುಕೊಂಡು, ಮನೆಗೆ ಬಂದು ಮಡದಿಯ ತಲೆಗೆ (ಕಿವಿಗೆ ಓಲೆ ಇಡಿ ಎನ್ನುವ ಅವರ ಬೇಡಿಕೆಗೆ) ಹೂವಿಟ್ಟು, ಅದೂ ಇದೂ ನೂರಾಎಂಟು ಮಾತಿಟ್ಟು, ಮುತ್ತಿಟ್ಟು, ಅಂತೂ ಇಂತೂ ಕಾವ್ಯ, ಕವನ ಗೀಚಿ, ಕವಿಗಳಾದವರ ಕಾಲದಿಂದ ತುಂಬಾ ದೂರ ಬಂದು ನಿಂತಿದೀವಿ ನಾವಿವತ್ತು. ಈಗಿನ ಕವಿಗಳು, ಮತ್ತವರ ಮಡದಿಯರ ಕತ್ತರಿ ಮುತ್ತು ಇಕ್ಕಿಸಿಕೊಂಡು ಶಾರ್ಟಾದ ಕೇಶಸಂಪತ್ತು, ಇತ್ತು ಒಂದಾನೊಂದು ಕಾಲದಲ್ಲಿ ಅನ್ನುವ ಹಾಗೆ ಮಾಪ‍ರ್ಾಡು ಹೊಂದಿವೆ. ಕೆಲಸ ಮುಗಿಸಿ ಮನೆಗೆ ಬರುವ ದಾರಿಯಲ್ಲಿನ ಹಲ್ಲಿಲ್ಲದ, ಬೊಚ್ಚುಬಾಯ ಮುದುಕಿ ಕಟ್ಟುವ ಹೂಮಾಲೆಯ ಬೆರಗನ್ನು, ಪರಿಮಳವನ್ನು ನಿಮ್ಮ ಮೂಗಿಗೆ ಹಿಡಿದು ಆಸೆಕಂಗಳಿಂದ ?? ಮೊಳಾನಾದ್ರೂ ಒಯ್ದು ಕುಡಪ್ಪಾ ಹೆಂಡ್ತಿಗೆ? ಅಂದ್ರೂ ನಿಮ್ಮ ಮನಸ್ಸು ಒಪ್ಪಲ್ಲ, ಯಾಕಂದ್ರೆ ಬರಿಯ ಹೂವಿಗೆ ಮನೆಯಲ್ಲಿ ಮುನಿಸಿ ಕೂತ ಮಲ್ಲಿಗೆ ಅಪ್ಪಲ್ಲ, ಜಪ್ಪ್ ಅನುವುದಿಲ್ಲ ಅನ್ನುವ ಭಯ!

ಇದೊಳ್ಳೆ ಹೂವಿನ ಪರಿಮಳ ಗಿರಿಮಳ ಅಂತ ಬರೆಯೋಕೆ ತೊಡಗಿ ಗಂಡ ಹೆಂಡ್ರ ಜಗಳ ಲ್ವಾಳ ಲೊಟ್ಟಿ ಅಂತ ಎಲ್ಲೆಲ್ಲೋ ಮೊಳ ಹಾಕಂಗಾಯ್ತಲ್ಲ ಅಂತ! ಅದೇನೇ ಇದ್ದರೂ ಮನೆಯಂಗಳದ ಮಲ್ಲಿಗೆ ಬಳ್ಳಿಯ ತುಂಬ ಇರುಳ ನಕ್ಷತ್ರಗಳ ಹಾಗೆ ಅರಳಿ ನಗುತ್ತಿರುವ ಹೂರಾಶಿಯ ಘಮಕ್ಕೆ ಮನಸೋಲದವ್ರೇ ಇಲ್ಲವೇನೋ? ಪರಿಮಳ ಬರಿಯ ಹೂವಿನದ್ದೇ? ಜೀವಜಗತ್ತಿನ ಅಣುಅಣುವಿನ ಇರುವಿಕೆಯ ಕುರುಹಾಗಿ ಪಸರಿಸಿಕೊಂಡಿರುವ ಈ ಬೆರಗು ಸ್ಪರ್ಶಕ್ಕೆ ಸಿಗದಿದ್ದರೂ ಆಸ್ವಾದಿಸಬಹುದಾದ ಪುನುಗಿನ ಗುನುಗು ಗೀತೆಯೇ ಹೌದು. ಕತ್ತಲ ಪರದೆ ಸರಿದು, ಬೆಳಕಿಣುಕಿ ಒಳಬಂದಾಗ, ಕಣ್ಮುಚ್ಚಿ ಎದ್ದುಕೂತರೆ ನಮ್ಮನ್ನಾವರಿಸಿಕೊಳ್ಳುವ ಪರಿಮಳದ ಪುಳಕಗಳು ಒಂದೆರಡಲ್ಲ. ಕಾಫಿಯ ಘಮ, ದೇವರ ಮನೆಯ ಊದುಬತ್ತಿ ಕರ್ಪೂರಗಳ ಸುಗಂಧ, ಆಗಿನ್ನೂ ಹೊಸಿಲಿಗೆ ಬಂದ ಪತ್ರಿಕೆಯ ಪುಟಗಳ ಘಮ, ಮನೆಮನೆಗೂ ಹೂ ಮಾರಲು ಬಂದಿರುವ ಅಜ್ಜನ ಸೈಕಲ್ಲಿನ ಸವಾರಿಯ ಸುಖ ಸವಿಯುತ್ತಿರುವ ತರಹಾವರಿ ಹೂಗಳ ಘಮ, ಹದವಾಗಿ ಕಾದಿರುವ ಹಾಲು, ಬೆಳಗಿನ ಉಪಹಾರಕ್ಕೆ ಬೇಯುತ್ತಿರುವ ಈರುಳ್ಳಿ, ಮೆಣಸಿನಕಾಯಿಗಳು, ಇವುಗಳ ಸಖ್ಯ ಬೆಳೆಸಿರುವ ಕಾದೆಣ್ಣೆ, ಕಸಗುಡಿಸಿ ಅಂಗಳಕ್ಕೆ ನೀರುಗ್ಗಿದಾಗ ಮಳೆಹನಿದ ನೆಲದ ಕಂಪನ್ನು ಹೊತ್ತುತರುವ ಮಣ್ಣಿನ ಘಮ, ಬೆಚ್ಚನೆಯ ನೀರ ಸುಖಕ್ಕೆ ಸರಿಯಾಗಿ ಮೈತಾಕಿಸಿಕೊಂಡು ಮನೆಯೆಲ್ಲ ಘಮಗುಡಿಸುವ ನಮ್ ನಮೂನೆ ಸೋಪುಗಳ ಘಮ, ತೊಟ್ಟಿಲ ಕೂಸಿನ ಅಭ್ಯಂಗಕ್ಕೆ? ಕಾದು?, ಕಾದು ಬಟ್ಟಲಲ್ಲಿ ತುಂಬಿಟ್ಟಿರುವ ಕೊಬ್ಬರಿ ಎಣ್ಣೆಯ ಘಮ – ಒಂದೇ

ಎರಡೇ ಈ ಘಮಗಳ ಸಾಲುಸಾಲಿನ ಸೊಲ್ಲು. ಮಿಂದು ಬಂದ ಕಂದನನ್ನು ಒಮ್ಮೆ ಎದೆಗೊತ್ತಿಕೊಂಡು ನೋಡಿ, ಬದುಕಿನ ಯಾವ ಸುಖವನ್ನೂ ಆ ಅಪ್ಯಾಯಮಾನ ಸ್ಪರ್ಷಸುಖದೆದಿರು ನಿವಾಳಿಸಿ ಒಗೆಯಬೇಕು. ಸುಮ್ಮನೆ ಉಸಿರು ಒಳಗೆಳೆದುಕೊಳ್ಳುವ ಕ್ರಿಯೆಯೊಂದೇ ಇರಬಾರದಿತ್ತೇ ಅನಿಸುವಷ್ಟು ಚೆಂದ ಈ ಘಮ.

ಒಂದೊಂದು ಘಮಕ್ಕೂ ಒಂದು ನೆನಪಿನ ದೋಣಿ ತೇಲಿಬರದಿದ್ದರೆ ಕೇಳಿ. ಎಲ್ಲಿಗೋ ಹೊರಟಿರುತ್ತೀರಿ. ರೊಯ್ಯಂನೆ ಅಗರಬತ್ತಿಯ ಲಾರಿಯೊಂದು ನಿಮ್ಮಪಕ್ಕದಲ್ಲಿಂದ ಹಾದುಹೋಗುತ್ತದೆ. ಅದರಿಂದ ಹೊರಟ ತಿಳಿಯಾದ ಊದುಬತ್ತಿಗಳ ಪರಿಮಳ ನಿಮ್ಮ ಮನಸ್ಸನ್ನು ಮುದಗೊಳಿಸುವುದಷ್ಟೇ ಅಲ್ಲ, ನಿಮ್ಮ ನೆನಪುಗಳನ್ನು ತಾಜಾಗೊಳಿಸುತ್ತದೆ ಕೂಡ. ನಾನು ನಮ್ಮೂರಿನ ಗುಡಿಯಂಗಳವನ್ನು ತಲುಪಿಬಿಟ್ಟಿರುತ್ತೇನೆ. ಹತ್ತಿಪ್ಪತ್ತು ವರ್ಷಗಳ ಕೆಳಗೆ ಈಗಿರುವಷ್ಟು ಹೂವುಗಳ ಯಾವ ಬಗೆಯ ಅಲಂಕಾರ ಸುಖವಿರದಿದ್ದರೂ, ನಮ್ಮ ಗುಡಿಯ ರಾಮ, ಸೀತೆ, ಹನ್ಮಂತ, ಈಶ್ವರ, ಅಕ್ಕಮಹಾದೇವಿ ಮುಂತಾದ ದೇವಾನುದೇವತೆಗಳಿಗೆ ಅಂಗಳದಲ್ಲಿ ಇದ್ದ ಕಣಗಿಲೆ ಹೆಚ್ಚೆಂದರೆ ಐದು ದಳಗಳ ದಾಸವಾಳದ ಬಿಟ್ಟರೆ ಮತ್ತೊಂದು ಹೂವಿನ ಹೆಸರೂ ಗೊತ್ತಿಲ್ಲದ ಆ ಕಾಲದಲ್ಲಿ ಅಪರೂಪಕ್ಕೆ ಉತ್ಸವಗಳು ಹಬ್ಬಗಳು ಬಂದುವೆಂದರೆ ಮಾತ್ರ ಸುಗಂಧರಾಜ ಹೂವಿನ ಅಲಂಕಾರ. ಈಗಲೂ ಆ ಹೂವಿನ ಪರಿಮಳ ತೇಲಿಬಂದರೆ ಮನಸ್ಸು ತಲುಪುವುದು ಉತ್ಸವಗಳ ಸಡಗರವನ್ನು ಇಲ್ಲಾ, ಮದುವೆ ಮನೆಯಲ್ಲಿ ಸಿಂಗರಿಸಿಕೊಂಡು ಶುಭಾಶಯಗಳನ್ನು ಸ್ವೀಕರಿಸುತ್ತಿರುವ 70–80ರ ದಶಕದ ಮದುಮಕ್ಕಳುಗಳ ಸಂಭ್ರಮವನ್ನು.

ಶಾಲೆಗೋ, ಕಾಲೇಜಿಗೋ ಅತಿಥಿಗಳು ಬಂದಿದ್ದರೆ ಹೆಡ್ಮೇಷ್ಟ್ರು ತರಾತುರಿಯಲ್ಲಿ ಮೊಮೀನ್ ಮಾಮನ ಅಂಗಡಿಗೆ ಸೀನಿಯರ್ ಹುಡುಗನೊಬ್ಬನನ್ನು ಓಡಿಸಿ ತರಿಸಿಕೊಂಡ, ನಡ್ನಡುವೆ ಕೆಂಪುಗುಲಾಬಿಯ ಗೆಳೆತನಕ್ಕೆ ಸಾಕ್ಷಿಯಾಗಿ, ಬಾಡದೇ ಇರಬಾರದೇ ಬಹುದಿನಗಳ ಕಾಲ ಅನಿಸುವಂತೆ ಮಾಡಿ, ಹುಚ್ಚು ಹಿಡಿಸುವ ಗಂಧ ಬೀರುತ್ತಿರುತ್ತಿದ್ದ ಸುಗಂಧರಾಜ, ಹೂಗಳ ರಾಜನೇ ಸೈ! ಒಮ್ಮೆಯಂತೂ ಯಾವುದೋ ಕಾರ್ಯಕ್ರಮದಲ್ಲಿ ನನ್ನ ಕತ್ತನ್ನೂ ಸುತ್ತಿಕೊಂಡು, ಸಂಭ್ರಮದ ಕ್ಷಣಗಳಿಗೆ ನಾನು ಸಾಕ್ಷಿಯಾಗುವ ಹಾಗೆ ಮಾಡಿದ್ದ ಈ ಸುಗಂಧಿನೀ ಹಾರ ಅಲ್ಲಿಂದಾಮೇಲೆ ಎಷ್ಟೋ ದಿನಗಳವರೆಗೂ ಮನೆಯ ಮೂಲೆಯ ಮೊಳೆಯೊಂದಕ್ಕೆ ನೇತಾಡಿಕೊಂಡು, ಹೋಗುತ್ತ ಬರುತ್ತ ಅದರ ಘಮಕ್ಕೆ ಮೂಗೊಡ್ಡುವ ಖುಷಿಗೆ ನಮ್ಮನ್ನು ಈಡು ಮಾಡಿದ್ದನ್ನು ನೆನೆದರೆ ನಗುವೇ ಬರುತ್ತದೆ. ಜೊತೆಗೇ ನೆನಪಾಗುತ್ತದೆ ಇವನ ಜೊತೆಗಿನ ನಿಶ್ಚಿತಾರ್ಥದ ಕ್ಷಣಗಳು. ನಾವಿಬ್ಬರೆ ಸಂತೆಗೆ ಹೂಹಾರ ತರುವುದರಿಂದ ಹಿಡಿದು, ಮನೆಯ ಹಿರಿಯರು ಕೊಟ್ಟಿದ್ದ ಪಟ್ಟಿಯ ಸಾಮಾನುಗಳನ್ನು ತರಲು ಸಡಗರದಿಂದ ಓಡಾಡಿ, ದುಂಡುಮಲ್ಲಿಗೆ ಹಾರಗಳನ್ನು ಅದಲು ಬದಲು ಮಾಡಿಕೊಳ್ಳಲು ಹೇಳುವತನಕವೂ ಪರಿಮಳದ ಪುಳಕಕ್ಕೆ ನಮ್ಮನ್ನು ಒಪ್ಪಿಸಿಕೊಂಡು ಬಿಟ್ಟಿದ್ದೆವು. ಎಲ್ಲ ಮುಗಿದು ಎಷ್ಟೋ ಹೊತ್ತಿನ

ತನಕವೂ ನಾನು ನನ್ನ ಕೊರಳ ಹಾರವನ್ನು ಎತ್ತಿಡದೇ ಹಾಕಿಕೊಂಡು, ಸಂಕೋಚದಿಂದ ಎತ್ತಿಟ್ಟ ಆತನನ್ನು ಮರೆಯಲ್ಲೇ ನೋಡುತ್ತ ರೋಮಾಂಚನ ಅನುಭವಿಸಿದ್ದೆ. ಎಲ್ಲ ಚೆನ್ನಾಗಿರುವಾಗ ಮದುವೆ ನಿಕ್ಕಿಯಾಯಿತೆಂದರೆ ಸೊಗಸಿರುವುದಿಲ್ಲ. ಹತ್ತಾರು ನೋವು, ಸಂಕಟಗಳ, ಸವಾಲುಗಳ ನಡುವೆ ದಿಟ್ಟವಾಗಿ, ಅನುರಾಗವನ್ನಷ್ಟೇ ಒಡವೆ ವಸ್ತು ಮಾಡಿಕೊಂಡು ಮದುವೆಯಾಗಿದ್ದಕ್ಕೋ ಏನೋ ಇವತ್ತಿಗೂ ದುಂಡುಮಲ್ಲಿಗೆ ಪರಿಮಳ ತೇಲಿಬಂದರೆ ನೆನಪು ನಿಶ್ಚಿತಾರ್ಥದ ನೆರಳಿಗೆ ಒರಗುವುದು!

ನಾನು ಶಾಲೆಯಲ್ಲಿ ಓದುತ್ತಿರುವಾಗ ಬಂದ ಅತಿಥಿಗಳಿಗೆ ನಮ್ಮ ಮೇಷ್ಟ್ರುಗಳು ಮೈಯೆಲ್ಲ ಗೌರವವಾಗಿ ಹೂಹಾರ ಹಾಕುವುದು ಅವರುಗಳು ಅದನ್ನು ಅರ್ಧಕ್ಕೆ ನಯವಾಗಿ ಅಡ್ಡಹಿಡಿದು, ಟೇಬಲ್ಲಿಗೆ ಇಟ್ಟುಬಿಡುತ್ತಿದ್ದುದನ್ನು ನೋಡಿ ಸಿಟ್ಟು ಬರುತ್ತಿತ್ತು. ಹಾಕಿಕೊಂಡೇ ಕೂರಲು, ಮಾತಾಡಲು ಇವರಿಗೇನು ಕಷ್ಟ ಅನಿಸುತ್ತಿತ್ತು. ಆಕಸ್ಮಾತ್ ಅತಿಥಿಗಳು ಹೊರಟುನಿಂತಾಗ ಹೂಹಾರದ ಭಾರವೇಕೆ ಅಂದುಕೊಂಡೋ, ಕೆಲಸಕ್ಕೆ ಬಾರದ ಹಾರವೆಂದೋ, ಮುಂದೆಯೇ ಕಣ್ಣರಳಿಸಿ ಕೂತಿರುತ್ತಿದ್ದ ನಾವು ಹುಡುಗಿಯರ ಕೈಗೆ ಆ ಸುಗಂಧಮಾಲಿಕೆಯನ್ನು ಒಪ್ಪಿಸಿಬಿಟ್ಟರಂತೂ, ಶಾಲೆಗೆ ವಾರ ರಜೆ ಕೊಟ್ಟಷ್ಟೇ ಹಿಗ್ಗನ್ನು ಮುಕ್ಕಿಕೊಳ್ಳುತ್ತಿದ್ದೆವು. ಕಂಪಾಸುಬಾಕ್ಸಿನಲ್ಲಿಟ್ಟುಕೊಂಡಿರುತ್ತಿದ್ದ, ಪೆನ್ಸಿಲು ಚೂಪು ಮಾಡಿಕೊಳ್ಳುವ ಏಕೈಕ ಆಯುಧ ಬ್ಲೇಡು ತನ್ನ ಅಂಗಿ ಕಳಚಿಕೊಂಡೀಚೆಗೆ ಬಂದು, ಹಾರವನ್ನು ಸಮನಾಗಿ ಕತ್ತರಿಸಲು ಅನುವು ಮಾಡುತ್ತಿತ್ತು. ಬಿಗಿಯಾಗಿ ಮೇಲಕ್ಕೆತ್ತಿ ಕಟ್ಟಿಸಿಕೊಂಡು, ರಿಬ್ಬನ್ನಿನ ಡೂಪ್ಲಿಕೇಟ್ ಹೂದಳಕ್ಕಷ್ಟೇ ಸಮಾಧಾನ ಪಟ್ಟುಕೊಂಡಿರುತ್ತಿದ್ದ ನಮ್ಮ ಜಡೆಗಳೀಗ ಸೌಗಂಧಿಕಾಹಾರದ ಘಮದಿಂದ ಕಂಗೊಳಿಸುತ್ತಿದ್ದುವಷ್ಟೇ ಅಲ್ಲ, ನಮ್ಮ ನಮ್ಮ ತಲೆಗಳ ಎಣ್ಣೆಯ ಕಮಟು ವಾಸನೆಯನ್ನು ಆ ಒಂದು ದಿನದ ಮಟ್ಟಿಗಾದರೂ ಮರೆಮಾಡಿರುತ್ತಿದ್ದವು. ಒಮ್ಮೊಮ್ಮೆ ತಲೆತುಂಬ ಹೂಮುಡಿದುಕೊಂಡು ಹಿಂದೆಮುಂದೆ ಸುತ್ತಾಡಿದರಂತೂ ಅಜ್ಜಿ 'ಲೇ ದುಗ್ಗಾಣಿ, ಮ್ಯಾಕಿ, ಕುರಿ ಬಂದು ತಲಿ ತಿಂದುಗಿಂದಾವು?' ಅಂತ ಹೆದರಿಸಿಬಿಡುತ್ತಿತ್ತು.

ಕ್ಲಾಸಿನಲ್ಲಿ ಯಾರಾದರೂ ಅಲ್ಲೋಲಕಲ್ಲೋಲ ಎಂಬಂತಹ ಪರಿಮಳ ಹರಡಿದರಂತೂ ಚಕಚಕ ನಾವುಗಳು ಒಳಗಿಂದ ಕಂಪಾಸ್ಬಾಕ್ಸು ತೆಗೆದು, ಅದರಲ್ಲಿ ಹರಡಿರುತ್ತಿದ್ದ ವಾಸು, ಸೈಕಲ್ ಅಗರಬತ್ತಿಗಳ ಚೂರು, ಇಲ್ಲಾಂದರೆ ಘಮಗುಡುವ ಸೋಪಿನ ಕವರಿನ ಘಮಕ್ಕೆ ಮೂಗೊಡ್ಡಿ ಕ್ಲಾಸಿನ ವಾಸನೆಯನ್ನು ಮರೆಯುತ್ತಿದ್ದೆವು. ಶ್ರಾವಣಮಾಸ ಮುಗಿಯುವ ತನಕವೂ ತಲೆಗಳಿಗೆ ಹಡಗಲಿ ಮಲ್ಲಿಗೆಯ ಅಲಂಕಾರವಷ್ಟೇ ಅಲ್ದೇ ಕೆಲವರಿಗೆ ಮೊಗ್ಗಿನ ಜಡೆಯ ಲಕ್ಕು, ಲುಕ್ಕು ಎರಡೂ ಸಿಕ್ಕಿರ್ತಿದ್ವು. ಬಿಡುವಿರದ ಬಸವನಗುಡಿಯ ದುಬಾರಿ ಹೂಲೋಕದಲ್ಲಿ ತಿರುಗಾಡುತ್ತಿರುವಾಗಲೂ ಎಲ್ಲೋ ಮೂಲೆಯಲ್ಲಿ ಬಿದಿರಿನ ಬುಟ್ಟಿಯಲ್ಲಿ ಅಂಗಾತ ಸುತ್ತಿಕೊಂಡಿರುವ ಹಡಗಲಿ ಮಲ್ಲಿಗೆಯ ಕಂಪು, ಸೊಂಪಾದ ಮನ ತವರಿಗೆ ಜಿಗಿಯಲು ಪುಟಿಗೆ ನೀಡೇ ಆಗಬೇಕು.

ಅಜ್ಜನ ಮನೆಗೆ ಹೋದಾಗ ಬರುವ ಜಾತ್ರೆಗೆ ಅಮ್ಮನ ಅಮ್ಮ ನಡುಬಗ್ಗಿಸಿ ಕುಂತುಕೊಂಡು ದುಂಡಿಕಲ್ಲಿನಲ್ಲಿ ಮಾದ್ಲಿಗೆ ಬೆಲ್ಲ ಕೂಡಿಸುವ ಚಿತ್ರಣ ಕಟ್ಟಿಕೊಡುವ ನೆನಪು ಮಾದಲಿಯ ಸವಿಯಷ್ಟೇ ಅನನ್ಯವಾದುದು. ಯಾಮಾರಿಸಿ ತಿಂದೇನೆಂದರೂ ಕಣ್ಣಿಬೆಲ್ಲ ನಮ್ಮ ಕೈ ಮತ್ತು ಕಣ್ಣುಗಳ ನಿಲುಕಿನಿಂದ ಬೇಕಾದಷ್ಟು ದೂರವೇ ಇರುತಿತ್ತು. ಲಯಬದ್ಧವಾಗಿ ದಡುಂ ದುಡುಂ ಅಂತ ದುಂಡಿಕಲ್ಲಲ್ಲಿ ಉರುಳಿಸಿ ಉರುಳಿಸಿ ಗೋಧಿಯ ರೊಟ್ಟಿಯೂ, ಪೇಟೆಯ ಬೆಲ್ಲವೂ ಮಿಲನವಾಗುವ ಚೆಂದಕ್ಕೆ ಕೇವಲ ನಮ್ಮ ಮೂಗಿನ ಹೊಳ್ಳೆಗಳು ಮಾತ್ರ ಸಾಕ್ಷಿಯಾಗಿರುತ್ತಿದ್ದವು. ಏನಿದ್ದರೂ ಜಾತ್ರೆ ಬರಬೇಕು, ದೇವರಿಗೆ ಎಡೆಯಾಗಬೇಕು, ಅಮ್ಮನ ಮೂಡು ಚೆನ್ನಾಗಿರಬೇಕು – ನಮ್ಮ ತಟ್ಟೆಗಳಿಗೆ ಮಾದಲಿ ಎಂಬ ಮಾಂತ್ರಿಕ ತಿನಿಸು ಅಡಿಯಿಡುವುದಕ್ಕೆ. ತುಪ್ಪವೋ, ಕೆನೆಹಾಲೋ ಯಾವುದೂ ಸೈ ಬೆರೆತು, ನಾವುಗಳು ಮೈಮರೆತು ನಮ್ಮ ನಾಲಗೆಗೆ ಮೆತ್ತಿಕೊಳ್ಳುತ್ತಿದ್ದ ಮಾದಲಿಯ ಘಮ ಮಾಸದ ನೆನಪು. ಇದರ ಜೊತೆಗೆ ಚಿಗವ್ವಂದಿರು ಮನೆಯೆಲ್ಲ ಸಗಣಿನೀರಿನಿಂದ ಸಾರಿಸಿ, ಚಿತ್ತಾರ ಬಳಿದು, ಬಳಿಕ ನಮ್ಮ ಹಿಡಿದು, ಸವುಳಿನಿಂದ ತಲೆತೊಳೆದು, ಎಣ್ಣೆಮೆತ್ತಿ ಜಡೆಬಿಗಿದು, ದಪ್ಪಮಲ್ಲಿಗೆ ಮಾಲೆ ಇಟ್ಟು, ಪಾಂಡ್ಸ್ ಪೌಡರು ಮೆತ್ತಿದರೆಂದರೆ ನಮ್ಮ ಮೇಕಪ್ಪು ಮುಗಿಯಿತೆಂದು, ನಾವು ಜಾತ್ರೆಗೆ ಹೊರಡಬಹುದೆಂದು ಅರ್ಥ.

ಬೇಲದ ಹಣ್ಣಿಗೆ ಬೆಲ್ಲ ಬೆರೆಸುವ ಹೊತ್ತಿಗೆ ತೇಲಿದ್ದು ಹಗರಿಗಜಾಪುರ ಮತ್ತು ಹರಾಳವೆಂಬ ಹಳ್ಳಿಯ ನಡುವೆ ಇರುವ ಹಗರಿಯದಂಡೆಯ ಕ್ಯಾದಿಗಿ ಗಿಡಗಳ ನೆನಪಿನ ಸಾಲು, ಅಲ್ಲಿ ಹೋದರೆ ಹಾವು ಇರ್ತಾವು ಅನ್ನುವ ಹಿರಿಯರ ವಾರ್ನಿಂಗುಗಳು ತಾವೂ ನೆನಪಾಗಿ ಕ್ಯಾದಿಗಿಯ ಘಮವನ್ನೂ ನೆನಪಿಸಿದವು. ಊರ ದಾರಿಯ ತುಂಬ ಬೇಲದ ಮರಗಳು. ಕಾಯಾಗಿರಲಿ ಚಟ್ನಿಗೆ, ಹಣ್ಣಾಗಿರಲಿ ಬೆಲ್ಲಕೆ ಜೊತೆಯಾಗಿ ಸಿಗುವ ಬೇಲ ನೆನಪಿನ ಆಲಕ್ಕೆ ಮತ್ತೊಂದು ಬಿಳಿಲಾಯಿತು. ಪಂಚಮಿಯ ಉಂಡಿಗಳ ಡಬ್ಬಿಯೇ ಹೇಳೀತು ಶ್ರಾವಣ ಮಾಸವಿದು ಅಂತ!

ಸಣ್ಣವರಿದ್ದಾಗ ನಾನೂ, ಅಕ್ಕನೂ ಬಿಂಕ ಬಿಟ್ಟು, ಮುಲಾಜು ಮರೆತು, ನಾಚಿಕೆ ಎಂದರೇನೆಂದು ಗೊತ್ತುಕೂಡ ಮಾಡಿಕೊಳ್ಳದೇ, ಅಂಜದೆ, ಅಳುಕದೆ ಸಿಕ್ಕವರ ಮನೆಯ ಅಡ್ಡಗೋಡೆ ಏರಿ, ಜಿಗಿದು, ಇದ್ದರೆ ಬುಟ್ಟೀತುಂಬಾ, ಇಲ್ಲಾ ಹಾಕಿಕೊಂಡಿರುತ್ತಿದ್ದ ಅಂಗಿಯ ಒಡಲಿನ ತುಂಬಾ ಕೇಳಿ, ಕಿತ್ತು ಹೂ ತುಂಬಿಸಿಕೊಂಡು ಬಂದು, ಜತನದಿಂದ ಕುಂತು, ಕಟ್ಟಿ ಮುಡಿದು ಸಂಭ್ರಮಿಸಿದ ದಿನಗಳ ಲೆಕ್ಕವಿಟ್ಟವರಾರು? ನಾವಿದ್ದ ಮನೆಯ ಹಿತ್ತಿಲಲ್ಲೂ ನಾವೇ ನೆಟ್ಟು ಬೆಳೆಸಿದ್ದ ಮಲ್ಲಿಗೆ, ಕನಕಾಂಬರ, ಗುಲಾಬಿ ಹೂಬಳ್ಳಿಗಳೂ ಕೂಡ ನಮ್ಮ ಹುಚ್ಚಿಗೆ ಕಿಚ್ಚು ಹತ್ತಿಸುವ ಹಾಗೆ ಅರಳಿರುತ್ತಿದ್ದವು. ನಾವೂ ಮುಡಿದು, ಅಕ್ಕಪಕ್ಕದವರಿಗೂ ಕೊಟ್ಟು, ಇನ್ನೂ ಉಳಿಯುವಂಥ ಹೂರಾಶಿಗಳ ಸುರಿಯುತ್ತಿದ್ದ ಗಿಡಗಳ ಮೇಲೆಲ್ಲ ಒಮ್ಮೆ ಅಕ್ಕ ರಾಸಾಯನಿಕ ಗೊಬ್ಬರ ಕಲೆಸಿ, ಬರೋಬ್ಬರಿ ಗಿಡಗಳ ಮೇಲೆಲ್ಲ ಮಳೆಸುರಿವ ಹಾಗೆ ಸುರಿಸಿ ಮುಂದೆ ಮೂರೇ ದಿನದಲ್ಲಿ ಅವೆಲ್ಲ ಇದ್ದವೋ

ಇಲ್ಲವ್ೋ ಎಂಬಂತೆ ಒಣಗಿಹೋಗುವ ಹಾಗೆ ಮಾಡಿದ್ದಳು. ಗಿಡದ ಬುಡಕ್ಕೆ ಬೀಳಬೇಕಾಗಿದ್ದ ಗೊಬ್ಬರ ಬೀಳಬಾರದ ಕಡೆಗೆಲ್ಲ ಬಿದ್ದು, ಒಣಗಿಹೋದ ಗಿಡಗಳ ಮುಂದೆ ಕೂತು ಹೋ ಅಂತ ಅಳೂ ಅಳೂ ಅಳುವುದೇ ಕೆಲಸವಾಗಿತ್ತು. ಅಡಿಗೆಯಮನೆಯ ಅಮ್ಮನ ರೇಡಿಯೋದಲ್ಲಿ ಅದಕ್ಕೆ ಸರಿಯಾಗಿ “ಬಾಡಿ ಹೋದ ಬಳ್ಳಿಯಿಂದ ಹೂವು ಅರಳಬಲ್ಲುದೇ” ಗೀತೆ ಇದುವರೆಗೆ ಪ್ರಸಾರವಾಯಿತು ಅಂತ ದನಿ ಉಲಿಯುತ್ತಿದ್ದರೂ ನಮಗದು ಅಕ್ಷರಶಃ ಶೋಕಗೀತೆಯಾಗಿಹೋಗಿತ್ತು! ವರ್ಷಾನುಗಟ್ಟಲೆ ನಮ್ಮ ಕನಸುಗಳಲ್ಲಿ ಆ ಹೂಗಿಡಗಳು ಮೈತುಂಬಿಕೊಂಡು ನಿಂತಿರುತ್ತಿದ್ದವು.

ಎಷ್ಟು ಬಗೆಯ ಸುವಾಸನೆಗಳು ಬದುಕಿಗೆ. ಕಠೋರವೆನಿಸುವ ಸಾವಿನ ಮನೆಯ ನಿರ್ವಾತವನ್ನು, ಮೌನವನ್ನು ಸಹನೀಯವಾಗಿಸುವುದು ಕೂಡ ಏಳದ ನಿದ್ದೆಗೆ ಸರಿದಿರುವ ಜೀವದ ಮೇಲೆ ಹೊದಿಸಿರುವ ಹೂವಿನ ಕೌದಿ ಹಾಗೂ ಅದನ್ನು ಆವರಿಸಿರುವ ಪರಿಮಳ. ?ಇರುವವರು ಬರದಂತೆ ಎಲ್ಲಿ ಹೋಗುವರು?? ಎಂಬ ಹಾಡಿಗೆ ಹೂವು ಬಾಡಿಹೋದರೂ ಉತ್ತರ ಸಿಗದು. ಹೂವಿನ ಹಾಗೆ ಬದುಕಿದ ಹುಡುಗಿಯ ಜೀವ ಕೊನೆಯಾದಾಗಲೂ ಕೊನೆಗೆ ಸಿಂಗರಗೊಳ್ಳುವಳಾಕೆ ಹೂವಿನಿಂದಲೇ. ಬದುಕಿನ ತೊಟ್ಟಿಲಿಗೆ ಬಂದು, ಕಡೆಗೊಮ್ಮೆ ಮರಳಿ ಬಾರದ ಲೋಕದ ಮೆಟ್ಟಿಲು ಏರಿ ಹೋಗುವ ಜೀವಗಳು ಮತ್ತೆ ಹೂಗಳಾಗಿ ಹುಟ್ಟಿ ಬಂದರೆಷ್ಟು ಚೆಂದ! ಎಂಬುದಷ್ಟೇ ನಾವು ಹಾಡುವ ಕವಿತೆಯಾಗಬಹುದು, ಕಡೆಯವರೆಗೂ!

**ಛಾಯಾ ಭಗವತಿ**

ಸಖಿ 15 ಅಕ್ಟೋಬರ್2014

# ನಗರದ ಒಡಲಿನ ಅನ್ನದ ಬುತ್ತಿಗಳು

ಕೆ.ಆರ್. ಮಾರ್ಕೆಟ್ಟಿನ ಗೌಜು – ಗದ್ದಲದ ವ್ಯಾಪಾರದೊಳಗೆ ನುಸುಳಿ ಬಸ್ಸು ಹಿಡಿಯುವ ಧಾವಂತದಲ್ಲಿದ್ದವನಿಗೆ ಕೊರಗರ ದ್ಯಾವಣ್ಣ ಮುಖಾಮುಖಿಯಾಗಿದ್ದ. ನನ್ನೂರ ನೆತ್ತಿಯ ಮೇಲೆ ಮಳೆಯ ಮಾರುತಗಳು ಕಾಣಿಸಿಕೊಂಡದ್ದೇ ತಡ 'ಕೊಡೆ, ಕೊಡೆ ರಿಪೇರಿ...ಕೊಡೆ ರಿಪೇರಿ...' ಬಾಗಿಲ ಹಿಂಬದಿಯ ಗೂಟದಲ್ಲಿನ ತೂಗಾಡುವ ಕೊಡೆಗಳಿಗೆ ಈ ವರುಷದ ಮಳೆಯನ್ನು ಎದುರಿಸುವ ಬಲ ತುಂಬುವವ ಈತ. ಹರಿದ ಕೊಡೆಯ ಬಟ್ಟೆ ಹೊಲೆದು, ಬಾಗಿದ ಮೂಳೆಗಳ (ಕೊಡೆಕಡ್ಡಿ) ನೆಟ್ಟಗೆ ಮಾಡಿ ಒಪ್ಪ ಓರಣ ಮಾಡುವ ಕರ್ಮಯೋಗಿ. ಋತುಮಾನಕ್ಕನುಗುಣವಾಗಿ ಹೊಟ್ಟೆಹೊರೆಯುವ ಕಲೆ ವಂಶಪಾರಂಪರ್ಯವಾಗಿಯೇ ಸಿದ್ಧಿಸಿಕೊಂಡ ಮನೆತನದಲ್ಲಿ ಹುಟ್ಟಿದವ.

ಮಳೆಗಾಲದಲ್ಲಿ ಕೊಡೆ ರಿಪೇರಿಯಾದರೆ, ಬೇಸಿಗೆಯಲ್ಲಿ ಬೊಂಬಾಯಿ ಮಿಠಾಯಿ (ಅಜ್ಜಿ ಕೂದಲು), ಚಳಿಗಾಲದಲ್ಲಿ ಮತ್ತೊಂದು ಕಸುಬು... ಜಿಲ್ಲಾ ಕೇಂದ್ರವನ್ನೇ ನೋಡದ ಇಂತಿಪ್ಪ ದ್ಯಾವಣ್ಣ, ಬೆಂಗಳೂರು ಸೇರಿದ್ದು ಯಾವಾಗ? ಒಬ್ಬನೇ ಬಂದನೇ, ಹೆಂಡಿರು ಮಕ್ಕಳೂ ಬಂದವೇ...? ಚಕ್ರದಂತೆ ಸುತ್ತಿದ್ದ ನನ್ನ ಯೋಚನಾ ಲಹರಿಯನ್ನು ಮುಖಚರ್ಯೆಯ ಬದಲಾವಣೆಯಿಂದಲೇ ಗುರುತು ಹಿಡಿದಿದ್ದ ಅವ. ಕೆಂಪು ಹಲ್ಲುಗಳ ಸಂದಿಯಲ್ಲಿ 'ಅರೆ...ಬುದ್ಧಿ....' ಮುಗುಳ್ನಗು ಮಿನುಗಿತ್ತು. 'ಆರು ತಿಂಗಳ ಮೇಲಾತು, ಸೇರಿ... ಬೆಂಗಳೂರನ್ನ. ಕಷ್ಟವೇನಲ್ಲ... ಹೊಟ್ಟೆ ಹೊರೆಯೋದು. ನಮ್ಮ ಯೋಗ್ತೆ ಅನುಸಾರ ಕೆಲಸ ಸಿಕ್ಕುತ್ತೆ...ಊರನಾಗ ಮಳೆ– ಬೆಳೆ ಕಡಿಮೆ. ಕಸುಬು ನನ್ನ ಹೊಟ್ಟೆ ತುಂಬಿಸ್ತಿರಲಿಲ್ಲ. ಬೆಂಗಳೂರ್ ಸೇರಿಬಿಟ್ಟೆ. ದುಡಿಯೋ ಮಂದಿಗೆ ಹೊಟ್ಟೆ ಬಟ್ಟೆಗೆ ಇಲ್ಲಿ ಕೊರತೆ ಇಲ್ಲ.

ಮನೆಯವಳೂ ಕೆಲಸಕ್ಕೆ ಹೋಗುತ್ತಾಳೆ...' ತಾನು ತೊಟ್ಟಿದ್ದ ಸೆಕ್ಯೂರಿಟಿ ಗಾರ್ಡಿನ ಬಟ್ಟೆಯನ್ನು ಮೇಲಿಂದ ಕೆಳಗೊಮ್ಮೆ ನೋಡಿ, ನಾನೂ ದಿಟ್ಟಿಸುವಂತೆ ಗಮನ ಸೆಳೆದ. 'ಅಲಾ... ಮಗನೇ, ನಿನ್ನದೇನೋ... ಮಳೆ ಇಲ್ಲದ ಬೆಳೆ. ಈ ಊರಾದ್ರೇನೂ ಮುಂದಿನ ಊರಾದ್ರೇನೂ. ದಿನಕ್ಕ ನಾಲ್ಕೈದು ಕಡೆ ತಿರುಗಿದರೆ, ನಿನ್ನ ಜೀವನಕ್ಕೆ ತಾಪತ್ರಯವಿಲ್ಲ. ನಮ್ಮ ಜಮೀನು ನಿನ್ನ ಉದ್ಯೋಗ ಎರಡೂ ಸಮ' ಕೊಡೆ ರಿಪೇರಿ ಮಾಡಿದಾಗ ಅಜ್ಜ ತಾನು ಅಂದುಕೊಂಡಿದ್ದಕ್ಕಿಂತ ಹೆಚ್ಚು ಹಣವನ್ನು ದ್ಯಾವಣ್ಣನಿಗೆ ಸಂದಾಯ ಮಾಡುವುದು ಅನಿವಾರ್ಯವಾದಾಗ ಹೇಳುತ್ತಿದ್ದ ಮಾತು ನನ್ನ ನೆತ್ತಿಗೆ ಆ ಕ್ಷಣ ವ್ಯಂಗ್ಯದಂತೆ ಕುಕ್ಕಿದವು. ಅಂಗೈ ಅಗಲ ತೋಟ – ತುಡಿಕೆ ಇಲ್ಲದ ದ್ಯಾವಣ್ಣನಿಗೂ ಮಳೆ – ಬೆಳೆಗೂ ಎತ್ತಣದಿಂದ ಎತ್ತ ಸಂಬಂಧವಯ್ಯ...

ನಾಲ್ಕಕ್ಷರವೂ ನಾಲಿಗೆಯ ಮೇಲಿಲ್ಲದ, ಯಾವುದೇ ವೃತ್ತಿಯನ್ನು ವರ್ಗ – ಜಾತಿ ಮತದ ಚೌಕಟ್ಟುಗಳಿಗೆ ಸಿಕ್ಕಿಸದ, ಮುಷ್ಟಿ ಅನ್ನ ಸೇರುವ ಹೊಟ್ಟೆಯಿಂದ ಹಿಡಿದು ಡೊಳ್ಳುಹೊಟ್ಟೆಯನ್ನು ತುಂಬಿಸುವ ಬೆಂಗಳೂರೆಂಬ ನಗರದ ಮಾಯೆ – ಮರ್ಮ ದ್ಯಾವಣ್ಣನಿಗೂ ಅರ್ಥವಾಗಿದೆ ಎಂದು ನನ್ನ ಮನದ ಅಭಿಪ್ರಾಯವನ್ನೇ ಅವನ ಬದುಕಿಗೂ ಜೋಡಿಸಿದ್ದೆ. ಈಗ್ಗೆ ನಾಲ್ಕು ವಾರಗಳ ಹಿಂದೆ ಊರಿಗೆ ಹೋದವನ ಕಣ್ಣಿಗೆ ಬಸ್ ಸ್ಟ್ಯಾಂಡಿನ ಎದುರಿನ ಸೈಕಲ್ ಶಾಪ್‌ಮುಚ್ಚಿದ್ದು ಕಂಡಿತ್ತು. ಅಂಗಡಿಯೊಳಗೆ ಸೈಕಲ್ಲಿನ ಹಳೆ ಟೈರುಗಳನ್ನು ಕಂಬಿ, ಸೀಟು, ನಟ್ಟು ಬೋಲ್ಟಿನ ರಾಶಿ...ಹೀಗೆ ಪರಂಪರಾಗತ ನೆನಪುಗಳನ್ನು ಉಳಿಸಿಕೊಂಡಿದ್ದ ವೀರಭದ್ರೇಶ್ವರ ಸೈಕಲ್ ಶಾಪಿನ ಪ್ರೊ. ಶಂಕ್ರಣ್ಣ ಹಳ್ಳಿ ತೊರೆದು ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ತಳವೂರಿರುವುದನ್ನು ತಿಳಿದೆ.

ದ್ಯಾವಣ್ಣ ಶಂಕರಣ್ಣನನ್ನು ಹಿಂಬಾಲಿಸಿದನೇ ಇಲ್ಲ ಶಂಕರಣ್ಣ ದ್ಯಾವಣ್ಣನನ್ನು ಹಿಂಬಾಲಿಸಿದನೇ? ಇವರು ಬೆಂಗಳೂರಲ್ಲಿ ಚೆಂದದ ಬದುಕನ್ನು ಕಾಣುವರೇ? ಮಹಾನಗರಿಯಲ್ಲಿ ನಾಲ್ಕಾರು ಸಾವಿರದಲ್ಲಿ ಬದುಕು ಸಾಧ್ಯವೇ? ತರ್ಕ ತಲೆಯೊಳಗೆ ಸಿಕ್ಕಿಹಾಕಿಕೊಂಡು ತ್ರಿಶಂಕುವಿನಲ್ಲಿತ್ತು. ಟೈಲರ್ ಪಾಂಡುರಂಗ ರಾಯರು, ಪ್ರತಿ ಸೋಮವಾರ, ಶನಿವಾರ ಗರುಡಗಂಬ ಹಿಡಿದು, ಹಣೆಯಲ್ಲಿ ಹರಿನಾಮ ಮೂಡಿಸಿಕೊಂಡು, ಬಗಲಿನಲ್ಲಿ ಅಸೀಟಿನ (ರಾಗಿ, ಜೋಳದ ಹಿಟ್ಟು) ಜೋಳಿಗೆ ಹೊತ್ತು ಶಂಕ ಜಾಗಟೆ ಹೊಡೆಯುವ ದಾಸಪ್ಪ... ಹೆಂಗಸರ ಕೂದಲನ್ನು ಕೊಂಡು ದಾರ ಸೂಜಿ, ಹೇರ್‌ಪಿನ್ನುಗಳನ್ನು ನೀಡುವ ಇನ್ನೂ ವಸ್ತು ವಿನಿಮಯ ಪದ್ಧತಿ ನೆನಪಿಸುವ ಬುಡುಬುಡಿಕೆ ಹಟ್ಟಿಯ ಗೌರಿ, ಊರ ಹಳ್ಳಿ ಕಟ್ಟೆಯ ಪಕ್ಕದಲ್ಲಿ ಪೆಟ್ಟಿಗೆ ಅಂಗಡಿ ಮಡಗಿಕೊಂಡಿದ್ದ ಪಾನ್‌ಶಾಪ್ ಬಾಬಣ್ಣ...

ಹಳ್ಳಿಯಲ್ಲಿ ಅಂಗೈ ಅಗಲ ಜಮೀನು ಇದ್ದವರು, ಇಲ್ಲದ ಹಲವು ಮಂದಿ ಹಳ್ಳಿಯ ಕಳ್ಳು–ಬಳ್ಳಿ ಸಂಬಂಧವನ್ನು ಬೆಂಗಳೂರಿಗೆ ವಿಸ್ತರಿಸಿಕೊಳ್ಳುತ್ತಿರುವ ವರ್ತಮಾನದ ಸುದ್ದಿಗಳು ಊರಿಂದ ಆಗಾಗ್ಗೆ ಸಿಕ್ಕುತ್ತಿದ್ದವು. ಪೀಣ್ಯದ ಕೈಗಾರಿಕಾ ಪ್ರದೇಶವೋ, ಎಲೆಕ್ಟ್ರಾನಿಕ್ ಸಿಟಿಯೋ ಹೀಗೆ ತಮ್ಮ ಹಣಕ್ಕೆ ತಕ್ಕುದಾದ ನೆಲೆಯನ್ನು ಕಂಡುಕೊಂಡಿದ್ದಾರೆ. ಅರೆರೆ ಎಂಥ ಸೋಜಿಗದ ನಗರಿ ಇದು! ಐಟಿ ಮಂದಿಯ ಕೊಳ್ಳುಬಾಕತನ, ದಿನದಿನಕ್ಕೂ ತನ್ನ ಆಸುಪಾಸಿನ ಹಳ್ಳಿಗಳನ್ನು ಆಪೋಶನಗೈಯುತ್ತಿರುವ, ಬಾಂಧವ್ಯದ ಮನ–ಹೃದಯಗಳು ವ್ಯಾವಹಾರಿಕತೆಯೊಳಗೆ ಸೇರಿಸಿಕೊಳ್ಳುವ, ಆಕ್ಸಿಡೆಂಟು, ಅಕ್ರಮ–ಸಕ್ರಮ ಸಂಬಂಧ, ಹತ್ಯೆ, ಅತ್ಯಾಚಾರ...ಹೀಗೆ ವಿವಿಧ ಚಿತ್ರ– ವಿಚಿತ್ರವಾದ ಪೂರ್ವಾಗ್ರಹದ ಗ್ರಹಿಕೆಗಳನ್ನು ಹೊಂದಿದ್ದ ಹಳ್ಳಿ ಜನ ಒಬ್ಬೊಬ್ಬರಾಗಿ ಈ ನಗರಿಯ ಒಡಲಿನಲ್ಲಿ ಬೆಚ್ಚಗೋ–ತಣ್ಣಗೋ ಮಲಗಲು ಹಪಹಪಿಸಿ ಬರುತ್ತಿದ್ದಾರೆ.

ಅವರಿಗೆ ಆ ಮಟ್ಟದ ಸೆಳೆತ, ಭರವಸೆಯನ್ನು ಈ ನಗರಿ ನೀಡಿದೆ ಅಲ್ಲವೆ! ಬದುಕು ಹಸನಾಗುವ ಕನಸು ಒಂದಿಷ್ಟು ಜನರದ್ದು. ಕೊನೆ ಪಕ್ಷ ತಮ್ಮ ಕೂಸು–ಕುಡಿಗಳ ಭವಿಷ್ಯವನ್ನಾದರೂ ಇಲ್ಲಿ ಕಾಣುವ ತವಕ ಇನ್ನು ಕೆಲವರದ್ದು. ನನ್ನೂರಿನ ಜನರಂತೆ ಎಷ್ಟು ಹಳ್ಳಿಯ ಜನರನ್ನು ಈಕೆ ಪೊರೆಯುತ್ತಿದ್ದಾಳೆ, ಅವರ ತುತ್ತಿನ ಚೀಲ ತುಂಬಿಸಿಕೊಳ್ಳಲು ಜಾಗ ಕೊಟ್ಟಿದ್ದಾಳೆ. ಸಣ್ಣ ಪುಟ್ಟ ಕಸುಬುಗಳಿಂದ ಇಲ್ಲವೆ ಕುಲಕಸುಬುಗಳಿಂದಲೇ ಗುರುತು ಪಡೆದಿದ್ದವರ ಚಹರೆಗಳು ಇಲ್ಲಿ ಬದಲಾಗಿವೆ. ಇದು ನವ ನಾಗರಿಕತೆ ಎನ್ನುವ ವಿಚಾರವೋ, ಮೂಲ ಸಂಸ್ಕೃತಿ ಕಳೆದುಹೋಗುತ್ತಿದೆ, ನಗರೀಕರಣದಿಂದ ಬದುಕು ಹಾಳಾಗುತ್ತಿದೆ, ಹಳ್ಳಿಗಳು ಮಾರಾಟಕ್ಕಿವೆ ಎಂಬ ವಾದವೋ... ಒಟ್ಟಿನಲ್ಲಿ ಎಲ್ಲವನ್ನೂ ಬೆನ್ನಿಗಿಟ್ಟುಕೊಂಡು ಬಂದವರ ಬದುಕು–ಬಾಳು ಕಟ್ಟಲು ಸಜ್ಜಾಗಿದ್ದಾಳೆ ಬೆಂಗಳೂರೆಂಬ ಭಗಿನಿ. ಬದುಕು ಹರಿಸಿ ದುಡಿಯಲೇಬೇಕೆಂದು ನಿಶ್ಚಯಿಸಿ ಬಂದವರನ್ನೂ ಕೈ ಬಿಟ್ಟಿಲ್ಲ. 'ಮಳೆ–ಬೆಳೆ ಇಲ್ಲ.... ಬೆಂಗಳೂರು ಸೇರಂಗಾತು...' ಅಂಗೈ ಅಗಲ ಜಮೀನಿಲ್ಲದ ಮಂದಿಯೂ ಹೇಳುವ ಈ ಮಾತು ಈಕೆಯನ್ನು ಹೊಸ ಬಗೆಯಲ್ಲಿಯೂ ನೋಡುವ ಕ್ರಮವಿರಬೇಕು.

**ಡಿಎಂಕುರ್ಕೆ ಪ್ರಶಾಂತ**

ಪ್ರಜಾವಾಣಿ

21.01.2014

# ಅಪ್ಪನಾಗುವ ಕಷ್ಟ ಮತ್ತು ಸುಖ

ಆ ಆಸ್ಪತ್ರೆಯ ಕಾರಿಡಾರ್ ಖಾಲಿ ಹೊಡೆಯುತ್ತಿತ್ತು. ನಾನು ವಾಚ್ ನೋಡಿಕೊಂಡರೆ ಕೊಂಚ ಹೊತ್ತಿಗೆ ಮುಂಚೆ ಎಷ್ಟು ಸಮಯವಾಗಿತ್ತೋ ಅಷ್ಟೇ! ಅಲ್ಲಾ, 20 ಸೆಕೆಂಡಿಗೊಮ್ಮೆ ಗಂಟೆ ನೋಡಿಕೊಂಡರೆ ಆ ಬಡಪಾಯಿ ವಾಚಾದರೂ ಏನು ಮಾಡೀತು? ಸುಮ್ಮನೆ ಯಾರ ಬಳಿಯಾದರೂ ಮಾತನಾಡೋಣ ಅನ್ನಿಸಿದರೂ ಊಹೂಂ, ಯಾರೂ ಇರಲಿಲ್ಲ. ಪ್ರಾಯಶಃ ನನ್ನ ಜೀವನದ ಅತ್ಯಂತ ಒತ್ತಡದ ಮತ್ತು ಸುದೀರ್ಘವೆನಿಸಿದ ಕ್ಷಣಗಳು ಅವು. ಖುಷಿಯ ಘಳಿಗೆಗಳಿಗೂ ಮೊದಲ ತಲ್ಲಣ, ಹೊಸ ಜೀವದ ಸ್ವಾಗತಕ್ಕೂ ಮೊದಲಿನ ಕ್ಷಣಗಣನೆ.

ಹೆಂಡತಿ ಒಳಗೆ ಹೆರಿಗೆ ಕೋಣೆಯಲ್ಲಿ, ನಾನು ಹೊರಗೆ ಕಾರಿಡಾರ್‌ನಲ್ಲಿ. ಅದಾಗಲೇ ನೂರಾರು ಸಿನಿಮಾಗಳಲ್ಲಿ ಈ ದೃಶ್ಯವನ್ನು ನೋಡಿದ್ದೆ ನಾನು. ಗಂಡ ಹೊರಗೆ ನಿಂತಿದ್ದಾನೆ. ಪಕ್ಕದಲ್ಲಿ ಅಪ್ಪ ಅಮ್ಮ. ಮುಖದಲ್ಲಿ ಚಿಂತೆ. ಅತ್ತಿತ್ತ ಓಡಾಟ, ಗಡಿಯಾರದ ಮುಳ್ಳಿನ ಕ್ಲೋಸ್ ಅಪ್ ಶಾಟು. ಒಳಗೆ ಓಡೋ ನರ್ಸ್ ಕಡೆಗೆ ಯಾಚನಾ ಭಾವದಲ್ಲಿ ನೋಡುವ ಗಂಡನಿಗೆ ಅದೇನೋ ಸನ್ನೆ ಮಾಡಿ ಹೋಗುವ ಆಕೆ.. ಏನೂ ಆಗಲ್ಲ ಚಿಂತಿಸಬೇಡ ಎಂದು ಕಣ್ಣಲ್ಲೇ ಹೇಳೋ ಅಮ್ಮ.. ಪ್ರತಿ ಬಾರಿ ನೋಡುವಾಗಲೂ, ಅಲ್ಲಾ ಈ ಸೀನನ್ನು ಇಷ್ಟೊಂದು ವೈಭವೀಕರಿಸಿ ತೋರಿಸೋ ಅಗತ್ಯ ಏನಿದೆ, ಒಳಗೆ ಡಾಕ್ಟರುಗಳಿರುತ್ತಾರೆ, ನರ್ಸ್‌ಗಳಿದ್ದಾರೆ, ತಂತ್ರಜ್ಞಾನ ಅದೆಷ್ಟು ಮುಂದುವರಿದಿದೆ, ಯಾವ ತಲೆಬಿಸಿಯೂ ಇಲ್ಲದೇ ಹೆರಿಗೆ ಆಗೋದು ಗ್ಯಾರೆಂಟಿ, ಅಷ್ಟಾದರೂ ಇನ್ನೂ ಹಳೇ ಸಿನಿಮಾದ ಮೆಲೋಡ್ರಾಮಾ ಬಿಟ್ಟಿಲ್ಲವಲ್ಲ ಅಂದುಕೊಳ್ಳುತ್ತಿದ್ದೆ. ಆದರೆ ಯಾವಾಗ ನಾನು ಆ ಖಾಲಿ ಕಾರಿಡಾರಿನ ಮೌನದಲ್ಲಿ, ಸೌಂಡ್ ಪ್ರೂಫಾಗಿದ್ದರೂ ಬಾಗಿಲಿನ ಸಂದುಗಳಲ್ಲಿ ತೂರಿಬರುತ್ತಿದ್ದ ಆಕ್ರಂದನವನ್ನು ಕೇಳುತ್ತ ನಿಂತಿದ್ದೆನೋ, ಯಾವಾಗ ನನ್ನ ಕಾಲುಗಳಲ್ಲೂ ಸಣ್ಣಗೆ ನಡುಕ ಉಂಟಾಗಿ ಇದೆಲ್ಲ ಬೇಗ ಮುಗಿದು ಹೋಗಬಾರದೇ ಎನ್ನಿಸಿತೋ, ಆವಾಗ ಈ ಸಂದರ್ಭದ ಗಂಭೀರತೆ ಅರ್ಥವಾಯಿತು.

ನಾನು ಏನಾಗಿದ್ದೇನೆ ಎಂಬುದೇ ನನಗರ್ಥವಾಗದೇ ನಿಂತಿದ್ದ ಆ ಹೊತ್ತಿಗೆ, ನನ್ನೆದುರಿನ ಆಪರೇಶನ್ ಥಿಯೇಟರ್ ನ ಬಾಗಿಲು ತೆರೆಯಿತು. ನನ್ನ ಬಾಳಿನ ಹೊಸ ಅರ್ಥವನ್ನು ಕೈಯಲ್ಲಿ ಹೊತ್ತು ನಿಂತಿದ್ದ ನರ್ಸಮ್ಮ, ನಕ್ಕು 'ಹೆಣ್ಣುಮಗು'ಎಂದು ಮೃದುಬಟ್ಟೆಯಲ್ಲಿ ಸುತ್ತಿದ್ದ ಎಳೇ ಕಂದಮ್ಮನನ್ನು ಕೈಗಿತ್ತಳು. 25 ಕೇಜಿ ತೂಕ ಹೊತ್ತಾಗಲೂ ನಡುಗದ ಕೈ, ಈಗ ನಡುಗುತ್ತಿತ್ತು. ಜಗದ ಬೆಳಕಿಗಂಜಿ ಮುಚ್ಚಿಕೊಂಡಿರುವ ಪುಟ್ಟ ಕಣ್ಣುಗಳು, ಗಾಳಿಯನ್ನೇ ಗಟ್ಟಿ ಹಿಡಿದಿರುವ ಬಿಗಿಮುಷ್ಟಿಗಳು.. ಹಾಗೇ ನೋಡುತ್ತ

ನಿಂತ ನನಗೆ ಒಂದು ನಿಮಿಷ ಏನಾಗುತ್ತಿದೆ ಎಂದೇ ತಿಳಿಯಲಿಲ್ಲ. ಆನಂದವೋ, ರೋಮಾಂಚನವೋ, ಭಾವೋದ್ವೇಗವೋ.. ಊಹೂಂ.. ಎಲ್ಲ ಖಾಲಿ ಖಾಲಿ. ಮಗಳ ಮುಖವನ್ನೇ ನೋಡಿ ನೀಳ ಉಸಿರು ಹೊರ ಬಿಟ್ಟ ಮೇಲೆ ನಿಧಾನವಾಗಿ, ಖಾಲಿಯಾದ ನನ್ನ ಒಳಗೆಲ್ಲ ತುಂಬತೊಡಗಿತು. ಆವತ್ತಿನಿಂದ ತುಂಬಿಕೊಳ್ಳುತ್ತಿರುವ ನನ್ನ ಖಾಲೀತನ ಇನ್ನೂ ತುಂಬಿಕೊಳ್ಳುತ್ತಲೇ ಇದೆ!

ಅಪ್ಪ ಅನ್ನಿಸಿಕೊಂಡ ಆ ಘಳಿಗೆ ಅರ್ಥವಾದ ಮಹತ್ವದ ಸತ್ಯ ಏನಂದರೆ ಅದು ಬರಿಯ ನಾಮಪದವಲ್ಲ ಕ್ರಿಯಾಪದ ಅಂತ! ಹೆಂಗಸರಿಗೆ ಈ ಸೂಕ್ಷ್ಮ ಅನ್ನುವುದು ಹುಟ್ಟುತ್ತಲೇ ದಕ್ಕಿಬಿಟ್ಟಿರುತ್ತದೆ, ನಾವುಗಳೋ ಅದನ್ನು ಒಲಿಸಿಕೊಳ್ಳಬೇಕು. ಮಗಳು ಹುಟ್ಟಿದ ದಿನವೇ ನನ್ನ ಹೆಂಡತಿ ಅಪಾರ ಜ್ಞಾನವಿರುವವಳಂತೆ ಅದನ್ನು ನೋಡಿಕೊಳ್ಳುತ್ತಿರುವುದನ್ನ ನೋಡಿ ನಾನಂತೂ ಕಂಗಾಲಾಗಿ ಹೋಗಿದ್ದೆ. ಹೀಗೆ ಹೀಗೇ ಎತ್ತಿಕೊಳ್ಳಬೇಕು, ಕುತ್ತಿಗೆ ಹಿಡಿದುಕೋ.. ಥೇ.. ಹಾಗಲ್ಲ ಹೀಗೆ ಎಂದು ಅವಳು ನನಗೆ ವಿವರಿಸಬೇಕಿದ್ದರೆ ನಾನು ಪೆದ್ದು ಪೆದ್ದಾಗಿ ತಲೆಯಾಡಿಸುತ್ತಿದ್ದೆ. ಹಾಲು ಕುಡಿದದ್ದು ಹೆಚ್ಚಾಯ್ತು, ಈಗ ವಾಂತಿಯಾಗುತ್ತದೆ ಎಂದು ಅವಳು ಹೇಳಿದರೆ ಮಾತು ಮುಗಿಯುವುದರೊಳಗೆ ಹಾಗೇ ಆಗಬೇಕೆ. ಇದೆಲ್ಲ ಹೇಗೆ ತಿಳಿಯುವುದಪ್ಪ ಎಂದು ನಾನು ಅರ್ಥವಾಗದೆ ನೋಡುತ್ತಿದ್ದೆ.ನಮ್ಮತ್ತೆ ಮತ್ತು ಇವಳು ಇಬ್ಬರೂ ಸೇರಿ ಆ ಹಸುಳೆಯ ಆರೈಕೆ ಮಾಡುತ್ತಿದ್ದರೆ ನಾನು ಬಿಟ್ಟಕಣ್ಣು ಬಿಟ್ಟುಕೊಂಡು ನೋಡುತ್ತಿದ್ದೆ ಅಷ್ಟೆ. ನಾನೇನಾದರೂ ಸಹಾಯ ಮಾಡಬೇಕೇ ಎಂದು ಕೇಳಿದ ವಿನಂತಿಯನ್ನು ನನ್ನವಳು ಗೌರವ ಪೂರ್ವಕವಾಗಿ ಸ್ವೀಕರಿಸಿ, ಸಾರಾಸಗಟಾಗಿ ತಿರಸ್ಕರಿಸಿದ್ದಳು. ದಯಾಪರರಾದ ಅವರುಗಳು ಡಯಾಪರು ಸೊಳ್ಳೆಪರದೆ ಇತ್ಯಾದಿಗಳನ್ನು ತರುವ ಕೆಲಸವನ್ನು ನನಗೆ ವಹಿಸಿ ಇತರ ಸಂಕಷ್ಟಗಳಿಂದ ನನ್ನನ್ನು ಪಾರು ಮಾಡಿದ್ದರು.

ಆಸ್ಪತ್ರೆಯ ಅಧ್ಯಾಯ ಮುಗಿದು ಬಾಣಂತನದ ಸಂಭ್ರಮಗಳು ಶುರುವಾಗುವ ಹೊತ್ತಿಗೆ ನಾನೂ ಸ್ವಲ್ಪ ಪರಿಶ್ರಮ ಹಾಕಿ, ಅನುಭವ ಪಡೆದುಕೊಂಡಿದ್ದೆ. ಮಗಳನ್ನು ಎತ್ತಾಡಿಸುವ ಕಲೆ ನನಗೂ ಅರ್ಥವಾಗಿತ್ತು. ಬೊಚ್ಚುಬಾಯಿ ಅಗಲಿಸಿ ಹಾಹೂ ಅನ್ನುತ್ತಿದ್ದ ಮಗಳಿಗೆ ಅಪ್ಪನೆಂಬ ಜೀವಿಯ ಪರಿಚಯ ನಿಧಾನವಾಗಿ ಆಗುತ್ತಿತ್ತು. ಇಷ್ಟಾದರೂ ನಾನು ಮಗಳನ್ನು ನೋಡಿಕೊಳ್ಳುವ ವಿಚಾರದಲ್ಲಿ ಇನ್ನೂ ಪ್ರೈಮರಿಯನ್ನೂ ಪಾಸಾಗಿರಲಿಲ್ಲ. ಯಾಕೆಂದರೆ ಬಹಳಷ್ಟು ವಿಚಾರಗಳನ್ನ ನನಗೆ ನೋಡಲೇ ಆಗುತ್ತಿರಲಿಲ್ಲ, ಇನ್ನು ಮಾಡುವುದು ಆಮೇಲಿನ ಮಾತು.

ಈ ಪಾಪೂಗೆ ಸ್ನಾನ ಮಾಡಿಸುವುದು ಎಂಬ ಘನಘೋರ ಕಾರ್ಯವನ್ನು ನನಗಂತೂ ಕಣ್ಣಲ್ಲಿ ಕಾಣಲೇ ಸಾಧ್ಯವಾಗುತ್ತಿರಲಿಲ್ಲ.! ಸ್ನಾನ ಮಾಡಿಸಲೆಂದೇ ವಿಶೇಷ ಪರಿಣತಿಯನ್ನು ಪಡೆದ ಕೊಲ್ಲೂರಿಯೆಂಬ ಅಜ್ಜಿಯು ಬಿಸಿಬಿಸಿ ನೀರನ್ನು ತೊಪತೊಪನೆ ಹೊಯ್ಯುತ್ತಿದ್ದರೆ ಮಗಳು ಹಂಚು ಹಾರಿ ಹೋಗುವಂತೆ ಅಳುತ್ತಿದ್ದಳು. ಅವಳು

ಹುಚ್ಚಾಪಟ್ಟೆ ಅಳುತ್ತಿದ್ದರೂ ಹಾಗೊಂದು ಕ್ರಿಯೆಯೇ ನಡೆಯುತ್ತಿಲ್ಲ ಎಂಬಂತೆ ಆಕೆಯೂ ನನ್ನತ್ತೆಯೂ ಅದೇನೋ ಊರಿನ ಸುಖಕಷ್ಟಗಳನ್ನೆಲ್ಲ ಮಾತನಾಡುತ್ತಿದ್ದರು. ಅದ್ಯಾರೋ ಪುಣ್ಯಾತ್ಮ ಇನ್ನಾರಿಗೋ ಬಾರಿಸಿದನಂತೆ, ಅಲ್ಲಾ ಈ ಜಗತ್ತಲ್ಲಿ ಹಾಗಾದರೆ ಕರುಣೆಯೇ ಇಲ್ಲವೇ? ಎಲ್ಲ ಏನಾಗ್ತಾ ಇದೆ ಎಂದು ಮರುಗುತ್ತ ಈ ಕೂಸಿನ ತಲೆ ಕಾಲು ಹೊಟ್ಟೆ ಬೆನ್ನಿಗೆ ಇನ್ನಷ್ಟು ನೀರು ಸುರಿಯುತ್ತ ಕಾಲ ಮೇಲೆಯೇ ಮಲಗಿಸಿಕೊಂಡು ಅದೇನೇನೋ ಕವಾಯತುಗಳನ್ನ ಮಾಡಿಸುತ್ತಿದ್ದರು. ಕರುಣೆ ಬಚ್ಚಲಮನೆಯ ಬಿಸಿನೀರ ರೂಪದಲ್ಲಿ ಹರಿದು ಮೋರಿ ಸೇರುತ್ತಿತ್ತು. ನಾನು ಸ್ನಾನ ಮಾಡಿಸುವಾಗ ಒಂದೆರಡು ದಿನ ಇದನ್ನೆಲ್ಲ ನಿಂತು ನೋಡಿ ಹೌಹಾರಿ ಮುಖವನ್ನು ಚಿತ್ರವಿಚಿತ್ರವಾಗಿಸಿಕೊಂಡು ಅಯ್ಯೋ ಅಪ್ಪಾ ಸ್ವಲ್ಪ ನೋಡ್ಕಂಡು ನೀರು ಹುಯ್ರೀ ಎಂದಿದ್ದಕ್ಕೆ ಮಾರನೇ ದಿನದಿಂದ ನನ್ನ ಪಾಲಿಗೆ ಬಚ್ಚಲು ಬ್ಯಾನ್ ಆಯಿತು. ಪ್ಯಾಟೆ ಸೇರ್ಕಂಡ್ರೆ ಹೀಗೆ ಅಮ್ಮ, ಎಲ್ಲದಕ್ಕೂ ಈ ಹುಡುಗ್ರು ಅತಿ ಆಡ್ತವೆ ಅಂತ ಕೆಲಸದ ಕೊಲ್ಲೂರಿಯೂ ಷರಾ ಬರೆದಳು. ಹಾಗೆಂದು ನಾನು ಮಾಡಿಕೊಂಡ ವಿಡಿಯೋ ತೋರಿಸೆಂದು ಕೇಳಲು ಮರೆಯಲಿಲ್ಲ!

ಸ್ನಾನ ಮಾಡಿಕೊಂಡು ಒಳಗೆ ಬರುವಾಗ ಪುಟ್ಟ ಹಬೆಯ ದೇವತೆಯಂತೆ ಕಾಣುತ್ತಿದ್ದ ಮಗಳು ಕೊಲ್ಲೂರಿಯ ಬಿಸಿ ನೀರಿನ ಹೊಡೆತಕ್ಕೆ ಕಂಗಾಲಾಗಿ ಬಸವಳಿದು ಹೋಗಿರುತ್ತಿದ್ದಳು. ಪೌಡರು ಹಾಕಿ ಗೊಬ್ಬೆ ಕಟ್ಟುವುದರೊಳಗೆ ನಿದ್ದೆ ಗ್ಯಾರೆಂಟಿ. ಹಾಗೆಲ್ಲ ಸುಮ್ಮ ಸುಮ್ಮನೆ ನಿದ್ರೆ ಮಾಡಿಸುವ ಹಾಗೆಲ್ಲ ಇಲ್ಲ! ತೊಟ್ಟಿಲನ್ನು ತೂಗಲೂ ಒಂದು ಕ್ರಮ, ಮಲಗಿಸಲೂ ಒಂದು ಶಿಸ್ತು, ಸ್ನಾನವಾದ ಮೇಲಿನ ನಿದ್ದೆಗೆ ಒಂದು ರೀತಿಯ ವ್ಯವಸ್ಥೆ, ಮಧ್ಯಾಹ್ನಕ್ಕಾದರೆ ಇನ್ನೊಂದು, ರಾತ್ರಿಗೆ ಮಗದೊಂದು. ಅಬ್ಬಬ್ಬ! ಒಂದು ಪಂಚೆಯನ್ನೇ ಹೇಗೆಲ್ಲ ಆ ಕೂಸಿಗೆ ಸುತ್ತುತ್ತಿದ್ದರು ಎಂದರೆ ನಾನು ಆ ಹೊತ್ತಿಗೆಲ್ಲ ಹೆಚ್ಚು ಮಾತನಾಡದೆ 'ಫೋಟೋ ತೆಗೆಯುವುದು' ಎಂಬ ಅತ್ಯಂತ ಮುಖ್ಯ ಕಾರ್ಯ ಮಾಡುತ್ತಿದ್ದೆ. ಸಹಾಯ ಮಾಡಲಾ ಎಂದು ಕೇಳಿ, ಅತ್ತೆಯೋ ಹೆಂಡತಿಯೋ ಹುಂ ಅಂದರೆ ಎಂಬ ಹೆದರಿಕೆ!

ಇನ್ನು ಮಗುವನ್ನು ನೋಡಲು ಬರುವ ಮಹನೀಯರುಗಳ ಬಗ್ಗೆ ಹೇಳ ಹೊರಟರೆ ಅದೇ ಬೇರೆಯ ಪ್ರಬಂಧವಾಗುತ್ತದೆ. ಅಪ್ಪನಿಗೋ ಅಮ್ಮನಿಗೋ ಅಜ್ಜಿ ಅಜ್ಜನಿಗೋ ಮಗುವನ್ನು ಹೋಲಿಸಬೇಕಾಗಿರುವುದು ಅತ್ಯಂತ ಅನಿವಾರ್ಯವೂ ಅವಶ್ಯವೂ ಆಗಿರುವ ಪ್ರಕ್ರಿಯೆ ಎಂದು ನೂರಕ್ಕೆ ನೂರು ಪ್ರತಿಶತ ಜನರೂ ಭಾವಿಸಿದ್ದಾರೆ. ಕೆಲವರು ಇನ್ನೂ ಮುಂದೆ ಹೋಗಿ ಕಣ್ಣು ಇವನ ಹಾಗೆ ಮೂಗು ಅವಳದು.. ಆದರೆ ನೋಡಲು ಥೇಟು ಅಜ್ಜಿಯ ಥರ ಎಂದು ಯಥಾ ಸಾಧ್ಯ ಕುಟುಂಬಸ್ಥರನ್ನು ಓಲೈಸುವ ಕಾರ್ಯವನ್ನೂ ಮಾಡುತ್ತಾರೆ. ನಾನು ಮೊದ ಮೊದಲು ತಲೆಯಾಡಿಸಿ ಭಾರೀ ಉತ್ಸಾಹದಿಂದ ಪ್ರತಿಕ್ರಿಯೆ ನೀಡಿದೆ. ಅದು ಅತ್ಯಂತ ಅಪಾಯಕಾರಿ ಅನ್ನುವುದು ಆಮೇಲಾಲಾಮೇಲೆ ಅರಿವಾಯಿತು. ಕಾಲು ನೋಡು ಇವನ ಅಜ್ಜನೂ ಹೀಗೇ

ಇದ್ದ, ಕೈ ನೋಡು ಅಜ್ಜಿಯ ಥರವೇ ಎಂದೆಲ್ಲ ಇನ್ನೂ ಗಂಭೀರವಾಗಿ ಡಿ–ಕೋಡ್ ಮಾಡಲು ಶುರು ಮಾಡಿದ ಮೇಲೆ ನಾನೂ ಸುಮ್ಮನಾಗಬೇಕಾಯಿತು. ಏಕೆಂದರೆ ಬಂದ ಎಲ್ಲರ ಬಳಿಯೂ ನಕ್ಕು, ಕೃತಜ್ಞತೆಯನ್ನು ವ್ಯಕ್ತಪಡಿಸಬೇಕಾದ ಭಾರ ನಮ್ಮ ಮೇಲಿರುವುದರಿಂದ ಯಾವ ವ್ಯಂಗ್ಯ ಉಡಾಫೆಗಳಿಗೂ ಅವಕಾಶ ಇರುವುದಿಲ್ಲ. ಯಾರೋ ಸ್ನೇಹಿತ ದಂಪತಿ ಬಂದಿದ್ದರು, ಅವರವರೇ ಯಾರ ಹಾಗೆ ಕಾಣುತ್ತಿದೆ ಎಂದು ಮಾತನಾಡಿಕೊಂಡರು. ಸ್ನೇಹಿತನ ಮಾತಿಗೆ ನಾನು ಸುಮ್ಮನೇ ತಲೆಯಾಡಿಸಿ ಹೌದು ಹೌದು ನನಗೂ ಹಂಗೇ ಅನ್ನಿಸ್ತು ಎಂದೆ. ಅವನು ತಿರುಗಿ ಹೆಂಡತಿಯ ಬಳಿ ನೋಡಿದ್ಯಾ ನಾನು ಹೇಳಿದ್ದೇ ಕರೆಕ್ಟು ಎಂದು ಮತ್ತೆ ವಾದಕ್ಕೆ ತೊಡಗಿದ. ನಿದ್ದೆಯಲ್ಲಿದ್ದ ಕೂಸು ವಿನಾಕಾರಣ ನಕ್ಕಿತು.

ಬಾಣಂತನ ಮುಗಿಸಿದ ಹೆಂಡತಿಯನ್ನು ಮರಳಿ ಬೆಂಗಳೂರಿಗೆ ಕರೆದೊಯ್ಯಲು ಬಂದೆ. ಈ ಹೊತ್ತಿನಲ್ಲಿ ನಡೆದ ಸಲಹಾಪರ್ವ ಎಂಬ ಅಮೋಘ ಸಂದರ್ಭದ ಬಗ್ಗೆ ಏನು ಹೇಳಲಿ? ಊರಿನ ಹಿತೈಷಿಗಳೂ, ಬಂಧು ಬಾಂಧವರೂ ಬಂದು ಬೆಳಗಿನಿಂದಲೇ ಥರಹೇವಾರಿ ಸಲಹೆಗಳನ್ನು ನನ್ನವಳಿಗೆ ನೀಡಲು ಆರಂಭಿಸಿದ್ದರು. ಮಗಳಿಗೆ ಕ್ಯಾರೆಟ್ಟು ತಿನ್ನಿಸಬೇಡ ಕಣ್ಣಿನ ತೊಂದರೆ ಬರತ್ತೆ, ಎಮ್ಮೆ ಹಾಲು ಕುಡಿಸಬೇಡ ಬುದ್ಧಿ ಮಂದ, ಅಪ್ಪಿತಪ್ಪಿಯೂ ಪ್ಯಾಕೇಟು ಮೊಸರು ತಿನ್ನಿಸಬೇಡ ಅದ್ರಲ್ಲಿ ಬರೀ ಕೆಮಿಕಲ್ಲು, ಬಾಳೆಹಣ್ಣು ಥಂಡಿ ದಾಳಿಂಬೆ ಹೀಟು ಮೂಸಂಬಿ ನೆಗಡಿ.. ಆಚೆ ಮನೆ ಕುಸುಮಕ್ಕ ಹೇಳಿದ್ದು ಈಚೆಮನೆ ಚಿಕ್ಕಮ್ಮನ ಪ್ರಕಾರ ತಪ್ಪು. ರಾಮಣ್ಣ ಬೇಡ ಎಂದ ಯಾವುದೋ ಹಣ್ಣು, ಲಕ್ಷ್ಮಜ್ಜಿಯ ಪ್ರಕಾರ ತಿನ್ನಲೇಬೇಕು. ಸಂಜೆ ಆಗುವ ಹೊತ್ತಿಗೆ ನನ್ನ ಮೆದುಳು ಕೆಲಸ ಮಾಡುವುದನ್ನು ನಿಲ್ಲಿಸಿಯೇ ಬಿಟ್ಟಿತ್ತು. ನನ್ನ ಹೆಂಡತಿ ಈಗಾಗಲೇ ಹಲವು ತಿಂಗಳುಗಳ ಕಾಲ ಇದನ್ನೆಲ್ಲ ಕೇಳಿದ್ದರಿಂದ ಸ್ಥಿತಪ್ರಜ್ಞಳಾಗಿ ಹುಂ ಅನ್ನುತ್ತಿದ್ದಳು. ಅವಳ ಧೈರ್ಯ ನೀಡಿದ ಮೇಲೆಯೇ ನನಗೆ ನಮ್ಮ ಮಗಳು ಉಪವಾಸ ಇರಬೇಕಾಗಿಲ್ಲ ಎಂದು ಖಾತ್ರಿಯಾಯಿತು!

ನಾಲ್ಕಿದ್ದ ಹೆಜ್ಜೆ ಆರಾಗಿ ಬೆಂಗಳೂರಿನಲ್ಲಿ ಮೂಡಿದ ಮೇಲೆ, ಕಾಲ ಸಾಗುವ ಪರಿಯನ್ನು ಕಂಡು ನನಗೇ ಅಚ್ಚರಿಯಾಯಿತು. ಅಂಬೆಗಾಲಿನಿಂದ ಪುಟ್ಟಪುಟ್ಟ ಹೆಜ್ಜೆಗಳನ್ನ ಇಡುತ್ತ ತೊದಲು ಮಾತನಾಡುತ್ತ ಸಾಗುವ ಮಗಳ ಹಿಂದೆ ನಾವೂ ಓಡುತ್ತ ಅದು ಹೇಗೆ ವರುಷ ಕಳೆದು ಮುಂದೆ ಸಾಗಿತೋ ಗೊತ್ತೇ ಆಗಲಿಲ್ಲ. ಆದರೆ ಇಲ್ಲಿಗೆ ಬಂದ ಮೇಲೆ ಬೇರೆಯದೇ ಬಗೆಯ ಚಾಲೆಂಜುಗಳು. ಮಗಳು ಪಾಪ, ನಾಲ್ಕು ಗೋಡೆಗಳ ಮಧ್ಯವೇ ದಿನದ ಹೆಚ್ಚಿನಂಶವನ್ನು ಕಳೆಯಬೇಕು, ಬೇಕೋ ಬೇಡವೋ, ಡಾಕ್ಟರುಗಳು ಹೇಳುವ ಅದೆಂಥದೋ ಇಂಜೆಕ್ಷನ್ನುಗಳನ್ನ ಮಾತ್ರೆಗಳನ್ನ ಕೊಡಿಸಬೇಕು.. ಆಕೆ ಹನೀಸಿಂಗನ ಲುಂಗಿ ಡ್ಯಾನ್ಸಿಗೆ ಮೆಲ್ಲನೆ ಕೈ ಎತ್ತಿ ಕಾಲು ಕುಣಿಸಿದರೆ ಅದನ್ನ ಸಾಧನೆ

ಎಂದು ಖುಷಿ ಪಡಬೇಕೋ, ಅಥವಾ ಇಷ್ಟು ಬೇಗನೆ ಇದೆಲ್ಲ ಅಭ್ಯಾಸವಾಯಿತಲ್ಲ ಎಂದು ಬೇಸರಿಸಬೇಕೋ? ತಿಳಿಯುತ್ತಿಲ್ಲ!

ಒಟ್ಟಿನಲ್ಲಿ ಹೊಸ ಹೊಸ ಪಾಠಗಳನ್ನ ಕಲಿಯುತ್ತ ಅಪ್ಪನೆಂಬ ಪದವಿಯ ಮೆಟ್ಟಿಲುಗಳನ್ನೇರುತ್ತಿದ್ದೇನೆ. ಆ ನರ್ಸು ನನ್ನ ಕೈ ಮೇಲೆ ಮಗುವನ್ನು ಇಟ್ಟದ್ದು ಇನ್ನೂ ಈಗತಾನೇ ನಡೆದಂತಿದೆ. ಆದರೆ ಮಗಳು ಹುಟ್ಟಿ ಆಗಲೇ ಒಂದೂವರೆ ವರ್ಷವಾಗುತ್ತಿದೆ. ಮೊನ್ನೆ ತಾನೇ ಹಗುರ ಹೆಜ್ಜೆಗಳನ್ನು ಹಾಕುತ್ತ ನಡೆಯುವ ಅವಳನ್ನ ಕರೆದುಕೊಂಡು ವಾಕಿಂಗ್ ಗೆ ಹೋಗಿದ್ದೆ. ನಾನು ಎರಡೆರಡು ಅಕ್ಷರದ ಏನೇನೋ ಶಬ್ದಗಳನ್ನ ಹೇಳಿಕೊಡುತ್ತ ನಡೆಸಿಕೊಂಡು ಹೊರಟಿದ್ದೆ. ಅವಳೂ ಅವಳ ಬಾಲ ಭಾಷೆಯಲ್ಲಿ ಅದೇನೋ ಹೇಳುತ್ತಿದ್ದಳು. ಹಾಗೇ ಹೋಗುತ್ತಿದ್ದಾಗ, ಯಾವುದೋ ಕ್ಷಣದಲ್ಲಿ ನನಗೇ ಗೊತ್ತಿಲ್ಲದ ಹಾಗೆ ನನ್ನ ಕೈ ಬಿಡಿಸಿಕೊಂಡು ಓಡಿಯೇ ಬಿಟ್ಟಳು. ಹೇ ಎಂದು ಮುಂದಡಿಯಿಟ್ಟೆ.. ಆಕೆ ನಾಲ್ಕೆಂಟು ಹೆಜ್ಜೆ ಓಡಿದವಳು ಅಲ್ಲೇ ನಿಂತು, ತಿರುಗಿ ನನ್ನನ್ನು ನೋಡಿ ನಕ್ಕು.. ಕೈ ಚಾಚಿ 'ಅಪಾ ಬಾ' ಎಂದು ಕರೆದಳು! ನಾನು ನೋಡುತ್ತ ನಿಂತೆ..

**ಶ್ರೀನಿಧಿ ಡಿ.ಎಸ್.**

ಕನ್ನಡ ಪ್ರಭ ವಿಶೇಷಾಂಕ 2014

# ಅಹಿಭೋ ಅತಿಥಿ ಮಹೋದಯಾ

'ಆ' ಕಾಲವೊಂದಿತ್ತು. 'ಯಾವ ಕಾಲ?' ಅಂತೀರಾ? ಅತಿಥಿ ಅಭ್ಯಾಗತರನ್ನು ದೇವರಂತೆ ಪೂಜಿಸುವ ಕಾಲ. ಅವರಿಗಾಗಿ ಮಧ್ಯಾಹ್ನದವರೆಗೂ ಕಾಯ್ದು, ಅವರಿಗೆ ಉಣಬಡಿಸಿ, ಅವರು ತೃಪ್ತಿಯಾಗಿ ಹರಸಿದ ನಂತರ ತಾವು ಉಣ್ಣುವ ಕಾಲ. ಋಷಿ, ಮುನಿಗಳು ತಮ್ಮ ತಪಃಶಕ್ತಿಯ ಪ್ರಭಾವದಿಂದ ರಾಜ ಪರಿವಾರವನ್ನೆಲ್ಲ ಸತ್ಕರಿಸಿದ ಸಂಗತಿಗಳನೇಕ. ವಸಿಷ್ಠರು ಕಾಮಧೇನುವಿನ ಸಹಾಯದಿಂದ ವಿಶ್ವಾಮಿತ್ರನ ಪರಿವಾರವನ್ನೆಲ್ಲ ಸಂತೋಷಪಡಿಸಿದರಂತೆ. ಅಷ್ಟೇ ಏಕೆ? ಶುಕ ಮುನಿಯು ಉತ್ತರಾಣಿಯ ಬೀಜದಿಂದ ವೆಂಕಟೇಶ್ವರನ ಮದುವೆ ದಿಬ್ಬಣವನ್ನೆಲ್ಲ ತುಷ್ಟಗೊಳಿಸಿದರೆಂದು ಪುರಾಣ ಹೇಳುತ್ತದೆ. ಅಪರೂಪವಾಗಿ ಅಂಥವರಿದ್ದರೆ ಪಾದಾಭಿವಂದನೆ ಮಾಡುತ್ತೇನೆ. ಪೀಠಿಕೆ ಸಾಕಲ್ಲ. ಇನ್ನು ವಿಷಯಕ್ಕೆ ಬರೋಣ.

ನಮ್ಮ ತಲೆಬರಹವೂ ಅತಿಥಿಗಳನ್ನು ಹೃತ್ಪೂರ್ವಕವಾಗಿ ಆಹ್ವಾನಿಸುತ್ತದೆ. ಆದರೆ ಅಂದಿಗೂ ಇಂದಿಗೂ ಹೋಲಿಸಿದಾಗ ಅಗಾಧ ವ್ಯತ್ಯಾಸವಿಲ್ಲವೇ? ಕಾಲ ಬದಲಾಗಿದೇರಿ. ಪ್ರಾಕ್ಟಿಕಲ್ಲಾಗಿ ಹೇಳಬೇಕೂಂದ್ರೆ ಮಧ್ಯಾಹ್ನದವರೆಗೂ ಅನಾಹ್ವಾನಿತ ಅತಿಥಿಗಳನ್ನು ಕಾಯುವುದೆಂದರೆ ಸುಲಭವೇ? ಹೋಗಲಿ. ನಾವು ಕಾಯುತ್ತೇವೆಂದರೂ ಬಿ.ಪಿ. ಶುಗರ್‌ಗಳು ಕೇಳಬೇಕಲ್ಲ. ತಿಂಡಿ ತಿಂದು ಮಾತ್ರೆ ನುಂಗಿದ ಮೇಲೆ ಮಾಮೂಲು ಸ್ಥಿತಿಗೆ ಮರಳುವುದು. ಇಲ್ಲದೇ ಬರೀ ಕಾಯ್ದಲ್ಲಿ ಅನ್ನದಾತನ ಪರಿಸ್ಥಿತಿ ಗೋವಿಂದ. ಈಗ ಸಾಮಾನ್ಯವಾಗಿ ಮುನ್ಸೂಚನೆ ನೀಡದೆ ಯಾರ ಮನೆಗೆ ಯಾರೂ ಬರುವದಿಲ್ಲ. ಅವೇಳೆಯಲ್ಲಿ ಹೇಳದೆ ಕೇಳದೆ ಹೋದರೆ ಅತಿಥಿಗಳ ತಿಥಿಯಾಗುವದೆಂದು ಅವರಿಗೂ ಗೊತ್ತು. ಬೀಗದ ಮುಖ ನೋಡಿಕೊಂಡು ಮರಳಬೇಕು. ಇಲ್ಲವಾದರೆ ಬೇರಾರದೋ ಉಪಚಾರದಲ್ಲಿ, ಮಕ್ಕಳ ಅಭ್ಯಾಸದಲ್ಲಿ ನಿರತರಾದವರನ್ನು ವಿಚಲಿತಗೊಳಿಸಬೇಕು. ಪಾಪ, ಅವರು ಮಕ್ಕಳು ಹರಡಿದ್ದನ್ನೆಲ್ಲ ಖಾಲಿ ಮಾಡುತ್ತ ಬಾಯ್ತುಂಬ ನಗೆ ತುಂಬಿ "ಬನ್ನೀ....." ಎಂದರೂ ಮನದಲ್ಲೇ ಹಲ್ಲು ಕಡಿಯುವುದುಂಟು.

ಅತಿಥಿಗಳಲ್ಲೂ ಕೆಟಗರಿ ಇದೆ ಸ್ವಾಮಿ. ಸಾಮಾನ್ಯವಾಗಿ ತವರಿನ ಕಡೆಯ ಅತಿಥಿಗಳಿಗೆ ಗೃಹಿಣಿಯ ಮನದಲ್ಲಿ 'ಕೊಂಚ' ಪ್ರೀತಿ ಜಾಸ್ತಿ. ಅವರಿಗೆ ಸದಾಕಾಲ ಹಾರ್ದಿಕ ಸ್ವಾಗತವಿರುತ್ತದೆ. ಹೀಗಾಗಿ ಇವರನ್ನು 'ದೇವಗಣ'ಕ್ಕೆ ಧಾರಾಳವಾಗಿ ಸೇರಿಸಬಹುದು. 'ವಿ.ಐ.ಪಿ. ಕೆಟಗರಿ' ಎನಬಹುದೇನೋ. ಇನ್ನು ಪತಿಯ ಅಥವಾ ಅತ್ತೆಮನೆಯ ಸಂಬಂಧಿಕರಿಗೆ, ಆಪ್ತರಿಗೆ ಸಾಂಪ್ರದಾಯಿಕ ಸ್ವಾಗತವಿರುತ್ತದೆ. ಇವರನ್ನು 'ಮಾನವ ಗಣ'ಕ್ಕೆ ಸೇರಿಸಬಹುದು. ಇನ್ನೊಂದ್ಯಾವ ಗಣ ಅಂತೀರಾ? ಹೇಳದೆ ಕೇಳದೆ ಬರುವ ದೂರೂರದ ಸಂಬಂಧಿಕರೋ, ಅಷ್ಟಕ್ಕಷ್ಟೆ ಪರಿಚಯವಿರುವ ಪರಿಚಿತರನ್ನು ಅವರು ಬರುವ ಸಮಯವನ್ನು

ನೋಡಿ ಕೊನೆಯ ರಾಕ್ಷಸ ಗಣಕ್ಕೆ ಸೇರಿಸಬಹುದು. ಹೌದು, ಸಮಯ ಮುಖ್ಯ ಕಣ್ರೀ. ರಾತ್ರಿ ಊಟ ಮುಗಿದ ಮೇಲೆ ಹತ್ತು ಗಂಟೆಗೋ, ಅಥವಾ ಊಟದ ಸಮಯಕ್ಕೆ ತಟ್ಟೆ ಇಟ್ಟ ಮೇಲೆ ಬರುವ ಅನಾಹ್ವಾನಿತ ಅತಿಥಿಗಳನ್ನು ದೆವ್ವ ಗಣಕ್ಕೆ ಸೇರಿಸಬಹದು. 'ದೇವ' ಮತ್ತು 'ದೆವ್ವ'ದ ನಡುವೆ ಒಂದು ದೀರ್ಘ ಮತ್ತು ಒತ್ತಕ್ಷರದ ವ್ಯತ್ಯಾಸವಿದೆಯಷ್ಟೆ.

ಅತಿಥಿಗಳಾಗಿ ಹೋದಾಗಲೂ ಅಷ್ಟೆ. ಆತಿಥೇಯರ ಮನೆಯ ಮದುವೆ ಆಲ್ಬಮ್‌ಗಳು, ಇತರ ಫೋಟೋಗಳನ್ನು ನೀವು ನೋಡಲೇಬೇಕು. ಇಲ್ಲವೆ ನೋಡಿದ ಶಾಸ್ತ್ರ ಮಾಡಬೇಕು. ಬರೀ ಇಷ್ಟಾದರೆ ಪರವಾಗಿಲ್ಲ. ಅವರು ಮದುವೆ ಮುಂತಾದ ಸಮಾರಂಭಗಳ ವೀಡಿಯೊ ಆರಂಭಿಸಿದರೆ ಆಯಿತಲ್ಲಿಗೆ. ನೀವೆಲ್ಲಿಯೂ ತಪ್ಪಿಸಿಕೊಳ್ಳುವ ಹಾಗಿಲ್ಲ. ಅವರು ಎಲ್ಲರ ಪರಿಚಯ ಕೊಡುತ್ತ ಎದುರಿಗೆ ಕುಳಿತರೆ ಕತ್ತಾಡಿಸಬೇಕು. ಅವರ ಭಾಷಣಗಳಿಗೆ ಕಿವಿಗೊಡಲೇಬೇಕು. ಅನ್ನದ ಋಣ ನೋಡಿ. ಅಂದಿನ ಅನ್ನದಾತರು ಅವರಲ್ಲವೇ. ಅವರಲ್ಲಿ ನಾಯಿಗಳಿದ್ದರೆ ಮೊದಲು ಸ್ನೇಹ ಬೆಳೆಸಿಕೊಳ್ಳಿ. ಇಲ್ಲವಾದಲ್ಲಿ ಹೋಗುವವರೆಗೆ ಬೊಗಳುವಿಕೆ ತಪ್ಪಿದ್ದಲ್ಲ. ಅವರ ಅಡಿಗೆಯನ್ನು ಹೊಗಳಿ ಅಟ್ಟಕ್ಕೇರಿಸಿ. "ಹೇಗೆ ಮಾಡಿದ್ರಿ? ರೆಸಿಪಿ ಹೇಳಿ" ಅಂದ್ರಂತೂ ಗೃಹಿಣಿ ಖುಷ್. ಮಕ್ಕಳ ಬಗ್ಗೆ ಕೊಂಚ ಹುಷಾರಾಗಿರಬೇಕು. ಅವರನ್ನು ಒಲಿಸಿಕೊಳ್ಳುವುದು ಬಹು ಮುಖ್ಯ. ಇಲ್ಲವಾದಲ್ಲಿ 'ಅಂಕಲ್ ನಮಗೇನೂ ತಂದೇ ಇಲ್ಲ' ಅಥವಾ 'ಛೆ! ಸ್ವೀಟ್ ತಂದಿದ್ದಾರೆ, ಯಾರು ತಿಂತಾರೆ? ಏನಾದ್ರೂ ಖಾರ ತಂದಿದ್ರೆ...' ಎನ್ನುವ ಪಿಸುಗುಟ್ಟುವಿಕೆ ಕೇಳಿ ಬರಬಹುದು. ಇಲ್ಲವೆ ಮಕ್ಕಳ ವಾಗ್ಬಾಣಗಳಿಗೆ ಆಹಾರವಾಗುತ್ತ "ಕಂಪ್ಯೂಟರ್ ಯಾರು ಕಂಡು ಹಿಡಿದ್ರು ಗೊತ್ತಾ ಅಂಕಲ್?" ಎಂಬಂತಹ ಅನೇಕ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ ತಲೆ ಖಾಲಿಯಾಗುತ್ತದೆ.

ಆತಿಥೇಯರಲ್ಲೂ ಒಮ್ಮೊಮ್ಮೆ ಮಕ್ಕಳು ಫಜೀತಿಗೆ ಕಾರಣರಾಗುತ್ತಾರೆ. "ಅಮ್ಮಾ, ಅವರು ಚಿಪ್ಸೋ, ಹಣ್ಣೋ, ಚಾಕಲೇಟೋ ಏನಾದರೂ ತರುತ್ತಾರೇಂತ ಹೇಳಿದ್ದೆ. ಏನೂ ತಂದೇ ಇಲ್ಲ."ಎಂದು ಅವರ ಮುಂದೆಯೇ ನಿಮ್ಮ ನೀರಿಳಿಸುತ್ತಾರೆ. ನೀವು ಅತಿಥಿಗಳಿಗೋಸ್ಕರ ಮಾಡಿದ ಸ್ವೀಟೆಂದು ಹೇಳುತ್ತ ಬಡಿಸಲು ತಂದಾಗ "ಓಹ್ ಅಮ್ಮಾ, ಇದು ಚಿಕ್ಕಮ್ಮ ತಂದಿದ್ದು. ಹೋದ ವಾರ ಬಂದಿದ್ರಲ್ಲ. ಮರೆತು ಹೋಯ್ತಾ?"ಎಂದು ಕೇಳಿರದಿದ್ದರೂ ಹೇಳಿ ಜಾಣರಾಗಿ ನಿಮ್ಮ ತಾವರೆಯಂತೆ ಅರಳಿದ ಮುಖವನ್ನು ಮುದುಡಿಸಲೂಬಹುದು.

ಅತಿಥಿಗಳಿಗೂ, ಕೆಲಸದವಳಿಗೂ ಏನು ನಂಟೋ ಕಾಣೆ. ಅವಿನಾಭಾವದ ಸಂಬಂಧ ಬಿಡಿ. ನೀವು ಪತಿಯೊಡನೆ "ನಾಳೆ ಬೆಳಿಗ್ಗೆ ರೈಲು ಎಂಟು ಗಂಟೆಗೆ ಬರುತ್ತದೆ. ಕರೆತರಬೇಕು" ಎಂದು ಹೇಳುವುದು ಪತಿಗೆ ಕೇಳಿಸುತ್ತೋ, ಬಿಡುತ್ತೋ. ಅವಳಿಗೆ ಮಾತ್ರ ಚೆನ್ನಾಗಿ ಕೇಳಿಸುತ್ತದೆ. ಜೊತೆಗೆ ಆರನೇ ಇಂದ್ರಿಯವೂ ಕೆಲಸ

ಮಾಡುತ್ತದೆ. ಹೀಗಾಗಿ ಅವತ್ತು ಕರೆಕ್ಟಾಗಿ ಅವಳು ಚಕ್ಕರ್. ಅವಳ ದಾರಿ ಕಾಯ್ದು ನೀವು ಮನದಲ್ಲೇ ಅವಳನ್ನು ಶಪಿಸುತ್ತಾ ಎಲ್ಲ ಕೆಲಸ ಮಾಡಿಕೊಳ್ಳುವಷ್ಟರಲ್ಲಿ ಅತಿಥಿಗಳು ಹಾಜರ್. "ಬಿಡು, ಒಬ್ಬಳೇ ಏಕೆ ಮಾಡಿಕೊಳ್ಳುತ್ತೀ? ನಾನೂ ಸಹಾಯ ಮಾಡುತ್ತೇನೆ." ಎಂದು ಬಂದರೆ ನಿಮಗೆ 'ಭೂಮಿ ಬಾಯ್ದೆರೆಯಬಾರದೇ' ಎನಿಸುವುದುಂಟು. ಆದರೆ ಇದು ತ್ರೇತಾಯುಗವೂ ಅಲ್ಲ. ನಾವು ಸೀತೆಯರೂ ಅಲ್ಲ. ಅದಕ್ಕೆ ಯಾವ ಭೂಭಾಗವೂ ಬಾಯ್ಬಿಡದೇ ನಾವೇ 'ಹೆ,ಹೆ' ಎಂದು ಬಾಯಿ ತೆರೆಯಬೇಕಾಗುತ್ತದೆ.

ಪೂನಾ, ಮುಂಬಯಿಗಳಂಥ ಊರುಗಳಲ್ಲಿ ಅತಿಥಿಗಳಾಗಿ ಹೋಗುವಾಗ ಕೊಂಚ ಹುಶಾರಾಗಿರಬೇಕು. ನಿಜವಾಗಿಯೂ ಕರೆದಿದ್ದಾರಾ ಎಂಬುದನ್ನು ಧೃಡೀಕರಿಸಿಕೊಂಡು, ಏನೇ ಇದ್ದರೂ ಅರ್ಧ ಹೊಟ್ಟೆ ತುಂಬಿಸಿಕೊಂಡೇ ಹೊರಡಿ. ಇಲ್ಲವಾದರೆ ನೀವು ಹಸಿವಿನಿಂದ ಹೋದಾಕ್ಷಣ ಅವರು ಗಡಿಯಾರದತ್ತ ನೋಡುತ್ತ "ಊಟ ಮುಗಿಸಿಕೊಂಡೇ ಬಂದಿರಬಹುದು" ಎಂದರೇ ನೀವು ಔಟ್. ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿ. ಇಲ್ಲವಾದರೂ ಊಟಕ್ಕೆ ಕುಳಿತಾಗ ಅವರ ಅನ್ನದ ಪಾತ್ರೆ ನೋಡಿಯೇ ಹೊಟ್ಟೆ ತುಂಬುತ್ತದೆ. ನಾವು ಪೂನಾಕ್ಕೆ ಹೋದಾಗ ಎದುರು ಮನೆಯಲ್ಲಿ ವಾಸವಾಗಿದ್ದ ಸಂಸ್ಕೃತಪ್ರಿಯ ದಂಪತಿಗಳು ಆಗ್ರಹಪೂರ್ವಕವಾಗಿ ಮರುದಿನದ ಬೆಳಿಗ್ಗೆಯ ಚಹ ಅವರ ಜೊತೆಯಲ್ಲೇ ಕುಡಿಯಬೇಕೆಂದು ಒತ್ತಾಯಿಸಿದರು. ನಾವು ನಿರಾಕರಿಸಿದರೂ ಕೇಳದೆ "ನಾವು ಏಳು ಗಂಟೆಗೆಲ್ಲ ಕೂಗುತ್ತೇವೆ" ಎಂಬ ಒಕ್ಕಣೆಯನ್ನೂ ಸೇರಿಸಿದರು. ನಾವು ಮಜುಗರಪಟ್ಟುಕೊಂಡೇ ಒಪ್ಪಿದೆವು. ಮರುದಿನ ಗಡಿಯಾರದ ಮುಳ್ಳು ಏಳು, ಎಂಟು ಬಿಟ್ಟು ಒಂಬತ್ತರತ್ತ ನಡೆದರೂ ಅವರ ಮನೆಯ ಬಾಗಿಲು ತೆರೆಯಲೇ ಇಲ್ಲ. ನಾವು ಕಾದಿದ್ದೇ ಬಂತು. ಅವರ ಮನೆಯ ರೇಡಿಯೋ ಮಾತ್ರ "ಸ್ವಾಗತಂ ಕರವಾಮಹೈ, ಅಹಿಭೋ ಅತಿಥಿ ಮಹೋದಯಾ" ಎಂದು ಹಾಡುತ್ತಿತ್ತು. ಕೊನೆಗೆ ಒಂಬತ್ತು ಗಂಟೆಗೆ ಠಾಕೋಠೀಕಾಗಿ ಸಿದ್ಧರಾಗಿ ಹೊರಬಂದು ನಮಗೆ "ಟಾಟಾ" ಹೇಳಿ ಹೊರಟು ಹೋದರು. ಬೆಪ್ಪು ತಕ್ಕಡಿಗಳಂತೆ ಕಾಯುತ್ತ ಕುಳಿತ ನಾವು "ಎಲ್ಲೋ ಮರೆತಿರಬೇಕು"ಎಂದು ಸುಮ್ಮನಾಗಿಬಿಟ್ಟೆವು.

ಅತಿಥಿಗಳಾಗಿ ಹೊರಡುವ ಮೊದಲು ಅತಿಥೇಯರ ಮನೆಯ ವಿಳಾಸ, ಫೋನ್ ನಂಬರ್ ಮುಂತಾದವುಗಳನ್ನು ಅವಶ್ಯವಾಗಿಟ್ಟುಕೊಳ್ಳಬೇಕು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸರಿಯಾದ ವಿಳಾಸ, ಫೋನ್ ನಂಬರ್ ಇಲ್ಲದೆ ಮನೆ ಹುಡುಕುವುದು ಹುಲ್ಲಿನ ಬಣವೆಯಲ್ಲಿ ಸೂಜಿ ಹುಡುಕಿದಷ್ಟೇ ಕಷ್ಟ. ಒಮ್ಮೆ ನಮ್ಮ ಮನೆಗೆ ಅಪರಿಚಿತ ಅತಿಥಿಗಳು ಬಂದರು. ಆಗಿನ್ನೂ ಮೊಬೈಲ್‌ಗಳು ಬಳಕೆಗೆ ಬಂದಿರಲಿಲ್ಲ. ಬರೀ ಸ್ಥಿರವಾಣಿಗಳದ್ದೇ ದರ್ಬಾರು. ಬಂದವರು ಹೊರಗೆ ಮನೆಯ ಹೆಸರು ನೋಡಿ ಒಳಗೆ ಬಂದು ಕುಳಿತರು. "ಬನ್ನಿ, ಬನ್ನಿ, ಹೆಲೊ"ಗಳಾದವು. ನನ್ನ ಪತಿ ಒಳಗೆ ಬಂದು "ಇವರ್‍ಯಾರೋ ನನಗೆ ಗೊತ್ತಿಲ್ಲ.

ನಿನಗೆ ಪರಿಚಯವೇ ನೋಡು" ಎಂದರು. ನಾನೂ ಹೊರಬಂದು ಪೆಚ್ಚು ನಗೆ ಬೀರಿದೆ. ಉಹ್ಞೂಂ, ನನಗೂ ಅವರ ಪರಿಚಯವಿರಲಿಲ್ಲ. ಇಬ್ಬರಿಗೂ ಏನು ಮಾತನಾಡಬೇಕೆಂದೇ ತಿಳಿಯಲಿಲ್ಲ. ಅವರು ನನ್ನ ಪತಿಯತ್ತ ತಿರುಗಿ "ನೀನು ಶಾಲೆಯ ದಿನಗಳಿಂದಲೂ ಕನ್ನಡಕ ಉಪಯೋಗಿಸುತ್ತಿದ್ದೆಯಲ್ಲ, ಈಗಿಲ್ಲವೇ?" ಎಂದು ಕೇಳಿದರು. ಇವರು "ನಾನಿಂದಿನವರೆಗೂ ಕನ್ನಡಕ ಉಪಯೋಗಿಸಿಯೇ ಇಲ್ಲ."ಎಂದರು. "ಛೆ! ಸುಳ್ಳು ಹೇಳಬೇಡ. ಕನ್ನಡಕವಿಲ್ಲದೇ ನಿನ್ನ ನೋಡಿದ ನೆನಪೇ ಇಲ್ಲ"ಎಂದವರು ಹೇಳುವಾಗಲೇ ನಮ್ಮ ಮನೆಯ ಮಾಲೀಕರು ದಡ–ದಡನೇ ಮೆಟ್ಟಿಲು ಇಳಿಯುತ್ತ ಬಂದು "ಇವರು ನಮ್ಮ ಅತಿಥಿಗಳು. 'ಫಸ್ಟ ಫ್ಲೋರ್'ಎಂದು ಹೇಳಲು ಮರೆತಿದ್ದೆ." ಎಂದಾಗ ಸನ್ನಿವೇಶ ತಿಳಿಯಾಯಿತು. ಅಸಲು ವಿಷಯವೆಂದರೆ ಅವರಿಬ್ಬರೂ ಶಾಲೆಯಲ್ಲಿ ಉತ್ತಮ ಗೆಳೆಯರು. ಹದಿನೈದು ವರ್ಷಗಳ ನಂತರ ಸಂಸಾರಗಳೊಂದಿಗೆ ಭೇಟಿಯಾಗುತ್ತಿದ್ದರು.

ನಿಮಗಿರುವ ಮಹಾ–ರಾಜ–ರೋಗಗಳ ಬಗ್ಗೆ ಆತಿಥೇಯರಿಗೆ ಮುಂಚಿತವಾಗಿ ಸೂಚನೆ ಕೊಡುವದು ಒಳ್ಳೆಯದು. ಇಲ್ಲವಾದಲ್ಲಿ ಅವರು ಒಬ್ಬಟ್ಟು ತಂದರೆ ಮಧುಮೇಹ ನಿಮ್ಮನ್ನು ನಿಂತು ಅಣಕಿಸುತ್ತದೆ. ಬೋಂಡ ಕಂಡು ಆಸೆಯಾಗಿ ಕೈ ಹಾಕಿದಿರೋ ಕೊಲೆಸ್ಟ್ರಾಲ್ ಹೊಡೆದುಕೊಳ್ಳುತ್ತದೆ. ಬಿಸಿಬೇಳೆಭಾತ್ ಬಾಯಿಗಿಟ್ಟು ಚಪ್ಪರಿಸಿದರೆ ಎಸಿಡಿಟಿ ನಿಮ್ಮನ್ನು ಎಸೆದೇಬಿಡುತ್ತದೆ. ಅಲ್ಲದೇ ಹೃದ್ರೋಗಗಳು, ಅಲರ್ಜಿ ಮುಂತಾದವುಗಳು ನಿಮ್ಮನ್ನು ಬಹಳ 'ಚೂಸಿ'ಯಾಗಿಸುತ್ತವೆ. ಪಾಪ, ಕರೆದವರೇನು ಅಡಿಗೆ, ತಿಂಡಿ ಮಾಡಬೇಕು ಹೇಳಿ.

ಇಷ್ಟೆಲ್ಲ ಅಡಿಗೆಯೋ, ತಿಂಡಿಯೋ ಮಾಡಿದ ಮೇಲೆ ಬಡಿಸುವ ಸರದಿ. ಬಡಿಸುವದೂ ಒಂದು ಕಲೆಯೇ. ಧಾರಾಳಿಗಳೆಂದು ತೋರಿಸಿಕೊಳ್ಳಲು ಜಾಸ್ತಿ ಬಡಿಸಿದರೆ ಚೆಲ್ಲುವದು ಕಷ್ಟ ಮುಗಿಸಲು ಅವರು ನಡೆಸುವ ಪರದಾಟ ನೋಡಲಸಾಧ್ಯ. ಸ್ವಲ್ಪವೇ ಬಡಿಸಿದರೆ ಕಡಿಮೆ ಇರಬಹುದೇನೋ ಎಂದು ತಿರುಗಿ ಕೇಳಲು ಸಂಕೋಚವಾಗಿ ಎದ್ದು ಬಿಡುವುದುಂಟು. 'ಜಿಪುಣ'ರೆಂಬ ಬಿರುದು ಕಟ್ಟಿಟ್ಟ ಬುತ್ತಿ. ಒಮ್ಮೊಮ್ಮೆ ಬಫೆಯೇ ಒಳಿತು ಎನ್ನುವ ಸಂದರ್ಭ. ಆದರೆ ಹಳೆಯ ತಲೆಮಾರಿನವರಿಗೆ ಬಫೆ ಇಷ್ಟವಾಗುವದಿಲ್ಲ. "ಭಿಕ್ಷುಕರಂತೆ ತಟ್ಟೆ ಹಿಡಿದು ನಿಲ್ಲಬೇಕು. ಅಮ್ಮಾ.....ತಾಯೀ....ಎನ್ನುವದೊಂದೇ ಬಾಕಿ." ಎಂದು ಹೀಗಳೆಯುತ್ತಾರೆ. ಇನ್ನು ಕೆಲವು ಮನೆಗಳಲ್ಲಿ ಆತಿಥೇಯ ದಂಪತಿಗಳಿಬ್ಬರೂ ಉದ್ಯೋಗಸ್ಥರಾಗಿದ್ದರೆ, ವಯೋವೃದ್ಧರಾಗಿದ್ದರೆ ಗೃಹಿಣಿ ಮೊದಲು ಕೆಲಸದವಳ, ಅಡಿಗೆಯವಳ ಒಪ್ಪಿಗೆ ಕೇಳಬೇಕು. ಅವಳು "ಈಗ ಸಾಧ್ಯವಿಲ್ಲಕ್ಕ. ಎರಡು ದಿನ ನಾನೇ ಬರಲ್ಲ. ಊರಿಗೆ ಹೋಗಬೇಕು" ಎಂದಳೋ ನಿಮ್ಮ ಕಾರ್ಯಕ್ರಮ ರದ್ದಾಗುತ್ತದೆ. ಹೋಟೆಲ್‌ನಲ್ಲಿ ಪಾರ್ಟಿ ಕೊಟ್ಟ್ರೋ, ಮನೆಗೆ ಕೇಟರಿಂಗ್ ತರಿಸಿ ಕೈತೊಳೆದುಕೊಳ್ಳಬೇಕಾಗುತ್ತದೆ.

ಅಲ್ಲಿ ಖರ್ಚಿನ ಪ್ರಶ್ನೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು 'ಅತಿಥಿ ದೇವೋ ಭವ' ಎಂದು ಇಂದಿನ ದಿನಗಳಲ್ಲಿ ಹೇಳಲಾದೀತೆ?

ಆತಿಥೇಯರ ಬಗ್ಗೆ ಮುಖ್ಯವಾಗಿ ಹೇಳುವದಾದರೆ ಅತಿಥಿಗಳ ಬರುವಿಕೆಯನ್ನು ಖಚಿತಪಡಿಸಿಕೊಂಡೇ ಅಡಿಗೆ, ತಿಂಡಿಯ ಸಿದ್ಧತೆ ಮಾಡಬೇಕು. ಎಲ್ಲರ ಮಧ್ಯೆ ಕಡಿಮೆಯಾಗಬಾರದೆಂಬ ಭಾವನೆ ನಮ್ಮಲ್ಲಿ ಬೇರೂರಿರುವದರಿಂದ ಬರುವ ಅತಿಥಿಗಳ ಹೊಟ್ಟೆಯನ್ನು ರಾಕ್ಷಸರಂತೆಯೋ, ಹೊಟ್ಟೆಬಾಕರಂತೆಯೋ ಪರಿಗಣಿಸಲು ಕಾರಣವಾಗುತ್ತದೆ. ಅವರು ಬರದೇ ತಪ್ಪಿಸಿದಲ್ಲಿ ಅಥವಾ ಬಂದು ಸುಮ್ಮನೇ ತಟ್ಟೆ ಎಂಜಲು ಮಾಡಿ ಎದ್ದಲ್ಲಿ ಉಳಿದದ್ದಷ್ಟನ್ನು ತುಂಬಿಕೊಂಡು ನಿಮ್ಮ ತಂಗಳು ಪೆಟ್ಟಿಗೆ ತುಳುಕುತ್ತದೆ. ಮುಂದೆ ನಾಲ್ಕು ದಿನ ಅದನ್ನು ಬಿಸಿ ಮಾಡಿಕೊಂಡು ತಿನ್ನುವ ಶಿಕ್ಷೆ ನಿಮ್ಮ ಪಾಲಿಗೆ. ನೀವು ತಂಗಳು ತಿನ್ನುವುದಿಲ್ಲವೆಂದಾದರೆ ಕೆಲಸದವಳ ಇಡೀ ಪರಿವಾರಕ್ಕಂದು ರಸದೂಟ. ಅವಳು ಬಂದಿದ್ದರಷ್ಟೇ.

ಇವೆಲ್ಲ ಅತಿಥಿ, ಆತಿಥೇಯರ ಮಧ್ಯೆ ಸರಳವಾಗಿ ಎದುರಾಗುವ ಸಮಸ್ಯೆಗಳಿಗೆ ಸ್ವಲ್ಪ ವಕ್ರವಾದ ಟಿಪ್ಪಣಿ. ವಿಶೇಷವಾಗಿ ನೀವು ಆತಿಥಿಗಳಾದಾಗಲೋ, ಆತಿಥೇಯರಾದಾಗಲೋ ಇವುಗಳ ಉಪಯೋಗ ಪಡೆದುಕೊಳ್ಳುತ್ತೀರಿ ಎಂದು ನನ್ನ ಬಲವಾದ ನಂಬಿಕೆ. ಕಾಲಕ್ಕೆ ತಕ್ಕಂತೆ ಸರ್ವಜ್ಞನ ಮತ್ತು ಅನುಭಾವಿಗಳ ಕ್ಷಮೆ ಕೋರುತ್ತ ಸರ್ವಜ್ಞನ ತ್ರಿಪದಿಯೊಂದನ್ನು ಕೊಂಚ ಬದಲಿಸಿ ಹೇಳುತ್ತಿದ್ದೇನೆ.

ಹೇಳಿ ಬರುವವನು ರೂಢಿಯೊಳ್ ಉತ್ತಮನು,
ಹೇಳದೆ ಬರುವವನು ಮಧ್ಯಮನು,
ಅಧಮ ತಾ ಹೇಳಿ ಬರದವನು ಸರ್ವಜ್ಞ.

**ಮಧುರಾ ಕರ್ಣಮ್**
ಮಯೂರ, ಏಪ್ರಿಲ್ 2014

# ನಮ್ ಸ್ಕೂಲೂ ಮತ್ತು ನಮ್ ಮೇಷ್ಟ್ರುಗಳೂ!

ಪರ್‌ಗಿರೀಕ್ಸೆ ಮಾಡ್ತಾನೌನು
ಭಕ್ತನ್ ಮೇಲೌನ್ ಕಣ್ಣು

– ಎಂಬ ರತ್ನನ ಪದ ಕನ್ನಡ ಹೊಗಳಕ್ ಹೇಳಿದ್ರೂ ಅದು ನಂ ಮೇಷ್ಟ್ರಿಗೇ ಹೇಳ್ದಂಗಾಗಿ ನಮ್ಮನ್ನ ಕ್ಷಣ–ಕ್ಷಣವೂ ಹೆಂಗ್ ಹೆಂಗಾರೆ ಪರೀಕ್ಷೆ ಮಾಡಿ ಇಡೀ ಮಾನವ ಜನ್ಮ; ಜನ್ಮ–ಜನ್ಮಾಂತರಕ್ಕೂ ಬ್ಯಾಡ, ಅದ್ರಾಗೂ ನಂ ಕಾಲದ ಅಂದಿನ ಮೇಷ್ಟ್ರ ಕೈಯಾಗೆ ಸಿಕ್ಕಿಹಾಕಿಕೊಳ್ಳೋ ಹುಡುಗರ ಪಾಡು ನಾಯಿಪಾಡು ಅನ್ನಂಗಾಗ್ತಿತ್ತು!

ನಾವ್ ಓದ್ವಾಗ ಮೇಷ್ಟ್ರಿಗಿಂತ ಜವಾನನಿಗೇ ಭಾಳ ಹೆದರ್‍ತಿದ್ವಿ! ಆತ ಜವಾನ ಅಲ್ಲ ದಿವಾನ; ದಿವಾನ್ಗಿರಿಗಿಂತ ಕಮ್ಮಿ, ಮೇಷ್ಟ್ರಿಗಿಂತ ಜಾಸ್ತಿ ಅನ್ನಂಗಿರೋನು! ಚೆಂಬಸಣ್ಣ ಅಂತ ಆತ ಯಮಸ್ವರೂಪಿ ಆಸಾಮಿ. ನಮ್ ಮೂರು–ನಾಲ್ಕನೇ ಕ್ಲಾಸಿನ ಜೀವನದಲ್ಲಿ ಅರ್ಧ ಸಿನಿಮಾ ಆದ ಮೇಲೆ ಬರೋ ಕೇಡಿಯಂತೆ ಬಂದು ಬಿಟ್ಟ! ಈ 'ಕೇಡಿ' ಪದ ಹೇಗೆ ಹುಟ್ತೋ ನಂಗೊತ್ತಿಲ್ಲ. ಇಗಿನ ವಿಲನ್ ಅಂದಿನ ಕೇಡಿ; ಬಹುಶಃ ಕಳ್ಳರ ಡಿಪಾರ್ಟ್‌ಮೆಂಟ್‌ಗೆ ಶಾರ್ಟಾಗಿ ಕೇಡಿ ಅಂತಿದ್ರೇನೋ! ಈ ಚೆಂಬಸಣ್ಣ ಎಂಬ ಚೆನ್ನಬಸಪ್ಪ ಬಿಳಿ ಜುಬ್ಬಾದಂಥಾ ಅಂಗಿ, ಪಟ್ಟೆಪಟ್ಟೆ ನಿಕ್ಕರ್ ಕಾಣಂಗೆ ಬಿಳೀ ಲುಂಗಿ ಹಾಕ್ಕಂಡ್ ಎಲ್ ಹೋದ್ರೂ, ಬಂದ್ರೂ ನೋಡಿದ್ರೆ ಅರ್ಧ ಜೀವ ಹೋಗೇ ಬಿಡ್ತಿತ್ತು! ಶಾಲೆಗೆ ಬರದಿರೋ ಹುಡುಗರ್‍ನ ಅವರ ಮನೆಗೇ ಹೋಗಿ ಅಕ್ಷರಶಃ ಹೆಗಲಿಗೆ ಹಾಕ್ಕಂಡ್ ಹೋಗ್ ಬಿಡಾನು ಮಾರಾಯ. ಹೊತ್ಕೊಂಡ್ ಹೋಗ್ಲಿ, ಶಾಲೆ ಮುಟ್ಟಿದ್ ಮೇಲೆ ನಿಧಾನ ಇಳಿಸಬೇಕಲ್ಲ; ಉಹ್ಞುಂ, ರಾಗಿ ಮೂಟೆ ಬಿಸಾಡಿದಂತೆ ಧೊಪ್ ಅಂತ ಬಿಸಾಕನು! ಅಲ್ಲಿಗೂ ಭಂಡಿದ್ದು ಕೆಲ ಹುಡುಗ್ರು ತಪ್ಪಿಸ್ಕಳಾಕೆ ಹೋದ್ರೆ ಕೈ–ಕಾಲ್ ತಿರುವಿ ಬೆನ್ಮೇಲ್ ಹತ್ತಿ ಕೂತು ಬಿಡಾನು! ಇಂಥಾ ಉಗ್ರಸ್ವರೂಪಿ ಚೆಂಬಸಣ್ಣನಿಂದ ಶಲೆ ಕಂಡವರು ನಾವು!

ಇನ್ ಶಾಲೆ ಅಂದ್ರೆ ಬಿಡಿ, ಮಲ್ಲಿಕಾರ್ಜುನ ಮನಸೂರರು ಓದಿದ್ರಂತಲ್ಲಾ ಗಾಂವಟಿ ಶಾಲೆ ಅಂಥಾದು! ಗಾಳಿ, ಬೆಳಕು ಅಷ್ಟೇ ಏನು? ಜ್ಞಾನಾನೂ ಒಳಗೆ ಬರದಿರೋ ಹಳೆ ಗೋಡಾನೇ ಅಂದಿನ ನಮ್ ಶಾಲೆಗಳು! ಹಜಾರದಂಥಾ ದೊಡ್ಡ ಹಾಲ್‌ಗಳಲ್ಲಿ ಉದ್ದಕ್ಕೆ, ಅಡ್ಡಕ್ಕೆ ಸೀಮೆಸುಣ್ಣದಿಂದ ಗೆರೆ ಎಳೆದು ನಾಕು ಭಾಗ ಮಾಡಿ ೧,೨,೩,೪ನೇ ತರಗತಿ ಅಂತ ಕೂರಿಸಿಬಿಡೋರು. ೧,೨ ನೆಲದ ಮೇಲೆ ೩,೪ ಮರದ ಮಣೆ ಮೇಲೆ! ಅದೂ ಏಕ ವಿಶಾಲ ಕೋಣೆಯಲ್ಲಿ. ನಾಕು ದಿಕ್ಕಿಗೂ ಒಬ್ಬರೇ ಮೇಷ್ಟ್ರು!

ಆದರೆ ಅದು ಏಕೋಪಾಧ್ಯಾಯ ಶಾಲೆ ಅಲ್ಲ. ಬೇರೆ–ಬೇರೆ ಮೇಷ್ಟ್ರು ಇದ್ರೂ ಶಾಲೆಗೆ ಬರೋ ಟೈಮಿಂಗ್ಸ್ ಮಾತ್ರ ಅವರೆ ಅಡ್ಜಸ್ಟ್ ಮಾಡ್ಕಂಡ್ ಬರೋರು! ಬೆಳಿಗ್ಗೆಯಿಂದ ಒಬ್ರು, ಮಧ್ಯಾಹ್ನಕ್ಕೊಬ್ರು ಬಂದು ಹುಡುಗರನ್ನ ಕಾಯೋರು! ವರ್ಣಮಾಲೆ, ಕಾಗುಣಿತ, ಮಗ್ಗಿ ಈ ಮೂರೇ ಇಡೀ ವರ್ಷ ನಾಕೂ ತರಗತಿಗಳಿಗೆ!

ನಮ್ ಶಾಲೆಯ ಹಿತ್ತಲಿಗೆ ಭಾರೀ ಕಣಗಳು; ಈಗಿನ ಕೆಲ ಮಕ್ಳು ಕಣ ಅಂದ್ರೆ ವಿಜ್ಞಾನದ ಕಣ ಅಂದ್ಕಂತವೆ! ರಾಗಿ, ಜೋಳ, ಮೆಕ್ಕೆಜೋಳ ಮುಂತಾದ ದವಸಧಾನ್ಯಗಳನ್ನ ಹೊಲದಿಂದ ತಂದು ಕಣದಲ್ಲಿ ಒಟ್ಟಿ, ತುಳಿಸಿ, ತೂರಿ, ರಾಶಿ ಮಾಡಿ ಧಾನ್ಯದ ರಾಶಿ ಪೂಜೆ ಮಾಡಿ ಬಂದೋರಿಗೆ ಮರಗಳಲ್ಲಿ (ನೆರಳಿನ ಮರ ಅಲ್ಲ, ಧಾನ್ಯ ಚಪ್ಪರಿಸೋ ಮೊರ!) ದಾನ ನೀಡಿ ನಂತರ ಚೀಲ ತುಂಬೋರು! ಈಗ? ಬೆಳೆದಿದ್ದನ್ನೆಲ್ಲಾ ತಂದು ಡಾಂಬರ್ ರೋಡಿಗೆ, ಹೈವೇಗೆ, ಜಿಲ್ಲಾಮುಖ್ಯ ರಸ್ತೆಗೆ ಸುರಿದು, ಬರೋ ಲಾರಿ, ಬಸ್ಸು, ಟ್ಯಾಕ್ಸಿಗಳನ್ನ ಕಾದು ಅವು ಹಾದು ಹೋದ್ಮೇಲೆ ಕಸ ಕಡ್ಡೀನೆಲ್ಲಾ ದುಂಡಗೆ ಮಾಡಿ ಚೀಲ ತುಂಬ್ಕಂಡ್ ಹೋಗೋ ಕಾಲವಿದು! ಕಣಗಳೆಲ್ಲವೂ ಈಗೀಗ ಸೈಟು–ಕಾಂಪ್ಲೆಕ್ಸುಗಳಾಗಿ ಬದಲಾಗಿವೆ–ಬದಲಾಗ್ತಿವೆ. ನಮ್ಮ ರೈತ ಕೂಡ ಜಾಗತೀಕರಣದ ಬಲಿಪಶುವಾಗಿಯೋ, ಆಧುನಿಕತೆ ಸೋಗಿನಲ್ಲೋ ಕಳೆದು ಹೋಗುತ್ತಿರುವುದು ಮಾತ್ರ ದುರಂತ!

ಇಂಥಾ ಕಣದಲ್ಲಿರೋ ತೊಗರಿ ಬಣವೆಗಳಿಂದ ಬಲವಾದ ಕೋಲಂಥಾ ತೊಗರಿ ಕಡ್ಡಿ ಮಾನಿಟರ್ ಆದವನು ಅಂದ್ರೆ ಈಗಿನ ಕ್ಲಾಸ್ ಲೀಡರ್ ತಂದು ಮೇಷ್ಟ್ರ ಕೈಲಿ ಕೊಟ್ಟ ಅಂದ್ರೆ ಎಂಥಾ ದಡ್ಡನಿಗೂ ಮಗ್ಗಿ, ಕಾಗುಣಿತ ಕರತಲಾಮಲಕವಾಗಿಬಿಡೋದು!

ರಾಜಕೀಯ ಇಲ್ಲದ, ಹೆಚ್ಚು ಸಂಬಳ ಇಲ್ಲದ, ಯಾವುದೇ ಗುಂಪುಗಾರಿಕೆ ಇಲ್ಲದ ನಂ ಮೇಷ್ಟ್ರು ಹಳೇ ಸಿನಿಮಾದ ಅಮಿತಾಭ್ ಬಚ್ಚನ್ ಹಾಕ್ಕಳ್ಳೋ ದೊಗಳೆಯಂಥಾ ಬೆಲ್ಬಾಟಮ್ ಪ್ಯಾಂಟ್, ಮೊಲದ ಕಿವಿಯ ಕಾಲರಿನ ಶರ್ಟ್ ಧರಿಸಿ ಬಂದ್ರೆ ನೋಡೋಕೊಂದ್ ಅಂದ! ಶೇಕ್ರಪ್ಪ ಮೇಷ್ಟ್ರು ಅಂತ ಇದ್ರು. ಸದಾ ಬೂದಿ ಬಣ್ಣದ ಸಫಾರಿ ಹಾಕ್ಕಂಡ್ ಬಿಳಿ ಕನ್ನಡಕ ಮೂಗಿನ್ ಮೇಲೆ ಏರಿಸಿ ಬಂದ್ರೆ ಥೇಟ್ ಸಾಹೇಬರಂತೆ ಕಾಣ್ತಿದ್ರು! ಕಲಿಸೋ ರೀತಿಯೂ ಸರಳಾತಿಸರಳ!

ಇವನೆ ನೋಡು ಅನ್ನದಾತ
ಹೊಲದಿ ದುಡಿದೆ ದುಡಿವನು
ನಾಡ ಜನರು ಬದುಕಲೆಂದು
ದವಸ ಧಾನ್ಯ ಬೆಳೆವನು

– ಎಂಬ ರೈತ ಗೀತೆ ರಾಗವಾಗಿ ಹಾಡ್ತಾ ಇದ್ರೆ ಅರ್ಥ ಗೊತ್ತಿರದ ನಾವು ದೊ...ಡ್ ಬಾಯ್ ಮಾಡ್ಕಂಡ್ ಏರಿಳಿತ ಇಲ್ದಂಗೆ ಒದರ್ತಾ ಇದ್ವಿ!

ಅಲ್ಲಿಂದ ಅದ್ಹೆಂಗೋ ಏನೋ ಜಂಪಾಗಿ ಹಿರಿಯ ಪ್ರಾಥಮಿಕ ಶಾಲೆಗೆ ಬಂದಿದ್ದು ಪವಾಡ! ಪ್ರೈಮರಿ ಪರೀಕ್ಷೆ ಮುಗಿದ ವಾರಕ್ಕೋ, ತಿಂಗಳಿಗೋ ಒಂದು ಒಳ್ಳೇ ದಿನ ನಿಗದಿ ಮಾಡಿ ಪಾಸು-ಫೇಲು ಇದೆ ಅನ್ನೋರು. ನಾವು ಬಿಸ್ಲಾಗೆ ನಾಯಿ ಥರಾ ಅಲ್ಲಿ-ಇಲ್ಲಿ ಸುತ್ತಿ, ಚಾನಲ್‌ನಾಗೆ ಧುಮುಕಿ ಈಜಾಡ್ಕಂಡ್ ಅಜ್ಜಂಗೋ, ಅಜ್ಜೀಗೋ ಪಾಸು ಫೇಲಿನ ದಿನ ನೆಪ್ ಮಾಡಿ ಅಂತ ಆರ್ಡರ್ ಮಾಡಿರ್ತಿದ್ವಿ! ಆ ದಿನ ಬಂದ್ರೂ ಶಾಲೆ ಕಡೆ ಹೋಗಾಕೇ ಭಯ ಆಗೋದು; ಪಾಸು ಫೇಲಿಗಲ್ಲ, ಮತ್ತೆ ಶಾಲೆ ಶುರು ಮಾಡ್ಯಾರಂತ! ಅದೂ ಅಲ್ದೆ ನಂ ಮೇಷ್ಟ್ರುಗಳ ಮೇಷ್ಟ್ರು ಚಂಬಸಣ್ಣ ಎಲ್ಲಿ ಅದಕ್ಕೂ ಹೆಗಲ್ ಕೊಟ್ಟುಬಿಡ್ತಾನೋ ಅನ್ನೋ ದಿಗಿಲು! ಅಂಡ್ ಕೆರ್ಕಂತಾ ಹರಕು ನಿಕ್ಕರ್‌ನಾಗೆ ಶಾಲೆ ಕಟ್ಟೆ ಹತ್ತಿ ಒಳಕ್ ಹೋದ್ರೆ ಹಂಗೇ ಘಂ ಅನ್ನೋ ವಾಸ್ನೆ ಬರ್ತಿರಾದು!

ಶಾರದ ಮಾತೆ ಫೋಟೋ ಇಟ್ಟು ಪೂಜೆ ಮಾಡಿ ಅದರ ಮುಂದೆ ಮೊದ್ಲಿಗೇ ಹೋಗಿರೋ ಹುಡುಗರನ್ನ ಕೂರ್ಸಿ ಮಂಡಕ್ಕಿ-ಬೆಲ್ಲ, ಬಾಳೆಹಣ್ಣು, ಕೊಬ್ರಿ ಮಿಶ್ರಣದ 'ಚೆರುಪು' ಸಿದ್ಧ ಮಾಡ್ಕಂಡ್ ಯಾವತ್ತೂ ಇಲ್ಲದ ಎಲ್ಲಾ ಮೇಷ್ಟ್ರುಗಳೆಲ್ಲಾ ಸೇರ್ಕಂಡು ಕೂತಿರೋರು. ಕಿತ್ತೋದ ಹಳೇ ಫೈಲ್‌ನಂಥಾ ಹಾಜರಿ ಬುಕ್ ಹಿಡ್ಕಂಡು ಶ್.. ಶ್.. ಸದ್ದು, ಮುಚ್ರಲೆ ಬಾಯಿ ಅಂತಾ ಕೂಗ್ತಾನೇ ಪಾಸು-ಫೇಲು ಹೇಳ್ತೀವಿ ಕೇಳಿ ಅದ್ಕೂಡ್ಲೆ ವೋಟ್ರು ಗಪ್‌ಚುಪ್! ನಮಗೆ ಪಾಸು-ಫೇಲ್ಗಿಂತ ಆ ಚೆರಪಿನ ಮೇಲೆ ಕಣ್ಣಿತ್ತು!

ಕೆಂಚ, ಚನ್ನಬಸವ, ಬಸ್ರಾಜ, ಸರೋಜ, ಹುಸೇನಿ ಅಂತ ಅನ್ನೋರು ನಮಗೆ ಆಶ್ಚರ್ಯ. ಆ ಹೆಸರಿನವರು ಅಮಾಸಿಗೆ ಹುಣ್ಣಿಮೆಗೆ ಕೂಡಾ ಶಾಲೆ ನೋಡಿದವರಲ್ಲ ಇವರನ್ಯಾಕೆ ಕೂಗ್ತಿದ್ದಾರೆಂದು ಅಂದ್ಕಳ್ಳೋ ಹೊತ್ಗೆ ಒಂದು ೮-೧೦ ಹೆಸರು ಹೇಳಿ ಇವರೆಲ್ಲಾ.. ಇವರೆಲ್ಲಾ ಅಂತ ಹಂಗೆ ನಿಲ್ಸರು.

ನಮಗೆ ಕೊನೆ ಓವರ್‌ನ ಕೊನೇ ಬಾಲ್ ಸಿಕ್ಸರ್ರೇ ಆಗಬೇಕೆನ್ನುವಷ್ಟು ಟೆನ್ಷನ್ನು! ಮೇಷ್ಟ್ರುಗಳು ಎಲ್ಲಾ ಮಕ್ಕಳ ಮುಖ ನೋಡಿ, ನಮ್ ಗಾಬರಿ ಎಂಜಾಯ್ ಮಾಡಿದ ಮರುಗಳಿಗೆ ಇಷ್ಟು ಜನ ಬಿಟ್ಟು ಉಳಿದೋರೆಲ್ಲಾ.. ಪಾಸು ಕಣ್ರಲೇ ಅನ್ನೋದೇ ತಡ ಕರಿಹೆಂಚಿನ ಸೂರ್ ಹಂಗೇ ಹಾರಿ ಹೋಗಂಗೆ ಹುಯ್.. ಅಂತ ಕೇಕೆ ಹೊಡೀತಿದ್ವಿ! ಅದೇ ನಮ್ಮ ಚೆಂಬಸಣ್ಣ ಸಿಲವರ್ ಬೇಸನ್ನಾಗೆ ಆ ಚೆರಪು ಹಾಕ್ಕೊಂಡ್ ಒಂದೊಂದೇ ಹಿಡಿ ಹಾಕಿ ಹಾಕಿ ಹೊರಾಗ್ ಬಿಡಾನು, ಆ ಕ್ಷಣ ಇಡೀ ವರ್ಷ ಆತ ನಮಗೆ ಕೊಟ್ಟ ಕಾಟ ಮರ್ತೇ ಹೋಗಾದು! ಇದು ನಂ ಪ್ರೈಮರಿ ರಿಸಲ್ಟ್!

ಆ ಪ್ರೈಮರಿಯಿಂದ ನಮ್ಮೂರಾಗೆ ಮಿಡ್ಲಿಸ್ಕೂಲ್ ಅಂದ್ರೆ ಮಿಡಲ್ ಸ್ಕೂಲ್‌ಗೆ ಇಡ್ಲಿ ಎಂಬಂತೆ ನಾವೆಲ್ಲಾ ಮಿಡ್ಲಿಸ್ಕೂಲ್, ಮಿಡ್ಲಿಸ್ಕೂಲ್ ಅಂತಿದ್ವಿ! ಅದ್ರಾಗೂ ಸಾಬ್ರ ಗೆಳೆಯರು ನಾವೆಲ್ಲಾ 'ಸ'ಕಾರದ ಪದಗಳಿಗೆಲ್ಲಾ 'ಇ'ಕಾರ ಸೇರ್ಸಿ ಇಸ್ಕೂಲ್, ಇಸ್ಟೈಲ್,

ಇಸ್ಕೂಡ್ರೈವರ್ ಅಂತಿದ್ವಿ! ನಮ್ಮ ಗೆಳೆಯ ಮಾಲೀಕ್ ಅಂತ ಇದ್ದ. ಅವನ ಬಾಯಲ್ಲಂತೂ ಸೈಕಲ್‌ಗೆ 'ಸೈಂಕಲ್' ಅಂತಾನೇ ಬರಾದು. ಇಂಥಾ 'ಮುಸ್ಲೀಮಗನ್ನಡಾ'ನ ನಮ್ಮಲ್ಲಿ ಡಿಗ್ರಿ ಮುಗಿಸ್ಕಂಡಿದ್ರೂ ಹಂಗೇ, ಅದೇ ಬಳಸ್ತಾರೆ.

ಇನ್ನ ಈ ಮಿಡ್ಲಿಸ್ಕೂಲ್‌ಗೆ ಬಂದ ಹೊಸಾದು. ಹಿಂದಿನ ಕರಿಹೆಂಚಿನ ಗೂಡಿಂದ ಕೆಂಪ್ಹೆಂಚು: ಅದೆ ಮಂಗ್ಳೂರ್ ಹೆಂಚು ಹೊದ್ಕಂಡಿರೋ ವಿಶಾಲವಾದ ಶಾಲೆಗೆ ಬಂದ್ವಿ. ಮೊನ್ನೆಮೊನ್ನೆ ಈ ಕೆಂಪು ಹೆಂಚು ತಯಾರಿಸೋ ಕಾರ್ಖಾನೆ ಮುಚ್ಚಿದ್ರು ಅಂತ ಪೇಪರ್ ಸುದ್ದಿ ಓದಿ ಬಲು ಬೇಜಾರಾಯ್ತು! ಆರ್.ಸಿ.ಸಿ ಅಂತೆ, ಬಿಲ್ಡಿಂಗ್ ಅಂತೆ–ಅಂಥ ಶಾಲೆ ಕಾಲೇಜು ಕಟ್ಟಡ ಏಳೋ ಈಗಿನ ದಿನಗಳಲ್ಲಿ ನಂ ಕಾಲದ ಹೆಂಚಿನ ಶಾಲೆಗಳು ತುಂಬಾ ನೆನಪಾಗ್ತವೆ, ಕಾಡ್ತವೆ!

ನಂ ಮಿಡ್ಲಿಸ್ಕೂಲ್‌ನಲ್ಲಿ ಈಶ್ವರಪ್ಪ ಮೇಷ್ಟ್ರು, ಮುರ್ಗಿ ಮೇಷ್ಟ್ರು, ಕೆಂಡಯ್ಯ ಮೇಷ್ಟ್ರು, ಶಂಕರಮೂರ್ತಿ ಮೇಷ್ಟ್ರು, ಅಂತ ಚತುರ್ಮುಖ ಬ್ರಹ್ಮರು ಇದ್ರು; ಒಬ್ಬೊಬ್ಬರು ಒಂದೊಂದು ರೀತೀಲಿ ಬ್ರಹ್ಮರೆ! ಈಶ್ವರಪ್ಪ ಮೇಷ್ಟ್ರು ಈಗಲೂ ಇದ್ದಾರೆ; ಕಪ್ಪಗೆ, ದಪ್ಪಗೆ, ಗುಂಡು ತಲೆ ನೋಡಿದ್ರೇನೆ ಆಗ ಎದೆ ಡೊಳ್ಳಾಗ! (ಈಗಲೂ ಆ ಭಯ ಭಕ್ತಿ ಇದೆ ಬಿಡಿ) ವಿಜ್ಞಾನ ಅದ್ಭುತವಾಗಿ ಕಲಿಸೋರು. ಅಕ್ಷರಶಃ ಹುಡುಗರನ್ನ ಬೋರ್ಡ್‌ದುರಿಗೆ ನಿಲ್ಸಿ ಅವರ ಕಣ್ಣಲ್ಲಿ ಬೆರಳಿಟ್ಟು ಕಣ್ಣು ಮುಟ್ತಾ ಮುಟ್ತಾ ಮೂಗು, ಬಾಯಿ, ಗಂಟಲು, ಅನ್ನನಾಳ, ಜಠರ.. ಅಂತ ಒನ್ ಬೈ ಒನ್ ಅಂಗ ಮುಟ್ಟಿ ಪ್ರಾಯೋಗಿಕವಾಗಿ ತೋರಿಸ್ತಾ ಕಲಿಸೋರು! ಅವರ ಮುಖ ಕಪ್ಪು, ಮನಸ್ಸು ಮಾತ್ರ ಹಾಲೋ ಹಾಲು (ಆಲ್ಕೋಹಾಲಲ್ಲ!) ಶಾಲೆಗೆ ಒಂದ್ ದಿನ ತಪ್ಪಿಸಿಕೊಂಡ್ರೂ ಬೆಂಕಿಯಾಗೋರು; ತಪ್ಪಿಸಿಕೊಳ್ಳಲು ಅನಾರೋಗ್ಯದ ನೆಪ ಹೇಳಿದ್ರೆ 'ಕೈಕಾಲು ಕಡಿದರೂ ಉಲ್ಡಾಡಕಂಡ್ ಬಂದ್ ಎಸ್ ಸಾರ್ ಅಂತ ಹಾಜರಿ ಹೇಳ್ಬೇಕು' ಅನ್ನುತ್ತಾ ಕತ್ತು ಹಿಡಿದು ಬಗ್ಗಿಸಿ ಕುಂಡೆ ಗೋಡೆಗೆ ಅಪ್ಪಚ್ಚಿಯಾಗುವಂತೆ ಗುದ್ದೋರು!

ಮುರ್ಗಿ ಮೇಷ್ಟ್ರು ಅಂದ್ನಲ್ಲಾ, ಅವರು ಮುರ್ಗಿ ಫಯಾಜ್ ಬ್ರದರ್ ಅಲ್ಲ ನಮ್ ಕನ್ನಡ ಮೇಷ್ಟ್ರು ಮುರಿಗೇಂದ್ರಯ್ಯ ಅಂತ ಅವರ ಹೆಸ್ರು. ಸಾಬ್ರ ಹುಡುಗರ ಬಾಯಾಗೆ ಮುರ್ಗಿ ಮೇಷ್ಟ್ರು ಆಗಿತ್ತು. ಅವರ ಕಂಠ ಥೇಟ್ ನಮ್ ಕಾಳಿಂಗರಾಯರ ಕಂಠ. ಏಳನೇ ತರಗತೀಲಿ 'ಮಿಂಚುಹುಳ' ಅಂತ ಪದ್ಯ ಇತ್ತು; ಬರೆದ ಕವಿ ನೆನಪಿಲ್ಲ ಆದ್ರೆ ಅವರ ರಾಗ, ಲಯ, ಹಾಡು ನೆನಪಿದೆ.

ಎಲೆಲೆ ಬೆಳಕಿನ ಬಿತ್ತೆ
ಇರುಳ ಮೂಗಿ ನತ್ತೆ

ಹುಳುವೆಂದು ಹೆಸರಿಟ್ಟು

ಹಳಿಯುವರು ನಿನ್ನ

– ಎಂದು ರಾಗಬದ್ಧವಾಗಿ ಹಾಡ್ತಿದ್ರೆ ಅವರನ್ನೇ ಬಿಟ್‌ಕಣ್ ಬಿಟ್ಕಂಡ್ ನೋಡ್ತಾ ಇದ್ವಿ! ರಾಮಾಯಣ, ಮಹಾಭಾರತದ ಎಂತೆಂಥವೋ ಪರೀಕ್ಷೆ ಕಟ್ಟೋರು. ೫–೬ನೇ ತರಗತಿ ವಾರ್ಷಿಕ ಪರೀಕ್ಷೆಗೆ ಮುರ್ಗಿ ಮೇಷ್ಟ್ರು ಬಿದ್ರಂತೂ (ಎಡವಿ ಅಲ್ಲ, ಕೊಠಡಿ ಮೇಲ್ವಿಚಾರಕರಾಗಿ) ನಮಗೆ ಹಬ್ಬ! ಸುವ್ವರ್ ಸುವ್ವರ್ ಸುಮ್ನೆ ಬರೀರಿ... ಬರೀರಿ.. ನನಗೆ ಕಾಣಬಾರದು ಸುಮ್ನೆ ಬರೀರಿ ಅಂತ ಹೌದೋ ಅಲ್ವೋ ಅನ್ನಂಗೆ ಕಾಪಿಗೆ ಸಹಕರಿಸೋರು! (ಪಾಪ ಉದ್ಧಾರ ಆಗ್ಲಿ ಮುಂಡೇವು ಅಂತನೋ, ಏನೋ?)

ಕೆಂಡಯ್ಯ ಮೇಷ್ಟ್ರು ಅಂದ್ರೆ ಹೆಸರಷ್ಟೆ ಕೆಂಡ; ನಡೆ–ನುಡಿ ಥೇಟ್ ತಣ್ಣೀರು! ಮೃದುಮಾತು, ಸದಾ ಹಸನ್ಮುಖಿ! ಸಮಾಜ ಕಲಿಸೋರು, ಮನೆ ಮನೆ ಕಥೆ ಹೇಳಿದಂತೆ ಹೇಳೋರು. ಇಂಥಾ ಸೌಮ್ಯಸ್ವಭಾವದ ಇವರಿಗೆ ನಮ್ಮ ಗೆಳೆಯ ಲಾಲ್‌ಖಾನ್ ಅನ್ನೋನು ಒಮ್ಮೆ ಕೋಪ ತರಿಸಿಬಿಟ್ಟ; ಈಗಿನಂತೆ ಆಗ ಬಿಸಿಯೂಟ ಇರಲಿಲ್ಲ. ಮನೆಗೆ ಹೋದ್ರೆ ಅನ್ನ ಇರಲಿ, ಬೆಳಗಿನ ಮುದ್ದೆ ಕೂಡಾ ಸಿಗ್ತಿರಲಿಲ್ಲ; ಮಧ್ಯಾಹ್ನ ನಮ್ಮದೇನಿದ್ದರೂ ಸಾಲು ಮರದ ನೇರಳೆ, ಹುಣಸೇಹಣ್ಣು ಮಾನಿಟರ್ ಕೊಡಿಸಿದ ಸುಂಟಿ ಪೆಪ್ಪರ್‌ಮೆಂಟ್ ಅಷ್ಟೆ, ಹೊಟ್ಟೆಗೆ! ಶಾಲೆ ಸುತ್ತಾ ಬಿಲ್ಲು ಬಾಣ ಮಾಡ್ಕಂಡು ಸೆಪ್ಪೆ ದಂಟಿನ ಕಡ್ಡಿಯ ಬಾಣಕ್ಕೆ ಉಂಡೆ ಮಾಡಿದ ಡಾಂಬರ್ ಚುಚ್ಚಿ ಅದಕ್ಕೆ ಜಾಲಿ ಮುಳ್ಳು ಸಿಕ್ಕಿಸಿ ಆಡ್ತಾ ಇದ್ವಿ! ಈ ಲಾಲ್ ಖಾನ್ ಪಕ್ಕವೇ ಇದ್ದ ದನದಾಸ್ಪತ್ರೆ ಫೀಲ್ಡಲ್ಲಿ ಸ್ಟಾಕ್ ಮಾಡಿದ್ದ ಡಾಂಬರ್ ಡ್ರಂನಿಂದ ಡಾಂಬರ್ ತಂದು ತರಗತಿ ಕುರ್ಚಿಗೆ ಅಂಟಿಸಿಬಿಟ್ಟ. ಮಧ್ಯಾಹ್ನ ಯಾವಾಗಲೂ ಆಗ ಫಸ್ಟ್ ಪೀರಿಯಡ್ ಸಮಾಜ ಇರಾದು. ಕೆಂಡಯ್ಯ ಮೇಷ್ಟ್ರು ಬಂದ್ರು, ಕುಂತ್ರು, ಹಾಜರಿ ಹಾಕಿದ್ರು. ಎದ್ದೇಳ್ತಾರೇ... ಊಹ್ಞುಃ ಇಡೀ ಕುರ್ಚಿಗೆ ಕುರ್ಚಿನೇ ಜೊತೆ ಬರ್ತಿದೆ! ನಮ್ ಸಹಾಯದಿಂದ ಬಿಡಿಸಿ ಯಾರು ಹಾಕಿದ್ದಂತ ವಿಚಾರಣೆ ನಡೀತು. ಬಾಯಿ ಬಿಡಲು ಯಾರೂ ತಯಾರಿರಲಿಲ್ಲ; ಕಬ್ಬಡಿಯಲ್ಲಿ ಯಾವಾಗಲೂ ಲಾಲ್‌ಖಾನ್ ಕೈಯಲ್ಲಿ ಸೋಲೋ ಕೊಬ್ರಿ ಪಟೇಲ ಅನ್ನೋನು ಹೇಳೇಬಿಟ್ಟ! ಅವತ್ತೇ ಮೊದಲು ಮತ್ತು ಕೊನೆ; ಕೆಂಡಯ್ಯ ಮೇಷ್ಟ್ರು ಕೆಂಪಾಗಿದ್ದು ನಾವು ನೋಡಿದ್ದು! ಲಾಲ್‌ಖಾನ್ ಗತಿ ಹೇಳದಿದ್ದರೆ ವಾಸಿ.

ನಮ್ಮ ಶಂಕರಮೂರ್ತಿ ಮೇಷ್ಟ್ರು ವಾಮನ ರೂಪ. ಸಣ್ಣ ದನಿಯ ಎಲ್ಲಾ ಮಕ್ಕಳ ಪ್ರೀತಿಯ ಮೇಷ್ಟ್ರು. ಹಿಂದಿ – ಇಂಗ್ಲಿಷ್ ಎರಡನ್ನೂ ಕನ್ನಡದಂತೆ ಕಲಿಸೋರು (ನಾವು ಮಾತ್ರ ಒಂದೂ ಕಲಿತಾ ಇರಲಿಲ್ಲ) ನಮ್ಮ ಶಾಲೆಗಳು ಹೇಗಿದ್ವೋ ನಾವು ಹಾಗೇ ಇದ್ವಿ; ಹಳೆಯವು ಶಾಶ್ವತವಾದವು. ಈಗ ನಮ್ಮ ಕಿರಿಯ ಪ್ರಾಥಮಿಕ ಶಾಲೆಯ

ಜಾಗದಲ್ಲಿ ದೊಡ್ ಕಾಪ್ಲೆಕ್ಸ್ ಎದ್ದಿದೆ. ಆ ಮಿಡ್ಲಿಸ್ಕೂಲ್ ಹಾಗೇ ಇದೆ. ನಮ್ಮ ಕಾಲದ ನಮ್ಮ ಹೆಮ್ಮೆಯ ಮೇಷ್ಟ್ರುಗಳು ಇಂದಿಗೂ ಬದಲಾಗಿಲ್ಲ. ಅದೇ ಶಿಷ್ಯ ವಾತ್ಸಲ್ಯ, ಜೀವನಪ್ರೀತಿ ಅದೇ ಆದರ್ಶಗಳನ್ನು ಇಟ್ಟುಕೊಂಡು ಬೆರಳೆಣಿಕೆಯ ಪಿಂಚಣಿಯಲ್ಲಿ ಆರಾಮವಾಗಿ ವೃದ್ಧಾಪ್ಯ ಕಳೀತಿದಾರೆ! ಯು.ಜಿ.ಸಿ ಸ್ಕೇಲ್ ಮೇಷ್ಟ್ರು, ಕೈತುಂಬಾ ಬೇಸಿಕ್ ತಗಳ್ಳೋ ಮೇಷ್ಟ್ರು, ಸೂಟುಬೂಟಿನ ಮೇಷ್ಟ್ರು, ಮೋಟಾರು ಕಾರಿನ ಭವ್ಯ ಬಂಗಲೆಯ ನಮ್ಮ ಮಕ್ಕಳ ಮೇಷ್ಟು, ಮನೆಪಾಠದಲ್ಲಿಯೇ ಕೋಟಿ ಕಂಡಿರೋ ಮೇಷ್ಟ್ರುಗಳ ನಡುವೆ ವಾರಾನ್ನದಲ್ಲಿ ಓದಿ, ಬಸ್ಸಿಲ್ಲದ ಊರಲ್ಲಿ ಸೈಕಲ್ಲೇ ಸರ್ವಸ್ವ ಎಂದುಕೊಂಡು ಅಕ್ಷರ ಕಲಿಸೋ ಕಾಯಕದ 'ನಮ್ಮ ಮೇಷ್ಟ್ರು' ಇಂದಿಗೂ ಕಾಣ್ತಾರೆ!

ಮಾತೃ ಹೃದಯದ, ತಂದೆ ಪ್ರೀತಿಯ, ದೈವ ಸ್ವರೂಪಿ ಅಕ್ಷರ ಬ್ರಹ್ಮರು ಎಂದಿಗೂ ಮನದ ಹೊಲದಿ ಹಸಿರಾಗಿ, ತೆನೆಯಾಗಿ ತೂಗ್ತಾರೆ. ಆ ದಿನಗಳು, ಆ ಶಾಲೆ, ಆ ಮೇಷ್ಟ್ರುಗಳು ಜನಮಾನಸದಿ ಚಿರಂತನ! ಎಂದಿಗೂ ಮರೆಯದ ನಮ್ಮ ಮೇಷ್ಟ್ರುಗಳಿಗೆ ಇದೋ ನನ್ನ ದಿಲ್ ಕಾ ಸಲಾಮ್

**ಸಂತೆಬೆನ್ನೂರು ಫೈಜ್ನಟ್ರಾಜ್**

ಹೊಸತು

ಏಪ್ರಿಲ್ ೨೦೧೪

# ತೇಲುವ ಸ್ವರ್ಗದೊಳಗಿನ ಆರ್ದ್ರ ಕತೆಗಳು

ಕ್ರೂಸ್, ಸಮುದ್ರಯಾನ ಅಥವಾ ನಾವೆಯಾನ. ಎಲ್ಲ ಬಗೆಯ ವಿಹಾರ ಪ್ರವಾಸಗಳಿಗೆ ಹೋಲಿಸಿದರೆ ನಿಸ್ಸಂಶಯವಾಗಿ ಸ್ವರ್ಗ ಸದೃಶ ಬಿಡುವಿನ ಪ್ರವಾಸ ಎಂದರೆ ಕ್ರೂಸ್. ನೀವು ಊಹಿಸಿದ್ದು, ಕಲ್ಪಿಸಿಕೊಳ್ಳದ್ದು, ಎಲ್ಲೋ ಕೇಳಿದ್ದು, ಮತ್ತೆಲ್ಲೋ ಓದಿದ್ದು ಎಲ್ಲ ಸುಖವನ್ನೂ ಒಂದೇ ಕಡೆ ರಾಶಿ ರಾಶಿ ತುಂಬಿ ನಿಮಗೆ ಎಷ್ಟು ಬೇಕಾದರೂ ಮೊಗೆದುಕೊಳ್ಳಲು ಬಿಟ್ಟಂತೆ ಇರುವ ಪ್ರಯಾಣವಿದು. ನಾಲ್ಕೈದು ದಿನಗಳ ಅಪ್ಪಟ ನಿರಾಳತೆ, ಬಯಸಿದ್ದು ಬೆರಳ ತುದಿಯಲ್ಲಿ ಎಂಬಂತ ಅನುಕೂಲತೆ.

ಐಶಾರಾಮೀ ಹಡಗಿನ ಸಮುದ್ರಯಾನ ಅಮೆರಿಕೆಯಲ್ಲಿ ಬಹು ಜನಪ್ರಿಯ ಪ್ರವಾಸೀ ಆಕರ್ಷಣೆ. ಇಲ್ಲಿನ ಉಷ್ಣಹವಾಮಾನದ ರಾಜ್ಯವಾದ ಫ್ಲೋರಿಡಾ ಇಂಥ ಪ್ರವಾಸಗಳನ್ನು ಕೈಗೆಟುಕುವ ದರದಲ್ಲಿ ಒದಗಿಸುವ ಕೇಂದ್ರಗಳಲ್ಲಿ ಮುಖ್ಯವಾದುದು. ಇಲ್ಲಿಂದ ಬಹಾಮಾಸ್ ಮತ್ತು ಕರೇಬಿಯನ್ ದ್ವೀಪ ಸಮೂಹಗಳ ನಡುವೆ ತೇಲಾಡುವ ಬಹಳಷ್ಟು ಬಗೆಯ ಸಮುದ್ರಯಾನ ಒದಗಿಸುವ ನಾವೆಕಂಪನಿಗಳಿವೆ. 3 ದಿನಗಳಿಂದ ಹಿಡಿದು ಹತ್ತು ದಿನಗಳವರೆಗಿನ ಬಗೆಬಗೆಯ ದ್ವೀಪದರ್ಶನ, ಡಾಲ್ಫಿನ್ಗಳೊಂದಿಗೆ ಈಜಾಟ, ಮೀನುಗಳೊಂದಿಗೆ ಒಡನಾಟ, ಸ್ಕೂಬ, ಸ್ನಾರ್ಕಲ್ ಎಂದು ಸಾಗರಜೀವ ಸಂಕುಲದ ವಿವಿಧ ಆಕರ್ಷಣೆ ಈ ಪ್ರವಾಸಗಳ ಬಹುಮುಖ್ಯ ಭಾಗ. ಅಂತೆಯೇ ಇನ್ನೊಂದು ಮುಖ್ಯವಿಚಾರವೆಂದರೆ ಆಹಾರಭಾಗ್ಯ. ಹೌದು ಇಲ್ಲಿ ತಿಂಡಿ ತಿನಿಸುಗಳ ಉಪಚಾರಕ್ಕೆ ಲೆಕ್ಕವಿಲ್ಲ. ಅಳತೆಯೂ ಇಲ್ಲ. ದಿನದ ಇಪ್ಪತ್ನಾಲ್ಕು ಗಂಟೆ ತಿನ್ನುತ್ತೇನೆ ಎಂದು ನೀವು ಪಣ ತೊಟ್ಟು ಕೂತರೂ ತಿಂದು ಮುಗಿಸಲಾಗುವುದಿಲ್ಲ. ಹಣ್ಣುಹಂಪಲುಗಳ ರಾಶಿಯಿಂದ ಹಿಡಿದು ಮೀನು ಮಾಂಸಗಳ ತರಾವರಿ ಖಾದ್ಯಗಳ ಸಾಲುಗಳು ಎಲ್ಲ ಊಟದ ಕೋಣೆಗಳಲ್ಲಿ. ಮಧ್ಯರಾತ್ರಿ 1 ಗಂಟೆಗೆಲ್ಲ ಮನರಂಜನೆ, ಸಿಹಿ ತಿನಿಸುಗಳ ಬಫೆ ಬಡಿಸುತ್ತಾರೆ. ಊಟದ ಹೊತ್ತಿಗೆ ಯಾವ ಬಗೆಯ ಆಹಾರ ಪದಾರ್ಥ ಬೇಕೆಂದರೂ ಲಭ್ಯವಿದೆ ಇಲ್ಲಿ. ಸಸ್ಯಾಹಾರಿಗಳಿಗೆ ಸ್ವಲ್ಪ ಮುಜುಗರವೆನಿಸಿದರೂ ಆಹಾರಕ್ಕೆ ಬರವೇ ಇಲ್ಲ.

ಸುಮಾರು 2000 ದಿಂದ 4000 ( ಹಡಗಿನ ಕೆಲಸಗಾರರನ್ನು ಸೇರಿಸಿ) ಜನರು ಮುಕ್ತವಾಗಿ ಸರಿದಾಡುವಂತ ಸ್ವರ್ಗಲೋಕದಲ್ಲಿ ಏನಿದೆ ಏನಿಲ್ಲ! ವ್ಯಾಯಾಮ ಮಾಡಲು ಜಿಮ್, ಓಡಲು ಟ್ರ್ಯಾಕ್, ಬಿಸಿಲು ಕಾಯಿಸಲು ಪ್ರತ್ಯೇಕ ಡೆಕ್, ಕುಡಿದು ಕುಣಿಯಲು ಪಬ್ಬುಗಳು, ಡಾನ್ಸ್ ಬಾರುಗಳು, ಕೊಳ್ಳುಬಾಕರಿಗಾಗಿ ಶಾಪಿಂಗ್ ಮಾಲ್, ಸಿನಿಮಾ ಹಾಲ್, ಸಂಗೀತ, ನಾಟಕಗಳಿಗೆ ಥಿಯೇಟರ್, ಬಗೆಬಗೆಯ ರೆಸ್ತೋರೆಂಟುಗಳು, 2–3 ಈಜುಕೊಳಗಳು, ಹಾಟ ಟಬ್, ಸ್ಪಾ, ನೀರಾಟಕ್ಕೆ

ವಾಟರ್ಪಾರ್ಕ್, ಮಕ್ಕಳಿಗಾಗಿ ಆಟದ ಕೋಣೆಗಳು, ಅಬ್ಬಾ ಮನರಂಜನೆಯ ಹಲವು ಬಗೆ.

ಇಷ್ಟೆಲ್ಲಾ ನಿರ್ವಹಿಸಲು ಎಷ್ಟು ಜನ ಬೇಕಾದೀತು ಅಲ್ಲವೇ? ನಿಜ. ಈ ಶಿಪ್ಪಿಂಗ್ ಕಂಪನಿಗಳು ಇಷ್ಟೆಲ್ಲಾ ಸ್ವರ್ಗಸುಖವನ್ನು ಜನಸಾಮಾನ್ಯರಿಗೆ ಕೈಗೆಟುಕುವ ಕಮ್ಮಿ ದರದಲ್ಲಿ ಒದಗಿಸುವುದಾದರೂ ಹೇಗೆ? ಉತ್ತರವಿರುವುದು ಚಕಚಕನೆ ವಿವಿಧ ಆಕಾರಗಳಲ್ಲಿ ಹಣ್ಣು ಹೆಚ್ಚಿ ನಗುವ ಆಕೆಯ ತುಟಿಗಳಲ್ಲಿ. ಅಲ್ಲಿ ಈಜುಕೊಳದ ಬಳಿ ಟವೆಲ್ ಹಿಡಿದು ನಿಂತಿರುವ ಹುಡುಗನ ಕಂಗಳಲ್ಲಿ. ಕಡಾಯಿಯಿಂದ ಇಷ್ಟೆತ್ತರ ನೂಡಲ್ಸ್ ಹಾರಿಸಿ ಮತ್ತೆ ಪಟ್ ಎಂದು ಹಿಡಿಯುವವನ ಕೈಗಳಲ್ಲಿ. ದಿನಾಲೂ ದಿಂಬಿನ ಮೇಲೆ ಆನೆ, ಹಕ್ಕಿ, ಬಾತುಗಳಂತೆ ಟವೆಲ್ ಮಡಚಿಡುವ ಆಕೆಯ ಮೌನದಲ್ಲಿ. ಇವೆಲ್ಲ ಅವಲೋಕಿಸುವಾಗೆಲ್ಲ ಪರಿಚಿತವೇನೋ ಎಂಬಂತ ಮುಖಗಳು ಎದುರಾಗುತ್ತಲೇ ಇರುತ್ತವೆ. ಅವರ ಕಂಗಳಲ್ಲೇನೋ ಕತೆಯಿದೆ ಎಂಬಂತೆ ಭಾಸವಾಗುತ್ತ ಹಿಂಡುತ್ತವೆ.

ಶಿಪ್ಪಿಂಗ್ ಕಂಪನಿಗಳಲ್ಲಿ ಕೆಲಸ ಮಾಡುವ ಬಹುತೇಕ ಕಾರ್ಮಿಕ ವರ್ಗ ಜಾಗತಿಕವಾಗಿ ಹಿಂದುಳಿದ, ಆರ್ಥಿಕವಾಗಿ ಮುಂದುವರೆಯುತ್ತಿರುವ ದೇಶಗಳಿಂದ ಬಂದವರು. ರೊಮೇನಿಯ, ಕ್ರೊಯೇಶಿಯ, ಫಿಲಿಪೀನ್ಸ್, ಭಾರತಗಳಿಂದ ಬಂದ ಅಸಂಖ್ಯ ಜನರು ನಿಮಗಿಲ್ಲಿ ಸಿಗುತ್ತಾರೆ. ಅವರಿಗೆ ಶಿಪ್ಪಿಂಗ್ ವೀಸ ಎಂಬ ವೀಸಾದ ಮೇಲೆ ಕೆಲಸಕ್ಕಿಟ್ಟುಕೊಳ್ಳಲಾಗುತ್ತೆ. ಹಡಗು ಬಂದರಿಗೆ ಬಂದಿಳಿದರೂ ಅವರು ಹಡಗು ಬಿಟ್ಟು ಹೋಗುವಂತಿಲ್ಲ. ಹೋದರೂ ಅವರೊಡನೆ ಒಬ್ಬ ಉಸ್ತುವಾರಿಯವನಿದ್ದು ನಿರ್ದಿಷ್ಟ ಕಡೆಗಳಿಗಷ್ಟೇ ಕರೆದುಕೊಂಡು ಹೋಗಿಬರುತ್ತಾನೆ. ನಮ್ಮ ತೇಲಾಡುವ ಸ್ವರ್ಗ ಮೂರುದಿನಗಳಿಗೆ ಮುಗಿದರೆ ಇವರ ಬಂಧನದ ಬದುಕು ಅನವರತ ತೇಲುತ್ತ ಸಾಗುವುದು.

ನಾವೆಲ್ಲಾ ಹಡಗಿನ ರಮ್ಯ ಲೋಕಕ್ಕೆ ಕಾಲಿಡುತ್ತಿದ್ದಂತೆ ಸ್ವಾಗತ ಕೋರುವ ಗೂಡಿನಲ್ಲಿ ಗಂಟುಮುಖದ ಶುಭ್ರಶ್ವೇತ ಸಮವಸ್ತ್ರಧಾರಿಯೊಬ್ಬ ಕೊಂಚವೇ ಸಾತತ್ ನಗುತ್ತ ಕೊನೆಯ ಕೀ ಕೊಟ್ಟ. ಆದರೆ ಅವನ ಎದೆಯ ಮೇಲಿದ್ದ ಅಪ್ಪಟ ಗೋವನ್ ಹೆಸರನ್ನು ಓದಿ ಆಶ್ಚರ್ಯವೂ ಸಂತೋಷವೂ ಆಗಿ ತಡೆಯದೆಯೇ ಕೇಳಿಯೇ ಬಿಟ್ಟೆವು "ತುಮಿ ಗೊವೆಂಚಿ ಕೈ ಜಲೇ?" ಸೊಟ್ಟ ನಗೆ ಇಶ್ಟಗಲವಾಗಿ ಮುಖದ ಗಂಟೆಲ್ಲ ಕರಗಿ ಕೊನೆಗೆ ನಮ್ಮ ಎಲ್ಲ ಚೆಕ್ ಇನ್ ಕೆಲಸ ಸುಸೂತ್ರ!

ನಾವಿನ್ನೂ ಅದೇ ಗುಂಗಿನಲ್ಲಿ ನಾವೆಯ ಸಿಂಹಾವಲೋಕನ ನಡೆಸಿ ಈಜುಕೊಳಕ್ಕೆ ಬಂದಾಗ ಅಲ್ಲಿದ್ದ ಆ ಟವೆಲ್ ಹಂಚುತ್ತಿದ್ದ ಹುಡುಗ. ಪೀಟರ್ ಗೊನ್ಸಾಲ್ವಿಸ್ ಎಂದು ಬರೆದುಕೊಂಡಿದ್ದ ಅವನ ಅಂಗಿಯ ಮೇಲಿನ ಹೆಸರು. ಆದರೆ ನೋಡಲೋ, ಅಪ್ಪಟ ಭಾರತೀಯ ಮುಖ. ಹಲವು ದಕ್ಷಿಣ ಮೆರಿಕನ್ನರು ಕೂಡ ಹಾಗೆಯೇ ಕಾಣುವುದರಿಂದ ನಾವು ನಮ್ಮಲ್ಲಿಯೇ ಮಾತನಾಡಿಕೊಳ್ಳುವಾಗ, ಪಪ್ಪಾ ಕೇಳಿಯೇ

ನೋಡುವ ಎನ್ನಿಸಿ "ತುಕ್ ಕೊಂಕಣಿ ಎತ್ ರೆ?" ಎಂದರು. ಆ ಹುಡುಗನ ಕಣ್ಣ ಮಿಂಚು ಇನ್ನೂ ಕಣ್ಣು ಕುಕ್ಕುವಷ್ಟು ನೆನಪಿದೆ. ನನ್ನ ಮರೆತುಹೋದ ಹರಕು ಕೊಂಕಣಿಯನ್ನು ಮತ್ತೆ ಕಲಿಯಬೇಕೆನ್ನಿಸಿಬಿಟ್ಟಿತು. ಎಷ್ಟೆಲ್ಲಾ ಹೊತ್ತು ಪಪ್ಪಾ ಅಮ್ಮನೊಡನೆ ಹರಟಿ ಹಗುರಾದನವನು. ಅವನು ಕೂಡ ಗೋವಾದವನು. ಇದೆ ಅವನ ಮೊದಲ ಪ್ರಯಾಣ. ಇದಕ್ಕೂ ಮುನ್ನ ಮುಂಬೈನ ಒಂದು ಮೀನುಗಾರಿಕಾ ಕಂಪನಿಯಲ್ಲಿದ್ದವನು ವಯಸ್ಸಾದ ಬಡ ಅಮ್ಮ ಅಪ್ಪನಿಗಾಗಿ ಡಾಲರಿನ ಪರಿಮಳವ ಆಘ್ರಾಣಿಸಬಂದವನು. ಆತನ ಸಂಬಳ ತೀರಾ ಕಮ್ಮಿ. ಕೇಳಿ ಆಶ್ಚರ್ಯವಾಯಿತು. ಅದರಲ್ಲೂ ಅವನು ಟವಲ್ ಬಾಯ್. ಮೊದಲನೇ ವರ್ಷದ ತೀರ ಕೆಳದರ್ಜೆಯ ಕಾರ್ಮಿಕ. 6 ತಿಂಗಳಿಂದ ಹಡಗಿನಲ್ಲಿದ್ದ. ತೀರ ಹೋಂ ಸಿಕ್ ಆಗಿಹೋಗಿದ್ದ. ಅವನ ಕೆಲಸದಿಂದ ಬಿಡುವಾದಾಗೆಲ್ಲ ಪಪ್ಪ ಅಮ್ಮನನ್ನು ಹುಡುಕಿಕೊಂಡು ಬಂದು ಕೊಂಕಣಿಯಲ್ಲಿ ಹಲುಬಿ ಹೋಗುತ್ತಿದ್ದ. ಅಲ್ಲಿಂದ ಆ ಹಡಗಿನ ಸ್ವರ್ಗದ ಪರಿಕಲ್ಪನೆಯೇ ನನ್ನ ಕಣ್ಣಲ್ಲಿ ಬದಲಾಗಿ ಹೋಯಿತು.

ನಮ್ಮ ರೂಮಿನಲ್ಲಿ ನಾವು ದಿನವೂ ಬರುವಷ್ಟರಲ್ಲಿ ಎಲ್ಲ ಚೊಕ್ಕಟವಾಗಿ ಮಡಚಿ ಶುಚಿಗೊಳಿಸಿದ ಹಾಸಿಗೆಯ ಮೇಲೆ ಹಕ್ಕಿಯೋ, ಆನೆಯೋ ಆಗಿ ಟವಲ್ಲೊಂದು ಕೂತಿರುತ್ತಿತ್ತು. ಒಮ್ಮೆ ಕಾದು ಕುಳಿತು ಆ ಕಲಾತ್ಮಕ ಕೈಗಳ ಹಿಡಿದೆ. ಅವೋ ಮಣಿಪುರದ ಮುಗ್ಧೆಯ ಮುದ್ದು ಕೈಗಳು. ಹರಕು ಮುರುಕು ಹಿಂದಿಯಲ್ಲಿ ಎಷ್ಟೊಂದು ಖುಷಿಯಿಂದ ಹರಟಿದಳು. ಮೂರು ವರ್ಷದಿಂದ ಕೆಲಸಕ್ಕಿದ್ದಾಳೆ. ಈ ನಡುವೆ ಒಮ್ಮೆಯಷ್ಟೇ ಮನೆಗೆ ಹೋಗಿ ಬಂದಿದ್ದಾಳೆ. ಅವಳೂ ನೆಲ ಒರೆಸುವ ಕೆಲಸ ಆರಂಭಿಸಿ ಈಗ ಸ್ವಲ್ಪ ಮೇಲು ಸ್ತರಕ್ಕೆ ಭಡ್ತಿ ಹೊಂದಿದ್ದಾಳೆ. ಅವಳ ಸಂಬಳವೂ ಹೇಳಿಕೊಳ್ಳುವಂತೆ ಏನೂ ಇರಲಿಲ್ಲ. ಇನ್ನೂ ಏನೇನೋ ಕೇಳುವುದಿತ್ತು ನನಗೆ, ಆದರೆ ನಾವಿಲ್ಲಿ ಹಾಗೆಲ್ಲ ತುಂಬಾ ಹೊತ್ತು ಹರಟಿದರೆ ಬೈಸಿಕೊಬೇಕು ಆಯ್ತಾ ನಾಳೆ ಸಿಗುವೆ ಎನ್ನುತ್ತಾ ಹಾರಿ ಹೋದಳು.

ಮೂರು ಹೊತ್ತೂ ನೀರಾಟ, ಊಟವೆಂದರೆ ಐಸ್ಕ್ರೀಮ್ ಆಗಿಹೋಗಿದ್ದ ಅಲ್ಲಿನ ನೂರಾರು ಮಕ್ಕಳಿಗೆ ಒಂದು ನಿಮಿಷ ಕೂಡ ಅಯಿಸ್ ಕ್ರೀಮ್ ಖಾಲಿ ಆಗದಂತೆ ರೊಮೇನಿಯನ್ ಸುಂದರಿಯೊಬ್ಬಳು ವಿಕ್ರಂ ಬೇತಾಳದ ಕತೆಯಂತೆ ಸದಾ ತುಂಬಿಡುತ್ತಿದ್ದಳು. ಅವಳ ಇಂಗ್ಲಿಶ್ ನನಗೆ ತಿಳಿಯದು ನನಗೆ ರೊಮೇನಿಯನ್ ಬಾರದು. ಆದರೂ ಅವಳ ಕತೆ ಬಹಳ ಬೇರೆಯೇನಿರಲಿಲ್ಲ. ದಿನವಿಡೀ ಐಸ್ಕ್ರೀಮ್ತರೋದು ತುಂಬೋದು ಇದೆ ಕೆಲಸ ದಿನವೂ ಮಾಡಲು ಬೋರ್ ಆಗೋದಿಲ್ಲವೇ? ಎಂದಿದ್ದಕ್ಕೆ ಅವಳೋ ಸೀದಾ ಸೀದಾ ಹೇಳಿಬಿಟ್ಟಳು. "ನನಗೊಬ್ಬ ಅಪ್ಪ ನಿದ್ದಿರಬೇಕು, ಇಲ್ಲದಿದ್ದರೆ ನಾ ಹುಟ್ಟುತ್ತಿ ರಲಿಲ್ಲ ಅಲ್ಲವೇ, ರೋಮೆನಿಯದಲ್ಲಿ ನಾವೆಷ್ಟು ಬಡವರು ಎಂದರೆ, ನಾನಿಲ್ಲಿ ಐಸ್ಕ್ರೀಮ್ ತುಂಬಿ ನನ್ನ ತಂಗಿ, ಅಮ್ಮನ ಹೊಟ್ಟೆ ತುಂಬದಿದ್ದರೆ, ಅವರಿಬ್ಬರೂ

ಮತ್ತೆ ಅಪ್ಪನಿಲ್ಲದ ಮಕ್ಕಳ ಹಡೆಯಬೇಕಾಗುತ್ತೆ.ಅದಕ್ಕಿಂತ ಇದೇ ಚಂದ ಇದೆ ಅಲ್ಲವ? ನೋಡು ಆ ಮಕ್ಕಳ ಬಾಯಿಗೆ ಮೆತ್ತಿಕೊಂಡಿರುವ ಐಸ್ಕ್ರೀಮ್ ಚಂದ ನೋಡು."

ಇವರೆಲ್ಲ ಹೀಗೆಯೇ ಅಲ್ಲ, ಇವರಲ್ಲೂ ಚಂದದ ಕತೆಗಳಿವೆ, ಅಪರೂಪದ ಪ್ರೇಮಿಗಳಿದ್ದಾರೆ. ವಿದ್ಯಾವಂತರಾದರೆ ಉತ್ತಮ ದರ್ಜೆ ಮತ್ತು ಸಂಬಳವೂ ಇದೆ. ಆದ್ರೆ ಎಲ್ಲರ ಹಿಡಿದಿಟ್ಟ ಸರಪಳಿಯೂ ಸಮುದ್ರವೇ, ಸಂಬಂಧವೂ ಸಮುದ್ರವೇ. ಅಲ್ಲಿನ ಫಾರ್ಮಲ್ ಬಾಂಕ್ವೆಟ್ ಊಟದ ಸಂಪೂರ್ಣ ಮೇಲುಸ್ತುವಾರಿ ಅಧಿಕಾರಿ ಲೂಸಿ  ದಿನವೂ ಸಂಜೆ ಊಟದ ಹಾಲಿನ ಬಳಿಯಲ್ಲೇ ನಗುಸೂಸಿ ಸ್ವಾಗತ ಕೋರುತ್ತಾಳೆ. ಅವಳಿಗೂ ಯಾರಲ್ಲಾದರೂ ಕತೆ ಹೇಳಿಕೊಳ್ಳಬೇಕೆಂಬ ಹಂಬಲವಿದೆ. ಅವಳು ಅಲ್ಲಿ ಹನ್ನೆರಡು ವರ್ಷದಿಂದ ಕೆಲಸ ಮಾಡುತ್ತಿದ್ದಾಳೆ. ತರಕಾರಿ ಹೆಚ್ಚುವ ಕೆಲಸಕ್ಕೆ ಸೇರಿಕೊಂಡವಳು ಅವಳು. ದುಡಿಮೆ, ದಕ್ಷತೆಯಿಂದ ಆಕೆ ಇಡೀ ಹಡಗಿನ ಊಟದ ಮೇಲುಸ್ತುವಾರಿ ಈಗ. ಅವಳುಖುಷಿಯಿಂದಲೇ ಹಂಚಿಕೊಂಡ ಕತೆಯಿದು. ಲೂಸಿಯ ಗಂಡ ಕೂಡ ಇದೆ ಹಡಗಿನಲ್ಲಿ ಒಬ್ಬ ಮುಖ್ಯ ಅಡಿಗೆಯವ. ಆಕೆಗೊಬ್ಬಮಗಳಿದ್ದಾಳೆ ಎಂಟು ವರ್ಷದವಳು. ಫಿಲಿಪೀನ್ಸಿನಲ್ಲಿ ಆಕೆಯ ತಾಯಿಯ ಜತೆಯಿದ್ದಾಳೆ. ಮಗಳಿಗೆ ಅಪ್ಪ ಅಮ್ಮ ಸಿಗುವುದೇ ಅಪರೂಪ.

ನೀವಿಬ್ಬರೂ ಪಾಪ ಮಗಳನ್ನು ಬಿಟ್ಟು ಬಂದರೆ ಕಷ್ಟವಲ್ಲವೇ? ಒಬ್ಬರಾದರೂ ಶಿಪ್ಪಿಂಗ್ ಬದಲು ಬೇರೆ ಕೆಲಸ ಮಾಡಿದರೆ ಒಳ್ಳೆಯದಲ್ಲವೇ?

ಲೂಸಿ ಅದೇ ಮೋಹಕ ನಗುವಿನೊಂದಿಗೆ ಹೇಳಿದಳು. ನೀ ಹೇಳುವುದು ನಿಜ. ಆದರೆ ವಿಚಾರ ಮಾಡು, ಈ ಹಡಗಿನಲ್ಲಿ ವರ್ಷವಿಡೀ ಇರಬೇಕು. ಕೆಳದರ್ಜೆಯವರಿಗೆಲ್ಲ ಅಷ್ಟೊಂದು ರಜೆ ಕೂಡ ಸಿಗುವುದಿಲ್ಲ. ಸುಖ ಸಂಪತ್ತು ಎಷ್ಟಿದ್ದರೂ ಅದೇ ಜನ ಅದೇ ಜೀವನ ಎಂಬಂತ ಬಂಧನವಾದಾಗ ಮನಸ್ಸು ಅದನ್ನು ಭೇದಿಸಿ ಓಡಬೇಕು ಎಂದು ಬಯಸುತ್ತೇ. ಅದರಲ್ಲೂ ಇಂಥ ಜೀವನದಲ್ಲಿ ಬಹುಬೇಗ ಒಂಟಿತನ ಕಾಡುತ್ತೆ. ನಾಳೆ ನೀನೆ ಸೂಕ್ಷ್ಮವಾಗಿ ನೋಡು ಇಲ್ಲಿ ಎಷ್ಟೆಲ್ಲಾ ಜನರಿಗೆ ಅಫೇರ್ ಇದೆ ಗೊತ್ತಾ? ಅದು ತಪ್ಪಲ್ಲ. ಇಲ್ಲಿನ ಒಂಟಿತನಕ್ಕೆ ಒಂದು ಸಂಗಾತಿ ಬೇಕು. ದೇಹಕ್ಕಿಂತ ಹೆಚ್ಚಾಗಿ ಮನಸ್ಸಿಗೆ ಬೇಕು. ಇಲ್ಲಿ ಕೆಲಸ ಮಾಡುವವರು ಇಲ್ಲಿನವರನ್ನೇ ಕಟ್ಟಿಕೊಳ್ಳುವುದು ಒಳಿತು ಇಲ್ಲದಿದ್ದರೆ ಆ ಮದುವೆಗೆ ಅರ್ಥವಿಲ್ಲ, ನಿಲ್ಲುವುದೂ ಇಲ್ಲ.  ನಾನು ಕೂಡ ಅಫೇರ್ ಮಾಡಿಕೊಳ್ಳುತ್ತಿದ್ದೆನೋ ಏನೋ, ನನ್ನ ಗಂಡ ಇಲ್ಲಿಲ್ಲದಿದ್ದರೆ. ನಾವಿಬ್ಬರೂ ರಜೆಯನ್ನೂ ಬೇರೆ ಬೇರೆ ಸಮಯದಲ್ಲಿ ಪಡೆದುಕೊಂಡು ಮಗಳ ಜೊತೆ ಒಬ್ಬರಾದರೂ ಹೆಚ್ಚಿನ ಸಮಯ ಕಳೆಯುವಂತೆ ನೋಡಿಕೊಳ್ಳುತ್ತೇವೆ. ಈಗ ಇಬ್ಬರೂ ಹೆಚ್ಚಿನ ದರ್ಜೆಯ ಹುದ್ದೆಯಲ್ಲಿರುವುದರಿಂದ ಕೈತುಂಬ ಸಂಬಳವಿದೆ. ಮಗಳನ್ನು ಅತ್ಯುತ್ತಮ ಶಾಲೆಗೇ ಸೇರಿಸಿದ್ದೇವೆ. ಅವಳು ಓದಲಿ, ತುಂಬಾ ತುಂಬಾ ಓದಲಿ. ನಮ್ಮ ಪ್ರೀತಿ ಸಿಗದಿದ್ದರೆ ಏನು ಮಹಾ ನಷ್ಟವಲ್ಲ ಬಿಡು. ಅವಳಾದರೂ ಮುಂದೆ ಹೀಗೆ ಕಷ್ಟಪಡುವುದು ಬೇಡ ಅಲ್ಲವೇ?

ನಕ್ಕು ನಿಡುಸುಯ್ದೆ. ಲೂಸಿ ಮಾತ್ರ ಅದೇ ನಗುವಿನಲ್ಲೇ ಇದ್ದಳು. ಅಂದಿನ ಸಂಜೆಯ ಸಂಗೀತ ನಾಟಕದ ನರ್ತಕಿ ಮರುದಿನ ಬೆಳಿಗ್ಗೆ ಒಬ್ಬ ಸುಂದರ ಯುವಕ ವೇಟರ್ ನೊಂದಿಗೆ ಈಜುಕೊಳದಲ್ಲಿ ಕಾಣಿಸಿಕೊಂಡಳು. ನನಗೆ ಲೂಸಿ ನೆನಪಾದಳು.

ಹಡಗು ಬಹಾಮಾಕ್ಕೆ ಬಂದು ತಂಗಿದಾಗ, ನನ್ನ ಪಾಸ್ ಪೋರ್ಟ್ ನೋಡಿ ನಮಸ್ತೆ ಎಂದವ ಮರ್ಚಂಟ್ ನೆವಿಯ ಮುಂಬೈ ವಾಸಿ. ಎಲ್ಲೆಲ್ಲಿ ಶಾಪಿಂಗ್ ಮಾಡಬೇಕು ಎಲ್ಲಿಲ್ಲಿ ಏನು ಖರೀದಿಸಬಾರದು ಎಂಬೆಲ್ಲ ಸಲಹೆಗಳನ್ನು ಕೇಳದೆಯೇ ಕೊಟ್ಟ. ಆ ಸಂಜೆ ಹಡಗಿನಲ್ಲೊಂದು ಮ್ಯಾಜಿಕ್ ಷೋ. ಕಣ್ ಕಟ್ಟುವಿಕೆಯ ಕಲೆಯನ್ನು ಕಣ್ಮುಚ್ಚದೆ ನೋಡುತ್ತಿದ್ದರು ಎಲ್ಲರೂ. ಷೋ ಮುಗಿಸಿ ಊಟಕ್ಕೆ ಕುಳಿತಾಗ ಆತ ಹಲವರ ಮೇಜಿಗೂ ಬಂದು ಏನೇನೋ ಮಾಯ ಮಾಡಿ ತೋರಿಸುತ್ತಿದ್ದ. ನಾವೋ ಇಡೀ ಹಡಗು ನಮ್ಮದೆಂಬಂತೆ ಕಚ ಪಚ ನಗು ಹರಟೆ ನಡೆಸಿದ್ದೆವು. ಆತ ನಮ್ಮ ಟೆಬಲ್ಲಿಗೂ ಬಂದು ನಿಮಗೆ ಮ್ಯಾಜಿಕ್ ತೋರಿಸ್ಲಾ ಎಂದು ಕನ್ನಡದಲ್ಲಿ ಕೇಳಿದ ! ಅವನ ಹೆಸರು ಮಿಥುನ್ ಎಂದು ಮಲ್ಲೇಶ್ವರಂ ಹುಡುಗ. ಇಂಜಿನಿಯರಿಂಗ್ ಮುಗಿಸಲಾರದೆ ಅರ್ಧಕ್ಕೆ ಬಿಟ್ಟು ಮ್ಯಜೆಶಿಯನ್ ಆದವ. ನಮ್ಮ ಹರಟೆ ಇನ್ನೂ ಹೆಚ್ಚಾಯಿತು.

"ಏನ್ ಮಾಡೋದು ಸಾರ್ ಆಗ ಏನೇನೋ ಹುಡುಗುಬುದ್ಧಿ. ಸರೀಗ್ ಓದಲಿಲ್ಲ. ಬಟ್ ಇಲ್ಲಿ ಒಂತರಾ ಚೆನ್ನಾಗಿದೆ. ಫ್ರೀಯಗಿದೆ. ನಿಮ್ಮಂತವರು ಕನ್ನಡದಲ್ಲಿ ಮಾತಾಡೋದು ಕೇಳಿದಾಗ ಖುಷಿಯಾಗುತ್ತೆ. ಅಮ್ಮ ಹುಡುಗಿ ಫೋಟೋಸ್ ಕಳಿಸ್ತಿದಾರೆ, ಮದ್ವೆ ಮಾಡ್ಕೋ ಅಂತ ಒಂದೇ ಸಮ ತಲೆ ತಿಂತಾರೆ." ಪಕ್ಕದ ಕುರ್ಚಿ ಎಳೆದು ಅಲ್ಲೇ ಕೂತು ಮುಂದುವರೆಸಿದ. "ನೋಡಿ ನೀವೇ ಹೇಳಿ, ಇಲ್ಲಿ ಕೆಲಸ ಮಾಡ್ತಾ ಬೆಂಗಳೂರಲ್ಲಿರೋ ಹುಡುಗಿ ಮದ್ವೆ ಮಾಡ್ಕೊಳಕಾಗತ್ತ? ನಾನು ಮದ್ವೆ ಮಾಡ್ಕೊಂಡ್ರೂ ಜೀವನ ಮಾಡಕ್ಕಾಗತ್ತ? ಒಂದೋ ನಾನು ಕೆಲಸ ಬಿಡಬೇಕು ಇಲ್ಲ ಬೇರೆ ತರಾ ಹುಡುಗಿ ನೋಡ್ಕೋಬೇಕು. ಕೆಲಸ ಬಿಡ್ತೀನಿ ಅಂತಾನೆ ಅನ್ಕೊಳ್ಳಿ, ಈ ಮ್ಯಾಜಿಕ್ ಮಾಡಾರಿಗೆಲ್ಲ ನಮ್ ಜನ ಎಷ್ಟು ದುಡ್ಡು ಕೊಡ್ತಾರೆ ? ಏನ್ ಪ್ರೋತ್ಸಾಹ ಇದೆ ನೀವೇ ಹೇಳಿ? ಇಲ್ಲಿ ನನಗೊಂತರ ಫ್ಯೂಚರ್ ಇದೆ ಅನ್ಸುತ್ತೆ. ನನ್ನ ಪರ್ಸನಾಲಿಟಿಗೆ ಶಿಪ್ಪಿಂಗ್ ಎಂಟರ್ಟೆನ್ಮೆಂಟ್ಸ್ ಇಂಡಸ್ಟ್ರೀನಲಿ ಬೆಳೀಬಹುದು ಅನ್ಸುತ್ತೆ, ಇಲ್ಲಾಂದ್ರೆ ಇನ್ನೊಂದಷ್ಟು ವರ್ಷ ಇಲ್ಲಿ ದುಡ್ಡು ಮಾಡ್ಕೊಂಡು ಕೆಲಸ ಬಿಟ್ಟು ಏನೋ ಬಿಸಿನೆಸ್ ಮಾಡ್ತೀನಿ. ಇದೆಲ್ಲ ಶ್ರಾವಣ ಶುಕ್ರವಾರ ಅಂತ ಓಡಾಡೋ ಅಮ್ಮಂಗೆ ಹೆಂಗೆ ಗೊತ್ತಾಗ್ ಬೇಕು ಸಾ. ಏನೋ ಸಕತ್ ಖುಶಿಯಾಯ್ತು ನಿಮ್ಮನ್ನೆಲ್ಲ ನೋಡಿ. ಕನ್ನಡದವರು ಕಡಿಮೆ ಗೊತ್ತ ಸಿಗೋದು, ತುಂಬಾ ತೆಲುಗಿನವರು, ಗುಜರಾತಿಗಳು ಬರ್ತಾರೆ.ನಾಳೆನೂ ಶೋಗೆ ಬನ್ನಿ ಆಯ್ತಾ ಸಿಗ್ತೀನಿ." ಅಬ್ಬ ಥೇಟ್ ಬೆಂಗಳೂರಿನ ಸ್ಟೈಲ್ಲ್ ನಲ್ಲಿ ಕನ್ನಡದಲ್ಲಿ ಮಳೆಗರೆದು ಹೋದ.

ಇನ್ನೊಬ್ಬ ಆಫ್ರಿಕನ್ ಆದರೆ ಅಪ್ಪಟ ತಮಿಳಿನಲ್ಲಿ ಮಾತಾಡುವ ವೇಟರ್ ಸೌತ್ ಆಫ್ರಿಕಾದವನು. ಅಪ್ಪ ಕರಿಯ, ಅಮ್ಮ ತಮಿಳು. ಇನ್ನೊಬ್ಬ ಅವನ ಜೊತೆಯಲೇ 5

ವರ್ಷದಿಂದ ಕೆಲಸ ಮಾಡುತ್ತಿರುವ ಮಲೇಷಿಯಾದ ಅಪ್ಪಟ ಎಷಿಯನ್ ಮುಖದ ವೇಟರ್ ಕೂಡ ನಿರರ್ಗಳವಾಗಿ ತಮಿಳಿನಲ್ಲಿ ಕುಶಲ ವಿಚಾರಿಸುತ್ತಿದ್ದ. ಅವರಿಬ್ಬರಿಗೂ ನಾವೊಂದಿಷ್ಟು ಕನ್ನಡ ಉರುಹೊಡಿಸುವಾಗ, ಮಾರುತಿ ಕೋಳಿ ಎಂಬವ ಓಡೋಡಿ ಬಂದು ಚೆನ್ನಾಗಿ ಕಳಲಿಸಿ, ನನಗಂತೂ ಇವರಿಗೆ ಮರಾಟಿ ಕಳಿಸಲಾಗಲಿಲ್ಲ ಎಂದು ಕನ್ನಡ ಅರ್ಥ ಆಗುತ್ತೆ ನಂಗೆ ಎಂದು ಹಿಂದಿಯಲ್ಲಿ ಹೇಳಿದ! ತನ್ನಪ್ಪನಿಗೆ ಪೋಲಿಯೋ. ಆದರೆ ಮೀನುಗಾರಿಕೆ ಎಂದು ಅದೇ ಹೆಳವ ಕಾಲಿನಲ್ಲೇ ಹೆಣಗಿದ. ನಮ್ಮ ಸಮಾಜದಲ್ಲಿ ಹೆಂಗಸರೇ ಗಟ್ಟಿಗಿತ್ತಿಯರು. ಸಮುದ್ರ ಎಂದರೆ ನಂಗೆ ಮನೆಯಿದ್ದಂಗೆ, ಮುಂಬೈ ಕಡಲೇನು, ಬಹಾಮ ತಡಿಯೇನು ಎಲ್ಲ ನೀರೂ ಒಂದಕ್ಕೊಂದು ಸೇರಿಕೊಳ್ಳುವುದೇ ಅಲ್ಲವೇ ಕೊನೆಯಲ್ಲಿ ಎಂದು ವೇದಾಂತ ಹೇಳಿ ನಕ್ಕು ಹೋದ.

ಹಡಗಿನಲ್ಲಿ ಕಾರ್ಮಿಕ ಕೆಲ್ಸಕ್ಕೆ ಜನರನ್ನು ನೇಮಿಸಿಕೊಳ್ಳುವಾಗೆಲ್ಲ ಅವರು ಸಮುದ್ರ ಸಂಬಂಧಿ ಕುಟುಂಬದವರಾದಲ್ಲಿ ಹೆಚ್ಚಿನ ಆದ್ಯತೆಯಿದೆ. ಅದು ಎಲ್ಲೂ ಬರೆದಿಡುವ ನಿಯಮವಲ್ಲ. ಅದು ನಾವಿಕರಿಗೆ ನಾವಿಕರ ಮೇಲಿರುವ ಒಂದು ಅಖಂಡ ನಂಬಿಕೆ. ಹುಟ್ತಾ ಸಾಗರದ ಮೊರೆತ ಕೇಳಿದವರಿಗೆ ಸಾಗರದ ಮೇಲಿರುವ ಒಂದು ನಿರ್ಭೀತ ಧೈರ್ಯ. ಹಾಗಾಗಿಯೇ ಹಡಗಿನಲ್ಲಿ ಮುಂಬೈ, ಗೋವಾ, ಪಾಂಡಿಚೇರಿಗಳ ಮೀನುಗಾರಿಕೆ ಕುಟುಂಬದ ಬಹಳಷ್ಟು ಜನ ಕಾರ್ಮಿಕರು ಸಿಗುತ್ತಾರೆ.

ನಾಲ್ಕು ದಿನದ ಪ್ರಯಾಣದಲ್ಲಿ ಕಂಡಷ್ಟು ಜಗತ್ತು, ಜಾಗತಿಕ ಜನರನ್ನು ನಾನು ಹಿಂದೆಲ್ಲೂ ಕಂಡಿರಲಿಲ್ಲ. ಅಲ್ಲಿದ್ದ ನೌಕರವರ್ಗದ್ದು ಅಕ್ಷರಶಃ ಜಾಗತಿಕ ಕುಟುಂಬ. ಆ ಕುಟುಂಬಕ್ಕೆ ಅದರದ್ದೇ ಆದ ಒಂದು ಹೆಣಿಕೆಯಿತ್ತು, ಹೊಂದಾಣಿಕೆಯಿತ್ತು. ಭೇದವಿತ್ತು, ಪ್ರೇಮವಿತ್ತು, ಅವರೆಲ್ಲರ ಆ ಬಂಧನದಲ್ಲಿಯೂ ನಗುವಿತ್ತು. ನಮ್ಮನ್ನೆಲ್ಲ ನಗಿಸುವ ಹುಮ್ಮಸ್ಸಿತ್ತು. ನಾಲ್ಕು ದಿನದಲ್ಲಿ ಅವರೆಲ್ಲ ಸೇರಿ ಸೃಷ್ಟಿಸುವ ಆಧುನಿಕ, ಐಶಾರಾಮೀ ಸುಂದರ ಜಗತ್ತಿನ ಅನುಭವ ಸದಾ ಮೆಲಕುವ ನೆನಪು. ಆದರೆ ಅತಿ ಕಡಿಮೆ ವೇತನದಲ್ಲಿನ ಅವರೆಲ್ಲರ ಜೀವನ ನಡೆಯುವುದು ನಾವು ಕೊಡುವ ಟಿಪ್ಸ್‌ಗಳಿಂದ. ನಮ್ಮ ನಾಲ್ಕು ಮಾತುಗಳಿಂದ. ನಮ್ಮ ನಗುವಿನ ಗಳಿಗೆಗಳ ನಡುವೆ ಕೆಲಕ್ಷಣ ಅವರೊಡನೆಯೂ ಸೇರಿ ನಕ್ಕಲ್ಲಿ ನಾವು ಕೊಡುವ ಟಿಪ್ ಗಳಿಗೆ ಸಿಗುವುದಕಿಂತ ಹೆಚ್ಚಿನ ಕೃತಜ್ಞತೆ ಆ ಕಂಗಳಲ್ಲಿ ಕಾಣುವುದು ಮಾತ್ರ ಸತ್ಯ.

**ವೈಶಾಲಿ ಹೆಗಡೆ**

ಕನ್ನಡ ಪ್ರಭ

ದೀಪಾವಳಿ ವಿಶೇಷಾಂಕ 2014

# ಗಾಂಧಿ ಮಾರ್ಗದ ಚಹರೆಗಳು

ಆಗ ನಾನು ಆರನೇ ತರಗತಿ ಇರಬೇಕು. ವಾರಾಂತ್ಯದ ರಜೆಯಲ್ಲಿ ಸಿನಿಮಾ ನೋಡುತ್ತಿದ್ದವನನ್ನು ಅದರಲ್ಲಿನ ಒಂದು ಬೈಕ್ ಆಕ್ಸಿಡೆಂಟ್ ದೃಶ್ಯ ಬೆಚ್ಚಿ ಬೀಳಿಸಿತ್ತು. ಸಿನಿಮಾಗಳಲ್ಲಿ ಅಂಥ ದೃಶ್ಯಗಳನ್ನು ಅದುವರೆಗೆ ನೋಡಿರಲೇ ಇಲ್ಲ ಎಂದಲ್ಲ. ಆದರೆ ಆ ದೃಶ್ಯದ ಅಡಿಟಿಪ್ಪಣಿಯಾಗಿ 'ಬೆಂಗಳೂರಿನ ಎಂ ಜಿ ರೋಡಿನಲ್ಲಿ ನಡೆದ ಘಟನೆ' ಎಂಬ ಸಾಲು ನನ್ನನ್ನು ಬೆಚ್ಚಿ ಬೀಳುವಂತೇ ಮಾಡಿದ್ದು. ಮುಂದೆ ಆ ಸಿನಿಮಾ ಬಂದಾಗೆಲ್ಲಾ ಅದೊಂದೇ ದೃಶ್ಯಕ್ಕಾಗಿ ಭಯ ಕಾತರದಿಂದ ಟಿವಿ ಮುಂದೆ ಕೂತಿರುತ್ತಿದ್ದೆ.

ಮಹಾತ್ಮ ಗಾಂಧಿ ರಸ್ತೆ ನನ್ನ ಸ್ಮೃತಿ ಪಲಕುಗಳಲ್ಲಿ ಸೇರಿಕೊಂಡಿದ್ದು ಹೀಗೆ.. ಇದಾಗಿ ಸುಮಾರು 11 ವರ್ಷಗಳ ನಂತರ, ಈಗ ನಾನೂ ಈ ಮಹಾನಗರದ ಭಾಗವಾಗಿ, ಎಂಜಿ ರಸ್ತೆ ನನ್ನ ಕಾಯಕದ ಭಾಗವಾಗಿ ದಿನವೂ ನೋಡುವಾಗ ಈ 'ಮಹಾತ್ಮನ ಮಾರ್ಗ' ಪ್ರತಿದಿನವೂ ತನ್ನ ವಿಶ್ವರೂಪದ ಒಂದೊಂದೇ ಮಗ್ಗಲುಗಳನ್ನು ತೋರುತ್ತಾ ನನಗೆ ತೆರೆದುಕೊಳ್ಳುತ್ತಿದೆ. ನನ್ನೆಲ್ಲ ಪೂರ್ವಗ್ರಹಿಕೆಗಳನ್ನು ಸಾರಾಸಗಟಾಗಿ ತಿರುಚೊಗೆದು ಕ್ಷಣಕ್ಷಣಕ್ಕೂ ಹೊಸದೇ ಆಗಿ ಹೊಳೆಯುತ್ತಿದೆ. ನನ್ನನ್ನು ಬೆರಗಿಗೆ ಕೆಡವಿ ತಾನು ನಗುತ್ತಿದೆ ಥೇಟ್ ಗಾಂಧಿಯಂತೆ!

ಅದರಲ್ಲೂ ಉದ್ದೋ ಉದ್ದ ಎಂಜಿ ರೋಡಿನ ಒಂದು ಭಾಗ ಮಾತ್ರ ಹೆಚ್ಚು ವಿಶೇಷವಾದದ್ದು. ಅದು ಕುಂಬ್ಳೆ ಸರ್ಕಲ್ ಮತ್ತು ಬ್ರಿಗೇಡ್ ರೋಡಿನ ನಡುವಿನ ಮೆಟ್ರೋ ನಿಲ್ದಾಣದ ಭಾಗ. ಫಳಫಳ ಗಾಜಿನ ಮೆಟ್ರೋ ನಿಲ್ದಾಣ, ನುಣ್ಣಗಿನ ಹೊಳಪು ಕಲ್ಲುಗಳು, ರಂಗೋಲಿ ಸಭಾಂಗಣ, ಅದರ ನೆತ್ತಿ ಸವರುವ ಜನರಲ್ ಕಾರಿಯಪ್ಪ ಪಾರ್ಕಿನ ಬಣ್ಣ ಬದಲಾಯಿಸಿದ ಬಿದಿರ ಹಿಂಡು, ಹೂವಿನ ಹಾದಿ, ಅದರಡಿ ಗ್ಯಾಲರಿಯಲ್ಲಿ ಆಗಾಗ ಒಮ್ಮೆಂದೊಮ್ಮೆಲೆ ಪ್ರತ್ಯಕ್ಷವಾಗಿಬಿಡುವ ವಿವಿಧ ಕಲಾಕೃತಿಗಳು, ರಸ್ತೆಯಾಚೆ ಬದಿಯ ಒತ್ತೊತ್ತು ವ್ಯಾಪಾರ ಮಳಿಗೆಗಳು ಇವೆಲ್ಲ ಸೇರಿ ಎಂಜಿ ರಸ್ತೆಯ ಈ ಭಾಗ ಹಳೆ ಸೈಕಲ್ಲಿಗೆ ಹಾಕಿದ ಹೊಸ ಸೀಟಿನಂತೇ ಹೊಳೆಯುತ್ತದೆ.

ಹೊರಗಿನಿಂದ ಎಷ್ಟು ಮಾತಾಡಿದರೆ ಏನು ಬಂತು? ಅಲ್ಲೇ ಹೋಗಿ ನೋಡುವ ಬನ್ನಿ...

* * *

ಏನೇನು ಇಲ್ಲ ಇಲ್ಲಿ?

ಆಕಾಶದ ಎದೆಗೆ ಚುಚ್ಚುವ, ನೆಟ್ಟಗೆ ತಪಸ್ಸಿಗೆ ನಿಂತ ಮಳಿಗೆಗಳು, ಮಾಲೀಕನ ಮುಖವಷ್ಟೇ ಕಾಣುವ ಪುಟ್ಟ ಗೂಡಂಗಡಿ. ತನ್ನ ವೃದ್ಧಾಪ್ಯವನ್ನು ಜಾಹೀರಾತು ಬಿತ್ತಿಚಿತ್ರಗಳಿಂದ ಮುಚ್ಚಿಕೊಳ್ಳಲು ಹವಣಿಸುವ ಬ್ರಿಟಿಷ್ ಕಾಲದ ಕಟ್ಟಡ, ಆಳೆತ್ತರದ ತಗಡುಗಳ ಹಿಂದೆ ಈಗಷ್ಟೆ ಹುಟ್ಟುತ್ತಿರುವ ನವಜಾತ ಬಿಲ್ಡಿಂಗು, ಒಬ್ಬ ಕೂಲಿಯವನ

ಇಡಿ ದಿನದ ದುಡಿಮೆಯನ್ನು ಸುರಿದರೂ ಒಂದರ್ಧ ಗ್ಲಾಸು ಕೊಳ್ಳಲಾರದ ರೇಟಿನ ಕಾಫೀಡೇ, ಕಿಸೆಯಲ್ಲಿ ಉಳಿದ ಚಿಲ್ಲರೆಗೆ ನೀಟಾಗಿ ಹಣ್ಣು ಕತ್ತರಿಸಿ ಉಪ್ಪು ಕಾರ ಸವರಿ ಕೊಡುವ ಚಕ್ರದಂಗಡಿ ಇಂಥವೆಲ್ಲ ಮಹಾನಗರದ ವೈರುಧ್ಯವನ್ನು ನೋಡಬೇಕೆಂದರೆ ನೀವು ಇಲ್ಲಿಗೇ ಬರಬೇಕು.

ಬೆಂಗಳೂರಿನ ಇತರ ರಸ್ತೆಗಳಂತೆ ಎಂಜಿ ರಸ್ತೆಯ ಈ ಭಾಗ ಸಣ್ಣ ಮಳೆಗೆಲ್ಲಾ ಕೊಚ್ಚೆಯೆದ್ದು ನೀರು ತುಂಬಿ ಕಚಪಿಚ ಅನ್ನುವುದಲ್ಲ. ಬದಲಿಗೆ ಮಣ್ಣೇ ಕಾಣದ ಈ ಜಾಗದಿಂದ ನೀರು ಪಕ್ಕದ ತಗ್ಗಿನ ಪ್ರದೇಶಕ್ಕೇ ಹೋದದ್ದೇ ರಸ್ತೆ ಈಗಷ್ಟೇ ಮಿಂದು ಬಂದ ಹುಡುಗಿಯ ಕೂದಲಂತೆ ಕೊಂಚ ಒದ್ದೆಯಾಗಿ ಹುರುಪಿನಿಂದ ವಾಹನಗಳ ಚಕ್ರಗಳಿಗೆ ಎದೆಕೊಡುತ್ತದೆ. ಇಲ್ಲಿನ ರಸ್ತೆಯ ಒಂದು ಬದಿಯಲ್ಲಿ ಕತ್ತು ಕೊಂಚ ಓರೆಯಾಗಿಸಿ ತಪ್ಪು ಮಾಡಿದ ವಿದ್ಯಾರ್ಥಿಗಳಂತೆ ದ್ವಿಚಕ್ರವಾಹನಗಳು ಒತ್ತೊತ್ತಾಗಿ ನಿಂತೇ ಇರುತ್ತವೆ ನಡುರಾತ್ರಿಯವರೆಗೂ. ರಸ್ತೆಯ ಆಚೆ ತುದಿ ಉದಯ ಸರ್ಕಲ್ ಬಳಿ ಯಾವಾಗಲೂ ನಾಲ್ಕೈದು ವರ್ಷದ ಪುಟ್ಟ ಹುಡುಗಿ, ಇನ್ನೂ ವರ್ಷ ತುಂಬದ ತಂಗಿಯನ್ನು ಸೊಂಟಕ್ಕೆ ಒತ್ತಿಕೊಂಡು ಪಾದಚಾರಿಗಳ ಪ್ಯಾಂಟು ಜಗ್ಗಿ ಕಾಸಿಗಾಗಿ ಕೈಚಾಚುತ್ತಿರುತ್ತಾಳೆ. ಸೂಟು ಬೂಟಿನ ಸಾಹೇಬರು ಅವಳು ಮುಟ್ಟಿದ ಕೂಡಲೇ ತಮ್ಮದೇ ಅಮೇಧ್ಯ ತುಳಿದಂತೆ ಪಕ್ಕ ಜಿಗಿದು, ಅಸಹ್ಯ ನಟಿಸಿ ಕೊಡವಿಕೊಂಡು ಹೋಗುವಾಗ ಅವಳು ಕೊಂಚವೂ ಬೇಸರಿಸಿಕೊಳ್ಳದೇ ಅದೇ ದೈನ್ಯದಿಂದ ಮತ್ತೊಬ್ಬರ ಬಳಿ ಓಡುತ್ತಾಳೆ. ಅಪರೂಪಕ್ಕೊಮ್ಮೆ ವಿದೇಶಿಯರ್‍ಯಾರೋ ಹತ್ತರ ನೋಟೊಂದನ್ನು ಕೈಯಲ್ಲಿಟ್ಟರೆ ಜಗತ್ತು ಗೆದ್ದ ಖುಷಿಯಲ್ಲಿ ನಕ್ಕು ತಂಗಿಯನ್ನೊಮ್ಮೆ ಎತ್ತಿ ಸೊಂಟಕ್ಕೆ ಇನ್ನಷ್ಟು ಬಿಗಿದುಕೊಂಡು ಮುನ್ನಡೆಯುತ್ತಾಳೆ.

ನಡುರಾತ್ರಿಯಾಗಿದೆ. ರಸ್ತೆಯ ಬಹುತೇಕ ಮಳಿಗೆಗಳು ಮುಚ್ಚಿದ್ದರೂ ರಸ್ತೆಯಲ್ಲಿನ್ನೂ ವಾಹನಗಳ ಓಡಾಟ ಕಮ್ಮಿಯಾಗಿಲ್ಲ. ಆದರೆ ರಸ್ತೆ ಬದಿಯಲ್ಲಿ ತಲೆಓರಗಿಸಿ ನಿಂತ ದ್ವಿಚಕ್ರವಾಹನಗಳಿಗೆಲ್ಲ ಒಂದೊಂದಾಗಿ ಜೀವ ಬಂದು ಜಾಗ ಖಾಲಿ ಮಾಡುತ್ತಿವೆ. ಅವು ಸರಿದ ಜಾಗದಲ್ಲಿ ಮುದ್ದೆಯಾದ ಬಿಳಿ ಪ್ಲ್ಯಾಸ್ಟಿಕ್ ತಟ್ಟೆಗಳು, ಕಂಠಮಟ್ಟ ಸುಟ್ಟುಕೊಂಡು ಬಿದ್ದ ಸಿಗರೇಟು ತುಂಡುಗಳು, ಹರಕು ಸಾಕ್ಸ್ ಇವೆಲ್ಲ ಆ ನಿಶರಾತ್ರಿಯ ಬೀದಿದೀಪದ ಬೆಳಕಿನಲ್ಲಿ ಯಾರದೋ ಛಿದ್ರ ಕನಸಿನ ಅವಶೇಷಗಳಂತೆ ಕಾಣುತ್ತವೆ. ಎನಿಮೇಷನ್ ಕೋರ್ಸು ಮಾಡಿ ತುಂಬ ದುಡ್ಡು ಮಾಡಬೇಕು ಅಂತ ದೂರದ ಅಂಕೋಲೆಯಿಂದ ಮನೆಯಲ್ಲಿ ಹೇಳದೇ ಓಡಿಬಂದಿರುವ ಸೆಕ್ಯುರಿಟಿ ಹುಡುಗ ಗುರು 'ಇಂದು ಕಷ್ಟ ಪಟ್ರೆ ನಾಳೆ ಗ್ಯಾರಂಟಿ ಚೊಲೊದಾಗ್ತದೆ. ಒಂದ್ಸಲ ಲಕ್ ಬರ್‍ಲಿ ಆಮೆಲೆ ತಿರುಗಿ ನೋಡುದಿಲ್ಲ' ಅಂತೆಲ್ಲ ಯೋಚಿಸುತ್ತ ರಸ್ತೆಯನ್ನೇ ದಿಟ್ಟಿಸುತ್ತಾನೆ. ಚಳಿಗಾಳಿ ಸುಯ್ಯನೇ ಬೀಸುತ್ತದೆ. ಈ ಚಳಿಯಲ್ಲಿ ಆ ನಾಲ್ಕೈದು ವರ್ಷದ ಪುಟ್ಟ ಹುಡುಗಿ ತನ್ನ ವರ್ಷತುಂಬದ ತಂಗಿಯೊಟ್ಟಿಗೆ ಎಲ್ಲಿ ಮಲಗಿರಬಹುದು? ಏನನ್ನು ಹೊದ್ದಿರಬಹುದು?

ತುಂಡುಡುಗೆಯ ಗಾಂಧಿ ತನ್ನ ಮಾರ್ಗದಲ್ಲೇ ಮೂಕಪ್ರೇಕ್ಷಕ..!

* * *

ಗಾಂಧಿ ರಸ್ತೆ ಅಂದಮೇಲೆ ಅವನಿಗೇ ಜಾಗವಿಲ್ಲದಿದ್ದರೆ ನಡೆಯುತ್ತದೆಯೇ? ಮೆಟ್ರೋ ನಿಲ್ದಾಣದ ಪಕ್ಕದ ಸಾರ್ವಜನಿಕ ಶೌಚಾಲಯದ ಗೋಡೆಯ ಒಂದು ಬದಿ ಮಹಾತ್ಮನ ನೂರು ಛಾಯೆಗಳ ಭಿತ್ತಿಚಿತ್ರಕ್ಕೆ ಮೀಸಲು. ಎದುರಿನ ಜಾಗದಲ್ಲೂ ಈ ಪುಣ್ಯಾತ್ಮ ಆಗಾಗ ನಿದ್ದೆಯಿಂದ ಎಚ್ಚರಾಗಿ ತನ್ನ ಎರಡು ಸಾಲಿನ ಸಂದೇಶದೊಂದಿಗೆ ಒಮ್ಮಿಂದೊಮ್ಮಲೇ ಪ್ರತ್ಯಕ್ಷವಾಗಿಬಿಡುವುದಿದೆ. ಹಾಗಂತ ನೀವು ನಾಳೆ ಸರಿಯಾಗಿ ನೋಡಿದರಾಯ್ತು ಎಂದೇನಾದರೂ ನಿರ್ಲಕ್ಷಿಸಿ ದಾಟಿಹೋದಿರೋ, ಮರುದಿನ ಅದೇ ಜಾಗದಲ್ಲಿ 'ಪ್ರಮೋಟ್ ಯುವರ್ ಬ್ರಾಂಡ್ ಹಿಯರ್' ಎಂಬ ದೊಡ್ಡಕ್ಷರದ ಕೆಳಗಿನ ದೂರವಾಣಿ ಸಂಖ್ಯೆ ನಿಮ್ಮನ್ನು ನೋಡಿ ಗಹಗಹಿಸುತ್ತಿರುತ್ತದೆ. ಗಾಂಧಿ ತನ್ನ ಸಂದೇಶದೊಟ್ಟಿಗೆ ಒಳಗೆಲ್ಲೋ ಮುದ್ದೆಯಾಗಿ ಬಿದ್ದಿದ್ದರೂ ನಗುತ್ತಲೇ ಇದ್ದಾನೆ. ಜಟ್ಟಿ ಬಿದ್ದರೂ... ಮಜಾ ನೋಡಿ, ಈ ಮುದುಕನಿಗೆ ಮಣ್ಣಾಗಲು ಮೀಸೆಯೂ ಇಲ್ಲ.. ಇಲ್ಲಿ ಮಣ್ಣೂ ಇಲ್ಲ! ರಸ್ತೆಯಾಚೆಯ ಕಟ್ಟಡದ ತುದಿಯಲ್ಲಿನ ಜಾಹೀರಾತಿನ ದೊಡ್ಡ ಫಲಕದಲ್ಲಿ ಮಹಿಳೆಯರ ಒಳುಡುಪಿನ ಚಿತ್ರದ ಕೆಳಗೆ ಬರೆದ "ಹೈಡ್ ಯುವರ್ ಆಲ್ ಸಿಕ್ರೆಟ್ಸ್" ಎಂಬ ಸಾಲು ಓದಲಾರದಷ್ಟು ಬಾಪುವಿನ ಕನ್ನಡಕದ ಕಣ್ಣು ಮಂಜಾಗಿದೆಯಂತೆ. ನಡುರಾತ್ರಿ ಹೊಕ್ಕುಳಿಗೆ ರಿಂಗು ಚುಚ್ಚಿಕೊಂಡು ಸಿಗರೇಟು ಸೇದುತ್ತಾ ಗೆಳೆಯನ್ನು ತಬ್ಬಿಕೊಂಡು ಆಕಾಶ ನಡುಗಿಸುವ ಸದ್ದಿನ ಬೈಕಿನಲ್ಲಿ ರೋಯ್ಯನೇ ಹೋಗುವ ಸಣ್ಣ ಚಡ್ಡಿಯ ಹುಡುಗಿಯನ್ನು ನೋಡಿದ್ದೇ ಅವನಿಗೆ ತನ್ನ ಹಳೆಯ ಸ್ವಾತಂತ್ರ್ಯದ ವ್ಯಖ್ಯಾನಗಳೆಲ್ಲಾ ನೆನಪಾಗುತ್ತವೆ.

ಎಂಥ ಚಳಿಗಾಲವನ್ನೂ ಎರಡು ಖಾದಿ ತುಂಡಿನಲ್ಲಿ ಕಳೆದವನು ಈಗ ನೋಡಿ, ನಡುಗುತ್ತಿದ್ದಾನೆ ತನ್ನೊಳಗೆ.

* * *

ಭಾನುವಾರದ ಒಂದು ಸಂಜೆ. ಎಂಜಿ ರೋಡಿನ ರಂಗೋಲಿ ಸಭಾಂಗಣದಲ್ಲಿ ಜನ ಸೇರಿದ್ದಾರೆ. ಸುತ್ತುಗಟ್ಟಿದ ಜನರ ಆಚೆಬದಿಯಿಂದ ಮೆಲ್ಲನೇ ವಾದ್ಯಗಳ ಶಬ್ದ ಕೇಳುತ್ತಿದೆ.

ಡಂ ಡಕ್ಕಾ.. ಡಂಡಂ ಡಕ್ಕಾ....

ಒಂದೇ ಬಣ್ಣದ ಟೀಷರ್ಟ ತೊಟ್ಟು ವಿವಿಧ ವಾದ್ಯಗಳನ್ನು ನುಡಿಸುತ್ತಿರುವ ಆ ಯುವ ಗುಂಪಿನ ಸದಸ್ಯರ ಮುಖಭಾವ, ಪರಸ್ಪರ ಮುಗುಳ್ನಗೆಯ ಸ್ಪಂದನ, ಆ ಉದ್ದ ಕೂದಲಿನ ಮುಖದ ಹುಡುಗನ ಕೂದಲ ಹಾರಾಟ ಇದೆಲ್ಲವುಗಳ ದರ್ಶನ ಮೊದಲ ಮೂರು ಸಾಲಿನ ಪ್ರೇಕ್ಷಕರಿಗೆ ಮಾತ್ರ ಲಭ್ಯ. ವಾರಾಂತ್ಯದ ಬಿಡುವಿನಲ್ಲಿ ಶಾಪಿಂಗ್ ಡೇಟಿಂಗ್ ಅಂತೆಲ್ಲ ಅತ್ತಿತ್ತ ಅಡ್ಡಾಡುತ್ತಿರುವವರೂ ಸಹ, ಕ್ಷಣಹೊತ್ತು ನಿಂತು, ಜೀನ್ಸಿನಲ್ಲಿ ಪಿಟ್ಟುಗಟ್ಟಿದ ತಮ್ಮ ತೊಡೆಗೆ ಎರಡೇ ಬೆರಳನ್ನು ವಾದ್ಯದ ಲಯಕ್ಕೆ

ಅನುಗುಣವಾಗಿ ಬಡಿಯುತ್ತಾ ನಿಂತುಬಿಟ್ಟಿದ್ದಾರೆ. ಮರುಕ್ಷಣವೇ ಏನೋ ನೆನಪಾಗಿ 'ನಮಗಿದಕ್ಕೆಲ್ಲ ಪುರಸೊತ್ತಿಲ್ಲ' ಎಂಬಂತೇ ಜತೆಗಾರರ ಪಕ್ಕೆಗೆ ತಿವಿದು ಮುಂದೆ ಸಾಗಿದ್ದಾರೆ. ವಾದ್ಯಗಳು ನಿಧಾನವಾಗಿ ವೇಗದ ಲಯಕ್ಕೆ ಹೊರಳಿಕೊಳ್ಳುತ್ತಿದ್ದಂತೆ ಎಲ್ಲರೂ ಭೌತಿಕ ಪ್ರತ್ಯೇಕತೆಯನ್ನು ಮರೆತು ಕರಗಿಹೋಗುತ್ತಿದ್ದಾರೆ. ವಾದ್ಯಗಳು ಕ್ಷಣಕ್ಷಣಕ್ಕೂ ಎಲ್ಲರನ್ನೂ ಸುತ್ತಿಸುತ್ತಿ ಸೆಳೆಯುವಂತೆ ತೀವ್ರವಾಗುತ್ತಿದೆ.

ಟಟ್ಟರ್ರಾ ಟಟ್ಟರ್ರಾ ಟಟ್ಟರ್ರಾ ಡಂಡಂ

ಟಟ್ಟರ್ರಾ ಡಂ ಟಟ್ಟರ್ರಾ ಡಂ ಟಟ್ಟರ್ರಾ ಟಟ್ಟರ್ರಾ ಡಂಡಂ ಡಂ...

ಈ ನಡುವೆ ರಸ್ತೆಯಾಚೆ ಅವರಿವರ ಪ್ಯಾಂಟು ಜಗ್ಗಿ ಕೈಚಾಚುತ್ತಿದ್ದ ಹುಡುಗಿ ವರ್ಷ ತುಂಬದ ತನ್ನ ತಂಗಿಯನ್ನು ಸೊಂಟಕ್ಕೆ ಒತ್ತಿಕೊಂಡೇ ಸೊಯ್ಯನೇ ನುಗ್ಗಿಬರುವ ಗಾಜುಗಣ್ಣಿನ ಕಾರುಗಳಿಂದ ತಪ್ಪಿಸಿಕೊಂಡು ಈಚೆ ಜನರ ಗುಂಪಿನತ್ತ ಬಂದುಬಿಟ್ಟಿದ್ದಾಳೆ. ಜನರ ಕಾಲ ನಡುವಿನ ಸಣ್ಣಜಾಗದಲ್ಲೇ ಹೊಕ್ಕು, ಅವರ ಅಸಹ್ಯ ಅಸಹನೆಯ ನೋಟ ನಿರ್ಲಕ್ಷಿಸಿ ಮುಂದಿನ ಸಾಲಿಗೆ ಬಂದು ವಾದ್ಯಗಾರರನ್ನೇ ನೋಡುತ್ತಾ ನಿಂತಿದ್ದಾಳೆ.

ಆ ವಾದ್ಯಗಾರರ ಗುಂಪಿನ ಹುಡುಗನೊಬ್ಬ ಇವಳತ್ತ ನೋಡಿ ನಸುನಕ್ಕಿದ್ದೇ ತನಗೂ ನಿಲುಕದ ಸೆಳೆತದ ಸೂಚನೆಯೊಂದು ತಾಕಿದಂತಾಗಿ ಸೊಂಟದ ಮೇಲಿನ ತಂಗಿಯನ್ನು ಹಾಗೇ ಕೆಳಜಾರಿಸಿ, ನೆಲಕ್ಕಿಳಿಸಿದವಳೇ ಕಣ್ಮುಚ್ಚಿ ಒಂದೊಂದೇ ಹೆಜ್ಜೆ ಎತ್ತಿಡುತ್ತಾ ಕುಣಿಯಲಾರಂಭಿಸಿದ್ದಾಳೆ ವಾದ್ಯದ ಲಯಕ್ಕೆ ಸರಿಯಾಗಿ. ನಾಲ್ಕೈದು ವರ್ಷದ ಹುಡುಗಿ ಒಂಚೂರೂ ತಾಳ ತಪ್ಪದೇ ಹೆಜ್ಜೆ ಎತ್ತಿಯೆತ್ತಿ ಕುಣಿಯಲಾರಂಭಿಸಿದ್ದೇ ಜನರೆಲ್ಲ ವಾದ್ಯದವರನ್ನು ಬಿಟ್ಟು ಹುಡುಗಿಯ ಸುತ್ತ ನೆರೆದುಬಿಟ್ಟಿದ್ದಾರೆ. ಮುಸ್ಸಂಜೆಯ ಸೂರ್ಯನ ಕಿರಣ ಮೆಟ್ರೋ ರೈಲು ಹಾಸು, ಕಾಂಕ್ರೀಟ್ ಹೂವಿನ ಹಾದಿ, ಎಲ್ಲವನ್ನೂ ತಪ್ಪಿಸಿಕೊಂಡು ಹುಡುಗಿಯ ಮೇಲೆ ಬಿದ್ದಿದ್ದೇ ವಿಚಿತ್ರ ತೇಜಸ್ಸಿನಿಂದ ಹೊಳೆಯಲಾರಂಭಿಸಿದ್ದಾಳೆ. ಹುಡುಗಿಯ ಕುಣಿತ ನೋಡಿದ ವಾದ್ಯದವರಿಗೂ ಉಮೇದು ಬಂದಂತಾಗಿ ಇನ್ನಷ್ಟು ಹುರುಪುಗೊಂಡಿದ್ದಾರೆ.

ಎಷ್ಟೆಲ್ಲ ಜನರು.. ತಮ್ಮ ಧರ್ಮ, ಕರ್ಮ, ಪಾಪ, ಪುಣ್ಯ, ತೀರಿಸಬೇಕಾದ ಮನೆಸಾಲ, ಪರೀಕ್ಷೆಯಲ್ಲಿ ಬಾಕಿ ಉಳಿಸಿಕೊಂಡ ಸಬ್ಜೆಕ್ಟುಗಳು, ಊರಿಗೆ ಕಳಿಸಬೇಕಾದ ಹಣ, ಅಮ್ಮನ ಅನಾರೋಗ್ಯ, ಗಂಡನ ಆಫೀಸು ಅಫೇರುಗಳು, ಫ್ರೀಜ್‌ನಲ್ಲಿ ಖಾಲಿಯಾದ ತರಕಾರಿಗಳು, ಶಾಸ್ತ್ರದ ಅತ್ತೆ, ಬ್ರೇಕ್‌ಅಪ್ಪು, ಕೊಳ್ಳಬೇಕಾದ ಕಾರಿನ ಬ್ರಾಂಡು ಎಲ್ಲವೆಂದರೆ ಎಲ್ಲ ಜಂಜಡಗಳನ್ನೂ ಮರೆತು, ಅಷ್ಟೇಕೆ ನಾವು ಪ್ರತ್ಯೇಕ ದೇಹ, ಆತ್ಮ, ಅಭಿಲಾಷೆಯ ದ್ವೀಪಗಳು ಎಂಬುದನ್ನೂ ಮರೆತು ಹುಡುಗಿಯ ಕುಣಿತದ ಬಿಂದುವಿನಲ್ಲಿ ತಮ್ಮನ್ನು ತಾವು ಪೂರ್ತಿ ಕೊಟ್ಟುಕೊಂಡು ಒಂದೇ ಒಂದೇ ಆಗಿದ್ದಾರೆ. ವಾದ್ಯದವರ ಕೆನ್ನೆಯಿಂದಿಳಿದ ಒಂದೊಂದೆ ಬೆವರ ಹನಿ ಡ್ರಂ ಮೇಲೆ ಬಿದ್ದು ಮತ್ತೆ ಮೆಲಕ್ಕೆ ಚಿಮ್ಮುತ್ತಿವೆ.

ಹುಡುಗಿಯೋ ಮುಚ್ಚಿದ ಕಣ್ಣ ಬಿಟ್ಟರೆಲ್ಲಿ ಒಂದಾದ ಈ ಜಗತ್ತು ಛಿದ್ರವಾಗಿ, ಎಲ್ಲರ ಆತ್ಮವನ್ನು ಪೋಣಿಸಿ ಕಟ್ಟಿದ ಜೀವ ಹೂವಿನ ಮಾಲೆ ಹರಿದು ಹೋಗುತ್ತದೋ ಎಂಬ ಭಯದಲ್ಲೋ ಎಂಬಂತೆ ಕುಣಿಯುತ್ತಲೇ ಇದ್ದಾಳೆ.

ಮತ್ತೊಂದು ತುದಿಯಲ್ಲಿ ತಿಳಿಗೊಳದಲ್ಲಿ ಬಿದ್ದ ಹೂವೊಂದು ಎಬ್ಬಿಸುವ ಅಲೆಗಳಂತೆ ನಗುತ್ತಿದ್ದಾನೆ ಗಾಂಧಿ ತಣ್ಣಗೆ!

**– ಪದ್ಮನಾಭ ಭಟ್, ಶೇವ್ಕಾರ**

ಪ್ರಜಾವಾಣಿ 02.10.2014

# ಬೆಕ್ಕಿಗೊಂದು ಶ್ರದ್ಧಾಂಜಲಿ

ಸಾಕು ಪ್ರಾಣಿಗಳೆಂದರೆ ತುಂಬಾ ಪ್ರೀತಿಯಿಂದ ಸಾಕುತ್ತೇವೆ. ಅದರ ಒಂದೊಂದು ಬೆಳವಣಿಗೆಯನ್ನೂ ವೈಭವದಿಂದ ಕಂಡು ಸಂಭ್ರಮಿಸುತ್ತೇವೆ. ಮಕ್ಕಳಿದ್ದರೆ ಅದಕ್ಕೆ ಇಷ್ಟವಿದ್ದ ತಿಂಡಿ ತೀರ್ಥಗಳನ್ನು ಹಾಕುತ್ತಾ, ಮುತ್ತು ಕೊಡುವುದಿದ್ದರೆ ಕೊಡುತ್ತಾ, ಕ್ಷಣ ಕ್ಷಣವೂ ಆರೈಕೆ ಮಾಡಿ ತಾವೂ ಬೆಳೆಯುತ್ತಾರೆ. ಹಾಗೇ ಸಾಕಿದ್ದ ಪ್ರಾಣಿ ಆರೋಗ್ಯ ಕೆಟ್ಟು ಮೂಲೆಹಿಡಿದರೆ, ಗ್ರಾಹಚಾರಕ್ಕೆ ಸತ್ತುಹೋದರೆ ಅದನ್ನು ತೀರಾ ಪ್ರೀತಿಸುತ್ತಿದ್ದರ ಕಣ್ಣು ಒದ್ದೆ. ಕ್ಷಣ ಕ್ಷಣಕ್ಕೂ ತನ್ನ ಗೊಂಡೆಬಾಲ ಅಲ್ಲಾಡಿಸಿ ಅಮ್ಮನ ಕಾಲುಗಳಿಗೆ ಪ್ರದಕ್ಷಿಣೆ ಬೀಳುತ್ತಾ ನೊರೆ ಹಾಲಿಗಾಗಿ ಮೊರೆಯಿಡುತ್ತಿದ್ದ ನಮ್ಮ ವೈಟಿ, ಅಮ್ಮ ಎಷ್ಟೂ ಬೈದರೂ ಚೂರೂ ಕೋಪಗೊಳ್ಳದೇ ಮತ್ತೆ ಮತ್ತೆ ತನ್ನ ಗೊಂಡೆಬಾಲವನ್ನು ಅವಳ ಕಾಲಿಗೆ ನೇವರಿಸುತ್ತಾ ಸ್ವರ ತಂತಿ ಮೀಟುತ್ತಿದ್ದ ಆ ಬೆಳದಿಂಗಳಿನಂತ ವೈಟಿ, ವಠಾರದ ಮಕ್ಕಳೆಲ್ಲಾ ಬಾ..ಬಾ ವೈಟಿ ಅಂತ ಲಲ್ಲೆಗರೆಯುತ್ತಾ 'ವೈಟಿಯನ್ನು ಹಿಡಿದೆ..ಹಿಡಿದೆ' ಅಂತ ಸಂಭ್ರಮದಿಂದ ಬೆಟ್ಟವಾಗುತ್ತಿದ್ದ ವೇಳೆಗೆ ಕೆನೆ ಹಾಲಂತೆ ಜಾರಿಕೊಂಡು ಕಣ್ಮರೆಯಾಗಿರುತ್ತಿದ್ದ ವೈಟಿ, ಮೊನ್ನೆ ಚೂರೇಚೂರು ಜೀವ ಹಿಡಕೊಂಡು ಅಂಗಾತ ಮಲಗಿರುವುದನ್ನು ನೋಡಿದಾಗ ನನ್ನ ಕಣ್ಣು ಹನಿಗೂಡಲು ಶುರುಮಾಡಿದ್ದು ನಿಜ. ಯಾವುದೋ ಭದ್ರವಾಗಿದ್ದ ಕೊಂಡಿಯೊಂದು ಕಳಚಿ ಆ ಜಾಗವೆಲ್ಲ ಬೋರಲಾಗಿ ಹೋದ ಹಾಗೆ ಅನ್ನಿಸಿತ್ತು. ನಮ್ಮ ಮನೆಯ ಸಾಕು ಬೆಕ್ಕು ಹೀಗೆ ನೀರವವಾಗಿ ಬಿದ್ದಿರುವುದನ್ನು ನೋಡಿದಾಗ ಆ ಕ್ಷಣ ಅದರ ದೈನಂದಿನ ಮಿಯಾವ್ ಮಿಯಾವ್ ಕಿರುಚಾಟವೆಲ್ಲಾ ನೆನಪಾಗಿ ಏದುತ್ತಾ ಒಂದವು. ಒಂದು ನಿರ್ಜೀವ ವಸ್ತು ನಮ್ಮ ಕೈಯಿಂದ ಜಾರಿ ಹೋದರೂ, ಗಾಢವಾಗಿ ಪ್ರೀತಿಸೋ ಏನೋ ಒಂದು ಮತ್ತೆಂದೂ ಸಿಗದ ಲೋಕಕ್ಕೆ ಹಾರಿ ಹೋದರೂ, ಮನಸ್ಸಿಗೆ ಆಗೋ ಮರುಕವಿದೆಯಲ್ವಾ ಅದು ಅವರ್ಣನೀಯ. ಅಂತಹದರಲ್ಲಿ ಮನುಷ್ಯನೊಂದಿಗೆ ತನ್ನದೇ ಆದ ಬಾಂದವ್ಯವಿಟ್ಟುಕೊಂಡು, ಮನೆಯ ಸಂಭ್ರಮ, ಪುಳಕ, ಮರುಕ, ಸಡಗರಗಳಲ್ಲಿ ತನ್ನ ಅಸ್ತಿತ್ವ ತೋರಿಸಿಕೊಡುತ್ತಾ, ಮನೆಯ ಒಳಗೇನೋ ಚಿಂತೆ ಹತ್ತಿದ್ದರೆ ತಾವೂ ನಮ್ಮಲ್ಲಿ ಏನೋ ಒಂದು ದುಃಖ ಕಂಡುಕೊಂಡು ಮೌನವಾಗಿ ಬಿಡುವ, ಏನೋ ಸಂಭ್ರಮವೊಂದು ಜರುಗುತ್ತಿದ್ದರೆ 'ನಾನೂ ಬರುವೆ ನಿಮ್ ಜೊತೆ' ಅಂತ ತಾನೂ ಹಬ್ಬವಾಗಿಬಿಡುವ, ಒಟ್ಟಾರೆ ನಮ್ಮ ಮನೆಯ ಪರಮನಂಟಿನ ಸದಸ್ಯರೇ ಆಗಿಬಿಡುತ್ತಾ ಪರ್ಮನೆಂಟಾಗಿ ನಮ್ಮ ಮನದಲ್ಲಿ ಜಾಗ ಪಡೆದುಕೊಳ್ಳುತ್ತಾ ಹೋಗುವ, ಬೆಚ್ಚಗಿನ ನೇವರಿಕೆಗಳಲ್ಲಿ, ಸಣ್ಣಗಿನ ಹುಯ್ಯಾಟಗಳಲ್ಲಿ,ಮುಗ್ದತೆಯ ರೋಚಕತೆಯಲ್ಲಿ ಪ್ರೀತಿಸುವುದನ್ನು ಹೇಳಿಕೊಡುವ, ಸಾಕುಪ್ರಾಣಿಗಳ ಜೊತೆಗೆ ನಮಗೆ ಅದ್ಯಾವುದೋ

ಮಾಯೆ, ಅನ್ಯೋನ್ಯತೆಯ ಚುಂಗು ಅಂಟಿಕೊಂಡು ಬಿಟ್ಟಿರುತ್ತದೆ ಎನ್ನುವುದು ಕೆಲವರಿಗಾದರೂ ಅನುಭವಕ್ಕೆ ಬಂದೇ ಬಂದಿರಬೇಕು. ಅಷ್ಟೊಂದು ಅನ್ಯೋನ್ಯತೆ ನಮಗಿದೆ ಅಂತ ಗೊತ್ತಾಗೋದು ಯಾವಾಗ ಗೊತ್ತಾ? ಒಂದಾ ಆ ಪ್ರಾಣಿ ದಿಢೀರ್ ಅಂತ ಕಣ್ಮರೆಯಾಗಿರಬೇಕು. ಇಲ್ಲವೇ, ಅದರ ಇದ್ದ ಜೀವವೆಲ್ಲಾ ಬರಿದಾಗಿ ಅದು ಸಾಯುವ ಕೊನೆಯ ಘಟ್ಟದಲ್ಲಿರಬೇಕು. ಆವಾಗ ಅದು ಪ್ರಾಣಿ ಎನ್ನುವ ಗುಂಗೂ ನಮಗೆ ಮರೆತೇ ಹೋಗಿರುತ್ತದೆ. ಇಷ್ಟು ದಿನ ನಮ್ಮ ಜೊತೆಗೇ ಇದ್ದ ಜೀವ ಕೈ ಜಾರಿ ಹೋಗುತ್ತಿದೆಯಲ್ಲಾ? ಅಂತ ನಮ್ಮೊಳಗಿನಿಂದ ಯಾವುದೊ ಒಂದು ಅರ್ಥವಾಗದ ಭಾವ ನಮ್ಮನ್ನು ಮೌನವಾಗಿಸಿ ಸತಾಯಿಸುತ್ತದೆ ಅಷ್ಟೆ. ಅಮೇರಿಕನ್ ಲೇಖಕ ಅರ್ನೆಸ್ಟ್ ಹೆಮ್ಮಿಂಗ್ವೇ ಕೂಡ ಬೆಕ್ಕನ್ನು ತುಂಬಾ ಪ್ರೀತಿಸುತ್ತಿದ್ದನಂತೆ. ಅವನ ಬೆಕ್ಕೊಂದು ಸತ್ತು ಹೋದಾಗ ಅದೇ ಮೂಕಭಾವದಲ್ಲಿ ಗೆಳೆಯನಿಗೆ ಅದರ ಕುರಿತು ಪತ್ರ ಬರೆದಿದ್ದನಂತೆ. ಅಬ್ಬಾ ಬೆಕ್ಕೆಂದರೆ ಕೆಲವರಿಗೆ ಅದೆಷ್ಟು ಪ್ರೀತಿ. ಮನಶಾಸ್ತ್ರಜ್ಞ ಸಿಗ್ಮಂಡ್ ಫ್ರಾಯ್ಡ್ ಬೆಕ್ಕಿನ ಜೊತೆಗಿದ್ದರೆ ಆ ಸಮಯ ವ್ಯರ್ಥವೇ ಅಲ್ಲ ಎನ್ನುತ್ತಾನೆ. ಹೀಗೆ ಬೆಕ್ಕನ್ನು ಒಬ್ಬೊಬ್ಬರೂ ತುಂಬಾ ಪ್ರೀತಿಸುತ್ತಾರೆ ಅಲ್ವಾ? ನಾನು ಹೇಳುತ್ತಿರುವುದು ಸಾಕುಪ್ರಾಣಿಗಳನ್ನು ತುಂಬಾ ಆಪ್ತವಾಗಿ ಪ್ರೀತಿಸಿ, ನನ್ನಂತ ಅನುಭವದಲ್ಲಿ ತೇಲಿದವರಿಗೆ ಮಾತ್ರ..–"ಏನು? ಯಾವುದೋ ಒಂದು ಮೂಕ ಪ್ರಾಣಿ ಸತ್ರೆ ಅಳೋದಾ?..ಬೇರೆ ಕೆಲ್ಸವಿಲ್ಲವಾ?"ಅಂತ ಕೆಲವರು ನನ್ನನ್ನು ತರಾಟೆಗೆ ತೆಗೆದುಕೊಂಡರೂ, ಸಾಕುಪ್ರಾಣಿ ಪ್ರಿಯರಿಗೆ ನನ್ನ ಭಾವ ಖಂಡಿತಾ ಅರ್ಥವಾದೀತು ಅನ್ನೋದು ನನ್ನ ಬಲ ನಂಬುಗೆ. ವಿಷ್ಯಕ್ಕೆ ಬರುತ್ತೇನೆ. ವೈಟಿ ಅಂತೇನೋ ಶುರು ಮಾಡಿದ್ದೆನಲಾ?| ಅದು ನಮ್ಮ ಮನೆಯ ತುಂಬಾ ಪ್ರೀತಿಯ ಗೊಂಡೆಬಾಲದ,ದಪ್ಪ ರೋಮದ ಶ್ವೇತ ಮಾರ್ಜಾಲ. ಅಮವಾಸ್ಯೆಯ ದಟ್ಟ ರಾತ್ರಿಯಲ್ಲೂ ಕಣ್ಣಿಗೆ ಗಾಢವಾಗಿ ರಾಚುವ ಬೆಳದಿಂಗಳಿನಂತ ಬೆಕ್ಕು. ಮೊನ್ನೆ ಅದು ಹುಷಾರಿಲ್ಲದೇ ಸತ್ತು ಬಿದ್ದಾಗ ನನ್ನಲ್ಲಿ ಹರಿದದ್ದು ಅದರೊಂದಿಗಿದ್ದ ಅನ್ಯೋನ್ಯತೆಯ ಜೀವಜಲ. ಇಷ್ಟುದಿನ ಅದು ಮನುಷ್ಯರಂತೆ ನನ್ನ ಜೊತೆ ಮಾತಾದಡೇ ಹೋಗಿರಬಹುದು.ಆದರೆ ಆಗಾಗ ಬಾಲ ಬಡಿಯುತ್ತಾ ಮೆತ್ತಗೊಂದು ಹೆಜ್ಜೆ ಹಾಕುತ್ತಾ,ಚಳಿಯಾದರೆ ಹಾಸಿಗೆ ಅಂಚಿಗೆ ಬಂದು, ಅಮ್ಮ ಬೈಯುತ್ತಾಳೋ ಏನೋ? ಅನ್ನೋ ದಿಗಿಲಿನಲ್ಲೇ ಮುಗಿಲಿಗೆ ಕತ್ತು ಹಾಕಿ ಎಚ್ಚರದ ಕನಸು ಕಂಡು ನಿದ್ದೆ ಹೊಡುತ್ತಾ,–'ಇಡೀ ಮನೆಗೆ ನಾನೇ ರಾಣಿ' ಅಂತ ಮನೆಯನ್ನೆಲ್ಲಾ ಅಂತಪುರಃ ಮಾಡಿ 'ನೀವೇ ನನ್ನ ಪರಿಚಾರಕರು, ಹಾಲು ಹಾಕಿ' ಅಂತ ಅಮ್ಮನನ್ನು ದುರುಗುಟ್ಟಿ ನೋಡುತ್ತಾ.. ಈ ಬೆಕ್ಕು ನಮ್ಮ ಜೊತೆ ಮನುಷ್ಯನಿಗಿಂತಲೂ ಜಾಸ್ತಿ ಮಾತಾಡಿಬಿಟ್ಟಿದೆ ಅನ್ನಿಸುತ್ತಿದೆ. ಅದು ಹೆಣ್ಣು ಬೆಕ್ಕಾದ್ದರಿಂದ ಅಮ್ಮನನ್ನು ಜಾಸ್ತಿ ಹಚ್ಚಿಕೊಳ್ಳುತ್ತಿತ್ತೋ? ಅಥವಾ ಅಮ್ಮ ಅದರ ಬೇಕು ಬೇಡಗಳನ್ನು, ತಿಂಡಿತೀರ್ಥದ ಅಹವಾಲುಗಳನ್ನೆಲ್ಲಾ

ಪೂರೈಸುತ್ತಿದ್ದುದರಿಂದಲೋ? ಅಂತೂ ಅಮ್ಮನೆಂದರೆ ಅದಕ್ಕೆ ಮಹಾಪ್ರಾಣ. ಅವಳ ಕಾಲಿಗೆ ನೂರೆಂಟು ಪ್ರದಕ್ಷಿಣೆ ಬಿದ್ದರೂ ಈ ಬೆಕ್ಕಮ್ಮಳಿಗೆ ದಣಿವಾಗುತ್ತಿರಲಿಲ್ಲ. ಅಮ್ಮ ಹಾಕಿದನ್ನೇ ಸುಗ್ರಾಸ ಭೋಜನ ಅಂತ ನಂಬುತ್ತಾ, ಅವಳ ಮುಖವನ್ನು ನೋಡಿ ಅದೇನನ್ನೋ ಮಾತಾಡಿಕೊಳ್ಳುತ್ತಾ,ಆ ಬೆಕ್ಕು ಆರಾಮಾಗಿ ತಿಂದು ಕೊಂಡು ದಿನ ದೂಡುತ್ತಿತ್ತು. ರಾತ್ರಿ ಹಸಿವಾದರೆ ಮಲಗಿದ್ದ ಅಮ್ಮನನ್ನು ಹುಡುಕಿ, ಅವಳ ಕಿವಿಹತ್ತಿರ ಹೋಗಿ ಮಿಯಾವ್ ಅನ್ನೋ ಅಲಾರಾಂ. ಮರಿ ಹಾಕುವ ಮೊದಲು, 'ಮರಿ ಇಡಲು ಜಾಗ ತೋರಿಸು' ಅಂತ ಅಮ್ಮನ ಕಾಲಿಗೆ ಬೆಕ್ಕಿನ ಪ್ರದಕ್ಷಿಣ ಪದೇ ಪದೇ..ಅದರೊಳಗಿದ್ದ ಹೆಣ್ಣಿನ ಮುಗ್ದತೆ, ಚಡಪಡಿಕೆ, ಪ್ರೀತಿ ಆಗಲೇ ಅರಿವಿಗೆ ಬರುತ್ತಿತ್ತು. ಮನೆಯ ತೋಟದಲ್ಲಿ ಅದೆಷ್ಟೋ ಬೆಕ್ಕುಗಳು ಸಮ್ಮೇಳನ ಮಾಡುತ್ತಿದ್ದರೂ ನಮ್ಮ ಈ ಬಿಳಿ ಬೆಕ್ಕಮ್ಮ ಮಾತ್ರ 'ನಾನೇ ಮಾಹಾರಾಣಿ'..ಅಂತ ಕುರುಬುತ್ತಾ ಸಾಗುತ್ತಿದ್ದರೆ ಇತರ ಬೆಕ್ಕುಗಳೆಲ್ಲಾ ಪುಕುಪುಕು. ಗುಂಪಿನಲ್ಲಿ ಗೋವಿಂದನಾಗಲು, ಅಥವಾ ಇತರ ಬೆಕ್ಕುಗಳ ಜೊತೆ ಮೀನಿನ ಡೀಲ್ ಮಾಡಿಕೊಳ್ಳಲು ವೈಟಿ ಸುತರಾಂ ಒಪ್ಪುತ್ತಿರಲ್ಲಿಲ್ಲ. ಆದರೆ ಅದೆಷ್ಟು ಮಕ್ಕಳೂ ಬಂದು 'ಹೋ ವೈಟಿ' ಅಂತ ಪ್ರೀತಿಯಿಂದ ಮುದ್ದಾಡಲಿ..ಎತ್ತಿಕೊಂಡು 'ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೆ' ಅಂತ ಎಲ್ಲಿ ಬೇಕಾದರೂ ಹೋಗಲಿ..ವೈಟಿ ಚೂರೂ ಗುರ್ ಮಾಡಿದ್ದಾಗಲೀ, ಪರಚಿ ಗಾಯ ಮಾಡಿದ್ದಾಗಲಿ, ಸಿಡುಕಿದ್ದಾಗಲಿ ಇಲ್ಲ. ಮಕ್ಕಳೆಂದರೆ ತೀರಾ ಪ್ರೀತಿಯಿತ್ತು ಆ ಬೆಕ್ಕಿಗೆ. ಅಮ್ಮ ದೇವರ ಸ್ತೋತ್ರ ಅದು ಇದು ಅಂತೆಲ್ಲಾ ಶುರು ಮಾಡಿದರೆ ವೈಟಿ ಎಲ್ಲೇ ಇದ್ದರೂ ತುಸು ಹೊತ್ತು ದೇವರ ಕೋಣೆಯಲ್ಲೇ ಧ್ಯಾನಸ್ಥನಾಗಿ ಹಾಗೇ ಕಣ್ಣು ಮುಚ್ಚಿ, ಸ್ತೋತ್ರ ಕೇಳುತ್ತಾ ಇದ್ದುದು ಮೊದಮೊದಲು ನಂಗೆ ಏನೂ ಅನ್ನಿಸಿರಲಿಲ್ಲ. ಆದರೆ ಪ್ರತೀ ನಿತ್ಯ ಅದು ಇದೇ ಪದ್ದತಿ ಅನುಸರಿಸಿ ಯಾವುದೋ ದಿವ್ಯಾನುಭೂತಿಗೆ ಹಂಬಲಿಸಿದಂತೆ ಸ್ತೋತ್ರಕ್ಕೆ ಕುಳಿತುಕೊಳ್ಳುತ್ತಿದ್ದುದು ಸೋಜಿಗ ಅನ್ನಿಸುತ್ತಿತ್ತು. ಪ್ರಾರ್ಥನೆ, ದೇವರು, ಸ್ತೋತ್ರ, ಇವೆಲ್ಲವನ್ನೂ ಈ ಬೆಕ್ಕು ಅನುಭವಿಸುತ್ತದಾ? ಆ ದ್ಯಾನಸ್ಥದಲ್ಲಿ ಇದು ಏನನ್ನಾದರೂ ಕಂಡುಕೊಳ್ಳುತ್ತದಾ? ಎನ್ನುವ ಪ್ರಶ್ನೆ ನನ್ನಲ್ಲಿ ತುಂಬಾ ಸಲ ಕಾಡಿದೆ.

ಈಗ ನನ್ನ ಕೈಯಲ್ಲಿ ಮೀನಿದೆ, ಇನ್ನೊಂದು ತಟ್ಟೆಯಲ್ಲಿ ಕೆನೆ ಹಾಲಿದೆ.. ಆದರೆ ಬೆಕ್ಕಿಗೆ ವಿಸಲ್ ಹಾಕಿ ಕರೆಯಲು ಬಾಯಿ ಮುಂದೆ ಬರುತ್ತಿಲ್ಲ. ಅದರ ಕೇಕೆ, ಮನೆಯ ವಾತಾವರಣವನ್ನೂ ದೂರದಿಂದಲೇ ಗ್ರಹಿಸಿ ಆ ಮೇಲೆಯೇ ಮನೆಯತ್ತ ಚಿತ್ತೈಸುತ್ತಿದ್ದ ಪರಿ ನೆನಪಾಗುತ್ತದೆ. ಅಮವಾಸ್ಯೆ ಬೆಳಕಿನಲ್ಲಿ ಬೆಳದಿಂಗಳ ತುಣುಕಿನಂತೆ ಬಿದ್ದು ಆ ಬೆಕ್ಕು ಕೂರುತ್ತಿದ್ದ ಜಾಗ ಈಗ ಬರೀ ಕತ್ತಲು. ಬಿಳಿ ಗೋಣಿ ಚೀಲ ಕಂಡರೂ ಅದು ನಮ್ಮ ಬೆಕ್ಕೇನೋ ಅನ್ನಿಸೋ ಆ ಕ್ಷಣದ ಭ್ರಮೆ. ಹಾಂ!. ಸಾಯುವ ಮೊದಲು ವೈಟಿ ಐದು ಮರಿಗಳನ್ನು ಬಿಟ್ಟೇ ಹೋಯಿತು. ಮರಿಗಳು ಚೂರೂ

ಆರೈಕೆಯಿಲ್ಲದೇ ಅಮ್ಮನಿಗಾಗಿ ಕನವರಿಸುತ್ತಿದ್ದವು. ಆದರೆ ವೈಟಿಯ ಆರೋಗ್ಯವೂ ತೀರಾ ಹದಗೆಟ್ಟಿದ್ದರಿಂದ ಚಿರನಿದ್ರೆಗೆಜಾರಿತು. ಬೆಕ್ಕಿನ ಮೌನಕ್ಕೆ ಹಾಲಿನ ತಟ್ಟೆ ತನ್ನ ರಾಣಿಯ ಸಾವನ್ನು ನೋಡಿ ಶೂನ್ಯವಾದಂತೆ ಅನ್ನಿಸಿತು. ಸಾವಿರಾರು ಕೇಕೆ, ಸಂಭ್ರಮ ಕನವರಿಕೆ, ದುಗುಡ, ನೆನೆಪು, ಎಲ್ಲವನ್ನೂ ತನ್ನೊಡಲಲ್ಲಿಟ್ಟುಕೊಂಡು, ಬಾಲದ ತುದಿಯಲ್ಲಿ ಕುಣಿಸಿ, ಬೆಕ್ಕು ದೀರ್ಘ ಮಂಪರಿಗೆ ಸರಿಯಿತು. ಆ ಕ್ಷಣ ನೋಡಿದಾಗಲೆಲ್ಲಾ ನಂಗೆ ಕಾಡುತ್ತಿದ್ದುದು ಇಷ್ಟೇ. ವೈಟಿ ಮರಿ ಹಾಕುವ ಮೊದಲು ಊರಲ್ಲಿಲ್ಲದ ಅಮ್ಮನನ್ನು ಅದೆಷ್ಟು ಸಲ ಹುಡುಕಿರಬಹುದು? ಪ್ರಾಣ ಕೈ ಜಾರುವ ಮೊದಲು ತುಂಬಾ ಪ್ರೀತಿಸುತ್ತಿದ್ದ ಅಮ್ಮನ ಚಿತ್ರವನ್ನು ಅದೆಷ್ಟು ಸಲ ನೆನದುಕೊಂಡಿರಬಹುದು? ಅವಳ ಬೈಗುಳ ಸ್ತೋತ್ರ, ಸಹಸ್ರನಾಮ, ಅದಕ್ಕೆ ಆ ಕ್ಷಣ ಎಷ್ಟೆಲ್ಲಾ ಕಾಡಿಸಿರಬಹುದು? ಊರಲಿಲ್ಲದ ಅಮ್ಮ ವೈಟಿ ಅಗಲುವಿಕೆಯನ್ನು ಹೇಗೆ ತಡೆದುಕೊಳ್ಳುತ್ತಾಳೆ? ಅಲ್ಲದೇ ವೈಟಿಯ ಐದೂ ಮರಿಗಳೂ ಸಾಯೋ ಮೊದಲು ತಾಯಿ ಮಡಿಲಿಗೆ ಅದೆಷ್ಟು ಹಾತೊರೆದಿರಬಹುದು? ತಾಯಂದಿರ ದಿನದ ಮರದಿನವೇ ಸಾವಿನಲ್ಲಿ ಒಂದಾದ ತಾಯಿ ಮತ್ತು ಮರಿಬೆಕ್ಕುಗಳು ಮತ್ತೆ ಹುಟ್ಟಿಬರಬಹುದಾ? ಎನ್ನುವ ಆಲೋಚನೆಯಲ್ಲೇ ಆ ಬೆಕ್ಕುಗಳಿಗೆ ಶ್ರದ್ಧಾಂಜಲಿ ಕೋರುತ್ತೇನೆ.

**ಪ್ರಸಾದ್ ಶೆಣೈ ಆರ್.ಕೆ**<br>
ಸಖಿ, ನವೆಂಬರ್ 2014

## ತಮ್ಮನಂತಿದ್ದ 'ರಾಜ' ನನ್ನು ನೆನೆದು...

ದಿನವೆಲ್ಲಾ ಮನಸು ತನಗೆ ತಾನೇ ಸಿಡಿಮಿಡಿಗೊಳ್ಳತೊಡಗಿತ್ತು. ಸಿಡಿಮಿಡಿ ನನಗೆ ಹೊಸತಲ್ಲವಾದರೂ ಜೊತೆಗೆ ದುಗುಡವೂ ಕಲೆತು ವಿಚಿತ್ರ ನೋವಿನಲ್ಲಿ ಅದ್ದಿ ತೆಗೆದಂತೆ ಕಲ್ಲವಿಲಗೊಂಡಿದ್ದೆ. ಕಾರಣವೇ ಇಲ್ಲದೆ ಮನಸು ಹೀಗೆ ದುಗುಡಕ್ಕೆ ಬೀಳುವುದು ಯಾರಿಗಾದರೂ ಭೀತಿ ತರಿಸುವಂತದ್ದೇ. ಯೋಚಿಸಿದೆ. ದುಗುಡದ ಹಾದಿಯಲಿ ಅದ್ಯಾವ ಕಾರಣವೂ ಸಿಗಲಿಲ್ಲ. ಇಡೀ ದಿನ ಹೀಗೆ ಎದೆಯೊಳಗೆ ದುಗುಡದ ತತ್ತಿ ಇಟ್ಟುಕೊಂಡು ಕಚೇರಿಯ ಕೆಲಸ ಮುಗಿಸಿ ಮನೆಗೆ ಹೊರಟಾಗ ರಾತ್ರಿ ಹತ್ತೂವರೆಯಾಗಿತ್ತು. ನೋವಿರುವ  ಹಲ್ಲಿನ ಕಡೆಗೇ ನಾಲಿಗೆ ಹೊರಳುವಂತೆ ಮತ್ತೆ ಮತ್ತೆ ದುಗುಡಕ್ಕೆ ಕಾರಣ ಹುಡುಕಿ ಸುಸ್ತಾದೆ. ಇನ್ನೇನು ಊಟಕ್ಕೆ ಕೂತುಕೊಳ್ಳುವ ಹೊತ್ತಿಗೆ ಫೋನ್ ಬಂತು. ನಂಬಲಾಗುತ್ತಿಲ್ಲ. ಕಿಟಕಿಯಿಂದ ತೂರಿ ಬರುತ್ತಿದ್ದ ಗಾಳಿ ಸಾವಿನ ವಾಸನೆ ಹೊತ್ತು ತಂತು. ಊರೊಳಗೆ ಗೆಳತಿಯ ಹರೆಯದ ಅಪ್ಪ ತೀರಿಕೊಂಡ ಸುದ್ದಿ. ಕಾಗೆ ಕೂಡುವುದಕ್ಕೂ ಟೊಂಗೆ ಮುರಿಯುವುದಕ್ಕೂ ಸರಿಯಾಯ್ತು ಎನ್ನುವುದು ಇದಕ್ಕೇ ಇರಬೇಕು.

ಹುಟ್ಟು ತಂದಷ್ಟು ಖುಷಿಯನ್ನು ಯಾವ ಸಾವು ತರಲಾರದೇನೋ. ನಾನು ನೋವಿನಲ್ಲಿ ತೊಯ್ಯಿಸಿಕೊಂಡಂತೆ ಕುಳಿತೆ. ಏಕಾಏಕಿ, ನಾವು ಮನೆ ಮಂದಿಯಲ್ಲಾ ಪ್ರೀತಿಯಿಂದ ಕರೆಯುತ್ತಿದ್ದ, ಈಗ ನಮ್ಮನ್ನಗಲಿದ 'ರಾಜ' ಎಂಬ ನಾಯಿಯ ನೆನಪು ಬಂದು ಮತ್ತಷ್ಟು ದುಗುಡ ಹೆಚ್ಚಾಯಿತು. ಕಣ್ಣೊಳಗೆ ನೀರು ಸುಳಿದಿರುಗಿತು. ಹಲವು ದಿನಗಳ ಒಡನಾಡಿ ಅವನು. ನಾನು ನನ್ನ ತಮ್ಮನೆಂದೇ ಅವನನ್ನು ಭಾವಿಸಿದ್ದೆ.

* * *

ಹೈಸ್ಕೂಲು ದಿನಗಳವು. ನಮ್ಮೂರಿನ ರೋಣದವರ ಓಣಿಯಲ್ಲಿ ಆಟವಾಡಲು ಹೋಗಿದ್ದಾಗ ಅದ್ಯಾರದೋ ಮನೆಯ ಹೆಣ್ಣಾಯಿಯೊಂದು ಐದಾರು ಮರಿಗಳನ್ನು ಹಾಕಿತ್ತು. ನಾಯಿ ಮರಿಗಳು ಇನ್ನೂ ನೆಟ್ಟಗೆ ಕಣ್ಣು ತೆರೆದಿರಲಿಲ್ಲ. ಹೆಣ್ಣಾಯಿ ಆ ಕಡೆ ಹೊರಳಿದಾಗ ಅದರಲ್ಲಿ ಒಂದು ನಾಯಿ ಮರಿಯನ್ನು ಸಾಕಲೆಂದು ಎತ್ತಿಕೊಂಡು ಮನೆಗೆ ಓಟ ಕಿತ್ತಿದ್ದೆ. ನಾಯಿ ಮರಿ ಮನೆ ಮಂದಿಗೆಲ್ಲ ಇಷ್ಟವಾಯ್ತು. ಬಿಳಿ ಬಣ್ಣದ, ಅಲ್ಲಲ್ಲಿ ಕಂದು ಬಣ್ಣದ ತೇಪೆ ಹಾಕಿದಂತಿದ್ದ ನಾಯಿ ಮರಿ ಮುದ್ದಾಗಿತ್ತು. ಅದು ಕಣ್ಣು ತೆರೆದು, ತಾನೇ ಹಾಲು ಕುಡಿದು ಓಡಾಡುವ ತನಕ ಕೂಸೊಂದನು ಆರೈಕೆ ಮಾಡಿದಂತೆ ಅರೈಕೆ ಮಾಡಿದ್ದೆವು. ಮನೆಯೊಳಗೆ ಏಳೆಂಟು ಆಡುಗಳಿದ್ದವು. ಆಕಳಿತ್ತು. ನಾಯಿಮರಿ ಆಡು, ಆಕಳ ಹಾಲು ಕುಡಿದು ನೋಡ ನೋಡುತ್ತಲೇ ನಮ್ಮದೇ ತಮ್ಮನಂತೆ ಬೆಳೆಯತೊಡಗಿತು. ನಾವು ರಾಜಕುಮಾರನ ಮಕ್ಕಳಲ್ಲದಿದ್ದರೂ ಆ ನಾಯಿ ಮರಿಗೆ 'ರಾಜ' ಎಂದು ಪ್ರೀತಿಯಿಂದ ಕರೆಯತೊಡಗಿದೆವು. ರಾಜ ನಮಗೆ ತೊಡರುಗಾಲು

ಒಡಿದು ಆಟವಾಡುವುದೇನೂ, ನಮ್ಮ ಬೆರಳುಗಳನ್ನು ಗಾಯಗೊಳಿಸದಂತೆ ಹುಸಿ ಮುನಿಸಿನಿಂದ ಕಚ್ಚುವುದೇನೂ, ನಾವು ಮಲಗಿದರೆ ತಾನೂ ನಮ್ಮ ಮಗ್ಗುಲವೇ ಮಲಗಿ ನಿದ್ದೆ ಮಾಡುವುದೇನೂ, ಮನೆಗೆ ಚಿಕ್ಕಮಕ್ಕಳು ಬಂದರೆ ಅವರನ್ನು ಕಾಡಿಸಿ ಅವರೊಂದಿಗೆ ಆಟವಾಡುವುದೇನೂ, ಆಡಿನ ಮರಿಗಳೊಂದಿಗೆ ಅತ್ಯುತ್ಸಾಹದಿಂದ ಆಡುವುದೇನೂ.. ಒಂದೇ ಎರಡೇ ಅವನ ಬಾಲಲೀಲೆಗಳು. ಮಗ ಮನೆ ಮಂದಿಯ, ಓಣಿ ಮಂದಿಯ ಮನಸೆಲ್ಲಾ ಗೆದ್ದು ಬಿಟ್ಟ.

ಓಣಿಯ ಅದ್ಯಾವುದೋ ಮೂಲೆಯಲ್ಲಿರಲಿ ರಾಜ ಅಂತ ಕೂಗಿದರೆ ಸಾಕು, ಬಾಲ ಅಲ್ಲಾಡಿಸುತ್ತ ಬಂದು ಬಿಡುತ್ತಿದ್ದ. ಆಡು ಮೇಯಿಸಲು ಹೊರಟಾಗ ನಮಗೆ ಜೊತೆಯಾಗಿ ಆಡು ಕಾಯೋದು ತನ್ನದೂ ಕರ್ತವ್ಯವೆಂಬಂತೆ ಬಂದು ಬಿಡುತ್ತಿದ್ದ. ನಿಮಗೆ ಹೇಳಬೇಕು, ಆಡು ಕಾಯಲು ಹೋದಾಗ ಬುತ್ತಿಯನ್ನು ಮರದ ಕೆಳಗೆ ಇಟ್ಟು ನಾನು ಆ ಕಡೆ ಆಡುಗಳು ಹೊಲದ ಬೆಳೆ ಮೇಯದಂತೆ ಕಾಯತೊಡಗಿದಾಗ ಬುತ್ತಿಗೆ ಕಾಗೆಗಳು ಬಾಯಿ ಹಾಕುತ್ತಿದ್ದವು. ಈ ರಾಜ ಅಷ್ಟು ದೂರವಿದ್ದವನು ಆ ಕಾಗೆ ಬುತ್ತಿಗೆ ಬಾಯಿ ಹಾಕೋದರೊಳಗೆ ಆಕ್ರೋಶದಿಂದ ಒದರುತ್ತಾ ಶರವೇಗದಲ್ಲಿ ಬಂದು ಬಿಡೋಣು. ಒಂದಿನವೂ ತಾನು ಬುತ್ತಿ ಮುಟ್ಟಲಿಲ್ಲ. ಒಮ್ಮೊಮ್ಮೆ ಬುತ್ತಿ ಹಿಡಿದುಕೊಳ್ಳುವುದು ಬ್ಯಾಸರಾಗಿ ರಾಜನ ಕೊರಳಿಗೆ ಆ ಬುತ್ತಿ ಹಾಕಿ ಬಿಡುತ್ತಿದ್ದೆ. ಬುತ್ತಿ ಹೊತ್ತುಕೊಳ್ಳುವುದು ತನ್ನ ಕರ್ತವ್ಯವೆಂಬಂತೆ ಅದರೊಳಗಿನ ಒಂದು ರೊಟ್ಟಿಯನ್ನೂ ಮುಟ್ಟದೆ ಹೊತ್ತು ತಿರುಗುತ್ತಿದ್ದ. ಹೆಮ್ಮೆ ಎನಿಸುತ್ತಿತ್ತು. ಊಟಕ್ಕೆ ಕುಳಿತಾಗ ನಾವು ರೊಟ್ಟಿ ಹಾಕಿದಾಗಲೇ ತಾನೂ ತಿಂತಿದ್ದ. ಮನೆಯೊಳಗೂ ಹಾಗೇ. ಪಾತ್ರೆಯೊಳಗಿನ ಹಾಲು ಅವನ ಬಳಿ ಇದ್ದರೂ ಒಂದಿನವೂ ಬಾಯಿ ಹಾಕಲಿಲ್ಲ. ಅವನಿಗೆ ಕೂಳು ಹಾಕಲೆಂದೇ ಒಂದು ತಾಟು ಮೀಸಲಿಡಲಾಗಿತ್ತು. ಅದರೊಳಗೆ ಹಾಕಿದಾಗಲೇ ಹಾಲು ಕುಡಿಯುತ್ತಿದ್ದ.

ಆಡುಗಳನ್ನು ಮಾರಿದ ನಂತರ ಮನೆಯೊಳಗೆ ಆಕಳೊಂದೇ ಉಳಿಯಿತು. ಅವ್ವ ಆಕಳು ಮೇಯಿಸುತ್ತಿದ್ದಳು. ಆಕೆಯೊಂದಿಗೆ ಈಗ ರಾಜ ಆಕಳು ಮೇಯಿಸಲು ಹೋಗುತ್ತಿದ್ದ. ಮೋಜನಿಸುತ್ತಿದೆ. ನಗೆ ಚಾಟಿಗೆಂದು ಬದುವಿನಲ್ಲಿ ಮೇಯುತ್ತಿದ್ದ ಆಕಳ ಹಗ್ಗ ರಾಜನ ಬಾಯಿಯೊಳಗೆ ಇಟ್ಟರೆ, ಆ ಹಗ್ಗ ಹಲ್ಲಿನಿಂದ ಕಚ್ಚಿಕೊಂಡು ಆಕಳು ಮೇಯಿಸುತ್ತಿತ್ತು. ಆಕಳು ಹೊಲದ ಬೆಳೆಗೆ ಬಾಯಿ ಹಾಕಿದರೆ ಹಗ್ಗ ಜಗ್ಗಿ ನಮ್ಮನ್ನು ಬೆರಗುಗೊಳಿಸುತ್ತಿದ್ದ.

ಸಣ್ಣಕ್ಕೆ ಇದ್ದವನು ಹುಲಿಯ ಹಾಗೆ ಬೆಳೆದಿದ್ದ. ಹೀಗಿದ್ದರೂ ಇವನ ಜೊತೆ ನಮ್ಮ ಮನೆಯ ಕೋಳಿಗಳು ಆಟವಾಡುತ್ತಿದ್ದವು. ಇವನು ನೆಲಕ್ಕೆ ಕಾಲು ಜಪ್ಪಿಸಿಕೊಂಡು ಕುಳಿತು ಕೋಳಿ ಹಿಡಿದಂತೆ ಮಾಡುತ್ತಿದ್ದ, ಕೋಳಿಗಳೂ ಓಡದೇ ಓಡಿದಂತೆ ಮಾಡುತ್ತಿದ್ದವು. ಅಕಸ್ಮಾತ್ ಕೋಳಿ ಇವನ ಬಾಯಿಗೆ ಸಿಕ್ಕರೆ ಅದ್ಯಾವತ್ತೂ ಗಾಯಗೊಳಿಸಲಿಲ್ಲ. ಇವನ ಹಕೀಕತ್ತು ಕೋಳಿಗಳಿಗೂ ಗೊತ್ತಿತ್ತು. ಅವು ಮತ್ತೆ

ಇವನನ್ನು ಕಾಡುತ್ತಿದ್ದವು. ನಮ್ಮ ರಾಜ ಗಾಂಧಿಯನ್ನು ಓದಿಕೊಂಡವನಲ್ಲ. ನೋಡಿದವನಲ್ಲ. ಆದರೆ, ಅಹಿಂಸಾ ತತ್ವವನ್ನು ಮಾತ್ರ ಪಾಲಿಸುತ್ತಿರುವವನ ಹಾಗಿದ್ದ. ಮನೆಯ ಹತ್ತಿರ ಅಪರಿಚಿತರು ಯಾರಾದರೂ ಬಂದರೆ ದೊಡ್ಡ ದನಿ ಮಾಡಿ ಅವರ ಕೊರಳೆತ್ತರ ಹಾರಿ, ಇಲ್ಲವೇ ಅವರ ಕೈಯೋ, ಕಾಲಿಗೋ ಬಾಯಿ ಹಾಕಿ ಗಾಯಗೊಳಿಸದೇ ಅವರೊಳಗೆ ಭಯ ಮೂಡಿಸುತ್ತಿದ್ದ. ಯಾವತ್ತೂ ಒಬ್ಬನನ್ನೂ ಕಚ್ಚಲಿಲ್ಲ. ಆದರೆ, ತನಗೆ ಜನ ಹೆದರುವಂತೆ ವರ್ತಿಸುತ್ತಿದ್ದ. ಓಣಿ ಮಂದಿ, ಮಕ್ಕಳ ಜೊತೆಗೂ ಇವನದು ಸಲುಗೆ ಇತ್ತು. ಅಪರಿಚಿತರು ಮಾತ್ರ ಈ ಕಡೆ ಸುಳಿಯಲು ಹಿಂದೇಟು ಹಾಕುತ್ತಿದ್ದರು.

ಹೀಗಿದ್ದ ನಮ್ಮ ರಾಜ ಒಂದಿನ ಕಾಲೇಜು ಮುಗಿಸಿಕೊಂಡು ನಾನು ಮನೆಗೆ ಬರುವ ಹೊತ್ತಿಗೆ ರಸ್ತೆಯಲ್ಲಿ ಬಸ್ಸಿನ ಗಾಲಿಗೆ ಸಿಲುಕಿ ಶವವಾಗಿದ್ದ. ದಿಕ್ಕೇ ತೋಚದಂತಾಗಿತ್ತು. ಮನೆಯವರೆಲ್ಲಾ ದುಃಖದಲ್ಲಿ ಮುಳುಗಿದ್ದರು. ಓಣಿ ಮಂದಿ, ಮಕ್ಕಳು ಪೇಚಾಡಿ ಅವನಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಬಡತನ, ನೋವು, ಖುಷಿಯ ಘಳಿಗೆಗಳಲ್ಲಿ ನಮ್ಮೊಂದಿಗಿದ್ದ ನಮ್ಮ ರಾಜ ಈಗಿರಬೇಕಿತ್ತು. ನನ್ನ ಬೈಕು, ಹೊಸ ಪ್ಯಾಂಟು ನೋಡಿ ಖುಷಿ ಪಡುತ್ತಿದ್ದ.

**ಟಿ.ಎಸ್.ಗೊರವರ**

ವಿಜಯ ಕರ್ನಾಟಕ 26.10.2014

# ಮರೆವು ಎಂಬ ಮಂತ್ರದಂಡ

"ಡಾಕ್ಟರೇ, ನನಗ್ಯಾಕೋ ಮರೆವು ಬಹಳಾ ಬಹಳಾ ಆಗ್ತಿದೆ. ಈಗ ಕಂಡಿದ್ದು, ಕೇಳಿದ್ದು ಈ ಕ್ಷಣವೇ ಮರೆತೋಗಿರ್ತದೆ! ಏನಾದರೂ ಒಳ್ಳೇ ಔಸ್ದಿ ಕೊಡ್ರೀ.."

"ಅದುಕ್ಕೆ ಒಳ್ಳೇ ಚಿಕಿತ್ಸೇನೇ ಮಾಡ್ತೀನಿ; ಮೊದಲು ನನ್ನ ಫೀಜು ಕೊಟ್ಬಿಡ್ರೀ.."

–ಇದೊಂದು ಹಳೇ ಜೋಕು. ಕೆಟ್ಟ ಜೋಕು ಅಂತಾದ್ರೂ ಕರೀರಿ; ಆದರೆ, ಆಂತರ್ಯದ ಸಂದೇಶ ಮಾತ್ರ ನಿರ್ಲಕ್ಷಿಸಲಾಗದ್ದು.

ಮರೆವು ಸಾಮಾನ್ಯ ಸಂಗತಿ. ಮನುಷ್ಯನ ಬದುಕಿನೊಂದಿಗಿನ ಅದರ ಸಂಬಂಧ, ಮಹತ್ವ ಅಸಾಧಾರಣ. ಮನುಷ್ಯನಲ್ಲಿ ಕಾಮ,ಕ್ರೋಧಾದಿ ಗುಣಗಳಿವೆ ಎಂದೂ, ಅವು ಮಾನವನ ಆರು ಭಯಂಕರ ವೈರಿಗಳೆಂದೂ, ಅವುಗಳಿಗೆ ಈಡಾದವನು ಸರ್ವನಾಶವೆಂದೂ ನಮ್ಮ ಪೂರ್ವಿಕರು ಎಚ್ಚರಿಕೆ ನೀಡಿದ್ದಾರೆ. ಆದರೆ, ಆ ಮೇಧಾವಿಗಳಾರೂ 'ಮರೆವು'ಎಂಬ ಇನ್ನೊಂದು ರೋಗವೂ ಇದೆ; ಅದಕ್ಕೆ ಪಕ್ಕಾದವರಿಗೆ, ಧನ ಹಾನಿ, ಮಾನ ಹಾನಿ, ಪ್ರಾಣ ಹಾನಿಯಂತಹ ಕಷ್ಟ ಕೋಟಲೆಗಳನ್ನೇ ತಂದೊಡ್ಡುತ್ತದೆ– ಎಂಬ ಬಗ್ಗೆ ಅದೇಕೋ ಚಕಾರ ಎತ್ತಿದಂತಿಲ್ಲ. ಅವರೂ ಆ ಸೋಂಕಿಗೆ ಪಕ್ಕಾಗಿ, ಅದನ್ನು ಮರೆತುಬಿಟ್ಟಿರಬಹುದು! ಮನುಷ್ಯನಲ್ಲಿ ಉಪಕಾರಿಯಾಗಿರುವ ದಯೆ, ದಾಕ್ಷಿಣ್ಯಾದಿ ಗುಣ, ಶಕ್ತಿಗಳ ಹಾಗೆ, ಮರೆವು ಎಂಬ ಇನ್ನೊಂದು ಮಹಾಶಕ್ತಿಯೂ ಇದೆ; ಜಗತ್ತಿನಲ್ಲಿ ಹೊಂದಾಣಿಕೆ, ಸಹ ಬಾಳ್ವೆಗಳಿಗೆ ದಿವ್ಯ ಶಕ್ತಿಯಾಗಿರುವುದೇ ಅದು.. ಎಂದೂ ಅವರು ಹೇಳಬೇಕಾಗಿತ್ತು. ಬಹುಶ:, ನಮ್ಮಂತಹ ಚಿಂತಕರ ಚಿಂತನೆಗೆಂದು ಉಳಿಸಿರಬಹುದು.

ಮರೆವನ್ನು ಯಾರು ಎಷ್ಟೇ ಮರೆತರೂ, ಮರೆವು ಮಾತ್ರ ಯಾರನ್ನೂ ಬಿಟ್ಟಿಲ್ಲ. ಅದರದು ಸರ್ವ ಸಮಾನ ದೃಷ್ಟಿ: ಲಕ್ಷ್ಮಿಯ ಹಾಗೆ; ಕೆಲವರಲ್ಲಿ ಹೆಚ್ಚಿರಬಹುದು, ಕೆಲವರಿಗೆ ಕಡಿಮೆ ಪ್ರಾಪ್ತಿಯಾಗಿರಬಹುದು. ಎಲ್ಲಾ, ಅವರವರು ಪಡೆದುಕೊಂಡು ಬಂದದ್ದು ಎಂದು ವೇದಾಂತ ಹಾಡಿದರೂ ತಪ್ಪಾಗದು. ಬೇಕಿದ್ದರೆ, ಯಾರಾದರೂ ಈ ಬಗ್ಗೆ ಸಂಶೋಧನೆಯನ್ನೇ ಮಾಡಬಹುದು: ಬಡವರಲ್ಲಿ, ಶ್ರೀಮಂತರಲ್ಲಿ, ಹಾಗೆಯೇ, ಅಕ್ಷರಸ್ಥರು, ಅನಕ್ಷರಸ್ಥರಲ್ಲಿ ಮರೆವಿನ ತಾರತಮ್ಯ ಇದೆಯೇ? ಇದ್ದಲ್ಲಿ ಅದರ ಪ್ರಮಾಣ ಏನು? ತಾರತಮ್ಯಕ್ಕೆ ಕಾರಣವೇನು? ಅವರವರಿಗೆ ಆಗಿರುವ ಲಾಭ–ನಷ್ಟ ಏನು? ಮರೆವೆಂಬುದು ಮನುಷ್ಯನಿಗೆ ವರವೋ, ಲಾಭವೋ..ಇತ್ಯಾದಿ.

ಅಕ್ಷರ, ಚಿತ್ತಾರಗಳು ಹುಟ್ಟಿಕೊಂಡಿದ್ದೇ ಮರೆವಿನ ವಿರುದ್ಧದ ಅಸ್ತ್ರವಾಗಿ. ಕವಿ, ಕಲಾವಿದರು ತಮ್ಮ ನೆನಪು, ಭಾವನೆಗಳನ್ನು ಸಾಹಿತ್ಯ, ಚಿತ್ತಾರಾದಿಗಳ ಮೂಲಕ ಅಭಿವ್ಯಕ್ತಿಸುತ್ತಾ ಬಂದಿದ್ದಾರಷ್ಟೆ. ಪ್ರೀತಿ, ಪರಾಕ್ರಮ, ಕ್ರೋಧಾದಿಗಳನ್ನು ಕೇಂದ್ರವಾಗಿರಿಸಿ ಕೃತಿ ರಚಿಸಿರುವುದೂ ಸರಿಯಷ್ಟೆ? ಆದರೆ, ಮರೆವನ್ನೇ ಪ್ರಧಾನವಾಗಿರಿಸಿಕೊಂಡವರು ಎಷ್ಟು ಜನರಿದ್ದಾರೆ? ಆದರೂ, ಮರೆವನ್ನು ಪೂರ್ಣವಾಗಿ ತಮ್ಮ ಕಲಾಕೃತಿಯಿಂದ

ಹೊರಗಿಡುವುದು ಮಹಾಕವಿಗಳಿಗೆ ಸಾಧ್ಯವಾದಂತಿಲ್ಲ! ಕೆಲವೊಂದು ರಸಘಟ್ಟಗಳ ನಿರ್ಮಾಣಕ್ಕೆ, ನಾಟಕೀಯ ಆಯಾಮಗಳಿಗೆ ಮರೆವು ಅತ್ಯುತ್ತಮ ಅಸ್ತ್ರವಾಗಿದೆ! ಒಂದು ಪ್ರಚೋದಕ ಶಕ್ತಿಯಾಗಿ ಅದನ್ನು ದುಡಿಸಿಕೊಂಡಿದ್ದಾರೆ. ಕರ್ಣ, ಶಾಕುಂತಲೆಯಂತಹವರ ಕಥಾನಕಗಳು ಇಲ್ಲಿ ಥಟ್ಟನೆ ನೆನಪಾಗುತ್ತವೆ. ಓದುಗರ ಅನುಕಂಪದ ಆ ಸಂದರ್ಭಗಳನ್ನು ಸಹೃದಯರು ಮರೆವುದಾದರೂ ಹೇಗೆ?ಇಲ್ಲೆಲ್ಲಾ ಮರೆವು ಶಾಪವಾಗಿ ಅವರನ್ನು ಕಾಡಿಸಿದೆ. ಕೆಲವರಿಗೆ ಇದೇ ಮರೆವು ವರವಾಗಿ ಕಾಪಾಡಿದ್ದೂ ಇರಬಹುದು; ನನಗೀಗ ಮರೆತಿದೆ.

ಮರೆವಿನಿಂದಾಗುವ ತಮಾಷೆ ಪ್ರಸಂಗಗಳಂತೂ ಸರ್ವಜನಜನಿತವಾದುವು. ಸಾಮಾನ್ಯರ ಬದುಕಿನಲ್ಲಂತೂ ಅವು ಉಂಟುಮಾಡುವ ಉಪದ್ವ್ಯಾಪಗಳಿಗೆ ಲೆಕ್ಕವಿರಲಾರದು. ಮಹಾ ಬುದ್ಧಿವಂತರೆನಿಸಿಕೊಂಡ ಲೇಖಕರನ್ನೂ ಅದು ಬಿಟ್ಟಿದ್ದಲ್ಲ. ಏನೋ ಹೊಳೆಯಿತು, ನೆನಪಿಗೆ ಬಂತೆಂಬ ಸ್ಫೂರ್ತಿಯಲ್ಲಿ ಉತ್ಸುಕತೆಯಿಂದ, ದಡ ಬಡಾಂತ ಹಾಳೆ, ಪೆನ್ನು ಹುಡುಕಿ, ಸರಸರಾಂತ ಬರೆಯಲು ಕೂತು, ಹಾಳೆ ಮೇಲೆ ಪೆನ್ನು ಊರುತ್ತಿದ್ದಂತೆಯೇ, ಏನು ಬರೆಯಬೇಕೆಂಬುದೇ ಕರೆಂಟಿನ ಹಾಗೆ ಕೈ ಕೊಟ್ಟು ಮಾಯವಾಗುವುದು, ತಿಪ್ಪರಲಾಗ ಹೊಡೆದರೂ ನೆನಪೇ ಆಗದೆ ಆಟವಾಡಿಸುವುದು ಬರಹಗಾರರ ಬದುಕಿನ ದುರಂತ ಅಂದರೂ ಸರಿಯೇ!.

ಕೊಟ್ಟ ಪೆನ್ನನ್ನು ಮರೆತು ಅಥವಾ ಮರೆತಂತೆ, ಜೇಬಿನಲ್ಲಿಟ್ಟುಕೊಂಡು ಹೋಗುವುದೋ, ಕೊಟ್ಟ ಗಿರಾಕಿಯೇ ಮರೆತು ಇನ್ನೆಲ್ಲಿಯೋ ಪರದಾಡುವುದೋ, ಇನ್ನೊಬ್ಬರನ್ನು ಬೈದುಕೊಳ್ಳುವುದೋ ಮನುಷ್ಯ ಜೀವಿಗಳ ಸಾಧಾರಣ ನಡವಳಿಕೆ. ಪೆನ್ನು ಕಳೆಯಲೇಬಾರದೆಂದು ಭೀಷ್ಮ ಪ್ರತಿಜ್ಞೆ ಮಾಡಿಕೊಂಡವರು, ಇನ್ನಾರಾದರೂ ಪೆನ್ನು ಕೇಳಿದಾಗ, ಜತನದಿಂದ ಕ್ಯಾಪನ್ನು ತೆಗೆದಿಟ್ಟುಕೊಂಡೇ, ಬರೆವ ಪೆನ್ನನ್ನಷ್ಟೇ ಕೊಟ್ಟು, ಅದೇ ಖುಷಿಯಲ್ಲಿ, ಬರೀ ಕ್ಯಾಪು ಹಿಡಿದೇ ಮನೇ ಕಡೆ ಹೋದದ್ದೂ ಹೆಚ್ಚಿನವರ ಅನುಭವಕ್ಕೆ ಬಂದಿದ್ದರೆ, ಅದೂ ಸಹಜವಾದುದೇ.

ಮರೆವಿನ ಅಸಾಮಾನ್ಯ 'ಪ್ರತಿಭಾವಂತ'ರನ್ನ ಮರೆಗುಳಿಗಳೆಂದೋ, ಪ್ರೊಫೆಸರ್ ಹುಚ್ಚೂರಾಯರೆಂದೋ 'ಹೊಗಳು'ವುದು ಹೊಸದೇನೂ ಅಲ್ಲ. ಇಂಥಾವರ ಪ್ರಸಂಗಗಳನ್ನು ಕೇವಲ ವಿನೋದಕ್ಕಾಗಿ, ಗೇಲಿಗಾಗಿ, ಅಷ್ಟೇ ಅಲ್ಲ, ಮರೆವಿನ ವಿರುದ್ಧ ಇತರರನ್ನು ಜಾಗೃತಗೊಳಿಸುವುದಕ್ಕಾಗಿ ನಿದರ್ಶನ, ಸಾಮತಿಗಳಾಗಿ ಬಳಸಿಕೊಳ್ಳಲಾಗುತ್ತಿದೆ. ದೊಡ್ಡವರು ಹೇಳುತ್ತಿದ್ದ ಗಾದೆ, ವಿನೋದ ಪ್ರಸಂಗಗಳು ಚಿಕ್ಕಂದಿನಲ್ಲಿ ನಮ್ಮ ಲೋಕ ಜ್ಞಾನವನ್ನು ಜಾಗೃತಗೊಳಿಸುವ ಪ್ರಯತ್ನ ಮಾಡುತ್ತಿದ್ದವು. ನನ್ನ ಅಮ್ಮ ಸಾಂದರ್ಭಿಕವಾಗಿ ಹೇಳುತ್ತಿದ್ದ 'ಮಗಾ ಕಂಕುಳಾಗೇ ಇಕ್ಕಂಡು, ಊರೆಲ್ಲಾ ಹುಡುಕಿದಳಂತೆ' ಅನ್ನೋ ಗಾದೆ ನನ್ನ ನೆನಪಿನಲ್ಲಿ ಈಗ ತಾನೇ ಹೇಳಿದಂತಿದೆ. ಒಬ್ಬ ಗರತಿ ದೈನಂದಿನ ಬದುಕಿನ ಅಲ್ಲಂಡೆಗಳಲ್ಲಿ ಎಷ್ಟರ ಮಟ್ಟಿಗೆ ಲೀನವಾಗಿದ್ದಳೆಂದರೆ,

ಮಗುವನ್ನು ಕಂಕುಳಲ್ಲಿ ಎತ್ತಿಕೊಂಡೇ, ನನ್ನ ಮಗು ಕಾಣೆಯಾಗಿದೆಯೆಂದು ಊರೆಲ್ಲಾ ಹುಡುಕಿದಳಂತೆ!

ಕೆಲವು ಮಹನೀಯರು ತಮ್ಮ ಹವ್ಯಾಸಗಳಿಂದಾಗಿ, ವ್ಯಸನಗಳಿಂದಾಗಿ ಹೇಗೆ ಕೌಟುಂಬಿಕ ಸಂಗತಿಗಳನ್ನೂ ಮರೆತು ಬಿಡುತ್ತಾರೆ–ಎಂಬುದಕ್ಕೂ ನನ್ನ ಅಮ್ಮ ಸಾಮತಿಯೊಂದನ್ನು ಉದಾಹರಿಸುತ್ತಿದ್ದರು: ಹಳ್ಳೀಹೈದನೊಬ್ಬನಿಗೆ ಕಡಲೇಕಾಯಿ ಎಂದರೆ, ಕಟ್ಟಕ್ಕರೆ. ಹೊಸ ಹೆಂಡತಿಯನ್ನು ಕರೆದುಕೊಂಡು ಹೊರಟಿದ್ದವನು, ಹಾದಿ ಪಕ್ಕ ಕಡಲೇಕಾಯಿಕಂಡು, ಹೊತ್ತುಗೊತ್ತಿನ ಪರಿವೇಇಲ್ಲದೆ, ಅತ್ಯಾಸೆಯಿಂದ ತಿನ್ನುತ್ತಾಕೂತನಂತೆ. ಗಂಡ ಬಂದಾನು..ಎಂದು ಮುಂದೆ, ಮುಂದೆ ನಡೆದ ಹೆಂಡತಿ, ದಾರಿತಪ್ಪಿ ಎತ್ತಲೋ ಹೋದಳಂತೆ; ಊರವರು ಹುಡುಕಿ ಬಂದಾಗ, ನನ್ನ ಜತೆ ಯಾವಾಗ ಬಂದಳು..? ಅಂತ ಅವರನ್ನೇ ದಬಾಯಿಸಿದನಂತೆ!

ಮರೆವು– ಎಂಬುದು ವಿದ್ಯಾರ್ಥಿಗಳ ಪರಮ ಶತ್ರು. ಸಾಧಕರನ್ನು ಕಠಿಣ ತಪಸ್ಸುಗಳಿಂದ ವಿಮುಖರನ್ನಾಗಿಸಲು ದುಷ್ಟ ಶಕ್ತಿಗಳು ಬಂದು ಕಾಡುತ್ತವೆ– ಎಂಬ ನಂಬಿಕೆ ಜೈನ ಕಥಾನಕಗಳಲ್ಲಿದೆ. ಅವುಗಳನ್ನು ಪರೀಷಹಗಳೆಂದು ಕರೆಯಲಾಗುತ್ತದೆ. ಅವೊಂದು ರೀತಿ ಸೈತಾನ ಶಕ್ತಿ. ತಿಂಗಳಾನುಗಟ್ಟಳೆ ಕಣ್ಣಿಗೆ ಎಣ್ಣೆ ಹುಯ್ದುಕೊಂಡು, ಉರು ಹೊಡೆದಿದ್ದ ಉತ್ತರಗಳು ಪರೀಕ್ಷೆಯಲ್ಲಿ ತಟಕ್ಕನೆ ಮರೆತುಹೋಗುವಂತೆ ಮಾಡುವುದು ಸೈತಾನನ ಕೆಲಸವಲ್ಲದೆ, ಮತ್ತಾರದಾದೀತು! ಎಲ್ಲರೂ ಉನ್ನತ ಅಂಕ ಪಡೆದರೆ, ಆಯ್ಕೆದಾರರಿಗೆ ಕಷ್ಟವಾಗುತ್ತೆ ಎಂಬ ಮುನ್ನೆಚ್ಚರಿಕೆಯಿಂದಾಗಿ ನಿಸರ್ಗವೇ ಈ ಮರೆವು ಎಂಬ ಸೈತಾನನನ್ನು ಸೃಷ್ಟಿಸಿ, ಈ ಕೆಲಸಕ್ಕೆ ನಿಯಾಮಿಸಿರಬಹುದೇನೊ..! ಒಂದಂತೂ ನಿಜ: ಮನ್ಮಥನ ಹಾಗೇ ಮರೆವೂ ಅನಂಗ; ಎಲ್ಲರಲ್ಲೂ ಅಂತರ್ಗತ; ಎಲ್ಲರೂ ಪೀಡಿತ.

ಈ ಮರೆವು ಅನ್ನೋದು ಮನುಷ್ಯನಿಗೆ ಏಕೆ ಬಂತು?ಯಾವಾಗಿನಿಂದ ಬಂತು?–ಎಂಬುದನ್ನು ವೈದ್ಯ ವಿಜ್ಞಾನಿಗಳು ಹೇಗೆ ವಿವರಿಸುತ್ತಾರೋ, ಗೊತ್ತಿಲ್ಲ. ಆದರೆ, ಹಳ್ಳಿಯ ಅನಕ್ಷರಸ್ಥೆ, ತನ್ನದೇ ಲೋಕಜ್ಞಾನತಜ್ಞೆ ನನ್ನ ಅಮ್ಮ ಮಾತ್ರ ಚಿಕ್ಕಂದಿನ ನನ್ನ ಬಾಲ ಪ್ರಶ್ನೆಗೆ ಸುಲಭವಾಗಿಯೇ ಉತ್ತರಿಸಿದ್ದಳು: ಈ ಭೂಮಿ ಹುಟ್ಟಿದಾಗ ಇಬ್ಬರು ಅಣ್ಣ, ತಂಗಿಯರಿದ್ದರು. ತಂಗಿ ಅಕಸ್ಮಾತ್ ಸತ್ತು ಹೋದಾಗ, ಅಣ್ಣ ತಡೀಲಾರದೇ, ಆ ಹೆಣಾನೇ ಹೊತ್ತುಕೊಂಡು, ಗೋಳಾಡುತ್ತಾ ತಿರುಗುತ್ತಿದ್ದನಂತೆ.ಅದನ್ನು ಕಂಡ ಶಿವಪರಮಾತ್ಮ, ಹೀಗೇ ಆದರೆ, ಇವನು ಈ ಲೋಕದ ಕೆಲಸ ಮರೆತು ಬಿಡುತ್ತಾನೆ, ಅದನ್ನು ತಪ್ಪಿಸಬೇಕಂತ ಅವತ್ತಿನಿಂದ ಹಗಲು–ರಾತ್ರಿ ಆಗೋ ಹಾಗೆ ಮಾಡಿದನಂತೆ. ರಾತ್ರಿ ಕಳೆದು ಹಗಲು ಉರುಳುತ್ತಿದ್ದಂತೆಯೇ ಮನುಷ್ಯನಿಗೆ ಹಿಂದಿನದು ಮರೆಯುತ್ತಾ ಬಂದಿತಂತೆ. ಹೀಗೆ, ಮರೆವೆಂಬುದು ಮನುಷ್ಯನ ಆಪ್ತಮಿತ್ರನಾಗಿ, ಕಾಲಶಕ್ತಿಯಾಗಿ ಉಳಿದಿದೆ.

ಹಾಗಾದರೆ, ಮರೆವೆಂಬುದು ಎಲ್ಲೀವರೆಗೂ ನಮ್ಮಲ್ಲಿ ಉಳಿಯುತ್ತೆ?–ಎಂಬ ಪ್ರಶ್ನೆಯೂ ನನ್ನನ್ನು ಕಾಡಿದ್ದುಂಟು. ನನ್ನ ಓದು, ಚಿಂತನೆಗಳಲ್ಲಿ ಗ್ರಹಿಸಿದ್ದೆಂದರೆ, ನಮ್ಮ ಮೆದುಳಿನ ಸಾಮರ್ಥ್ಯ ಚೆನ್ನಾಗಿರುವವರೆಗೂ ಮರೆವು ನಮ್ಮ ಹಿಡಿತದಲ್ಲಿರುತ್ತದೆ. ಅಂದರೆ, ನಮಗೆ ಬೇಕಾದುದು ತಕ್ಷಣ ನೆನಪಾಗಲು ಮರೆವು ಅಡ್ಡಿಮಾಡಲಾರದು. ಯಾವುದೇ ವಸ್ತು–ವಿಷಯವನ್ನು ನಿಯಮಿತವಾಗಿ ನಾವು ಬಳಸದಿದ್ದರೆ ಅದು ಸ್ಮೃತಿಕೋಶದ ಪಾತಾಳಕ್ಕಿಳಿಯುತ್ತದೆ. ನಾವು ಯಾವುದೇ ಸಂಗತಿಯನ್ನು ಗುರುತಿಸುವುದು, ಆ ಮೂಲಕ ನೆನಪು ಮಾಡಿಕೊಳ್ಳುವುದು ಹೋಲಿಕೆ ಮಾಡಿಕೊಳ್ಳುವ ಮೂಲಕ. ಮ್ಯಾಚ್ ಆದರೆ ಮಾತ್ರ, ಮಿದುಳು ಅದನ್ನು ಗುರುತಿಸುತ್ತದೆ; ನೆನಪು ಮಾಡಿಕೊಡುತ್ತದೆ. ಹಾಗೆ ಆಗದ್ದು ಮರೆತು ಹೋಗಿದೆ (ಡಿಲೀಟ್) – ಎಂದೇ ಅರ್ಥ.

ಜನ್ಮಾಂತರದ ನೆನಪುಗಳು ಸುಪ್ತ ಪ್ರಜ್ಞೆಯಲ್ಲಿರುತ್ತವೆ– ಎನ್ನುತ್ತಾರೆ. ಏನೇ ಇದ್ದರೂ, ಗರ್ಭಸ್ಥ ಶಿಶುವಿನಲ್ಲಿ ಆ ನೆನಪುಗಳು ಇರುತ್ತವೆ ಎಂದು ಭಾವಿಸಿದರೂ, ಮಗೂಗೆ ಈ ಲೋಕದ ವಾಸನೆ ತಟ್ಟಿದ ತಕ್ಷಣ ಅದು ಹಿಂದಿನ ಎಲ್ಲವನ್ನೂ ಮರೆತುಕೊಳ್ಳುತ್ತದೆ–ಎಂದೇ ನಾನು ಭಾವಿಸಿದ್ದೇನೆ. ಇಲ್ಲವಾದರೆ, ಹಳೆಯ ಜನ್ಮಗಳ ಭಾರದಲ್ಲಿ–ಅದುಇದ್ದರೆ– ಈ ಜನ್ಮದಲ್ಲಿ ಆತ ಸುಲಭವಾಗಿ ಏಗಲಾರ.

ಈ ಮರೆವೆಂಬ ಶತ್ರುವನ್ನು ಸದೆಬಡಿಯಲು ಮನುಷ್ಯ ಜೀವಗಳು ಅವಿರತ ಪ್ರಯತ್ನ ಮಾಡುತ್ತಿರುವುದೂ ನಿಜವೇ. ತಲೆಮಾರಿನಿಂದ ನಡೆಸಿದ ಅಂತಹ ಪ್ರಯೋಗ, ಪ್ರಯತ್ನಗಳಿಂದ ಕೆಲವರಿಗೆ ದಿವ್ಯಜ್ಞಾನ ಪ್ರಾಪ್ತವಾದಂತಿದೆ. ಕೆಲವರಂತೂ ದಿವ್ಯಾಸ್ತ್ರಗಳನ್ನು ಶೋಧಿಸಿಕೊಂಡಿರುವು ದಾಗಿಯೂ ಆಗಾಗ ಜಗಜ್ಜಾಹೀರು ಮಾಡಿಕೊಳ್ಳುತ್ತಿರುತ್ತಾರೆ. ಮಕ್ಕಳ ಮರೆವನ್ನು ಒದ್ದೋಡಿಸಿ, ಅಧಿಕ ಅಂಕ ಪಡೆವಂತೆ ಮಾಡುವ ಔಷಧಿ, ಟಾನಿಕ್ಕುಗಳ ಬಗ್ಗೆ ತಿಳಿದುಕೊಳ್ಳದ ತಂದೆ,ತಾಯಿಗಳು ನಗರ ಪ್ರದೇಶಗಳಲ್ಲಿ ಯಾರಿದ್ದಾರು!

ಅಷ್ಟೆಲ್ಲಾ ಕಾಸು ಖರ್ಚು ಮಾಡಲಾರದ ಅನಕ್ಷರಸ್ಥರು ತಮ್ಮದೇ ಸುಲಭೋಪಾಯ ಕಂಡುಕೊಂಡಿರುವುದುಂಟು. ಪ್ರಮುಖ ಸಂಗತಿ ಮರೆಯದಿರಲೆಂದು ಮುಂಜಾಗ್ರತೆಯಿಂದ ಬಟ್ಟೆ ಸೆರಗಿನಲ್ಲಿ ಗಂಟು ಹಾಕಿಕೊಳ್ಳುವುದು ಅಂತಹ ಜನಪ್ರಿಯ ತಂತ್ರಗಳಲ್ಲಿ ಒಂದಾಗಿದೆ. ಪರಿಚಿತ ವೈದ್ಯರೊಬ್ಬರಲ್ಲಿ ನನ್ನ ಮರೆವಿನ ಸಂಕಷ್ಟಗಳಿಗೆ ಒಳ್ಳೇ ಸ್ಟ್ಯಾಂಡರ್ಡ್ ಪರಿಹಾರೋಪಾಯ ಕೇಳಿದ್ದಕ್ಕೆ ಒಂದು ಸಂಸ್ಕೃತ ಶ್ಲೋಕವನ್ನು ಮೂರು ಬಾರಿ ಹೇಳಿಕೊಳ್ಳಿ ಎಂದು ಸೂಚಿಸಿದ್ದರು. ಆ ಶ್ಲೋಕವೇ ಮನೆಗೆ ಬರುವುದರ ಒಳಗಾಗಿ ಮರೆತೇಹೋಯಿತು!

ಇಂಥಾ ಮಂತ್ರಗಳನ್ನು ಮುಕ್ಕಾಗದಂತೆ ಮಸ್ತಕದಲ್ಲಿ ಇರಿಸಿಕೊಳ್ಳುವುದಕ್ಕೆ, ಅರ್ಥಾತ್, ವಶ ಮಾಡಿಕೊಳ್ಳುವುದಕ್ಕಾಗಿಯೂ ಕೆಲವು ತಂತ್ರಗಳಿವೆ ಎನ್ನುತ್ತಾರೆ. ಮಂತ್ರವಾದಿ ಗಳಾಗುವವರು ಗ್ರಹಣದರಾತ್ರಿ ನಿರ್ಜನ ಪ್ರದೇಶದ ಕೆರೆ/ಬಾವಿ ನೀರಿನಲ್ಲಿ ನಿರ್ವಾಣದಲ್ಲಿ ಮೂಗು ಮಟ್ಟ ಮುಳುಗಿ ನಿಂತು ಸಂಬಂಧಿಸಿದ ಮಂತ್ರವನ್ನು ಅದೆಷ್ಟೋ ಬಾರಿ ಪಠಿಸಬೇಕಂತೆ (ಇದು ಎಲ್ಲರಿಗೂ ಸಾಧ್ಯವಿಲ್ಲವಾದ್ದರಿಂದಲೇ, ಎಲ್ಲರೂ ಮಂತ್ರವಾದಿಗಳಾಗಿಲ್ಲ. ಒಳ್ಳೆಯದೇ ಆಯಿತು,ಬಿಡಿ).

ಮರೆವು–ಒಂದು ಸೋಂಕು ಇದ್ದಂತೆ; ಒಂದು ಪಿಡುಗು ಎಂಬ ಅಭಿಪ್ರಾಯ ಹೆಚ್ಚಿನವರಲ್ಲಿದ್ದರೆ, ತಪ್ಪೇನೂ ಅಲ್ಲ. ಎಷ್ಟೋ ಜನಕ್ಕೆ ಅದೊಂದು ವರ ಪ್ರಸಾದವಿದ್ದಂತೆ ಎಂಬ ಮಾತೂ ಉಂಟು. ಕಾಡುವ ಕೇಡು ನೆನಪುಗಳಿಂದ ಕಾಪಾಡಿಕೊಳ್ಳುವುದಕ್ಕಾಗಿಯೇ ಕೆಲವರು ಮರೆವಿನ ರಕ್ಷಾಕವಚವನ್ನು ಅವಲಂಬಿಸುತ್ತಾರೆ. ಹಳೆಯ ನೆನಪುಗಳಿಂದ ಘಾಸಿಗೊಂಡ ಮನಸುಗಳನ್ನು ಸಾಂತ್ವನಗೊಳಿಸುವ ಕಾರಣಕ್ಕಾಗಿಯೇ ವೈದ್ಯರು ಕೆಲವೊಂದು ಮರೆವಿನ ಔಷಧಿಕೊಡುತ್ತಾರೆ. ಬಂಧು ಮಿತ್ರರಿಂದ ವಂಚನೆಗಳಿಗೋ, ಆಘಾತಗಳಿಗೋ ಗುರಿಯಾಗಿ, ತತ್ತರಿಸುತ್ತಿರುವವರನ್ನು, 'ಹಳೆಯದನ್ನೆಲ್ಲಾ ಮರೆತು ಹೊಸ ಮನುಷ್ಯ ಆಗಿ ಬಾಳು..' ಎಂದು ಸಾಂತ್ವನ ಮಾಡುವುದೂ ಸಹಜವಾದುದೇ. ಅರಿವ ಅರಿತಿಹೆನೆಂಬುದು ಮರವೆ; ಮರವ ಮರೆತಿಹೆನಂಬುದು ಮರವೆ – ಇದು ಅಲ್ಲಮನ ವ್ಯಾಖ್ಯಾನ. ವ್ಯಾಕರಣ ಏನಕ್ಕೆ? ಕಲಿತು ಮರೆಯೋಕೆ..! –ಇದು ಕುವೆಂಪು ನುಡಿ ನೈಪುಣ್ಯ.

ಮನುಷ್ಯನ ನೆಮ್ಮದಿಯ ಬದುಕಿಗೆ ದುಡ್ಡೂ ಕಾಸೂ ಬೇಕು,ನಿಜ. ಅದಕ್ಕಿಂತ ಮುಖ್ಯವಾಗಿ ಬೇಕಾದುದು ಕೆಟ್ಟದ್ದನ್ನು ನೆನೆಯದ, ಒಳ್ಳೆಯದನ್ನು ಮರೆಯದ ವಿವೇಕ. ಮುತ್ತು ಕೊಡುವವಳು ಬಂದಾಗ, ತುತ್ತು ಕೊಟ್ಟವಳನ್ನು ಮರೆಯಬಾರದು ಎಂಬ ಜನ ಸಾಮಾನ್ಯರ ಲೋಕೋಕ್ತಿ ಎಂತಹವರಿಗೂ ಕಿವಿಮಾತೇ ಆಗಿದೆ. ಜೋಳದ ಪಾಳಿ, ಅರ್ಥಾತ್, ಉಪ್ಪಿನಋಣ ಜೀವಕ್ಕಿಂತಲೂ ಹೆಚ್ಚಿನದು ಎಂಬ ನಂಬಿಕೆಯಲ್ಲಿ ಜೀವತೆತ್ತವರ ಸಾಲಿನಲ್ಲಿ ಕರ್ಣನಂತಹ ಶೂರ ಮೊದಲ ಮಾದರಿಯಾಗಿ ನಿಲ್ಲುತ್ತಾನೆ. ಜಾತಿ ಹೆಸರಲ್ಲಿ ಅವಮಾನಿತನಾಗಿದ್ದಾಗ ಅಂಗರಾಜ್ಯದ ಅಧಿಪತಿಯಾಗಿ ಪಟ್ಟಕಟ್ಟಿದ, ನೆತ್ತಮನಾಡುವಾಗ ಅಕಸ್ಮಾತ್ ನನ್ನ ಕೈ ತಾಕಿ, ಪಟ್ಟದರಸಿ ಭಾನುಮತಿಯ ಕೊರಳ ಮುತ್ತಿನ ಹಾರ ಚೆಲ್ಲಾಪಿಯಾದರೂ, ತಪ್ಪು ತಿಳಿಯದೇ ಮನ್ನಿಸಿದ ಕೌರವನ ವಿಶ್ವಾಸವನ್ನು ಮರೆತು, ಇಂದು ಅಧಿಕಾರದ ಆಸೆಗಾಗಿ ಪಾಂಡವರ ಕಡೆ ಬಂದರೆ, ನಾನು ಕೀಳು ಮನುಷ್ಯನಾಗುವುದಿಲ್ಲವೇ ಎಂಬರ್ಥದ ಮಾತುಗಳನ್ನು ಕರ್ಣನು, ರಾಯಭಾರಿಯಾಗಿ ಬಂದ ಕೃಷ್ಣನಿಗೆ ಹೇಳುತ್ತಾನೆ. ಸತ್ಯ, ಶೌರ್ಯಗಳ ಹಾಗೇ, ಮರೆಯದಿರುವುದೂ ಅಂದಿನ ಮೌಲ್ಯವಾಗಿತ್ತು.

ಕೆಲವರದು 'ಜಾಣಮರೆವು'; ಸಾಲಿಗ ಎದುರಾದಾಗ, ತಕ್ಷಣ, 'ಇದೀಗ ನಿಮ್ಮನ್ನೇ ನೆನಪು ಮಾಡಿಕೊಳ್ಳುತ್ತಿದ್ದೆ; ಇವಾಗಿನಿಂದ ನೂರು ವರ್ಷ ಆಯಸ್ಸು..' ಎಂದೋ, ಯಾರ ಋಣಾ ಒಂದು ಘಳಿಗೇನೂ ಇರಿಸೋನಲ್ಲ; ನಾನೇ ಎಷ್ಟೋ ಕೊಟ್ಟು, ಮರೆತಿದ್ದೇನೆ ಎನ್ನುವವರಿಗೇನೂ ಬರವಿಲ್ಲ. ಚುನಾವಣೆ ಆಶ್ವಾಸನೆಗಳನ್ನು ಮರು ಘಳಿಗೆಯೇ ಮರೆವುದು ರಾಜಕಾರಣಿಗಳ ಚತುರತೆ. ನನ್ನ ಬದುಕಿನಲ್ಲೂ ಮರೆವಿನ ಬಹುರೂಪಗಳು ಆಟ ಆಡಿವೆ. ಕೆಲವು ಹತ್ತಿರದವರೇ ಎದುರಾದಾಗ, ಹೆಸರು ನೆನಪಾಗದೇ ಏನೋ ಮಾತಾಡಿಸಿ, ಜಾರಿಕೊಂಡಿದ್ದೇನೆ. ಆಗ, ಮರೆವೇ ಮರಣ; ನೆನಪೇ ಜನನ..ಅನ್ನಿಸಿದೆ. ಉಪಕಾರ ಮಾಡಿದವರನ್ನು ಸಾಮಾನ್ಯವಾಗಿ

ಮರೆತಿಲ್ಲ. ಚಿಕ್ಕಂದಿನಲ್ಲಿ ಪ್ರೀತಿಯಿಂದ ಕಲಿಸಿದ್ದ, ಬಹಳ ಪರಿಚಯದ ಗುರುಗಳೊಬ್ಬರನ್ನು ನೋಡಹೋಗಿದ್ದೆ. ನನ್ನನ್ನು ನೆನಪಿಸಿಕೊಳ್ಳಲು ಅವರು ಇನ್ನಿಲ್ಲದ ಶ್ರಮಪಡುತ್ತಿದ್ದದ್ದು ನೋಡಿ, ಮರೆವಿನ ಉಪಟಳದ ಅರ್ಥವಾಯಿತು. ನೊಂದು, ಬಂದೆ. ಕಚೇರಿಯಲ್ಲಿದ್ದಾಗ ಒಬ್ಬ ಹೆಸರಾದ ಮಹಿಳಾ ರಾಜಕಾರಣಿ ನನ್ನ ಪರಿಚಯವೇ ಇರದಂತೆ ಅಲ್ಲಿದ್ದರು. ಅವರು ನಿರುದ್ಯೋಗಿಯಾಗಿದ್ದಾಗ, ಉಳಿಕೆ ಅನ್ನ ಸಾರುಗಳನ್ನು ನಮ್ಮಿಂದ ಕೇಳಿ ತಿನ್ನುತ್ತಿದ್ದುದು, ಪಾಪ, ಅವರಿಗೆ ಮರೆತೇಹೋಗಿತ್ತು. ನನಗೆ ಬೇಸರವೇನೂ ಆಗಲಿಲ್ಲ. ಅದಕ್ಕಿಂತಲೂ ಭಿನ್ನವಾದುದು ಈ ಪ್ರಕರಣ: ಸ್ನೇಹಿತರ ಜತೆ ಒಬ್ಬಾತ ಬಂದ. ಅವರು ಪರಿಚಯ ಮಾಡಿಕೊಡುವಾಗ, ತಕ್ಷಣ ನೆನಪು ಮಿಂಚಿ, ಇವರು ಚೆನ್ನಾಗಿ ಗೊತ್ತು–ಎಂದುಬಿಟ್ಟೆ. 'ಅಪರಿಚಿತ'ನೂ ಕೌತುಕದಿಂದ, ಹೇಗೇ..?–ಎಂದ. ನೀವು ಮರೆತರೂ, ನಾನು ಮರೆಯುವುದು ಸಾಧ್ಯವೇ ಇಲ್ಲ; ಒಬ್ಬರೇಇದ್ದಾಗ ಹೇಳ್ತೇನೆ..ಎಂದೆ. ದಶಕಗಳ ಹಿಂದೆ ಅವ ನನ್ನ ಮೇಲೆ ದುರ್ವರ್ತನೆ ಮಾಡಿದ್ದ. ಹಾವು ಹನ್ನೆರಡು ವರ್ಷವಾದರೂ ಹೊಡೆದವನ ಮರೆಯುವುದಿಲ್ಲವಂತೆ! ನನ್ನ ನೆನಪುಗಳು ಮತ್ಸರಕ್ಕಲ್ಲ; ಪಾಠಕ್ಕೆ!

ಹಳೆಯ ಗಾಯಗಳು ಸುಲಭ ಮರೆಯುವುದಿಲ್ಲ. ನೆನಪುಗಳ ಸ್ಮರಣೆ ಮೂಲಕ ನೋವಿಗೆ ಮುಲಾಮು ಹಚ್ಚಿಕೊಳ್ಳುತ್ತಿರುತ್ತದೆ! ಮರೆವನ್ನು ಪರಮ ವೈರಿ ಅನ್ನಿ,ಪರಮ ಮಿತ್ರ ಅನ್ನಿ, ಪರಮೌಷಧ ಅನ್ನಿ; ಆ ಮರೆವನ್ನು ಮಂತ್ರದಂಡ ಮಾಡಿಕೊಳ್ಳುವ ಜಾಣತನ ನಮಗೆ ಬೇಕು.

**ಡಾ. ಟಿ. ಗೋವಿಂದರಾಜು**
ಸಖಿ ನವೆಂಬರ್, 2014

# ಕೆಲಸದ ಮಾತು

ಇಬ್ಬರು ಗಂಡಸರು ಭೆಟ್ಟ್ಯಾದಾಗ ಮಾತು ಹ್ಯಾಂಗ ಸುರು ಮಾಡ್ತಾರಪಾ...." ಮತ್ತೇನ್ರಪಾ... ಹ್ಯಾಂಗ ನಡಧದ ನಿಮ್ಮ ಆಫ್ಹೀಸೂ.... ಕೆಲಸಾ..." ಮತ್ತೊಬ್ಬರು ಹುಶಿ ನಗಿ ನಕ್ಕೋತ.. "ಹ್ಹೆ..ಹ್ಹೆ..ಹ್ಹೆ..! ಅಡ್ಡೀ ಇಲ್ಲರಿ..ನಿಮ್ಮ ಕೆಲಸಾ...ಭಾಳ ಬಿಝಿ ಕಾಣಸ್ತದ..?",ಹೀಂಗ ಒಬ್ಬರು, ಇಬ್ಬರು, ಮೂವರು.. ಬೇಕಾದಷ್ಟು ಗಂಡಸರು, ಅದರಾಗೂ ಸಾಫ್ಟವೇರ್ ಗಂಡಸರು ಯಾವಾಗ ಭೆಟ್ಯಾದಾಗನೂ, ಪಾಪ ಎಷ್ಟರ ಆಫ್ಹೀಸು ಕೆಲಸದ ಬಗ್ಗೆ ಮಾತಾಡ್ತಾರಂದ್ರ, ಅವರಿಗೆ ತಾವು ಯಾರ ಮಗ, ಯಾರ ಅಪ್ಪ ಅಥವಾ ಯಾರ ಗಂಡ ಇದ್ದೀವಿ ಅಂತನ ಮರ್ತಿರ್ತದ. ಮತ್ತ ಯಾರ ಸಲುವಾಗಿ ಈ ಕೆಲಸ ಮಾಡ್ಲಿಖತ್ತಿವಿ ಅನ್ನೊದೂ ಮರತಿರತದ. ಈ ರಿಸೆಷನ್ ಬಿರುಗಾಳಿಗೆ ತತ್ತರಿಸಿರೋ ಈ ಸಾಫ್ಟ್ ಮಂದಿಗೆ ..ಈಗೀಗ ಭೆಟ್ಟಿಯಾದಾಗ, ಯಾರಿಗಿ ಕೆಲಸ ಇಲ್ಲ ಮತ್ತ ಯಾಕ ಇಲ್ಲ ...ಯಾವಾಗಿಂದ ಇಲ್ಲ ಅನ್ನೋದ ಒಂದ ಭಾರಿ ಬಿಶಿ ಚರ್ಚಾದ ವಿಷಯ. ಇರಲಿ ಇಷ್ಟು ಪೀಠಿಕೆ..... ತಡಿ... ತಡಿ.. ತಡಿರಿ..! ಗೃಹಿಣಿಯರನ್ನು ಬಿಟ್ಟರ ಹ್ಯಾಂಗರೀ?

ಕುಲಕರ್ಣಿ ಮಾಮಿ: "ಕೆಲಸ ಆತೆನ್ರೆವಾ.. ವಿಜಯಾಬಾಯಿ?" ಅಂತ ಕೇಳೋದ ತಡ, ವಿಜಯಾಬಾಯರು ಮಾಡೋ ಕೆಲಸ ಅಲ್ಲಿಂದಲ್ಲೇ ಬಿಟ್ಟು "ಕೆಲಸೇನ್ರಿ ವೈನಿ ಮಾಡಿದಷ್ಟು.. ಹಣಮಪ್ಪನ ಬಾಲ... ಕೆಲಸದ ಮನಿ ಸುಡ್ಲಿ , ಚಹ ಮಾಡ್ತೇನಿ ಬರ್ರಿ" ಅಂತ ಆಹ್ವಾನಿಸಿ ಚಹ ಮಾಡುವ ಕೆಲಸ ಕೈಯಾಗ ತೊಗೋತಾರ....ಇರಲಿ , ಇಷ್ಟೆಲ್ಲಾ ಪಿಠಿಕಾ ಪ್ರಕರಣ ಯಾಕ ಬೇಕಾತಂದ್ರ ಕೆಲಸ ಇಲ್ಲದ ಮನುಷಾನ ಇಲ್ಲ ..ನೋಡರಿ ಬೇಕಾದರ! ಪ್ರತಿಯೊಬ್ಬರೂ ತಮ್ಮ ತಮ್ಮ ಲೋಕ ದಾಗ..ಅಂದ್ರ ಕೆಲಸದ ಲೋಕದಾಗ ವ್ಯಸ್ತ ಇರತಾರ. ಆ ಕೆಲಸಕ್ಕೆಲ್ಲಾ ಸಂಬಳ ಇರಲಿಕ್ಕಿಲ್ಲಾ...ಆದರ ಕೆಲಸ ಮಾತ್ರ ಇಲ್ಲದೇ ಇಲ್ಲ. ಈ ಸೃಷ್ಟಿ ನಿಯಮನೇ ಹಂಗದ.. ಪ್ರತಿ ಜೀವಿಯೂ ತಂತಮ್ಮ ಸೇವಾ ಈ ಸಂಸಾರದಾಗ ನಡಿಶೇ ಇರ್ತಾವ. ಪೂರ್ಣ ಕೆಟ್ಟು ನಿಂತ ಗಡಿಯಾರ ಸುದಾ ದಿನಕ್ಕ ಎರಡು ಸರ್ತೇ ಬರೋಬ್ಬರಿ ಟಾಯಿಮ್ ತೋರಸ್ತದ ಅಂದ್ರ ವಿಚಾರ ಮಾಡ್ರಿ..?! ಬ್ರಹ್ಮ, ವಿಷ್ಣು, ಮಹೇಶ್ವರರೂ ತಂತಮ್ಮ ಕೆಲಸ ಅಗದೀ ಬರೋಬ್ಬರಿ ಮಾಡಿಕೋತನ ಇರತಾರ. ನನಗಂತೂ ಈ ಬ್ರಹ್ಮನ ಕೆಲಸನ ಭಾರೀ ಛಾಲೆಂಜಿಂಗ್ ಅಂತ ಅನ್ನಿಸ್ತದ. ಮನಿಷಾರನ್ನ ಅಂವಾ ಸೃಷ್ಟಿ ಮಾಡೋವಾಗ ಎಷ್ಟರ ಅಂವಾ ತನ್ನ ಕ್ರಿಯಾಶೀಲತೆನ ತೋರಸಬೇಕಾಗ್ತದ ನೋಡ್ರಿ...ಒಬ್ಬರ ಹಂಗ ಇನ್ನೊಬ್ಬರು ಇರೋ ಹಂಗ ಇಲ್ಲ ! ಅದ ಮೂಗು, ಅದ ಕಣ್ಣು, ಅದ ಕಿವಿ..ಆದ್ರೂ ಎಲ್ಲಾ ಟೈಪು ಬ್ಯಾರೆ ಬ್ಯಾರೆ. ಅವರವರ ವಿಚಾರ, ಹವ್ಯಾಸ , ಚಟಗಳು, ಮಾತಿನ ಧಾಟಿ...ಕೆಲಸದ ಧಾಟೀ..ಎಲ್ಲಾ ಅಗದೀ ಬ್ಯಾರೆ ಬ್ಯಾರೆ.

ನನ್ನ ಮಾವಶಿ ಒಬ್ಬೇಕಿ ಇದ್ದಾಳ. ರಂಜು ಮಾವಶಿ ಅಂತ ಅಕೀ ಹೆಸರು. ಅಕಿ ಕೆಲಸ ಅಂದ್ರ ಸಿನೆಮಾದಾಗ, ಸ್ಲೋ ಮೋಷನ್ ಅಂತ ತೋರಿಸ್ತಾರಲ್ಲ ಹಂಗ.. ಭಾರಿ ನಿಧಾನ.ಆದರ ಭಾಳ ಅಚ್ಚುಕಟ್ಟು. ನಾನು ಸಣ್ಣಾಕಿದ್ದಾಗ ಎಲ್ಲಾ ರಜಾ ದಿನಗಳೊಳಗೂ ಧಾಳಿ ಇಟ್ಟಿರತಿದ್ವಿ. ನಮ್ಮ ಅಜ್ಜಿ ಕೆಲಸದ ಸ್ವಚ್ಛತಾ, ಅಕಿ ಕೈ ಅಡಗೀ ರುಚಿ ವಿಶೇಷವಾಗಿ ಇಡ್ಲಿ ದ್ವಾಶಿ ನಮ್ಮ ಕುಟುಂಬದಾಗನ ಜಗತ್ಪ್ರಸಿದ್ಧ! ಅಕಿ ಕೆಲಸ ಮಹಾ ಸ್ಪೀಡು! ಅಕಿ ಮುಂಝೇಲ ನಾಲ್ಕಕ್ಕ ಎದ್ದು ಮನಿ ಸುತ್ತಲೂ ಕಸ ಗುಡಿಶಿ, ಥಳಿ ಹೊಡದು, ಬಚ್ಚಲಾ ತಿಕ್ಕಿ, ಅರಿಬಿ ವಗದು, ಸ್ನಾನ ಮಾಡಿ, ಪೂಜಾ ಮಾಡಿ ಅಡಗಿ ಮನಿ ಸ್ವಚ್ಛ ಮಾಡಿ, ಛಾ ಮಾಡಿಟ್ಟು ತಾನೂ ಕುಡದು, ದ್ವಾಶೀ ಹಂಚ ಇಟ್ಟಳಂದ್ರ.....ಫೋಟೋದಾಗಿನ ಬ್ರಹ್ಮಚೈತನ್ಯ ಮಹರಾಜರೂ ಭಡಾ ಭಡ ಹಲ್ಲು ತಿಕ್ಕೊಂಡು ಸ್ನಾನಾ ಮಾಡಿ ಬಂದು ಕೂಡಬೇಕು! ಯಾಕಂದ್ರ ಮೊದಲ ಮೂರು ದ್ವಾಶಿ , ಘಟ್ಯನ್ನ ಚಟ್ನಿ ಮುದ್ದಿ ಮ್ಯಾಲಿಷ್ಟು ತುಪ್ಪ ಅವರಿಗೇ ಫಷ್ಟ್! ಮಹಾರಾಜರ ಮುಂದಿದ್ದೋ ದ್ವಾಶಿ ಮಾತ್ರ ದಪ್ಪಗ ಮೆತ್ತಗ ಆಗಿರತಿದ್ದವು. ಮೈಮ್ಯಾಲೆ ಒಂದು ಪಾತ್ರಿ ಮುಚಗೊಂಡು, ದಾದಾ(ನಮ್ಮ ಅಜ್ಜ) ಪೂಜಿ ಮಾಡಿ ಮುಗಸೋ ತಂಕಾ ಕೂತಿರತಿದ್ದವು. ಈ ನಮ್ಮ ಅಜ್ಜಿಯ ದ್ವಾಶಿಗೆ ಜೀವದ ಗೆಳೆಯಾನ್ಹಾಂಗ ಚಟ್ನಿ ಇರತಿತ್ತು.ಚಟ್ನಿಗೆ ಹಾಕೋ ಎಲ್ಲಾ ಸಾಮಾನೂ ಒಂದು ತಾಟಿನ್ಯಾಗ ಹಾಕಿ...ಅಕಿ ರಂಜು ಮೌಶಿಗೆ ಚಟ್ನಿ ರುಬ್ಬಲಿಕ್ಕೆ ಹೇಳತಿದ್ಲು..ರಂಜೂ ಮಾವಶಿ ಸಾವಕಾಶೆ ಚಟ್ನಿ ಸಾಮಾನೆಲ್ಲಾ ಮುಟ್ಟಿ ನೋಡಿ ..ಇನ್ನೂ ಛಂದಾಗಿ ಅವನ್ನ ಹೊಂದಿಸಿ ಕೊಂಡು, ಛಂದಾಗಿ ಚಟ್ನಿ ರುಬ್ಬಿ....ಎಲಾ ಇವನಾ ಚಟ್ನಿ ರುಬ್ಬೋದ್ರಾಗೇನ್ ಛಂದಾ..ಅಂತ ಕೇಳಬ್ಯಾಡ್ರಿ..! ಚಟ್ನ್ಯಾಗಿನ ಯಾವ ಸಾಮಾನಿಗೂ ಅಂದರ ಪುಠಾಣಿ, ಖೊಬ್ಬರಿ, ಹುಣಿಸೇಹಣ್ಣು, ಉಪ್ಪು, ಮೆಣಶಿನಕಾಯಿಗೆ ನೋವಾಗಲಾರಧಾಂಗ ರುಬ್ಬಿ, ನುಣ್ಣಗ ಮಾಡಿ, ವಳಕಲ್ಲಿನ ಮ್ಯಾಲೆ ಹನಿ ಚಟ್ನಿನೂ ಉಳೀಧಂಗ ಒಂದು ಕಲ್ಲಪರಟಿನ್ಯಾಗ ತಗದು ವಳಕಲ್ಲು ತಿಕ್ಕಿ ತಿಕ್ಕಿ ತೊಳದು ಬರೋ ಹೊತ್ತಿಗೆ ನನಗ ಮತ್ತ ಅರುಣಗ ದ್ವಾಶೀ ಆಶಾ ಹತ್ತಿ ಹೊಟ್ಟಿ ಹಶಿವಿ..ಭಗಾ...ಭಗಾ..ಭಗ್! ಇಷ್ಟೊತ್ತಿಗೆ ಸ್ನಾನಕ್ಕ, ನನ್ನ ಮತ್ತ ಅರುಣನ ಪೈಪೋಟಿ ಸುರು ಆಗಿರತಿತ್ತು. ಇಬ್ಬರೂ ಉಪ್ಪೀಲೆ ಹಲ್ಲು ತಿಕ್ಕೊಂಡ ಶಾಸ್ತ್ರ ಮಾಡಿ ಹನುಮಾನ ಚಡ್ಡೀ ಹಾಕ್ಕೊಂಡು ಸ್ನಾನಕ್ಕ ನಿಂತಿರತಿದ್ದವಿ. ಮಾಯಾ ಮೌಶಿ ಬಂದು ಸ್ನಾನ ಮಾಡೀಶಿ ಅರಿಬಿ ಹಾಕಿದ ಕೂಡ್ಲೆ ಅಡಗೀ ಮನ್ಯಾಗ ತಾಟ್ ಹಾಕ್ಕೊಂಡು ನಾವು ಕೂಡತಿದ್ವಿ. ಚುಯ್ಯ ಅಂತ, ದ್ವಾಶಿ ಹಂಚಿನ ಮ್ಯಾಲೆ ಹುಣ್ಣಿಮೀ ಚಂದ್ರನ್ಹಾಂಗ ಮೂಡತಿತ್ತು. ಮೊದಲ ದ್ವಾಶಿ ಯಾರಿಗೆ?.. ನನಗೋ ?ಅರುಣಗೊ? ಅಜ್ಜಿಯ ನ್ಯಾಯ ಅದು...ಸಮ ಸಮ! ಹುಣ್ಣಿಮಿ ಚಂದ್ರ ಅರ್ಧಾ ಆಗಿ ನಮ್ಮ ತಾಟಿನ್ಯಾಗ ಅಚಾರ್ರ ಹಸ್ತೋದಕದ ಹಾಂಗ ಮ್ಯಾಲಿಂದ ಬೀಳತಿತ್ತು. ಚಟ್ನಿ ಮಾತ್ರ ಬಾಜೂಕ ಹಸರು ಹೊಲದ ಹಾಂಗ ಹರಡತಿತ್ತು. ಕೆಲಸಾ ಮಾಡೋ ಧಾಟಿ ಹೊಗಿ ಅಜ್ಜಿ ದ್ವಾಶಿಗೆ ಬಂತಲ್ಲ ಕಥಿ?

ಹೀಂಗ ನಮ್ಮ ರಂಜೂ ಮಾವಶಿ ಕೆಲಸ ಭಾಳ ಯುನೀಕ್ ಅದ. ಅಕ್ಕಿ ಗೋಧಿ ಹಳಮಾಡೋವಾಗ ಸಿಗೋ ಕಲ್ಲುಗಳನ್ನ, ಭತ್ತದ ಕಾಳು, ಪುಟ್ಟ ಪುಟ್ಟ ಮಣ್ಣಿನ

ಹೆಂಟಿ ಗಳನ್ನ ಅಕಿ ಯಾವತ್ತೂ ಘಾಳ್ಯಾಗ ಬಿಶ್ಯಾಡಿ ಒಗೆಯೂದುಲ್ಲ! ತನ್ನ ಬಾರ್ಝೂಕ ಅವನ್ನ ಮುತ್ತು , ರತ್ನ ವಜ್ರಗಳ ಹಾಂಗ ಚಿಕ್ಕ ಗುಂಪುಗಳಾಗಿ ಮಾಡಿಟ್ಟು ಕೊಂಡು ಆಮೇಲೆ ಆ ಕಲ್ಲುಗಳ ಪುಟ್ಟ ಗುಡ್ಡಗಳನ್ನು ನೋಡಿ, "ಎಷ್ಟು ಸ್ವಚ್ಛ ಆದುವಲಾ ನಮ್ಮ ಮನೀ ಅಕ್ಕಿ...!" ಅಂತ ಅತಿ ಹೆಮ್ಮೆಯಿಂದ ಬೀಗಿ ಅವನ್ನ ಭೂಮಾತೆಗೆ ಅಗದಿ ಒಲ್ಲದ ಮನಸ್ಸಿನಿಂದ ಅರ್ಪಿಸ್ತಾಳ...ಎಲ್ಲಾ ಕೆಲಸ ಇಂಥಾ ಪರಿ ನಿಧಾನ ಮಾಡೋ ನಮ್ಮ ರಂಜು ಮಾವಷಿದು ಒಂದ ಕೆಲಸ ಅಗದೀ ಫಾಸ್ಟ್..! ಅದು ಛಾ ಕುಡಿಯೋದು! ಪಾತ್ರ್ಯಾಗಿಂದ ಚಹಾ ಇಕಿ ಹೊಟ್ಟಿ ಅನ್ನೊ ಕಪ್ಪಿನ್ಯಾಗ ಬೀಳ್ತದೋ ಅನ್ನೋ ವೇಗದಾಗ ಇಕಿ ಛಾ ಹೀರತಾಳ...ಅಪೋಶನ ತೊಗೋತಾಳ ಅಂದ್ರ ಹೆಚ್ಚು ಸರಿ ಅನ್ನಸ್ತದ. ಇದನ್ನೆಲ್ಲಾ ಓದಿ ಅಕೀ ನನಗ ಶಿಟ್ಟಿಲೇ ಹೊಡೀಲಿಕ್ಕೆ ಬರಬಹುದು, ಆದರ ಸ್ಲೋ ಮೋಷನ್ನಿನ್ಯಾಗ ಬರೋದ್ರಿಂದ ಓಡಿಹೋಗಲಿಕ್ಕೆ ಟಾಯಿಮ್ ಶಿಗತದ ಅನ್ನೋ ಧೈರ್ಯಾ ಅದ.

ಕೆಲಸಾ ಅಂದ್ರ ಏನು? ಇದೊಂದು ಧೊಡ್ಡ ಪ್ರಶ್ನಿ..! ಭಾಳ ಮಂದಿ ನನ್ನ ಭೆಟ್ಟಿ ಆದಾಗ ನನ್ನ ಒಂದು ಪ್ರಶ್ನಿ ಕೇಳತಾರ,ನೀವು ಎಲ್ಲೆ ಕೆಲಸಾ ಮಾಡತೀರಿ? ನಾನು ಸರಳಾಗಿ ಉತ್ತರಾ ಹೇಳತೇನಿ "ಮನ್ಯಾಗ!" ಅವರಿಗೆ ಪೂರ್ಣ ತಿಳಿಯೂದುಲ್ಲ. ಮತ್ತ ಕೇಳ್ತಾರ. "ಅಂದ್ರ ಮನಿಯಿಂದ ಕೆಲಸಾ ಮಾಡತೀರಿ?" ನಾನು ಮತ್ತ ಹೇಳ್ತೇನಿ "ಅಲ್ಲಲ್ಲ.. ಮನ್ಯಾಗ ಕೆಲಸಾ ಮಾಡ್ತೇನಿ" ಅವರು.. "ಅಂದ್ರ ಬಿಜಿನೆಸ್ಸ್ ಏನ್ರೀ?" ನಾನು "ಅಲ್ಲ ಬಿಜಿನೆಸ್ಸ್ ಅಲ್ಲಾ ನಾನು ಗೃಹಿಣಿ" ಅವರು "ಓಹ್... ಹೌದ ಮತ್ತ ಕೆಲಸಾ ಅಂದ್ರಲ್ಲಾ?" ಎಲಾ ಇವನ.. ಗೃಹಿಣಿಯರಿಗೇನು ಕೆಲಸ ಇರೂದುಲ್ಲನೂ? ಇಂಥವರಿಗೆಲ್ಲಾ ಕೆಲಸ ಅಂದ್ರ 'ಸಂಬಳ' ತರೋ ಕೆಲಸನ ಕೆಲಸ! ಬ್ಯಾರೇ ಎಲ್ಲಾ ಕೆಲಸನ ಅಲ್ಲಾ!

ಇನ್ನೊಂದು ವ್ಯಾಖ್ಯಾನನೂ ಅದ ಕೆಲಸಾದ್ದು... ನಮ್ಮ ಮನಿಯವರು ಅರ್ಥಾತ್ ಪತಿದೇವರದು. ಒಂದು ದಿನ ಹುಬ್ಬಳ್ಳ್ಯಾಗ ನನ್ನ ಪತಿ ಮತ್ತ ಅವರಪ್ಪ ಅಗದೀ ಮುಂಜ್ಮುಂಝೇಲೆ (ಅಂದ್ರ ಸುಮಾರು 10 ಗಂಟೇ ಆಗಿತ್ತು) ನಡೆಸುತ್ತಿದ್ದ ವಾಕ್ವಾದ ಕಿವಿಗೆ ಬಿದ್ದಿತ್ತು. ಅದನ್ನ ಹೇಳ್ತೇನಿ, ಕೇಳ್ರಿ..

ಅಪ್ಪ : ಇವತ್ತೇನು ಕೆಲಸ?

ಮಗ : ಹೀಂಗ ಇರೋದು...

ಅಪ್ಪ : ಹಂಗಲ್ಲೋ.. ಇವತ್ತ ಏನೇನು ಮಾಡ್ಬೇಕಂತ ಮಾಡಿ?

ಮಗ : ಇದನ್ನ...!

(ಸೋಫಾದ ಮ್ಯಾಲೆ ಶ್ರೀರಂಗನ ಅವಾತಾರದೊಳಗ ಇತ್ತು... ಪತಿ ದೇವರು)

ಅಪ್ಪ : ಅಲ್ಲೋ ನಾ ಕೆಲಸದ ಬಗ್ಗೆ ಮಾತಾಡ್ಲಿಕತ್ತೀನಿ..

ಮಗ : ಇವತ್ತ ನಂದು ಇದ ಕೆಲಸಾ.. ಹೀಂಗ ಏನು ಕೆಲಸಾ ಮಾಡದೆ ಇರೋದ ನನ್ನ ಇವತ್ತಿನ ಕೆಲಸ..

ಅಪ್ಪ : (ನಿರುತ್ತರಾ....)

ನನ್ನ ಮಾವನವರಿಗೆ ಈ ವಾದ ತಿಳಿಯಲೇ ಇಲ್ಲ...ಅವರು ಬಂದು ಗುಟ್ಟಾಗಿ ನನ್ನ ಬಳಿ "ಪಾಪುನ ಪ್ರಕೃತಿ ಬರೊಬ್ಬರಿ ಅದ ಇಲ್ಲೊ?" ಎಂದು ಕೇಳಿ ಡಾಕ್ಟರ ಬಳಿ ಹೋಗುವಂತೆ ಸಲಹೆ ಮಾಡಿದ್ದೂ ಆತು. ಒಟ್ಟ ಅವರವರ ಭಾವಕ್ಕ ತಕ್ಕ ಹಂಗ ಕೆಲಸದ 'ಡೆಫ಼ಿನೀಶಿಯನ್ಸ್' ಬರತಾವ! ನಮ್ಮ ಜೀವನ ಕೆಲಸದ ಸುತ್ತ ಹ್ಯಾಂಗ ಗಿರ ಗಿರ ಅಂತ ತಿರಗತದ ಅಲ್ಲಾ!

ಇದನ್ನ ಹೇಳೋವಾಗ ನನ್ನ ಮನಸ್ಸಿನ್ಯಾಗ ಬರೋ ಇನ್ನೂಂದು ವಿಶೇಷ ಕೆಲಸದ ಧಾಟಿ ಇರೋ ಮನಿಷಾರಂದ್ರ ನಮ್ಮ ಸೋದರಮಾವನವರು...! ಇವರದು ಅತೋನಾತ ಸ್ಪೀಡು. ಇವರ ವತಾವತಿ ಎಷ್ಟಂದ್ರ ಕೆಲಸ ಸುರೊ ಆಗೋಕಿಂತಾ ಮುಂಚೆನ ಮುಗಿದುಬಿಡಬೇಕು! ಅಂದ್ರ ರಾತ್ರಿ ನಿದ್ದಿ ಹತ್ತೋಕಿಂತ ಮುಂಚೇನ ಬೆಳಗಾಗಿ...ಕೋಳಿ ಕೂಗಿ ಇವರು ಎದ್ದುಬಿಡಬೇಕು, ಅಂಥಾ ಅರ್ಜೆಂಟ್ ಮನಿಷಾರು! ಯಾವುದೇ ಕೆಲಸ ಟೆನ್ಷನ್ ಇಲ್ಲದೆ ಆಗ ಬಾರದು. ಹಂಗೇನಾದ್ರೂ ಆದರ, ಆ ಕೆಲಸ ಇವರ ಪ್ರಕಾರ ಬರೊಬ್ಬರಿ ಆಗಿಲ್ಲ ಅಂತನ ಅರ್ಥ.ಇವರ ಗಡಿಬಿಡಿಗೆ ಒಂದು ಪುಟ್ಟ ಪ್ರಸಂಗ ಕೇಳ್ರಿ. ಒಮ್ಮೆ ಇವರು ಹುಬ್ಬಳ್ಳಿಗೆ ರಾಣಿಚೆನ್ನಮ್ಮ ಗಾಡೀನ್ಯಾಗ ಕೂತು ಹೋಗ್ಯಾರ. ಹುಬ್ಬಳ್ಳ್ಯಾಗ ತಮ್ಮ ಮಗಗ ಸ್ಟೇಷನ್ನಿಗೆ ಬಾ ಅಂತ ಅಪ್ಪಣೆ ಕೊಟ್ಟಾರ. ಗಾಡೀ ಅವತ್ತ ಏನಕೇನ ಪ್ರಕಾರೇಣ 5.55 ಕ್ಕ ಹೋಗೋದರ ಬದಲು 5.54 ಕ್ಕ ಒಂದು ಮಿನೀಟಿನಷ್ಟು ಲಗೂ ಹೋಗೇದ. ಒಂದು ಮಿನೀಟು ತಾವು ಸ್ಟೇಷನ್ನಿನ್ಯಾಗ ಕೂತು ಕಾದರ, ಆ ರಾಣಿ ಚೆನ್ನಮ್ಮ ಒಂದು ಮಿನೀಟು ಲಗೂ ಬಂದದ್ದು ವ್ಯರ್ಥ ಆಗಿ ಬಿಡತದಲ್ಲಾ ಅನ್ನೋ ಸಂಕಟಕ್ಕ ಭಡಾ ಭಡಾ ಸ್ಟೇಷನ್ನಿನ ಹೊರಗ ಬಂದು ದೇಶಪಾಂಡೆ ನಗರಕ್ಕ, ತಮ್ಮ ಮನೀಕಡೆ ಹೋಗೋ ಬಸ್ಸು ಹತ್ತಿ ಕೂತಾರ..ಬಸ್ಸು ಹೊಂಟದ...ಬಸ್ಸು ಅರ್ಧ ದಾರಿ ಇದ್ದಾಗ ತಮ್ಮ ಮಗ ಸ್ಟೇಷನ್ ಕಡೆ ಕಾರು ಒಯ್ದದ್ದು ನೋಡ್ಯಾರ. ಅಯ್ಯಯ್ಯೊ..! ನನ್ನ ಸಲುವಾಗಿ ಅಂವಾ ಸ್ಟೇಷನ್ನಿಗೆ ಕಾರಿನ್ಯಾಗ ಬಂದದ್ದು ವ್ಯರ್ಥ ಆಗತದಲ್ಲಾ ಅನ್ನೋ ಸಂಕಟದಾಗ ಆ ಬಸ್ಸು ಅಲ್ಲೇ ನಿಂದರಿಶಿ ಇಳದು, ಒಂದು ಆಟೋ ಹಿಡದು ಸ್ಟೇಷನ್ನ ಕಡೆ ತಿರುಗಿ ಹೊಂಟಾರ...! ಇವರ ಆಟೋ ಸ್ಟೇಷನ್ ಕಡೆ ಹೊಂಟಾಗ ಇವರ ಮಗನ ಕಾರು ಭರ್ರ್ ಅಂತ ಮನಿ ಕಡೆ ಹೋಗೇದ....ಅಕಟಕಟಾ ... ಏನ್ಹೇಳ್ಳೀ.. ಇವರ ಸಂಕಟಾ..! ಮತ್ತ ರಿಕ್ಷಾಕ್ಕ ರೊಕ್ಕಾ ಕೊಡ ಬೇಕಾಗ್ತದಂತ ಹೇಳಿ ಇನ್ನೊಂದು ಬಸ್ಸಿಗೆ ಕಾದು, ಅದನ್ನು ಹತ್ತಿ ಸಿಟ್ಟೀಲೇ ಮಾರೀ ಕೆಂಪಗ ಮಾಡಿಕೋಂಡು ಮನೀಗೆ ಬಂದಾರ. ಇತ್ಲಾ ಕಡೆ ಇವರ ಸ್ವಭಾವ ತಿಳಿದಿದ್ದ ನನ್ನ ಮಾಮಾನ ಮಗ ಇದು ಹಿಂಗ ಏನೋ ಆಗೇದ ಅಂತ ಅರ್ಥಾ ಮಾಡಿಕೊಂಡು, ಮನ್ಯಾಗ ಇವರ ಬೈಗುಳಾ ತಿನಲಿಕ್ಕೆ ಕಾಯಕೋತ ಕೂತಾನ. ಇವರ ಗಡಿಬಿಡಿಯ ಪ್ರಮಾಣ ಎಷ್ಟಂದ್ರ ಹುಬ್ಬಳ್ಳಿಯಿಂದ ಒಂದು ರಿಜಿಸ್ಟರ್ ಪೋಸ್ಟ್ ಮಾಡಿ ಅದನ್ನ ಬೆಂಗಳೂರಿನ್ಯಾಗ ನಾವು ಬರೊಬ್ಬರಿ ತೊಗೊತೀವೊ ಇಲ್ಲೋ ಅಂತ ಹೆದರಿ, ಅವತ್ತ ರಾತ್ರಿ ಗಾಡೀಗೆ

ಹೊಂಟು ಬೆಂಗಳೂರಿಗೆ ಬಂದು ಎರಡು ದಿನಾ ಇದ್ದು ಆ ಪತ್ರಾ ತೊಗೊಂಡು ನಮಗ ಕೆಲಸಾ ಉಳಸತಾರ!

(ವಾಹರೆ ..! ಬ್ರಹ್ಮಾಜಿ ಆಪಕೋ ಅನಂತ ಪ್ರಣಾಮ)

ಇನ್ನ ಕೆಲವೊಬ್ಬರಿರತಾರ 'ಭಯಂಕರ' ಛಂದ ಕೆಲಸ ಮಾಡೋವವರು..ಅವರದ್ದೂ ಒಂದು ಕತೀನ.! ನನ್ನ ಬಳಗದವರು ಒಬ್ಬರಿದ್ದಾರ..ಅಲ್ಲಲ್ಲ!...ಇಬ್ಬರಿದ್ದಾರ ಅಜ್ಜಗ 80 ವರ್ಷ ಅಜ್ಜಿಗೆ 70 ವರ್ಷ. ಇವರ ಮನೀ ಅಂದ್ರ ಪಳಪಳ ಕನ್ನಡಿ. ನನಗ ಈ ಒಂದ ನಾಲಿಗಿ, ಐದ ಬಟ್ಟು ಸಾಕಾಗುದುಲ್ಲಾಪ್ಪಾ ಹೇಳಲಿಕ್ಕೇ, ಬರೀಲಿಕ್ಕೇ..ಎಂಥಾ ಸ್ವಚ್ಛರೀ ಮನಿ ಅನ್ನೋದು! ಅಜ್ಜೀ ಅಡಿಗೀ ಮನೀನ ಅದ ನೋಡ್ರಿ, ಎಲ್ಲಾ ಭಾಂಡೀ ಸಾಮಾನೂ ಲಕಲಕಲಕ! ಫ್ರಿಡ್ಜ್ ತಗದರ ಎಂಥಾ ಛಂದ ಸಾಮಾನು ಕೂತಿರತಾವ ಮುಚ್ಚಳದ ಟೊಪ್ಪಿಗಿ ಹಾಕ್ಕೊಂಡು. ಬೆಡ್ ರೂಮಿನ್ಯಾಗಿನ ಚಾದರಗಳೋ..., ಒಂದೂ ಹೊಲಸಿಲ್ಲ... ಒಂದೂ ಚಿತ್ತಿಲ್ಲ, ಒಂದೂ ಹೊರಗಿರೂದುಲ್ಲ ! ಇನ್ನ ಬಿಳೇ ಧೋತರ ಗಳೂ ಶ್ವೇತ ಹಂಸದ ಗರಿಗಳ ಹಾಂಗ ಒಂದರ ಮ್ಯಾಲೊಂದು ಕೂತಿರತಾವ. ನಮ್ಮ ಕಾಕಾ ಒಬ್ಬಾವ, ಕರೇ ಇದ್ದಲೀ ಬಣ್ಣದವಾ(ಬಿಳೇ ಇದ್ದಲಿ ಇರ್ತಾವೇನು ಹುಚ್ಚಿ!...ಅನಬ್ಯಾಡ್ರಿ) ಆ ಧೊತ್ರಾ ಮುಟ್ಟಲಿಕ್ಕೆ ಅಂಜಿ 'ನಾ ಮುಟ್ಟಿದರ ಆ ಧೋತ್ರದ ಮ್ಯಾಲೆ ತನ್ನ ಬಟ್ಟು ಮೂಡಿದರೇನು ಗತಿ'ಅಂತ ಓಡಿ ಬಂದಿದ್ದ! ಇದು ಅವನ ಹೇಳಿದ್ದು..! ಇನ್ನ ಬಚ್ಚಲ ಮನಿ ಸ್ಟೀಲಿನ ಬಾಯ್ಲರಿನ್ಯಾಗ ನಮ್ಮ ಪ್ರತಿಬಿಂಬ ಎಷ್ಟು ಸ್ಪಷ್ಟ ಮೂಡತದಂದ್ರ ಸ್ನಾನಾ ಮುಗಿಶಿ ಮೇಕಪ್ಪೂ ಮಾಡಿಕೊಂಡ ಹೊರಗ ಬರಬಹುದು.ಬಚ್ಚಲ ಮನಿ ನೆಲಾ ವಣಗಿತ್ತಂದ್ರ ಹಾಶಿಗೋಂಡು ಮಲಕೋಬಹುದು. ಅಂಥಾ ಸ್ವಚ್ಛ! ಅಷ್ಟು ಒಮ್ಮನಸ್ಸಿನಿಂದ ಅವರಿಬ್ಬರೂ ಮನೆಯ ಒಪ್ಪ ಓರಣಕ್ಕಾಗಿ ದುಡಿಯುತ್ತಾರ ಗೊತ್ತಾ? ಅದನ್ನ ನೋಡಿಯೇ ತಿಳಿಯಬೇಕು. ಅಜ್ಜಿಗೆ ಈಗ ಕಳೆದಿಪ್ಪತ್ತು ವರ್ಷಗಳಿಂದ ಕಣ್ಣು ಕಾಣುವುದಿಲ್ಲ...! ಹೃದಯ ತುಂಬಿ ಅವರಿಬ್ಬರೂ ನೂರ್ಕಾಲ ಬಾಳಲೆಂದು ಹಾರೈಸುತ್ತೇನೆ.

ಇನ್ನ ಕೆಲವರು ಮಾಡುವ ಕೆಲಸಗಳನ್ನೆಲ್ಲಾ ಅರ್ಧದೊಳಗ ಕೈಬಿಡ್ತಾರ, ಇನ್ನೊಂದು ಕೆಲಸ ಮಾಡಲಿಕ್ಕೆ! ಒಂದೂ ಕೆಲಸ ಪೂರ್ಣ ಆಗೂದುಲ್ಲ...ಆದರ ಅಷ್ಟೂ ಕೆಲಸ ಸುರು ಆಗಿಬಿಟ್ಟಿರತಾವ...! ನಮ್ಮಮ್ಮ ಅಡಿಗಿ ಮಾಡತಿರತಾಳ, ಅಣ್ಣಾ (ನಮ್ಮಪ್ಪ) ವದರತಾರ..' ನಲಿನೀ.. ಯಾಕ.. ಛಾನ ಮಾಡಿಲ್ಲಲಾ?' ಅಡಿಗೀ ನಡುವ ಛಾ ತಯಾರಿ ಸುರು ಆಗ್ತದ, ಛಾ ಮಾಡುವಾಗ, ಸಕ್ಕರಿ ಕಡಿಮಿ ಇದ್ದದ್ದು ಲಕ್ಷ್ಯಕ್ಕ ಬರತದ. ಅದನ್ನ ಹೇಳಲಿಕ್ಕೆ ನಡುಮನೀಗೆ ಬಂದಾಗ ವಾಶಿಂಗ್ ಮಷಿನ್ನ ಕಾಣಿಸ್ತದ, ಅರಿಬಿ ವಗೀಬೇಕಂತ ಎಕ್ ದಮ್ ನೆನಪಾಗ್ತದ!...ಅರಿಬಿ ವಗೀಲಿಕ್ಕೆ ಹಾಕುವಾಗ , ನಿನ್ನೇ ವಣಹಾಕಿದ ಅರಿಬಿ ತರಬೇಕಂತ ಹೊಳೀತದ! ಆ ಅರಿಬಿ ತೆಗೆಯೂವಾಗ ಒಣ ಹಾಕಿದ ತಂತಿ ಸಡಿಲಾಗಿದ್ದು ಲಕ್ಷ್ಯಕ್ಕ ಬಂದು ಅದನ್ನು ಕಟ್ಟೋವಾಗ ಛಾ ಕ್ಕ ಇಟ್ಟದ್ದು ಭಡಕ್ಕನ ನೆನಪಾಗಿ ಅಡಿಗಿ ಮನಿಗೆ ಓಡೋಡಿ ಬಂದು ಛಾ ಮಾಡಿ

ಕುಡೀಬೇಕಂತ ನಿರ್ಧಾರಮಾಡಿದ್ದರೂ...ನಿಂತ ಅಡಿಗಿ ಮುಂದುವರೀತದ...ಛಾ ಕುಡಿಯೋದು ಉಳದ ಬಿಡ್ತದ! ಹಂಗ ನೋಡಿದ್ರ ಈ ಸೃಷ್ಟಿಕರ್ತ ಬ್ರಹ್ಮನೂ ನಮ್ಮ ಅಮ್ಮಾನ ಜಾತಿನೇ ಇರಬೇಕಂತ ಅನ್ನಿಸ್ತದ. ಅವನ ಸೃಷ್ಟಿಯಾದ ನಾವೆಲ್ಲಾರೂ ಒಂದಲ್ಲಾ ಒಂದು ರೀತಿ ಅಪೂರ್ಣರೇ ..! ಹೌದಲ್ಲೋ?

**ಜಾಹ್ನವಿ ಹಳ್ಳೂರ**
ಮಯೂರ ಸೆಪ್ಟೆಂಬರ್ 2014

# ಎರಡು ದಿನದ ನೆಮ್ಮದಿ ಅರಸಿ...

ಬೆಂಗಳೂರಿನ ಶುಕ್ರವಾರದ ರಾತ್ರಿಗಳು ನನಗಿಷ್ಟ. ಅವಸರದಲ್ಲಿ ಊರಿಗೆ ಹೊರಟವರಿಂದ ನೂರೋ ಇನ್ನೂರೋ ಸುಲಿವ ಖುಷಿಯಲ್ಲಿ ಆಟೋಗಳೆಲ್ಲಾ ಮೆಜೆಸ್ಟಿಕ್ ನ ಕಡೆ ಮುಖ ಮಾಡಿರುತ್ತವೆ. ಬಸ್‌ನ ಸೀಟುಗಳ ತುಂಬಾ ಬ್ಯಾಗುಗಳ ರಾಶಿ. ಆಟೋವನ್ನೋ, ಬಸ್ಸನ್ನೋ ಹತ್ತಿ ಮೆಜೆಸ್ಟಿಕ್‌ನ ಕಡೆ ಹೊರಟವರಿಗೆ ಸಮಯಕ್ಕೆ ಸರಿಯಾಗಿ ಹೋಗಿ ತಲುಪುತ್ತೇವೋ ಇಲ್ಲವೋ ಅನ್ನೋ ಧಾವಂತ. ಬಸ್ಸು ಹೊರಟುಬಿಟ್ಟರೆ ಅನ್ನೋ ಚಿಂತೆ. ಬಸ್ ಸ್ಟ್ಯಾಂಡ್, ಆನಂದರಾವ್ ಸರ್ಕಲ್, ಕಪಾಲಿ ಎಲ್ಲಿ ಹೋದರೂ ಧರ್ಮಸ್ಥಳ, ಶಿವಮೊಗ್ಗ, ಗೋಕರ್ಣ, ಹುಬ್ಬಳಿ, ಮಂಗಳೂರು ಎಲ್ಲಿ ಸಾರ್, ಹೇಳಿ ಸಾರ್ ಅಂತ ಕೇಳಿಕೊಂಡು ಹಿಂದೆ ಬರೋ ಜನ. ಎಲ್ಲರಿಂದಲೂ ತಪ್ಪಿಸಿಕೊಂಡು ರಾಜಹಂಸವೋ, ಐರಾವತವೋ ಮತ್ಯಾವುದೋ ಪ್ರೈವೇಟ್ ಬಸ್‌ನ ಹತ್ತಿ ಕುಳಿತರೆ ವಾರ ಪೂರ್ತಿ ಮಾಡಿದ ಜೀತದಿಂದ ಬಿಡುವು. ದಿನ ನಿತ್ಯದ ಟ್ರಾಫಿಕ್ ಜಂಜಾಟ, ಕರ್ಕಶ ಹಾರನ್ಗಳ ಶಬ್ದದಿಂದ ಬಿಡುವು. ಐದು ದಿನದ ಕೆಲಸದಲ್ಲೇ ಹಿಂಡಿ ಹಿಪ್ಪೆ ಮಾಡಿ ಹೈರಾಣು ಮಾಡಿಸಿದ ಬೆಂಗಳೂರಿನಿಂದ ಬಿಡುವು. ಕಣ್ಣಾಡಿಸಿದಲ್ಲೆಲ್ಲಾ ಜನರಿದ್ದರೂ ಆವರಿಸಿಕೊಳ್ಳುವ ಒಂಟಿತನದಿಂದ ಬಿಡುವು.

ಬೆಂಗಳೂರಿನಲ್ಲೇ ಹುಟ್ಟಿ, ಇಲ್ಲೇ ಓದಿ, ಇಲ್ಲೇ ಅಥವಾ ಇನ್ನೆಲ್ಲೋ ಇಂತಹದೇ ಮತ್ತೊಂದು ನಗರದಲ್ಲಿ ಕೆಲಸ ಮಾಡಿ ತಮ್ಮ ಜೀವನವೆಲ್ಲಾ ನಗರಗಳಲ್ಲೇ ಕಳೆಯುವವರನ್ನ ನೋಡಿದರೆ ನಿಜಕ್ಕೂ ಅನುಕಂಪ ಹುಟ್ಟುತ್ತದೆ. ಸುಮಾರು ಪ್ರತಿ ವಾರ ಊರಿಗೆ ಹೋಗ್ತೀಯಲ್ಲಾ, ಅಲ್ಲೇನು ಅಂತದ್ದು ಇಟ್ಟಿದೀಯ ಅಂತ ಸುಮಾರ್ ಸುಮಾರು ಜನ ಕೇಳಿರ್ತಾರೆ. ವಿವರಿಸಬಲ್ಲೆವಾ! ಗೊತ್ತಿಲ್ಲ.... ಸುಮ್ಮನೆ ನಕ್ಕಿರುತ್ತೇವೆ. ಮಳೆಗಾಲದಲ್ಲಿ ಒಂದೇ ಸಮನೆ ದಿನಗಟ್ಟಲೆ ಸುರಿಯುವ ಜಡಿ ಮಳೆಯ ಸದ್ದು, ಸಂಜೆಯ ಹೊತ್ತಿಗೆ ಊರ ಕೆರೆಯ ಮೇಲೆ ಹಾದು ಹೋಗುವಾಗಿನ ತಣ್ಣನೆಯ ಗಾಳಿ, ಕೇಶವನ ಅಂಗಡಿಯ ಮಸಾಲೆ ಮಂಡಕ್ಕಿಯ ಜೊತೆ ಕಂಚಿಕಾಯಿ ಸೋಡಾದ ರುಚಿ, ಮುಂಚೆ ತುಂಬಾ ಸ್ಟ್ರಿಕ್ಟ್ ಆಗಿದ್ದ ಹೈಸ್ಕೂಲ್ ನ ಹೆಡ್ಮಾಸ್ಟರ್ ರಸ್ತೆಯಲ್ಲೆಲ್ಲೊ ಅಚಾನಕ್ಕಾಗಿ ಸಿಕ್ಕು ಸಲುಗೆಯಿಂದ ಪ್ರೀತಿಯಿಂದ ಮಾತಾಡಿಸುವ ರೀತಿ, ಊರಲ್ಲಿರುವ ಟಾಕೀಸ್ ನಲ್ಲಿ ಯಾವುದೊ ಒಂದು ಸಿನೆಮಾ ನೋಡಿ, ಗೆಳೆಯರೊಡನೆ ಕೂತು ಸಿನೆಮಾಕ್ಕೊಂದಷ್ಟು ಬೈದರೆ ಸಿಗುವ ಸಮಾಧಾನ... ಇದನ್ನೆಲ್ಲಾ ವಿವರಿಸಬಲ್ಲೆವಾ! ಗೊತ್ತಿಲ್ಲ.

ಊರಿಗೆ ಹೊರಟ ಬಸ್ಸಿನಲ್ಲಿ ಒಂದಾದರೂ ಪರಿಚಯದ ಮುಖ ಇದ್ದೇ ಇರುತ್ತೆ. ಪ್ರೈಮರಿ ಸ್ಕೂಲ್‌ನಲ್ಲಿ ಜೊತೆಗೆ ಓದುತ್ತಿದ್ದವನೊಬ್ಬ 'ಹೆ.. ಅರಾಮೇನೋ, ನನ್ನ ನೆನಪಿದ್ಯಾ ಅಥವಾ ಮರೆತು ಬಿಟ್ಯಾ' ಅಂತ ಕೇಳಿದಾಗ ಅವನ ಹೆಸರಿಗಾಗಿ ತಡಬಡಾಯಿಸಿರುತ್ತೇವೆ. ಕೊನೆಗೂ ಅವನ ಹೆಸರು ತೋಚದೆ  ಅವನೇ ಮತ್ತೆ ನೆನಪಿಸಿದಾಗ, ಛೆ ಅವನಿಗೆ ಬೇಜಾರಾಯಿತೇನೋ ಅಂತ ಮರುಗಿರುತ್ತೇವೆ. ಹೊಸದಾಗಿ ಮದುವೆಯಾದ ಗೆಳೆಯನೊಬ್ಬ ಹೆಂಡತಿಯನ್ನ ಪರಿಚಯ ಮಾಡಿಸಲೋ ಅಥವಾ ಕಾಣದಂತೆ ಇದ್ದುಬಿಡಲೋ ಅಂತ ಗೊಂದಲಕ್ಕೆ ಬಿದ್ದಿರುತ್ತಾನೆ. ಅಂತೂ ಗುರುತಿದ್ದವರನ್ನ ಮಾತಾಡಿಸಿ ಬಸ್ಸಿನ ಸೀಟನ್ನ ಹಿಂದೆ ಮಾಡುತ್ತಿದ್ದಂತೆ, ಕಾಲೇಜಿನ ಕಣ್ಮಣಿಯಾಗಿದ್ದ ಅವಳು ಕಾಣಿಸಿಬಿಟ್ಟಿರುತ್ತಾಳೆ. ಹೋಗಿ ಮಾತಾಡಿಸಲಾ? ಗುರುತಿರಬಹುದಾ ಇಲ್ಲವಾ ಅನ್ನೋ ಗುಮಾನಿ. ಕಂಡು ನಕ್ಕರೆ ಬಸ್ಸಿನಲ್ಲಿ ಸಿಹಿನಿದ್ದೆ. ಕಂಡು ಯಾರೆಂದು ಗುರುತೇ ಇಲ್ಲದಂತೆ ಮುಖತಿರುಗಿಸಿದರೆ ಬೆಳಿಗ್ಗೆಯತನಕ ಸೀಟಿನಲ್ಲಿ ಹೊರಳಾಡಿ ಮೈಕೈ ನೋವು.

ಊರು ನಮ್ಮ ಪಾಲಿಗೆ ಒಂದು ಐಡೆಂಟಿಟಿ. ಊರಿನ ಬಗ್ಗೆ ಬೆಂಗಳೂರಿನ ಗೆಳೆಯರಿಗೆ ನೂರಾರು ಕಥೆ ಹೇಳಿರುತ್ತೇವೆ. ಜೋಗಕ್ಕೆ ಬರುವಾಗ ನಿಮ್ಮ ಊರಿಗೆ ಬಂದಿದ್ದೆ, ಹಂಪಿ ನೋಡುವಾಗ ನಿಮ್ಮ ಊರು ಸಿಕ್ಕಿತ್ತು. ಮುರುಡೇಶ್ವರದ ಪಕ್ಕ ಇರೋದೇ ನಿಮ್ಮ ಊರಾ? ಅಂತೆಲ್ಲಾ ಕೌತುಕದಿಂದ ಯಾರಾದರೂ ಕೇಳುತ್ತಿದ್ದರೆ, ಆ ಜಾಗಗಳೆಲ್ಲಾ ನಾವು ಸಣ್ಣವರಿದ್ದಾಗಲೇ ಓಡಾಡಿದ ಜಾಗವೆಂದು ಹೆಮ್ಮೆ ಎನಿಸುತ್ತದೆ. ಹೊಸದಾಗಿ  ಯಾರಾದರೂ ಪರಿಚಯವಾದರೆ ಯಾವ ಊರು ಅಂತ ತಕ್ಷಣ ಕೇಳಿರುತ್ತೇವೆ. ತಮ್ಮದೇ ಊರಾದರೆ ಅಥವಾ ಹತ್ತಿರದ ಊರಾದರೆ ಅವರೊಡನೆ ಮಾತಾಡುವ ರೀತಿಯೇ ಬೇರೆಯಾಗಿಬಿಡುತ್ತದೆ. ಊರಿನ ಪರಿಚಯದವರ ಬಗ್ಗೆ, ಓದಿದ ಕಾಲೇಜಿನ ಬಗ್ಗೆ, ಯಾವುದೊ ಲೋಕಲ್ ಹೊಡೆದಾಟದ ಬಗ್ಗೆ, ಹೀಗೆ ತಕ್ಷಣ ಮಾತು ಹರಿದಾಡಿರುತ್ತದೆ . ಬೆಂಗಳೂರಿನವರಾದರೆ ಇದೆಲ್ಲದರ ಅನುಭವ ಆಗಿರಲಿಕ್ಕಿಲ್ಲ. ಬೃಹತ್ ಬೆಂಗಳೂರಿನಲ್ಲಿ ಎಷ್ಟೋ ನಗರಗಳು.. ಎಷ್ಟೋ ಕಾಲೇಜುಗಳು.. ಪಕ್ಕದ ಮನೆಯವರ ಪರಿಚಯ ಎಷ್ಟೋ!

ಬಸ್ಸು ಅರಸೀಕೆರೆಗೆ  ಬಂದು ನಿಲ್ಲುತ್ತದೆ, ತಕ್ಷಣ 'ಟೀ ಕಾಫಿ ಊಟ ಐದೇ ನಿಮಿಷ  ಐದು ನಿಮಿಷ ಅಷ್ಟೇ ಬೇಗ ಬೇಗ' ಅಂತ ಪ್ರತಿ ಬಸ್ಸಿಗೂ ಬಡಿದು ಬಡಿದು ಗಾಡ ನಿದ್ರೆಯಲ್ಲಿದ್ದವರನ್ನೆಲ್ಲಾ ಎಬ್ಬಿಸಿರುತ್ತಾನೆ ಅಲ್ಲಿನ ಹೋಟೆಲಿನ ಹುಡುಗ. ಕಟ್ಟಿಕೊಂಡಿದ್ದನ್ನೆಲ್ಲಾ ಹೊರ ಹಾಕಿದರೆ ಒಮ್ಮೆ ನಿರಾಳ. ಹಸಿದಿದ್ದರೆ ಏನನ್ನಾದರೂ ತಿಂದು ಮತ್ತೆ ಬಸ್ ಹತ್ತಿದರೆ ಊರಿನ ನೆನಪಲ್ಲಿ, ಬೆಂಗಳೂರು ಬಿಟ್ಟು ಹೊರಬಂದ

ಖುಷಿಯಲ್ಲಿ ನೆಮ್ಮದಿಯ ನಿದ್ದೆ. ಮತ್ತೆ ಬಸ್ಸು ಹೊರಡುತ್ತದೆ ಊರಿನ ಕಡೆಗೆ. ಎಚ್ಚರವಾದಾಗ ಬೆಳಕು ಹರಿಯಲಾರಂಭಿಸಿರುತ್ತೆ . ಕಿಟಕಿಯ ಪರದೆ ಸರಿಸಿದರೆ ಕಣ್ ತುಂಬಾ ಹಸಿರು. ಊರೆಲ್ಲೊ ಹತ್ತಿರದಲ್ಲಿದೆ. ಪರದೆ ಮುಚ್ಚುವ ಮನಸ್ಸಾಗುವುದಿಲ್ಲ. ಪ್ರತಿ ಮೈಲಿಗಲ್ಲನ್ನೂ ನೋಡಿ ಇನ್ನೆಷ್ಟು ದೂರವಿದೆ ಎಂದು ನೋಡುವ ಆತುರ. ಕೊನೆಗೂ ಊರು ಬಂದು ಬಸ್ ಇಳಿಯುತ್ತಿದ್ದಂತೆ, ತಲೆಯ ಮೇಲಿದ್ದ ಜವಾಬ್ದಾರಿಯನ್ನೆಲ್ಲಾ ಬಿಟ್ಟು ನಿರಾಳವಾದ ಅನುಭವ. ನೆಮ್ಮದಿಯನ್ನ ಅರಸಿ ಊರಿಗೆ ಬಂದವನಿಗೆ ಅಲ್ಲಿದ್ದಷ್ಟು ಹೊತ್ತೂ ನೆಮ್ಮದಿ. ಇಲ್ಲೇ ಇದ್ದರೆ ಸುಖವಲ್ಲವೇ ಅನ್ನೋ ಮುಗಿಯದ ದ್ವಂದ್ವ. ಒಟ್ಟಿನಲ್ಲಿ ಇನ್ನೆರಡು ದಿನ ಊರಿನ ಮಡಿಲಲ್ಲಿ ಬೆಚ್ಚಗಿನ ಜೀವನ.

**ಅಕ್ಷಯ್ ಪಂಡಿತ್, ಸಾಗರ**

ಓ ಮನಸೇ 15 ಮಾರ್ಚ್ 2014

# ಮೀನು

ಒಮ್ಮೆ ಕಾಲೇಜಿನಲ್ಲಿ ಆಶುಭಾಷಣ ಸ್ಪರ್ಧೆ ಏರ್ಪಾಡಾಗಿತ್ತು. ವಿದ್ಯಾರ್ಥಿಗಳು ಸಭೆಯ ಎದುರು ನಿಂತು ನಿರ್ಭೀತಿಯಿಂದ ತಮ್ಮ ಅನಿಸಿಕೆ ವ್ಯಕ್ತಪಡಿಸುವುದು ವಿಷಯದ ಬಗ್ಗೆ ತಿಳುವಳಿಕೆ ಮತ್ತು ವಾಕ್ಚಾತುರ್ಯ ವಿಷಯದ ಚಿಂತನೆ ಬೆಳೆಯಲು ಇದೊಂದು ವೇದಿಕೆಯಾಗಿತ್ತು.

ನಡುಕ, ಬೆವರು, ಭಯ ಇವೆಲ್ಲವನ್ನೂ ಹೋಗಲಾಡಿಸುವ ತಕ್ಕ ಮಾರ್ಗದರ್ಶನ ಮಾಡುವ ಒಂದು ಕಲಾ ಪ್ರಕಾರ, ಭಾಷಣ, ಬಾಲ್ಯದಲ್ಲೇ ಇದು ವೃದ್ಧಿಯಾಗಬೇಕು. ಅದಕ್ಕೆ ಈ ಎಲ್ಲಾ ಉದ್ದೇಶ ಇಟ್ಟುಕೊಂಡು ವಿದ್ಯಾರ್ಥಿಗಳಲ್ಲಿ ಈ ಭಾಷಣ ಸ್ಪರ್ಧೆಯಿಂದ ಆತ್ಮ ವಿಶ್ವಾಸ ಮೂಡಿಸಲು ಮತ್ತು ಧೈರ್ಯವನ್ನು ತುಂಬಲು ಅನೇಕ ಸ್ಪರ್ಧೆ ನಡೆಸಲಾಗುತ್ತದೆ. ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ಸ್ಪರ್ಧಾಳುಗಳಾಗಿ ಭಾಗವಹಿಸುವ ವಿದ್ಯಾರ್ಥಿಗಳು, ನೋಡುಗರು, ಕೇಳುಗರು ಸಭಾಂಗಣದಲ್ಲಿ ನೆರೆದಿದ್ದರು. ಕಲಿಕೆಯ ಕೊಠಡಿಗಳಿಂದ ಬಿಡುಗಡೆ ಪಡೆದು ಒಂದು ಕಡೆ ಎಲ್ಲಾ ಜಮಾಯಿಸಿದ್ದರು. ವೇದಿಕೆಯೂ ಸಿದ್ಧವಾಗಿತ್ತು. ತೀರ್ಪುಗಾರರು ಅಲ್ಲಲ್ಲಿ ಪವಡಿಸಿದ್ದರು ಇತರ ಗಣ್ಯರು ಆ ದಿನದ ಅಧ್ಯಕ್ಷರು ಇತರರು ಅವರಿಗೆಂದು ಮೀಸಲಿರಿಸಿದ್ದ ಸ್ಥಾನದಲ್ಲಿ ಕುಳಿತುಕೊಂಡಿದ್ದರು.

ಮೊದಲು ಸ್ಪರ್ಧೆಗೆ ಕೆಲವು ಶಬ್ದಗಳನ್ನು ಬರೆದು ಕೊಡಲು ಪ್ರಾಚಾರ್ಯರು ನನಗೆ ಒಪ್ಪಿಸಿದ್ದರು ನಾನು ಯೋಚಿಸಿ ಮಲ್ಲಿಗೆ, ಕಬ್ಬು, ತೆಂಗು, ಟೀ, ಕಾಫಿ, ಬಂಗಾರ, ಕಬ್ಬಿಣ, ಆನೆ, ಕುದುರೆ, ಹಸು, ಮಳೆ, ಪುಸ್ತಕ, ಲೇಖನಿ, ಮೀನು ಹೀಗೆ ಅನೇಕ ಶಬ್ದಗಳನ್ನು ಬರೆದು ಒಂದು ಸೀಮೆಸುಣ್ಣದ ಪೆಟ್ಟಿಗೆಗೆ ಹಾಕಿ ಕೊಟ್ಟಿದ್ದೆ.

ನನ್ನ ಕಲ್ಪನೆ ಏನೆಂದರೆ ಕಬ್ಬು ಅದರ ಗಾತ್ರ, ಬೆಳೆಯುವ ಭೂಮಿ, ಮಳೆಹಂಚಿಕೆ, ಬಿತ್ತುವ ಬಗೆ, ಬೆಳೆಯುವ ವಿಧಾನ, ಇವೆಲ್ಲವನ್ನು ಬಣ್ಣಿಸುತ್ತಾರೆಂದು ತಿಳಿದಿದ್ದೆ, ಗೊಬ್ಬರ ಹಾಕುವುದು, ಕಟಾವು ಮಾಡುವುದು, ಅಲೆಮನೆ, ಕೈಗಾರಿಕೆ, ದೊಡ್ಡ ದೊಡ್ಡ ಕಾರ್ಖಾನೆ, ಸಕ್ಕರೆ ಪಾಕ ತಯಾರಿಕೆ, ಕಾಕಂಬಿ, ಅನೇಕ ಜನರಿಗೆ ಉದ್ಯೋಗ ಕಲ್ಪಿಸಿಕೊಡುವುದು, ಸಾರಿಗೆ ವ್ಯವಸ್ಥೆ ಇತ್ಯಾದಿ ಅದರಲ್ಲೇ ತೊಡಗಿಸಿಕೊಂಡ ಕೂಲಿ ಕಾರ್ಮಿಕರು, ಬೆಳೆಯುವ ದೇಶಗಳು, ಸಕ್ಕರೆ ಪಾತ್ರೆ ಎಂದು ಯಾವ ದೇಶವನ್ನು ಕರೆಯುತ್ತಾರೆ, ಕಬ್ಬು ಡೊಂಕಾದರೇನು ಸಿಹಿ ಡೊಂಕೆ ವಿಠಲ ಎಂಬ ಪುರಂದರ ದಾಸರ ಹಾಡು, ಉಂಡು ಕಬ್ಬು ತಿನ್ನು ಹಸಿದು ಹಣ್ಣು ತಿನ್ನು ಎಂಬ ಗಾದೆ ಮಾತುಗಳು. ಆದರೆ ಇದು ಈಗ ಬದಲಾವಣೆಗೊಂಡಿದೆ, ಉಂಡೆ ಎಂದರೆ ಇಡಿಯಾಗಿ ಎನ್ನುವುದು ಹೊರಟು ಹೋಗಿ ಊಟ ಮಾಡಿದ ನಂತರ ಎಂಬ ಅರ್ಥ ಹೊಳೆದು

ಅದನ್ನೇ ಹೇಳುತ್ತಾರೆ. ಹಾಗೆಯೇ ಹಸಿದು ಎನ್ನುವುದಕ್ಕೆ ಸುಲಿದು ಎನ್ನುವ ಶಬ್ದ ಮರೆಯಾಗಿ ಉಪವಾಸ ಬರೀ ಹೊಟ್ಟೆ ಎನ್ನುವ ಅರ್ಥವನ್ನು ಕೊಡುತ್ತದೆ. ಕಬ್ಬಿನ ಬಗೆಗಳು ರಸದಾಳೆ ಕಬ್ಬು, ಸಕ್ಕರೆ ಕಬ್ಬು, ಇತ್ಯಾದಿಯಾಗಿ ವರ್ಣಿಸುತ್ತಾರೆಂದು ನಾನು ಬಗೆದಿದ್ದೆ. ಇದು ಶೈಕ್ಷಣಿಕವಾಗಿ ಮತ್ತು ಭೋಧಪ್ರದವಾಗಿರುವಂತದ್ದು.

ಹಾಗೆಯೇ ಪುಸ್ತಕವೂ ಕೂಡ, ಇದನ್ನು ಮೊದಲು ಹೊತ್ತಿಗೆ ಎಂದು ಕರೆಯುತ್ತಿದ್ದರು. ಇದನ್ನು ಮುದ್ರಣ ಮಾಡುವ ರೀತಿ, ಹಿಂದಿನ ರೀತಿಯೇ ಬೇರೆ ಈಗಿನ ರೀತಿಯೇ ಬೇರೆಯಾಗಿದೆ. ಇದರಲ್ಲಿ ಬಗೆ ಬಗೆಯ ಆಕಾರ, ಗಾತ್ರಗಳು ಇರುತ್ತದೆ. ಪಠ್ಯ ಬೇರೆ ಪಠ್ಯೇತರ ಬೇರೆ ಬರವಣಿಗೆಯ ಪುಸ್ತಕಗಳು ಬೇರೆ ಚಿಕ್ಕದು, ದೊಡ್ಡದು, ವಿಷಯವಸ್ತು, ಭಾಷೆ, ಪ್ರಾದೇಶಿಕತೆ, ಹೀಗೆ ಬಹಳ ವೈವಿಧ್ಯಮಯವಾಗಿ ಬೆಳೆದಿದೆ. ಏನನ್ನು ದಾನ ಮಾಡಿದರೂ ಪುಸ್ತಕವನ್ನು, ಲೇಖನಿಯನ್ನು, ಚಪ್ಪಲಿಯನ್ನು, ಬಟ್ಟೆ, ಆಳು ಇವುಗಳನ್ನು ಮಾತ್ರ ಎಂತಹ ಆತ್ಮೀಯರಿಗೂ ಕೊಡಬಾರದು ಏಕೆಂದರೆ ಇವು ಹಾಳಾಗಿ ಹಿಂದಿರುಗಿ ಬರುತ್ತವೆ. ಕೆಲವೊಮ್ಮೆ ಹಿಂದಿರುಗಿ ಬರುವುದಿಲ್ಲ. ವಿದ್ಯಾರ್ಥಿಗಳು ನೋಟ್ ಪುಸ್ತಕವನ್ನು ಯತವತ್ತಾಗಿ ಗುರುಗಳಿಗೆ ಅರ್ಪಿಸಿ ಹೆಚ್ಚು ನಂಬರ್ ಪಡೆಯುವುದು ರೂಢಿಯಲ್ಲಿದೆ.

ಬಹಳ ಹಿಂದೆ ಈ ಪುಸ್ತಕವನ್ನು ಬರೆಯಲು ಓಲೆ ಗರಿಯ ಕಂಠ ಬಳಸಿ, ಬಳಪ, ಲೆಕ್ಕಣಿಕೆ ಇತ್ಯಾದಿಗಳನ್ನು ಬಳಸುತ್ತಿದ್ದರು. ಲೇಖಕರೇ ಪ್ರಕಾಶಕರಾಗಿರುತ್ತಿದ್ದರು. ಪ್ರಕಾಶನ ಸಂಸ್ಥೆಯವರು ಗುತ್ತಿಗೆ ಪಡೆದು ಇವುಗಳನ್ನು ಮುದ್ರಿಸಿ ಕೊಡುತ್ತಿದ್ದರು. ಕೈಯಲ್ಲಿ ಚೆಲ್ಲುತ್ತಾರೆ ಬಾಯಲ್ಲಿ ಹಾಯುತ್ತಾರೆ. ಬಿಳಿ ಹೊಲದಲ್ಲಿ ಕರಿ ಬಿತ್ತನೆ ಎಂಬ ಗಾದೆ ಮಾತುಗಳು ರೂಢಿಗೆ ಬಂದಿದೆ. ಈ ವಿಷಯವನ್ನು ಸಂಗ್ರಹಿಸಿ ಹೇಳುತ್ತಾರೆ ಎಂದು ನನ್ನ ಊಹೆಯಾಗಿತ್ತು. ಅಂತೆಯೇ ಇತರೆ ಶಬ್ದಗಳು ಕೂಡ ಅದರ ಸ್ಥಿತಿ, ಗಾತ್ರ, ವಿವರ, ಉಪಯೋಗ ಇತ್ಯಾದಿ ಹೇಳಲು ಸಾಮರ್ಥ್ಯ ಬೆಳೆಯಬೇಕು. ಅದೇ ರೀತಿ ತೆಂಗು ಬೆಳೆಯುವ ಕ್ರಮ, ಎತ್ತರ, ಬಿಡುವ ಕಾಯಿ, ವಿವಿಧ ಬಳಕೆ ಅದಕ್ಕೆ ಕಲ್ಪವೃಕ್ಷ ಎನ್ನುವುದು ದೇವರಿಗೆ ಅಡುಗೆಗೆ, ಕೊಬ್ಬರಿ ಉಪಯೋಗ, ಚಾಪೆ, ಹಗ್ಗ, ಗೃಹನಿರ್ಮಾಣ, ಪೊರಕೆ, ಎಣ್ಣೆ, ಸಿಹಿ ಪದಾರ್ಥ ಹೀಗೆ ಸುಲಭ ಸಾಧ್ಯವಾಗಿರುವ ಶಬ್ದಗಳನ್ನು ಬರೆದು ಕೊಟ್ಟಿದ್ದೆ ಅದರಲ್ಲಿ ಮೀನು ಈ ಶಬ್ದವೂ ಒಂದಾಗಿತ್ತು.

ಒಬ್ಬ ವಿದ್ಯಾರ್ಥಿನಿಗೆ ಈ ಶಬ್ದವಿರುವ ಚೀಟಿ ಸಿಕ್ಕಿತು, ಈ ಶಬ್ದವನ್ನು ನಿರೀಕ್ಷೆ ಮಾಡದೇ ಇರುವ ಅವಳು ಪೆಚ್ಚು ಮೋರೆ ಹಾಕಿಕೊಂಡು ಮಾತು ಹೊರಡದೇ ಕಲ್ಲಂತೆ ನಿಂತಳು. ಸಭೆ ಕುತೂಹಲದಿಂದ ವೀಕ್ಷಿಸುತ್ತಿತ್ತು. ನನಗೆ ಬಂದ ವಿಷಯ ಮೀನು, ಅಂತ ಹೇಳಲು ಪ್ರಾರಂಭಿಸಿದಳು ಇದು ನೀರಲ್ಲಿರುತ್ತೆ ಹೊಟ್ಟೆಯಲ್ಲಿ

ಮುಳ್ಳುಗಳಿರುತ್ತವೆ. ಕೆಲವರು ಇದನ್ನು ತಿನ್ನುತ್ತಾರೆ ಇದು ಗಬ್ಬು ವಾಸನೆ ಎಂದು ಹೇಳಿ ಸರ್ರನೆ ಹೋಗಿ ಕುಳಿತಳು.

ನಾನು ಪ್ರಧಾನಿಯಾಗಿದ್ದರೆ, ನಟನಾಗಿದ್ದರೆ, ಮೆಚ್ಚಿನ ನಾಯಕನಾಗಿದ್ದರೆ, ರಾಜಕಾರಣಿಯಾಗಿದ್ದರೆ, ಕೇಸರಿಬಾತ್, ಮೈಸೂರ್‌ಪಾಕ್ ಇತ್ಯಾದಿ ತಿಂಡಿಗಳ ಹೆಸರು ಎಂದು ಮೊದಲೇ ಊಹಿಸಿಕೊಂಡಂತೆ ಕಾಣುತ್ತದೆ. ಇಂತಹ ವಸ್ತು ವಿಷಯಗಳ ಬಗ್ಗೆ ತಿಳಿದುಕೊಳ್ಳುವುದು ಮಹತ್ತರ ಸಂಗತಿಯೇನಲ್ಲ ಅದು ಭೋದನಾ ಪ್ರಧಾನವಾಗಿರಬೇಕು. ದೇಶ ವಿದೇಶಗಳ ಸಮಸ್ಯೆಯಾಗಿರಬೇಕು, ಭಾಗವಹಿಸಲು ವಸ್ತು ವಿಷಯದ ಬಗ್ಗೆ ಅರಿವಿರಬೇಕು, ವಿದ್ಯಾರ್ಥಿಗಳಿಗೆ ವೈಚಾರಿಕ ಬುದ್ಧಿ, ವೈಜ್ಞಾನಿಕ ಪ್ರಜ್ಞೆ ಬೆಳೆದು ಕ್ರಾಂತಿಯ  ಆಲೋಚನೆ ಅರಳಬೇಕು, ಮನದಲ್ಲಿ ಮನೆ ಮಾಡಬೇಕು. ಪ್ರತೀ ವರ್ಷವೂ ಹೀಗೆ ಮಾಡಿದರೆ ಸರಿದಾರಿಗೆ ತರಬಹುದು ಎಂಬುದು ನನ್ನ ಚಿಂತನೆಯಾಗಿತ್ತು. ಓದುವ ಆಸಕ್ತಿ ತಲೆ ದೋರಿ ಹೊಸ ಯೋಚನೆ ಕೊನರಬೇಕು ಸಂಪ್ರದಾಯ ಮುರಿಯಲು ಇಂಥ ಬದಲಾವಣೆ ಬೇಕು ಇದಕ್ಕೆ ಬದ್ಧರಾದರೆ ಈ ಹೊಸಕ್ರಮ ಒಲಿದು ಬರಲು ಸಾಧ್ಯ. ಆಯ್ಕೆ ಮಾಡಿಕೊಳ್ಳಬೇಕಾದ ವಸ್ತು ಸಾಂಪ್ರದಾಯಿಕವಾಗಿರದೆ ಭೋಧನಾಕ್ರಮವಾಗಿರಬೇಕು. ಕೊನೆಯಲ್ಲಿ ಪ್ರಾಚಾರ್ಯರು ನನ್ನನ್ನು ಕುರಿತು ರ್ರೀ, ಅಂತಾ ಶಬ್ದಗಳನ್ನೆಲ್ಲಾ ಯಾಕ್ರೀ ಬರೆದಾಕಿದ್ರಿ? ಅಂತ ಆಕ್ಷೇಪಿಸಿದರು. ನನ್ನ ಊಹೆ ಅದಾಗಿರಲಿಲ್ಲ ಮೀನಿನ ಆಕಾರ ಗಾತ್ರ, ಪ್ರಬೇಧ, ವಾಸಿಸುವ ಸ್ಥಳ, ಎಂತಹ ಕುತೂಹಲ ಬರಿಸುವ ಶಬ್ದ ನೀರೊಳಗಿದ್ದರೆ ಆಟ, ಹೊರಗೆ ಬಂದರೆ ಪ್ರಾಣ ಸಂಕಟ, ನೀರೊಳಗಿದ್ದರೆ ಗಿಲಿಗಿಲಿ, ನೀರ ಮೇಲೆ ಬಂದರೆ ವಿಲಿವಿಲಿ ಸತ್ತವರನ್ನು ಸಂತೇಲಿ ಮಾರುತ್ತಾರೆ, ತೆಗೆದುಕೊಂಡವರೆಲ್ಲಾ ತಿನ್ನುತ್ತಾರೆ. ಎನ್ನುವ ಗಾದೆಗಳಿವೆ.

ಇದೊಂದು ಜಲಚರ ಪ್ರಾಣಿ ಕಾಲು ಇರದಿದ್ದರೂ ನೀರಲ್ಲೇ ಈಜುತ್ತದೆ, ಓಡುತ್ತದೆ ಸಂತಾನ ಅಭಿವೃದ್ಧಿ ಮಾಡಿಕೊಳ್ಳುತ್ತದೆ. ಸಹಸ್ರಾರು ಬಗೆಯ ಮೀನುಗಳನ್ನು ಹಿಡಿದು ವಾಹನಗಳಿಗೆ ತುಂಬಿ ದೂರದ ಪ್ರದೇಶಗಳಿಗೆ ಸಾಗಿಸುವ ಪ್ರಕ್ರಿಯೆ ತಪ್ಪದೇ ದಿನಂಪ್ರತಿ ನಡೆಯುತ್ತದೆ. ಅದಕ್ಕಾಗಿ ಐಸ್ ಬಳಸಿ ವಾಹನಗಳ ಮುಖಾಂತರ ನಮ್ಮ ರಾಜಧಾನಿವರೆಗೂ ಸಾಗಾಣಿಕೆ ಮಾಡಲಾಗುತ್ತದೆ. ಪ್ರತಿ ಜಿಲ್ಲೆ, ತಾಲ್ಲೂಕು ಊರುಗಳಿಗೂ, ಮಾರಾಟ ಮಾಡಲಾಗುತ್ತದೆ. ಅದಕ್ಕೆಂದೆ ಸಹಸ್ರಾರು ವಾಹನ ಬಳಕೆ, ದೋಣಿ, ಹಡಗುಗಳ ಬಳಕೆ, ಸಿಬ್ಬಂದಿ, ಲಾಭ ಹಂಚಿಕೆ ಹೀಗೆ ನಾನಾ ರೀತಿಯಲ್ಲಿ ಬಳಕೆಯಾಗುತ್ತದೆ. ಇದು ಒಂದು ಲಾಭದಾಯಕ ಉದ್ಯಮ ಬಹಳ ಜನರಿಗೆ ಆಹಾರ ಹಿಡಿದು ಸಂಗ್ರಹಿಸುವ ಬಗೆ ಮಾರುಕಟ್ಟೆ, ತಯಾರಿಸುವ ಆಹಾರ, ತಿನಿಸುಗಳು, ತರತರದ ಮೀನು ಮೀನಿನ ಚಿಂತನೆ ವಿಷಯದ ಮೇಲೆ ಬೆಳಕು ಚೆಲ್ಲುತ್ತಾರೆಂಬುದು ನನ್ನ ಅಭಿಪ್ರಾಯವಾಗಿತ್ತು. ಅಂತೆಯೇ ಕಾರಾವಳಿ ತೀರಪ್ರದೇಶ ಬಂದರು ಹುಟ್ಟಿಕೊಂಡ

ಸಂಸ್ಥೆಗಳು ಸಾಗಾಣಿಕೆ ಇತ್ಯಾದಿ ವಿಷಯಗಳು ಪ್ರಸ್ತಾಪವಾಗುವುದು ಎಂದು ತಿಳಿದುಕೊಂಡಿದ್ದೆ.

ಶೈಕ್ಷಣಿಕವಾಗಿ ಗುರುತಿಸುವುದು ಮುಖ್ಯ ಯಾಕೋ ಮನವು ಘಾಸಿಯಾಗಿತ್ತು. ಬೇಸರದಿಂದಲೇ ಮನೆ ಸೇರಿದೆ. ಯೋಚನೆ ಒಂದರ ಹಿಂದೆ ಮತ್ತೊಂದು ಬರತೊಡಗಿದವು. ಮೀನಿನ ಬಗ್ಗೆ ದಿನವಿಡೀ ಯೋಚಿಸಿದ್ದೆ. ಸಿಬ್ಬಂದಿಯವರ ಕೆಲಸ ಅವರ ಉದರ ಪೋಷಣೆ ಹೀಗೆ ಇದು ಅನೇಕ ಜನರಿಗೆ ಉದ್ಯೋಗ ಕರುಣಿಸುವ ಮಾರ್ಗಸೂಚಿಸುವ ಬೃಹತ್ ಉದ್ಯಮವಾಗಿ ಪರಿಣಮಿಸಿದೆ.

ಪುರಾಣ ಇತಿಹಾಸಗಳನ್ನೆಲ್ಲ ಅವಲೋಕನ ಮಾಡಿದರೆ ಮೀನಿನ ಬಗ್ಗೆ ಅನೇಕ ನಿದರ್ಶನಗಳು ಕಾಣಸಿಗುತ್ತವೆ. ಮೀನು ಇದೊಂದು ನಕ್ಷತ್ರ ರಾಶಿ ಮೀನನ್ನು ಕುರಿತ ಒಂದೊಂದು ಶಬ್ದಕ್ಕೂ ಒಂದೊಂದು ಕತೆ ಇದೆ. ಮೀನಕನ್ಯೆ, ಮತ್ಸ್ಯಗಂಧಿ, ಮತ್ಸ್ಯೋಧರಿ, ವ್ಯಾಸಮುನಿಯ ತಾಯಿ. ವಿಷ್ಣುವಿನ ದಶಾವತಾರಗಳಲ್ಲಿ ಮತ್ಸ್ಯಾವತಾರವೇ ಮೊದಲಿನದು.

ಮತ್ಸ್ಯಯಂತ್ರವನ್ನು ಭೇದಿಸುವುದು ಮೀನನ್ನು ಒಂದು ಕಂಬದ ಮೇಲ್ತುದಿಗೆ ಕಟ್ಟಿ ನೀರಲ್ಲಿ ಅದರ ಪ್ರತಿಬಿಂಬ ಕಾಣುತ್ತದೆ ಮೇಲೆ ತಿರುಗುವ ಮೀನಿನ ಕಣ್ಣಿಗೆ ಗುರಿಯಿಟ್ಟು ಹೊಡೆಯುವುದು ದ್ರೌಪದಿಯ ಸ್ವಯಂವರದಲ್ಲಿ, ಇದನ್ನು ಪ್ರಯೋಗಿಸಿ ಬಿಲ್ವಿದ್ಯ ಪರಿಣತಿಯನ್ನು ಪರೀಕ್ಷೆ ಮಾಡಲಾಗುತ್ತದೆ. ಅರ್ಜುನ ಈ ವಿದ್ಯೆಯಲ್ಲಿ ಜಯಶೀಲನಾಗುತ್ತಾನೆ.

ಪತಿಯನ್ನೇ ನೆನಪು ಮಾಡುತ್ತಾ ಕುಳಿತ ಶಕುಂತಲೆಗೆ ದೂರ್ವಾಸ ಮುನಿ ಬಂದ ವಿಚಾರ ತಿಳಿಯುವುದಿಲ್ಲ. ಅನಿವಾರ್ಯ ಮುನಿಯ ಶಾಪಕ್ಕೆ ಗುರಿಯಾಗುತ್ತಾಳೆ. ದುಶ್ಯಂತನು ಶಕುಂತಲೆಗೆ ಕೊಟ್ಟ ಮುದ್ರೆಯುಂಗುರ ಋಷಿಯ ಶಾಪದಿಂದಾಗಿ ನೀರಿನಲ್ಲಿ ಬಿದ್ದು ಕಳೆದು ಹೋಗುತ್ತದೆ. ಅದನ್ನು ಒಂದು ಮೀನು ನುಂಗುತ್ತದೆ. ಇದರಿಂದಾಗಿ ದುಶ್ಯಂತನಿಗೆ ಮರೆವು ಸಂಭವಿಸುತ್ತದೆ. ಆತ ಶಕುಂತಲೆಯನ್ನು ತೊರೆದು ಬಿಡುವ ಸಂಭವ ತಲೆದೋರುವುದು. ಎಲ್ಲಾ ಘಟನೆ ನಡೆಯುತ್ತದೆ. ನಂತರ ಅದು ಮೀನುಗಾರರಿಗೆ ಸಿಕ್ಕು ಆ ಉಂಗುರವನ್ನು ಕೊಟ್ಟ ನಂತರ ನೆನಪು ಬರುತ್ತದೆ.

ಪ್ರದ್ಯುಮ್ನ ಶ್ರೀ ಕೃಷ್ಣ ಮತ್ತು ರುಕ್ಮಿಣಿಯರ ಮಗ. ಇವನು ಆರು ವರ್ಷ ಇರುವಾಗಲೇ ಶಂಭಾಸುರನೆಂಬುವನು ಪ್ರದ್ಯೂಮ್ನನನ್ನು ಕಡಲಿಗೆ ಎಸೆಯುತ್ತಾನೆ. ಅಲ್ಲಿ ಮೀನು ಅವನನ್ನು ನುಂಗುತ್ತದೆ. ಮುಂದೆ ಆ ಮೀನನ್ನು ಹಿಡಿಯುವಾಗ ಬೆಸ್ತನಿಗೆ ಸಿಕ್ಕು ಶಂಭಾಸುರನಲ್ಲಿ ಬೆಳೆಯುತ್ತದೆ. ಕೆಲ ವರ್ಷಗಳ ನಂತರ ಪ್ರಸಂಗವನ್ನು ತಿಳಿದು ಶಂಭಾಸುರನನ್ನು ಸಂಹರಿಸುತ್ತಾನೆ ಪ್ರದ್ಯುಮ್ನ ತಂದೆ ತಾಯಿಯರನ್ನು ಸೇರಿಕೊಳ್ಳುತ್ತಾನೆ.

ಕೆಲವರು ಮಕ್ಕಳಿಗೆ ಮೀನಾಕ್ಷಿ ಎಂದು ಹೆಸರಿಡುವುದುಂಟು. ಮೀನಿನಂತೆ ಕಣ್ಣುಳ್ಳವಳು ಸುಂದರಿ ಎಂದು ಅರ್ಥ ಮೀನು ಎಂದರೆ ಮಿನುಗು ಹೊಳಪು ನಕ್ಷತ್ರ ಪ್ರಕಾಶ ಎಂದೆಲ್ಲಾ ಭಾಷಾ ಶಾಸ್ತ್ರಜ್ಞರ ಅಭಿಪ್ರಾಯ. ಮುಂಜಾನೆ ಎದ್ದು ಕೆರೆಯ ದಂಡೆಯಲ್ಲಿ ನಿಂತು ನೋಡಿದರೆ ಕೆರೆಯ ನೀರಿನ ಹೊಂಬೆಳಕಿನಲ್ಲಿ ಆಡುವುದು ಕಣ್ಣಿಗೆ ಕಾಣುತ್ತದೆ. ಅದಕ್ಕೆ ಈ ಜಲಚರ ಪ್ರಾಣಿಗೆ ಮೀನು ಎಂದು ಸೀಮಿತವಾಗಿದೆ.

ನಮ್ಮೂರ ಕೆರೆಯಲ್ಲಿ ವರ್ಷವಿಡೀ ಮೀನು ಇರುತ್ತಿದ್ದವು. ಕೆಲವರು ಎತ್ತರದ ಜಾಗದಲ್ಲಿ ಸುರಕ್ಷಿತವಾಗಿ ಕುಳಿತು ಗಾಳ ಹಾಕಿದರೆ ಕೆಲವರು ಮಡುವಿನಲ್ಲಿ ಮೀನು ಹಿಡಿಯುತ್ತಿದ್ದರು. ಮತ್ತೆ ಕೆಲವರು ಬಲೆ ಹಾಕುತ್ತಿದ್ದರು. ಕೂಳೆ ಕಟ್ಟುತ್ತಿದ್ದರು ಸಣ್ಣ ಗುಂಡಿಗಳಿದ್ದರೆ ಅದಕ್ಕೆ ಕಟ್ಟೆ ಕಟ್ಟಿ ನೀರನ್ನು ಇನ್ನೊಂದು ಗುಂಡಿಗೆ ಚೆಲ್ಲಿ ನೀರು ನಿಂತಿರುವ ಬೇರೊಂದು ಗುಂಡಿಗೆ ಮೊಗೆದು ಕೆಸರಲ್ಲಿ ಮೀನು ಹುಡುಕುತ್ತಿದ್ದರು. ಸಿಕ್ಕ ಮೀನುಗಳನ್ನು ಪಾಲು ಮಾಡಿಕೊಂಡು ಹಾಜರಾದವರೆಲ್ಲಾ ಮನೆಗೆ ಕೊಂಡೊಯ್ದು ಸ್ವಚ್ಛ ಮಾಡಿ ಅಡುಗೆ ಮಾಡಿ ತಿನ್ನುತ್ತಿದ್ದರು. ಕೆಲವರು ಮಾರಿ ಹಣ ಎಣಿಸುತ್ತಿದ್ದರು.

ಬಾಲ್ಯದಲ್ಲಿ ನಡೆದ ಘಟನೆಯೊಂದು ನೆನಪಿಗೆ ಬಂತು ಆಗ ಮಳೆಗಾಲ ಸಮೃದ್ಧಿಯ ಕಾಲ ಕೆರೆ ಬಾವಿಗಳು ಬತ್ತುತ್ತಿರಲಿಲ್ಲ. ಒಮ್ಮೆ ರಾತ್ರಿ ಇಡೀ ಜೋರಾಗಿ ಮಳೆ ಸುರಿದು ಹನಿಹನಿ ಗೂಡಿ ಹಳ್ಳವಾಗಿ ಕೆರೆಗೆ ಕೋಡಿ ಬಿದ್ದು ನೀರು ಹರಿದು ಕೆರೆ ತುಂಬಿ ತುಳುಕಿತ್ತು. ಕೆರೆಯ ನೀರೆಲ್ಲಾ ರಸ್ತೆಗದ್ದೆ, ಅಕ್ಕ ಪಕ್ಕದ ಹೊಲ, ತಿಪ್ಪೆಗುಂಡಿಗಳಿಗೆಲ್ಲಾ ನುಂಗಿ ಜಲಮಯವಾಗಿತ್ತು. ತಿಪ್ಪೆ ಅಂದಾಗಲೇ ನೆನಪಾಗುತ್ತದೆ ಸೆಗಣಿ ಲೊಡ್ಡು, ಕೊಳೆತ ಮಣ್ಣು ಎಲ್ಲಾ ನಮೂನಿ ಕೊಳೆತ ಪದಾರ್ಥ ತೇಲಿ ಬಂದು ಕೆರೆಯ ಹೊರಭಾಗದಲ್ಲಿ ಹರಿದು ನಿಂತಿದ್ದ ನೀರಿನಲ್ಲೆಲ್ಲಾ ಕಾಣಿಸಿಕೊಂಡು ಅರ್ಧಂಬರ್ಧ ಜೀವ ಕಳೆದುಕೊಂಡಿದ್ದವು. ಊರಿನ ಜನ ಸೋಜಿಗಗೊಂಡು ಅದನ್ನ ಮೀನು ಮೀನು ಎಂದು ಮನೆಮನೆಗೂ ಸುದ್ದಿ ಮಾಡಿದರು. ಅವುಗಳನ್ನು ಹಿಡಿಯಲು ಬುಟ್ಟಿ ತೆಗೆದುಕೊಂಡು ಅಲ್ಲೆಲ್ಲ ತಿರುಗಾಡಿ ಸುತ್ತಾಡಿ ಸಾಕಾಗುವಷ್ಟು ತುಂಬಿಕೊಂಡು ಬರುತ್ತಿದದ್ದರು ತಿಪ್ಪೆಯ ಮೇಲೆ ಹುಡುಕಿ ಮನೆಗೆ ತರುತ್ತಿದ್ದರು. ಆ ಮೀನುಗಳನ್ನು ಉಜ್ಜಿ ತೊಳೆದು ದೊಡ್ಡವಿದ್ದ ಮೀನನ್ನು ಕೊಯ್ದು ಸಾರು ಮಾಡಿ ತಿಂದು ಸಂಭ್ರಮ ಪಟ್ಟರು.

ಸರಿ ಮರುದಿನ ಕರುಳ ಬೇನೆ ತಲೆದೋರಿ ಮೀನು ತಿಂದ ಎಲ್ಲಾ ಜನರಿಗೆ ವಾಂತಿ ಕಾಡತೊಡಗಿತು ಅವರೆಲ್ಲಾ ನಿತ್ರಾಣವಾಗಿ ಜೋತಾಡುತ್ತ ಕಣ್ಣುಗಳು ಒಳ ಹೋಗಿ ಮುಖ ಬಾಡಿ ಕಂಗಾಲಾಗಿ ಕುಳಿತರು. ಕಾಯಿಲೆ ಬಂದವರೆಲ್ಲಾ ತಿಳಿದುಕೊಂಡರು ಇದೆಲ್ಲಾ ಆದದ್ದು ಮೀನಿನ ಪ್ರಭಾವವೆಂದು ಐದಾರು ಬಾರಿಯಾದರೂ ವಾಂತಿ ನಿಲ್ಲಲಿಲ್ಲ ನಿತ್ರಾಣವಾಗಿ ಜೋತಾಡುತ್ತಾ ಕಣ್ಣುಗಳು ಒಳಹೋಗಿ ಮುಖ ಬಾಡಿ ಕಂಗಾಲಾಗಿ ಕುಳಿತರು. ನರಳುತ್ತ ಒಬ್ಬೊಬ್ಬರು ಮುಖ ನೋಡಿ ಅಸಹಾಯಕರಾಗಿ

ನರಳುತ್ತ ಆಸ್ಪತ್ರೆಯ ದರ್ಶನ ಪಡೆದು ವೈದ್ಯರಿಗೆ ಹಣ ತೆತ್ತು ಮನೆಗೆ ಹಿಂದಿರುಗಿ ದಿನಗಳ ನಂತರ ಸುಧಾರಣೆ ಗೆಲುವು ಕಂಡರು.

ವಾಂತಿ ಭೇದಿಗೆ ತುತ್ತಾಗಿದ್ದರು ಅನೇಕ ದಿನಗಳ ನಂತರ ಚೇತರಿಸಿಕೊಂಡರು ಎಲ್ಲರ ಬಾಯಲ್ಲೂ ಒಂದೇ ಮಾತು ಕೇಳಿ ಬರುತ್ತಿತ್ತು ತಿಪ್ಪೆ ಮೀನು ತಿಂದು ಸಪ್ಪಗಾದರು. ಉದರ ಬೇನೆ ಬಂದು ಸೊರಗಿದರು. ಬೇಡಪ್ಪಾ ಮೀನಿನ ಸಹವಾಸ ಅಂತ ಅದರ ಗೋಜಿಗೆ ಹೋಗುವುದನ್ನೇ ಮರೆತಿದ್ದರು.

ನನಗೆ ಬೇರೆಡೆಗೆ ವರ್ಗಾವಣೆಯಾಗಿ ಕರ್ತವ್ಯದಿಂದ ಬಿಡುಗಡೆಯಾದ ದಿನ ಸಹುದ್ಯೋಗಿಗಳೆಲ್ಲಾ ಸೇರಿ ಒಂದು ಔತಣ ಕೂಟ ಇಟ್ಟುಕೊಂಡಿದ್ದರು. ಊರ ಹೊರಗಿನ ಡಾಬಕ್ಕೆ ಎಲ್ಲರೂ ಹೋದೆವು ನಿಕಟ ಪೂರ್ವ ಪ್ರಾಂಶುಪಾಲರು ಬಂದಿದ್ದರು ಅವರಿಗೆ ಮೀನು ಎಂದರೆ ಪ್ರಾಣ ಸಾಹೇಬರು ಫಿಶ್ ತುಂಬಾ ಇಷ್ಟಪಡುತ್ತಾರೆಂದು ಹೊಗಳಿ ಫಿಶ್‌ಗೆ ಬೇಡಿಕೆ ಸಲ್ಲಿಸಿದರು. ಆರ್ಡರ್ ಮಾಡಿದರು, ನೀವು ತಿನ್ನುವುದಿಲ್ಲವೇ ಹೆಲ್ತ್‌ಗೆ ಒಳ್ಳೆಯದು ತಿನ್ನಿರಿ ಇದು ಜನಪ್ರಿಯ ಪೌಷ್ಠಿಕ ಆಹಾರ ಎಂದೆಲ್ಲಾ ಮೆಚ್ಚಿ ನನಗೂ ಒಂದು ಪ್ಲೇಟ್ ಹೇಳಿದರು. ಅವರ ಆದೇಶದ ಮೀನು ಪ್ಲೇಟ್ ಬಂದಿತು. ಅವರ ಹೊಗಳಿಕೆಗೆ ಮಣಿದು ನಿರಾಕರಿಸಲಾರದೆ ಸುಮ್ಮನೆ ಕೂತುಕೊಂಡು ಮೀನು ತಿಂದೆ.

ಅವರನ್ನು ಬೀಳ್ಕೊಟ್ಟು ಮನೆಗೆ ಹಿಂದಿರುಗಿದೆ ಹೊಟ್ಟೆಉರಿ, ಅಜೀರ್ಣ, ಎಲ್ಲಾ ಉಲ್ಬಣಗೊಂಡು ಆಯಾಸವಾಗಿ ನಿದ್ದೆ ಬರಲಿಲ್ಲ ದೇಹ ಬಿಗಿದುಕೊಂಡಂತೆ ಸಂಕಟ ಕೆಲಕ್ಷಣ ಹಾಸಿಗೆಯಲ್ಲೇ ಹೊರಳಾಡಿದೆ. ಆಗಲೇ ಮಧ್ಯ ರಾತ್ರಿಯ ಸಮಯ ಯಾವ ವೈದ್ಯರ ಬಳಿ ಹೋಗಲೂ ಅನುಕೂಲವಿರಲಿಲ್ಲ ಸುಮ್ಮನೆ ಹಾಗೇ ಒದ್ದಾಡಿದೆ. ಬಾಯಿ ತುಂಬಾ ಉಳಿ ತೇಗು ನೀರು ಬಂದು ಹೊರಗೆ ಹೋದೆ ಬಚ್ಚಲ ರೂಂನಲ್ಲಿ ಬಕ ಬಕ ವಾಂತಿಯಾಯಿತು ಬಾಯಿ ನೀರು ಮುಕ್ಕಳಿಸಿ ಹಲ್ಲು ಉಜ್ಜಿ ಸ್ವಚ್ಛಗೊಳಿಸಿ ಹಾಸಿಗೆಗೆ ಬಂದು ಬಿದ್ದೆ, ಬಾಯಾರಿ ಮತ್ತೆ ನೀರು ಕುಡಿದೆ, ಸ್ವಲ್ಪ ಸಮಯದ ನಂತರ ಕರುಳು ಹಿಂಡಿದಂತಾಗಿ ಹೊಟ್ಟೆಯೊಳಗೆ ಉರಿ ಕಿತ್ತುಕೊಂಡು ಸಂಕಟ ತಲೆದೋರಿತು. ಕುಡಿದ ನೀರೆಲ್ಲಾ ಪುನಃ ವಾಂತಿ ಮಾಡುವಂತಾಯಿತು. ಬಾಯಿ ತೊಳೆದುಕೊಂಡು ನೀರು ಕುಡಿದು ಮತ್ತೆ ಮಲಗಿದೆ.

ಅದೇ ಪ್ರಕಾರ ಪುನಃ ಪುನಃ ವಾಂತಿಯಾಯಿತು ಹೊಟ್ಟೆಯೊಳಗಿನ ಕಲ್ಮಶ ಹೋಗಿ ದೇಹ ಸ್ವಚ್ಛವಾಗಲೆಂದು ಮತ್ತೆ ಹೊಟ್ಟೆ ತುಂಬಾ ನೀರು ಕುಡಿದೆ. ಮತ್ತೆ ಮತ್ತೆ ವಾಂತಿಯಾಯಿತು. ಹೀಗೆ ಐದಾರು ಬಾರಿ ವಾಂತಿ ಮಾಡಿಕೊಂಡಿದ್ದೆ ಆ ನೆನಪು ನನಗಿನ್ನು ಹಾಗೆಯೇ ಅಚ್ಚಳಿಯದೆ ಉಳಿದಿದೆ.

ಪ್ರಾಚಾರ್ಯರಾಗಿ ಮುಂಬಡ್ತಿ ಪಡೆದು ಬೇರೊಂದು ಊರಿನಲ್ಲಿ ಕರ್ತವ್ಯಕ್ಕೆ ಹಾಜರಾದೆ. ಆ ಸಂದರ್ಭದಲ್ಲಿ ಇನ್ನೂ ಮನೆ ಮಾಡಿಲ್ಲವಾದ್ದರಿಂದ ಉಪನ್ಯಾಸಕರ

ಮನೆಯಲ್ಲಿ ಎರಡು ದಿನ ತಂಗಬೇಕಾಯಿತು. ಮರುದಿನ ಅವರು ಊಟಕ್ಕೆ ಆಹ್ವಾನಿಸಿದರು. ಹೋಗಿ ಕುಳಿತೆ ಆಗ ಹೇಳಿದರು ನಿಮಗಾಗಿ ಫಿಶ್ ತಂದಿದ್ದೇವೆ. ಒಳ್ಳೆಯ ಫಿಶ್ ಬಂದಿದೆ ಮಾರ್ಕೇಟ್ಗೆ ಚೆನ್ನಾಗಿದೆ, ನಿಮಗಾಗಿ ನಿಮಗೋಸ್ಕರವಾಗಿ ಏನಾದರೂ ಸ್ಪೆಷಲ್ ಮಾಡಬೇಕೆಂಬ ಹಠದಿಂದ ಹುಡುಕಿ ತಂದಿದ್ದೇವೆ. ಮುಜುಗರ ಪಟ್ಟುಕೊಳ್ಳದೆ ತಮ್ಮ ಮನೆಯಂತೆ ತಿಳಿದು ಊಟ ಮಾಡಿರಿ ಎಂದು ಬಲವಂತ ಮಾಡಿದರು ಊಟಕ್ಕಿಂತ ಅವರು ಮಾಡುವ ಉಪಚಾರವೇ ಜಾಸ್ತಿಯಾಯಿತು. ನಾನು ತಿನ್ನುವುದಿಲ್ಲವೆಂದು ಹೇಗೆ ನಿರಾಕರಿಸಲಿ ಬೇರೆ ತಯಾರು ಮಾಡಲು ಅವರಿಗೆ ಕಷ್ಟವಾಗಬಹುದೆಂದು ಮುಜುಗರವಾಯಿತು ಹಿಂದಿನ ಅನುಭವ ಆಗಲೇ ಮಾಸಿತ್ತು ಅರಿತರಿತು ತಪ್ಪು ಮಾಡುವ ನನ್ನ ಕಾಯುವವರಾರು ಯಾವುದೋ ವಿಶ್ವಾಸಕ್ಕೆ ಕಟ್ಟು ಬಿದ್ದು ಅವರು ನೀಡಿದ್ದನ್ನು ಊಟ ಮಾಡಿದೆ. ನನಗಾಗಿ ಮೀಸಲಿದ್ದ ಕೊಠಡಿಗೆ ಹಿಂದಿರುಗಿದೆ.

ಸಾಯಂಕಾಲ ಮಲಗುತ್ತಿದ್ದಂತೆ ಯಥಾ ಪ್ರಕಾರ ದೇಹದ ಸ್ಥಿತಿ ಹದಗೆಟ್ಟಿತು ವಾಂತಿ ವಾಂತಿ ಒಂದೇ ಸಮ ನಾಲ್ಕಾರು ಬಾರಿ ವಾಂತಿಯಾಗಿ ಖಾಲಿ ಹೊಟ್ಟೆಗೆ ಬಾಳೆಹಣ್ಣು ತಿಂದು ಊಟ ನಿರಾಕರಿಸಿ ಹಾಗೆ ಮಲಗಿದ್ದಾಯಿತು. ಬೆಳಗ್ಗೆ ಎದ್ದು ಕೆಲಸಕ್ಕೆ ಹಾಜರಾದಾಗ ಎಲ್ಲಾ ಸರಿಯಾಯಿತು.

ಉತ್ತರ ಪತ್ರಿಕೆ ಮೌಲ್ಯಮಾಪನಕ್ಕೆಂದು ಒಮ್ಮೆ ಬೆಳಗಾವಿಗೆ ಹೋಗಿದ್ದೆ ಮೂರು ಜನ ಸೇರಿ ಲಾಡ್ಜಿಂಗ್‌ನ ರೂಮಿನಲ್ಲಿದ್ದೆವು ಆಗಲೇ ಎರಡು ದಿನ ಗತಿಸಿ ಹೋಗಿದ್ದವು. ಹಾಡು ಹೇಳುತ್ತಾ ಜೋಕು ಮಾಡುತ್ತಾ ಪರಸ್ಪರ ತಮ್ಮ ತಮ್ಮ ಅನುಭವವನ್ನು ಹೇಳಿಕೊಳ್ಳುತ್ತಾ ನಗುತ್ತಾ ಕಾಲ ಕಳೆದೆವು.

ಒಂದು ದಿನ ಮಧ್ಯಾಹ್ನ ಊಟ ಮಾಡಿರಲಿಲ್ಲ ಅರ್ಧ ದಿನ ರಜಾ ಇದ್ದದ್ದರಿಂದ ನಮ್ಮ ಪಾಲಿನ ಪೇಪರ್‌ನ್ನು ಬೇಗ ಬೇಗ ಮುಗಿಸಿ ಹೋಟೆಲ್ ಖಾನಾವಾಳಿಗೆ ಹುಡುಕಿಕೊಂಡು ಬೀದಿ ಬೀದಿ ಅಲೆಯುತ್ತ ಹೋದೆವು. ಎಲ್ಲಿಯೂ ಊಟ ಸಿಕ್ಕಲಿಲ್ಲ ಹಸಿವು ಬೇರೆ ಕಿತ್ತು ತಿನ್ನುತಿತ್ತು ಯಾವುದೋ ಒಂದು ಮೂಲೆಯಲ್ಲಿರುವ ಒಂದು ಹೋಟೆಲ್‌ಗೆ ಪ್ರವೇಶ ಮಾಡಬೇಕಾಯಿತು. ಅಲ್ಲಿ ಜನ ಯಾರು ಇರಲಿಲ್ಲ ಮೇಜಿನ ಮೇಲೆಲ್ಲಾ ನೊಣಗಳು ಆಡುತಿದ್ದವು ಮೇಜು ಕ್ಲೀನ್ ಇರಲಿಲ್ಲ ನೋಡಿ ಜಿಗುಪ್ಸೆ ಆದರೂ ಕೂಡ ಸಹಿಸಿಕೊಂಡು ಹೋಟೆಲ್ ನಡೆಸುವ ಒಬ್ಬ ವ್ಯಕ್ತಿ ಫಿಶ್ ಇದೆ ಎಂದು ಹೇಳಿದ. ನನ್ನ ಜೊತೆಯಲ್ಲಿರುವವರಿಗೆ ಫಿಶ್ ಎಂದರೆ ಪ್ರಾಣ ಬೇರೆಡೆಗೆ ಹೋಗಲು ನನ್ನ ಬಿಡಲಿಲ್ಲ ಹಸಿವಾದದ್ದರಿಂದ ಅದನ್ನೇ ಕೊಡಿ ಎಂದು ಹೇಳಿದರು ಫ್ರಿಜ್ನಲ್ಲಿದ್ದ ಫಿಶ್ ಕರ್ರಿ, ಚಪಾತಿ ಕೊಟ್ಟ ಎಲ್ಲವನ್ನೂ ಗಬ ಗಬ ತಿಂದು ಹಣ ತೆತ್ತು ಬಂದೆವು.

ಸಂಜೆಯಾಗುತ್ತಿದ್ದಂತೆ ನನಗೆ ಕೈ ಕಾಲು ನೋವು, ಸುಸ್ತು, ಮತ್ತೆ ನಡುಕ, ಜ್ವರ ಎಲ್ಲಾ ಒಟ್ಟಿಗೆ ಶುರುವಾಯಿತು. ಮುಲುಕುತ್ತಾ ಹೊದಿಕೆ ಹೊದ್ದು ಮಲಗಿದೆ ಸ್ನೇಹಿತರು ಉಪಚರಿಸಿದರು ಅವರ ಉಪಚಾರ ನನಗೆ ಬೇಕಿರಲಿಲ್ಲ ವೈದ್ಯರ ಬಳಿ ಹೋಗೋಣ ಎಂದು ಒತ್ತಾಯ ಮಾಡಿದರು ಮಾತ್ರೆ ತಂದು ಕೊಡಲೆ ಎಂದು ಪೀಡಿಸಿದರು ಬೇಡವೆಂದು ಹೇಳಿ ಸುಮ್ಮನೆ ಹೊದ್ದು ಮಲಗಿದೆ. ರೆಜಿಸ್ಟೆನ್ಸ್ ಪವರ್ ಇಲ್ಲ ಎಂದು ಹೇಳಿದರು. ಇಷ್ಟಕ್ಕೇ ಹೀಗಾಡಿದರೆ ಗತಿ ಏನು ಊರ ಕಡೆ ಯೋಚಿಸಿದರೆ ಗತಿ ಇನ್ನೇನಾಗುತ್ತೆ? ಡ್ಯೂಟಿಗೆ ಬಂದ ಮೇಲೆ ಕೇರ್ ಮಾಡಬಾರದು ಮನೆ ಚಿಂತೆ ತಲೆಗೆ ಹಚ್ಚಿಕೊಳ್ಳಬಾರದು ಅಂತ ಪರಸ್ಪರ ಮೆಲ್ಲಗೆ ಸ್ವಗತವಾಗಿ ಮಾತನಾಡಿಕೊಂಡರು.

ನಾನು ನಿದ್ದೆ ಹೋಗಿರುವನೆಂದು ಅವರು ಭಾವಿಸಿದಂತೆ ಕಾಣುತ್ತದೆ ತಕ್ಷಣ ನಾನು ಹೊದಿಕೆ ತೆಗೆದು ಅಂತೀರಾ, ಮಾಡೋದ್ ಮಾಡಿ ಆ ದರಿದ್ರ ಹೋಟೆಲ್‌ಗೆ ಕರೆದುಕೊಂಡು ಹೋಗಿದ್ದು ಅಲ್ಲದೆ ನಿಮ್ಮಿಂದ ಮಾತು ಕೇಳಬೇಕ ಎಷ್ಟೋ ದಿನದ ಮೀನು ಹಳಸಲಾಗಿತ್ತು ಫಿಶ್ ತಿಂದರೇನೆ ನನಗೆ ಆಗುವುದಿಲ್ಲ ಅಂತಹದರಲ್ಲಿ ತಂಗಳು ತಿನ್ನಿಸಿ ಆರೋಗ್ಯವನ್ನು ಕಡಿಸಿದಿರಿ ಎಂದು ಆರೋಪಿಸಿ ಸಿಟ್ಟು ಮಾಡಿಕೊಂಡೆ ಒಬ್ಬರ ಮುಖ ಒಬ್ಬರು ನೋಡಿಕೊಂಡು ತೆಪ್ಪಗಾದರು. ನಮ್ಮದೇನಿದೆ ತಪ್ಪು? ಜೋರ್ ನೋಡು, ಕೈಲಾಗದವರು ಮೈ ಪರಚಿಕೊಂಡನಂತೆ ಎಂದೆಲ್ಲಾ ಗೇಲಿ ಮಾಡಿದರು, ಮಾತ್ರೆ ತಂದುಕೊಟ್ಟು ಉಪಚರಿಸಿದರು. ರಾತ್ರಿ ಇಡೀ ಎಚ್ಚರವಿದ್ದು ಕಾದರು ಯಾವಾಗ ನಿದ್ದೆ ಬಂದಿತೋ ತಿಳಿಯದು ಬೆಳಗ್ಗೆ ಎಲ್ಲಾ ಸರಿ ಹೋಯಿತು.

ನನ್ನ ಹಳೆಯ ಸ್ನೇಹಿತನೊಬ್ಬ ಹೆಣ್ಣು ಗಂಡಿನ ವಿಚಾರ ಮಾತಾಡೋದು ಇದೆ ನೀವು ಊರಿಗೆ ಬನ್ನಿ ಎಂದು ಫೋನ್ ಮಾಡಿದ, ಬರುತ್ತೇನೆಂದು ಹೇಳಿದೆ ನಾನು ಹೋಗುವಷ್ಟರಲ್ಲಿ ಫಿಶ್ ತಂದು ಅಡುಗೆ ಸಿದ್ಧ ಮಾಡಿದ್ದರು. ಊಟಕ್ಕೆ ಬಡಿಸಿದಾಗ ಅಪರೂಪಕ್ಕೆ ನೀವು ಬರುತ್ತೀರೆಂದು ಮಟನ್ ಮಾರ್ಕೇಟಿಗೆ ಹೋಗಿದ್ದೆ ಅಲ್ಲಿ ಆಗ ತಾನೇ ಒಳ್ಳೆಯ ಫಿಶ್ ಬಂದಿತ್ತು ಅದನ್ನೇ ತಂದಿದ್ದೇನೆ ತುಂಬಾ ಚೆನ್ನಾಗಿದೆ ಎಂದು ಹೊಗಳುತ್ತಾ ಅಣಿ ಮಾಡಿದರು. ನಾನು ನಿರಾಕರಿಸಲಾಗದೆ ಊಟ ಬೇಡ ಅಂದರೆ ಅವರಿಗೆ ಮತ್ತೆ ಬೇರೆ ಅಡುಗೆ ಮಾಡಬೇಕಾಗುತ್ತದೆ ಅವರಿಗೆ ಬೇರೆ ಕೆಲಸ ಕೊಡುವುದು ನನಗೆ ಇಷ್ಟವಿರಲಿಲ್ಲ ಬೇಡವೆನ್ನಲಾರದೇ ಅದನ್ನೇ ಊಟ ಮಾಡಿದೆ.

ಕೆಲ ಗಳಿಗೆ ಕಳೆದ ಮೇಲೆ ಗಂಟಲ ಕಡಿತ ತೀವ್ರವಾಯಿತು, ಮೈಯೆಲ್ಲಾ ಬೆವೆತು ನಿಶ್ಯಕ್ತಿಯಾಗಿ ತಲೆನೋವು ಉಲ್ಬಣಗೊಂಡಿತು ಮತ್ತೆ ವಾಂತಿಯ ಮುನ್ಸೂಚನೆ ತಲೆದೋರಿ ಮಾತುಗಳೆ ಮರೆತುಹೋದವು. ಇದ್ದಕ್ಕಿದ್ದಂತೆ ವಾಂತಿಯೂ ಆಯಿತು. ಮಿತ್ರ ಮತ್ತು ಆತನ ಕುಟುಂಬದವರೆಲ್ಲಾ ಆತಂಕ ಪಟ್ಟುಕೊಂಡರು ಯಾಕೆ ಏನಾಗಿದೆ ಎಂದೆಲ್ಲಾ ಪ್ರಶ್ನೆಗಳ ಮಳೆಗರೆದು ನನ್ನನ್ನು ಪೆಚ್ಚಾಗುವಂತೆ ಮಾಡಿದರು. ಅವರನ್ನು

ಸಮಾಧಾನಪಡಿಸುವುದಿರಲಿ, ನನಗೆ ನಾನೇ ಪರಿಹಾರ ಕಂಡುಕೊಳ್ಳಲು ಸಾಕು ಸಾಕಾಗಿ ಹೋಯಿತು. ಅವರು ಪೀಡಿಸುವುದು ಅತಿಯಾಯಿತು ನಾನು ಮಾತನಾಡದಿರುವ ಸೂಚನೆ ಕಂಡು ಅವರೇ ಸುಮ್ಮನಾಗಬೇಕಾಯಿತು.

ಆ ವರನ ವಿಷಯವಾಗಿ ಏನು ಹೇಳಿದರೋ ಒಂದೂ ತಿಳಿಯಲಿಲ್ಲ ಬಂದ ದಾರಿಗೆ ಸುಂಕವಿಲ್ಲೆಂದು ಸುಮ್ಮನೆ ಊರ ಹಾದಿ ಹಿಡಿದೆ.

ಆ ದಿನವೇ ವೈದ್ಯರ ಬಳಿ ತೋರಿಸಿ ಕಾರಣ ವಿವರಿಸಿದೆ ದೇಹ ಪರೀಕ್ಷಿಸಿ ಸಲಹೆ ನೀಡಿದರು. ಕಾಯಿಲೆ ಉಪಶಮನವಾಗುವಂತೆ ಚುಚ್ಚುಮದ್ದು ಮಾತ್ರೆಗಳನ್ನು ಕೊಟ್ಟರು. ನೀವು ಮೀನು ತಿನ್ನುವುದು ಬಿಡಿ ನಿಮ್ಮ ದೇಹಕ್ಕೆ ಅದು ಒಗ್ಗುವುದಿಲ್ಲ ಈಗ ಪರಿಸರ ಬಹಳ ಕೆಟ್ಟು ಹೋಗಿದೆ ಅದನ್ನು ಸರಿ ಪಡಿಸಲು ಸಾಧ್ಯವಿಲ್ಲ. ಶುಭ್ರವಾದ ಮೀನು ಸಿಕ್ಕುವುದು ದುರ್ಲಬ ಎಂದೆಲ್ಲಾ ಸಲಹೆ ನೀಡಿದರು. ಅವರ ಮಾತಿನಂತೆ ಈಗ ಮೀನು ತಿನ್ನುವುದನ್ನು ನಿಲ್ಲಿಸಿದ್ದೇನೆ.

ಮೊನ್ನೆ ಕನಕಪುರಕ್ಕೆ ಹೋದಾಗ ಸಹ ಉದ್ಯೋಗಿಗಳೆಲ್ಲ ಮುತ್ತತ್ತಿಗೆ ಹೋಗೋಣ ಅದು ಸುಂದರ ತಾಣ ಅನೇಕ ಯಾತ್ರಿಕರು ಅದನ್ನು ನೋಡಬೇಕೆಂದು ಬರುತ್ತಾರೆ, ನದಿಗಳು ಸೇರುವ ಸಂಗಮ ಸ್ಥಳ ಎಂದೆಲ್ಲಾ ಬಣ್ಣಿಸಿದರು. ಅಲ್ಲಿ ಒಳ್ಳೆಯ ಫಿಶ್ ಸಿಗುತ್ತದೆ ಅದಕ್ಕೆಂದೇ ನೋಡಲು ಬಂದ ಪ್ರವಾಸಿಗರಿಗೆ ಪ್ರಸಿದ್ಧಿಯಾಗಿದೆ. ಅದಕ್ಕಾಗಿ ಪ್ರೇಕ್ಷಕರು ಅಲ್ಲಿಗೆ ಬಂದು ಅತಿಥಿ ಗೃಹದಲ್ಲಿ ತಂಗಿದ್ದು ಮೀನು ತಿಂದು ಬಹು ದಿನದ ಆಸೆ ಪೂರೈಸಿಕೊಳ್ಳುತ್ತಾರೆ. ಅಲ್ಲಿಗೆ ಹೋಗೋಣ ಎಂದು ಹೇಳಿದರು ನಾನು ಈ ಒಂದು ಕಾರಣಕ್ಕಾಗಿ ಹೋಗುವುದನ್ನು ನಿರಾಕರಿಸಿದೆ. (ವೈದ್ಯರ ನೆಪಾಗಿ)

ನೀರಲ್ಲಿ ಕರಗಿದ ಆಮ್ಲಜನಕ ಉಸಿರಾಡುವುದರಿಂದ ಕಿವಿರುಗಳಲ್ಲಿ ಸೇರಿದ ಕೊಳೆ ನೀರು ಕಲುಷಿತ ನೀರು ಮೀನಿನ ತಲೆಯಲ್ಲಿ ಶೇಖರಣೆಯಾಗುತ್ತದೆ ಅನ್ನುವುದು ನನ್ನ ಅನಿಸಿಕೆ ಮೇಲೆ ತೊಳೆದು ಸ್ವಚ್ಛ ಮಾಡುತ್ತೇವೆ ಅಷ್ಟೇ, ಕೆರೆಗಳು ರೋಗದ ತಾಣಗಳಾಗಿವೆ ನೀರು ಬಗ್ಗಡವಾಗಿ ಊರ ಕೊಳೆಯೆಲ್ಲಾ ಸೇರಿ ಮಲಿನವಾಗುತ್ತದೆ.

ಕೊಳೆ ಬಟ್ಟೆಗೆ ಹಚ್ಚಿದ ಸೋಪು ಡಿಟರ್ಜೆಂಟ್ ಸೋಪ್ ಎಲ್ಲಾ ನೀರು ಪಾಲಾಗುತ್ತದೆ. ಪರಿಸ್ಥಿತಿ ತೀರಾ ಹದಗೆಟ್ಟಿದೆ ಮೊದಲಿನಂತೆ ಇಲ್ಲ ಎಲ್ಲಾ ಕ್ಷೇತ್ರದಲ್ಲೂ ಬದಲಾವಣೆ ಕಂಡುಬರುತ್ತದೆ.

ಕಾರ್ಖಾನೆಗಳಿಂದ ಬಿಡುವ ಅನುಪಯುಕ್ತ ವಸ್ತುಗಳು, ಕಸಕಡ್ಡಿ, ಗ್ರೀಸ್, ಎಣ್ಣೆ, ರಂಜಕ, ಇಂಗಾಲ, ಪಾದರಸ, ಇಂತಹ ರಾಸಾಯನಿಕಗಳು ನೀರು ಪಾಲಾಗಿ

ಜಲಾಶಯಗಳಲ್ಲಿ ತುಂಬಿಕೊಳ್ಳುತ್ತವೆ, ಆಗ ಅವೆಲ್ಲಾ ತಮ್ಮ ಮೂಲ ಶುಭ್ರತೆಯನ್ನು ಕಳೆದುಕೊಂಡು ಕೊಚ್ಚೆ ನೀರಾಗಿ ಹರಿಯುತ್ತವೆ. ಅಂತಹದರಲ್ಲಿ ವಾಸಿಸುವ ಮೀನು ಜೀವಿಸುವುದೇ ಕಷ್ಟಕರ ಅದನ್ನು ತಿನ್ನುವ ಜನ ಒಗ್ಗಿಸಿಕೊಳ್ಳುವುದು ಹೇಗೆ ಸಾಧ್ಯ?. ಎಂದು ವೈದ್ಯರು ಸಲಹೆ ನೀಡಿದ್ದರು. ಇದನ್ನು ಯೋಚಿಸಿದಾಗ ವಾಕರಿಕೆ ಬಾರದೇ ಇರುತ್ತದೆಯೇ ಒಟ್ಟಿನಲ್ಲಿ ನನಗೆ ಮೀನು ಎಂದರೆ ಅಲರ್ಜಿ. ಯಾರು ತಿನ್ನುತ್ತಾರೋ ಬಿಡುತ್ತಾರೋ ನನಗಂತೂ ಮೀನು ಅಂದರೆ ಆಗುವುದಿಲ್ಲ.

**– ನಾಗೇಂದ್ರಪ್ಪ ದಾಗಿನಕಟ್ಟೆ**
ಸಂಕ್ರಮಣ ವಿಶೇಷಾಂಕ 2014

# ಊದೋ ಶಂಖ!

ಹೂವಳ್ಳಿಯಲ್ಲಿ ಕೃಷ್ಣಾಷ್ಟಮಿ! ಪೂಜೆ ಚೆನ್ನಾಗಿ ನಡೆಯುತ್ತಿದೆ. "ಈಗ ಮಂಗಳಾರತಿ, ಎಲ್ಲ ಎದ್ದು ನಿಲ್ಲಿ" ಗಂಗಜ್ಜಿ ಅಣತಿ ಇತ್ತಿದ್ದಾಳೆ. "ಗೋಪಿ, ನೀನು ಜಾಗಟೆ ಬಡಿ" ರಾಧತ್ತೆಯ ಸೂಚನೆ. 'ಹುಂ, ಈಗ ಶಂಖ ಊದುವವರು ಯಾರು?, ಅದಕ್ಕೆ ಚಿಕ್ಕಪ್ಪನೇ ಸರಿ' ಆಯ್ತು, ಚಿಕ್ಕಪ್ಪ ಬಂದರು. ಗಟ್ಟಿಯಾಗಿ ಶಂಖ ಊದಿದರು. ಚಿಕ್ಕಪ್ಪನ ಉಬ್ಬಿದ ಗಲ್ಲ, ವಿಚಿತ್ರವಾಗಿ ಕಾಣುತ್ತಿದ್ದ ಮುಖ ನೋಡಿ ನಾವು ಮಕ್ಕಳೆಲ್ಲಾ ನಕ್ಕೆವು. "ನಾನು, ನಾನು" ಎನ್ನುತ್ತ ಚಿಕ್ಕಪ್ಪನಿಂದ ಶಂಖ ಪಡೆದು ಊದಲು ಪ್ರಯತ್ನಿಸಿ, ನಾನಾ ರೀತಿ ಸ್ವರ ಹೊರಡಿಸಿ ನಕ್ಕು, ನಕ್ಕು ಸುಸ್ತಾಗಿತ್ತು. 'ಇನ್ನು ಸಾಕು' ಅಜ್ಜ ಹೇಳುತ್ತಿದ್ದಂತೆ, ಪ್ರಸಾದ ಪಡೆಯಲು ಮಕ್ಕಳು ಕಾತುರರಾಗಿದ್ದೆವು.

ಇದು ಪ್ರತಿ ಬಾರಿ, ಪ್ರತಿ ಹಬ್ಬ, ಪೂಜೆಯಲ್ಲಿ ಅಜ್ಜನ ಮನೆಯಲ್ಲಿ ಕಾಣುತ್ತಿದ್ದ ದೃಶ್ಯವಾಗಿತ್ತು. ಈಗಲೂ, ಐದು ದಶಕಗಳ ನಂತರವೂ ಅದೆಲ್ಲವನ್ನೂ ನೆನಪಿಸುತ್ತ, ಮೂಕ ಸಾಕ್ಷಿಯಂತೆ ಮಾಸಲು ಬಣ್ಣದ ಶಂಖ ನಮ್ಮ ಮನೆ ದೇವರ ಎದುರು ಕುಳಿತಿದೆ. ಅಜ್ಜಿ, ತಾನು ಸಾಯುವ ಕೆಲವು ತಿಂಗಳ ಮೊದಲು ನಮಗೆ ನೀಡಿದ ಪವಿತ್ರ ವಸ್ತುಗಳಲ್ಲಿ ಈ ಶಂಖವೂ ಒಂದು. 'ಶಂಖ' ಅಂದರೆ ಅಜ್ಜಿ ಹೇಳುತ್ತಿದ್ದ ಶಂಖದ ಕುರಿತಾದ ಹಲವು ಸಂಗತಿಗಳು ನೆನಪಾಗಿ ಬಿಡುತ್ತದೆ. ಮಲೆನಾಡಿನ ಹಳ್ಳಿಗಳಲ್ಲಿ 'ಶಂಖ' ಊದುವುದಕ್ಕೆ ಹಲವಾರು ಅರ್ಥಗಳಿವೆ. ಮಧ್ಯಾಹ್ನ ಮತ್ತು ಮೂರು ಸಂಜೆ ವೇಳೆ ದೇವರ ಪೂಜೆ ವೇಳೆಗೆ ಶಂಖ ಊದುತ್ತಾರೆ. ದೂರದಲ್ಲಿರುವ ಬೇರೆ ಮನೆಗಳಿಗೆ ಇವರ ಮನೆ ಪೂಜೆ ಆಯಿತು ಅಂತ ಗೊತ್ತಾಗುತ್ತಿತ್ತು. ಅಲ್ಲದೇ ವಿವಿಧ ಪೂಜೆ, ಹಬ್ಬಗಳಲ್ಲೂ ಘಂಟಾನಾದದ ಜೊತೆ ಶಂಖನಾದವೂ ಇರಬೇಕಾಗಿತ್ತು. ಈ ಸಂದರ್ಭಗಳಲ್ಲಿ ಅದು ಮಂಗಳ ಸೂಚಕವಾಗಿರುತ್ತಿತ್ತು.

ಅದೇ ವೇಳೆಯಲ್ಲಿ ಯಾರ ಮನೆಯಲ್ಲಾದರೂ ಶಂಖ ಊದಿದರೆ ಅದು ಅಮಂಗಳ ಎನಿಸುತ್ತಿತ್ತು. ಮಲೆನಾಡಿನಲ್ಲಿ ಒಂಟಿ ಮನೆಗಳಲ್ಲಿ ಸಾವು ಸಂಭವಿಸಿದರೆ ಅದನ್ನು ದೂರದ ಮನೆಗಳಿಗೆ ತಿಳಿಸಲು 'ಶಂಖ' ಊದುವ ರೂಢಿ ಇತ್ತು.

ಅಜ್ಜನ ಮನೆಯಲ್ಲಿ ಬಾಲ್ಯದಲ್ಲಿ ಆಡುತ್ತಿರುವಾಗ ಒಮ್ಮೊಮ್ಮೆ ಯಾರದ್ದಾದರೂ ಕಿವಿಯಲ್ಲಿ ಒಂದು ತರಾ ಗುಂಯ್ ಅಂತ ಸಪ್ಪಳವಾಯ್ತು ಅಂದರೆ 'ವೈಕುಂಠ ದಲ್ಲಿ ಪೂಜೆಯಾಗುತ್ತಿದೆ" ಅಂತ ನಿಂತಲ್ಲೇ ದೇವರಿಗೆ ಕೈಮುಗಿಯುತ್ತಿದ್ದರು. ಎಷ್ಟೋ ಸಂದರ್ಭಗಳಲ್ಲಿ 'ಶಂಖ' ಎನ್ನುವ ಮಾತು ಬಂದೇ ಬರುತ್ತಿತ್ತು.

'ಶಂಖ' ಸಮುದ್ರದಲ್ಲಿರುವ ಒಂದು ಜಾತಿಯ ಜಲಚರ ಪ್ರಾಣಿಯ ಚಿಪ್ಪು.

ಭಾರತೀಯರಿಗೆ ಅದು ಕೇವಲ ಚಿಪ್ಪು ಅಲ್ಲ. ಅದರ ಸುತ್ತಲೂ ಅದೆಷ್ಟೋ ಕತೆಗಳು, ಪುರಾಣಗಳು ಇವೆ. ಶಂಖಕ್ಕೆ ಅದ್ಭುತವಾದ ಮಹಿಮೆ ಇದೆಯೆಂದು ಆಸ್ತಿಕರು ನಂಬುತ್ತಾರೆ. ಶಂಖನಾದ ಇಂಪಾಗಿದ್ದು, ಅದು ಅಲಕ್ಷ್ಮಿಯನ್ನು ದೂರ ಮಾಡುತ್ತದೆ ಎನ್ನುತ್ತಾರೆ.

ಹಳ್ಳಿಯ ಮನೆ ಮುಂದೆ ದೀಪ, ಶಂಖ ಹಿಡಿದು ದಾಸಯ್ಯ ಬಂದು ನಿಂತರೆ ಮನೆಯವರಿಗೆ ಸಾಕ್ಷಾತ್ ತಿರುಪತಿ ತಿಮ್ಮಪ್ಪ ಬಂದಷ್ಟೇ ಸಂತೋಷ. ಅವನು ಶಂಖ ಊದಿದರೆ ಶುಭ ಎಂಬ ನಂಬಿಕೆ. ಅವನ ದೀಪಕ್ಕೆ ಎಣ್ಣೆ ಹಾಕಿ, ಅವನ ಜೋಳಿಗೆಗೆ ಅಕ್ಕಿ ಸುರಿದು ಭಕ್ತಿಯಿಂದ ಕೈ ಮುಗಿಯುತ್ತಿದ್ದರು. ಆದರೆ ಯಾವಾಗಲೂ ಹೀಗೆ ಎನ್ನುವಂತರಲಿಲ್ಲ. ಮಕ್ಕಳು–ಮನೆ ಕೆಲಸದಲ್ಲಿ ಮಗ್ನಳಾದಾಗ ಗೃಹಿಣಿ ದಾಸಯ್ಯನನ್ನು ಮುಂದೆ ಹೋಗು ಎನ್ನುವುದೂ ಇತ್ತು. ಮತ್ತೆ 'ಇಕ್ಕಲಾರೆ ಕೈ ಎಂಜಲು' ಎಂದು ಪುರಂದರದಾಸರು ಕೀರ್ತನೆ ಧರಿಸಿದ್ದು ಸುಮ್ಮನೆ ಅಲ್ಲ ತಾನೆ?

ಅಜ್ಜನ ಮನೆಗೆ ದಾಸಯ್ಯ ಬಂದು ಹೋದ ಮೇಲೆ ಅಜ್ಜಿ ಶಂಖದ ಕುರಿತಾದ ಕತೆ ಹೇಳುತ್ತಿದ್ದಳು. ಶ್ರೀಕೃಷ್ಣ ಪರಮಾತ್ಮ 'ಪಂಚಜನ' ಎಂಬ ರಾಕ್ಷಸನನ್ನು ಸಂಹರಿಸಿದ್ದು, ಅವನಲ್ಲಿದ್ದ ಶಂಖ ಪಡೆದದ್ದು ಅದಕ್ಕೆ ಆ ಶಂಖಕ್ಕೆ ಪಾಂಚಜನ್ಯ ಎಂಬ ಹೆಸರಂತೆ! ಬಾಲ್ಯದಲ್ಲಿ ಆ ಕತೆಯನ್ನು ಮುಗ್ಧತೆಯಿಂದ ಒಪ್ಪಿಕೊಳ್ಳುತ್ತಿದ್ದೆವು. ಈಗ ಅನಿಸುತ್ತಿದೆ, ಶ್ರೀಕೃಷ್ಣ ಕ್ರೂರವಾದ ಜಲಚರವೊಂದನ್ನು ಕೊಂದು ಸಮುದ್ರ ತಳದಿಂದ ಈ ಶಂಖ ಪಡೆದಿರಬಹುದೆಂದು. ಏನೇ ಆದರೂ ಶ್ರೀಕೃಷ್ಣ ತನ್ನ ಪಾಂಚಜನ್ಯ ಊದಿದನೆಂದರೆ ಭಕ್ತರಿಗೆ ಅಭಯ, ವೈರಿಗಳಿಗೆ ಎದೆ ನಡುಕ ಬರುತ್ತಿದ್ದುದು ಮಾತ್ರ ನಿಜ.

ಹಾಗೆ ಅಡಿಗೆ ಮನೆಗೆ ಬಂದರೆ ಅಜ್ಜಿ ಒಗಟು ಹಾಕುತ್ತಿದ್ದಳು. "ಅಡ್ಡ ಕೊಯ್ದರೆ ಚಕ್ರ, ಉದ್ದ ಕೊಯ್ದರೆ ಶಂಖ ಏನದು?". ನಾವು ತಲೆ ಕೆಡಿಸಿಕೊಂಡು ಏನೇನೋ ಉತ್ತರ ಕೊಟ್ಟಾಗ ಅಜ್ಜಿ, ಒಂದು ಈರುಳ್ಳಿ ಅಡ್ಡ ಕೊಯ್ದು, ಉದ್ದ ಕೊಯ್ದು ತೋರಿಸುತ್ತಿದ್ದಳು.

ಕೆಲವು ಸಲ ಅಣ್ಣ ಹೇಳಿಕೊಟ್ಟ ಶಾಲೆಯ ಪಾಠವನ್ನು ನಾವು ಒಪ್ಪುತ್ತಿರಲಿಲ್ಲ. ಮರುದಿನ ಶಾಲೆಯ ಗುರುಗಳು ಅಣ್ಣ ಹೇಳಿದ ಹಾಗೇ ಪಾಠ ಮಾಡಿದಾಗ ಒಪ್ಪುತ್ತಿದ್ದೆವು. ಮನೆಗೆ ಬಂದು ಹೇಳಿದಾಗ "ಹುಂ ಅದು ಹಾಗೆ, ಶಂಖದಿಂದ ಬಂದರೇನೇ ತೀರ್ಥ" ಎನ್ನುತ್ತಿದ್ದಳು ಅಮ್ಮ. ಯಾಕೆ ಅಂತ ಗೊತ್ತಾ? ದೇವರ ಪೂಜೆ ವೇಳೆಗೆ ದೇವರಿಗೆ ಶಂಖದಲ್ಲಿ ತುಂಬಿದ ನೀರಿನಿಂದ ಅಭಿಷೇಕ ಮಾಡಿ ಆ ನೀರನ್ನೇ ತೀರ್ಥ ಎಂದು ಭಯಭಕ್ತಿಯಿಂದ ಕುಡಿಯುತ್ತೇವೆ ಅಲ್ಲವೇ, ನೀರು ಶಂಖದಿಂದ ಬಂದಾಗ ಪವಿತ್ರ ತೀರ್ಥ ಎನಿಸಿಕೊಳ್ಳುತ್ತದೆ ತಾನೆ?

ಒಂದೊಂದು ಸಲ ಅಜ್ಜ ಊರವರಿಗೆ ಹಿತವಾದ ಹೇಳುತ್ತಿದ್ದರು. ಆದರೆ ಪ್ರತಿ ಬಾರಿ ಅಜ್ಜನ ಮಾತನ್ನು ಎಲ್ಲರೂ ಕೇಳುತ್ತಿರಲಿಲ್ಲ. 'ನಿಮಗ್ಯಾಕೆ ಬೇರೆಯವರ ಉಸಾಬರಿ?' ಅಂತ ಅಜ್ಜಿ ಬೇಸರ ಪಟ್ಟುಕೊಳ್ಳುತ್ತಿದ್ದರು. "ಏನು ಮಾಡುವುದು? ನಾನು ಊದೋ ಶಂಖ ಊದಿ ಬಿಡುತ್ತೇನೆ, ಕೇಳುವುದು ಬಿಡುವುದು ಅವರಿಗೆ ಸೇರಿದ ವಿಷಯ" ಎನ್ನುತ್ತಿದ್ದರು. ಪುಟ್ಟ ಮಕ್ಕಳಾದ ನಮಗೆ ಅಜ್ಜ ಯಾವಾಗ ಶಂಖ ಊದಿದರು ಅಂತ ಅರ್ಥವಾಗುತ್ತಿರಲಿಲ್ಲ. ಕೊನೆಗೆ ಅಜ್ಜಿ ಹೇಳುತ್ತಿದ್ದರು, ಊದೋ ಶಂಖ ಅಂದರೆ ಇಲ್ಲಿ ಕರ್ತವ್ಯ ಮಾಡುತ್ತೇನೆ ಅಂತ ಅರ್ಥ ಎಂದು ವಿವರಿಸುತ್ತಿದ್ದರು. ಅದೇ ಶಂಖ ಹೊಡೆದುಕೊಳ್ಳುವುದು ಅಂದರೆ ಬೇರೆಯದೇ ಅರ್ಥವಾಗುತ್ತಿತ್ತು. ಉಪದೇಶ, ಪ್ರಯತ್ನ ವ್ಯರ್ಥವಾದಾಗ ಈ ಮಾತು ಬಳಸುತ್ತಿದ್ದರು.

ಒಂದು ಸಲ ಅಜ್ಜನ ಮನೆಗೆ ಬಂದ ಗಂಗಜ್ಜಿ ಒಂದು ಒಗಟು ಹಾಕಿದ್ದರು. 'ಅಂಕು ಡೊಂಕು ಶಂಖ ಪಾಲ, ಪಾತಾಳ ಬಾವಿ ಬಗ್ಗಿ ನೋಡಿದರೆ ಹನಿ ನೀರಿಲ್ಲ' ಉತ್ತರ ಹೇಳಲಾಗದೇ ನಾವು ಸೋತಾಗ ತನ್ನ ಕಿವಿ ತೋರಿಸಿ, "ನೋಡಿ ಮಕ್ಕಳೇ ಶಂಖದ ಹಾಗೆ ನಮ್ಮ ಕಿವಿ ಇದೆಯಲ್ಲವೇ? ಕಿವಿಯೊಳಗೆ ಬಗ್ಗಿ ನೋಡಿದರೆ ನೀರು ಕಾಣದ ಬಾವಿಯ ಹಾಗಿದೆ ಅಲ್ಲವೇ? ಎಂದಾಗ "ಹೌದಲ್ಲ" ಎನಿಸುತ್ತಿತ್ತು.

ಅಂಗಳಕ್ಕೆ ಬಂದರೆ ನೀಲಿ–ಬಿಳಿ ಹೂಗಳನ್ನು ಬಿಡುವ ಶಂಖಪುಷ್ಪದ ಬಳ್ಳಿ ಹೂಗಳಿಂದ ನಲಿಯುತ್ತಿತ್ತು. ಈ ಪ್ರಕೃತಿ ಅದೆಷ್ಟು ವೈಚಿತ್ರ್ಯಗಳನ್ನು ತೋರಿ ನಮ್ಮನ್ನು ಮೂಕವಿಸ್ಮಿತಳನ್ನಾಗಿ ಮಾಡುತ್ತಾಳೋ ಏನೋ? ಈ ಮೃದುವಾದ ಸುಂದರ ಹೂಗಳ ಆಕಾರವು ಶಂಖವನ್ನು ಹೋಲುತ್ತಿತ್ತು!.

ಇದೆಲ್ಲಾ ಬಾಲ್ಯ ಕಾಲದ ನೆನಪಿನ ಬುತ್ತಿಯಾಯ್ತು. ಮಧ್ಯ ವಯಸ್ಸಿನಲ್ಲಿ ಪತಿಯೊಡನೆ ಮನೋವೈದ್ಯಕೀಯ ಸಮ್ಮೇಳನಕ್ಕೆ ಓಡಿಶಾಕ್ಕೆ ಹೋಗಿದ್ದೆ. ಅಲ್ಲೊಂದು ಮನರಂಜನಾ ಕಾರ್ಯಕ್ರಮ. ಅಲ್ಲಿಯ ಜನರಿಗೆ ಜಗನ್ನಾಥನೇ ಆರಾಧ್ಯ ದೈವ. ಅವನ ಶಂಖ ಅತ್ಯಂತ ಪವಿತ್ರ ವಸ್ತು. ವೇದಿಕೆಯ ಎರಡೂ ಬದಿಗೆ ಶಂಖ–ಚಕ್ರಗಳಿಂದ ಅಲಂಕೃತವಾಗಿತ್ತು. ಪುರಿಯ ಜಗನ್ನಾಥನು ಅವರೆಲ್ಲರ ಆರಾಧ್ಯ ದೈವ. ಶಂಖವೆಂದರೆ ಅವನನ್ನು ನೆನೆಸಿಕೊಳ್ಳುವ ಪವಿತ್ರ ವಸ್ತು ತಾನೆ?

ಆ ಕಾರ್ಯಕ್ರಮದಲ್ಲಿ ಶಂಖ ಊದುವುದೇ ಮನರಂಜನಾ ಕಾರ್ಯಕ್ರಮ. ಕಲಾವಿದರು ಏಕಾಂಗಿಯಾಗಿ, ಸಾಮೂಹಿಕವಾಗಿ ಶಂಖದಿಂದ ನಾನಾ ರೀತಿಯ ಮಧುರನಾದ ಹೊರಡಿಸುತ್ತಾ ನರ್ತಿಸಿದರು. ಒಬ್ಬ ಕಲಾವಿದರಂತೂ ನಾನಾ ಭಂಗಿಗಳಲ್ಲಿ ಎರಡೆರಡು ಶಂಖಗಳನ್ನು ಏಕಕಾಲದಲ್ಲಿ ಊದುತ್ತಿದ್ದರು.

ಅಲ್ಲಿಂದ ಬಂದ ಮೇಲೆ ನಮ್ಮೂರ ಸಂಘವೊಂದರಲ್ಲಿ ಶಂಖ ಊದುವ ಸ್ಪರ್ಧೆ ಏರ್ಪಡಿಸಿದ್ದೆ. ಹಿರಿಯರು ಚೆನ್ನಾಗಿ ಶಂಖ ಊದಿದ್ದರು. ಯುವಜನರು ಸೋತಿದ್ದರು.

ದಿನಾ ಮನೆಯಲ್ಲಿ ದೇವರ ಮುಂದೆ ಮಧ್ಯಾಹ್ನ, ಮೂರು ಸಂಜೆ ವೇಳೆ ಶಂಖ ಊದುವುದರಿಂದ ಸಂಪ್ರದಾಯವೊಂದನ್ನು ಪಾಲಿಸಿದ  ತೃಪ್ತಿ, ಪ್ರಾಣಾಯಾಮ ಮಾಡಿದ ಲಾಭ ಸಿಗುತ್ತದೆ. ಹಳ್ಳಿಗರು ಶಂಖ ಊದುವುದರಿಂದ ಭೂತ–ಪ್ರೇತ–ಪಿಶಾಚಿ ಬಾಧೆ ಇರುವುದಿಲ್ಲ ಎಂದು ನಂಬುತ್ತಿದ್ದರು. ನಾವು ಇದೊಂದು ರೀತಿ ದುಷ್ಟರಿಂದ–ಕಳ್ಳರಿಂದ ರಕ್ಷಿಸುವ ಸಾಧನ ಎಂದು ಭಾವಿಸಿ ದಿನಾ ಶಂಖ ಊದೋಣ. ನಾನಂತೂ ಊದೋ ಶಂಖ ಊದಿದ್ದೇನೆ, ಉಳಿದದ್ದು ನಿಮಗೆ ಬಿಟ್ಟ ವಿಚಾರ!

**ವಿಜಯಾ ಶ್ರೀಧರ್**

ಉದಯವಾಣಿ 2 ಮಾರ್ಚ್ 2014

# ಗೋಲ್ಗಪ್ಪ ಗೋಪುರದ ಸುತ್ತ...

ಚುಮುಚುಮು ಚಳಿಯ ದಿನಗಳು ಮುಗಿದು ಇನ್ನೇನು ಹಬೆಹಬೆ ಸೆಖೆಯ ದಿನಗಳು ಶುರುವಾಗುತ್ತಿವೆ. ವಾರವಿಡೀ ದುಡಿದ ನಾಗರೀಕರಿಗೆ ಭಾನುವಾರವೊಂದು ಬಿಡುವಿನ ದಿನ. ಕೆಲವರಿಗೆ ಶನಿವಾರವೂ. ಬೆಳಗಿನಿಂದ ಸಂಜೆಯವರೆಗೆ ಹೆಂಡತಿ–ಮಕ್ಕಳೊಂದಿಗೆ ಸೋಮಾರಿತನದಲ್ಲಿ ಕಳೆದ ನಾಗರೀಕ, ಸಂಜೆಯ ಹೊತ್ತಿಗೆ ಮುಂದಿನ ವಾರಕ್ಕೆ ಮನೆಗೆ ಬೇಕಾಗುವ ಸಾಮಗ್ರಿಗಳನ್ನು ತರಲು ಹೊರ ಹೊರಡುತ್ತಾನೆ. ಹಾಗೇನು ಸಾಮಗ್ರಿಗಳನ್ನು ತರಲೇ ಹೋಗಬೇಕೆಂದಿಲ್ಲ, 'ಶಾಪಿಂಗ್' ಎಂಬ ನೆಪ ಹೇಳಿಕೊಂಡು ಹೊರಟರೆ ಮಾಲುಗಳಲ್ಲಿ, ಥಳಥಳ ಹೊಳೆವ ಶೋರೂಮುಗಳಲ್ಲಿ, ಪಕ್ಕದಂಗಡಿಗಳಲ್ಲಿ, ಅಷ್ಟೇ ಏಕೆ, ರಸ್ತೆ ಬದಿಗಳಲ್ಲೂ ಕೊಳ್ಳಲು ಬೇಕಾದ್ದು–ಬೇಡವಾದ್ದು ಸಾಕಷ್ಟಿದೆ ನಾಗರೀಕನಿಗೆ. ಹಾಗೆ ಹೊರಟವ ಸಂಜೆ ಬಿಸಿಲಿಗೆ ದಣಿದಿದ್ದಾನೆ. ಅವನಿಗೆ ಏನಾದರೂ ತಿನ್ನಬೇಕು. ತಣ್ಣಗೆ ಕುಡಿಯಬೇಕು. ಹಾಗಂತ ತೀರಾ ಹಸಿವಾದರೆ ಹೋಟೆಲಿಗೆ ಹೋಗಬಹುದಿತ್ತು. ಬಾಯಾರಿದರೆ ಜ್ಯೂಸ್ ಸೆಂಟರುಗಳು ತಮ್ಮ ಹಣ್ಣಿನ ಕಣ್ಣುಗಳಿಂದಲೇ ಕರೆಯುತ್ತವೆ. ಆದರೆ ತೀವ್ರ ಹಸಿವೂ–ಬಾಯಾರಿಕೆಯೂ ಆಗದವನಿಗೆ ಒಂದು ನಿಮಿಷ ನಿಂತು ದಣಿವಾರಿಸಿಕೊಳ್ಳುವಾಗ ಬಾಯಾಡಲು ಏನಾದರೂ ಬೇಕೆಂದು ಹುಡುಕುತ್ತಿದ್ದಾಗ ಕಾಣುವವನೆಂದರೆ, ಗೋಲ್ಗಪ್ಪ ಮಾರುವವನು.

ಈತ ನಮ್ಮ–ನಿಮ್ಮಂತೆಯೇ ಒಂದು ಹಳೇ ಶರ್ಟು–ಪ್ಯಾಂಟು ತೊಟ್ಟಿದ್ದಾನೆ. ತನ್ನೆದುರು ಇಷ್ಟೆತ್ತರದ ಸ್ಟೂಲಿನಂತಹ ಒಂದು ಬೆತ್ತದ ಸ್ಟಾಂಡ್ ಇಟ್ಟುಕೊಂಡಿದ್ದಾನೆ. ಅದರ ಮೇಲೆ ಒಂದು ಬುಟ್ಟಿ. ಆ ಬುಟ್ಟಿಯ ತುಂಬ ಪುಟ್ಟ ಪುಟ್ಟ ಪೂರಿಗಳ ಗೋಪುರ. ಸ್ಟಾಂಡಿನಲ್ಲುಳಿದ ಜಾಗದಲ್ಲಿ ಒಂದು ಮಡಿಕೆ ತುಂಬ ಹುಳಿಹುಳಿ ಪಾನಿ. ಒಂದು ಪುಟ್ಟ ದಬರಿಯಲ್ಲಿ ಬೇಯಿಸಿದ ಆಲೂಗಡ್ಡೆ, ಕತ್ತರಿಸಿದ ಈರುಳ್ಳಿ, ಎಸಳು ಕೊತ್ತಂಬರಿ ಸೊಪ್ಪು. ಹಾಗೇ ಪುಟ್ಟ ಬಟ್ಟಲುಗಳಲ್ಲಿ ಬಣ್ಣಬಣ್ಣದ ಪುಡಿಗಳು– ಹುಳಿ, ಉಪ್ಪು, ಖಾರ, ಮಸಾಲೆ. ಉತ್ತರ ಭಾರತದ್ಯಾವುದೋ ಸಣ್ಣ ಶಹರದಿಂದ ಬಂದ ಈ ಅಣ್ಣನಿಗೆ ಕನ್ನಡ ಬಾರದು. ನಿಮಗೆ ಬರುವ ಹರುಕು–ಮುರುಕು ಹಿಂದಿಯಲ್ಲೇ ಎಲ್ಲ ಸಂಭಾಳಿಸಬೇಕು. ದಣಿದ ನಿಮಗೆ, ನಿಮ್ಮ ಬಾಯ್ಚಪಲಕ್ಕೆ ಸರಿಯಾದ ತಿನಿಸು ಈ ಗೋಲ್ಗಪ್ಪ.

ಈ ಪೂರಿಗಳೋ, ಬೆಳಗಿನ ತಿಂಡಿಗೆ ಹೋಟೆಲಿನಲ್ಲಿ ಕೊಡುವ ಪೂರಿಯಷ್ಟು ದೊಡ್ಡವಲ್ಲ. ಮಧ್ಯಾಹ್ನದ ಊಟದ ಜತೆ ಕೊಡುವ ಪೂರಿಯಷ್ಟೂ ದೊಡ್ಡವಲ್ಲ. ಚನ್ನ–ಬಟೂರಕ್ಕೆ ಕೊಡುವಷ್ಟು ಬೃಹತ್ ಗಾತ್ರದವಂತೂ ಅಲ್ಲವೇ ಅಲ್ಲ. ಈ ಪೂರಿಗಳು ಗೋಲ್ಗಪ್ಪಕ್ಕಾಗಿಯೇ ಇಂಚುಪಟ್ಟಿ ಹಿಡಿದು ಅಳತೆ ಮಾಡಿ ಕರಿದವು. ಒಂದು ಪೂರಿ ಸರಿಯಾಗಿ ನಿಮ್ಮ ಬಾಯಿ ತುಂಬಬಲ್ಲದು. ಇವುಗಳನ್ನು ತನ್ನ ಬೆತ್ತದ ಬುಟ್ಟಿಯಲ್ಲಿ ಗೋಪುರದಂತೆ ಜೋಡಿಸಿದ್ದಾನೆ ಈ ಗೋಲ್ಗಪ್ಪದಣ್ಣ. ಈ ಗೋಪುರದಿಂದ ಒಂದೊಂದೇ

ಪೂರಿಯನ್ನು ತೆಗೆಯುವ ಕಲೆ ಅವನಿಗೆ ಮಾತ್ರ ಗೊತ್ತು. ನೀವೇನಾದರೂ ಪ್ರಯತ್ನಿಸಹೊರಟಿರೋ, ಇಡೀ ಪಿರಮಿಡ್ಡೇ ಕಳಚಿ ಬಿದ್ದೀತು. ಈ ಪೂರಿಯ ಒಂದು ಮೈಗೆ ತಟ್ಟಿ ತೂತು ಮಾಡುತ್ತಾನೆ ಗೋಲ್ಗಪ್ಪದಣ್ಣ. ಊಹೂಂ, ನೀವು ಪ್ರಯತ್ನಿಸಬೇಡಿ: ಪೂರ್ತಿ ಪೂರಿ ಒಡೆಯುವುದು ಖಚಿತ! ಇದರೊಳಗೆ ನುರಿದ ಆಲೂ, ಸಣ್ಣಗೆ ಹೆಚ್ಚಿದ ಈರುಳ್ಳಿ, ಇನ್ನೂ ಏನೋ ತುಂಬುತ್ತಾನೆ ಗೋಲ್ಗಪ್ಪದಣ್ಣ. ಈಗ ಆತ ನಿಮ್ಮ ಕೈಗೊಂದು ಎಲೆಯಿಂದಲೋ, ಕಾಗದಿಂದಲೋ ಮಾಡಿದ ಪುಟ್ಟ ಬೌಲ್ ಕೊಡುತ್ತಾನೆ. ಪುಟ್ಟ ಪೂರಿಯನ್ನು ಪಾನಿಯ ಮಡಿಕೆಯಲ್ಲಿ ಅದ್ದಿ ಈ ಬೌಲಿನಲ್ಲಿಡುತ್ತಾನೆ. ಇನ್ನು ನೀವು ಜರೂರು ಮಾಡಬೇಕು. ಆ ಪಾನಿ ತುಂಬಿದ ಇಡೀ ಪೂರಿಯನ್ನು ಹಾಗೇ ತೆಗೆದು ಬಾಯಲಿಟ್ಟುಕೊಳ್ಳಬೇಕು. ಹುಳಿ, ಉಪ್ಪು, ಖಾರ, ಘಾಟು –ಎಲ್ಲ ಇರುವ ಈ ತಿನಿಸು ನಾಲಿಗೆಗೆ ಚುರುಕು ಮುಟ್ಟಿಸಿ, ಗಂಟಲನ್ನು ತಣಿಸಿ, ಹೊಟ್ಟೆಯೊಳಗೆ ಹೋಗಿ ಬಿದ್ದ ಸದ್ದಾಗುವುದರೊಳಗೆ, ಅಕೋ ಮತ್ತೊಂದು ಪೂರಿ ನಿಮ್ಮ ಬೌಲಿನಲ್ಲಿ! ತಡ ಮಾಡುವಂತಿಲ್ಲ, ಕೈಗೂ–ಬಾಯಿಗೂ ಕೆಲಸ ಕೊಡಬೇಕು. ಮತ್ತೊಂದು ಪೂರಿ ಬರುವುದರೊಳಗೆ ನೀವಿದನ್ನು ಗುಳುಂ ಮಾಡಬೇಕು. ಬೀದಿಬದಿಯಲ್ಲಿ ನಿಂತು, ಹಾಯುವ ವಾಹನ, ಎಡವಿಕೊಂಡು ಹೋಗುವ ನೂರಾರು ಜನಗಳ ನಡುವೆಯೇ ನೀವು ಮತ್ತು ಗೋಲ್ಗಪ್ಪದಣ್ಣ ಮಾತ್ರ ಆಗಿ ನಿಂತಿರುವ ಈ ಕ್ಷಣ, ಜಗವನೆಲ್ಲ ಮರೆತ ಕ್ಷಣ! ನೀವು ಕೊಡುವ ಹತ್ತು ರೂಪಾಯಿಯ ಹರುಕು ನೋಟಿಗೆ ಆರು ಗೋಲ್ಗಪ್ಪ, ಕೊನೆಗೊಂದು ಸುಕ್ಕಾ. ಒಂದು ಪ್ಲೇಟ್ ಸಾಕಾಗಲಿಲ್ಲವೋ ಮತ್ತೊಂದು ಹೇಳಿ. ಇನ್ನೂ ಬೇಕೆನಿಸಿತೋ, ಗೋಲ್ಗಪ್ಪದಣ್ಣನಿಗೆ 'ಓರ್ ಏಕ್ ಪ್ಲೇಟ್' ಎನ್ನಿ. ನಿಮ್ಮ ಮನ ತಣಿಯುವವರೆಗೂ ತಿನಿಸಲು ಗೋಲ್ಗಪ್ಪದಣ್ಣ ಸಿದ್ಧ.

ಹಳ್ಳಿಯಿಂದ ಬಂದ ನಮಗೆ ಈ ಗೋಲ್ಗಪ್ಪದ ಪರಿಚಯ ಇರಲಿಲ್ಲ. ಪಾನಿಪುರಿ–ಮಸಾಲ ಪುರಿಗಳು ಗೊತ್ತಿದ್ದವು. ಪೇಟೆಗೆ ಹೋದಾಗ ಒಂದು ಪ್ಲೇಟ್ ಮಸಾಲ ಪುರಿ, ಒಂದು ಪ್ಲೇಟ್ ಪಾನಿಪುರಿ ತಿಂದು ಬಂದದ್ದುಂಟು. ಆದರೆ ಗೋಲ್ಗಪ್ಪ ನೋಡಿದ್ದು ಈ ನಗರಕ್ಕೆ ಬಂದಮೇಲೇ. ಈ ನಗರದವರಾದರೂ ಇದರೊಂದಿಗೇ ಬೆಳೆದವರಲ್ಲ, ಉತ್ತರ ಭಾರತದಿಂದ ಬಂದಿದ್ದು ಈ ತಿಂಡಿ. ಒಂದು ದಿನ ಏಕಾಏಕಿ ಬಂದಿಳಿದ ಈ ಹುಡುಗರು ನಗರದ ಆಯಕಟ್ಟಿನ ಜಾಗಗಳಲ್ಲಿ ತಮ್ಮ ಪೂರಿಯ ಗೋಪುರದೊಂದಿಗೆ ನಿಂತುಬಿಟ್ಟರಾ ಅಂತ ಅನುಮಾನ. ಯಾವುದೋ ಓಣಿಯ ಪುಟ್ಟ ಮನೆಯ ಹಜಾರದಲ್ಲಿ ಕೂತ ನೈಟಿಯ ಅಕ್ಕ ಒರೆದೊರೆದು ಕೊಟ್ಟ ಪೂರಿ, ಸಾರ್ವಜನಿಕ ನಲ್ಲಿಯಲ್ಲಿ ದಿನಬಿಟ್ಟು ಬಂದ ನೀರು, ಬಿಸಿಬಿಸಿ ನೀರಿನಲ್ಲಿ ಬೆಂದ ಆಲೂಗಡ್ಡೆ, ದೂರದ ಹೊಲದಲ್ಲಿ ಬೆಳೆದ ಈರುಳ್ಳಿಗಳೆಲ್ಲ ಹೀಗೆ ಇಲ್ಲಿ ಸಂಗಮಿಸಿ ಗೋಲ್ಗಪ್ಪದಣ್ಣನ ಬೆತ್ತದ ಸ್ಟಾಂಡ್ ಏರಿ ಕೂತುಬಿಟ್ಟಂತೆ. ಹಾಯುವವರ ಕಣ್ಸೆಳೆದು, ಕಾಲೇಜು ಹುಡುಗ–ಹುಡುಗಿಯರಿಗೆ ರುಚಿ ಹಿಡಿಸಿ, ವಾಕಿಂಗೆ ಹೋದ ಅಜ್ಜನೂ ಒಂದು ಕೈ ನೋಡುವ ಹಾಗೆ ಮಾಡಿಬಿಟ್ಟಿತು ವರ್ಷಗಳಲ್ಲಿ ಗೋಲ್ಗಪ್ಪವೆಂಬ ತಿಂಡಿ.

ನ್ಯೂಸ್‌ಪೇಪರುಗಳಲ್ಲಿ, ನ್ಯೂಸ್ ಛಾನೆಲ್ಲುಗಳಲ್ಲಿ ಆಗಾಗ ಬರುವುದುಂಟು ಸುದ್ದಿ– ಬೀದಿಬದಿ ಪದಾರ್ಥ ತಿನ್ನಬೇಡಿ, ಗೋಲ್ಗಪ್ಪಕ್ಕೆ ಬಳಸುವ ನೀರು ಕಲುಷಿತವಾಗಿರಬಹುದು, ಇತ್ಯಾದಿ. ಆದರೆ ಕೇಳುವವರ್ಯಾರು? ಜಮಾಯಿಸಿದ್ದೇವೆ ಗೋಲ್ಗಪ್ಪ ಗೋಪುರದ ಸುತ್ತ. ಕೊಟ್ಟಿದ್ದೇವೆ ಹತ್ತು ರೂಪಾಯಿ. ಚಾಚಿದ ಬೌಲಿನಲ್ಲಿ ಮೊಗೆಮೊಗೆದು ಇಡುತ್ತಿದ್ದಾನೆ ಗೋಲ್ಗಪ್ಪದಣ್ಣ: ಆರು ಗೋಲ್ಗಪ್ಪ, ಕೊನೆಯಲ್ಲೊಂದು ಸುಕ್ಕಾ. ಇಷ್ಟೇ ಆಶಯ: ನಮ್ಮ ಗೋಲ್ಗಪ್ಪದ ಪೂರಿಗಳಲ್ಲಿ ತುಂಬ ಪಾನಿ ತುಂಬಿರಲಿ. ಆರೋಗ್ಯ ಕೆಡದಿರಲಿ. ದಾಹ ನೀಗಲಿ. ತಿನ್ನುವ ಮೋಹ ನಾಳೆಗೂ ಇರಲಿ.

**ಸುಶ್ರುತ ದೊಡ್ಡೇರಿ**
ವಿಜಯವಾಣಿ 17.03.2014

# ರಸ್ತೆಯೆಂಬ ಸ್ವತ್ತು, ಕಸರತ್ತು ಮತ್ತು ಗಮ್ಮತ್ತು!

ಯಾವಾಗಲೋ ಅಲ್ಲ, ಆಗೊಮ್ಮೆ ಈಗೊಮ್ಮೆ ಅಂತಹ ಅನುಭವಗಳಾಗುತ್ತಿರುತ್ತವೆ.. ಯಾವುದಾದರೂ ಕಾರನ್ನು ಓವರ್‌ಟೇಕ್ ಮಾಡುವಾಗ ಇದ್ದಕ್ಕಿದ್ದಂತೆ ಅದರ ಚಾಲಕ ಆ ಕಾರಿನ ವೇಗವನ್ನು ಹೆಚ್ಚಿಸಿಬಿಡುತ್ತಾನೆ. ನಾವು ಪಕ್ಕ ಹಾದು ಹೋಗುತ್ತಿರುವುದು ತಿಳಿಯದಷ್ಟು ದಡ್ಡನೇನಲ್ಲ ಅವನು. ಆದರೂ ಹಾಗೆ ಮಾಡುತ್ತಾನೆ. ನಮ್ಮ ಓವರ್‌ಟೇಕಿಂಗು ವಿಫಲವಾಗಿ ಗಲಿಬಿಲಿಗೊಂಡು ಮತ್ತೆ ಅವನ ಹಿಂದೆ ಬರುತ್ತಿದ್ದರೆ ರಿಯರ್ ವ್ಯೂ ಕನ್ನಡಿಯಲ್ಲಿ ನೋಡಿ ಮುಸಿನಗೆ ನಗುತ್ತಾನೆ. ಯಾವುದೋ ಪಂದ್ಯ ಗೆದ್ದ ಖುಷಿ ಅವನಿಗೆ. ಹೋದರೆ ಹೋಗಲಿ ಬಿಡು, ಅಂತ ಅವನನ್ನು ಬಿಟ್ಟು ಮತ್ತೊಂದು ತಿರುವಿನಲ್ಲಿ ತಿರುಗಿಕೊಂಡರೆ ಇಲ್ಲಿ ಮತ್ತೊಂದು ಕಾರಿನವ... ಹೋಗುತ್ತಿರುವುದು ಮೂವತ್ತರ ಸ್ಪೀಡು. ಅಯ್ಯಾ, ಸ್ವಲ್ಪ ಅರ್ಜೆಂಟಿನಲ್ಲಿದ್ದೇನೆ ದಾರಿ ಬಿಡು.. ಅಂತ ಹಾರನ್ನು ಹಾಕಿದರೆ ಅದು ಅವನ ಕರ್ಣ ಕಮಲಗಳ ಮೇಲೆಯೇ ಬೀಳುವುದಿಲ್ಲ. ಎಡಕ್ಕೆ ಹೋದರೆ ಎಡಬದಿಗೆ ಬರುತ್ತಾನೆ, ಬಲಗಡೆಗೆ ಹೋದರೆ ಕಾರನ್ನು ಬಲಬದಿಗೆ ತರುತ್ತಾನೆ. ಹೊತ್ತೂ ಆತ ನದ್ದು ಬರೀ ಜಾಣಕಿವುಡು ಅಂತ ಗೊತ್ತಾಗುವುದರೊಳಗೆ ಸಾಕಷ್ಟು ಸಮಯ ಸಂದಿರುತ್ತದೆ. ಎತ್ತ ನುಸುಳಬೇಕೆಂದರೂ ಅವಕಾಶವೇ ಇಲ್ಲ. ನಾನು ಅವನ ಹಿಂದೆಯೇ ಬರ್‍ತಾ ಇದ್ದೀನಾ ಇಲ್ವಾ... ಎಂಬುದನ್ನು ಆಗಾಗ ಕನ್ನಡಿಯಲ್ಲಿ ನೋಡಿ ಖಚಿತಪಡಿಸಿಕೊಳ್ಳುತ್ತಾನೆ ಬೇರೆ!

ಥತ್ತೇರಿಕೆ... ಏನ್ ರೋಗವಪ್ಪಾ ಇವರಿಗೆ ಅನ್ನಿಸುತ್ತದೆ. ಹಾಳ್ಬಿದ್ದು ಹೋಗ್ಲಿ, ನೀನೆ ಗೆದ್ದೆ ಹೋಗು ಅಂತ ಅವನನ್ನು ಕಳುಹಿಸಿ ನಿಧಾನಕ್ಕೇ ಹೊರಟರೆ ಮತ್ತೊಂದು ಕಾರು ನನ್ನ ಬೈಕನ್ನೇ ನೆಕ್ಕುವ ಹಾಗೆ ಹಿಂದೆಯೇ ಬರುತ್ತದೆ. ಅಪ್ಪಿ ತಪ್ಪಿ ಬ್ರೇಕ್ ಹಾಕಿದರೆ ಎಲ್ಲಿ ಗುದ್ದಿಸಿ ಮಣ್ಣು ಮುಕ್ಕಿಸಿಬಿಡುತ್ತಾನೋ ಅನ್ನುವ ಅಂಜಿಕೆ. ನನ್ನ ವೇಗವನ್ನು ಅಣಕಿಸುವವನಂತೆ ಆಗಾಗ ಕರ್ಕಶ ಹಾರನ್ನು ಬಾರಿಸಿ ನನ್ನನ್ನು ಬೆಚ್ಚಿಬೀಳಿಸುವುದಲ್ಲದೆ ನಾರ್ಮಲ್ ಆಗಿರುವ ನನ್ನ ಬಿಪಿಯನ್ನು ತೀವ್ರಗತಿಗೆ ಹೆಚ್ಚಿಸಿ ತಮಾಷೆ ನೋಡುತ್ತಾನೆ. ಬಾರಯ್ಯಾ ಬಾ.. ದಯಮಾಡಿ ನನ್ನನ್ನು ಹಾಯ್ದು ಹೋಗಿ ಪುಣ್ಯ ಕಟ್ಟಿಕೋ ಬಾ... ಅಂತ ಕೈಸನ್ನೆ ಮಾಡಿ ಕರೆದರೂ ಆತ ಬರಲೊಲ್ಲ. ನನ್ನನ್ನು ಮುಂದೆ ಬಿಟ್ಟುಕೊಂಡು ಬೆನ್ನತ್ತಿ ಬರುವುದರಲ್ಲೇ ಅವನಿಗೇನೋ ಸಂತಸ. ನೋಡುವವರೆಗೂ ನೋಡಿ ನಾನೇ ಕೊನೆಗೆ ಬೈಕನ್ನು ರಸ್ತೆ ಬದಿಗೆ ಹಾಕಿ ಕೈಕಟ್ಟಿಕೊಂಡು ನಿಂತುಬಿಡುತ್ತೇನೆ.

ನಮಗಂತೂ ಈ ತರಹದ ಅನುಭವಗಳು ಯಾವತ್ತೂ ಆಗಿಲ್ಲ ಬಿಡ್ರೀ... ಅಂತ ಯಾರಾದರೂ ಬಡಪಾಯಿ ಬೈಕ್ ಸವಾರರು ಆಣೆ ಮಾಡಿ ಹೇಳಲಿ ನೋಡೋಣ, ಬೆಂಗಳೂರಿನ ರಸ್ತೆಗಳಲ್ಲಿ ಬೈಕ್ ಓಡಿಸುವುದನ್ನು ಆವತ್ತಿನಿಂದಲೇ ಬಿಟ್ಟುಬಿಡುತ್ತೇನೆ.

ಮನೆಯಲ್ಲಿ ಪತ್ನಿಯ ದಬಾವಣೆಯನ್ನು ನಾಲ್ಕು ಗೋಡೆಗಳ ಮಧ್ಯೆ ಹೇಗೋ ಹಲ್ಲ ಕಚ್ಚಿ ಸಹಿಸಿಕೊಂಡುಬಿಡಬಹುದು. ಆದರೆ ಈ ತರಹ ರಸ್ತೆ ಮಧ್ಯದ ಸಾರ್ವಜನಿಕ ದಬಾವಣೆಯನ್ನು ಅದೂ ಪ್ರತಿದಿನ ನುಂಗಿಕೊಳ್ಳುವುದು ನಿಜಕ್ಕೂ ಕಷ್ಟ, ಕಷ್ಟ !

ಆಟೋಗಳನ್ನು ಕಂಡರಂತೂ ನನ್ನ ಬೈಕು ಗಡಗಡನೆ ಹೆದರಿ ನಡುಗುವುದಲ್ಲದೆ ಮುಂದೆ ಹೋಗಲಾರೆನೆಂದು ನಿಂತಲ್ಲೇ ಮಷ್ಕರ ಹೂಡಿಬಿಡುತ್ತದೆ. ಸೀದಾ ಹೋಗುಹೋಗುತ್ತಿರುವಂತೆಯೇ ಅವು ಅದ್ಯಾವ ಕ್ಷಣದಲ್ಲಿ ಎಡಬಲಗಳಿಗೆ ಹೊರಳಿಕೊಳ್ಳುತ್ತವೆಂದು ಹೇಳಲು ಬಹುಶಃ ಉದಯ ಜಾದೂಗಾರರಂತಹ ಯಕ್ಷಣಿಗಾರರಿಗೇ ಸಾದ್ಯವಾಗುವುದಿಲ್ಲವೆಂಬುದು ನನ್ನ ಅನಿಸಿಕೆ. ಹಿಂದೆಯೂ ಇಂತಹ ಅನುಭವಗಳು ನನ್ನ ಬೈಕಿಗೆ ಆಗಿ ಅದು ಮೂತಿ ಮುರಿದುಕೊಂಡಿದ್ದಲ್ಲದೆ ಹಲವು ಕಡೆ ಮೈಕೈ ತರಚಿಸಿಕೊಂಡಿರುವುದೂ ಇದಕ್ಕೆ ಕಾರಣವಿರಬಹುದು. ಕೆಲವು ಆಟೋಗಳಂತೂ ಯಾರಾದರೂ ಬಂದು ನಮ್ಮನ್ನು ತಾಕಬಾರದೆ.. ಗುದ್ದಬಾರದೆ..? ಎಂದು ನಮ್ಮಂತಹವರನ್ನು ಹುಡುಕಿಕೊಂಡು ಅಲೆಯುತ್ತಿರುವಂತೆ ಭಾಸವಾಗುತ್ತದೆ. ಇದರಿಂದಾಗಿಯೇ ನನ್ನ ಬೈಕೆಂಬ ಬೈಕು ರಸ್ತೆಗಿಳಿದ ಕೂಡಲೇ ಸಂದಿಗೊಂದಿಗಳನ್ನು ಹುಡುಕುವುದಲ್ಲದೆ ಮೇನ್‌ರೋಡಿಗಿಳಿದು ಸಾಗುವ ಸಾಹಸ ಮಾಡುವುದು ತುಂಬ ಕಮ್ಮಿ.

ಹಾಗೆಂದು ಎಲ್ಲ ಬೈಕು ಸವಾರರೇನು ಸಹಾನುಭೂತಿಗೆ ಯೋಗ್ಯರಲ್ಲ. ಮೊಬೈಲು ಎನ್ನುವ ಆಟಿಕೆ ಸಮಾನವಾಗಿರುವ ವಸ್ತುವನ್ನು ಕಿವಿ ಮತ್ತು ಭುಜಗಳ ಸಂದಿಯೊಳಾನಿಸಿಕೊಂಡು ಕತ್ತು ಮುರಿದವರಂತೆ ಕೊರಳು ಕೊಂಕಿಸಿ ಸರಿದು ಹೋಗುವ ಪರಿಯನ್ನು ನೋಡಲು ಮೂರು ಮತ್ತೊಂದು ಕಣ್ಣುಗಳಿದ್ದರೂ ಸಾಕಾಗುವುದಿಲ್ಲ. ಕೆಲವರಂತೂ ಕಲಿತ ಕಸರತ್ತುಗಳನ್ನೆಲ್ಲಾ ಸಾರ್ವಜನಿಕರಿಗೆ ಮುಕ್ತವಾಗಿ ಪ್ರದರ್ಶಿಸುವುದಲ್ಲದೆ ರಸ್ತೆ ಎಂಬುದು ಎಂದೂ ಪಾದಚಾರಿಗಳಿಗೆ ಸುರಕ್ಷಿತ ಜಾಗವಲ್ಲವೆಂಬುದನ್ನು ಪದೇ ಪದೇ ಮನದಟ್ಟು ಮಾಡಿಸುತ್ತಿರುತ್ತಾರೆ. ಮುಂದೆ ಸಾಗುವ ವಾಹನಗಳೇನಾದರೂ ಕೊಂಚ ಸಾಲುಗಟ್ಟಿದರೆ ಸಾಕು, ಎರಡೂ ಬದಿಗಳಿಂದ ತಟತಟನೆ ಮುಕುರಿಕೊಂಡು ಈ ಬೃಹತ್ ನಗರದ ಸಂಚಾರ ದಟ್ಟಣೆಗೆ ತಮ್ಮದೇ ಕೊಡುಗೆಯನ್ನೂ ನೀಡಲೂ ಸಹ ಹಿಂದೆ ಬೀಳುವುದಿಲ್ಲ.

ಈಗ ಬಂದಿರುವ ಹೊಸ ವಿನ್ಯಾಸದ ಬೈಕುಗಳೂ ಇವರ ಸರ್ಕಸ್ಸುಗಳಿಗೆ ಉತ್ತೇಜನ ನೀಡುವಂತೆಯೇ ಇವೆ. ಒಂಟೆಯ ಡುಬ್ಬಗಳಂತೆ ಉಬ್ಬಿಕೊಂಡ ಪೆಟ್ರೋಲು ಟ್ಯಾಂಕಿನ ಮೇಲೆ ನಡು ಬಗ್ಗಿಸಿ ಸಾಗುವ ತರುಣರು ಸಾಕ್ಷಾತ್ ಯುದ್ಧಕ್ಕೆ ಹೊರಟ ಯೋಧರನ್ನು ನೆನಪಿಸುತ್ತಾರೆ. ಹಿಂದುಗಡೆ ತಮ್ಮ ಸ್ನೇಹಿತೆಯರನ್ನು ಕುಳ್ಳಿರಿಸಿಕೊಳ್ಳುವ ಸೀಟಂತೂ ಇವರಿಗಿಂತ ಒಂದು ಅಡಿ ಎತ್ತರದಲ್ಲಿರುತ್ತದೆ. ಆ ಪೀಠವನ್ನಲಂಕರಿಸುವ ಆಕೆ ಆಧಾರಕ್ಕಾಗಿ ಮುಂದೆ ಕುಳಿತ ಇವನ ನಡು ಬಳಸಬೇಕೋ, ಅಥವಾ ತನ್ನ

ಎತ್ತರಕ್ಕೆ ಸರಿಹೊಂದುವ ಇವನ ಕೊರಳ ಸುತ್ತ ಕೈ ಹಾಕಿ ಉಸಿರುಗಟ್ಟಿಸಬೇಕೋ ಎಂದು ಗೊಂದಲಾಂಗಿನಿಯಾಗುವಷ್ಟರಲ್ಲಿ ಬೈಕು ನೂರಿಪ್ಪತ್ತರ ವೇಗದಲ್ಲಿ ಸಾಗುತ್ತಿರುತ್ತದೆ.

ಒಮ್ಮೆ ಇದೇ ರೀತಿ ಬೈಕಿನಲ್ಲಿ ಹೋಗುತ್ತಿದ್ದ ಜೋಡಿಯೊಂದು ರಸ್ತೆಯಲ್ಲಿ ಥಟ್ಟನೆ ಎದುರಾದ ಗುಂಡಿಯನ್ನು ತಪ್ಪಿಸಲು ಹಾಕಿದ ಬ್ರೇಕು ಎಂಥಾ ಪ್ರಮಾದ ಸೃಷ್ಟಿಸಿತೆಂದರೆ ಅದಕ್ಕೆ ಅಳವಡಿಸಲಾಗಿದ್ದ 'ಡಿಸ್ಕು ಬ್ರೇಕ್' ಎಂಬ ನೂತನ ತಂತ್ರಜ್ಞಾನವು ತನ್ನ ಸಾಮರ್ಥ್ಯವೇನೆಂದು ನಿರೂಪಿಸಿತು. ಹಿಂದೆ ಕುಳಿತಿದ್ದ ರೂಪಸಿಯು ತನ್ನ ಗೆಳೆಯನ ಮೇಲ್ಭಾಗದಿಂಥ ಹಾರಿ ಅದೇ ಬೈಕಿನ ಮುಂದೆ ಅಡಿಮೇಲಾಗಿ ಬಿದ್ದುದಲ್ಲದೆ ತನ್ನ ದೇಹದಿಂದ ಕೆಲವು ಮಿಲಿಲೀಟರುಗಳಷ್ಟು ರಕ್ತವನ್ನು ಭೂತಾಯಿಗೆ ಅರ್ಪಿಸಿ ಅಷ್ಟರ ಮಟ್ಟಿಗೆ ಮಣ್ಣಿನ ಋಣ ತೀರಿಸಿದಳು. ಅವಳ ಅನುಪಮ ಸೌಂದರ್ಯಕ್ಕೆ ಕಾರಣವಾಗಿದ್ದ ದಂತಪಂಕ್ತಿಯ ಎರಡು ಹಲ್ಲುಗಳು ತಾವೇನು ಕಡಿಮೆ ಎಂದು ಸ್ವಯಂ ಕಳಚಿ ಬಿದ್ದು ತಾವೂ ಭೂಸ್ಪರ್ಶ ಪಡೆದು ಪಾವನವಾದವು. ಈ ಪಾಡು ಫಜೀತಿ ನೋಡಲಾರದೆ ಕೊನೆಗೆ ಇವರ ಸಾಹಸ ದೃಶ್ಯಕ್ಕೆ ಪ್ರೇಕ್ಷಕರಾಗಿದ್ದ ದಾರಿಹೋಕರೆ ಇವರಿಗೆ ಆಸ್ಪತ್ರೆಯ ದಾರಿ ಕಾಣಿಸಬೇಕಾಯಿತು.

ಮೊಬೈಲು ಎಂಬುದು ಆಧುನಿಕ ಉಪಕರಣ, ಜನರ ಸಂಪರ್ಕಕ್ಕೆ ಸೇತುವೆಯಂತದ್ದು, ಅವಶ್ಯಕ ಎಲ್ಲ ಸರಿ. ಆದರೆ ಈ ಇಯರ್‌ಫೋನುಗಳನ್ನು ಕಂಡುಹಿಡಿದ ಮಹಾನುಭಾವನೇನಾದರೂ ಸಿಕ್ಕಿದರೆ ಒಮ್ಮೆ ಅವನನ್ನು ಸರಿಯಾಗಿ ವಿಚಾರಿಸಿಕೊಳ್ಳಬೇಕೆಂದಿದ್ದೇನೆ. ಅದೇನು ಜನ ಮೊದಲೇ ಮ್ಯೂಜಿಕ್ಕು ಪ್ರಿಯರಿದ್ದರೋ, ಅಥವಾ ಇಯರ್‌ಪೋನುಗಳು ಬಂದ ಮೇಲೆ ಹುಚ್ಚು ಹತ್ತಿಸಿಕೊಂಡರೋ ಗೊತ್ತಿಲ್ಲ, ರಸ್ತೆಗಿಳಿಯಬೇಕಾದರೆ ಅವುಗಳನ್ನು ಕಿವಿಗಳಿಗೆ ಸಿಕ್ಕಿಸಿಕೊಂಡಿರಲೇಬೇಕೆನ್ನುವ ಅಲಿಖಿತ ನಿಯಮಕ್ಕೆ ಬದ್ಧರಾಗಿ ಹೋಗಿದ್ದಾರೆ. ರೋಡು, ಫುಟ್‌ಪಾತುಗಳೆನ್ನುವ ಭೇಧಭಾವಗಳಿಲ್ಲದೆ ವಾಹನಗಳತ್ತ ಕಣ್ಣೂ ಹಾಯಿಸದೆ ಅದೆಷ್ಟು ಗಜಗಾಂಭೀರ್ಯಗಳಿಂದ ನಡೆದು ಹೋಗುತ್ತಿರುತ್ತಾರೆಂದರೆ ರಸ್ತೆಗಿಳಿಯುವ ವಾಹನಗಳೆಲ್ಲ ಇವರ ಬಗ್ಗೆ ಒಂದು ಕಣ್ಣಿಟ್ಟಿರಲೇಬೇಕಿರುತ್ತದೆ. ಸಣ್ಣ ಅವಘಡವಾದರೂ ಜನ ತಪ್ಪು ಯಾರದೆಂಬುದನ್ನು ಕೂಡ ನೋಡದೆ ವಾಹನ ಸವಾರನಿಗೆ 'ಗೂಸಾ' ಇಕ್ಕಲು ಕಾಯ್ದು ಕುಳಿತಿರುತ್ತಾರೆ.

ಈ ಅವಾಂತರಗಳ ಹೆಚ್ಚುವರಿ ಅಧ್ಯಾಯದಂತೆ ಕಾಣುವ ಮಳೆಗಾಲದಲ್ಲಂತೂ ನಗರ ಪ್ರವಾಹ ಸ್ವರೂಪಿಯಾಗುತ್ತದೆ. ಮೋರಿಗಳಲ್ಲಿ ಉಕ್ಕಿ ಹರಿಯುವ ನೀರು "ಜಲಲ ಜಲಲ ಜಲಧಾರೇ..." ಎಂಬ ಹಳೆಯ ಚಿತ್ರಗೀತೆಯೊಂದನ್ನು ನೆನೆಪಿಗೆ ತರಲಿಕ್ಕೂ ಸಾಕು. ಆದರೆ ಆ ಮಧುರ ಹಾಡಿಗೂ ಗಟಾರದ ಕಡೆಯಿಂದ ನಿಮ್ಮ ನಾಸಿಕಾಗ್ರಗಳನ್ನು ನೇವರಿಸುವ ಅನೂಹ್ಯ ನಾತಕ್ಕೂ ಕೊಂಚವೂ ತಾಳೆಯಾಗದು. ಅಂತೆಯೇ ಅನಿವಾರ್ಯವಾಗಿ ಮುಖ ಕೆಡಿಸಿಕೊಂಡು ಉಸಿರಾಟವನ್ನು ತಾತ್ಕಾಲಿಕವಾಗಿ

ಸ್ಥಗಿತಗೊಳಿಸಿಯೋ ಕರ್ಚೀಫುಗಳನ್ನು ಮೂಗಿಗೆ ಅಮುಕಿಯೋ ದೂರ ಸರಿಯಬೇಕಾಗುತ್ತದೆ.

ಮಹಾನಗರದ ಕೆಲವು ರಸ್ತೆಗಳಲ್ಲಿ ಮಳೆ ನೀರು ಮೂರು ಅಡಿಯವರೆಗೂ ನಿಲ್ಲುತ್ತದೆ. ಸಣ್ಣ ಕಾರುಗಳಂತೂ ತಮ್ಮ ಸೈಲೆನ್ಸರುಗಳನ್ನು ನೀರಿನಲ್ಲಿ ಇಳಿಬಿಟ್ಟು ಬುರುಬುರನೆ ಸದ್ದು ಮಾಡುತ್ತಾ ವಿಫಲ ಕಸರತ್ತು ನಡೆಸುವುದಲ್ಲದೆ ಒಳಗಿದ್ದವರೆಲ್ಲಾ ಕೆಳಗಿಳಿದು ದಬ್ಬಿದರೂ ಕೈಚೆಲ್ಲಿ ಅಂಚಿಗೆ ಸರಿದು ದಣಿವಾರಿಸಿಕೊಳ್ಳುತ್ತಿರುತ್ತವೆ. ತಗ್ಗುಗುಂಡಿಗಳಂತೂ ತಮ್ಮ ಒಡಲೊಳಗೆಲ್ಲಾ ಕೊಳಚೆ ನೀರು ತುಂಬಿಸಿಕೊಂಡು ದಿನವೂ ತಮ್ಮನ್ನು ಶಪಿಸುತ್ತಾ ಅಡ್ಡಾಡುವ ಬೈಕು ಸವಾರರಿಗೆ ತಮ್ಮ ಕರಾಮತ್ತು ತೋರಲು ಇದೇ ಸುಸಮಯವೆಂಬಂತೆ ಕಾದು ಕುಳಿತಿರುತ್ತವೆ. ಪಾದಚಾರಿಗಳು ತಮ್ಮ ಪ್ಯಾಂಟುಗಳನ್ನು ಮಂಡಿಯವರೆಗೂ ಮಡಿಸಿ ಇನ್ನೂ ಮೇಲಕ್ಕೆ ಮಡಿಸಲಾರದೆ ಅಸಹಾಯಕತೆಯಿಂದ ಹೆಜ್ಜೆ ಹಾಕುತ್ತಿದ್ದರೆ ಪಾದಚಾರಿಣಿಯರು ತಾವೂ ಶಕ್ತ್ಯಾನುಸಾರ ಮಾನವಂತಿಕೆಯ ಇತಿಮಿತಿಯೊಳಗೇ ಸೀರೆ ಮುದುರಿಕೊಂಡು ನಡೆಯುತ್ತಿರುತ್ತಾರೆ.

ಕೆಲವು ಬುದ್ಧಿವಂತರು ಮಳೆ ಬಂದರೆ ಯಾವ್ಯಾವ ರಸ್ತೆಗಳಲ್ಲಿ ನೀರು ತುಂಬಿಕೊಳ್ಳುತ್ತದೆಂದು ಕಂಪ್ಯೂಟರನ್ನು ಗೂಗಲಿಸಿಯೋ ಅಥವಾ ಸಂಚಾರ ನಿರ್ವಹಣೆ ಕೇಂದ್ರವನ್ನು ಸಂಪರ್ಕಿಸಿಯೋ ಮೊದಲೇ ತಿಳಿದುಕೊಂಡಿರುತ್ತಾರೆ. ಅಂತಹವರು ನೀರು ತುಂಬಿದ ರಸ್ತೆಗಳಲ್ಲಿ 'ಹೋಳಿ' ಆಡುವುದಕ್ಕಿಂತ ಏಳೆಂಟು ಕಿಲೋಮೀಟರುಗಳು ಹೆಚ್ಚಾದರೂ ಪರವಾಯಿಲ್ಲ, ಅಲ್ಲಲ್ಲೇ ಸುತ್ತಿಬಳಸಿ ಮನೆ ತಲುಪಿಕೊಳ್ಳುವುದು ಬೆಟರು ಎಂದು ನಿರ್ಧರಿಸಿ ತಗ್ಗು ಪ್ರದೇಶಗಳನ್ನು ತಪ್ಪಿಸಲು ಕಣ್ಣಾಮುಚ್ಚಾಲೆ ಆಡುತ್ತಿರುತ್ತಾರೆ. ಹಳ್ಳಿಗಾಡಿನ ರೈತ ಮಳೆಗಾಗಿ ಹಂಬಲಿಸಿ ಮುಗಿಲಿನತ್ತ ಕೈಯೆತ್ತಿ ಮುಗಿಯುತ್ತಿದ್ದರೆ ನಗರದ ಯಂತ್ರಸ್ವರೂಪಿ ಮಾನವರು 'ವೈ ದಿಸ್ ರೈನ್ ಕಮ್ ಸೋ ಆಫನ್ ಲೀ ಯಾರ್...?' ಅಂತ ಕರುಳು ಕಿವುಚುವ ರೀತಿಯಲ್ಲಿ ಕನಲುತ್ತಿರುತ್ತಾರೆ.

ಎಲ್ಲ ಆಯಿತು, ಇನ್ನು ಆಂಗಿಕ ಅಭಿನಯ ಚತುರರ ಬಗ್ಗೆ ಬರೆಯದೆ ಹೋದರೆ ಟಾಪಿಕ್ಕು ಪೂರ್ಣವಾಗುವುದೇ ಇಲ್ಲ. ನೋಡಿದರೆ ಯಾವುದೋ ವಿಮಾನ ಏರಲು ಹೊರಟವರಂತಿರುತ್ತಾರೆ. ಅಷ್ಟೊಂದು ಅರ್ಜೆಂಟು! ನೀವೇನಾದರೂ ಸ್ವಲ್ಪ ದಾರಿಗಡ್ಡ ಬಂದರೆ ಸಾಕು, ಕೈಗಳನ್ನು ನಿಮ್ಮತ್ತ ತೋರಿಸಿ 'ಹೋಯ್...' ಅಂತ ಕೂಗುತ್ತಾ ಬಂದಷ್ಟೇ ವೇಗದಲ್ಲಿ ಬೆನ್ನು ತೋರಿಸಿ ಹೋಗಿಬಿಡುತ್ತಾರೆ. ಕೆಲವೊಮ್ಮೆ ನಿಮ್ಮತ್ತ ನೋಡುವುದೂ ಇಲ್ಲ. ಇವರನ್ನು ನಾನು ಉತ್ತರ ಕುಮಾರನ ವಂಶಜರು ಎಂದು ಹೆಸರಿಸಿದ್ದೇನೆ. ಹೋಗಲಿ, ನಿಂತು ಜಗಳವಾದರೂ ಆಡುತ್ತಾರಾ ಅಂದರೆ ಅದೂ ಇಲ್ಲ. ಹೇಗಾದರೂ ತಾವು ಕೈಗೆ ಸಿಕ್ಕಲಾರೆವು ಅನ್ನುವ ಧೈರ್ಯ ಅವರದು. ಹೆಚ್ಚಾಗಿ ವಯಸ್ಸಾದವರು, ಮಕ್ಕಳ ಮೇಲೆ ಪ್ರತಾಪ ತೋರುತ್ತಿರುತ್ತಾರೆ. ಅಂತಹವರು ತಿರುಗಿ ಬೀಳುವ ಅವಕಾಶ ಇರುವುದಿಲ್ಲ ಎನ್ನುವ ನಂಬಿಕೆಯೂ ಇದಕ್ಕೆ ಕಾರಣವಿರಬಹುದು.

ಬಿಟಿಎಂ ಮುಖ್ಯರಸ್ತೆಯಲ್ಲಿ ನನ್ನ ದೈತ್ಯದೇಹಿ ಸ್ನೇಹಿತ ರೂಪೇಶನ ಜೊತೆ ಹೀಗೆಯೇ ಏಕಪಾತ್ರಾಭಿನಯ ತೋರಹೋದ ಬೈಕ್ ಸವಾರನೊಬ್ಬನ ಅದೃಷ್ಟ ಅವತ್ತು ಕೆಟ್ಟಿತ್ತು. ಅಭ್ಯಾಸ ಬಲದಂತೆ ಕೈಬಾಯಿ ತಿರುವಿಕೊಳ್ಳುತ್ತಾ ಹೋದವನು ಮುಂದಿನ ಸಿಗ್ನಲಿನ ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಬಿದ್ದ. ಇಂತಹ ಅನುಭವಕ್ಕೆ ಈಗಾಗಲೇ ಒಂದೆರೆಡು ಬಾರಿ ಒಳಗಾಗಿದ್ದ ರೂಪೇಶ ಈ ಅವಕಾಶ ಬಿಡಬಾರದೆಂದು ಅವನ ಬಳಿ ಹೋಗಿ "ಏನಪ್ಪಾ ಸುಂದರಾ... ಅದೇನೋ ಸಮಸ್ಯೆ ಹೇಳ್ಕೊಂಡು ಹೋದ್ಯಲ್ಲಾ..? ಕೆಳಗಿಳಿದು ಬಾ, ಮಾತಾಡೋಣ..." ಅಂತ ಕರೆದರೆ ಅಸಾಮಿ ಗಾಡಿಯಿಂದ ಇಳಿಯಲೊಲ್ಲ. "ಏ.. ಯಾರ್ ಸಾರ್ ನೀವು... ನಾನು ನಿಮ್ಗೇನಂದೆ..? ನನ್ ಪಾಡಿಗೆ ನಾನು ಹೋಗ್ತಾ ಇದೀನಿ.." ಅನ್ನುವಷ್ಟರಲ್ಲಿ ಮುಖದಿಂದ ಬೆವರು ಧಾರಾಕಾರ. ರೂಪೇಶನ ಮೈಕಟ್ಟು ನೋಡಿಯೇ ಆತ ಅರ್ಧ ಇಳಿದುಹೋಗಿದ್ದ. ಆದರೂ ಈತ ಪಟ್ಟು ಬಿಡಬೇಕಲ್ಲ... "ಅದೇನೋ ಹೇಳಿದ್ಯಲ್ಲಪ್ಪಾ...? ಗಲಾಟೇಲಿ ಸರಿಯಾಗಿ ಕೇಳ್ಲಿಲ್ಲ.. ಏನೂ ಅಂತಾದ್ರೂ ಕೇಳೋಣ ಬಾ ಇರಲಿ.." ಅನ್ನುತ್ತಾ ಬೈಕಿಗಡ್ಡ ನಿಂತು ಅವನನ್ನು ಇಳಿಸಿಯೇ ಬಿಟ್ಟ. "ಏನೂ ಇಲ್ಲ ಬಿಡಿ ಸಾರ್.. ಎಲ್ಲೋ ಹೋಗೋರಿಗೆ ಸುಮ್ಮನೆ ಯಾಕೆ ತೊಂದರೆ ಕೊಡ್ತೀರಿ... ಏನೋ ಟೆನ್ಷನ್ನಿನಲ್ಲಿ ಆಗಿರ್ಬೇಕು.. ಬಿಡಿ ಸಾರ್..." ಅಂತ ಗೋಗರೆಯತೊಡಗಿದವನನ್ನು ರೂಪೇಶ ರಸ್ತೆ ಪಕ್ಕದಲ್ಲಿ ನಿಲ್ಲಿಸಿಕೊಂಡು ಹೋಗಿಬರುವವರೆಲ್ಲರ ಮುಂದೆ ಅಖಂಡ ಒಂದು ಗಂಟೆಗಳ ಕಾಲ ನೀಡಿದ 'ಹಿತವಚನ' ಗಳನ್ನು ಬಹುಶಃ ಆ ಏಕಪಾತ್ರಾಭಿನಯ ಪ್ರವೀಣ ಜೀವಮಾನವಿಡೀ ಮರೆಯಲಾರನೇನೋ?

ರಸ್ತೆ ಪ್ರತಿಯೊಬ್ಬರ ಸ್ವತ್ತು. ಅದನ್ನು ಸರಿಯಾದ ಕಾರಣಕ್ಕೆ, ಸರಿಯಾದ ರೀತಿಯಲ್ಲಿ ಬಳಸುವುದು ಮಾತ್ರ ನಾವಿನ್ನೂ ಪೂರ್ಣವಾಗಿ ಕಲಿತಿಲ್ಲ. ಆ ದಿನ ಬೇಗ ಬರಲೆಂದು ಆಶಿಸೋಣ.

**ತುರುವೇಕೆರೆ ರವಿಶಂಕರ್**

ಮಯೂರ ಜುಲೈ 2014

# ಬುದ್ಧಿ ಬಂದಾಗ !

'ಅರೆ! ನಿನಗೆ ಕಡೆಗೂ ಬುದ್ಧಿ ಬಂತಾ?' ಮನೆಯವರೆಲ್ಲಾ ಆಶ್ಚರ್ಯದಿಂದ ಕೇಳಿದ ಪ್ರಶ್ನೆಯಿದು. ವಾರದಿಂದ ಸರಿಯಾಗಿ ತಿನ್ನಲಾರದೆ, ಮಾತನಾಡಲಾರದೆ ನೋವನ್ನು ಅನುಭವಿಸುತ್ತಾ, ಒದ್ದಾಡುತ್ತಿದ್ದ ನನಗೆ ಅನುಕಂಪ ತೋರಿಸುವುದರ ಬದಲು ಹೀಗೆಂದರೆ?? ಸ್ವತಃ ದಂತವೈದ್ಯೆಯಾದ ನನಗೆ ದಂತವೈದ್ಯರ ಬಳಿ ಹೋಗುವುದೆಂದರೆ ಸ್ವಲ್ಪವೇನು, ಬಹಳ ಹೆದರಿಕೆ. ನನ್ನಲ್ಲಿ ಬರುವ ರೋಗಿಗಳಿಗೆ 'ಹಾಗೆ ಮಾಡಿ, ಹೀಗೆ ಮಾಡಿ' ಎಂದು ಭಾಷಣ ಬಿಗಿದರೂ ಸ್ವಂತ ವಿಷಯಕ್ಕೆ ಬಂದಾಗ ಎಲ್ಲಾ ಠುಸ್. ಈ ಸಲವಂತೂ ಬರೀ ಮಾತ್ರೆಗೆ ಹೋಗುವ ನೋವು ಇದಲ್ಲ ಎಂದು ಖಚಿತವಾಗಿ ಗೊತ್ತಿತ್ತು. ಆದರೂ ವ್ಯರ್ಥ ಪ್ರಯತ್ನ ಮಾಡಿದ್ದಾಯ್ತು.

ಇಷ್ಟಕ್ಕೂ ನನಗಾಗಿದ್ದು ಏನು? ವಿಸಡಮ್ ಟೂತ್ ಅಂದರೆ ಬುದ್ಧಿ ಹಲ್ಲು ಬಾಯಲ್ಲಿ ಕಾಣಿಸಿಕೊಂಡಿತ್ತು. ಪೂರ್ತಿಯಾಗಿ ಬಂದಿದ್ದರೆ ಪರವಾಗಿಲ್ಲ. ಇದು ಬಾಯಿಯ ಹಿಂದೆ ,ವಸಡಿನ ಮರೆಯಿಂದ ಇಣುಕಿ ನೋಡುತ್ತಿತ್ತು ಅಷ್ಟೇ. ಪಾಪ, ಅದಾದರೂ ಏನು ಮಾಡಲು ಸಾಧ್ಯ? ಹೊರಬರಲು ಎಲ್ಲೂ ಜಾಗವೇ ಇರಲಿಲ್ಲ. ನಾಲ್ಕೈದು ವರ್ಷಗಳಿಂದ ಬಿದಿಗೆ ಚಂದ್ರನಂತೆ ದರ್ಶನ ಕೊಡುತ್ತಿದ್ದುದ್ದು ಈ ಸಲ ಸಪ್ತಮಿ ಚಂದ್ರನಂತಾಗಿತ್ತು. ಹಲ್ಲು ಹೊತ್ತ ನನಗೇ ಹಠ ಇಲ್ಲ, ಹಲ್ಲಿಗೆ ಮಾತ್ರ ಎಲ್ಲಿಲ್ಲದ ಹಠ–ಸಿಟ್ಟು. ಹಾಗಾಗಿಯೇ ಹಿಂಬದಿಗೆ ಮುಖ ತಿರುಗಿಸಿ ಹೊರ ಬರುವ ಪಣ ತೊಟ್ಟಿತ್ತು. ಮಾತ್ರೆ–ಮದ್ದು ಯಾವುದಕ್ಕೂ ಬಗ್ಗಲಿಲ್ಲ. ನೋವು ಜಗ್ಗಿ

ಎಳೆಯುತ್ತಿತ್ತು. ನನ್ನ ಕ್ಲಿನಿಕ್ ಛೇರ್‌ನಲ್ಲಿ ನಾನೇ ಕುಳಿತು ಡಾಕ್ಟರ್–ಪೇಶೆಂಟ್ ಎರಡೂ ಆಗಿ ಏಕಪಾತ್ರಾಭಿನಯ ಮಾಡುತ್ತಾ ಪರಿಶೀಲಿಸಿದೆ. ಕೆನ್ನೆ ಎಳೆದುಕೊಂಡು, ಕನ್ನಡಿ ಇಟ್ಟು ನೋಡಿ, ಕುಟ್ಟಿ, ತೆಗೆಸದೇ ವಿಧಿಯಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದೂ ಆಯ್ತು. ಮನೆಯಲ್ಲಿ "ನನಗೆ ಬುದ್ಧಿ ಹಲ್ಲು ಬರುತ್ತಿದೆ. ಅದನ್ನು ತೆಗೆಸಬೇಕು" ಎಂದೊಡನೆ ಸಿಕ್ಕಿದ್ದು ಆಶ್ಚರ್ಯದ ಈ ನುಡಿ !

ಸಾಧಾರಣವಾಗಿ ಬುದ್ಧಿಹಲ್ಲು, ವಿಸ್‌ಡಮ್ ಟೂತ್, ಜ್ಞಾನದಂತ ಎಂದು ಕರೆಯಲಾಗುವ ಈ ಕಡೆದವಡೆ ಹಲ್ಲು ಬರುವುದು ಎಲ್ಲಕ್ಕಿಂತ ತಡ,ಅತಿ ಸಾಮಾನ್ಯ ವಾಗಿ ಹದಿನೆಂಟರಿಂದ – ಇಪ್ಪತ್ತೈದು ವರ್ಷಗಳಲ್ಲಿ. ಈ ಸಮಯದಲ್ಲಿ ಹದಿಹರೆಯದ ಹುಡುಗು ಬುದ್ಧಿ ಹೋಗಿ ಒಳ್ಳೆಯ "ಬುದ್ಧಿ" ಬಂದಿರುತ್ತದೆ ಎಂಬ ನಂಬಿಕೆ ಜನರದ್ದು. ಹಾಗಾಗಿ ಬುದ್ಧಿಹಲ್ಲು ಎನ್ನುವುದು ವಾಡಿಕೆ. ಆದರೆ ಈ ಬುದ್ಧಿಹಲ್ಲಿನ ಬುದ್ಧಿ ಎಷ್ಟೋ ಸಂದರ್ಭಗಳಲ್ಲಿ ವಕ್ರವಾಗಿ ಮನಸ್ಸಿಗೆ ಬಂದ ಹಾಗೆ ಯಾವಾಗಲೋ ಬರುವುದುಂಟು. ಅಂಥ 'ಪಿರ್ಕಿ' ಹಲ್ಲುಗಳಲ್ಲಿ ನನ್ನದೂ ಒಂದು!

ಬರೀ ಮುಖ, ಅಲ್ಲಲ್ಲ ತಲೆ ಮಾತ್ರ ತೋರಿಸಿದ್ದ ಹಲ್ಲಿನ "ಫುಲ್ ಫೋಟೋ" ಮೊದಲ ಹೆಜ್ಜೆ, ಅಂದರೆ ಎಕ್ಸ್‌ರೇ! ಅದನ್ನು ನೋಡುತ್ತಾ ಆಹಾ... ಎಷ್ಟು ಉದ್ದದ–ಚೆಂದದ ಹಲ್ಲು ಎಂದು ನಾನು ಹೆಮ್ಮೆಯಿಂದ ಬೀಗಿದರೆ ತೆಗೆಯ ಬೇಕಾದ ಡಾಕ್ಟರ್ 'ಭಾರೀ ಕಷ್ಟದ ಕೇಸ್' ಎಂದು ತಲೆಯಲ್ಲಾಡಿಸಿದರು. ಅಷ್ಟಕ್ಕೇ ಸುಮ್ಮನಿರದೆ 'ನೀವು ಭರತನಾಟ್ಯ ಮಾಡಿದರೆ ಇದು ಬ್ಯಾಲೆ ಮಾಡ್ತಿದೆ' ಎಂದು ಚಿಂತೆಯಿಂದ ನುಡಿದರು. ನನಗೆ 'ಕಲೆ ನನ್ನ ಕಣಕಣದಲ್ಲೂ ಇದೆ' ಎಂಬ ಡೈಲಾಗ್ ಹೊಡೆಯಬೇಕೆನ್ನಿಸಿದರೂ ಸಂದರ್ಭ ಅಲ್ಲವೆಂದು ಸುಮ್ಮನಾದೆ. ಅಂತೂ ಭಾನುವಾರ ಬೆಳಿಗ್ಗೆ ಹಲ್ಲು ತೆಗೆಯಲು ಮುಹೂರ್ತ ನಿಶ್ಚಯಿಸಿದ್ದಾಯ್ತು.

'ತಿಂಡಿ ತಿಂದು ಬನ್ನಿ' ಇದು ಹಲ್ಲು ತೆಗೆಯುವ ಮುನ್ನ, ನಾನೂ ಸೇರಿದಂತೆ ಎಲ್ಲಾ ಡಾಕ್ಟರ್ ತಮ್ಮ ರೋಗಿಗಳಿಗೆ ಹೇಳುವ ಮಾತು. ನಾನಂತೂ ವಿಶೇಷ ಕಾಳಜಿ ವಹಿಸಿ ಮೊದಲು ಶಕ್ತಿಗಾಗಿ ಇಡ್ಲಿ, ಸುಸ್ತಾಗದಿರಲಿ ಎಂದು ವಡೆ, ಆಮೇಲೆ ತಿನ್ನಲಾಗದೇ ಇದ್ದರೆ ಎಂದು ಕೇಸರಿಬಾತ್ ತಿಂದು, ಒಂದೆರಡು ಲೋಟ ಕಾಫಿಯ ಸಮಾರಾಧನೆ ಮುಗಿಸಿದ್ದೆ. ಹಲ್ಲು ತೆಗೆದ ನಂತರ ಬೇಕು ಎಂದು ಒಂದೆರಡು ಡಬ್ಬ (!) ಐಸ್ ಕ್ರೀಂ ತಂದಿಟ್ಟಿದ್ದೆ. ಹೊಲಿಗೆ ಹಾಕುವುದರಿಂದ ಗಟ್ಟಿ ಆಹಾರದ ಬದಲು ಜ್ಯೂಸ್, ಬ್ರೆಡ್, ಬಾಳೆಹಣ್ಣು ಎಲ್ಲಾ ಸಿದ್ಧವಾಗಿತ್ತು. ಒಳ್ಳೇ ಪಾರ್ಟಿಗೆ ತಯಾರಿ ನಡೆದಂತೆ ಕಾಣುತ್ತಿತ್ತು!

ಅಂತೂ ಕ್ಲಿನಿಕ್ಕಿನ ಛೇರಿನ ಮೇಲೆ ಕುಳಿತು ಇಂಜೆಕ್ಷನ್‌ಗಾಗಿ ಬಾಯಿ ತೆರೆದಾಗ ಎದೆಯಲ್ಲಿ ಢವಢವ. ನೂರಾರು ರೋಗಿಗಳಿಗೆ ಹಲ್ಲು ತೆಗೆಯುವಾಗ ಸಣ್ಣಗೆ ಕಾಣುತ್ತಿದ್ದ ಸೂಜಿ ಈಗ ತುಂಬಾ ಚೂಪಾಗಿ ಉದ್ದವಾಗಿ ಕಾಣಿಸಿತು. ಗಟ್ಟಿಯಾಗಿ ಕಣ್ಣುಮುಚ್ಚಿ 'ಗಣೇಶಾ, ಸರಿಯಾಗಿ ಹಲ್ಲು ಹೊರ ಬಂದರೆ ಕಾಯಿ ಒಡೀತೀನಿ' ಎಂದು ಮಣಮಣಿಸಿದೆ. ಅಷ್ಟಕ್ಕೆ, ಅದೇ ಹೆಸರಿನ ಡಾಕ್ಟರ್ 'ನೀವು ಹೊರಗೆ ಬಂದ್ರೆ ಹೊಡೀತೀನಿ ಅಂದರೆ ನನಗೆ ಭಯ ಆಗುತ್ತೆ' ಎನ್ನಬೇಕೇ? ಅಯ್ಯೋ ನಿಮಗಲ್ಲ. ದೇವರಿಗೆ ಕಾಯಿ ಒಡೆಯೋದು ಅಂತ ಅವರಿಗೆ ಸಮಾಧಾನ ಹೇಳಿದ್ದಾಯ್ತು.

ಇಂಜೆಕ್ಷನ್ ಚುಚ್ಚುವಾಗ ಜೋರು ನೋವು. ನಾನು ಹೇಗೋ ನೋವನ್ನು ತಡೆದರೂ ಡಾಕ್ಟರೇ 'ಆ...' ಎಂದು ನರಳಿದರು. ಪಾಪ, ಎಂಥಾ ಒಳ್ಳೆಯವರು! ನನಗಾದ ನೋವನ್ನು ತಾವು ಊಹಿಸಿ ನರಳುತ್ತಿದ್ದಾರೆ ಎನ್ನಿಸಿ ಅಭಿಮಾನ ಉಕ್ಕಿಬಂತು. 'ಪರವಾಗಿಲ್ಲ, ಅಷ್ಟೊಂದು ನೋವಾಗಿಲ್ಲ' ಎಂದು ನುಡಿದೆ. ಅದಕ್ಕವರು 'ನಿಮಗಲ್ಲ, ನನಗೆ ! ಉಗುರಿನಿಂದ ಕೈ ಜೋರಾಗಿ ಒತ್ತಿದ್ದೀರಿ. ನನ್ನ ಕೈಬಿಡಿ' ಎಂದರು. 'ಆ' ಎಂದಿದ್ದರ ಕಾರಣ ತಿಳಿದು ತೆಪ್ಪಗೆ ಕೈ ಕಟ್ಟಿ, ಬಾಯಿ ತೆರೆದು ಕುಳಿತೆ.

ಈ ಕಡೆದವಡೆ ಹಲ್ಲನ್ನು ತೆಗೆಯುವುದು ಬೇರೆ ಹಲ್ಲಿನಷ್ಟು ಸುಲಭವಲ್ಲ. ಹಿಂದಿನ ಹಲ್ಲಾಗಿದ್ದರಿಂದ ಕಾಣುವುದೂ ಕಷ್ಟ. ಕೆಲಸ ಮಾಡಲಂತೂ ತುಂಬಾ ಕಷ್ಟ. ಪೂರ್ತಿ

ಹೊರಗೆ ಬರದೇ ಇರುವುದರಿಂದ ಮೇಲಿರುವ ವಸಡನ್ನು ಹರಿತವಾದ ಚಾಕುವಿನಿಂದ ಕೊಯ್ದು, ಸುತ್ತಲಿರುವ ಮೂಳೆ ಬಿಡಿಸಿ, ಹಲ್ಲನ್ನು ಎರಡು ಮೂರು ಭಾಗವಾಗಿ ತೆಗೆದು ನಂತರ ಹೊಲಿಗೆ ಹಾಕಬೇಕು. ಇಂಜೆಕ್ಷನ್ ಕೊಟ್ಟ ನಂತರ ಅರ್ಧ ನಾಲಗೆ, ಅರ್ಧ ಬಾಯಿ ಮರಗಟ್ಟಿತು. ಆದರೂ ಮುಟ್ಟಿದ-ಒತ್ತಿದ ಅನುಭವವಾಗುತ್ತಿತ್ತು. ಡ್ರಿಲ್ಲಿಂಗ್ ಮಾಡಿ ಮೂಳೆ ಕತ್ತರಿಸುವಾಗ ಬೋರ್‌ವೆಲ್ ಕೊರೆದಂತೆ ಅನ್ನಿಸಿದರೆ ದೊಡ್ಡ ಸುತ್ತಿಗೆಯಿಂದ ಠಪ್ ಠಪ್ ಬಾರಿಸಿದಾಗ ಮೊಳೆ ಹೊಡೆಯುತ್ತಿರಬಹುದೇ ಎಂಬ ಅನುಮಾನ ಶುರುವಾಗಿತ್ತು. ಮೊದಲಿಗೇ ಡಾಕ್ಟರ್ ಬಾಯಿ ತೆರೆದೇ ಇರಬೇಕು ,ಜತೆಗೆ ಮಾತನಾಡುವಂತಿಲ್ಲ ಎಂಬ ಖಡಕ್ ಎಚ್ಚರಿಕೆ ನೀಡಿದ್ದರಿಂದ ಏನೂ ಕೇಳದೇ ಸುಮ್ಮನಿದ್ದೆ. ಅಂತೂ ನನ್ನ ಹಾಗೂ ಡಾಕ್ಟರ್ ಜಂಟಿ ಪುಣ್ಯದಿಂದ ಹದಿನೈದು ನಿಮಿಷಗಳಲ್ಲಿ ಹಲ್ಲು ಇಡಿಯಾಗಿ ಹೊರಬಂತು. ಚಿಮ್ಮಿ ನೆಗೆಯಿತು ಎಂಬುದೇ ಸರಿ! ತಲೆ ನೇರವಾಗಿತ್ತು, ಮೈ ಮಾಟವಾಗಿತ್ತು, ಕಾಲುಗಳು ಉದ್ದವಾಗಿ ಬುಡದಲ್ಲಿ ಮಾತ್ರ ಬಾಗಿದ್ದವು. ನಿಜಕ್ಕೂ ಬ್ಯಾಲೆ ಡಾನ್ಸರ್ ತರಾನೇ ಇತ್ತು; ಸ್ವಲ್ಪ ಡುಮ್ಮಿ ಅಷ್ಟೇ!

ಹಲ್ಲು ತೆಗೆದ ಜಾಗದಲ್ಲಿ ಹೊಲಿಗೆ ಹಾಕಿ ಅದನ್ನು ಮುಚ್ಚಿ ವಿಶ್ರಾಂತಿ ಕೊಟ್ಟರು ಡಾಕ್ಟರ್. ಆಮೇಲೆ ಹುಡುಗನನ್ನು ಕರೆದು 'ತಣ್ಣಗಿನ ಜ್ಯೂಸ್ ತಾ' ಅಂದರು. ನನಗೆ ತುಂಬಾ ಖುಷಿಯಾಯ್ತು. ಎಷ್ಟು ಒಳ್ಳೆಯ ಪದ್ಧತಿ, ರೋಗಿಗಳಿಗೆ ಈ ರೀತಿ ಕೊಟ್ಟರೆ ಚೆನ್ನ ಎಂದು ಅದಕ್ಕಾಗಿ ಕಾಯುತ್ತಾ ಕುಳಿತೆ. ದೊಡ್ಡ ಲೋಟದ ತುಂಬಾ ಕಿತ್ತಳೆ ಬಣ್ಣದ ತಣ್ಣನೆಯ ಜ್ಯೂಸ್ ತಂದ ಹುಡುಗ .ಜ್ಯೂಸನ್ನು ಗಟಗಟ ಕುಡಿದ ಡಾಕ್ಟರ್ 'ಸಿಕ್ಕಾಪಟ್ಟೆ ಸುಸ್ತಾಯ್ತು, ಅದಕ್ಕೇ! ನೀವು ಅರ್ಧ ಗಂಟೆ ಹತ್ತಿ ಬಿಗಿಯಾಗಿ ಒತ್ತಿ ಹಿಡಿಯಿರಿ' ಎಂದು ಬಿಟ್ಟರು. ಸಿಟ್ಟಿನಿಂದ ಹತ್ತಿಯನ್ನು ಜೋರಾಗಿಯೇ ಒತ್ತಿ ಹಿಡಿದೆ.

ಮನೆಗೆ ಬಂದರೆ ಎಲ್ಲರಿಗೂ ನನಗಿಂತ ಹೆಚ್ಚಾಗಿ ಹಲ್ಲಿನ ಬಗ್ಗೆಯೇ ಕುತೂಹಲ. ಸಂಜೆಯಾಗುವಷ್ಟರಲ್ಲಿ ಊತ-ನೋವು ಎರಡೂ ಶುರುವಾಗಿತ್ತು. ಹೊಲಿಗೆ ಹಾಕಿದ್ದರಿಂದ ಬಾಯಿ ತೆರೆಯಲೂ ಕಷ್ಟ. ಮಕ್ಕಳು-ಗಂಡ ಮಾತಲ್ಲಿ 'ಪಾಪ' ಅಂದರೂ ಒಳಗೊಳಗೇ ಸುಮ್ಮನೆ ಇದ್ದ, ಕೂಗಾಡದ ನನ್ನ ಹೊಸ ರೂಪ ಕಂಡು ಖುಷಿಯೇ. ನನಗಾಗಿ ಬೇರೆ ಬೇರೆ ರೀತಿ ಆಹಾರ-ಐಸ್‌ಕ್ರೀಂ ತಂದಿಟ್ಟಿದ್ದೇನೋ ಹೌದು. ಆದರೆ ಬಾಯಿ ತೆರೆಯಲೇ ಕಷ್ಟವಾದಾಗ ತಿನ್ನುವುದಾದರೂ ಹೇಗೆ? 'ಛೇ ಛೇ' ಎನ್ನುತ್ತಲೇ ಹಾಳಾಗಿಬಿಟ್ಟರೆ ಎಂಬ ಕನಿಕರ-ಮುಂದಾಲೋಚನೆಯಿಂದ ಎಲ್ಲವನ್ನು ಚಪ್ಪರಿಸಿ ಸವಿದರು. ನನಗೆ ಪ್ರತಿ ಶಬ್ದವೂ ಕರ್ಣಕಠೋರ!

ಕಡೆಹಲ್ಲು ತೆಗೆದ ನಂತರ ಬಾಯಿಯ ಮಾಂಸ ಖಂಡಗಳು ಬಿಗಿಯದಂತೆ ಆಗಾಗ ಬಾಯಿಯ ವ್ಯಾಯಾಮ ಮಾಡಲು ಹೇಳಲಾಗುತ್ತದೆ. ಹಾಗೆಯೇ ದವಡೆಯ ಚಲನೆ ಸರಾಗವಾಗಲು ಚ್ಯೂಯಿಂಗ್‌ಗಮ್ ಅಗಿಯುವ ಸಲಹೆ ಕೂಡಾ. ನಾನಂತೂ ತುಂಬಾ ಗಂಭೀರವಾಗಿ ಇದನ್ನು ಪರಿಗಣಿಸಿ ಬಾಯಿಯ ವ್ಯಾಯಾಮ ಶುರುಮಾಡಿದೆ;

ಕನ್ನಡಿ ಮುಂದೆ ನಿಂತು ನೋಡಿದಾಗ ನನಗೇ ಹೆದರಿಕೆ ಆಗುವಷ್ಟು! ಒಂದು ಕಡೆ ಪೂರಿಯಂತೆ ಊದಿದ ಕೆಂಪು ಕೆನ್ನೆ, ನೋವಿನಿಂದ ಸಣ್ಣಗಾದ ಕಣ್ಣು, ಕೆದರಿದ ಕೂದಲು, ಚಿತ್ರ-ವಿಚಿತ್ರವಾಗಿ ಬಾಯಿ ಅಲ್ಲಾಡಿಸುವ ನಾನು! ಇದು ಬೇಡ ಎಂದು ಚ್ಯೂಯಿಂಗ್‌ಗಮ್ ಬಾಯಲ್ಲಿಟ್ಟು ಚೆನ್ನಾಗಿ ಜಗಿದೆ. ಊರಲ್ಲಿ ಎಮ್ಮೆ ಹೀಗೆ ಮಾಡುತ್ತೆ ಎಂದು ಮಕ್ಕಳು ನೆನಪಿಸಿದರು. ಹಾಗೆ ಸುಮಾರು ಹೊತ್ತು ಜಗಿದೂ ಜಗಿದೂ ಕಡೆಗೆ ಉಗಿಯಲೆಂದು ಉಗುಳಿದರೆ ಏನೂ ಬರಲಿಲ್ಲ. ನುಂಗಿದ್ದೇನೆ ಎಂದುಕೊಂಡು ಸುಮ್ಮನಾದೆ.

ಮುಖ ಊದಿದ್ದರೂ ಮನೆಯಲ್ಲಿ ಕುಳಿತು ಬೇಸರವೆಂದು ನಿಧಾನವಾಗಿ ವಾಕಿಂಗ್ ಹೊರಟಿದ್ದಾಯ್ತು. ದಿನಾ ಸಿಗುವ ಪರಿಚಿತರ ನಾಯಿ ನನ್ನನ್ನು ನೋಡಿ ಒಮ್ಮೆಲೇ ಆವೇಶ ಬಂದು ಬೊಗಳತೊಡಗಿತು. ಇದಕ್ಕೇನಾಯಿತು ಎಂದು ಯೋಚಿಸುವಷ್ಟರಲ್ಲಿ ನಾಯಿ ಮಾಲಿಕರು 'ನಮ್ಮ ದೀಪು ಯಾರಿಗೂ ಬೌವ್ ಅನ್ನದ ಸಾಧು ಪ್ರಾಣಿ. ಆದರೆ ಮಂಗ ಕಂಡರೆ ಮಾತ್ರ ಮೈ ಮೇಲೆ ಬಂದ ಹಾಗೆ ಆಡ್ತಾನೆ' ಎಂದರು. ಮೊದಲೇ ನಾಯಿ ಅಂದರೆ ಅಷ್ಟಕಷ್ಟೇ ನನಗೆ. ಈಗಂತೂ ಮತ್ತಷ್ಟು ಅನಾದರ ಹುಟ್ಟಿತು.

ಸತತವಾಗಿ ಮಾತ್ರೆ ಸೇವಿಸಿ, ಉಗುರು ಬೆಚ್ಚಗಿನ ಉಪ್ಪು ನೀರಲ್ಲಿ ಬಾಯಿ ಮುಕ್ಕಳಿಸಿ, ಮೆದುವಾದ ಆಹಾರ ತಿಂದು ಅಂತೂ ನೋವು ಮತ್ತು ಊತ ನಿಧಾನವಾಗಿ ಕಡಿಮೆಯಾಗುತ್ತಾ ಬಂತು. ವಾರ ಕಳೆದು ಹೊಲಿಗೆ ಬಿಚ್ಚಿಸಿಕೊಳ್ಳಲು ಹೋದಾಗ ಡಾಕ್ಟರಿಗೆ ಆಶ್ಚರ್ಯ. ಹೊಲಿಗೆ ಜತೆ ಗಮ್ ಕೂಡಾ ಸೇರಿಕೊಂಡು ಗಟ್ಟಿ ಸಿಮೆಂಟ್ ಹಾಕಿದಂತಾಗಿತ್ತು. 'ಗಮ್ ತಿನ್ನಿ ಎಂದರೆ ಇಷ್ಟು ಜಗಿದು ಅಂಟಿಸುವುದಲ್ಲ' ಎಂದರು. ಹೇಗೋ ಮಾಡಿ ಹೊಲಿಗೆ ಬಿಚ್ಚುವಷ್ಟರಲ್ಲಿ ಡಾಕ್ಟರ್ ಸುಸ್ತೋ ಸುಸ್ತು. ವಾರದಲ್ಲಿ ಹೊಲಿಗೆ ತೆಗೆದರೂ ಹಲ್ಲು ತೆಗೆದ ಹೊಂಡ ಮುಚ್ಚಲು ಬೇಕಾಗಿದ್ದು ಬರೋಬ್ಬರಿ ಒಂದು ತಿಂಗಳು!

'ಬುದ್ಧಿ ಹಲ್ಲು ಹೊರಗೆ ಬಂತು, ಅದರ ಜತೆ ಇದ್ದ ಬದ್ದ ಬುದ್ಧಿಯೂ ಹೊರಗೆ ಹೋಗಿದ್ದರೆ??' ಎಂಬ ಸಂದೇಹ ಮನೆಯವರಿಗೆ. ಬುದ್ಧಿ ಹಲ್ಲು ಹೊರಗೆ ಹೋಗಿ ಬುದ್ಧಿ ಬಂದಿದೆ ಎನ್ನುವ ವಾದ ನನ್ನದು, ಸರಿಯಲ್ಲವೇ?

**ಕೆ.ಎಸ್. ಚೈತ್ರ ಬೆಂಗಳೂರು**

ಕನ್ನಡ ಪ್ರಭ, ದೀಪಾವಳಿ ವಿಶೇಷಾಂಕ 2014

## ಮದುವೆ ಹಿನ್ನೆಲೆಯಲ್ಲಿ...

ನನ್ನ ಸ್ನೇಹಿತೆಯ ದೊಡ್ಡಮ್ಮನ ಮಗನ ಮದುವೆಗೆ ಕರೆಯೋಲೆ ಬಂದಿತು. ನಾನು ನನ್ನ ಸ್ನೇಹಿತೆ ಇಬ್ಬರೂ ಚನ್ನರಾಯಪಟ್ಟಣಕ್ಕೆ ಹೋದೆವು. ಮದುವೆ ನಡೆಯುತ್ತಿದ್ದ ಕಲ್ಯಾಣ ಮಂಟಪ ಎಲ್ಲಿದೆ ಅಂತ ಇಬ್ಬರಿಗೂ ತಿಳಿದಿರಲಿಲ್ಲ. ಅವಳ ತಮ್ಮನಿಗೆ ಫೋನ್ ಮಾಡಿಕೊಂಡು ಅವರಿವರನ್ನು ಕೇಳುತ್ತಾ ಹೇಗೋ ಕಲ್ಯಾಣ ಮಂಟಪ ಹುಡುಕಿದ್ದಾಯಿತು. ಆದರೂ ಅನುಮಾನ. ಯಾಕೆಂದರೆ ಅಲ್ಲಿ ಮದುವೆಯ ವಾತಾವರಣವೇ ಇರಲಿಲ್ಲ. ಕಲ್ಯಾಣ ಮಂಟಪದ ಮೊದಲ ಮೆಟ್ಟಿಲನ್ನು ಹತ್ತಿದ ತಕ್ಷಣ ನಮಗೆ ಎದುರಾದದ್ದು ಕೈಯಲ್ಲಿ ಕೋಲನ್ನು ಹಿಡಿದ ವ್ಯಕ್ತಿ. ಅಯ್ಯೋ! ಇದೇನು ನಾವು ಬೇರೆಲ್ಲಿಗೋ ಬಂದೆವಾ? ಅನ್ನೋ ಅನುಮಾನ ನಮಗೆ. ಇಬ್ಬರೂ ಪರಸ್ಪರ ಮುಖ ನೋಡಿಕೊಂಡು ಅವನನ್ನೇ ದುರುಗುಟ್ಟಿ ನೋಡುತ್ತಿದ್ದೆವು. ಅಷ್ಟರಲ್ಲಿ ನಮಗೆ ಪರಿಚಯ ಇದ್ದವರು ನಮ್ಮನ್ನು ನೋಡಿ ಅಲ್ಲಿ ಯಾಕೆ ನಿಂತಿದ್ದೀರಿ? ಮೇಲಕ್ಕೆ ಬನ್ನಿ. ಅದು ಊಟದ ಹಾಲ್ ಎಂದದ್ದು ನಮ್ಮನ್ನ ಎಚ್ಚರಿಸಿತು.

ನಾನು ನಗುತ್ತ, ನಮ್ಮೆದುರು ಇದ್ದ ವ್ಯಕ್ತಿಯನ್ನ ಒಂದು ಬಾರಿ ದಿಟ್ಟಿಸಿದೆ. ಅಜಾನುಬಾಹು, ಗುಡಾಣದ ಹೊಟ್ಟೆ, ಬೋಳು ತಲೆ, ಅಲ್ಲೊಂದಿಲ್ಲೊಂದು ಇದ್ದ ಹಲ್ಲುಗಳು, ಕೈಯಲ್ಲಿ ಒಂದು ಕೋಲು. ಅಬ್ಬಾ! ಎಂದುಕೊಂಡೆ. ಅವನು ಅಡುಗೆ ಭಟ್ಟನಾಗಿದ್ದ. ಕಲ್ಯಾಣ ಮಂಟಪದ ಪ್ರವೇಶದಲ್ಲಿಯೇ ಊಟದ ಹಾಲ್ ಇತ್ತು. ಮೊದಲನೇ ಮಹಡಿಯಲ್ಲಿ ಆಡಂಬರದ ಮದುವೆಯ ಕಾರ್ಯ ನೆರವೇರುತ್ತಿತ್ತು ಅನ್ನೋದಕ್ಕಿಂತ ಮುಹೂರ್ತವೆಲ್ಲ ನಡೆದಾಗಿತ್ತು ಎಂದರೆ ಸೂಕ್ತ. ಯಾಕೆಂದರೆ ಕಲ್ಯಾಣ ಮಂಟಪ ಹುಡುಕುವುದರಲ್ಲೇ ಕಾಲ ಕಳೆದ ನಾವು ರಿಸೆಪ್ಷನ್ ಶುರುವಾಗುವ ಕಾಲಕ್ಕೆ ತಲುಪಿದ್ದೆವು.

ಮೊದಲ ಮಹಡಿಯಲ್ಲಿ ಹಾಕಿದ್ದ ಕುರ್ಚಿಯಲ್ಲಿ ಹೋಗಿ ಕುಳಿತೆವು. ಅಲ್ಲಿ ನಮನ್ನು ಸ್ವಾಗತಿಸಿದ್ದು ವಧು–ವರರಿಗೆ ಇಟ್ಟಿದ್ದ ಎರಡು ಕುರ್ಚಿಗಳು. ಅವೂ ನಾವ್ಯಾರಿಗೂ ಕಡಿಮೆಯಿಲ್ಲ ಎಂದು ಬೀಗುತ್ತಿದ್ದವು. ನಾವು ಬಂದದ್ದನ್ನು ನೋಡಿ ಪರಿಚಯ ಇದ್ದವರು ಬಂದು ಮಾತನಾಡಿಸಿದರು. ನನ್ನ ಸ್ನೇಹಿತೆ ಮಾತಿನ ಮಲ್ಲಿ. ಯಾರಾದರೂ ಮಾತಿಗೆ ಸಿಕ್ಕರೆ ಮುಗಿಯಿತು ಕಥೆ. ನಾನು ಹೋಗಿ ಕರೆದ ಮೇಲೆಯೇ ಬರೋದು. ಅವಳ ದೊಡ್ಡಮ್ಮನ ಮಗನ ಮದುವೆಯಾದ್ದರಿಂದ ನೆಂಟರಿಷ್ಟರು, ಪರಿಚಯ ಇದ್ದವರು ಬಂದಿದ್ದರು. ನನಗೂ ಕೆಲವರನ್ನ ಪರಿಚಯ ಮಾಡಿಸಿದಳು. ನಾನೂ ಸಣ್ಣ ನಗೆ ಬೀರಿ ಸುಮ್ಮನಾಗುತ್ತಿದ್ದೆ. ಬಿಸಿಲಲ್ಲಿ ನಡೆದು ನಡೆದು ದಣಿದಿದ್ದ ನನಗೆ ಕೂತರೆ ಸಾಕು ಎನಿಸುವುದರ ಜೊತೆಗೆ ನಿದ್ರೆಯ ಮಂಪರು ಬೇರೆ. ಹೇಗೋ ಅಲ್ಲಿಲ್ಲಿ ಕಣ್ಣಾಡಿಸುತ್ತ ಕುಳಿತೆ. ನನ್ನ ದೃಷ್ಟಿ ಸ್ಟೇಜ್‌ನ ಕಡೆಗೆ ಹೋಯಿತು. ಇನ್ನೂ ರಿಸೆಪ್ಷನ್ ಶುರುವಾಗಿರಲಿಲ್ಲ.

ಅಲ್ಲಿ ಪುಟ್ಟ ಮಕ್ಕಳು ಕುರ್ಚಿ ಮೇಲೆ ಕುಳಿತು ಆಟವಾಡುತ್ತಿದ್ದವು. ಆ ಮಕ್ಕಳಿಗೆ ಮದುವೆ ಜಂಜಾಟ ಬೇಕಿರಲಿಲ್ಲ. ಎಲ್ಲರೂ ಒಂದೇ ಎಂಬ ಭಾವ ಅವರಲ್ಲಿತ್ತು. ಕೆಲ ಮಕ್ಕಳು ಯಾವುದೇ ಗೋಜಿಗೆ ತಲೆ ಕೆಡಿಸಿಕೊಳ್ಳದೇ ತಮ್ಮ ಪಾಡಿಗೆ ತಾವು ಜೂಟಾಟ, ತುಂಟಾಟ, ಪಕ್ಕದಲ್ಲಿದ್ದ ಮಕ್ಕಳಿಗೆ ಚಿವುಟುವುದು, ಅವುಗಳನ್ನ ನೋಡಿ ಆಡಿಕೊಳ್ಳುವುದು ಮಾಡುತ್ತಿದ್ದವು. ಒಂದು ಮಗು ಚಿವುಟಿಸಿಕೊಂಡು ತನ್ನ ಅಮ್ಮನ ಬಳಿ ಹೋಗಿ ಎದೆಗೆ ಒರಗಿ ಚಿವುಟಿದ ಮಕ್ಕಳ ಕಡೆಗೆ ವಕ್ರನೋಟ ಬೀರಿತು. ಉಳಿದ ಮಕ್ಕಳು ಆ ಮಗುವನ್ನು ನೋಡಿ ಕೇಕೆ ಹಾಕಿ ನಗುತ್ತಿದ್ದವು. ಕೆದರಿದ ಕೂದಲು, ಸೊರಗುಟ್ಟುತ್ತಾ ಸಿಂಬಳವನ್ನು ಎಳೆದುಕೊಳ್ಳುತ್ತಾ ಅಲ್ಲಿ ಇಲ್ಲಿ ಖುಷಿಯಿಂದ ನೆಗೆದಾಡುತ್ತಿದ್ದ ಮಗುವಿನೊಂದಿಗೆ ಉಳಿದ ಮಕ್ಕಳೂ ಜೊತೆಗೂಡಿ ಯಾವ ಜಂಜಾಟವಿಲ್ಲದೇ ಅವರದೇ ಲೋಕದಲ್ಲಿ ಮುಳುಗಿದವು.

ಮೂಲೆಯಲ್ಲಿ ಒಂದು ಮಗು ಬೇರೆ ಮಕ್ಕಳಾಡುವ ಆಟವನ್ನು ಗಮನಿಸುತ್ತಾ ಸುಮ್ಮನೆ ಕುಳಿತಿತ್ತು. ಆ ಮಗುವಿಗೆ ಇಲ್ಲಸಲ್ಲದ ಮೇಕಪ್ ಮಾಡಿ, ತುಟಿಗೆ ಲಿಪ್‌ಸ್ಟಿಕ್ ಬಳಿದು, ಅದರ ವಯಸ್ಸಿಗೆ ತಕ್ಕದಲ್ಲದ ಡ್ರೆಸ್ ಹಾಕಿ ಗೊಂಬೆ ಮಾಡಿ ಕೂರಿಸಿದ್ದರು. ಆ ಮಗು ನಡೆಯಲಾರದೇ ಹಿಂಸೆಯಿಂದ ಬೇರೆ ಮಕ್ಕಳನ್ನು ಗಮನಿಸುತ್ತಾ ಕುರ್ಚಿಯಲ್ಲಿ ಅಲುಗಾಡದೇ ಕುಳಿತಿತ್ತು. ಒಮ್ಮೆ ಅವರಮ್ಮನ ಕಡೆಗೆ ನೋಡಿ ನಾನೂ ಅವರೊಟ್ಟಿಗೆ ಆಟ ಆಡುವೆ ಎಂಬುದನ್ನು ಕಣ್ಣಲ್ಲೇ ತಿಳಿಸಿದರೂ ಆ ಮಹಾತಾಯಿ ಆಟ ಆಡಿದರೆ ಮೇಕಪ್, ಡ್ರೆಸ್ ಎಲ್ಲಾ ಹಾಳಾಗುತ್ತೆ ಅಂತ ಕಣ್ಣಲ್ಲೇ ಗುರಾಯಿಸಿದಳು. ಅವಳೂ ಗಾಢ ಮೇಕಪ್‌ನಲ್ಲಿ ರಾರಾಜಿಸುತ್ತಿದ್ದಳು. ಕಂತೆಗೆ ತಕ್ಕ ಬೊಂತೆ ಎಂದುಕೊಂಡು ಸುಮ್ಮನಾದೆ. ಅಷ್ಟರಲ್ಲಿ ನನ್ನ ಸ್ನೇಹಿತೆ ಬಂದು ಊಟಕ್ಕೆ ಕರೆದಳು. ಇಬ್ಬರೂ ಊಟ ಮುಗಿಸಿ ಬಂದು ಕುಳಿತೆವು. ಅಷ್ಟರಲ್ಲಿ ರಿಸೆಪ್ಷನ್‌ಗೆ ಗಂಡು–ಹೆಣ್ಣು ಬಂದು ನಿಂತಿದ್ದರು. ಹೇಗೋ ಹೊಟ್ಟೆಗೆ ಅನ್ನ ಬಿದ್ದಿತ್ತು. ನನ್ನ ಬುದ್ಧಿಯೂ ಚುರುಕಾಯಿತು. ಕಣ್ಣುಗಳು ತಮ್ಮಿಷ್ಟದಂತೆ ಎಲ್ಲರ ಮೇಲೂ ಒಂದು ಸುತ್ತಾಕಿದವು.

ನನ್ನ ಎದುರಲ್ಲಿ ಕೆಲ ಮಹಿಳೆಯರೂ ಕುಳಿತಿದ್ದರು. ಅವರು ಇಲ್ಲಸಲ್ಲದ ಪುರಾಣಗಳನ್ನು, ಸಂಸಾರದ ಆಗು–ಹೋಗುಗಳನ್ನು, ಇನ್ನೊಬ್ಬರ ವಿಚಾರಗಳನ್ನು ಹೇಳಿಕೊಳ್ಳುವುದು, ಬೇರೆಯವರನ್ನು ನೋಡಿ ಏನಾದರೂ ಮಾತಾಡಿಕೊಂಡು ನಗುವುದು, ಮುಖ ಸಿಂಡರಿಸಿಕೊಳ್ಳುವುದು ಹೀಗೆ ನಾನಾ ತರಹದ ನಡೆಗಳನ್ನು ಗಮನಿಸುತ್ತಿದ್ದೆ. ಕೆಲವರು ತಾವಾಕಿರುವ ಬಟ್ಟೆ, ಒಡವೆಗಳನ್ನು ಸರಿ ಮಾಡಿಕೊಂಡು, ಎಲ್ಲರಿಗೂ ಕಾಣುವ ಹಾಗೆ ಒಡವೆಗಳನ್ನು ಮೇಲೆಳೆದುಕೊಂಡು ಫೋಟೊಗೆ ಪೋಸು ಕೊಡಲು ಸರದಿಯಲ್ಲಿ ನಿಲ್ಲಲು ಅಣಿಯಾಗುತ್ತಿದ್ದರು. ಇನ್ನೂ ಕೆಲವರು ಬರುವ ಹೆಂಗಸರ ಒಡವೆ, ಬಟ್ಟೆಗಳನ್ನು ಅಳೆದು ತಾನೇನು ಅವರಿಗಿಂತ ಕಮ್ಮಿಯಿಲ್ಲ ಎಂದು ಬೀಗುತ್ತಿದ್ದರು. ಗಂಡಸರು ಎಲ್ಲರ ಚಲನವಲನಗಳನ್ನು ನೋಡುತ್ತಾ, ತಮಗೆ ಪರಿಚಯವಿರುವವರನ್ನು ಮಾತಾಡಿಸಿ, ಕೈ ಕುಲುಕಿ ಕುಳಿತುಕೊಳ್ಳುತ್ತಿದ್ದರು. ಕೆಲವರು

ಅಲ್ಲೇ ನಿದ್ದೆ ಹೋಗಿದ್ದರು. ಹುಡುಗರು ಗುಂಪಲ್ಲಿ ಕುಳಿತು ಚೆನ್ನಾಗಿರೋ ಹುಡುಗಿ ಬಂದಿದ್ದಾಳೋ ಎಂದು ಗಮನಿಸುತ್ತಾ, ಕೆಲವರನ್ನು ರೇಗಿಸುತ್ತಾ ತಮ್ಮದೇ ಧಾಟಿಯಲ್ಲಿ ತಮಾಷೆ ಮಾಡುತ್ತಿದ್ದರು.

ಕೆಲವರ ಮನದಲ್ಲಿ ಬಡವರಿಗೆ ಜಾಗವಿರಲಿಲ್ಲ. ಬಡವರು ಬಂದು ಮಾತಾಡಿಸಿದರೂ ಮುಖ ಒಂಥರ ಮಾಡಿಕೊಂಡು ಹ್ಞೂಂಗುಡುವುದೇ ಧರ್ಮಸಂಕಟ ಆಗುತ್ತಿತ್ತು. ಒಳ್ಳೆ ಬಟ್ಟೆ, ಒಡವೆಗಳನ್ನು ಧರಿಸಿದವರು ಮಾತ್ರವೇ ನಮ್ಮ ಜೊತೆ ಮಾತನಾಡಲು, ಬೆರೆಯಲು ಯೋಗ್ಯರು ಎಂಬ ಭಾವನೆ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು.

ಆ ಮದುವೆಗೆ ಬಂದಿದ್ದ ಕೆಲವರು ಬಡವರು. ರಾತ್ರಿ ಇಡೀ ಮದುವೆ ಮನೆಯಲ್ಲಿ ಕೆಲಸ ಮಾಡಿ ದಣಿದಿದ್ದ ಅವರನ್ನು ಮದುವೆಯ ದಿನ ಮಾತಾಡಿಸುವವರೇ ದಿಕ್ಕಿರಲಿಲ್ಲ. ಯಾಕೆಂದರೆ ವರನ ಅಣ್ಣ–ಅತ್ತಿಗೆ ಅವರ ಸಹೋದ್ಯೋಗಿಗಳು ಬಂದರೆ ಹಲ್ಕಿರಿದು ಮಾತಾಡಿಸಿ, ಫೋಟೊಗೆ ಕರೆದು ನಿಲ್ಲಿಸಿ, ಊಟದ ಹಾಲ್‌ವರೆಗೂ ಅವರನ್ನು ಬಿಟ್ಟು ಬರುವ ಒಡನಾಟ ಇಟ್ಟುಕೊಂಡಿದ್ದರು. ದುಡಿದು ದಣಿದ ಬಡವರು ಫೋಟೊಗೆ ನಮ್ಮನ್ನು ಕರೆಯುತ್ತಾರೆ. ಈಗ ಹೋಗಿ ಫೋಟೊಗೆ ನಾವೂ ನಿಲ್ಲೋಣ ಎಂದು ಆಸೆಯಿಂದ ಅವರ ಮುಖವನ್ನು ನೋಡಿ ನೋಡಿ ಸಾಕಾಗಿ ಬೇಸತ್ತು, ಯಾರು ಕರೆಯದಿದ್ದರೇನಂತೆ ನಾವೇ ಹೋಗೋಣ ಎಂದು ಕುರ್ಚಿಯಿಂದ ಎದ್ದು ಸೀದಾ ಸ್ಟೇಜ್‌ನ ಹತ್ತಿರ ಹೋಗಿ ನಿಂತು ಫೋಟೊಗೆ ಪೋಸ್ ಕೊಡಲು ಮುಂದಾದರೆ, ಅಷ್ಟರಲ್ಲಿ ಇರಿ ಅಂತ ಹೇಳಿ ತಮಗೆ ಪರಿಚಯವಿದ್ದವರನ್ನು ವರನ ಅಣ್ಣ–ಅತ್ತಿಗೆ ಮುಂದಕ್ಕೆ ಕರೆದು ನಿಲ್ಲಿಸಿ ಫೋಟೊ ತೆಗೆಸುತ್ತಿದ್ದರು. ಅವರಲ್ಲಿ ಕೆಲವರು ಸಾವಧಾನದಿಂದ ಕಾದು ಫೋಟೊ ತೆಗೆಸಿಕೊಂಡರು. ಇನ್ನು ಕೆಲವರು ಹಾಗೆಯೇ ವಾಪಾಸ್ಸು ಬಂದು ಹಾಕಿದ್ದ ಕುರ್ಚಿಯಲ್ಲಿ ಕುಳಿತುಕೊಂಡರು.

ಹಳ್ಳಿಗಳಲ್ಲಿ ಮದುವೆ ಎಂದರೆ ಒಂದು ವಾರದಿಂದಲೇ ನೆಂಟರಿಷ್ಟರೆಲ್ಲ ಒಂದೆಡೆ ಸೇರಿ, ರಾತ್ರಿ ಬೆಳಗೂ ಶಾಸ್ತ್ರ ಸಂಪ್ರದಾಯ ಅಂತ ನಿದ್ದೆ ಮಾಡದೇ ಎಲ್ಲರೂ ಜೊತೆಗೂಡಿ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಅಲ್ಲಿ ಸಂಬಂಧಗಳಿಗೆ ಬೆಲೆ ಇರುತ್ತದೆ. ಬಡವ ಶ್ರೀಮಂತ ಎಂಬ ಬೇಧ–ಭಾವ ಇರುವುದಿಲ್ಲ. ಎಲ್ಲರೂ ಒಂದೇ ಎಂಬ ಭಾವನೆ ಅವರಲ್ಲಿ ಮನೆಮಾಡಿರುತ್ತದೆ. ಆದರೆ ಪಟ್ಟಣಗಳಲ್ಲಿ ಕೂತು ತಿನ್ನುವಷ್ಟು ದುಡ್ಡಿದ್ದರೂ ಸಂಬಂಧಗಳಲ್ಲಿ ಹೊಂದಾಣಿಕೆ, ಪ್ರೀತಿ, ವಿಶ್ವಾಸ ಇರುವುದಿಲ್ಲ. ತೋರಿಕೆಗೆ ಮಾತ್ರ ಎಲ್ಲರ ಎದುರು ನಗುನಗುತ್ತಾ ಮಾತಾಡುತ್ತಾರೆ. ಆದರೆ ನಿಜವಾಗಿಯೂ ಅವರಲ್ಲಿ ಪ್ರೀತಿ–ವಿಶ್ವಾಸದ ಕೊರತೆ ಎದ್ದು ಕಾಣುತ್ತದೆ.

**ಕಾವೇರಿ ಎಸ್.ಎಸ್.**

ಉದಯವಾಣಿ 9.10.2014

# ಶ್ರಾವಣ ಬಂತು ನಾಡಿಗೆ

ಬೆಂಗಳೂರಿನ ಮಾಲ್ ಒಂದರೊಳಗ ಗಾಜಿನ ಡಬ್ಬಿಯೊಳಗ ಮೆಕ್ಕಿ ಜೋಳದ ಅಳ್ಳು, ಅರಳಿ ಅರಳಿ, ಹೊರಳಿ ಹೊರಳಿ ಬೀಳ್ತಿದ್ವು. ಅರಳೂದು, ಹೊರಳೂದು ನೋಡೂದ್ರೊಳಗ, ಬಾಲ್ಯಕ್ಕೆ ಮರಳಿದ್ಹಂಗ ಆಗಿತ್ತು. ಮನ್ಯಾಗ ಬಿಳೀ ಗುಬ್ಬಿ ಜೋಳ, ತೊಳದು, ನೆರಳಾಗ ಒಣಗಿಸಿ, ಭಟ್ಟಿಗೆ ಹುರ್? ಯಾಕ ಕೊಡ್ತಿದ್ರು. ಅದು ಖಮ್ಮಂತ ಇಡೀ ಓಣೀನ ಮೂಗರಳಿಸೂ ಹಂಗ ಸುವಾಸನಿ ಬೀರತ್ತಿತ್ತು. ಕೈಯ್ಯಾಗ ಬಿಸಿಬಿಸಿ ಅಳ್ಳು ಇದ್ರು, ಮಾರೀ ಮಾತ್ರ ಅರಳಿರತಿರಲಿಲ್ಲ. ಅಲ್ಲಿ ಚೌತಿ, ಪಂಚಮಿ ಯವಾಗ ಮುಗೀತೈತಿ? ಯವಾಗ ಇವನ್ನು ಮುಕ್ಕತೀವಿ ಅನ್ನೂ ನಿರೀಕ್ಷೆನೆ ಮನಿ ಮಾಡಿರ್ತಿತ್ತು. ಶ್ರಾವಣ ಹಂಗೇ ಬರ್ತಿರಲಿಲ್ಲ. ಹಬ್ಬದ ಸಾಲು. ನಿಲ್ಲದ ಜಿಟಿಜಿಟಿ ಮಳಿ. ಮನಿಯೊಳಗ ಆರದ ಒಲಿ, ಖಾಲಿಯಾಗದ ತಿನಿಸಿನ ಡಬ್ಬಿ. ಶ್ರಾವಣಂದ್ರ ಉಪವಾಸ. ಸೋಮವಾರ ಪ್ರವಚನ, ಮಂಗಳವಾರ ಮಂಗಳ ಗೌರಿ, ಶುಕ್ರವಾರ ವರಮಹಾಲಕ್ಷ್ಮಿ. ನಡುವಿನ ದಿನ ಉಳದ ವಾರಗಳಿಗೆ ತಯಾರಿ ಮಾಡ್ಕೊಳ್ಳಾಕ ಬಿಡುವಿನ ದಿನ. ಬೀದರ್‌ನಂಥ ಬೀದರ್‌ನಾಗ ಶ್ರಾವಣದ ಮಳಿ ಬಂತಂದ್ರ, ಕೆಂಪನ ಕೆಸರು ಛಂದ ಕಾಣ್ತಿತ್ತು. ಅಂಗಾಲಿಗೆ ಕೆಮ್ಮಣ್ಣು ಮೆತ್ತಿ, ಹಿಮ್ಮಡಿ ತನ ಅಂಟ್ಕೊಂಡ್ರ ಆ ಕಾಲು ನೋಡೂದೇ ಒಂದು ಚಂದ. ಶ್ರಾವಣದಾಗ ಭಾಳ ಮಂದಿ ಅಲ್ಲಿ ಚಪ್ಪಲಿ ಮೆಟ್ಟೂದಿಲ್ಲ. ಹಿಂಗಾಗಿ ಬೆಳ್ಳನೆಯ ಪಾದಕ್ಕ ಕೆಮ್ಮಣ್ಣಿನ ಜಾಜ ಹಚ್ಚಿದ್ಹಂಗ ಕಾಣ್ತಿದ್ವು. ಎಲ್ಲಾರ ಮನ್ಯಾಗೂ ಸೋಮವಾರ ಹೋಳಿಗಿ ಆಮ್ರ, ಪೂರಿ ಖೀರು, ಬಾಸುಂದಿ ಪುಲಾವು ಹಿಂಗ ಏನರೆ ಸೋಮವಾರ ಕಾಯಂ ಇರೂವು. ಇದ್ದ ಬಳಗಕ್ಕೆಲ್ಲ ಒಂದೊಂದು ಸೋಮವಾರ ಅಥವಾ ಶುಕ್ರವಾರ ಊಟಕ್ಕ ಕರೆಯೋರು. ಹೊಸ್ತಿಲಿಗೆ ಕುಂಕುಮ ಇಟ್ರಂದ್ರ ಅವೊತ್ತು ಮನಿಯೊಳಗ ಒಲಿ ಹಚ್ಚೂಹಂಗಿಲ್ಲ. ಮನೀಮಂದ್ಯಲ್ಲ ಊಟಕ್ಕ ಅಲ್ಲೇ ಹೋಗಬೇಕು. ಮನಿಯೊಳಗಿನ ದೇವ್ರಿಗೆ ಅವೊತ್ತು ಹಸಿ ನೈವೇದ್ಯ. ಬಾಳೆಹಣ್ಣು ಸಕ್ರಿ, ಪುಠಾಣಿ ಬೆಲ್ಲ ಹಂಗ. ಭಾಳಷ್ಟು ಮಂದಿ ಒಪ್ಪೊತ್ತು ಇರೂದ್ರಿಂದ ಭರ್ಜರಿ ಊಟ ಮಾಡಬೇಕು ಅನ್ನೂದು ಕರದೋರ ಇಂಗಿತ. ಹಂಗಾಗಿ ಹೋಳಗಿ, ಕಟ್ಟಿನ ಸಾರು, ಮಿರ್ಚಿ ಬಜ್ಜಿ, ಕೋಸಂಬರಿ, ಹಪ್ಪಳ–ಸಂಡಗಿ... ಮುಗಿಯೂದೆ ಇಲ್ಲ ಪಟ್ಟಿ. ಶ್ರಾವಣದ ಊಟಕ್ಕೆ ಒಂದು ನಿಯಮ. ಖಾಲಿ ಹೊಟ್ಯಾಗ ಮಸಾಲಿ ಮೊದಲು ಬೀಳಬಾರ್ದು ಅಂತ, ಅನ್ನ, ತುಪ್ಪ ಬಾನ್‌ಧ್ಹಿಟ್ಟು ಮೊದಲು. ಆಮ್ಯಾಲೆ ಕೋಸಂಬ್ರಿ. ಆಮೇಲೆ ಹೋಳಗಿ ತುಪ್ಪ.

ಬೇಕಾದೋರಿಗೆ ಸಾರು. ಇಲ್ಲಾಂದ್ರ ಹಾಲು. ಅಲ್ಲಿಂದ ಚಪಾತಿ, ಹೋಳು

ಬದನಿಕಾಯಿ, ಕರಿಚಟ್ನಿ, ಅನ್ನ ಸಾರು, ಮೊಸರನ್ನ ಇಲ್ಲಾಂದ್ರ ಬುತ್ತಿಯನ್ನ. ಬುತ್ತಿಯನ್ನದ ರುಚಿನೇ ಬ್ಯಾರೆ. ಅನ್ನ ಬೇಯೂ ಮುಂದ ಹುಳಿಮೊಸರು ಹಾಕಿ ಕುದಸೂದು. ಅದಕ್ಕ ಬಳ್ಳೊಳ್ಳಿ ಎಸಳು ಹಿಚಕಿ ಹಾಕಿದ್ರ ಆ ಹುಳಿ, ಖಾರ, ಕೊತ್ತಂಬರಿ ಘಮ.. ಎಲ್ಲಾ ಕೂಡಿ ನಾಲಗಿಗೆ ಹಿತ. ಹೊಟ್ಟಿಗೂ. ಮದಿವಿಯಾಗಿ ಮನೀಗೆ ಬಂದ ಹೆಣ್ಮಕ್ಕಳಿಗೆ ಬಳಿ ತೊಡಸೂದೇ ಒಂದು ಸಂಭ್ರಮದ ಕಾರ್ಯಕ್ರಮ. ಬಳಿ ಇಡಸಾಕ, ತೊಡಸಾಕ ಕರಕೊಂಡು ಹೋಗೂದು ಅಂದ್ರ ಅದಕ್ಕಂತ ಒಂದು ಮಧ್ಯಾಹ್ನನ ಮೀಸಲಿಡ್ತಾರ. ಇಡಸ್ಕೊಳ್ಳೂ ಬಳಿ ಬ್ಯಾರೆ. ತೊಡಸ್ಕೊಳ್ಳೂ ಬಳಿ ಬ್ಯಾರೆ. ಬಳಿ ತೊಡಸ್ಕೊಂಡ್ರ ಶ್ರಾವಣ ಮುಗೀತನಾ ತಗಿಯಾಕ ಬರೂದಿಲ್ಲ. ಅದಕ್ಕ ಬಿಗಿ ಇರುವ ಬಳೀನ ಬಳಿಗಾರರ ಹತ್ರ ಹಾಕಸ್ಕೊಂತಾರ. ಎರಡು ಕಾಜಿನ ಬಳಿ ಆಮ್ಯಾಲೆ ಪಾಟ್ಲಿ, ಮತ್ತು ಕಾಜು, ಆಮ್ಯಾಲೆ ಬಿಲ್ವಾರ. ಮತ್ತು ಕಾಜಿನ ಬಳಿ, ಅದಾದ ಮ್ಯಾಲೆ ಇನ್ನೊಂದು ಬಿಲ್ವಾರ, ಮತ್ತೊಂದಿಷ್ಟು ಕಾಜಿನ ಬಳಿ ಎಲ್ಲಕ್ಕೂ ಮುಂದ ಒಂದು ತೋಡೆ. ಬಂಗಾರ ಮತ್ತು ಕಾಜಿನ ಬಳಿ ಕೈಗೊಂದು ಹೊಸ ಲಕ್ಷಣ ನೀಡ್ತಾವ. ಇಡೀ ತಿಂಗಳು ಪ್ರವಚನ ಕೇಳ್ತಾರ. ಪ್ರವಚನಕ್ಕ ಹೋಗೂ ಮುಂದ ಬರೀಗಾಲ್ನಾಗ ಹೋಗ್ತಾರ. ದೇವರ ಭಕ್ತಿನೋ, ಚಪ್ಪಲಿ ಕಳಿಯೋ ಭೀತಿನೋ ಆ ದೇವರಿಗೆ ಗೊತ್ತು. ಆದ್ರ ಜಿಟಿಜಿಟಿ ಮಳಿಯೊಳಗ ತಲಿ ತೊಯ್ಯದೇ ಇದ್ರು, ಸಿಡಿಸಿಡಿ ಕೆಸರು ಸಿಡಸ್ಕೊಂತ ನಡೀತಾರ.

ಕೆಸರಗಾಲು ಸ್ವಚ್ಛ ಆಗಲಿ ಅಂತನೇ ತಟ್ಟಿನ ಚೀಲ ಮನೀ ಬಾಗಿಲಿಗೆ ಹಾಕಿರ್ತಾರ. ಅಂಗಾಲು ಗಸಗಸ ತಿಕ್ಕೊಂಡು ಹೋಗಿ ಕಾಲು ತೊಳಕೋಬೇಕು. ಇಲ್ಲಾಂದ್ರ ನೀರು ಎಷ್ಟು ಆದ್ರೂ ಸಾಲೂದಿಲ್ಲ. ಈ ಗೋಣಿ ಚೀಲಾನೂ ಭಾರಿ ಚೀಲಾ. ಎಷ್ಟು ಮಂದಿ ಕಾಲೊರಸಿದ್ರೂ ಎಲ್ಲಾರ ಕಾಲೂ ಸ್ವಚ್ಛ ಮಾಡ್ತದ. ಇವರ ಕೆಸರು ಅವರಿಗೆ ಅವರ ಕೆಸರು ಇವರಿಗೆ ಮೆತ್ತೂದಿಲ್ಲ. ಹಂಗ ಕೆಸರು ಮೆತ್ತೂ ಕೆಲಸ ಮನಶಾರು ಬಿಟ್ರ ಮತ್ಯಾರೂ ಮಾಡ್ಲಿಕ್ಕಿಲ್ಲ. ಕಾಲು ಒರಸಿ ಒಳಗ ಹೋಗೂ ಮುಂದ, ಮನೀ ಚಿಂತಿ ಬಿಟ್ಟು ಹೊಸಲು ತೊಳೀತಾರ. ಮುಂದ ಅವರ ಮೈಯೆಲ್ಲಾ ಕಿವಿಯಾಗಿರ್ತಾವ. ವಚನ ಕೇಳೂದು, ಪ್ರವಚನ ಕೇಳೂದು, ಆಗಾಗ ಕುಂತ ಭಂಗಿ ಮಾತ್ರ ಬದಲಾಗ್ತದ.

ಯಾರ ಮನ್ಯಾಗರೆ ಇರಲಿ, ಮಠದಾಗಲೆ ಇರಲಿ, ಯಾರೂ ಬರಿಗೈಯಿಂದ ಕೇಳಾಕ ಹೋಗೂದಿಲ್ಲ. ಮನಿ ಅಂಗಳದಾಗ ಬೆಳೆದ ಹೂ, ಬಟ್ಟಲದಾಗ ಸಕ್ರಿ, ಘುಗ್ಗರಿ, ಏನರೆ ಒಟ್ಟು ತೊಗೊಂಡು ಹೋಗಿರ್ತಾರ. ಏನೂಇಲ್ಲ ಅಂದ್ರ ಕಡೀಕ ಎಣ್ಣೀ ಬತ್ತಿ ಅರೆ ಒಯ್ತಾರ.

ಭಾಳಷ್ಟು ಮಂದಿ ತಮ್ಮ ದೀಪದ ಸಮಯಕ್ಕ ಬತ್ತಿ ಹೊಸಿಯೂದೇ ಈ ಸಮಯದೊಳತಗ. ಐನಾರ ಮಂದಿ ಈ ದಿನದೊಳಗ ಮಾತ್ರ ಒಂದಷ್ಟು ಮನಿ ಹಿಡಿತಾರ. ಮುಂಜಮುಂಜೇನೇ  ಎಲ್ಲಾ ಮನೀಗೆ ಹೋಗಿ ಒಂದು ಹಿಡಿ ಪತ್ರಿ ಹಾಕಬೇಕು ಅವರು. ಅವ್ರು ಪತ್ರಿ ಹಾಕೂತನಾನೂ ಆ ಮನ್ಯಾಗ ಪೂಜಿ ಮುಗಿಯೂದಿಲ್ಲ. ಪತ್ರಿ ಗಿಡ ಹುಡುಕಿ, ಜೋಳಗಿ ತುಂಬಾ ಪತ್ರಿ ತಂದು ಎಲ್ಲಾರ ತಾಟನಾಗೂ ಹಾಕ್ತಾರ. ಮೊದಲೆಲ್ಲ ಯಾರೂ ಇಂತಿಷ್ಟು ಅಂತಾ ರೊಕ್ಕ ಕೇಳ್ತಿರಲಿಲ್ಲ. ಅವರವರ ಸಾಮರ್ಥ್ಯಕ್ಕೆ ತಕ್ಕಷ್ಟು ಕೊಡ್ತಿದ್ರು. ಇವರು ಅದಕ್ಕ ರೊಕ್ಕ ಅಂತಾ ಕೇಳ್ತಿರ್ಲಿಲ್ಲ. ಇವ್ರು ಅದಕ್ಕ 'ಖುಷಿ' ಅಂತಾನೇ ಕೇಳ್ತಿದ್ರು. 'ದೇವಪ್ರೇರಣೆಯಾದಷ್ಟು ನೀವು ಕೊಡಬೇಕು. ಅದು ನಿಮ್ಮ ಖುಷಿ, ಅನ್ನೋರು. ಈಗ ಈ ಖುಷಿ ಎಲ್ಲಾ ಕಡೆ ಇಣಕಿ ಬಿಟ್ಟದ.

ಸೋಮವಾರ ಶಿವನ ಗುಡಿಗೆ ಹೋಗೋರು, ಮಂಗಳವಾರ ದೇವಿ ಗುಡೀಗೆ. ಬುಧವಾರ ಗಣಪತಿ ಗುಡೀಗೆ. ಗುರುವಾರ ಸಾಯಿಬಾಬಾ, ರಾಯರ ಮಠ, ಶುಕ್ರವಾರ ಮತ್ತ ದೇವಿ ಗುಡೀಗೆ. ಶನೀವಾರ ಹನಮಪ್ಪಗ. ಭಾನುವಾರ ಎಲ್ಲರೆ ಭಜನಿಗೆ. ಇದ್ರೊಳಗ ಇಡೀ ವಾರನ ದೇವರ ಹೆಸರು ಹೇಳಿ ಉಪವಾಸ ಇರ್ತಾರ.  ತಿಂಗಳಿಡೀ ಅಡ್ಡಾಡೂದು, ಖರೀದಿ ಮಾಡೂದು, ಉಪವಾಸ ಮಾಡೂದು. ಹೊಟ್ಟಿ ತುಂಬಾ ಊಟಾ ಮಾಡೂದು. ಹಬ್ಬಕ ತಯಾರಿ ಮಾಡೂದು. ಶ್ರಾವಣದಾಗ ಹೆಣ್ಮಕ್ಕಳ ಹಬ್ಬಾನೇ ಭಾಳ ಬರೂದ್ರಿಂದ ಅವರ ಖರೀದಿನೆ ಜೋರು.

ಗಂಡಸರ ಶ್ರಾವಣ ಕಡುಕಷ್ಟದ್ದು. ಅದಕ್ಕೇ ಅವರು ಕಷ್ಟಾ ಮಾಡಸ್ಕೊಳ್ಳೂದಿಲ್ಲ. ಗಡ್ಡ, ಮೀಸಿ, ತಲಿ ಕೂದಲು ಎಲ್ಲಾ ಬೆಳೆದಿರ್ತಾವ. ಶ್ರಾವಣ ಜೋರೇನ್ರಿ? ಅಂತನ ಇವರಿಗೆ ಕೇಳೂದು. ಯಾಕಂದ್ರ ಅವಾಗ ಯಾವ ಚಟಾನೂ ಮಾಡಂಗಿಲ್ಲ. ಒಮ್ಮೆ ಇವನ್ನೆಲ್ಲ ಬೋಳಸ್ಕೊಂಡ್ರು ಅಂದ್ರ ಚಟ ಮತ್ತ ಸುರು ಅಂತನೇ ಅರ್ಥ. ಚಟ ಮಾಡೂದಕ್ಕೂ ಹಿಂಗ ಬೋಳಸ್ಕೊಳ್ಳೂದಕ್ಕೆ ಏನರೆ ನಂಟ ಇರಬೇಕ್ರಿಪಾ.

ನೂಲು ಹುಣ್ಣಿಮಿ ಅಲ್ಲಿ ಭಾಳ ಜೋರು. ಎಲ್ಲಾರ ಕೈಯಾಗೂ ರಾಖಿ ಎದ್ದು ಕಾಣ್ತಾವ. ಹಣಿಮ್ಯಾಲೆ ವೀರ ತಿಲಕ. ಅದರ ಮ್ಯಾಲೆ ನಾಕೈದು ಅಕ್ಷತೆ ಕಾಳು. ಲಕ್ಷ್ಯ ಕೊಟ್ಟು ನೋಡಿದ್ರಷ್ಟೇ ಕಾಣುವ ಕಾಡಿಗೆ ಕಪ್ಪು. ಕಿವಿ ಹಿಂದರೆ, ಅಂಗಾಲಿಗರೆ ಹಚ್ಚಿರ್ತಾರ. ಎಲ್ಲ ಧರ್ಮದವರ ಕೈಯಾಗೂ ಈ ನೂಲಿನೆಳಿ ಕಟ್ಟಿದ್ದು ಕಾಣ್ತದ. ಅದು ನಮ್ಮ ನಮ್ಮ ನಡುವಿನ ಬಾಂಧವ್ಯದ ಎಳಿ. ಪ್ರೀತಿ, ಕಾಳಜಿಯ ಬಣ್ಣ ಅಷ್ಟೇ ಅವಕ್ಕ ಗೊತ್ತು. ಧರ್ಮ, ಜಾತಿ ಎಲ್ಲ ಅದರೊಳಗೇ ಒಂದಾಗಿರ್ತಾವ.

ಅನ್ನ ದಾಸೋಹ, ಪ್ರಸಾದ ವಿತರಣೆ ಇವೆಲ್ಲ ಸಾಮಾನ್ಯ ಸೇವೆಗಳು. ಖಾಂಡ ಅದ ಅಂತ ಉಳ್ಳುವರು, ಇಲ್ಲದೋರು ಹೋಗಿ ಸಾಮೂಹಿಕ ಪ್ರಸಾದ ಸ್ವೀಕರಿಸೋರು.

ಊಟ, ಅನ್ನಕ್ಕ ಪ್ರಸಾದದ ರೂಪ ಬರೂದೇ ಇಂಥ ಸಾಮೂಹಿಕ ಪಾಲ್ಗೊಳ್ಳುವಿಕೆಯೊಳಗ. ಒಂದೊಂದು ಓಣಿಯೊಳಗ ಒಂದೊಂದು ಗುಂಪಿನವರು. ಗಾಂಧಿ ಟೋಪಿ ಹಾಕ್ಕೊಂಡು ಊಟ ಬಡಸಾಕ ನಿಂತ್ರಂದ್ರ ಹೊಟ್ಟಿ ತುಂಬಬೇಕು. ಆ ಆತ್ಮೀಯ ಭಾವ ಮನಸು ತುಂಬಬೇಕು. ಎಲ್ಲಾರೂ ನಮ್ಮೋರೆ ಅನ್ನುವ ಆ 'ಏಕ' ಭಾವ ಕೊಡುವ ಧೈರ್ಯಾನೇ ಬ್ಯಾರೆ. ಇಂಥಾ ದಾಸೋಹಗಳು ಬೆಂಗಳೂರಿನಾಗೂ ಭಾಳ ನಡೀತಾವ. ಆದ್ರ ಆ ಅಕ್ಕ, ಅಣ್ಣ, ಕಾಕಾ, ಮಾಮಾ ಹಿಡೀರಿ, ಅಂತಾ ಕರದು ಕೊಡೋರು ಕಡೀಮಿ.

ಜಿಟಿಜಿಟಿ ಮಳಿಗೆ ಬರ ಬಿದ್ದಂಗ ಈ ಆತ್ಮೀಯತನಕ್ಕೂ ಬರಾ ಬಂದಿರೂದೆ ದುರಂತ.

**ರಶ್ಮಿ ಎಸ್.**

ಮಯೂರ ಆಗಸ್ಟ್ 2014

# ಬದುಕು ಮತ್ತು ಮಳೆ ಹಾತೆ

ಏನೂ ಕೆಲಸವಿಲ್ಲದ ದಿನ ಸುಮ್ಮಗೆ ಹೀಗೇ ಮನೆಯೊಳಗೆ ಕುಳಿತು ಸೂಕ್ಷ್ಮವಾಗಿ ಹೊತ್ತು ಕಳೆಯಲು ನೋಡಿ, ಹೊತ್ತು ಸಾಗಿದ್ದೇ ಗೊತ್ತಾಗದಷ್ಟು ಅಚ್ಚರಿಯ ಸಂಗತಿಗಳು ಇಣುಕಿ ನಮ್ಮನ್ನು ತಿಣುಕ ತೊಡಗುತ್ತವೆ. ನಾನೀಗ ಹೇಳ ಹೊರಟಿರುವುದು ನಮ್ಮ ಮನೆಯೊಳಗೇ ನಮ್ಮ ಜೊತೆ ಬದುಕುತ್ತಿರುವ ಮನುಷ್ಯರಲ್ಲದ ಜೀವಿಗಳ ಬಗ್ಗೆ.ಎಷ್ಟೊಂದು ಸಣ್ಣ ಸಣ್ಣ ಕೀಟಗಳು, ಸೂಕ್ಷ್ಮ ಜೀವಿಗಳು ಮನೆಯ ಸದಸ್ಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುತ್ತವೆ. ಸೊಳ್ಳೆಗಳು, ನೊಣಗಳು, ಇರುವೆಗಳು, ಜಿರಲೆ, ಹಲ್ಲಿ ಇನ್ನು ಹೀಗೇ ಅನೇಕ ಹೆಸರೇ ತಿಳಿಯದ ಕೀಟಗಳು.ಇವೆಲ್ಲಾ ನಾವು ದಿನ ನಿತ್ಯ ಕಾಣುವಂತವುಗಳು. ಆದರೆ ಬಿರುವಾಲೆ, ಪಾತೆ, ದೀಪದ ಹುಳು ಅಂತ ಪ್ರಾದೇಶಿಕ ಭಾಷೆಗಳಲ್ಲಿ ಕರೆಯಲ್ಪಡುವ ಮಳೆ ಹಾತೆ ಮಾತ್ರ ಯಾಕೋ ಸ್ವಲ್ಪ ಭಿನ್ನವಾಗಿ ನನ್ನನ್ನು ಕಾಡುತ್ತಿದೆ.

ಮಳೆ ಬರುವ ಮುನ್ಸೂಚನೆ ಸಿಕ್ಕಿದರೆ ಸಾಕು. ಈ ಹಾತೆಗಳೆಲ್ಲಾ ಹೀಗೆ ಭೂಮಿಯೊಳಗಿಂದ ಮೇಲೆದ್ದು ಹಾರುತ್ತವೆ ಅಂತ ಹಿರಿಯರು ಹೇಳುತ್ತಿದ್ದದ್ದು ಇನ್ನೂ ನೆನಪಿದೆ. ಅದು ನಿಜವೂ ಇರಬಹುದು ಏನೋ. ಮಳೆ ಬೀಳೋಕೆ ಶುರುವಾಗೋ ಮುಂಚೆ ಹೀಗೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಂಜೆ ಕವಿಯುವ ಹೊತ್ತಲ್ಲಿ ಈ ಹಾತೆ ಹುಳುಗಳು ಏಳುವುದಂತು ಸತ್ಯ.ಮೊದಲೆಲ್ಲಾ ಸೀಮೆ ಎಣ್ಣೆಯ ಬುಡ್ಡಿಯ ಮಂದ ಬೆಳಕಿನ ಸುತ್ತ ವೃತ್ತಾಕಾರವಾಗಿ ಹಾರುತ್ತಾ, ದೀಪದ ಬೆಳಕಿಗೆ ಮುತ್ತಿಕ್ಕುತ್ತಾ,ರೆಕ್ಕೆ ಸುಟ್ಟುಕೊಳ್ಳುತ್ತಾ ರಾಶಿ ರಾಶಿ ಹಾತೆಗಳು ಸತ್ತು ಬೀಳುವುದ ಕಂಡಾಗ ಅಯ್ಯೋ ಅನ್ನಿಸುತ್ತಿತ್ತು. ಓದಲು ಕುಳಿತ ನಾವುಗಳು ಪುಟ ಮಗುಚದೆ ರೆಕ್ಕೆ ಸುಟ್ಟುಕೊಳ್ಳುತ್ತಾ ಪುತ ಪುತನೆ ಉದುರಿ ಬೀಳುವ ಹಾತೆಗಳ ಅಸಾಹಯಕತೆಯನ್ನೂ ಪುಸ್ತಕದ ಅಕ್ಷರಗಳ ನಡುವೆ ಹುಡುಕಲು ಯತ್ನಿಸುತ್ತಿದ್ದೆವು. ದುರಂತ ಅಂತ್ಯವನ್ನು ಕಣ್ಣೆದುರು ನೋಡುತ್ತಾ ಸಾವು ಬದುಕಿನ ಜಿಜ್ಞಾಸೆಯೊಳಗೆ ಬೀಳುತ್ತಿದ್ದೆವು. ಪಠ್ಯ ಪುಸ್ತಕದ ಪದಗಳೆಲ್ಲಾ ಕಲಸಿದಂತಾಗಿ ಅಕ್ಷರಗಳೆಲ್ಲಾ ಹಾತೆ ಹುಳುಗಳಾಗಿ ಮಾರ್ಪಾಟಾಗುತ್ತಿದ್ದದ್ದು, ತದೇಕಚಿತ್ತದಿಂದ ಮಳೆ ಹಾತೆಯನ್ನ ವೀಕ್ಷಿಸಿದರ ಪರಿಣಾಮವೇನೋ. ಈಗ ಇನ್ನಷ್ಟೂ ಪ್ರಖರ ವಿದ್ಯುತ್ ಬೆಳಕಿನ ಆಸೆಯನ್ನು ಹತ್ತಿಕ್ಕಲಾಗದೇ ತನ್ನ ಮೂತಿಯನ್ನು ಬಲ್ಬಿಗೆ ಕುಟ್ಟಿ ಕುಟ್ಟಿ ಡಿಕ್ಕಿ ಹೊಡೆದು ನೆಲಕ್ಕುರುಳುವುದು ಇನ್ನೂ ವಿಷಾದವಾಗಿ ಗೋಚರಿಸುತ್ತದೆ. ಅಷ್ಟೊಂದು ಮಳೆ ಹಾತೆಗಳು, ಸಣ್ಣ ರೆಕ್ಕೆಯ ಕೀಟಗಳು ವಿಲ ವಿಲನೆ ಮಿಡುಕಿಕ್ಕೊಂಡು

ನೆಲದಲ್ಲಿ ಹೊರಳಾಡುತ್ತಾ ಕ್ಷಣ ಮಾತ್ರದಲ್ಲಿ ನಿಸ್ತೇಜವಾಗಿ ಬಿದ್ದು ಶವವಾಗುವುದನ್ನು ಕಂಡೋ? ಕಾಣದೆಯೋ? ಮತ್ತೆ ಮತ್ತೆ ಹಾತೆಗಳು ಬೆಳಕಿನತ್ತ ಹಾರುತ್ತಲೇ ಇವೆ. ಆಕರ್ಷಣೆಗಳು ಹಾಗೇ ಅಲ್ಲವೇ? ಹತ್ತಿಕ್ಕಿಕ್ಕೊಂಡಷ್ಟೂ ಮುತ್ತಿಕ್ಕಿ ಬಿಡುತ್ತವೆ. ಆ ಕ್ಷಣದಲ್ಲಿ ಸರಿ ತಪ್ಪುಗಳ್ಯಾವುದೂ ತುಲನೆಗೆ ದಕ್ಕದಷ್ಟು ಮನಸನ್ನ ವ್ಯಾಪಿಸಿಕ್ಕೊಂಡು ಬಿಡುತ್ತವೆ.

ಈ ಬೆಳಕಿಗೆ ಹಾಯುವ ದೀಪದ ಹುಳುಗಳು ನೆಲಕ್ಕುರುಳಿದ್ದೇ ತಡ,ಅದನ್ನು ನುಂಗಿ ನೊಣೆಯಲು ಅದಕ್ಕಿಂತ ಬಲವಾದ ಎಷ್ಟೊಂದು ಕೀಟಗಳು ಹಾತೊರೆಯುವುದ ಕಂಡಾಗ ಅಚ್ಚರಿಯಾಗುತ್ತದೆ. ಬದುಕು ಹೀಗೇ ಅಲ್ಲವೇ? ಒಬ್ಬನ ತಿಂದು ಮತ್ತೊಬ್ಬ ತೇಗಲು ಇಲ್ಲಿ ಎಷ್ಟೊಂದು ಸೋಗಿನ ವೇಷಗಳು? ಗೋಡೆಯ ಬದಿಯಲ್ಲಿ ,ಸಂದು ಗೊಂದುಗಳಲ್ಲಿ ಬಲೆ ನೇಯ್ದುಕ್ಕೊಂಡು, ನನಗೂ ಈ ಜಗತ್ತಿಗೂ  ಸಂಬಂಧವೇ ಇಲ್ಲವೆಂಬಂತೆ ಮೂಲೆಯಲ್ಲಿ ಕುಳಿತು ಎತ್ತಲೋ ನೋಡುತ್ತಿದ್ದಂತೆ ನಟಿಸುತ್ತಾ ಬೇಟೆಗೆ ಹೊಂಚು ಹಾಕುವ ಜೇಡ, ಅಷ್ಟೂ ನಾಜೂಕಾಗಿ ಮೆಲ್ಲ ಮೆಲ್ಲನೆ ತೆವಳುತ್ತಾ, ತನ್ನ ಪಾಡಿಗೆ ತಾನು ಬೆಳಕಿನ ಕಡೆಗೂ ನೋಡದೇ ಕುಳಿತ ಹಾತೆಯನ್ನು ಕೂಡ ತನ್ನ ಅಂಟಿನ ಉದ್ದ ನಾಲಗೆ ಚಾಚಿ ಒಳಗೆಳೆದುಕ್ಕೊಳ್ಳುವ ಹಲ್ಲಿಯ ಚಾಣಕ್ಷತೆ, ಇನ್ನು ಇದನ್ಯಾವುದನ್ನ ಲೆಕ್ಕಿಸದೆ ಬೆಳಕಿನ ಸುತ್ತ ಪರಿಭ್ರಮಣ ಮಾಡುತ್ತಾ, ಕ್ಷಣದ ಸುಖ ಅನುಭವಿಸಿ ಶವವಾಗುವ ಕೀಟಗಳ ಹೊತ್ತೊಯ್ಯಲು ಅದಾಗಲೇ  ಸಾವಿರ ಸಂಖ್ಯೆಯಲ್ಲಿ ಸದ್ದಿಲ್ಲದೆ ಸಜ್ಜಾಗುವ ಇರುವೆಗಳು. ಇವುಗಳೆಲ್ಲಾ ಇಷ್ಟೆಲ್ಲಾ ಕಸರತ್ತು ಮಾಡುತ್ತಿದ್ದರೂ ಲಕ್ಷ್ಯವಹಿಸದ ಅಮಾಯಕ ಹಾತೆಗಳ ದೇಹ, ಪಾಲು ಪಾಲಾಗಿ ದಿಕ್ಕು ಪಾಲಾಗಿ ಹಂಚಿ ಹೋಗುತ್ತಿದೆ. ಮಳೆಯಿಂದ ರಕ್ಷಿಸಿಕೊಂಡೆನೆಂದು  ಮನೆ ಸೇರಿದ ಹಾತೆಗಳ ಗತಿಯೇನಾಯಿತು? ಕೆಲವೊಮ್ಮೆ ಎಷ್ಟು ಪೂರ್ವಭಾವಿಯಾಗಿ ಯೋಚಿಸಿ ಕ್ರಮ ತೆಗೆದುಕೊಂಡರೂ, ಬದುಕು ಅನಿಶ್ಚಿತವಾಗುವುದ ಕಂಡಾಗ  ಮನಸ್ಸು ವೇದಾಂತಕ್ಕೆ ಹೊರಳಿಕೊಳ್ಳುತ್ತದೆ. ಎಷ್ಟೆಂದರೂ ನಮ್ಮ ಹಿಡಿಯೊಳಗೆ ಬದುಕ ಹಿಡಿದಿಟ್ಟುಕೊಳ್ಳಲಾಗದು ಎಂಬ ಸತ್ಯ ನಿಚ್ಚಳವಾಗುತ್ತದೆ.

ಈ ಮಳೆ ಹಾತೆಗಳು ಗೆದ್ದಲು ಹುಳುಗಳ ರೂಪಾಂತರ. ಮಣ್ಣಿನ ಮೇಲ್ಪದರದಲ್ಲಿ ತಾವು ಹುಡುಕಿ ಹುತ್ತದಂತಹ ಮನೆಯನ್ನು ಕುಶಲ ಕರ್ಮಿಯಂತೆ ರಚಿಸಿಕ್ಕೊಂಡು, ಮತ್ತೆ ರೆಕ್ಕೆ ಹುಟ್ಟಿದ ನಂತರ ಯಾವುದೇ ವಾಂಛೆಗಳಿಲ್ಲದೆ, ಸಮಯ ಬಂದಾಗ ಅದ್ಭುತ ಕಲಾಕೃತಿಯಂತಹ ಹುತ್ತದ ಮನೆಯನ್ನು ಹಾವುಗಳಿಗೊಪ್ಪಿಸಿ ಬಯಲಿಗೆ ಹಾರಿ ಬರುವಷ್ಟು ಛಾತಿಯುಳ್ಳವು. ಅಷ್ಟು ಪುಟ್ಟದಾದರೂ ಮರದ ತುಂಡುಗಳನ್ನೂ ಕೊರೆದು ಸ್ವಾಹ ಮಾಡಿಬಿಡುತ್ತದೆ. ಗಿಡಗಳಿಗೂ ಮರಗಳ ಬೇರುಗಳಿಗೂ ಒಮ್ಮೊಮ್ಮೆ ಗೆದ್ದಲು ಹಿಡಿಯುವುದುಂಟು. ಯಾವುದಕ್ಕೇ ಆಗಲಿ ಒಮ್ಮೆ ಗೆದ್ದಲು ಹತ್ತೀತು ಅಂದರೆ

ಮತ್ತೆ ಅವು ಚಿಗುರಿ ಮೊದಲಿನಂತಾಗುವುದು ಕಷ್ಟ. ಅದಕ್ಕೆ, ಇನ್ನು ಬದುಕಿನಲ್ಲಿ ಸರಿಯಾಗದೆ ಹಾಳು ಬಿದ್ದು ಹೋದವರಿಗೆ, ಚೇತರಿಸಿಕೊಳ್ಳಲಾಗದವರಿಗೆ, ವಯಸ್ಸಾದವರಿಗೆ ಗೆದ್ದಲು ಹಿಡಿದ ಮರ ಅಂತನೋ? ಅಥವಾ ಅವನ ಬದುಕು ಪೂರ್ತಿ ಗೆದ್ದಲು ಹಿಡಿದು ಹೋಗಿದೆ ಅಂತ ಹೇಳುವುದು ರೂಡಿಯೊಳಗಿನ ಮಾತು. ಆದರೂ ಚೆಂದದೊಂದು ಮನೆ ಕಟ್ಟಿಕ್ಕೊಂಡು, ಹುತ್ತದೊಳಗೆ ಬದುಕ ಕಟ್ಟಿ,ಬಯಲಿಗೆ ಭರವಸೆಯ ರೆಕ್ಕೆ ಕಟ್ಟಿ ಹಾರಿದರೂ, ಅರೆಗಳಿಗೆಯಲ್ಲಿ ಬದುಕು ಶೂನ್ಯವಾದದ್ದು ಸೃಷ್ಟಿಯ ವೈಚಿತ್ರ್ಯವೋ? ನಿಗೂಡತೆಯೋ? ಅರಿವಿಗೆ ದಕ್ಕದೆ ತಲ್ಲಣಿಸುತ್ತಿದೆ ಮನಸ್ಸು.

ಮನೆಯೊಳಗೆ ಹಾರಿ ಬಂದ ಹಿಂಡು ಹಿಂಡು ಹಾತೆ ಹುಳುಗಳು, ವಿದ್ಯುತ್ ದೀಪದ ಬೆಳಕಿಗೆ ಕುಣಿಯುತ್ತಾ,ಸುತ್ತ ಹಾರುತ್ತಾ ನಮ್ಮ ಮೈಮೇಲೆ ತಲೆ ಮೇಲೆ ಉದುರಿ ರಗಳೆ ಹುಟ್ಟಿಸುವಾಗ ಅದರಿಂದ ತಪ್ಪಿಸಿಕೊಳ್ಳುವುದು ಕೂಡ ಕಷ್ಟವೇ. ಆಗ ಮನೆಯೊಳಗಿನ ದೀಪಗಳನ್ನೆಲ್ಲಾ ಆರಿಸಿ, ಮನೆಯ ಹೊರಗೆ ದೀಪ ಉರಿಸಿಟ್ಟರೆ ಆ ಬೆಳಕಿಗೆ ತನ್ನನ್ನ ತಾನು ಆಹುತಿ ಮಾಡಿಕೊಳ್ಳುತ್ತಾ ಅಂಗಳದ ತುಂಬೆಲ್ಲಾ ಮಡಿದು ಬೀಳುತ್ತವೆ. ಇಲ್ಲದಿದ್ದರೆ, ಮಾರನೆಯ ದಿವಸ ರಾಶಿ ರಾಶಿ ಹುಳದ ಹೆಣ ರಾಶಿಗಳನ್ನು ವಿಲೇವಾರಿ ಮಾಡುವಾಗ ನಮ್ಮ ತಾಳ್ಮೆಯ ಪರೀಕ್ಷೆಯಾಗಿ ಬಿಡುತ್ತದೆ. ಚಿಕ್ಕಂದಿನಲ್ಲಿ, ಅಮ್ಮ ದೊಡ್ಡ ನೀರಿನ ಪಾತ್ರೆಯಿಟ್ಟು, ಅದರ ಮಧ್ಯೆ ಸಣ್ಣ ದೀಪ ಉರಿಸಿಡುತ್ತಿದ್ದಳು. ಆಗ ಬೆಳಕಿಗೆ ಹಾರಿ ಬಂದ ಹುಳುಗಳು ನೀರಿನೊಳಗೆ ಬಿದ್ದು ಒದ್ದಾಡಿ ತೀರಿ ಹೋಗಿಬಿಡುತ್ತಿದ್ದವು. ಮನೆ ತುಂಬಾ ಬಿದ್ದು ಕೊಳ್ಳುತ್ತಿರಲಿಲ್ಲ. ಇಷ್ಟೆಲ್ಲಾ ಆದರೂ ಅಂದಿನಿಂದ ಇಂದಿನವರೆಗೂ ಹುಳುಗಳು ಬೆಳಕಿಗೆ ಬಿದ್ದು ಸಾಯುವುದೂ ತಪ್ಪಿಲ್ಲ, ಆದರ ಸಂತತಿಯೂ ಕ್ಷೀಣಿಸಿಲ್ಲ.

ಬದುಕಿನಲ್ಲಿ ಎಷ್ಟೊಂದು ಅಮಿಷಗಳು? ಪ್ರಲೋಭನೆಗಳು? ತೀರದ ಆಕರ್ಷಣೆಗಳು?. ಇವೆಲ್ಲವೂ ಬೆಳಕಿನ ಬೆಂಕಿಯೇ ಅನ್ನೋ ಅರಿವು ಎಲ್ಲರೊಳಗೂ ಇದ್ದೇ ಇದೆ. ಬಹುಷ: ಮನಸ್ಸು ಮಾಯೆಯೇ ಇರಬೇಕು. ಎಷ್ಟೊಂದು ಜೀವಂತ ಉದಾಹರಣೆಗಳು ನಮ್ಮ ಮುಂದೆ ರೆಕ್ಕೆ ಸುಟ್ಟುಕ್ಕೊಂಡು ಸಾವು ಬದುಕಿನ ನಡುವೆ ಒದ್ದಾಡುತ್ತಿದ್ದರೂ,ಅವ್ಯಾವುದೂ ನಮ್ಮ ಮನಸ್ಸನ್ನ ತಟ್ಟುವುದೇ ಇಲ್ಲ. ಯಾಕೆ ಹೀಗೆ? ಅಥವಾ ತಟ್ಟಿದರೂ ತಟ್ಟದಂತೆ ಇರುವುದು ಯಾಕೆ?. ಮನುಷ್ಯ ಸಾಕಷ್ಟು ಬಲಿಷ್ಠ ಮತ್ತು ಬುದ್ಧಿವಂತ ಪ್ರಾಣಿಯಾದರೂ, ಮನಸ್ಸಿನ ವಿಚಾರಕ್ಕೆ ಬಂದಾಗ ಸಮಸ್ತ ಜೀವ ಕೋಟಿಗಳ ಮನಸ್ಸು ಮಾತ್ರ ಒಂದೇ ಅಂತ ಅನ್ನಿಸದೆ ಇರಲಾರದು. ರೆಕ್ಕೆ ಸುಟ್ಟುಕ್ಕೊಂಡ

ಪತಂಗದಂತೆ ಆಯಿತು ಬದುಕು ಅಂತ ಹಾತೆ ಜೊತೆಗೆ ಬದುಕನ ಸಮೀಕರಿಸಿಕೊಂಡು ಹೇಳುವ ಮಾತು ಇದಕ್ಕೇ ಇರಬೇಕು.ಈ ಮಾತು ಎಷ್ಟು ಸಮಂಜಸ ಕೂಡ?!

ಕಳೆದ ಇರುಳು ಹಾರಿ ಬಂದ ಮಳೆ ಹಾತೆಗಳೆಲ್ಲಾ ಅಚಾನಕ್ಕಾಗಿ ಸುರಿದ ಬಿರು ಮಳೆಯೊಳಗೆ ತೇಲಿ ಹೋಗುತ್ತಿದ್ದ ದಾರುಣ ದೃಶ್ಯ ಕಣ್ಣ ಮುಂದೆ ತೇಲುತ್ತಿದೆ. ಅಯ್ಯೋ.. ಹಾತೆಯ ಬದುಕೇ..?! ಅಥವಾ ಬದುಕೇ ಹಾತೆಯಂತೆಯಾ..? ಮನಸ್ಸು ಸಣ್ಣಗೆ ಮಿಡುಕುತ್ತಿದೆ. ಮನದೊಳಗೂ ಹಾತೆ ನುಗ್ಗಿ ಟಪ ಟಪನೇ ರೆಕ್ಕೆ ಪಟಿಸುತ್ತಾ ಏನೋ ಪ್ರಶ್ನಿಸುತ್ತಿರುವಂತೆ ಅನ್ನಿಸುತ್ತಿದೆ.

**ಸ್ಮಿತಾ ಅಮೃತ್‌ರಾಜ್**
ವಿಜಯವಾಣಿ 20.07.2014

# ಮಳೆ ಎಂಬ ನಕ್ಷತ್ರಿಕ

ಮಳೆ ಎಂಬ ಮಾಂತ್ರಿಕನ ಸ್ಪರ್ಶಕ್ಕೆ ಮರುಳಾಗದವರು ಯಾರಿದ್ದಾರೆ. ಬಾನ ಬಿಳಿಯ ಮೋಡದಲ್ಲಿ ಕಪ್ಪು ಬಣ್ಣವ ತುಂಬಿ ಮೆಲ್ಲ ಅರಳಿಸಿ ಕರಗಿಸಿ ಹನಿಯಾಗಿಸಿ ಆತ ಭುವಿಯ ಬಳಿಗೆ ಬರುವ ರೀತಿಯೇ ಬಲು ಮೋಹಕ. ಮೊದಲ ಮಳೆ ಬಿದ್ದ ತಕ್ಷಣ ನೆಲದ ಎದೆಯಲ್ಲಿ ಅಡಗಿದ್ದ ಕಂಪು ಮೆಲ್ಲ ಮೆಲ್ಲನೆ ಗಾಳಿಯಲಿ ಬೆರೆತು ಗಂಧ ತೀಡಿದಂತೆ ಮೈ ಮನಸ್ಸನ್ನು ಆವರಿಸುತ್ತದೆ. ಅದೆಂದಿನಿಂದಲೋ ಮಣ್ಣ ಕಣ್ಣಿನಲ್ಲಿ ಅಡಗಿದ್ದ ಸಾವಿರ ಸಾವಿರ ಹೂ ಬೀಜಗಳು, ಕಳೆ ಬೀಜಗಳು. ನೂರಾರು ಕಾಡು ಹೂವಿನ ಬೀಜಗಳು ಎಂದೋ ಗಾಳಿಯಲ್ಲಿ ತೂರಿ ಹೋಗಿ ಕೂತ ಯಾವುದೋ ಧಾನ್ಯದ ಬೀಜಗಳು ಆತನ ಒಂದು ಸೋಕಿಗೆ ಪುಳಕಗೊಂಡು ಮನದಲ್ಲೇ ನಾಚಿ ಆಸೆ ಅರಳಿಸುತ್ತ ನವಿರು ನವಿರಾಗಿ ಕಣ್ಣರಳಿಸುತ್ತ ಎದ್ದು ನಿಂತು ಹಸಿರಾಗಿ, ಹಸಿಯಾಗಿ ಮುಗುಳುನಗುತ್ತವೆ. ಬಿಸಿಲ ಬೇಗೆಯಲ್ಲಿ ನೀರಡಿಕೆಯ ದಾಹದಲ್ಲಿ ಪೆಚ್ಚು ಪೆಚ್ಚಾಗಿ ನಿಂತಿದ್ದ ಮರಗಿಡಗಳು ಮೊದಲನೆಯ ಭೇಟಿಯಲ್ಲೇ ಮನಸೋತು ಶುಭ್ರವಾಗಿ ಅವನ ಪ್ರೇಮದಿ ಮಿಂದು ನಗುತ್ತ ಹೊಳೆಯುತ್ತವೆ. ಉತ್ಸಾಹ ಕಳೆದುಕೊಂಡು ಬಾಡಿ ಬತ್ತಿ ಹೋದ ಕೆರೆ, ನದಿ ಹಳ್ಳ ಕೊಳ್ಳಗಳು ಕಿಲ ಕಿಲನೆ ನಗುತ್ತ ಮೈ ಕೈ ತುಂಬಿಕೊಂಡು ಮೆಲು ಗೆಜ್ಜೆಯ ನಾದದಂತೆ ಹೊಸ ಹಾಡ ಹಾಡುತ್ತ ಹೆಜ್ಜೆ ಹಾಕುತ್ತವೆ. ಮನೆಯಲ್ಲಿ ಮೈ ಮುರಿಯುತ್ತ ಆಗಸಕ್ಕೆ ಕಣ್ಣು ನೆಟ್ಟು ಕೂತ ಮಣ್ಣ ಮಗ ರುಮಾಲು ತಲೆಗೆ ಸುತ್ತಿ ಗದ್ದೆಗಿಳಿಯುತ್ತಾನೆ ವರ್ಷದಿಂದ ಮನೆಯ ಮೂಲೆಯ ಕತ್ತಲೆಯಲ್ಲಿ ಕೂತು ಧೂಳು ತಿನ್ನುತ್ತಿದ್ದ ಕೊಡೆಗಳು ಮೈ ಕೊಡವಿಕೊಂಡು ರಸ್ತೆಗಿಳಿಯುತ್ತವೆ. ಕಪಾಟಿನಲ್ಲೋ, ಬೀರುವಿನಲ್ಲೋ ಹೊದ್ದು ಮಲಗಿದ್ದ ರೈನ್ ಕೋಟ್‌ಗಳು ಇಸ್ತ್ರೀ ಮಾಡಿಕೊಂಡು ತಿರುಗಾಟಕ್ಕೆ ಅಣಿಯಾಗುತ್ತವೆ. ಮಳೆ ಎಂದರೆ ವಿಸ್ಮಯ, ದಿನವೂ ನಾವೆಷ್ಟೇ ನೀರು ಹೊಯ್ದರೂ ಹೂ ಬಿಡದ ಮಲ್ಲಿಗೆ ಬಳ್ಳಿ ಪಟ ಪಟನೆ ಬಿದ್ದ ನಾಲ್ಕು ಮೇಘ ಮುತ್ತುಗಳ ಮತ್ತಿಗೆ ಸೋತು ಚಿಗುರುವ ಪರಿಯೇ ಅಚ್ಚರಿ,

ಮಳೆ ಎಂದಾಕ್ಷಣ ನನ್ನನ್ನು ಎರಡು ವಿರುದ್ಧ ದಿಕ್ಕಿನ ಸಂಗತಿಗಳು ಕಾಡತೊಡಗುತ್ತವೆ. ಮೊದಲನೆಯದೆಂದರೆ, ನಾವುಗಳು ಮೂಲತ: ದಕ್ಷಿಣ ಕನ್ನಡದವರಾದರೂ ಸಮುದ್ರ ನಮ್ಮನ್ನು ಎತ್ತಿ ಮೇಲಕ್ಕೆ ಎಸೆದಿದ್ದರಿಂದ ಘಟ್ಟಕ್ಕೆ ಬಂದು ಬಿದ್ದವರು. ಹೀಗಾಗಿ ಆ ನಂತರ ನಮ್ಮ ನಂಟೆಲ್ಲ ಅಮ್ಮನ ಊರು ಕೊಪ್ಪ ಸಮೀಪದ ಕುಗ್ರಾಮ ನಕ್ಕರಿಕೆಯೊಂದಿಗೆ. ಅದು ಅಪ್ಪಟ ಮಲೆನಾಡು. ಅಲ್ಲಿಗೆ ಹೋಗಬೇಕೆಂದರೆ ಬಸ್ಸು ಇಳಿದಲ್ಲಿಂದ ಐದು ಕಿ.ಮೀ. ಏರಿ ಗುಡ್ಡ ಹತ್ತಬೇಕು. ಕಡಿದಾದ ರಸ್ತೆ, ತೀರಾ ಕಾಡು ಅರ್ಧ ಕಿ.ಮೀಗೆ  ಒಂದು ಮನೆ ರಾತ್ರಿಯ ಹೊತ್ತಿನಲ್ಲಿ ಜೀವ ಹೋಗುತ್ತದೆ ಎಂದು ಕಿರುಚಿಕೊಂಡರೂ ಯಾರೂ ಬರುವುದಿಲ್ಲ,. ಈಗಲೂ ಈ ಸ್ಥಿತಿ ಏನೂ ಬದಲಾಗಿಲ್ಲ. ಆದರೆ ಇತ್ತೀಚೆಗೆ ಕರೆಂಟು, ಫೋನು ಎಲ್ಲ ಬಂದಿದೆ.

ನಾವು ಸಣ್ಣವರಿದ್ದಾಗ ಅವೆಲ್ಲ ಮರೀಚಿಕೆಯೇ. ಆದರೆ ಈಗಲೂ ಮಳೆಗಾಲದ ಮೂರು ನಾಲ್ಕು ತಿಂಗಳು ಅಲ್ಲಿ ಕರೆಂಟು ಮತ್ತು ಫೋನುಗಳು ಸತ್ತಂತೆ ಬಿದ್ದಿರುತ್ತವೆ. ಒಮ್ಮೆ ಶುರುವಾದ ಮಳೆ ಹದಿನೈದು ದಿನಗಳಾದರೂ ಹನಿಕಡಿಯದೇ ಸುರಿಯುತ್ತಲೇ ಇರುತ್ತದೆ. ಒಮ್ಮೊಮ್ಮೆ ಬೇಸರ ತರಿಸುವಷ್ಟು. ಹೀಗಾಗಿಯೇ ಮಳೆಗಾಲ ಇನ್ನೇನು ಶುರುವಾಗುತ್ತದೆ ಎನ್ನುವಾಗಲೇ ಅಲ್ಲಿನ ಮಂದಿ ಸಕಲ ತಯಾರಿಯನ್ನು ಮಾಡಿಕೊಳ್ಳುತ್ತಾರೆ,. ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಅಷ್ಟೇ ಏಕೆ ಉರುವಲೆಗೆ ಬೇಕಾದ ಸೌದೆ ಈ ಎಲ್ಲವನ್ನು ಜೋಡಿಸಿಟ್ಟುಕೊಳ್ಳುತ್ತಾರೆ.

ಮೊದಲೇ ಹೇಳಿದಂತೆ ನಮ್ಮ ರಜಾ ಕಾಲವೆಲ್ಲ ಕಳೆಯುತ್ತಿದ್ದದ್ದು ಇದೇ ಊರಿನಲ್ಲಿ ನಾವು ನಮ್ಮ ಅಜ್ಜ ಅಜ್ಜಿಗೆ ಒಟ್ಟು 32 ಮಂದಿ ಮೊಮ್ಮಕ್ಕಳು, ಬಹುತೇಕರು ರಜಕ್ಕೆ ಅಜ್ಜನ ಮನೆಗೆ ಹಾಜರ್ ನಮ್ಮದೇ ವಯಸ್ಸಿನ ಹತ್ತು ಜನರ ಬೆಟಾಲಿಯನ್ ಒಂದಿತ್ತು. ಅದು ರಜ ಬಂದ ಮರುದಿನವೇ ಅಲ್ಲಿ ಹಾಜರಿರುತ್ತಿತ್ತು. ಬೇಸಿಗೆ ರಜೆ ಎರಡು ತಿಂಗಳು, ಮತ್ತು ದಸರಾ ರಜೆ ಒಂದು ತಿಂಗಳು ಒಟ್ಟು ಮೂರು ತಿಂಗಳು.ನಾವು ಅಲ್ಲಿಯೇ ಠಿಕಾಣಿ, ನಾವು ಬೆಳಿಗ್ಗೆ ತಿಂಡಿ ತಿಂದು ಒಂದು ಸಣ್ಣ ಕೋಲು, ಕತ್ತಿ, ತಲೆಗೊಂದು ಟೋಪಿ ಹಾಕಿಕೊಂಡು ಮನೆ ಬಿಟ್ಟೆವೆಂದರೆ ಮತ್ತೆ ಮರಳುತ್ತಿದ್ದದ್ದು ಊಟಕ್ಕೆ ಸರಿಯಾಗಿ , ಆ ನಂತರ ಮತ್ತೆ ಕಾಡು ಮೇಡು, ನಮಗೆ ಕಾಡಿನ ಯಾವ ಮೂಲೆಯಲ್ಲಿ ಯಾವ ಮರವಿದೆ ಮತ್ತು ಅದರ ಹಣ್ಣು ಹೇಗಿರುತ್ತದೆ ಅದನ್ನು ಹತ್ತುವ ಬಗೆ ಹೇಗೆ ಎಲ್ಲವೂ ತಿಳಿದಿರುತ್ತಿತ್ತು. ಅದೇ ಊರಿನ ನನ್ನ ಮಾವನ ಮಗಳು ನಮಗೆ ಮಾರ್ಗದರ್ಶಿ. ನಮ್ಮ ನಡುವಿನ ಜಗಳಗಳು, ಸಂಧಾನಗಳು, ನೂರೆಂಟು ತರಲೆ ತಾಪತ್ರಯಗಳು, ದೊಡ್ಡವರ ಬಳಿ ದೂರುಗಳು, ಅವರಿಂದ ಒದೆಗಳು ಈ ಎಲ್ಲವೂ ನಮಗೆ ಸಿಕ್ಕುತ್ತಿದ್ದದ್ದು ಆಗಲೇ. ಸುಮಾರು ಮೇ ಮಧ್ಯ ಭಾಗದಲ್ಲಿ ಒಂದೊಂದು ಮಳೆ ಶುರುವಾಗಿ ತಾನಿನ್ನು ಬರಲು ಸಿದ್ಧ ಎಂದು ತೋರಿಸಲು ಶುರು ಮಾಡುತ್ತಿತ್ತು. ಅದು ಜೀವನದ ಅತಿ ಸಂಭ್ರಮದ ಗಳಿಗೆ, (ಪೇಟೆಯಲ್ಲಿ ಬೆಳೆಯುತ್ತಿದ್ದ ನನಗೆ ಅಲ್ಲಿನ ಪರಿಸರ, ಜೀರುಂಡೆ ಹಕ್ಕಿಯ ಹಾಡು, ಕೋಗಿಲೆ ಗಾಯನ  ಈಗಲೂ ನೆನಪಾಗುತ್ತದೆ) ಅದೇ ಸಮಯಕ್ಕೆ ಸರಿಯಾಗಿ ಕಾಡಿನ ಹಲಸಿನ ಮರಗಳಲ್ಲಿ ಹಲಸಿನಕಾಯಿಗಳು ಬಲಿಯತೊಡಗುತ್ತಿದ್ದವು. (ಈಗಲೂ ಸಹ ಜೋರು ಮಳೆಗಾಲದಲ್ಲಿ ನನ್ನ ಊರಿನಲ್ಲಿ ಹಲಸಿನ ಕಾಯಿಗಳು ಹಣ್ಣಾಗುತ್ತವೆ. ನಗರೀಕರಣಕ್ಕೆ ಅಷ್ಟಾಗಿ ತೆರೆದುಕೊಂಡಿಲ್ಲದ ಕಾರಣ ಅವು ಅಲ್ಲಿಯೇ ಕೊಳೆತು ಉದುರಿ ಹೋಗುತ್ತವೆ. ಇಲ್ಲದೇ ಹೋದರೆ ಯಾವುದಾದರೂ ಜಾನುವಾರುಗಳಿಗೆ ಆಹಾರವಾಗುತ್ತದೆ.) ಅದಕ್ಕೊಂದು ಸುಲಿಕೆ ಹಾಕಿ ಅದು ಬೆಳೆದಿದೆಯೋ ಇಲ್ಲವೋ ನೋಡಿ ತರುವುದು ಮನೆಯ ಕೆಲಸದಾಳುಗಳ ಕೆಲಸ ಹಾಗೆ ಅವರು ಹೋಗುವಾಗಲೆಲ್ಲ ನಾವೂ ಕೂಡ ಅವರ ಹಿಂದೆ, ಇದೇ ಕಾರಣಕ್ಕೆ ಅದೆಷ್ಟೋ ಬಾರಿ ಜೋರು ಮಳೆಯಲ್ಲಿ ನೆನೆದು ಜ್ವರ ಬಂದು ಮಲಗಿದ್ದಿದೆ. ಹಲಸಿನ ಹಪ್ಪಳ ಮಾಡುವುದು ಆ ದಿನಗಳ ಮತ್ತೊಂದು ವಿಶೇಷತೆ, ಮೊದಲೇ

ಹೇಳಿದಂತೆ ಮಳೆಗಾಲದಲ್ಲಿ ಮಾತ್ರ ಒಳ್ಳೆಯ ಕಾಯಿಗಳು ಸಿಗುತ್ತಿದ್ದುದ್ದರಿಂದ ಅದನ್ನು ತಂದು ಸೊಳೆ ಬಿಡಿಸಿ ಕೊಡುವುದು ನಮ್ಮಗಳ ಕೆಲಸವಾದರೆ, ಅದನ್ನು ಬೇಯಿಸಿ ರುಬ್ಬಿ ಕೊಡುವುದು ದೊಡ್ಡವರ ಕೆಲಸ ಸುಮಾರು ಹತ್ತು ಹದಿನೈದು ಜನ ನಾವು ಈ ಕೆಲಸ ಮಾಡುತ್ತಿದ್ದೆವು,. ವಾಪಾಸ್ಸು ಊರಿಗೆ ಹೊರಡುವಾಗ ಹಪ್ಪಳದ ದೊಡ್ಡ ಕಟ್ಟೊಂದು ಪ್ರತಿಯೊಬ್ಬರ ಬಳಿ ಇರುತ್ತಿತ್ತು. ಹಪ್ಪಳ ಮಾಡುವಾಗ ಅತೀ ಕಷ್ಟದ ಕೆಲಸವೆಂದರೆ ಅದನ್ನು ಮಳೆಯಿಂದ ಕಾಪಡುವುದೇ ಆಗಿತ್ತು. ಸಾಮಾನ್ಯವಾಗಿ ಹಪ್ಪಳವನ್ನು ಒತ್ತಿ ಅದನ್ನು ಅಡಿಕೆ ಚಪ್ಪರದಲ್ಲಿ ಹರಡಿ ಒಣಗಿಸಲಾಗುತ್ತಿತ್ತು. ಮಳೆ ನಾಲ್ಕು ಹನಿ ಪಟ ಪಟ ಉದುರಿಸಿದರೂ ಸಾಕೂ ಮನೆಯಲ್ಲಿದ್ದ ಅಷ್ಟೂ ಮಂದಿ "ಅಯ್ಯೋ ಚಪ್ಪರದಲ್ಲಿ ಹಪ್ಪ ಇದೆರೋ, ತೆಗಿರೋ "ಎಂದು ಕೂಗಿ ಓಡುತ್ತಿದ್ದರು. ಈ ನಡುವೆ ದೊಡ್ಡವರು ನಮ್ಮಗಳ ಬಾಯಿಂದ ಹಪ್ಪಳಗಳನ್ನು ಕಾಪಾಡಲು ಹರಸಾಹಸ ಮಾಡುತ್ತಿದ್ದರು. ನಾವು ಹಸೀ ಹಪ್ಪಳವನ್ನೇ ತಿಂದು ಹಾಕುತ್ತಿದ್ದೆವು. ಎಲ್ಲರೂ ಸೇರಿ ಈ ಕೆಲಸ ಮಾಡುತ್ತಿದ್ದೆವಾದರೂ ನಮ್ಮ ನಮ್ಮಲ್ಲಿ ಜಗಳ ಬಂದ ತಕ್ಷಣ ಅದನ್ನು ದೊಡ್ಡವರ ಬಳಿ ಹೇಳಿ ಒದೆ ತಿನ್ನುತ್ತಿದ್ದೆವು. ಹಪ್ಪಳದ ಕತೆ ಇದಾದರೆ , ಮಳೆ ಬಂದು ಬಿಟ್ಟ ತಕ್ಷಣ ನಾವು ದೊಡ್ಡ ಗೋಣಿ ತಾಟನ್ನು ತೆಗೆದುಕೊಂಡು ಕಾಡಿನ ಮಾವಿನ ಮರಗಳ ಬಳಿ ಓಡುತ್ತಿದ್ದೆವು. ನಮ್ಮ ಎಣಿಕೆ ಸುಳ್ಳಾಗುತ್ತಿರಲಿಲ್ಲ. ರಾಶಿ ರಾಶಿ ಪುಟ್ಟ ಪುಟ್ಟ ಕಾಡು ಮಾವಿನ ಹಣ್ಣುಗಳು ನಮ್ಮನ್ನೇ ಕಾಯುತ್ತಿರುವಂತೆ ಬಿದ್ದಿರುತ್ತಿದ್ದವು. ನಾವು ಪೈಪೋಟಿಯ ಮೇಲೆ ಗಿಡ ಮರಗಳ ಸಂಧಿಯಲ್ಲಿ ಹಣ್ಣು ಆಯುತ್ತಿದ್ದೆವು . ಆಗೆಲ್ಲ ಇಂಬಳಗಳು ಮೈ ತುಂಬಾ ಹತ್ತಿಕೊಂಡರೂ ಎಲೆಯಿಂದ ಸಾರಾ ಸಗಟು ಕಿತ್ತು ಮತ್ತೆ ಕೆಲಸ ಮುಂದುವರೆಸುತ್ತಿದ್ದೆವು. ಹಣ್ಣು ಆಯ್ದ ಮೇಲೆ ಯಾರ್‍ಯಾರ ಬಳಿ ಎಷ್ಟೆಷ್ಟು ಇವೆ ಎಣಿಸುವ ಕಾರ್ಯ ಅಲ್ಲೇ ಒಂದು ಬದಿಯಲ್ಲಿ ಒಳ್ಳೆಯ ಜಾಗ ನೋಡಿ ಕೂತು ಸಾಕಷ್ಟು ಹಣ್ಣು ತಿಂದು ಸಾಕು ಎನ್ನಿಸಿದ ಮೇಲೆ ಮನೆಗೆ ರವಾನೆ, ಮರುದಿನ ಅದರದ್ದೇ ಪದಾರ್ಥ. ಇದು ಸರಿ ಸುಮಾರು ನಮಗೆಲ್ಲ ಶಾಲೆ ಶುರುವಾಗಿ ಊರಿಗೆ ಹೊರಡುವವರೆಗೂ ನಡೆಯುತ್ತಿತ್ತು. ಮತ್ತೊಂದು ಹೇಳಲೇ ಬೇಕಾದ ವಿಷಯವೆಂದರೆ ನಾವೆಲ್ಲ ಓದಿದ್ದು ಸರ್ಕಾರಿ ಶಾಲೆಯಲ್ಲಾದ್ದರಿಂದು ಶಾಲೆ ಶುರುವಾದ ಮೊದಲನೇ ದಿನವೇ ಹಾಜರಾಗಬೇಕೆನ್ನುವ ಯಾವ ನಿಯಮವೂ ಇರಲಿಲ್ಲ. ಹೀಗಾಗಿ ನಾನಂತೂ ಶಾಲೆ ಶುರುವಾದ ಹದಿನೈದು ದಿನಗಳ ಮೇಲೇ ಊರಿನಿಂದ ಬರುತ್ತಿದ್ದುದ್ದರಿಂದ ಎಗ್ಗಿಲ್ಲದೇ ಸುರಿಯುವ ಮಳೆಯಲ್ಲಿಯೂ ಜಾರಿಬಿದ್ದ ನೆನಪಿದೆ. ಒಮ್ಮೆ ಹೀಗೇ ಆಯಿತು ನಾವು ಸುಮಾರು ಮಕ್ಕಳೆಲ್ಲ ಅಲ್ಲೇ ಎರಡು ಕಿ.ಮೀ ದೂರದಲ್ಲಿರುವ ದುರ್ಗದ ಬೆಟ್ಟಕ್ಕೆ ಹೋಗಿದ್ದೆವು. ( ಕಗ್ಗಾಡಿನ ನಡುವೆ ಇರುವ ಆ ಬೆಟ್ಟಕ್ಕೆ ವನವಾಸಕ್ಕೆಂದು ಬಂದ ರಾಮ ಸೀತೆಯರು ಭೇಟಿ ನೀಡಿದ್ದರಂದು ಪ್ರತೀತಿ!) ಹಿಂದಿನ ದಿನವಷ್ಟೇ ಮಳೆ ಬಂದಿತ್ತು ಹೀಗಾಗಿ ಹತ್ತುವಾಗ ನಾವೆಲ್ಲರೂ ಜಾಗ್ರತೆಯಿಂದ ಹತ್ತಿದೆವು ಆದರೆ ಇಳಿಯುವಾಗ ಬೆಟ್ಟ ತನ್ನ ಕರಾಮತ್ತನ್ನು ತೋರಿಸಿಯೇ ಬಿಟ್ಟಿತು. ನಾನು ಕಾಲು

ಜಾರಿ ಸುಮಾರು ಹತ್ತು ಅಡಿಗಳಿಂದ ಕೆಳಗೆ ಬಿದ್ದೆ ಅಲ್ಲಿಂದ ನನ್ನ ಅಣ್ಣನೊಬ್ಬ ಮನೆಯವರೆಗೂ ನನ್ನನ್ನು ಎತ್ತಿ ಕರೆತಂದಿದ್ದ. ಮನೆಯವರಿಗೆ ಗೊತ್ತಾಗಬಾರದೆಂದು ನಾವು ಯಾರಲ್ಲಿಯೂ ಏನನ್ನೂ ಹೇಳದೆ ಇದ್ದ ಬದ್ದ ನೋವಿನ ಎಣ್ಣೆಯನ್ನೆಲ್ಲ ಹಚ್ಚಿದೆವು ಆದರೆ ರಾತ್ರಿಯ ಹೊತ್ತಿಗೆ ಕಾಲುಮಂಡಿ ಪೂರಿಯ ಹಾಗೆ ಊದಿಕೊಳ್ಳತೊಡಗಿತು. ಹೇಳುವುದು ಅನಿವಾರ್ಯವಾಯಿತು. ಆ ನಂತರ ಮನೆಯ ಮದ್ದು ಸಿಕ್ಕಾಪಟ್ಟೆ ನಡೆದು ನಾಲ್ಕು ದಿನಗಳ ನಂತರ ನಾನು ಸ್ವಲ್ಪ ಕಾಲು ಊರುವಂತಾಯಿತು. ಆ ನೋವು, ನೆನೆಪು, ಸಿಹಿಯಾಗಿ ಈಗಲೂ ನನ್ನನ್ನು ಕಾಡುತ್ತದೆ.

ಇನ್ನು ಮಳೆಯೆಂದರೆ ನನ್ನ ಕಾಡುವ ಮತ್ತೊಂದು ಸಂಗತಿ ಎಂದರೆ ಪ್ರಸ್ತುತ ದಿನಗಳದ್ದು. ಪೇಟೆಯ ಬದುಕಿಗೆ ಜೀವನ ಒಗ್ಗಿ ಹೋಗಿದೆ. ಮಳೆ ಎಂದರೆ ಮೊದಲ ಒಂದೆರಡು ದಿನಗಳು ಹಿತ ಎನ್ನಿಸಿದರೂ. ಮೂರು ನಾಲ್ಕು ದಿನಕ್ಕೆ "ಥತ್ ಹಾಳಾದ್ ಮಳೆ" ಎನ್ನುವಂತಾಗುತ್ತದೆ. ಕಾರಣವಿಷ್ಟೇ ಒಣಗದ ಬಟ್ಟೆಗಳು, ಒಣಗಿಸಲು ಸಾಕಾಗದ ಜಾಗ. ಒಂದೆರಡೇ ಮಳೆಗೆ ಪೇಟೆಯೊರಿನ ಚರಂಡಿಗಳು ತುಂಬಿ ಅದರ ನೀರು ರಸ್ತೆಯ ಮೇಲೆಲ್ಲ ಹರಿಯತೊಡಗುತ್ತವೆ. ಕಾಲಿಡಲು ಒಂದು ರೀತಿಯ ವಾಕರಿಕೆ ಬಂದಂತಾಗುತ್ತದೆ. ಜೋರು ಜೋರು ಚಲಿಸುವ ವಾಹನಗಳು ಮುಖ ಮೂತಿ ನೋಡದೆ ರಸ್ತೆಯ ಗುಂಡಿಗಳಲ್ಲಿ ತುಂಬಿ ನಿಂತ ನೀರನ್ನು ರಪ್ ಎಂದು ಹಾರಿಸಿ ಮುನ್ನಡೆಯುತ್ತವೆ. ಆಗೆಲ್ಲ ಮಳೆಯನ್ನು ಬೈದುಕೊಳ್ಳದವರೇ ಇಲ್ಲವೇನೋ ಎನ್ನಬಹುದು.

ಇನ್ನು ಬದುಕು ಅರ್ಥವಾಗುವ ಹಂತಕ್ಕೆ ತಲುಪಿರುವುದರಿಂದಲೋ ಏನೋ ಪ್ರತಿ ಮಳೆಗಾಲದಲ್ಲಿ ಹೊಟ್ಟೆ ಪಾಡಿಗಾಗಿ ಬದುಕುವ ಅವರುಗಳು ಬಹಳಷ್ಟು ಕಾಡತೊಡಗಿತ್ತಾರೆ. ಸುರಿವ ಜೋರು ಮಳೆಯಲ್ಲಿ ಬಿಸಿ ಕಾಫಿಯ ಹೀರಿ "ಹಾಳಾದ್ ಪೇಪರ್ರಿನವನು ಇನ್ನೂ ಬಂದಿಲ್ಲ" ಎಂದುಕೊಳ್ಳುವಾಗ ಅವನು ಮತ್ತೆಲ್ಲೋ ಅಂಗಡಿ ಬದಿಯಲ್ಲಿ ಗಡ ಗಡ ನಡುಗುತ್ತ ಪೇಪರ್ ಕಟ್ಟು ಹಾಳಾಗದಂತೆ ಪ್ಲಾಸ್ಟಿಕ್ ಕವರ್‌ಗಳನ್ನು ಸುತ್ತುತ್ತಿರುತ್ತಾನೆ. ಸಂಜೆ ನಾವುಗಳು ಹಪ್ಪಳ ಮೆಲ್ಲುತ್ತ ಹರಟೆ ಹೊಡೆಯುವಾಗ ಮಳೆಯಲ್ಲಿ ನೆನೆದು ಕೂತ ಹಸೀ ಸೌದೆಗಳಲ್ಲಿ ಆ ಗುಡಿಸಲು ಮನೆಯ ಒಡತಿಯೊಬ್ಬಳು ಬೆಂಕಿ ಕಾಣುವ ಪ್ರಯತ್ನ ಮಾಡುತ್ತಿರುತ್ತಾಳೆ. ಹಸಿದ ಕಂದಮ್ಮಗಳ ಹೊಟ್ಟೆಗೆ ಹಿಟ್ಟು ಕಾಣಿಸುವ ಸಲುವಾಗಿ ಅವಳ ಎರಡೂ ಕಣ್ಣುಗಳು ಹೊಗೆಯಲಿ ಮಿಂದು ಏಳುತ್ತಿರುತ್ತವೆ.

ನಾವು ಸ್ವೆಟರ್ ಹಾಕಿಕೊಂಡು "ಹೌ ನೈಸ್" ಎಂದು ಉದ್ಗರಿಸುವಾಗ, ಮಣ್ಣಿನ ಗೋಡೆಯ ಮನೆಯ ಮುದುಕಿ ಎಲ್ಲಿ ಗೋಡೆ ಉದುರೀತೋ ಎಂದು ಆತಂಕದಲ್ಲಿ ರಾತ್ರಿ ನಿದ್ದೆ ಇಲ್ಲದೆ ಕಳೆಯುತ್ತಿರುತ್ತಾಳೆ. ನಾವು ಒವೆನ್ನಿನಲ್ಲಿ ಸಾಂಬರು ಬಿಸಿ ಮಾಡಿ "ಫೆಂಟಾಸ್ಟಿಕ್ ವೆದರ್ " ಎನ್ನುವಾಗ ಬೀದಿ ಬದಿಯಲ್ಲಿ ಹಣ್ಣಿಟ್ಟುಕೊಂಡ ಮುದುಕ ಕೊಳೆತ ಹಣ್ಣುಗಳ ನೋಡುತ್ತಲೇ ತನ್ನ ಮೋಟು ಬೀಡಿಯನ್ನು ಅರಸುತ್ತಿರುತ್ತಾನೆ. ಅದೇ ಸಮಯಕ್ಕೆ ರಸ್ತೆ ಬದಿಯ ಮೀನು ಮಾರುವ ಹೆಂಗಸು, ಒಡೆದ ಹೆಂಚಿನಿಂದ

ಸುರಿವ ನೀರು ತನ್ನ ಡಬ್ಬದಲ್ಲಿರುವ ಅಕ್ಕಿಯನ್ನು ನೆನೆಸಿಬಿಟ್ಟರೆ ಎನ್ನವ ಭಯದಲ್ಲಿ ಮನೆಯ ತುಂಬೆಲ್ಲ ಪಾತ್ರೆಗಳನ್ನು ಜೋಡಿಸುತ್ತಾಳೆ. ಅಲೆಮಾರಿ ಅಪ್ಪನೊಬ್ಬ ಗಾಳಿಗೆ ತೂರಿ ಹೋಗುವ ತನ್ನ ಜೋಪಡಿಯ ಬಟ್ಟೆಗಳ ಕಾಪಾಡಿಕೊಳ್ಳುವ ಸಲುವಾಗಿ ದೇವರಲ್ಲಿ ಮೊರೆ ಇಡುತ್ತಾನೆ. ಹಸೀ ಬಾಣಂತಿಯೊಬ್ಬಳು ತನ್ನ ಮಗುವಿಗೆ ಶೀತವಾಗಬಾರದು ಎನ್ನುವ ಸಲುವಾಗಿ ಇದ್ದ ಒಂದೇ ಬೆಚ್ಚನೆಯ ಹೊದಿಕೆಯನ್ನು ಮಗುವಿಗೆ ಹೊದೆಸಿ ತಾನು ಹಾಗೆ ಮೂಲೆಯಲ್ಲಿ ಮುದುಡಿ ಮಲಗುತ್ತಾಳೆ. ಪಾನಿಪೂರಿ ಗಾಡಿಯವ , ಗಿರಾಕಿಗಳ ಕಾದು ಕಾದು ತಣ್ಣಗಾಗುವ ಬಟಾಣಿಯಲ್ಲಿ ಅಂಗಡಿ ಲೆಕ್ಕ ಕಂಡು ಬೆಚ್ಚಿ ಬೀಳುತ್ತಾನೆ. ತಳ್ಳುಗಾಡಿಯ ತರಕಾರಿಯವ ಹರಕು ಕೊಡೆ ಸಿಗದೆ ಸಿಕ್ಕ ಪ್ಲಾಸ್ಟಿಕ್ ಕವರನ್ನು ತಲೆಗೆ ಸಿಕ್ಕಿಸಿ ಊರುರು ಅಲೆಯುತ್ತ ಆಸೆಯ ಕನಸು ಹೆಣೆಯುತ್ತಾನೆ..ಫುಟ್ ಪಾತಿನಲ್ಲಿ ಮಲಗುತ್ತಿದ್ದ ಬಾಲಕನೊಬ್ಬ ಜಾಗವಿಲ್ಲದೆ ಬಸ್ ಸ್ಟಾಂಡಿನಲ್ಲಿ ಮಲಗಿ ಪೋಲೀಸರಿಂದ ಒದೆ ತಿನ್ನುತ್ತಾನೆ...ಮಳೆ ಅಗತ್ಯಕ್ಕಿಂತ ಜಾಸ್ತಿಯಾದರೆ ಬೀದಿಗೆ ಬೀಳುವ ರೈತ, ಮುಳುಗಡೆಗೆ ನಲುಗಿ ಹೋಗುವ ಬದುಕು ಹೀಗೆ ನೂರೆಂಟು ನಮೂನೆಯ ಸಂಕಟಗಳು ಎದುರು ನಿಲ್ಲುತ್ತವೆ. ಆಗೆಲ್ಲ "ಅಯ್ಯೋ ಈ ಮಳೆಗಾಲ ಬೇಗ ಮುಗಿದರೆ ಸಾಕು" ಎನ್ನಿಸುತ್ತದೆಯಾದರೂ ಬದುಕು ನಿಂತಿರುವುದೂ ಮಳೆಯ ಮೇಲೆಯೇ ಎನ್ನುವ ಮಾತು ನೆನಪಾಗದೇ ಇರದು ..ಒಟ್ಟಿನಲ್ಲಿ ಮಳೆ ಎಂದರೆ ಸಾಕು ನನ್ನ ಮನಸ್ಸು ನನಗರಿವಿಲ್ಲದಂತೆ "ಮಳೆಯಲಿ ಜೊತೆಯಲಿ ದಿನವಿಡೀ ನೆನೆಯಲು ನನಗೆ ಕುತೂಹಲ" ಎನ್ನುವಂತಹ ಜಯಂತ ಕಾಯ್ಕಿಣಿಯವರ ಕವಿತೆಯ ಸಾಲಿನಂತೆ ನನ್ನನ್ನು ಕೌತುಕದ ಲೋಕಕ್ಕೆ ಸೆಳೆಯುವುದಂತೂ ಖಚಿತ..

**ದೀಪ್ತಿ ಭದ್ರಾವತಿ**

ಅವಧಿ 19.08. 2014

# ಕಣ್ಣಂಚಲ್ಲಿ ತೇವಗೊಳ್ಳುವ ಪುಳಕ

ಎರಡು ಹನಿ ನಿಟ್ಟುಸಿರಿಗಾಗಿ ಬಾಯ್ತೆರೆದುಕೊಂಡು ನಿಂತ ಮನಸು... ಬೀಸುವ ತಂಗಾಳಿಯ ಎದೆಯಿಂದ ತಣ್ಣನೆ ಭಾವ ತೊಟ್ಟಿಕ್ಕಬಹುದೆಂದು ಕಾದು ಕುಳಿತ ಕನಸು... ಬದುಕು ಮುಗಿದಂತೆ ಅನಿಸಿದರೂ ತೆರೆದುಕೊಳ್ಳುತ್ತಲೇ ಹೋಗುವ ಅರೆ ಖಾಲಿ ಪುಸ್ತಕ.

ಖಾಲಿ ಕೂರುವ ಖಯಾಲಿಯೊಳಗೆ ಕಾಣದ್ದನ್ನು ಕಣ್ತುಂಬಿಕೊಳ್ಳುವ ತವಕ. ಕಣ್ಣಂಚಲ್ಲಿ ತೇವಗೊಳ್ಳುವ ಪುಳಕ. ಒಳಗಿಳಿಯುತ್ತ ಹೋದಂತೆ ಸಂಕೀರ್ಣತೆಯನ್ನು ಆವಾಹಿಸಿಕೊಂಡು ಸಾಯುವ ಕ್ಷುಲ್ಲಕತೆಗೆ ಮರುಜೀವ ಬರಲು ಹೊರ ಜಗದ ಸೀಮಿತತೆಯ ಸಣ್ಣ ಇರುವು ಸಿಕ್ಕರೆ ಸಾಕು.

ಅವರಿವರ ನಿಲುವುಗಳು ನಮ್ಮದೇ ಬದುಕಿನ ಚಿತ್ತಾರವನ್ನು ಕುಲಗೆಡಿಸುವುದೇ ವಾಸ್ತವವೇ? ನಿನ್ನೆ ಮೊನ್ನೆ ಅಂದುಕೊಂಡದ್ದು ಇಂದು ಕೇವಲ ಭ್ರಮೆಯ ಕೈಗೊಂಬೆಯಾಗಿ ಕುಣಿಯುವುದು ಕಾಲದ ಜೀವಂತಿಕೆಯ ಪ್ರತೀಕವೇ?

ಹೇಳುವುದು ಸರಾಗವಲ್ಲ... ಗ್ರಹಿಕೆಗೆ ನಿಲುಕದ ಅರ್ಥದ ಆತ್ಮವೊಂದನ್ನು ಹಿಡಿದಿಡಲು ಮಾಡಿದ ಕಸರತ್ತಿನ ಕಥೆಯನ್ನು. ಒಂದೇ ಗುಕ್ಕಿಗೆ ಎಲ್ಲವನ್ನೂ ತಿಂದು ಮುಗಿಸಿದರೆ ಪ್ರತಿ ಅಗುಳಿನ ಸವಿ ಸಮಾಧಿಯಾದಂತೆ. ಪ್ರತಿ ಕ್ಷಣದ ಬೊಗಸೆಯಲಿ ಬಿಗಿಯಾಗಿ ಕುಳಿತಿರುವ ಬದುಕಿನ ಚೆಲುವು ಧಾವಂತದ ಮಡಿಲೊಳಗೆ ಕಾಲ ಬಗೆದ ಗುಂಡಿಯೊಳಗೆ ಲೀನವಾಗುತ್ತಿದೆ.

ಯಾರನ್ನೋ ಮೆಚ್ಚಿಸುವ ಸಲುವಾಗಿ ಮನಃಸಾಕ್ಷಿಯ ಕೆನ್ನೆಗೆ ಬಾರಿಸುವುದು, ಕನಸಿನ ಕರುಳು ಕತ್ತರಿಸುವುದು ವಾಸ್ತವ ಪದೇ ಪದೇ ಬೋಧಿಸುವ ಪಾಠವಲ್ಲವೇ?

ಸುಮ್ಮನೆ ಯೋಚಿಸುತ್ತಾ ಹೊರಟರೆ ಸಿಕ್ಕುವುದು ಗೊಂದಲದ ದಿಗಂತ ಅಲ್ಲವೇ?

ಪುಟ್ಟ ಪುಟ್ಟ ಸಂಭ್ರಮಗಳ ಶವದ ಮೇಲೆ ಸಾಗುವ ಮಹೋನ್ನತ ಗುರಿಯನು ಯಾಕಾದರೂ ತಲುಪಬೇಕು? ನಮ್ಮ ಕಣ್ಣೆದುರು ಇರುವುದೆಲ್ಲ ನಮ್ಮಂತಹವರೇ ರೂಪಿಸಿದ ಕಟ್ಟುಪಾಡುಗಳಲ್ಲವೇ? ಯಾರೋ ಕಟ್ಟಿದ್ದನ್ನು ನಾವೇಕೆ ಮುರಿಯಬಾರದು? ಹಳತು ನಿರ್ನಾಮವಾಗದೇ ಹೋದರೆ ಹೊಸತಿಗೆಲ್ಲಿದೆ ಜಾಗ?

ಹೊಸ ವರ್ಷ ಕಾಲಿಟ್ಟ ಮೇಲೆ ಕಳೆದ ವರ್ಷದ ಕ್ಯಾಲೆಂಡರ್‌ಗೆ ಏನು ಕೆಲಸ? ಹೊಸತನ್ನು ನಾವು ಸ್ವಾಗತಿಸುವ ಪರಿಯಾದರೂ ಎಂತಹುದು? ಹೊಸತನದ ಕುಡಿ ಚಿಗುರಬೇಕಿರುವುದು ನಮ್ಮಂತರಂಗದೊಳಗಲ್ಲವೇ? ಬಾರಿನೊಳಗೆ ಸದ್ದು ಮಾಡುವ ಬಾಟಲಿಗಳ ಒಡಲೊಳಗಿರುವುದು ಜೀವವಿಲ್ಲದ ಅಮಲು ಮಾತ್ರವಲ್ಲವೇ? ಅಮಲಿಗೆ ಜೀವದ ಆಸರೆ ದೊರೆಯದೇ ಹೋದರೆ ಅದು ಕುಣಿಸುವುದಾದರೂ ಯಾರನ್ನು?

ಎಲ್ಲದರ ಮೇಲ್ಮೈ ತಡಕುವುದಕ್ಕಷ್ಟೆ ನಮ್ಮನ್ನು ನಾವು ಸೀಮಿತಗೊಳಿಸಿಕೊಂಡರೆ

ಬದುಕಿನ ಚೆಲುವನ್ನು ಕಣ್ತುಂಬಿಕೊಳ್ಳುವುದಾದರೂ ಹೇಗೆ?

ದುಃಖದ ದೆಸೆಯಿಂದ ಇಳಿಯುವ ಕಣ್ಣೀರಿನ ಆಂತರ್ಯದಲ್ಲಿರುವ ನಿಟ್ಟುಸಿರಿಗೆ ಬೆಲೆ ಕಟ್ಟಲಾದೀತೆ? ಕಣ್ಣು ತೇವಗೊಂಡ ಮಾತ್ರಕ್ಕೆ ಮನಸು ಭಾರವಾಗುವುದಿಲ್ಲ. ಮನಸು ಹಗುರಾಗಿಸುವ ಕಣ್ಣೀರಿಗೆ ಖಳನ ಪಟ್ಟ ದಯಪಾಲಿಸುವುದು ಸರಿಯೇ?

ಸಿದ್ಧ ಸೂತ್ರ ಧಿಕ್ಕರಿಸಲು ಹಂಬಲಿಸುವ ಮನ ಸಿಕ್ಕಿದ್ದೆಲ್ಲವನ್ನೂ ಗುಡ್ಡೆ ಹಾಕಿಕೊಂಡು ಕೂರುತ್ತದೆ. ಕ್ಯಾನ್ವಾಸಿನ ತುಂಬ ತೋಚಿದ ಬಣ್ಣಗಳನ್ನೆಲ್ಲ ಎರಚುತ್ತೆ. ಕನಸುಗಳು ತಾನೆ ತಾನಾಗಿ ಅರಳಿ ನಿಲ್ಲುತ್ತವೆ. ಚದುರಿದ ಚಿತ್ರಗಳೆಲ್ಲ ಒಂದೆಡೆ ಸೇರಿ ಎಂದೂ ಕಾಣದ ಚಿತ್ತಾರವೊಂದನ್ನು ಹಡೆದು ಬಿಡುತ್ತವೆ.

ಹೊಸತು ಹುಟ್ಟುವುದು ಸಿದ್ಧತೆಯ ಸಂದಿಯೊಳಗಿಂದ ಅಲ್ಲವೇ ಅಲ್ಲ. ಅಗೋಚರತೆಯ ಅಂಗಳದಲ್ಲಿ ಹೊಸತನದ ಹಸಿ ಬೇರು... ಕಣ್ತುಂಬಿಕೊಂಡಂತೆಲ್ಲ ಕಣ್ಣಂಚಲ್ಲಿ ಬಿಸಿ ನೀರು...

**ಎಚ್.ಕೆ. ಶರತ್,**

ಪ್ರಜಾವಾಣಿ 29 ಮೇ 2014

# ಸೃಷ್ಟಿಗೆ ಗಡಿಗಳಿವೆಯೇ?

ಆಗಿನ್ನೂ ಬೆಳಗಿನ ಚುಮುಚುಮು ಬೆಳಕು ಪಸರಿಸ್ತಾ ಇತ್ತು. ಕೊರೆಯೋ ಚಳಿಯಲ್ಲಿ ರಾತ್ರಿಯಿಡಿ ಆ ಹಿಮಪರ್ವತದ ಮೇಲೆ ಗಡಿ ಕಾಯುತ್ತ ಇವನು ಬೆಂಡಾಗಿದ್ದ. ಇನ್ನೇನು ಕೆಲವೇ ನಿಮಿಷಗಳಲ್ಲಿ ಇವನ ಪಾಳಿ ಮುಗಿಯಕ್ಕೆ ಬಂದಿದೆ. ಆಮೇಲೆ ಚೆನ್ನಾಗಿ ನಿದ್ದೆ ಮಾಡಬಹುದು ಅಂದು ಕೊಂಡ ತಕ್ಷಣ ಆಕಳಿಕೆ ಬಂತು. ಒಂದು ಕ್ಷಣ ಕಣ್ಣನ್ನು ಮೆಲ್ಲಗೆ ಮುಚ್ಚಿದ..... ಅಷ್ಟರಲ್ಲೇ ಹತ್ತಿರದಲ್ಲೇ ಎಲ್ಲೋ ಶಬ್ದ ಕೇಳಿ ತಕ್ಷಣ ಇವನು ಬೆಚ್ಚಿ ಕಣ್ತೆರೆದ. ಕೈಲಿದ್ದ ರೈಫಲ್ ತನ್ನಂತೆ ತಾನೇ ಸಿದ್ಧವಾಯ್ತು. ಎಚ್ಚರದ ಕಣ್ಣಿನಿಂದ ಸುತ್ತಮುತ್ತ ಗಮನಿಸಲಾರಂಭಿಸಿದ. ಮೆಲ್ಲಗೆ ತೆವಳುತ್ತಲೇ ಸ್ವಲ್ಪ ದೂರ ಹೋಗಿ ನೋಡಿದ. ಮತ್ತೆ ಪಟ ಪಟ ಸದ್ದು. ಮತ್ತೂ ಹತ್ತಿರದಿಂದ ಕೇಳಿದಾಗ ಮತ್ತಷ್ಟು ಕಿವಿನಿಮಿರಿಸಿ ಕುಳಿತು ರೈಫಲನ್ನ ಶಬ್ದದ ಕಡೆಗೆ ಹೊರಳಿಸಿ ಗುರಿಯಿಟ್ಟು ಕಾದ.

ಕೆಲ ಹೊತ್ತು ನಿಶ್ಯಬ್ದ. ಇದ್ದಕ್ಕಿದ್ದಂತೆ ಶತ್ರು ದೇಶದ ಭೂಮಿಯಿಂದ ಭರ‍್ರಂತ ಹಾರಿ ಬಂದ ಹಕ್ಕಿ ನಮ್ಮ ದೇಶದ ನೆಲದ ಮೇಲೆ ಬಂದು ಕುಳಿತು ಪಟಪಟ ಅಂತ ರೆಕ್ಕೆ ಬಡೀತು. ಇವನು ಕೆಲ ಹೊತ್ತು ದಿಗ್ಭ್ರಮೆಯಿಂದ ಕುಳಿತು ಬಿಟ್ಟ. ಆ ಹಕ್ಕಿ ಶತ್ರು ದೇಶದ್ದೋ ತನ್ನ ದೇಶದ್ದೋ? ಅದನ್ನ ಕೊಲ್ಲಲೋ ಬೇಡವೋ? ಅಂತ ಯೋಚಿಸಲಾರಂಭಿಸಿದ.

ತನ್ನ ಯೋಚನೆಗೆ ಅವನಿಗೇ ನಗು ಬಂತು. ಪಕ್ಕದಲ್ಲೇ ಎಲ್ಲೋ ಅಸ್ಪಷ್ಟವಾಗಿ ನದಿ ಹರಿಯೋ ಶಬ್ಧ. ತನ್ನ ದೇಶದ ನದಿ, ಶತ್ರು ದೇಶಕ್ಕೆ ಹರಿದು ಹೋಗ್ತಾ ಇದೆ. ಶತ್ರು ದೇಶದಿಂದ ಬೀಸಿದ ಗಾಳಿ ತನ್ನ ದೇಶವನ್ನ ಆವರಿಸ್ತಾ ಇದೆ. ಇತ್ತಲಿನ ಪರ್ವತದ ಮುಖ ತನ್ನ ದೇಶದ್ದು, ಅತ್ತಲಿನ ಪರ್ವತದ ಮುಖ ಶತ್ರು ದೇಶದ್ದು. ಪರ್ವತ ಒಂದೇ ಆದರೂ ಹೆಸರು ಮಾತ್ರ ಎರಡು!

ಶತ್ರು ದೇಶಕ್ಕೆ ಹರೀತಿರೋ ಈ ನದಿ, ಶತ್ರು ದೇಶದಿಂದ ತನ್ನ ದೇಶಕ್ಕೆ ಬೀಸಿ ಬರ್ತಾ ಇರೋ ಗಾಳಿ, ಒಂದೇ ಪರ್ವತಕ್ಕಿರೋ ಸ್ವದೇಶಿ ಮತ್ತು ಶತ್ರು ದೇಶದ ಎರಡು ಮುಖ, ಈಗಷ್ಟೇ ಶತ್ರು ದೇಶದಿಂದ ಹಾರಿ ಬಂದ ಆ ಹಕ್ಕಿಗೆ ಹೇಗೆ ಗುಂಡಿಕ್ಕಿ ಕೊಲ್ಲಲಿ? ಸೃಷ್ಟಿ ಎಂದಾದರೂ ಗಡಿಗಳನ್ನ ಹಾಕಿಕೊಂಡಿದ್ಯಾ? ಇದು ಈ ದೇಶದ್ದು ಅದು ಆ ದೇಶದ್ದು ಅಂತ ವಿಭಜಿಸಿ ವಿಭಜಿಸಿ ಗಾಳಿ ನೀರು, ಗುಡ್ಡ ಬೆಟ್ಟ ಕಾಡು ಕಣಿವೆಯನ್ನ ಹರಿದು ಹಂಚಿ ಕೊಟ್ಟಿದೆಯಾ? ಹಾಗಿದ್ದರೆ ಸೂರ್ಯ, ಚಂದ್ರ, ನಕ್ಷತ್ರ ಯಾವ ದೇಶದ್ದು? ತನ್ನ ದೇಶದ್ದೋ ಶತ್ರು ದೇಶದ್ದೋ?

ಮಾನವನಿಗಷ್ಟೇ ಈ ಗಡಿ. ನದಿ, ಗಾಳಿ, ಮಳೆ, ಭೂಮಿ, ಸೂರ್ಯ, ಚಂದ್ರ,

ನಕ್ಷತ್ರ, ಪ್ರಾಣಿ ಪಕ್ಷಿಗಳೂ ಮಾನವನಂತೆನೇ ಗಡಿಗಳನ್ನ ಹಾಕಿಕೊಂಡು ತಮ್ಮ ತಮ್ಮಲ್ಲೇ ವಿರೋಧಿ ಬಣಗಳನ್ನ ಸೃಷ್ಟಿಸಿಕೊಂಡುಬಿಟ್ಟರೆ ಆಗೇನು ಮಾಡೋದು? ಈ ಆಲೋಚನೆ ಬಂದ ತಕ್ಷಣ ಆ ಕೊರೆಯೋ ಚಳಿಯಲ್ಲೂ ಅವನ ಮೈ ಸಂಪೂರ್ಣ ಬೆವೆತು ಹೋಯ್ತು. ಮನದಲ್ಲೇ ಕೃತಜ್ಞತೆ ಸಲ್ಲಿಸ್ತಾ 'ಹೇ ದೇವ, ಮಾನವನ ಸ್ವಾರ್ಥದಿಂದಷ್ಟೇ ಗಡಿಗಳ ನಿರ್ಮಾಣವಾಯ್ತು. ಸೃಷ್ಟಿಗೂ ಶತ್ರುಗಳು-ಮಿತ್ರರು ಅಂತ ಗಡಿಯನ್ನ ನೀ ಎಳೀಲಿಲ್ಲವಲ್ಲ' ಅಂತ ನಿಟ್ಟುಸಿರುಬಿಟ್ಟ. ಯಾಕೋ ಕೈಯಲ್ಲಿದ್ದ ರೈಫಲ್ ಮೇಲಕ್ಕೆ ಎತ್ತಲಾಗದಷ್ಟು ಭಾರವಾಗ್ತಾ ಇದೆ ಎನಿಸಿ ಭೂಮಿಗೆ ಕುಸಿದು ಕುಳಿತ.

ಮನುಷ್ಯನೆಂಬ ಬುದ್ಧಿವಂತ ಪ್ರಾಣಿಯ ಅತಿಯಾದ ಸ್ವಾರ್ಥ, ಸ್ವಕೇಂದ್ರಿತವಾದ ಚಿಂತನೆಗಳು, ಎಲ್ಲವೂ ತನಗೇ ಬೇಕು, ಎಲ್ಲವನ್ನೂ ತಾನೆ ಆಳಬೇಕು ಎನ್ನೋ ದುಷ್ಟತನದಿಂದಾಗಿ ಭೂಮಿಗೇ ಗಡಿಗಳನ್ನ ಹಾಕಿಬಿಟ್ಟಿದ್ದೀವಿ. ಅದಕ್ಕೂ ಮೊದಲೇ ಮನಸ್ಸುಗಳಿಗೂ ಗಡಿಗಳು ನಿರ್ಮಾಣವಾಗ್ಬಿಟ್ಟಿದೆ. ಪ್ರೀತಿ, ಅಂತಃಕರಣ, ಕಾರುಣ್ಯದಿಂದ ಬೇರೆಯವರ ಮನಸ್ಸುಗಳನ್ನ ಗೆಲ್ಲಬೇಕಿದ್ದ ಮನುಷ್ಯ ಇವತ್ತು ಕ್ರೂರಿಯಾಗಿ ದ್ವೇಷ, ಅಸೂಯೆ, ಸ್ವಾರ್ಥದಿಂದ ಮನಸ್ಸುಗಳನ್ನ ಒಡೀತಾ ಇದ್ದಾನೆ. ಜಾತಿ ಧರ್ಮ ಮತ ಆಚಾರ ವಿಚಾರ ಸಂಸ್ಕಾರ ಲಿಂಗ ವರ್ಗ ಭಾಷೆ ದೇಶ ಹೀಗೆ ಸಣ್ಣ ಸಣ್ಣ ಚೂರುಗಳಾಗಿ ಛಿದ್ರವಾಗಿ ಹೋಗ್ತಿದ್ದಾನೆ. ಹೀಗಾಗ ಬೇಕಿಲ್ಲ. ಈ ವೈವಿಧ್ಯತೆಯಲ್ಲೂ ಏಕತೆಯನ್ನ ಸಾಧಿಸೋದಿಕ್ಕೆ ಖಂಡಿತಾ ಸಾಧ್ಯವಿದೆ.

ನನಗೆ ಯಾವಾಗಲೂ ಬುಟ್ಟಿಯಲ್ಲಿ ತರಾವರಿ ಬೊಂಬೆಗಳನ್ನ ಇಟ್ಟುಕೊಂಡು ಮಾರಾಟ ಮಾಡೋ ವ್ಯಕ್ತಿ ನೆನಪಾಗ್ತಾ ಇರ್ತಾನೆ. ಅವನ ಬುಟ್ಟಿಯಲ್ಲಿ ಅದೆಷ್ಟು ವೈವಿಧ್ಯಮಯ ಬೊಂಬೆಗಳು! ಅದೊಂದು ಮಿನಿ ಭಾರತದಂತೆನೇ ನನಗೆ ಕಾಣುತ್ತೆ. ಬಣ್ಣ ಆಕಾರ ರೂಪ ಎಲ್ಲದರಲ್ಲೂ ಬೊಂಬೆಗಳು ವಿಭಿನ್ನ. ಗಣಪತಿ ಕೃಷ್ಣ ಶಿವ ವಿವೇಕಾನಂದ ಗಾಂಧಿ ಯೇಸು ಬುದ್ಧ ಬಸವಣ್ಣ..... ಇನ್ನೂ ಅದೆಷ್ಟೋ. ಆದರೆ ಒಂದೊಂದು ಬೊಂಬೆಗೂ ಅದರದ್ದೇ ಮಹತ್ವ ಅದರದ್ದೇ ತತ್ವ. ಆದರೆ ಬೊಂಬೆಯನ್ನ ತಯಾರಿಸೋದಕ್ಕೆ ಉಪಯೋಗಿಸಿರೋ ಮೂಲಧಾತು ಮಾತ್ರ ಒಂದೇ. ಪ್ಲಾಸ್ಟರ್ ಆಫ್ ಪ್ಯಾರಿಸ್ನಿಂದ ತಯಾರಾದ ಆ ಬೊಂಬೆಗಳು ಮನುಷ್ಯನಂತೇನೇ ಒಂದೇ ರೀತಿಯ ಮೂಲಧಾತುವಾದ ರಕ್ತ ಮಾಂಸ ಜೀವವನ್ನ ಉಳ್ಳಂತವು. ತತ್ವ ಎಷ್ಟೊಂದು ಸರಳವಾಗಿದೆ ಅಲ್ಲವೇ? ಆದರೆ ಅದನ್ನೇ ಸಂಕುಚಿತಗೊಳಿಸಿಕೊಂಡಿರೊ ನಾವು, ಎಲ್ಲ ರೀತಿಯ ತಾರತಮ್ಯಗಳನ್ನೂ ಬಿತ್ತಿ ಬೆಳೆಸಿಕೊಂಡು ಕಿತ್ತಾಡಿ ಹೊಡೆದಾಡಿಕೊಳ್ತಿದ್ದೀವಿ.

ಸೃಷ್ಟಿ ಯಾವುದಕ್ಕೂ ಗಡಿಗಳನ್ನ ಹಾಕಿಕೊಳ್ಳದೇ ಎಲ್ಲರಿಗೂ ಎಲ್ಲ ರೀತಿಯಲ್ಲೂ ಮುಕ್ತವಾಗಿದೆ. ಪ್ರಕೃತಿ ಬೇಧವಿಲ್ಲದೇ ಎಲ್ಲ ಜೀವಿಗಳನ್ನೂ ಒಂದೇ ರೀತಿಯ ರಕ್ತ ಮಾಂಸ ಜೀವವನ್ನ ಉಪಯೋಗಿಸಿ ಸೃಷ್ಟಿಸಿದೆ. ಮನುಷ್ಯರಾದ ನಾವು ಪ್ರಕೃತಿಯ ಈ

ಸರಳ ಮತ್ತು ತಾರತಮ್ಯರಹಿತವಾದ ವಿವೇಕವನ್ನ ಒಳಗೊಂಡರೆ, ಯಾವುದೇ ರೀತಿಯ ಘರ್ಷಣೆ–ಹಿಂಸೆಗಳಿಲ್ಲದೇ ಸುಂದರವಾದ ಮತ್ತು ಪ್ರೀತಿ ಅಂತಃಕರಣ ತುಂಬಿದ ಬದುಕನ್ನ ನಮ್ಮದಾಗಿಸಿಕೊಳ್ಳಬಹುದು ಅಲ್ಲವೆ?

**ರೂಪ ಹಾಸನ**

ಅವಧಿ 14 ಸೆಪ್ಟೆಂಬರ್ 2014

# ಸ್ವಪ್ನಸುಂದರಿ ನ್ಯೂಯಾರ್ಕ್

'ವಿ ಹ್ಯಾವ್ ರೀಚ್ಡ್, ನ್ಯೂಯಾರ್ಕ್ ಸಿಟಿ ಜಾನ್ ಎಫ್ಹ್ ಕೆನಡಿ ಇಂಟರ್ನ್ಯಾಷನಲ್ ಏರ್ಪೋರ್ಟ್"

ಗಗನ ಸಖಿಯ ಇಂಪಾದ ಧ್ವನಿ ಕೇಳುತ್ತಿದ್ದಂತೇ ನಿದ್ದೆಯಿಂದ ಎಚ್ಚರವಾಯಿತು. ಸುದೀರ್ಘ 22 ಘಂಟೆಗಳ ಪ್ರಯಾಣದ ಗಮ್ಯಸ್ಥಾನ ತಲುಪಿದ ಖುಷಿ ಒಂದು ಕಡೆ. ಹೇಗೋ ಏನೋ ಎಂಬ ಭಯ ಮತ್ತೊಂದೆಡೆ! ಚೆಕ್ಔಟ್ ಮುಗಿಸಿ ಏರ್ಪೋರ್ಟ್ಗಿನ ಹೊರಗೆ ಬರುತ್ತಿದ್ದಂತೆಯೇ ಬರಮಾಡಿಕೊಳ್ಳಲು ಬಂದ ಸೋದರತ್ತೆಯ ಆತ್ಮೀಯ ಮುಗುಳುನಗೆ ಮನಸ್ಸಿಗೆ ನೆಮ್ಮದಿಯನ್ನು ನೀಡಿತ್ತು.

ಸಾಮಾನ್ಯವಾಗಿ ಅಮೆರಿಕೆಗೆ ಓದುವುದಕ್ಕೋ, ಉದ್ಯೋಗದ ನಿಮಿತ್ತವೋ ಅಥವ ಪ್ರವಾಸದ ನಿಮಿತ್ತವೋ ಜನರು ಹೋಗುವುದು ಹೆಚ್ಚು. ನಾನು ಇದಾವುದೂ ಇಲ್ಲದೆ ಒಬ್ಬ ವಲಸಿಗಳಾಗಿ ಗ್ರೀನ್ಕಾರ್ಡು ಹಿಡಿಯಲು ಹೋದಾಗ ಉದ್ದೇಶಗಳಿಗಿಂತ ಪ್ರಶ್ನೆಗಳೇ ಹೆಚ್ಚು ತುಂಬಿದ್ದವು. ನನಗಿಂತ ಬೇರೆಯವರಿಗೆ!

ಮೈಸೂರಿನ ಮಡಿವಂತ ಮಲ್ಲಿಗೆಯ ಘಮವೇ ಆವರಿಸಿದ್ದ ಮನದೊಳಗೆ ದಿಢೀರನೆ ಮೆಟ್ರೋ ಪ್ರಪಂಚದ ಆಗಮನ ರೋಚಕವಾಗಿರಲೇಬೇಕಷ್ಟೇ! . ಒಂದು ಸಣ್ಣ ಮಟ್ಟದ ಪೂರ್ವತಯಾರಿಯೂ ಇಲ್ಲದೆ ಯಾವ ಯೋಜನೆಯೂ ಇಲ್ಲದೆ ಒಂದು ಇಡಿಯಾಗಿ ಅಪರಿಚಿತ ಸಮಾಜಕ್ಕೆ ಕಾಲಿಟ್ಟ ನನಗೆ ಅದೇನೋ ನ್ಯೂಯಾರ್ಕ್ ಒಂದು ಸಣ್ಣ ಕ್ಷಣಕ್ಕೂ ಅಪರಿಚಿತಳಾಗದೇ ಹೋದದ್ದು ಮೊತ್ತಮೊದಲ ಸೋಜಿಗ.. ಅಲ್ಲಿ ಸ್ಥಳೀಯರಿಗಿಂತ ವಲಸಿಗರು ಅದರಲ್ಲೂ ಭಾರತೀಯರು ಹೆಚ್ಚು ಕಂಡುಬಂದದ್ದೂ ಕಾರಣವಿರಬಹುದು.. ನ್ಯೂಯಾರ್ಕ್ ವಿಶ್ವದಲ್ಲೇ ವಲಸಿಗರ ನೆಚ್ಚಿನ ಸ್ವರ್ಗ ಬಹುತೇಕ ಜನರ ಪಾಲಿಗೆ ಸ್ವಪ್ನಸದೃಶ ನಗರಿ. ವೇಷ, ಭಾಷೆ, ವರ್ಣ ಇವೆಲ್ಲವುಗಳನ್ನೂ ಮೀರಿ ಬೆಳೆದ ಊರು. ಬೇರೆಲ್ಲ ಪ್ರಾಂತ್ಯಗಳ ಗುಣಗಳನ್ನೂ ಮೈಗೂಡಿಸಿಕೊಂಡು ತನ್ನದೇ ವಿಶಿಷ್ಟತೆಯನ್ನು ಮೆರೆಯುತ್ತಿರುವ ಸುಂದರಿ.

ಜೆಟ್ಲ್ಯಾಗ್ ಕಳೆಯುವ ಮುನ್ನವೇ ಊರನ್ನೆಲ್ಲ ಒಮ್ಮೆ ಸುತ್ತಿ ನೋಡಿಬಿಡುವ ಆತುರ! ಸಂಜೆಯ ತಂಪಿಗೆ ಕಣ್ಣು ತಣಿಸುವ ವಿಶಾಲ ಹಸಿರು ಪಾರ್ಕುಗಳು, ಕತ್ತಲಾದ ಒಡನೆ ಕಣ್ಣುಕುಕ್ಕುವ ಝಗಮಗ ಬೆಳಕುಗಳು, ಕಟ್ಟಡಗಳು. ಅಮ್ಮನ ಮಡಿಲಲ್ಲೇ ಬೆಳೆದ ಮಗುವಿಗೆ ಹೊಸದಾಗಿ ಕಂಡ ಪಕ್ಕದ ಬೀದಿಯ ಮೇಕಪ್ ಆಂಟಿಯ ಮೊಗ ಸೋಜಿಗ ಹುಟ್ಟಿಸುವಂತೆ ನ್ಯೂಯಾರ್ಕ್ ನನ್ನಲ್ಲಿ ನಾನಾ ಥರದ ಭ್ರಮಾಶ್ಚರ್ಯಗಳನ್ನು ಉಂಟುಮಾಡಿದ್ದು ಸಹಜವೇ. ಈ ಸುರಸುಂದರಿಯು ನನ್ನನ್ನು ತನ್ನೊಡಲಿಗೆ ಬರಮಾಡಿಕೊಳ್ಳುವ ಬಗ್ಗೆ ಆ ಕ್ಷಣ ಒಂದು ಸಣ್ಣ ಅನುಮಾನ.

ಆದರೂ ಮೊತ್ತಮೊದಲ ದಿನಗಳಲ್ಲಿ ನನಗೆ ಎದುರಾದದ್ದು ಎಲ್ಲೆಲ್ಲೂ ರಾರಾಜಿಸುತ್ತಿದ್ದ ಭಾರತೀಯ ರೆಸ್ಟೋರೆಂಟುಗಳು, ಸಬ್ಜಿ ಮಂಡಿಯಂತಹ ದಿನಸಿ ಅಂಗಡಿಗಳು, ಹೆಜ್ಜೆಹೆಜ್ಜೆಗೂ ಪರಿಚಿತ ನಗೆ ಬೀರುವ ಭಾರತೀಯ ಮುಖಗಳು, ಮತ್ತು ದೇವಸ್ಥಾನಗಳು!

'ಇದೇನಪ್ಪ.. ಹೊಸದನ್ನು ಹುಡುಕೋಣ ಅಂತ ಇಷ್ಟು ದೂರ ಬಂದರೆ ಇಲ್ಲೂ ಅದೇ ಬಿಸಿಬೇಳೇಬಾತು, ಗಣಪತಿ ದೇವಸ್ಥಾನ, ಪಟೇಲ್ ಅಂಕಲ್ ಆಂಟಿಯರೇ ಸಿಗ್ತಾರಲ್ಲಾ! ನಿಜವಾಗ್ಲೂ ಇದು ಅಮೇರಿಕಾನಾ?' ಎಂದೆನಿಸಿ ಕ್ಷಣಕಾಲ ನೆಮ್ಮದಿ ಮಿಶ್ರಿತ ನಿರಾಸೆ ಆದದ್ದೂ ಹೌದು! ಅಮೆರಿಕೆ ಎಂದರೆ ದೊಡ್ಡ ದೊಡ್ಡ ನೈಸಾದ ರಸ್ತೆಗಳು, ಅಷ್ಟೇನೂ ಜನನಿಬಿಡವಲ್ಲದ ಪ್ರದೇಶಗಳು, ದೊಡ್ಡ ದೊಡ್ಡ ಶಾಪಿಂಗ್ ಮಾಲುಗಳು ಇತ್ಯಾದಿ ಇತ್ಯಾದಿ ಕಲ್ಪನೆಗಳಿಗೆ ವಿರುದ್ಧ ಪದದಂತೆ ಕಂಡದ್ದು ನ್ಯೂಯಾರ್ಕಿನ ನಾನು ವಾಸಿಸುತ್ತಿದ್ದ ಜಮೈಕಾ ಕ್ವೀನ್ಸ್ ಪ್ರಾಂತ್ಯ. ನಾವಿದ್ದ ಏರಿಯದಲ್ಲಂತೂ ಪಾಕಿಸ್ತಾನ, ಬಾಂಗ್ಲಾದೇಶ್, ಗಯಾನಾ ಮೊದಲಾದ ದೇಶಗಳಿಂದ ಬಂದ ವಲಸಿಗರ ಸಮುದಾಯ ಹೆಚ್ಚಿತ್ತು! ಅದೇ ಆತ್ಮೀಯತೆ, ಅದೇ ದೇಸೀ ಸೊಗಡು, ಅಮೆರಿಕದ ಬಗ್ಗೆ ನಾವು ಓದಿದ್ದೆಲ್ಲಾ ಸುಳ್ಳು ಎನಿಸಿಬಿಡುವಷ್ಟು ಪೂರ್ವ ದೇಶಗಳ ವಾತಾವರಣ ಅನಿರೀಕ್ಷಿತವಾದಾಗ ತಬ್ಬಿಬ್ಬಿಗೆ ಈಡುಮಾಡುವಂಥದ್ದೇ!

ಅಂಗೈ ಅಗಲದ ನೆಲಮಾಳಿಗೆಯಲ್ಲಿನ ಬಾಡಿಗೆ ಮನೆಯೊಳಗೆ ಜೀವನ ಶುರುಮಾಡಿದ ದಿನದಿಂದಲೇ ಮೈಸೂರಿನ ವಿಶಾಲ ಓಣಿಯ ಅಜ್ಜಿಯ ಮನೆಯ ನೀರಿಲ್ಲದೇ ಸೊರಗಿದ ನಲ್ಲಿಗಳು ನೆನಪಾಗಿ ಅಷ್ಟೇ ಅಗಲದಲ್ಲಿ ಬದುಕಲು ಬೇಕಾದ ಸಕಲ ಸವಲತ್ತುಗಳೂ ಅಡಕವಾಗಿದ್ದ ಮೆಟ್ರೋನಗರದ ವ್ಯವಸ್ಥೆ ಪಶ್ಚಿಮದಲ್ಲಿನ ನನ್ನ ಬದುಕಿನ ಪಯಣಕ್ಕೆ ಹಾಕಿದ ಭರವಸೆಯ ಮುನ್ನುಡಿಯಂತೆ ಗೋಚರಿಸಿತ್ತು! ಪಕ್ಕದ ಮನೆಯಲ್ಲಿದ್ದ ಗಯಾನೀಸ್–ಇಂಡಿಯನ್ ಮನೆಯ ಓನರ್ ತಮ್ಮ ವಿಚಿತ್ರವಾದ ರಾಗವಾದ ಇಂಗ್ಲಿಷ್ ಧಾಟಿಯಲ್ಲಿ ಮಾತನಾಡಿಸಿ ತೋರುತ್ತಿದ್ದ ಕಾಳಜಿ ಹಾಗೂ ಕೂಗಳತೆ ದೂರದಲ್ಲಿದ್ದ ಸೋದರತ್ತೆಯ ಮನೆ ನೈತಿಕ ಸ್ಥೈರ್ಯವನ್ನು ಹೆಚ್ಚಿಸಿದ್ದವು. ಗಯಾನ ಟ್ರಿನಿಡಾಡ್ ಅಂತಹ ದೇಶಗಳಲ್ಲಿ ಬೇರು ಬಿಟ್ಟಿದ್ದ ಭಾರತೀಯ ಸಮುದಾಯದ ಮತ್ತು ಸಂಸ್ಕೃತಿಯ ಪರಿಚಯವಾದದ್ದೂ ಆಗಲೇ!

ಭಯ, ಅನುಮಾನ, ತಲ್ಲಣಗಳ ಮಿಶ್ರಮನೋಭಾವದಲ್ಲಿ ಮರುದಿನದಿಂದ ಹೊಸ ಬದುಕಿನ ಹುಡುಕಾಟ ಪ್ರಾರಂಭವೇನೋ ಆಯಿತು. ಸ್ವಪ್ನನಗರಿಯ ಟಿಪಿಕಲ್ ದಿನಚರಿಯನ್ನೊಮ್ಮೆ ನೋಡಿಯೇ ಬಿಡುವ ಎಂದು ಬೆಳ್ಳಂಬೆಳಿಗ್ಗೆ ಅಲ್ಲಿಯೇ ಇದ್ದ ಡಂಕಿನ್ ಡೋನಟ್‌ನ ಒಂದು ಸ್ಮಾಲ್ ಕಾಫಿ ಎಂದರೆ ಸುಮಾರು ಕಾಲು ಲೀಟರ್ ಕಾಫಿ ಲೋಟವನ್ನು ಹಿಡಿದು ಸಬ್ವೇ ರೈಲು ಹತ್ತಿದವಳಿಗೆ ಅಂದು "ವಿಶ್ವರೂಪದರ್ಶನದ" ನಿಜವಾದ ಅನುಭವ ಆಯಿತು! ಹಗಲುರಾತ್ರಿಗಳೆನ್ನದೇ ತನ್ನೊಡಲಿನ ಲಕ್ಷಾಂತರ ವಾಸಿಗಳನ್ನು ಎಡೆಬಿಡದೆ ಹೊತ್ತು ತಿರುಗುವ ಸಬ್ವೇ ರೈಲುಗಳು ಹಾಗೂ ಬಸ್ಸುಗಳ

ನಿರಂತರ ಸೇವೆ ನನ್ನನ್ನು ದಂಗುಬಡಿಸಿದ್ದವು. ಅಲ್ಲೇ ನಾನು ಮೊತ್ತಮೊದಲ ಬಾರಿಗೆ " ಮಹಿಳೆಯರಿಗಾಗಿ ಮಾತ್ರ" ಸೂಚನೆಯನ್ನು ನೋಡದೇ ಇದ್ದದ್ದು! ಗಂಡುಹೆಣ್ಣೆಂಬ ಲಿಂಗಭೇದವಿಲ್ಲದೇ ಸರಸರನೆ ಬಂದು ತುಂಬಿಕೊಳ್ಳುತ್ತಿದ್ದ "ಪೀಕ್ ಅವರ್" ಜನಸಂದಣಿಯಲ್ಲಿ ನನ್ನ ಕೈನಲ್ಲಿದ್ದ ಕಾಫಿ ಲೋಟದಿಂದ ಕೆಳಗೆ ಚೆಲ್ಲಿ ತನ್ನ ಸ್ವಾತಂತ್ರ್ಯವನ್ನೂ ಘೋಷಿಸಿಕೊಂಡಿತು!

ಇಡಿಯ ನ್ಯೂಯಾರ್ಕು ನಗರವನ್ನು ಐದು 'ಬರೋ'ಗಳನ್ನಾಗಿ ಭಾಗ ಮಾಡಲಾಗಿದೆ, ಮ್ಯಾಪು ಹಿಡಿದೇ ಮುಂದೆ ಸಾಗಬೇಕು ಎಂದು ಅರಿವಿಗೆ ಬರುವ ಮುನ್ನ ತಪ್ಪು ರೂಟಿನ ಸಬ್ವೇ ರೈಲನ್ನು ಏರಿ ಆಗಿತ್ತು! ಮೊದಲ ದಿನವೇ ಗೊಂದಲ. ಉರುಳಿ ಬಿಟ್ಟ ವುಲ್ಲನ್ ಉಂಡೆಯ ದಾರದ ಸಿಕ್ಕುಗಳಂತೆ ಕಾಣುತ್ತಿದ್ದ ಸಬ್ವೇ ರೈಲಿನ ರೂಟು, ಎಷ್ಟೇ ಇಂಗ್ಲಿಷ್ ಮಾಧ್ಯಮದಲ್ಲಿ ಓದಿಕೊಂಡು ಬಂದಿದ್ದರೂ ಅರ್ಥವಾಗದ ಆ ದೇಶದ ಆಂಗ್ಲ ಭಾಷೆಯ ಅಭಿವ್ಯಕ್ತಿ, ಒಂದು ಕ್ಷಣ "ಬೋರೇಗೌಡ ಬೆಂಗಳೂರಿಗೆ ಬಂದ" ಎಂಬಂತೆ ಎಲ್ಲರೂ ತನ್ನನ್ನೇ ನೋಡಿ ಹಂಗಿಸುತ್ತಿದ್ದಾರೆ ಎಂಬ ಭಾವ ಎಲ್ಲವೂ ಸೇರಿ ನ್ಯೂಯಾರ್ಕ್ ಸೊಕ್ಕಿನ ಸುಂದರಿ ಎನಿಸುವಂತೆ ಮಾಡಿಬಿಟ್ಟವು. ಆದರೆ ಆ ಸೊಕ್ಕಿನ ಸುಂದರಿಯ ಸ್ನೇಹಪರತೆಯನ್ನು ಮೊದಲ ಬಾರಿ ಅನುಭವಕ್ಕೆ ಬರುವಂತೆ ಮಾಡಿದ್ದು ಆ ಸ್ಟೇಷನ್ನಿನ್ನ ಪೋಲಿಸ್ ಅಧಿಕಾರಿ. ಡೊಳ್ಳು ಹೊಟ್ಟೆ ಹೊತ್ತು ಎತ್ತಲೋ ನೋಡಿಕೊಂಡು ಒಂದು ಕೈನಲ್ಲಿ ಡೋನಟ್ ಕಚ್ಚಿ ತಿನ್ನುತ್ತಿದ್ದ ಆತನ ಆಕಾರ ಮತ್ತು ಧೋರಣೆ ನನಗೆ ಭಯ ತರಿಸಿದರೂ ನನ್ನ ಗೊಂದಲಮಯ ಮುಖಭಾವವನ್ನು ಒಮ್ಮೆಗೇ ಪತ್ತೆಹಚ್ಚಿ ನನ್ನ ಸಂದೇಹಗಳನ್ನು ಕ್ಷಣಕಾಲದಲ್ಲಿ ನಿವಾರಿಸಿದ ಆ ಅಧಿಕಾರಿಯ ಕರ್ತವ್ಯಪ್ರಜ್ಞೆಗೆ ಒಂದು ಸಲಾಮ್ ಹಾಕಿ ಸ್ಟೇಷನ್ನಿನಿಂದ ಹೊರನಡೆದವಳ ಕಣ್ಣೆದುರಿಗೆ ಇದ್ದದ್ದು ಟೈಮ್ಸ್ ಸ್ಕ್ವೇರ್!

ಸ್ವಪ್ನಸುಂದರಿಯ ಹೃದಯಭಾಗ. ಜೀವನೋತ್ಸಾಹದ ಮೂರ್ತರೂಪ! ಅವೆಷ್ಟು ಬಗೆಯ ಚಟುವಟಿಕೆಗಳು ಅಲ್ಲಿ. ಛೇ ದೇಹದ ಎಲ್ಲಾ ಭಾಗಕ್ಕೂ ಕಣ್ಣಿರಬೇಕಿತ್ತು ಎಂದು ಬಲವಾಗಿ ಒಮ್ಮೆ ಎನಿಸಿತು! ಅಷ್ಟರಲ್ಲಿ ಬರಿಯ ತುಂಡುಚಡ್ಡಿಯಲ್ಲಿ ರಸ್ತೆಯ ಮಧ್ಯೆ ನಿಂತು ಪ್ರವಾಸಿಗರನ್ನು ಆಕರ್ಷಿಸುತ್ತಿದ್ದ "ನೇಕೆಡ್ ಕೌಬಾಯ್"ನತ್ತ ಗಮನ ಹೋಯಿತು! ಈತನಾ ಅವನು ನಾ ಬಹಳವಾಗಿ ಕೇಳ್ಪಟ್ಟ ಆ ಬೆತ್ತಲೆ ಗೋಪಾಲ ಎಂಬ ಕುತೂಹಲದಿಂದ ಅವನ ಬಳಿ ನಡೆದೆ! ಅವನದ್ದು ವರ್ಷಪೂರ್ತಿ ಅದೇ ಕಸುಬಂತೆ. ಚಳಿಗಾಲದಲ್ಲೂ! ಆ ಅವತಾರದಲ್ಲಿ ಪ್ರವಾಸಿಗರು ಅವನ ಜೊತೆಗಿನ ಒಂದು ಫೋಟೋಗೆ ಬಾಯಿಬಿಟ್ಟುಕೊಂಡು ಕಾಯುತ್ತಿದ್ದರು! ಆತ ಮುಂದಿನ ದಿನಗಳಲ್ಲಿ ಮೇಯರ್ ಚುನಾವಣೆಯ ಅಭ್ಯರ್ಥಿಯೂ ಆದದ್ದು ಆತನಿಗಿದ್ದ ಹುಚ್ಚು ಜನಪ್ರಿಯತೆಗೆ ಸಾಕ್ಷಿ! ಪಕ್ಕದಲ್ಲೇ ಒಂದು ಫ್ಯಾನ್ಸಿ ಸಾರ್ವಜನಿಕ ಶೌಚಾಲಯ! ಅದೂ ಸಂಪೂರ್ಣ ಉಚಿತ. ಶೌಚಕ್ಕೆಂದು ಕ್ಯೂ ನಿಂತ ಜನರನ್ನು ತಮ್ಮ ಮಾತು ಹಾಗು ವರ್ತನೆಗಳಿಂದ ಮನರಂಜಿಸಲು ಅದಕ್ಕೆಂದೇ ನೇಮಿಸಲ್ಪಟ್ಟ "ಕ್ರಿಯೇಟಿವ್" ಸಿಬ್ಬಂದಿವರ್ಗ! ಹೇಗಿದೆ

ನೋಡೋಣ ಎಂದು ಒಳಹೋದವಳನ್ನು ಅಲ್ಲಿನ ಸಿಬ್ಬಂದಿ ಕರೆದುಕೊಂಡು ಹೋಗಿ ಅಲ್ಲಿನ ಪ್ರಧಾನ ಆಕರ್ಷಣೆಯಾಗಿದ್ದ ಆಟದ ಕಮೋಡದ ಮೇಲೆ ಕುಳ್ಳಿರಿಸಿ ಒಂದು ಫೋಟೋ ತೆಗೆದು ನೆನಪಿನ ಕಾಣಿಕೆಯಂತೆ ಕೈನಲ್ಲಿಟ್ಟಿದ್ದರು! ಆಮೇಲೆ ತಿಳಿಯಿತು,ಅದು ಟಾಯ್ಲೆಟ್ ಟಿಶ್ಯು ಪೇಪರ್ ತಯಾರಿಸುವ ಸಂಸ್ಥೆಯೊಂದರ ವಿನೂತನ ಜಾಹೀರಾತು ತಂತ್ರ! ಉಸ್ಸಪ್ಪಾ ಎಂದು ಹೊರಬರುವಷ್ಟರಲ್ಲಿ ಕಂಡದ್ದು ಮತ್ತೊಂದು ಬದಿಯಲ್ಲಿ ನಿಂತು ಸೋಪ್ ಗುಳ್ಳೆಗಳನ್ನು ಊದುತ್ತಾ ಸರ್ಕಸ್ ಶೋ ಒಂದಕ್ಕೆ ಜನರನ್ನು ಆಹ್ವಾನಿಸುತ್ತಿದ್ದ ಒಬ್ಬ ಕಾಲೇಜು ಯುವತಿ! ನ್ಯೂಯಾರ್ಕಿನಲ್ಲೂ ಜನ ಸೋಪ್ ಗುಳ್ಳೆ ಊದಿದ ಕ್ಷಣ ಏಕೋ ಆತ್ಮೀಯವೆನಿಸಿತು! ವಿಸ್ಮಯಗೊಂಡಿದ್ದೆ! ನಿರ್ಭಿಡೆಯಿಂದ ಸಾರ್ವಜನಿಕವಾಗಿ ಚುಂಬಿಸುತ್ತಿದ್ದ ಪ್ರೇಮಿಗಳು, ಫುಟ್ಪಾಥ್ ಮೇಲೆ ಕೂತು ಹರಟೆ ಹೊಡೆಯುತ್ತಿದ್ದ ಪ್ರವಾಸಿಗರು, ರಸ್ತೆಬದಿಯಲ್ಲಿ ವಿವಿಧ ಸಾಮಾನುಗಳನ್ನು ಮಾರುತ್ತಿದ್ದ ಪುಟ್ಟ ಪುಟ್ಟ ವ್ಯಾಪಾರಿಗಳು, ರಸ್ತೆ ಬದಿಯ ಹಾಟ್ ಡಾಗ್‌ನಂತಹ ತಿನಿಸುಗಳು ಇವುಗಳ ಮುಂದೆ ಅಲ್ಲಿದ್ದ ದೊಡ್ಡ ದೊಡ್ಡ ಬ್ರ್ಯಾಂಡೆಡ್ ಶೋರೂಮುಗಳು ಕಣ್ಣಿಗೆ ಬೀಳಲೇ ಇಲ್ಲ! ಎಷ್ಟೇ ಬಾಹ್ಯಾಡಂಬರವಿದ್ದರೂ ಅಂತರಂಗದ ಸರಳತೆಯನ್ನು ಮುಚ್ಚಿಡಲು ಸಾಧ್ಯವಿಲ್ಲ ಎಂಬುದಕ್ಕೆ ಈ ದೃಶ್ಯಾವಳಿಗಳೇ ಸಾಕ್ಷಿ! ಯಾಕೋ ನಮ್ಮೂರಿನ ದಸರಾ ಎಕ್ಸಿಬಿಷನ್ ನೆನಪುಗಳು ಒಮ್ಮೆಗೇ ನುಗ್ಗಿ ಸೊಕ್ಕಿನ ಸುಂದರಿಯ ಸರಳತೆಯನ್ನು ಅಭಿನಂದಿಸಿ ಕೈಕುಲುಕಿ ಹೋದವು!. ನಮ್ಮೂರಿನಲ್ಲಿ ಹೇಳದೇ ಕೇಳದೇ ಕಣ್ಮರೆಯಾದ ಗುಬ್ಬಿಗಳ ಸಂತಾನ ಥಕ್ಕನೇ ಆ ಜಾಗತಿಕ ಸುಂದರಿಯ ಒಡಲಲ್ಲಿ ಹಿಂಡುಹಿಂಡಾಗಿ ಗೋಚರಿಸಿದ್ದು ನನ್ನಂತೆಯೇ ಅವುಗಳೂ ವಲಸೆ ಬಂದಿವೆಯೇನೋ ಎಂಬ ಅನುಮಾನವನ್ನು ಹುಟ್ಟಿಸಿದ್ದವು. ಅಲ್ಲಿಂದ ಲಿಬರ್ಟಿ ಐಲ್ಯಾಂಡಿಗೆ ಹೋದವಳಿಗೆ ಗೋಚರಿಸಿದ್ದು ಭವ್ಯವಾದ ಲಿಬರ್ಟಿ ದೇವತೆಯ ಪ್ರತಿಮೆ. ಆ ಮೊಗದಲ್ಲಿದ್ದ ಮಂದಹಾಸ, ಅದು ನೀಡುತ್ತಿದ್ದ ಸ್ವತಂತ್ರತೆಯ ಭಾವ "ಹೌದು! ನಾನಿಲ್ಲಿ ಬದುಕಬಹುದು! ಇದು ನ್ಯೂಯಾರ್ಕ್! ಇಲ್ಲಿ ಹೀಗೂ ಬದುಕಬಹುದು! ನಾವು ನಾವಾಗಿರಬಹುದು! ಸಮಾಜಕ್ಕೆ ಹೆದರಬೇಕಿಲ್ಲ, ಸಹಜವಾಗಿರಬಹುದು, ಸ್ವತಂತ್ರವಾಗಿರಬಹುದು." ಎಂದು ನನಗೆ ಹೇಳಿದಂತಾಗಿ ನನ್ನಲ್ಲಿ ಆ ಕ್ಷಣ ಆ ಒಂದು ಭದ್ರತೆಯ ಭಾವವನ್ನು ಉಂಟುಮಾಡಿತ್ತು. ಅಲ್ಲಿಂದ ಹೊರಬರುತ್ತಿದ್ದಂತೆ ಫುಟ್‌ಪಾತಿನಲ್ಲಿ ಕುಳಿತಿದ್ದ ಹೈಶೆಂಗ್ ಝೂಂಗ್ ಎಂಬ ಕಲಾವಿದ ನನ್ನನ್ನು ಲಿಬರ್ಟಿ ದೇವತೆಯ ಅವತಾರದಲ್ಲಿ ಕಲ್ಪಿಸಿ ನನ್ನ ಭಾವಚಿತ್ರವನ್ನು ಸ್ಥಳದಲ್ಲಿಯೇ ಬಿಡಿಸಿಕೊಟ್ಟದ್ದು ಸಾಕ್ಷಾತ್ ಲಿಬರ್ಟಿ ದೇವತೆಯೇ ನನ್ನೊಳಗೆ ನೆಲೆಸಿದ್ದಾಳೆ ಎಂಬ ಭ್ರಮೆಯನ್ನು ಉಂಟುಮಾಡಿತ್ತು!

ಆರಂಭದ ದಿನಗಳ ಸಂಭ್ರಮಗಳು ಮುಗಿದು ಕ್ರಮೇಣವಾಗಿ ಮೆಟ್ರೋ ಊರಿನ ವೇಗಕ್ಕೆ ಹೊಂದಿಕೊಳ್ಳುತ್ತಾ ಹೋದಂತೆ ಅರಿವಾದ ಸತ್ಯ ನ್ಯೂಯಾರ್ಕಿನ ಮಡಿಲಷ್ಟೇ ಆಕೆಯ ಮನಸ್ಸೂ ವಿಶಾಲ ಎಂದು. ವೃತ್ತಿಜೀವನದ ಮೊದಲ ಹೆಜ್ಜೆ ಒಂದು ಸ್ವಯಂಸೇವಕ ಸಂಸ್ಥೆಯೊಂದರ ಜೊತೆಗೆ ಶುರುವಾದ ಸಂಭ್ರಮವಿತ್ತು. ಕೆಲಸದ ಮೊದಲ ದಿನ

ಆಫೀಸಿನ ಒಳಗೆ ಹೋದಾಗಲೇ ತಿಳಿದದ್ದು ಅದೊಂದು ಸಲಿಂಗಕಾಮಿಗಳ ಸಾಮಾಜಿಕ ಹಕ್ಕುಗಳ ಹಿತರಕ್ಷಣಾ ವೇದಿಕೆಯೆಂದು. ಮೈಸೂರಿನ ಮಡಿವಂತ ಪರಿಸರದಲ್ಲಿ ಗಂಡು ಹೆಣ್ಣು ಓಡಾಡಿದರೇನೇ ಇಶ್ಶೀ ಎಂದು ಮೂಗು ಮುರಿಯುವ ವಾತಾವರಣದಲ್ಲಿ ಬೆಳೆದ ನನಗೆ ದಿಢೀರನೆ ಹೊರದೇಶದಲ್ಲಿ ಇಂಥದ್ದೊಂದು ಸಂಸ್ಥೆಯ ಆವರಣದಲ್ಲಿ ಇಬ್ಬರು ಗಂಡುಗಳು ಪರಸ್ಪರ ಆಲಂಗಿಸಿಕೊಂಡು ನಿಂತದ್ದು ದಿಗ್ಭ್ರಮೆಗೀಡುಮಾಡಿತ್ತು. ಅಲ್ಲಿನ ಹೆಣ್ಣುಗಳು ಹತ್ತಿರ ಬಂದಾಗಲೂ, ಕೆಲಸದ ಬಗ್ಗೆಯೇ ಮಾತನಾಡಿದರೂ ಅನುಮಾನ ಮತ್ತು ಹೇಗೆ ಪ್ರತಿಕ್ರಿಯಿಸಬೇಕೆಂಬ ಗೊಂದಲ! ಕ್ರಮೇಣವಾಗಿ ಹೊಸ ಸಮಾಜದ ಹೊಸ ಆಯಾಮಗಳಿಗೆ ಮನಸ್ಸು ತೆರೆದುಕೊಂಡಷ್ಟೂ ಬಾವಿಯೊಳಗಿದ್ದ ಮಡಿವಂತ ಕಪ್ಪೆ ಹೊರಜಿಗಿದು ಹೊಸ ಪ್ರಪಂಚವನ್ನು ಕುತೂಹಲದಿಂದ ನೋಡಲು ಶುರು ಹಚ್ಚಿಕೊಂಡಿತು. ದೃಷ್ಟಿಕೋನ ನೇರವಾಗಿದ್ದಲ್ಲಿ ಎಲ್ಲವೂ ಸಹಜವೇ! ನನ್ನ ಮತ್ತು ಆ ಸಂಸ್ಥೆಯ ಒಡನಾಟ ಹೆಚ್ಚು ದಿನ ಮುಂದುವರೆಯದಿದ್ದರೂ ಸ್ವಲ್ಪ ಸಮಯದಲ್ಲೇ ಆ ಸಮಾಜದ ಅನೇಕ ವಾಸ್ತವಗಳ ಪರಿಚಯವನ್ನು ನನಗೆ ಮಾಡಿಸಿಕೊಟ್ಟಿತ್ತು. ಸಮಾನತೆಯ ನಿಜವಾದ ಪಾಠವನ್ನು ನಾನು ಕಲಿತದ್ದು ಅಲ್ಲಿ. ಡ್ರೈವರ್ ಎಂದರೆ ಪುಲ್ಲಿಂಗ ಪದ ಎಂಬ ಭ್ರಮೆಯಲ್ಲಿದ್ದ ನನಗೆ ಅಲ್ಲಿನ ದೊಡ್ಡ ದೊಡ್ಡ ಸಿಟಿ ಬಸ್ಸು ಮತ್ತು ಲಾರಿಗಳಲ್ಲಿ ಡ್ರೈವರ್ ಸೀಟಿನಲ್ಲಿ ರಾರಾಜಿಸುತ್ತಿದ್ದ ಮಹಿಳಾ ಚಾಲಕರು ಸಿಂಹವಾಹಿನಿಯಾದ ಚಾಮುಂಡಿ ತಾಯಿಯಂತೆ ಗೋಚರಿಸಿದ್ದು ಸುಳ್ಳಲ್ಲ! ಸ್ತ್ರೀ ಸಬಲೀಕರಣವನ್ನು ಅಕ್ಷರಗಳಲ್ಲಿ ಮಾತ್ರ ನೋಡಿದ್ದ ನನಗೆ ಅದು ಅಲ್ಲಿ ಸಾಕ್ಷಾತ್ಕಾರವಾಗಿತ್ತು! ಬರಿಯ ವೈಶಿಷ್ಟ್ಯಗಳಷ್ಟೇ ಅಲ್ಲದೆ ತನ್ನೊಡಲಿನ ಪ್ರಕೃತಿ ವಿಕೋಪಗಳ ದರ್ಶನವನ್ನೂ ತೀವವಾಗಿ ಮಾಡಿಸಿದ ಸ್ವಪ್ನಸುಂದರಿಯ ಮತ್ತೊಂದು ಮುಖದ ದರ್ಶನ ಅಲ್ಲಿನ ಚಳಿಗಾಲದ ಕ್ರೂರ ಹಿಮಪಾತದ ಬಿಳಿಯ ಹಾಸಿನ ಮೇಲೆ ಆಯಿತು! ಕ್ರಮೇಣ ಪ್ರಾಕೃತಿಕ ಏರುಪೇರುಗಳು ನನ್ನ ಅಲ್ಲಿನ ಜೀವನಶೈಲಿಯ ಭಾಗವಾಗುತ್ತಲೇ ಹೋಯಿತು. ಚಳಿ, ಮಳೆ, ಹಿಮ ಅದೇನೇ ಇರಲಿ, ಅಲ್ಲಿನ ಜನರ ಕುಂದದ ಜೀವನೋತ್ಸಾಹ ನನಗೆ ಮಾದರಿಯಾಗಿತ್ತು

ನ್ಯೂಯಾರ್ಕಿನಲ್ಲಿ ನನ್ನ ಬದುಕಿನ ಪಯಣದ ಅವಧಿ ನಿರ್ದಿಷ್ಟವಾಗಿ ನನಗೂ ತಿಳಿದಿರಲಿಲ್ಲ. ಈ ಒಂದು ಅನಿರ್ದಿಷ್ಟ ಅವಧಿಯಲ್ಲಿ ನ್ಯೂಯಾರ್ಕಿನ ಜನನಿಬಿಡ ಬೀದಿಗಳಲ್ಲಿ ನಿಂತು " ಏ.ಎಮ್ ನ್ಯೂಯಾರ್ಕ್ ಏ.ಎಮ್ ನ್ಯೂಯಾರ್ಕ್" ಎಂದು ಕೂಗುತ್ತಾ ಪೇಪರ್ ಹಂಚಲು ನಿಂತಾಗ ಮಹಾನಗರದ ನಿವಾಸಿಗಳ ಯಾಂತ್ರಿಕ ಮುಗುಳುನಗೆಗೆ ನಾನು ನಿತ್ಯವೂ ಸಾಕ್ಷಿಯಾಗುತ್ತಿದ್ದೆ. ನಂತರದ ದಿನಗಳಲ್ಲಿ ಜಮೈಕಾ ಅವೆನ್ಯೂವಿನ ಅಂಗಡಿಯೊಂದರಲ್ಲಿ ಕ್ಯಾಷಿಯರ್ ಕೆಲಸ ಮಾಡುವಾಗಿನ ದಿನಗಳು ನ್ಯೂಯಾರ್ಕಿನ ಕರಾಳ ಮುಖದ ದರ್ಶನವನ್ನೂ ಕೂಡ ತಕ್ಕಮಟ್ಟಿಗೆ ಮಾಡಿಸಿದ್ದವು! ದಿನಕ್ಕೊಂದರಂತೆ ಕ್ರೈಮ್ ಸ್ಟೋರಿ ದರ್ಶನ ಮಾಡಿಸುತ್ತಿದ್ದ ಆ ಬೀದಿ ಆ ಊರಿನ ವ್ಯವಸ್ಥಿತ ಬದುಕಿನ ನಿದರ್ಶನಕ್ಕೆ ಅಪಸವ್ಯದಂತಿತ್ತು!

ಒಂದು ದಿನ "ನಿಮಗೆ ಹೇನು ಹೆಕ್ಕಲು ಬರುತ್ತದೆಯೇ! ಹಾಗಿದ್ದಲ್ಲಿ ನಿಮಗಿದೋ ಸುವರ್ಣಾವಕಾಶ" ಎಂಬ ಜಾಹೀರಾತು ನನ್ನ ಗಮನ ಸೆಳೆಯಿತು! ಒಂದು ಕ್ಷಣ ಛೀ ಇದೇನು ಅಸಹ್ಯ ಎಂದೆನಿಸಿದರೂ ಹೌದು! ಇಲ್ಲಿ ಹೇನು ಹೆಕ್ಕುವುದೂ ಒಂದು ಉದ್ಯಮ! ಹೇನು ಹೆಕ್ಕುವುದು ಇಲ್ಲಿನ ಅತ್ಯಂತ ದುಬಾರಿ ಸೇವೆಗಳಲ್ಲಿ ಒಂದು! ಹೇನು ಹೆಕ್ಕಿಸಿಕೊಳ್ಳುವುದಕ್ಕೆ ನೂರಾರು ಸಾವಿರಾರು ಡಾಲರ್ ಸುರಿಯುವ ಭೂಪರಿದ್ದಾರೆ! ಏಕೆಂದರೆ ಇಲ್ಲಿನ ಶಾಲೆಗಳಲ್ಲಿ ಮಕ್ಕಳ ತಲೆಯಲ್ಲಿ ಹೇನಿರುವದು ನಿಷಿದ್ಧ! ಆಫ್ಟರ್ ಆಲ್ ಒಂದು ಚಿಲ್ಲರೆ ಹೇನಿಗೆ ಇಷ್ಟೊಂದು ಯಾಕೆ ತಲೆ ಕೆಡಿಸಿಕೊಳ್ತಾರೆ ಅನ್ನೋದು ಇವತ್ತಿಗೂ ನನಗೆ ಅರ್ಥವಾಗದ ವಿಷಯ! ಇಂತಹ ಒಂದು ಸಂಸ್ಥೆಯೊಂದರ ಉದ್ಯೋಗಿಯಾಗಿ ಕಾರ್ಯ ನಿರ್ವಹಿಸಿದ್ದು ನನ್ನ ವೃತ್ತಿಜೀವನಕ್ಕೆ ಧನಾತ್ಮಕವಾಗಿ ಪರಿಣಮಿಸಿತೋ ಇಲ್ಲವೋ ವ್ಯಕ್ತಿತ್ವದ ಮೇಲಂತೂ ಸಾಕಷ್ಟು ಧನಾತ್ಮಕ ಪರಿಣಾಮವನ್ನು ಬೀರಿತ್ತು! ಪ್ರಪಂಚದ ಬೇರೆ ಬೇರೆ ಸ್ಥಳಗಳಿಂದ ವಲಸೆ ಬಂದವರ ಸಾಮಾಜಿಕ ಆಯಾಮದ ಪರಿಚಯ ನನಗಾಗಿತ್ತು. ನ್ಯೂಯಾರ್ಕ್ ನಗರದ ಅನೇಕ ಪ್ರತಿಷ್ಠಿತ ಶಾಲೆಗಳು ನಮ್ಮ ಸಂಸ್ಥೆಯ ಗ್ರಾಹಕರಾಗಿದ್ದವು. ಒಂದೊಂದು ಶಾಲೆಗೂ ಒಂದೊಂದು ವಿಶಿಷ್ಟ ಹಿನ್ನೆಲೆ. ಅಲ್ಲಿನ ಶೈಕ್ಷಣಿಕ ಪದ್ಧತಿಯ ಆಯಾಮಗಳನ್ನು ಬಹಳ ಹತ್ತಿರದಿಂದ ನೋಡುವ ಅವಕಾಶ ನನ್ನದಾಯಿತು. ಇಂತಹ ಒಂದು ಸಂದರ್ಭದಲ್ಲೇ ಭೋಗದೂರಿನಲ್ಲಿದ್ದ "ಫಿಲಾಸಫಿ ಡೇ ಸ್ಕೂಲ್" ನಂತಹ ವಿಶಿಷ್ಟ ಶಾಲೆಯ ಪರಿಚಯ ಕೂಡ ನನಗಾದದ್ದು. ನಮ್ಮ ಭಾರತೀಯ ಮೂಲದ ಸಂಸ್ಕೃತ ಭಾಷೆ ಅಲ್ಲಿನ ಮಕ್ಕಳಿಗೆ "ಕಂಪಲ್ಸರಿ ಸಬ್ಜೆಕ್ಟ್" ಮತ್ತು ನಮ್ಮ ಅದ್ವೈತ ಸಿದ್ಧಾಂತ ಅವರ ಶೈಕ್ಷಣಿಕ ತಳಹದಿ!

. ದಿನದಿನಕ್ಕೂ ಈ ರೀತಿಯ ವಿಶಿಷ್ಟತೆಗಳಿಂದ ಹೊಸಬಳಂತೆ ಕಾಣುತ್ತಿದ್ದ ಸುಂದರಿ ದಿನೇ ದಿನೇ ನನಗೆ ಸರಳವಾಗುತ್ತಲೇ ಹೋದಳು. ವೃತ್ತಿಪರತೆ, ವೈಯ್ಯಾರ ಮತ್ತು ವೈವಿಧ್ಯಗಳ ಪರಿಪೂರ್ಣ ಸುಂದರಿಯ ಅಂತರಾಳ ಕಠಿಣವೂ ಹೌದು. ಸುಲಭಕ್ಕೆ ಯಾವುದೂ ದಕ್ಕುತ್ತಿರಲಿಲ್ಲ. ಆದರೆ ಪ್ರಯತ್ನ ಪ್ರಾಮಾಣಿಕವಾಗಿದ್ದಲ್ಲಿ ದಕ್ಕದೇ ಹೋಗುತ್ತಿರಲಿಲ್ಲ. ಸಾಮಾನ್ಯವಾಗಿ ಪಾಶ್ಚಾತ್ಯ ದೇಶಗಳ ಸೌಲಭ್ಯ, ಸೌಕರ್ಯ ಮತ್ತು ಆಧುನಿಕತೆಯ ಬಗೆಗಿನ ನಮ್ಮ ಭ್ರಮೆಗಳು ಅವೆಷ್ಟು ಅರ್ಥಹೀನ ಎಂದು ಅರಿವಾಗುತ್ತಲೇ ನ್ಯೂಯಾರ್ಕ್ ನನ್ನನ್ನು ಆವರಿಸಿಬಿಟ್ಟಿದ್ದಳು.. ಒಂದು ಸಮಾಜದಲ್ಲಿ ವಿಚಿತ್ರವೆನಿಸಿಕೊಂಡದ್ದು ಮತ್ತೊಂದು ಸಮಾಜಕ್ಕೆ ಅಷ್ಟೇ ಸಹಜ. ಒಂದು ಸಮಾಜದಲ್ಲಿ ನಿಷಿದ್ಧವಾದದ್ದು ಮತ್ತೊಂದು ಸಮಾಜದಲ್ಲಿ ಸ್ವಾಗತಾರ್ಹ. ಒಟ್ಟಿನಲ್ಲಿ ಸಮಾಜ ಯಾವುದೇ ಇರಲಿ, ಬಹಿರಂಗಕ್ಕೆ ಅದೇನೇ ಬಣ್ಣಗಳಿರಲಿ ಅಂತರಂಗದ ಬಣ್ಣವೊಂದೇ ಎಂಬ ಸರಳ ಸತ್ಯದ ಅನುಭವ ನನಗೆ ದಕ್ಕಿದ್ದು ಆ ವಲಸಿಗರ ಸಾಮ್ರಾಜ್ಯದಲ್ಲಿ.

ಆದರೂ ಎಲ್ಲೋ ಒಂದು ಕಡೆ ಬಲವಾಗಿ ಸೆಳೆಯುತ್ತಿದ್ದ ಹುಟ್ಟೂರಿನ ಸೆಳೆತ. ನ್ಯೂಯಾರ್ಕಿನ ನಿಜವಾದ ಅಂತರಾಳದ ಅರಿವು ತಕ್ಕಮಟ್ಟಿಗೆ ನನಗಾಗುತ್ತಾ ಹೋದಂತೆ

ಒಂದು ರೀತಿಯ ದ್ವಂದ್ವ. ಬದುಕಿನ ಅನ್ವೇಷಣೆಯ ಹಾದಿಯಲ್ಲಿ 5 ವರ್ಷಗಳನ್ನು ಕಳೆದ ಆ ಊರಿನಲ್ಲೇ ಮುಂದುವರೆಯಬೇಕೇ ಅಥವ ಹಿಂದಿರುಗಿ ಹುಟ್ಟೂರಿಗೆ ಮರಳಬೇಕೇ ಎಂಬ ದ್ವಂದ್ವ ಶುರುವಾದ ಮರುಕ್ಷಣ ನಾನು ಲಿಬರ್ಟಿ ಪ್ರತಿಮೆಯ ಎದುರು ಹೋಗಿ ನಿಂತಿದ್ದೆ.

"ನನ್ನೊಡಲ ನಿನ್ನ ಅನುಭವಗಳಲ್ಲಿ ನಿನ್ನ ಸತ್ಯ ನಿನಗೆ ಗೋಚರವಾಗಿದ್ದರೆ ನೀನು ನಿಜವಾಗಿಯೂ ಸ್ವತಂತ್ರ. ಹೋಗಿ ಬಾ ನಿನಗೆ ಒಳ್ಳೆಯದಾಗಲಿ" ಎಂದು ತನ್ನ ಹಸಿರು ಬಣ್ಣದ ದೇಹದ ಮೂಲಕ ನಿಶಾನೆ ತೋರಿದಂತಾಯಿತು. ಲಿಬರ್ಟಿಯ ಪ್ರತಿಮೆಯ ಮೊಗದಲ್ಲಿದ್ದ ಮಂದಹಾಸದ ಬೆಳಕಿನ ಮುಂದೆ ಕೈನಲ್ಲಿದ್ದ ಗ್ರೀನ್‌ಕಾರ್ಡಿನ ಹೊಳಪು ಒಮ್ಮೆ ಮಾಸಿದಂತಾಯಿತು. ಲಿಬರ್ಟಿ ಪ್ರತಿಮೆಯತ್ತ ಒಮ್ಮೆ ಕೈಬೀಸಿ ಹುಟ್ಟೂರಿನೆಡೆಗೆ ಹೆಜ್ಜೆ ಹಾಕಿದೆ. ಮನದಲ್ಲಿ ಲಿಬರ್ಟಿ ಪ್ರತಿಮೆಯ ಚಿತ್ರಣ ಮಾಸುತ್ತಿದ್ದಂತೆ ಬೆಟ್ಟದ ತಾಯಿ ಚಾಮುಂಡಿಯ ಚಿತ್ರಣ ಮನಸ್ಸಿನಲ್ಲಿ ಗಾಢವಾಗುತ್ತಾ ಹೋಯಿತು.

ಈಗಲೂ ಸ್ವಪ್ನಸುಂದರಿ ಕಾಡುತ್ತಾಳೆ... ನೆನಪುಗಳಲ್ಲಿ ಮಾತ್ರ....

**ಧರ್ಮಶ್ರೀ. ಬಿ. ಅಯ್ಯಂಗಾರ್**

ತರಂಗ, ಯುಗಾದಿ ವಿಶೇಷಾಂಕ 2014

# ದ ಮೇಕಿಂಗ್ ಆಫ್ ಉಪ್ಪಿನಕಾಯಿ

ಬೇಸಿಗೆ ರಜಾದಲ್ಲಿ ಚಿಕ್ಕವರಾದ ನಮಗೆಲ್ಲಾ ತೋಟ, ಗುಡ್ಡ ಅನ್ನುತ್ತಾ ತಿರುಗಾಡುವುದು, ಸಿಕ್ಕಿ ಸಿಕ್ಕಿದ ಹಣ್ಣುಗಳನ್ನೆಲ್ಲಾ ಮೆಲ್ಲುವುದೇ ಕೆಲಸ. ಜೊತೆಗೆ ಗೇರುಗುಡ್ಡಕ್ಕೆ ಹೋಗಿ ಗೇರುಬೀಜಗಳನ್ನು ಒಂದೂ ಬಿಡದಂತೆ ಹೆಕ್ಕಿ ತರುವ ಕಾಯಕವೂ ಇತ್ತೆನ್ನಿ. ಏನೇ ಆದರೂ ಇದೆಲ್ಲವೂ ನಮಗೆ ಮಜಾ ಕೊಡುವ ವಿಷಯಗಳು.

ಆದರೆ, ಅಮ್ಮಂದಿರಿಗೆ ಮಾತ್ರ ಹಾಗಲ್ಲ. ಈ ಕಾಲದಲ್ಲಾಗುವ ಸಕಲ ಕಾಯಿ, ಹಣ್ಣುಗಳಿಂದೆಲ್ಲಾ ಬಗೆಬಗೆಯ ಖಾದ್ಯಗಳನ್ನು ತಯಾರು ಮಾಡಿ ಮುಂದಿನ ಒಂದು ವರ್ಷಕ್ಕೆ ಕಾದಿರಿಸುವ ಜವಾಬ್ದಾರಿ. ಉಪ್ಪಿನಕಾಯಿ, ಹಪ್ಪಳ, ಸೆಂಡಿಗೆ ತಯಾರಿ, ಹಲಸಿನ ತೊಳೆ, ಮಾವಿನಕಾಯಿಯನ್ನು ಉಪ್ಪಿನಲ್ಲಿ ಹಾಕಿಡುವುದು ಹೀಗೆ ಮನೆಮನೆಯ ಹೆಣ್ಮಕ್ಕಳೂ ನಖಶಿಖಾಂತ ಬಿಝಿ. ಅವರ ಈ ಕೆಲಸದ ಮಧ್ಯದಲ್ಲಿ ನಮ್ಮಂತಹ ಚಿಲ್ಲರೆಗಳೆಲ್ಲಾದರೂ ಮೂಗು ತೂರಿಸಿಕೊಂಡು ಹೋದರಂತೂ ಅವರಿಗೆ ಎತ್ತಿ ಕುಕ್ಕುವಷ್ಟು ಸಿಡುಕು. ಆದರೂ ಅವರ ಈ ಹಗರಣಗಳ ನಡುವೆ ನಾವೂ ಒಮ್ಮೆ ತಲೆತೋರಿಸಿ ಬೈಸಿಕೊಂಡು ಬರದಿದ್ದರೆ ನಮಗೂ ನಿದ್ದೆ ಬರದು.

ಅದರಲ್ಲೂ ಮನೆಯ ಮಕ್ಕಳ ಪರಿವಾರದಲ್ಲೆಲ್ಲ ಚಿಕ್ಕವಳಾದ ನನಗೆ, ಹಪ್ಪಳ ಮಾಡುವ ದಿನ ಇರೋ ಮಕ್ಕಳೆಲ್ಲ ಬನ್ನಿ ಅಂತಂದು ಕರೆಯುವ ಅಮ್ಮ–ಅಜ್ಜಿಯರು ಉಪ್ಪಿನಕಾಯಿ ಮಾಡುವಾಗ ಏಕೆ ಕರೆಯುವುದಿಲ್ಲ ಅನ್ನೋ ಕುತೂಹಲ. ಹಪ್ಪಳದ ಹಿಟ್ಟನ್ನು ಕೊಂಚ ಕೊಂಚವೇ ತಿನ್ನುತ್ತಾ ಹಪ್ಪಳ ಒತ್ತುವ, ಅತ್ತಿತ್ತ ಓಡಾಡಿ ಅದನ್ನು ಚಾಪೆಯಲ್ಲಿ ಹಾಕುವವರಿಗೆ ಎಣ್ಣೆ ಇತ್ಯಾದಿ ಬೇಕಾದುದನ್ನು ಕೈಗೆ ತಂದುಕೊಡುವ ಪರಿಕರ್ಮದ ಕೆಲಸವೆಂದರೆ ನನಗಿಷ್ಟ. ಆದರೆ ಉಪ್ಪಿನಕಾಯಿ ಹಾಕುವಾಗ ಹಾಗೆಯೇ ಉಪ್ಪಿನಲ್ಲಿ ಹಾಕಿ ಕೊಂಚ ಬಾಡಿರುವ ಮಾವನ್ನೂ ತಿನ್ನಬಹುದೆನ್ನುವುದು ನನ್ನ ಲೆಕ್ಕಾಚಾರ.

ಅದಲ್ಲದೇ ನಾಲ್ಕೈದು ವರ್ಷದವಳಿದ್ದಾಗಲೇ ಖಾರದ ಉಪ್ಪಿನಕಾಯಿಯನ್ನು ಹಾಗೇ ಸವಿಸವಿದು ತಿಂದ ಉಪ್ಪಿನಕಾಯಿ ಭಕ್ತೆ ನಾನು. ಹೀಗಾಗಿ ಅದರ ತಯಾರಿಯಲ್ಲಿ ನಾನೂ ಪಾಲ್ಗೊಳ್ಳಬೇಕೆನ್ನುವುದು ನನ್ನ ಬಯಕೆ. ಆದರೆ ಅಮ್ಮ ಸದಾ ಈ ಕೆಲಸದಿಂದ ನನ್ನನ್ನು ದೂರವಿಟ್ಟು ನನ್ನ ಆಸೆಗೆ ತಣ್ಣೀರೆರಚುವಾಗ ಸಿಟ್ಟೇ ಬರುತ್ತಿತ್ತು. ಆದರೇನು ಮಾಡುವುದು, ಅಮ್ಮ ಹೇಳಿದಂತೆ ಕೇಳಲೇಬೇಕಿತ್ತು. ಇಲ್ಲವಾದರೆ ಮರುದಿನದಿಂದ ಉಪ್ಪಿನಕಾಯಿ ಬಂದ್. ಊಟಕ್ಕೊಂದು ಮಿಡಿ, ಊಟ ಮಾಡಿ ಎದ್ದೇಳುವಾಗ ಕೈಯಲ್ಲಿ ಇನ್ನೊಂದು ಮಿಡಿ ಬೇಕಾಗುವ ನನಗೆ ಈ ಪರಿಯ ಶಿಕ್ಷೆಯನ್ನು ತಾಳುವುದೂ ಅಸಾಧ್ಯ. ಹಾಗಾಗಿ ಪ್ರತಿ ಬೇಸಗೆ ರಜೆಯಲ್ಲಿಯೂ ಆಸೆ ಅದುಮಿಕೊಂಡು ಸುಮ್ಮನಿರುತ್ತಿದ್ದೆ.

ಆದರೆ, ಆ ವರ್ಷ ಮಾತ್ರ ನನ್ನ ಉಪ್ಪಿನಕಾಯಿ ತಯಾರಿಯ ವೀಕ್ಷಣಾ ಕಾರ್ಯಕ್ಕೆ ಬಲ ಬಂದಿತ್ತು. ನನ್ನಿಂದ ಎರಡು ವರ್ಷ ಚಿಕ್ಕವಳಾದ ಚಿಕ್ಕಮ್ಮನ ಮಗಳು ಸುಷ್ಮಾ ಆ ರಜೆಯಲ್ಲಿ ಮನೆಗೆ ಬಂದಿದ್ದಳು. ಅವಳಿಗೂ ಉಪ್ಪಿನಕಾಯಿ ಅಂದರೆ ಪ್ರೀತಿಯೇ. ಮೇಕಿಂಗ್ ಆಫ್ ಉಪ್ಪಿನಕಾಯಿಯಲ್ಲಿ ಪಾಲ್ಗೊಳ್ಳುವ ನನ್ನ ವರ್ಷಗಳ ಬಯಕೆಯನ್ನು ಅವಳ ಮುಂದಿಟ್ಟೆ. ಅವಳಲ್ಲೂ ಈ ಬಗ್ಗೆ ಕುತೂಹಲ ಮೊಳೆಯಿತು. ಸರಿ, ಮೊದಲು ಅಮ್ಮನಲ್ಲಿ ನೇರವಾಗಿ ಕೇಳಿಯೇಬಿಟ್ಟೆವು, 'ಅಮ್ಮಾ, ನಾವೂ ಉಪ್ಪಿನಕಾಯಿ ಮಾಡೋಕೆ ಸೇರ್ತೀವಮ್ಮಾ'. ಊಹೂಂ, ಅಮ್ಮನಿಗೆ ಈ ಬಾರಿಯೂ ಮನಸ್ಸು ಕರಗಲಿಲ್ಲ. 'ಎಂತ, ಇಷ್ಟು ಸಣ್ಣ ಮಕ್ಳು ಉಪ್ಪಿನಕಾಯಿ ಮಾಡೋಕೆ ಸೇರೋದಾ? ಇನ್ನೂ ಒಂಭತ್ತು ಹತ್ತು ವರ್ಷದ ಮಕ್ಳು ನೀವು, ನೆಟ್ಟಗೆ ನಿಮ್ಮ ಕೆಲ್ಸ ಮಾಡ್ಕೊಳ್ಳೋಕೆ ಬರೋದಿಲ್ಲ ನಿಮ್ಗೆ. ಇನ್ನು ಉಪ್ಪಿನಕಾಯಿ ಬೇರೆ ಮಾಡ್ತೀರಾ? ಬೇಡಪ್ಪಾ, ನೀವಿಲ್ಲಿ ಬಂದು ಅಲ್ಲಿ ಇಲ್ಲಿ ಕೈಹಾಕಿ ಕಣ್ಣಿಗೆ ಕೈ ತಾಗಿಸ್ಕೊಂಡು ಉರಿ ಉರಿ ಅಂತ ಅಳೋಕೆ ಶುರು ಮಾಡಿದ್ರೆ ಸಮಾಧಾನ ಮಾಡೋಕೆ ನನ್ನ ಕೈಲಾಗೋದಿಲ್ಲಪ್ಪ. ಎಡಗೈ ಬಲಗೈ ಅನ್ನೋ ಭೇದವೂ ನಿಮ್ಗಿಲ್ಲ, ಎಲ್ಲೆಲ್ಲೋ ಮುಟ್ಟಿ ಹಾಳು ಮಾಡಿದ್ರೆ ನೋಡಿ ನಿಮ್ಮನ್ನು.. ಇವತ್ತು ಮಧ್ಯಾಹ್ನ ಈ ಕಡೆ ನಿಮ್ಮ ತಲೆಕಂಡ್ರೆ ನೋಡಿ ' ಅಮ್ಮನ ರೂಲ್ ಯಾಕೋ ಸಡಿಲವಾಗೋ ಲಕ್ಷಣ ಕಾಣ್ತಿಲ್ಲ ಅಂದುಕೊಳ್ಳುತ್ತಿರುವಾಗ್ಲೇ ಸುಷ್ಮಾಗೆ ಒಂದು ಡೌಟ್ ಬಂತು. 'ಏನೇ ಅದು, ದೊಡ್ಡಮ್ಮ ಹೇಳಿದ್ದು ಎಡಗೈ ಬಲಗೈ ಅಂತ? ಹಾಗಾದ್ರೆ ಉಪ್ಪಿನಕಾಯಿ ಮಾಡೋವಾಗ ಎಡಗೈ ಉಪಯೋಗ್ಸೋದೇ ಇಲ್ವಾ?' ಅವಳ ಸಂದೇಹಕ್ಕೆ ನಾನೂ ಬೆಂಬಲಿಸಿದೆ.

ಹೌದಲ್ಲ, ಒಂದೇ ಕೈಯಲ್ಲಿ ಉಪ್ಪಿನಕಾಯಿ ಮಾಡೋದು ಹೇಗೆ? ಈ ಬಾರಿಯೇನೋ ಚಿಕ್ಕಮ್ಮನೂ ಅಮ್ಮನ ಜೊತೆಗಿದ್ದಾರೆ. ಆದ್ರೆ ಹೋದ ವರ್ಷ ಅಮ್ಮ ಒಬ್ಬರೇ ಉಪ್ಪಿನಕಾಯಿ ಮಾಡಿದ್ದರಲ್ಲ? ಒಂದೇ ಕೈಯಲ್ಲಿ ಹೇಗೆ ಮಾಡಿರಬಹುದು?' ನನಗೂ ತೋಚಲಿಲ್ಲ. ಸರಿ, ಇಬ್ಬರೂ ಒಂದು ಪ್ಲಾನ್ ಮಾಡಿದೆವು. ಒಳಜಗಲಿಯ ಬಾಗಿಲ ಸಂದಿಯಲ್ಲಿ ಕೂತು ಉಪ್ಪಿನಕಾಯಿ ತಯಾರಿಯನ್ನು ಪೂರ್ತಿ ನೋಡೋದು. ಉಪ್ಪಿನಕಾಯಿ ಮಾಡಿ ಮುಗಿಸುವಷ್ಟು ಹೊತ್ತೂ ಯಾರೂ ಒಳಬರುವುದಿಲ್ಲ ಅನ್ನೋದು ಗ್ಯಾರಂಟಿ. ಹೀಗಾಗಿ ಕತ್ತಲಲ್ಲಿ ಕುಳಿತ ನಮ್ಮನ್ನು ನೋಡುವವರಂತೂ ಯಾರೂ ಇಲ್ಲ, ಅಣ್ಣಂದಿರೆಲ್ಲಾ ಹೊಳೆಬದಿಗೆ ಹೋಗಿರುತ್ತಾರೆ ಅನ್ನುವುದೂ ಗೊತ್ತಿತ್ತು.

ಸರಿ, ಎಲ್ಲರಿಗೂ ಬೇಗಬೇಗನೇ ಊಟ ಹಾಕಿ ಅಮ್ಮ, ಚಿಕ್ಕಮ್ಮಂದಿರು ಉಪ್ಪಿನಕಾಯಿಯ ತಯಾರಿಗೆ ಕುಳಿತರು. ಅಮ್ಮನಿಗೆ ಅದೇನು ಪಾಪ ಎನಿಸಿತೋ ಏನೋ, ತಾನೇ ಕರೆದು ನಮ್ಮಿಬ್ಬರ ಕೈಯಲ್ಲೂ ಎರಡೆರಡು ಮಾವಿನ ಹೋಳುಗಳನ್ನು ಇಟ್ಟು, ಹೋಗಿ ಆಡಿಕೊಳ್ಳಿ ಅಂತ ಕಳಿಸಿದಳು. ಅದಾಗಲೇ ಉಪ್ಪು ನೀರಲ್ಲಿ ತೊಳೆದು ಬಿಸಿಲಿನಲ್ಲಿ ಹಾಕಿ ಬಟ್ಟೆ ಮುಚ್ಚಿ ಒಣಗಿಸಿದ ಆ ಹೋಳುಗಳನ್ನು ಬಾಯಲ್ಲಿ ಹಾಕುತ್ತಿದ್ದಂತೆ 'ಆಹಾ' ಎನ್ನಿಸಿತು. ಊಂ, ಇನ್ನು ಇದಕ್ಕೆ ಖಾರ ಅರೆದು ಹಾಕಿದಾಗ ಅದೆಷ್ಟು ರುಚಿ

ಇರುತ್ತದೋ ಅಂತ ಕಲ್ಪಿಸಿಕೊಂಡೇ ಬಾಗಿಲ ಮರೆಯಲ್ಲಿ ಕುಳಿತೆವು. ಉಪ್ಪಿನಕಾಯಿಗೆ ಬೇಕಾದ ಸಾಮಾನನ್ನೆಲ್ಲ ರೆಡಿ ಮಾಡಿಟ್ಟುಕೊಂಡರು ಅಮ್ಮ, ಚಿಕ್ಕಮ್ಮ.

ಮಾವಿನ ಹೋಳು, ಕಾಯಿಸಿ ಆರಿಸಿದ ಉಪ್ಪು ನೀರು, ಮಸಾಲೆ ರುಬ್ಬಲು ಬೇಕಾದ ಸಾಸಿವೆ, ಅರಿಶಿನ, ಒಣಮೆಣಸು, ಉಪ್ಪು ಎಲ್ಲವೂ. ಎಲ್ಲವನ್ನೂ ಕುತೂಹಲದಿಂದ ನೋಡುತ್ತಿದ್ದೆವು ನಾವಿಬ್ಬರೂ, ಉಪ್ಪಿನಕಾಯಿ ಮಾಡೋ ವಿಧಾನವನ್ನು ನಮ್ಮ 'ಮನೆಯಾಟ'ದಲ್ಲಿ ಯಥಾವತ್ತಾಗಿ ಪಾಲಿಸುವ ಕನಸು ಕಾಣುತ್ತಾ

ಈ ಮಧ್ಯದಲ್ಲೊಮ್ಮೆ ಚಿಕ್ಕಮ್ಮ ಸುಷ್ಮಾಳ ಅಪ್ಪ ಕರೆದರೆಂದು ಎದ್ದು ಹೊರಹೋದರು. ಅಮ್ಮ ಕೆಲಸದವಳಿಗೆ ಮಜ್ಜಿಗೆ ನೀರು ಕೊಡಲೆಂದು ತಾನೂ ಎದ್ದಳು. ಅಲ್ಲಿ ಯಾರೂ ಇಲ್ಲದ್ದು ಕಂಡು ನಮಗಿಬ್ಬರಿಗೂ ಮಾವಿನ ಹೋಳು ತಿನ್ನುವ ಚಪಲ ಸೆಳೆಯಿತು. ನಾನು ಮೆತ್ತಗೆದ್ದು ಮಾವಿನ ಹೋಳು ಇಟ್ಟಲ್ಲಿಗೆ ನೆಗೆದು ನಾಲ್ಕು ಹೋಳು ಕೈಗೆತ್ತಿಕೊಂಡು ಓಡಿ ಬರುವಾಗ ಪಾತ್ರೆ ಕಾಲಿಗೆ ತಾಗಿ ಉಪ್ಪುನೀರು ಕೊಂಚ ಚೆಲ್ಲಿತು. ನಾನು ಗಾಬರಿಯಾಗಿ ಪಾತ್ರೆಯನ್ನು ನೇರವಾಗಿಟ್ಟು ಸೀದಾ ಹೊರಗೆ ಬಂದುಬಿಟ್ಟೆ. ನಾನು ಹೊರಗೋಡಿದ್ದು ಕಂಡು ಸುಷ್ಮಾಳೂ ಮರೆಯಿಂದೆದ್ದು ನನ್ನ ಹಿಂದೆ ಬಂದಳು.

ಅಷ್ಟರಲ್ಲಿ ಅಮ್ಮ 'ಯಾರದು' ಅನ್ನುತ್ತ ಬಂದದ್ದು ಕೇಳಿಸಿತು. ಇನ್ನು ಇಲ್ಲಿ ನಿಂತರೆ ಉಳಿಗಾಲವಿಲ್ಲ ಅಂದುಕೊಂಡು ನಾವಿಬ್ಬರೂ ಮೆತ್ತಗೆ ಹೊಳೆಯ ಬದಿಗೆ ಪರಾರಿಯಾದೆವು. ನಾವು ಮಾಡಿದ್ದು ಅಮ್ಮನಿಗೆ ಇನ್ನೂ ಗೊತ್ತಾಗಿದೆಯೋ ಇಲ್ಲವೋ ಎಂದು ತಿಳಿಯಲಿಲ್ಲವಾದ್ದರಿಂದ ನಮ್ಮ ಈ ಸಾಹಸಕೃತ್ಯವನ್ನು ಯಾರಲ್ಲೂ ಹೇಳುವುದು ಬೇಡ ಅಂದುಕೊಂಡು ಸುಮ್ಮನಾದೆವು. ಇಳಿಸಂಜೆಗೆ ಹೆದರಿ ಹೆದರಿಯೇ ಮತ್ತೆ ಮನೆಗೆ ಕಾಲಿಟ್ಟಾಗಲೂ ಯಾರೂ ಉಪ್ಪು ನೀರಿನ ಅವಾಂತರದ ಬಗ್ಗೆ ಕೇಳಲಿಲ್ಲವಾದ್ದರಿಂದ ಬಹುಶಃ ಯಾರಿಗೂ ನಮ್ಮ ವಿಷಯ ತಿಳಿಯಲಿಲ್ಲವೆಂದು ಒಳಗೊಳಗೇ ಖುಷಿಯಾಗಿ ನಿಟ್ಟುಸಿರು ಬಿಟ್ಟೆವು. ರಾತ್ರಿ ಬೆಕ್ಕಿಗೆ ಅನ್ನ ಹಾಕುವಾಗಲೂ ಅಮ್ಮ, 'ಹೂಂ, ನಿಂಗೆ ಹಾಲು ಹಾಕೋದಿಲ್ಲ, ನೀನಿದ್ರೆ ಉಪಕಾರಕ್ಕಿಂತ ಉಪದ್ರವವೇ ಜಾಸ್ತಿ' ಅನ್ನುತ್ತ ಸಿಡುಕಿದ್ದು ಕೇಳಿ ಉಪ್ಪು ನೀರು ಚೆಲ್ಲಿದ್ದಕ್ಕೆ ಅಮ್ಮ ಬೆಕ್ಕಿನ ಮೇಲೆಯೇ ಸಂಶಯಪಟ್ಟಿದ್ದಾರೆ ಅಂದುಕೊಂಡು ಸದ್ಯ ಬಚಾವಾದೆವು ಅಂತ ಇನ್ನಷ್ಟು ನಿಶ್ಚಿಂತೆಯಿಂದ ನಿದ್ದೆ ಮಾಡಿದೆವು.

ಇದಾದ ಮರುದಿನವೇ ನಮ್ಮ ಮನೆಯಲ್ಲಿ ನೆರೆದಿದ್ದ ಮಕ್ಕಳ ತಂಡ ಹಾಗೂ ಅಕ್ಕಪಕ್ಕದ ಮನೆಯ ಮಕ್ಕಳೆಲ್ಲರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವ ಉಮೇದು ನನ್ನ ಅಣ್ಣಂದಿರಿಗೆ ಬಂತು. ಸಂಜೆಹೊತ್ತು ಹೊಳೆಬದಿಯಲ್ಲಿ ಏರ್ಪಾಡಾದ ಈ ಕಾರ್ಯಕ್ರಮದಲ್ಲಿ ಹಾಡು, ಭಾಷಣ, ಮಿಮಿಕ್ರಿ ಸ್ಪರ್ಧೆಗಳೆಲ್ಲ ಇದ್ದವು. ಕೊನೆಕ್ಷಣದಲ್ಲಿ ಆಶುಭಾಷಣ ಸ್ಪರ್ಧೆಯನ್ನೂ ಯಾರೋ ಸೇರಿಸಿದರು. ಹಾಡುವ ಸ್ಪರ್ಧೆಗೆ ಹೆಸರು ಕೊಟ್ಟಿದ್ದ ನಾನು ಇದಕ್ಕೂ ಸೇರಿದೆ. ದೊಡ್ಡ ಹುಡುಗರೆಲ್ಲ ಸ್ಪರ್ಧೆಗೆ ತಯಾರಿ ಮಾಡುತ್ತಿದ್ದಾಗ ಅಲ್ಲೇ ಮಾವಿನಕಾಯಿ ಜಗಿಯುತ್ತ ಸುತ್ತಾಡುತ್ತಿದ್ದ ನಮ್ಮ ಪಟಾಲಾಂ ಅನ್ನು ಕರೆದು

ಎಲ್ಲರೂ ನಿಮಗಿಷ್ಟವಾದ ಒಂದು ಪದಾರ್ಥದ ಹೆಸರು ಹೇಳಿದ ಅಂದರು. ಎಲ್ಲರೂ ಒಂದೊಂದು ಹೇಳಿದರು. ನಾನೂ 'ಉಪ್ಪಿನಕಾಯಿ' ಅಂದುಬಿಟ್ಟೆ.

ಸ್ಪರ್ಧೆಗಳಿಗೆ ನನ್ನ ಅಪ್ಪ, ಸುಷ್ಮಾಳ ಅಪ್ಪ, ಪಕ್ಕದ ಮನೆ ಮನೋಜನ ತಂದೆ – ಹೀಗೆ ಹಿರಿಯರನ್ನು ತೀರ್ಪುಗಾರರನ್ನಾಗಿ ಮಾಡಲಾಗಿತ್ತು. ಹಾಡು ಹಾಡಿ ಆಯಿತು. ಎರಡನೆಯದು ಆಶುಭಾಷಣ. ಒಂದಿಬ್ಬರು ಮಾತನಾಡಿದ ಬಳಿಕ ನನ್ನ ಸರದಿ. ಚೀಟಿ ಹೆಕ್ಕಿದರೆ 'ಉಪ್ಪಿನಕಾಯಿ' ಎಂದೇ ಬರಬೇಕೇ? ಅಚ್ಚರಿ, ಜೊತೆಗೇ ಖುಷಿ. ಹೇಗಿದ್ದರೂ ನನಗೆ ಈ ವಿಷಯದಲ್ಲಿ ಉಳಿದವರಿಗಿಂತ ಹೆಚ್ಚಿನ ಪಾಂಡಿತ್ಯವಿತ್ತಲ್ಲ! ಸರಿ, ಆತ್ಮವಿಶ್ವಾಸದಿಂದಲೇ ಮಾತಿಗೆ ಶುರುಮಾಡಿದೆ. ಉಪ್ಪಿನಕಾಯಿಯ ರುಚಿಯ ವರ್ಣನೆ, ಊಟಕ್ಕೂ, ಊಟವಾದ ಮೇಲೆಯೂ ತಿನ್ನಬಹುದಾದ ವಿಶೇಷತೆ (ಊಟವಾದ ಮೇಲೆ ತಿನ್ನುತ್ತಿದ್ದವರು ನಾನು ಮತ್ತು ಸುಷ್ಮಾ ಮಾತ್ರ ಇರಬೇಕು)ಯನ್ನೆಲ್ಲ ಹೇಳಿ ಅದನ್ನು ಮಾಡುವ ವಿಧಾನವನ್ನೂ ಹೇಳಲು ತೊಡಗಿದೆ.

ಅಮ್ಮ ಮೊದಲು ಮಾವಿನ ಹೋಳುಗಳನ್ನು ಬಿಸಿಲಿನಲ್ಲಿ ಒಣಗಿಸಿಕೊಳ್ಳುತ್ತಾರೆ. ಆಗಲೂ ಇದನ್ನು ತಿನ್ನಲು ಚೆನ್ನಾಗಿರುತ್ತದೆ. ಮರುದಿನ ಮಸಾಲೆ ಅರೆಯುತ್ತಾರೆ..' ಅನ್ನುತ್ತ ಏನೋ ಅನ್ನುವಷ್ಟರಲ್ಲಿ ಹಿಂದಿನ ದಿನ ಉಪ್ಪು ನೀರು ಚೆಲ್ಲಿದ್ದು, ಉಪ್ಪಿನಕಾಯಿ ತಯಾರಿಕೆ ನೋಡುವುದನ್ನು ಬಿಟ್ಟು ಅರ್ಧದಲ್ಲೇ ಓಡಿಬಂದದ್ದು ಎಲ್ಲ ನೆನಪಾಗಿ ತಲೆಯೆಲ್ಲ ಕಲಸುಮೇಲೋಗರವಾಯಿತು. ಬೇರೇನೂ ಹೇಳಲು ತೋಚದೇ, 'ಉಪ್ಪಿನಕಾಯಿ ಮಾಡುವಾಗ ಮನೆಯಲ್ಲಿ ಬೆಕ್ಕು ಇರದಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಮನೆಯವರು ಯಾರೂ ಇಲ್ಲದ ಹೊತ್ತು ನೋಡಿ ಅದು ಬಂದು ಉಪ್ಪಿನಕಾಯಿ ಮಾಡಲು ಇಟ್ಟುಕೊಂಡ ಉಪ್ಪುನೀರನ್ನು ಚೆಲ್ಲಬಹುದು. ಇದಲ್ಲದೆ ಉಪ್ಪಿನಕಾಯಿ ಮಾಡುವಾಗ ಎಡಗೈ ಹಾಕುವಂತಿಲ್ಲ ಎಂದು ಹೇಳುತ್ತಾರೆ ಯಾಕೆಂದರೆ..' ಅನ್ನುವಷ್ಟರಲ್ಲಿ ಕಾರಣ ತಿಳಿಯದೆ ಪೆಚ್ಚಾದೆ. ತೀರ್ಪುಗಾರರಾಗಿ ಕುಳಿತಿದ್ದ ಅಪ್ಪನ ಮುಖ ನೋಡಿದೆ. 'ಊಂ, ಹೇಳು' ಅಂದರು ಅಪ್ಪ. ಹೇಳುವುದಕ್ಕೇನೂ ತಿಳಿಯದೇ ಇನ್ನಷ್ಟು ಅವಮಾನವಾದಂತಾಗಿ ಕಣ್ಣು ತುಂಬ ನೀರು ತುಂಬಿ ಅಳುವುದಕ್ಕೆ ಶುರು ಮಾಡುತ್ತೇನೆನ್ನುವಾಗ ಬೆಲ್ ಹೊಡೆದು ಮಾನ ಉಳಿದಂತಾಯಿತು. ಆದರೂ ಎಲ್ಲರೆದರು ಹೋದ ಮರ್ಯಾದೆಗೆ ದುಃಖಿಸುತ್ತ ಒಬ್ಬಳೇ ತೋಟಕ್ಕೆ ಹೋಗಿ ಎಲ್ಲವೂ ಮುಗಿದ ಮೇಲೆ ಮತ್ತೆ ಮನೆಗೆ ಮರಳಿದೆ. ನೋಡಿದರೆ 'ಎಲ್ಲಿ ಹೋಗಿದ್ಯೇ, ಆಶುಭಾಷಣ ಮಾಡೋದ್ರಲ್ಲಿ ಸೆಕೆಂಡ್ ಪ್ರೈಝ್ ಬಂದಿತ್ತಲ್ಲಾ, ತಗೊಳ್ಳೋಕೂ ಬರ್ಲಿಲ್ಲಾ..' ಅನ್ನುತ್ತ ಎಲ್ಲರೂ ಕೇಳುವವರೇ.

ರಾತ್ರಿ ಊಟಕ್ಕೆ ಕುಳಿತಾಗ ಅಪ್ಪ ನನ್ನನ್ನು ಪಕ್ಕದಲ್ಲೇ ಕರೆದು ಕೂರಿಸಿಕೊಂಡರು. 'ನೋಡಿದ್ಯೇನೇ, ಇವಳು ಉಪ್ಪಿನಕಾಯಿ ಬಗ್ಗೆ ಏನೆಲ್ಲಾ ಮಾತಾಡಿದ್ಲು ಅಂತ, ನೀನೂ ಕೇಳ್ಬೇಕಾಗಿತ್ತು..' ಅಂದರು ಅಮ್ಮನಿಗೆ. 'ಗೊತ್ತಾಯ್ತು, ಏನೇನು ಮಾತಾಡಿದ್ಯೇ?' ಅಂದ್ರು ಅಮ್ಮ. ನಾನು ಏನೂ ಹೇಳಲಿಲ್ಲ. ಅಣ್ಣ ಕೇಳಿದ, 'ಅಮ್ಮಾ, ಬೆಕ್ಕು ಬಂದು

ಉಪ್ಪು ನೀರನ್ನು ಚೆಲ್ಲುತ್ತೆ ಅಂತೆಲ್ಲಾ ಹೇಳಿದ್ಲು ಇವ್ಳು. ಹೌದಾ, ಇವ್ಳಿಗೆ ಹೇಗೆ ಗೊತ್ತು ಇದೆಲ್ಲಾ?'

ಚಿಕ್ಕಮ್ಮನಿಗೆ ಅಚ್ಚರಿಯಾಗಿ, 'ಹೌದಾ, ಹಾಗಂದ್ಲಾ ಇವ್ಳು? ನಿನ್ನೆ ನಾವಿಬ್ರೂ ಎಲ್ಲೋ ಎದ್ದು ಹೋಗಿ ವಾಪಸ್ ಬಂದಾಗ ಉಪ್ಪು ನೀರು ಚೆಲ್ಲಿತ್ತು. ಬೆಕ್ಕು ಚೆಲ್ಲಿದ್ದಾ ಅಥವಾ ಯಾರು ಚೆಲ್ಲಿದ್ದು ಅಂತ ಗೊತ್ತಾಗ್ಲಿಲ್ಲ' ಅಂದರು ಚಿಕ್ಕಮ್ಮ. 'ನಾವು ನೋಡಿದ್ವಿ ಅಮ್ಮಾ' ಅಂದಳು ಸುಷ್ಮಾ ಅಷ್ಟರಲ್ಲಿ. 'ನಿಮ್ಮಿಬ್ಬರನ್ನೂ ಆಟಕ್ಕೆ ಅಂತ ಕಳಿಸಿದ್ನಲ್ಲಾ ನಾನೇ. ಹೇಗೆ ನೋಡಿದ್ರಿ?' ಅಂದಳು ಅಮ್ಮ.

'ಅದೂ ದೊಡ್ಡಮ್ಮಾ, ನಾವಿಬ್ರೂ ಆಟಕ್ಕೆ ಹೋಗ್ಲಿಲ್ಲ. ಇಲ್ಲೇ ಬಾಗಿಲ ಸಂದೀಲಿ ಕೂತ್ಕೊಂಡು ನೋಡ್ತಾ ಇದ್ವಿ. ನೀವಿಬ್ರೂ ಎದ್ದು ಹೊರಗೆ ಹೋದ್ರಲ್ಲಾ, ಆಗ ಅಕ್ಕ ಎದ್ದು ಮಾವಿನ ಹೋಳು ತಗೊಳ್ಳೋಕೆ..' ಅನ್ನುವಷ್ಟರಲ್ಲಿ ನಾನು ಬಾಯಿ ಹಾಕಿದೆ, 'ಆಗ ಬೆಕ್ಕು ಬಂದು ಹಾರಿ ಉಪ್ಪು ನೀರನ್ನು ಚೆಲ್ಲಿಬಿಡ್ತು ಅಮ್ಮಾ'

ಅಮ್ಮನಿಗೆ ಯಾಕೋ ಸಂಶಯ ಬಂದು, 'ಏನಾಯ್ತು ಸುಷ್ಮಾ, ನೀನೇ ಸರಿಯಾಗಿ ಹೇಳು' ಅಂದಾಗ ಅವಳು ಸುಳ್ಳು ಹೇಳುವುದಕ್ಕೂ ಬಾರದೇ ಸತ್ಯವನ್ನೇ ಸರಿಯಾಗಿ ಒಪ್ಪಿಸಿದಳು. ಮುಗೀತು ಕಥೆ ಅಂದುಕೊಂಡು ಮತ್ತೆ ಅಳು ಬರುವಂತಾಯಿತು ನನಗೆ. ಆದರೂ ಧೈರ್ಯ ಮಾಡಿ ಅಪ್ಪನಿಗೇ ಮೊರೆಹೋಗಿ, 'ಅದೂ ಅಪ್ಪಾ, ನಾನು ಬೇಕಂತ ಮಾಡಿದ್ದಲ್ಲ..' ಅನ್ನುವಾಗ ಅಪ್ಪನೇ ಅಮ್ಮನಿಗೆ,

'ನೋಡು, ಇನ್ಮೇಲೆ ನೀನು ಉಪ್ಪಿನಕಾಯಿ ಮಾಡುವಾಗ ಅವಳನ್ನೂ ಜೊತೆಗೆ ಕೂರಿಸ್ಕೋ. ಅಷ್ಟೊಂದು ಆಸೆಪಡ್ತಾಳೆ, ನೋಡಲಿ ಅವಳೂ. ಜೊತೆಗೆ ಅದೇನು ಎಡಗೈ ಬಳಸ್ಬಾರ್ದು ಅಂತ ಬೇರೆ ಹೇಳಿದ್ದೀಯಲ್ಲಾ, ಅದು ಯಾಕೆ ಅಂತಾನೂ ತಿಳಿಸಿ ಹೇಳು ಅವಳಿಗೆ' ಅನ್ನುತ್ತ ಊಟ ಮುಗಿಸಿ ಎದ್ದು ಹೋದರು. ನಿಮ್ಮಂಥಾ ಮಕ್ಕಳೆಲ್ಲ ಬಂದು ಒದ್ದೆ ಕೈ ಹಾಕ್ಬಾರ್ದು?, ಅದಕ್ಕೆ ನೀರು ಸೇರಿದ್ರೆ ಹುಳ ಆಗುತ್ತೆ ಅಂತ ಹಾಗೆ ಹೇಳ್ತೀವೆ ಮಾರಾಯ್ತಿ ಅಂತ ನಕ್ಕ ಅಮ್ಮ, 'ಸರಿ, ಇನ್ಮೇಲೆ ಉಪ್ಪಿನಕಾಯಿ ಹಾಕೋವಾಗ ಬಂದು ಸುಮ್ಮನೇ ನೋಡ್ತಾ ಕೂತ್ಕೋಬೇಕು, ಆಯ್ತಾ' ಅಂದರು ನನ್ನನ್ನೂ ಸುಷ್ಮಾಳನ್ನೂ ನೋಡಿ. ನನ್ನ ಕಣ್ಣೀರು ಅಲ್ಲೇ ಇಂಗಿ ನಗೆಯರಳಿತ್ತು.

**ವಿದ್ಯಾರಶ್ಮಿ ಪೆಲತ್ತಡ್ಕ**
ಅವಧಿ ಮೇ 16, 2014

# ಮೂಗಾಯಣ

ಒಂದು ಸಂಜೆ ಟಿ.ವಿ ನೋಡುತ್ತಾ ಕುಳಿತಿದ್ದಾಗ ಜಾಹೀರಾತಾಗಿ ಡೊನಾಲ್ಡ್ ಡಕ್ ಬೊಂಬೆ ಬಂದವು. ಅವುಗಳ ಮೂಗು ಉದ್ದ ಸೊಂಟ ದಪ್ಪ ದುಂಡಗೆ ಬಲೂನಿನ ಹಾಗೆ ಇದ್ದವು. ಆಗ ನನ್ನೊಂದಿಗೆ ಟಿ.ವಿ. ನೋಡುತ್ತ ಕುಳಿತಿದ್ದ ಐದು ವರ್ಷದ ನನ್ನ ಮೊಮ್ಮಗಳು ಶರಧಿ ಅವುಗಳನ್ನು ನೋಡಿ ನಗು ನಗು ನಕ್ಕು, 'ತಾತಾ ಅವುಗಳ ಮೂಗು ನೋಡು, ಎಷ್ಟು ದೊಡ್ಡವು ಅವ. ಅವುಗಳ ಮಾರಿಗಿಂತ ಮೂಗೆ ದೊಡ್ಡದಾಗಿ ಕಾಣ್ತಾವ. ಹಂಗ್ಯಾಕ ಅವ' ಎಂದಳು.

ಆಗ ನಾನಂದೆ 'ಅವು ಗೊಂಬೆಗಳು, ಅವುಗಳನ್ನು ತಯಾರಿಸಿದವರು ಹಾಂಗ ಮಾಡ್ಯಾರ' ಆಗ ಆಕೆ ಸುಮ್ಮನಾಗದೆ, ಗೊಂಬೆಗಳಾದರೆ ಅಷ್ಟು ದೊಡ್ಡ ಮೂಗು ಮಾಡ್ಬೇಕೇನು ಅಂದಳು.

ಆಗ ನಾನು, 'ಈಗ ನೀನು ಅವುಗಳನ್ನು ನೋಡಿ ನಕ್ಕೆಯಲ್ಲ! ಹಾಂಗ ನೋಡಿದವರು ನಗಬೇಕಂತ ಹಾಸ್ಯಮಯವಾಗಿ ಕಾಣುವಂತೆ ಮಾಡಿದ್ದಾರೆಂದು' ಹೇಳಿದೆನು. ಆಗ ಆಕೆ ಅಷ್ಟಕ್ಕೆ ಸುಮ್ಮನಾಗದೇ, 'ಹಾಸ್ಯ ಅಂದರೇನು?' ಎಂದು ಕೇಳಬೇಕೆ? ಇದು ಒಳ್ಳೆಯ ಪೀಕಲಾಟಕ್ಕಿಟ್ಟುಕೊಂಡಿತಲ್ಲಪ್ಪ ನನಗೆ ಅನಿಸಿತು. ಯಾಕೆಂದ್ರೆ ಹಾಸ್ಯ ಅಂದ್ರ ಆಕೆಗೆ ತಿಳಿಯುವಂಗ ಹೇಳ್ಬೇಕಲ್ಲ! 'ನೀನು ಅವುಗಳನ್ನು ನೋಡಿ ಯಾಕೆ ನಕ್ಕಿ?' ಎಂದು ಕೇಳಿದೆನು. ಆಗವಳು 'ಯಾಕಂದ್ರ ಅವುಗಳ ಮೂಗು ಒಂದು ನಮೂನಿ ಮಜಾ ಕಾಣಿಸ್ತಾವ. ಅವು ನಕ್ಕಾಗ ಇನ್ನೂ ಮಜಾ ಕಾಣಿಸ್ತಾವ ಅದಕ್ಕ ನಕ್ಕೆ' ಅಂದಳು.

ನಾನಾಗ, 'ಅದೆ ನೋಡಮ್ಮ ಯಾವುದಾದರೂ ಚಿತ್ರ ನೋಡಿದಾಗ ನಗುವಂಗ ಅನಿಸೋದು ಯಾರಾದರೂ ಮಾತನಾಡಿದರೆ ನಗುವಂತ ಅನಿಸೋದು ಆಗ್ತದಲ್ಲ. ಅದಕ್ಕೆ ಹಾಸ್ಯಂತ ಅಂತಾರ' ಎಂದು ಹೇಳಿದಾಗ ಅವಳು ಸುಮ್ಮನಾದಳು.

ಆಗ ನನಗೆ ಮೂಗಿನ ಬಗ್ಗೆ ಚಿಂತನೆ ಸುರುವಾಯ್ತು. ಈ ಮೂಗು ಅನ್ನುವುದು ಮನುಷ್ಯರಾದಿಯಾಗಿ ಸಕಲ ಪ್ರಾಣಿ ಪಶು ಪಕ್ಷಿಗಳಾದಿಯಾಗಿ ಎಲ್ಲವಕ್ಕೂ ಉಂಟು. ಅವುಗಳ ದೇಹರಚನೆಗನುಗುಣವಾಗಿ ಸೃಷ್ಟಿಕರ್ತ ಸೃಷ್ಟಿಸಿದ್ದಾನೆ. ಜಗತ್ತಿನಲ್ಲಿ ಎಷ್ಟು ಜನರಿದ್ದಾರೆಯೋ ಅವರಿಗೆಲ್ಲ ಮೂಗಿದೆ. ಒಬ್ಬರಂತೆ ಒಬ್ಬರ ಮೂಗಿಲ್ಲ. ಮೂಗಿಲ್ಲದ ಮನುಷ್ಯನಿಲ್ಲ, ಮೂಗಿಲ್ಲದ ಪ್ರಾಣಿಯಿಲ್ಲ. ಮುಖ ಅಂದ ಮ್ಯಾಲ ಮೂಗು ಇದ್ದೇ ಇರುತ್ತದೆ.

ಪಂಚ ಜ್ಞಾನೇಂದ್ರಿಯಗಳಲ್ಲಿ ಮೂಗು ಒಂದಾಗಿದೆ. ಇದು ಗಂಧಗ್ರಹಣ ಜ್ಞಾನೇಂದ್ರಿಯ. ಪ್ರಪಂಚದಲ್ಲಿ ಒಂದೊಂದು ಪ್ರದೇಶದಲ್ಲಿ ವಾಸಿಸುವ ಜನರ ಮೂಗಿನ ರಚನೆ ಒಂದೊಂದು ನಮೂನೆಯಾಗಿದೆ. ನಮ್ಮ ದೇಶದಲ್ಲಿಯೇ ಉತ್ತರದವರ ಮೂಗಿನಂತೆ, ದಕ್ಷಿಣದವರದಿಲ್ಲ. ಪೂರ್ವದಂತೆ ಪಶ್ಚಿಮದವರದಿಲ್ಲ. ಟಿಬೇಟಿಯನ್ನರು,

ಚೀನಿಯರು, ಮಂಗೋಲಿಯನ್, ಪರ್ಶಿಯನ್ನರು, ಯೂರೋಪಿಯನ್ನರು, ನಿಗ್ರೋ, ಎಸ್ಕಿಮೋ, ಅರಬ್ಬರು... ಹೀಗೆ ಬೇರೆ ಬೇರೆ ಜನಾಂಗದವರ ಮೂಗಿನ ರಚನೆ ಬೇರೆ ಬೇರೆಯಾಗಿರುತ್ತದೆ. ಮೂಗಿನ ಗಾತ್ರ ಆಕಾರ ರೂಪಕ್ಕನುಗುಣವಾಗಿ ಬೇರೆ ಬೇರೆ ನಿಕ್‌ನೇಮ್‌ನಿಂದ (ಹೆಸರಿನಿಂದ) ಕರೆಯುತ್ತಾರೆ. ಗಿ(ಣಿ)ಳಿ ಮೂಗು, ಡೊಣ್ಣೆ ಮೂಗು, ಚಪ್ಪಟೆ ಮೂಗು, ಮಂಡಮೂಗು, ಪಿನಿಶಿಮೂಗು, ಪಸಾರಮೂಗು, ಮುಕಡ ಮೂಗು, ಗುಂಡು ಮೂಗು, ಹೀಗೆ.

ಗಿ(ಣಿ)ಳಿ ಮೂಗು ಎಂದಾಗ ಮೂಗು ಸಪೂರವಾಗಿ ಉದ್ದವಾಗಿದ್ದು ನಡುವೆ ಉಬ್ಬಾಗಿದ್ದು ಮೂಗಿನ ತುದಿ ಚೂಪಾಗಿ ಬಾಗಿರುತ್ತದೆ. ಗಿಳಿ ಹಣ್ಣನ್ನು ತಿನ್ನುವ ಪಕ್ಷಿ. ಹಣ್ಣನ್ನು ಕುಕ್ಕಿ ಕುಕ್ಕಿ ತಿನ್ನಲಿಕ್ಕೆ ಅನುಕೂಲವಾಗುವಂತೆ ಆ ಮೂಗು ರಚನೆಯಾಗಿರುತ್ತದೆ. ಯಾರದಾದ್ರೂ ಮೂಗು ಬಹಳ ಚಂದೈತಿ ಅಂತ ಹೇಳ್ಬೇಕಾದಾಗ ಅವಳ(ನ) ಮೂಗು ಗಿಳಿ ಮೂಗಿದ್ದಂಗೈತಿ ಅಂತ ಹೇಳ್ತಾರ.

ಮೂಗು ಬಹಳ ದಪ್ಪಾಗಿದ್ದು ದೊಡ್ಡದಾಗಿದ್ದು ಮುಖದ ತುಂಬ ಮೂಗೆ ಎದ್ದು ಕಾಣುವಂತಿದ್ದರೆ ಅದನ್ನು ದೊಣ್ಣೆಮೂಗೆಂದು ಕರೆಯುತ್ತಾರೆ. ಅಂಥವರನ್ನು ಕುರಿತು ಹೇಳುವಾಗ ಅವಳ(ನ) ಮಾರಿನೆ ಕಾಣಂಗಿಲ್ಲ ಬರೇ ಮೂಗೆ ಕಾಣ್ತದಂತ ಅಂತಾರ. ಕೆಲವರಿಗೆ ಮೂಗು ಮುಖದ ಮೇಲೆ ಮೇಲೆದ್ದು ಕಾಣದೆ ಅಗಲವಾಗಿ ಸಪಾಟವಾಗಿ ಕಾಣ್ತದ. ಆಗ ಅಂಥವರನ್ನು ಕಂಡವರು ಅವರನ್ನು ಚಪ್ಪಟೆ ಮೂಗಿನವರೆಂದು ಕರೆಯುತ್ತಾರೆ. ಮತ್ತೆ ಕೆಲವರ ಮೂಗು ಹಿಂದೆ ತೆಗ್ಗಾಗಿದ್ದು ಮುಂದೆ ತುದಿಮೂಗು ಎತ್ತರವಾಗಿದ್ದು ಚೂಪಾಗಿರದೆ ಸ್ವಲ್ಪ ಹಿಂದಕ್ಕೆ ಇದ್ದಂಗ ಕಾಣ್ತದ. ಅಂಥ ಮೂಗನ್ನು ಮಂಡ ಮೂಗೆಂದೂ ಅಂಥವರನ್ನು ಮಂಡಮೂಗಿನವ, ಮಂಡಮೂಗಿನಾಕಿ ಅಂತ ಅನ್ನುತ್ತಾರೆ. ಮೂಗು ತೀರಾ ಸಣ್ಣದಾಗಿದ್ದು ತೆಳ್ಳಗಿದ್ದು ಯಾವಾಗಲೂ ಮೂಗೇರಸ್ತಾ ಇದ್ರ ಅಂಥ ಮೂಗನ್ನು ಪಿನಿಶಿ ಮೂಗೆಂದು ಕರೆಯುತ್ತಾರೆ. ಮೂಗಿನ ಮುಂಭಾಗ ಅಗಲವಾಗಿದ್ದುದನ್ನು ಪಸಾರ ಮೂಗೆಂದು ಕರೆಯುತ್ತಾರೆ. ಇನ್ನು ಕೆಲವರ ಮೂಗು ಹಿಂದೆ ಏನೂ ಇಲ್ಲದಂಗಿದ್ದು ಮುಂದೆ ಗುಂಡಕಾಗಿದ್ದು ಒಂದು ಸಣ್ಣ ಲಿಂಬೆ ಹಣ್ಣು ಇಟ್ಟಾಂಗಿದ್ರ ಅಂಥ ಮೂಗನ್ನು ಗುಂಡ ಮೂಗೆಂದು ಹೇಳ್ತಾರ. ಮೂಗನ್ನು ಅವರವರ ತಿಳುವಳಿಕೆಗನುಗುಣವಾಗಿ ಆಯಾ ಪ್ರಾದೇಶಿಕ ಭಾಷೆಗನುಗುಣವಾಗಿ ವಿವಿಧ ನಿಕ್‌ನೇಮ್ ಆಗಿ (ಹೆಸರಿನಲ್ಲಿ) ಕರೆಯುತ್ತಿದ್ದಾರೆ. ಮೂಗಿನ ಹೊರಳೆಗಳು (ದ್ವಾರಗಳು) ಕೆಲವರವು ಚಿಕ್ಕವಾಗಿದ್ದರೆ ಮತ್ತೆ ಕೆಲವರವು ಅಗಲವಾಗಿ ನೇರವಾಗಿ ಉದ್ದವಾಗಿರುತ್ತವೆ. ಅಂಥ ಹೊರಳೆಗಳನ್ನು ಬಂದೂಕಿನ ನಳಿಕೆಗಳಂತಿವೆ ಎಂದು ಕರೆಯುತ್ತಾರೆ.

ಮುಖ ಚಂದಾಗಿ ಕಾಣಲು ಮೂಗು ಚಂದಾಗಿರಬೇಕಂತ ಅಂತಾರ. ಮುಖಕ್ಕೆ ಮೂಗೇ ಸಿಂಗಾರಾಗಿ ಕಾಣ್ತದಂತ. ಬಸವಣ್ಣನವರು ಕೂಡ ತಮ್ಮ ವಚನದಲ್ಲಿ ಮೂಗಿನ ಬಗ್ಗೆ ಪ್ರಸ್ತಾಪಿಸಿದ್ದಾರೆ. 'ಒಳ್ಳೆಯ ಗುಣವಿಲ್ಲದಿದ್ದರೆ ತಡೆಗೆಡಹಿ... ಮೂಗ

ಕೊಯ್ಯದೆ ಮಾಣ್ಬನೆ ನಮ್ಮ ಕೂಡಲ ಸಂಗಯ್ಯನು?', 'ಜಂಗಮದಲ್ಲಿ ಭೇದ ಮಾಡಿದರೆ, ಕೂಡಲ ಸಂಗಮದೇವ ಸಿಂಗಾರ ಮೂಗ ಕೊಯ್ಯದೆ ಮಾಡ್ಬನೆ?' ಎಂದೂ ಹೇಳಿದ್ದಲ್ಲದೆ ಮೂಗಿಲ್ಲದವರನ್ನು ಕುರಿತು ಮುಕೋರತಿ, ಮೂಕೊರೆಯ ಎಂದು ಒಂದೆಡೆ ಹೇಳಿದ್ದಾರೆ.

ಮುಖಕ್ಕೆ ಶೃಂಗಾರ ಮಾಡಬೇಕಾದರೆ ಮೂಗಿರಬೇಕು ಎನ್ನುವ ಅರ್ಥದಲ್ಲಿ ಬಸವಣ್ಣನವರು 'ಮೂಗಿಲ್ಲದ ಮುಖಕ್ಕೆ ಶೃಂಗಾರವೇ?' ಎಂದು ಕೇಳಿದ್ದಾರೆ. ಅದಕ್ಕಾಗಿಯೇ ಇರಬೇಕು ಗಂಡು ಹೆಣ್ಣನ್ನು ನೋಡುವಾಗ ಹೆಣ್ಣು ಗಂಡನ್ನು ನೋಡುವಾಗ ಪರಸ್ಪರರು ಪ್ರಧಾನವಾಗಿ ಮೂಗು, ಬಣ್ಣ ನೋಡುವವರಿದ್ದಾರೆ.

ಮುಖಕ್ಕೆ ಅಂದ ಮೂಗು. ಆ ಮೂಗನ್ನು ಇನ್ನೂ ಚಂದ ಕಾಣ್ಬೇಕಂತ ನಮ್ಮ ಹಿಂದೂ ನಾರಿಯರು ವಸ್ತ್ರ ಧರಿಸುತ್ತಾರೆ. ನತ್ತು ಮೂಗುಬಟ್ಟು ಹರಳು ವಿಧ ವಿಧವಾಗಿ ಮಾಡಿಸಿ ಕೊಂಡು ಧರಿಸುತ್ತಾರೆ. ಸುಮಂಗಲೆ ಮುತ್ತೈದೆ ಅನಿಸಿಕೊಳ್ಳುವವರಂತೂ ಈ ವಸ್ತ್ರ ಧರಿಸಿಕೊಳ್ಳಲೇಬೇಕು. ನಾರಿಯರು ತಾವು ಧರಿಸಿಕೊಂಡಂತೆ ನಮ್ಮ ಹಿಂದೂ ಹೆಣ್ಣು ದೇವತೆಗಳೂ ನತ್ತು ಧರಿಸಿ ಸಿಂಗಾರ ಮಾಡುತ್ತಾರೆ.

ಮೂಗು ಚಂದ ಕಾಣ್ಬೇಕಂತ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಅದಕ್ಕೊಂದು ಚೆಲುವಾದ ಆಕಾರ ಕೊಟ್ಟುಕೊಂಡು ಸ್ಫುರದ್ರೂಪಿಯಾಗಿ ಕಾಣುವಂತೆ ಮಾಡಿಸಿಕೊಂಡಿದ್ದಾರೆ. ಅಂಥವರಲ್ಲಿ ಕೆಲವರನ್ನು ಹೆಸರಿಸಬಹುದಾದರೆ ರೇಖಾ, ಶ್ರೀದೇವಿ, ಶಿಲ್ಪಾಶೆಟ್ಟಿ, ಕೊಯ್ನಾ ಮಿತ್ರಾ, ಆಯೇಷಾ ಟಾಕಿಯಾ, ಪ್ರಿಯಾಂಕಾ ಚೋಪ್ರಾ, ಶಶಿಕುಮಾರ ಮುಂತಾದವರು. ನಮ್ಮ ದೇಶದ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಸಭೆಯೊಂದರಲ್ಲಿ ಗದ್ದಲವಾಗಿ ಮೂಗಿಗೆ ಧಕ್ಕೆಯಾಗಿದ್ದಾಗ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಸರಿಪಡಿಸಿಕೊಂಡಿದ್ದರು.

ಮನುಷ್ಯನ ಕೋಪ ಸಿಟ್ಟಿನಲ್ಲಿಯೂ ಮೂಗು ಸ್ಥಾನ ಪಡೆದುಕೊಂಡಿದೆ. ಹೆಣ್ಣಾಗಲಿ ಗಂಡಾಗಲಿ ಬೇಗನೆ ಕೋಪಗೊಳ್ಳುವವರಿದ್ದರೆ ಅಂಥವರನ್ನು ಅವ(ಳ)ನ ಕೋಪ ಮೂಗಿನ ಮೇಲೆ ಇದೆ ಎಂದೂ ಅಂಥವರನ್ನು ಮುಂಗೋಪಿಯಂತಲೂ ಕರೆಯುತ್ತಾರೆ. ಕೋಪಕ್ಕೆ ಹೆಸರಾದ ದೂರ್ವಾಸ ಮುನಿಯ ಕೋಪವನ್ನು ಹೇಳುವಾಗ ದೂರ್ವಾಸರ ಕೋಪ ಅವರ ಮೂಗಿನ ಮೇಲೆ ಇರುತ್ತದೆ ಎಂದು ಹೇಳುತ್ತಾರೆ. ಮನುಷ್ಯ ಸಿಟ್ಟಾದಾಗ, ಕೋಪಗೊಂಡಾಗ ಮೂಗು ಕೆಂಪೇರುತ್ತದೆ. ಮೂಗಿನ ಮೂಲಕ ಕೆಲವರು ತಮ್ಮ ಹಾವಭಾವ ತೋರಿಸುತ್ತಾರೆ. ಜಗಳವಾಡುವಾಗ ಮೂಗು ಹೊರಳಾಡಿಸಿದರೆ ಹಾಂಗ ಮೂಗು ಮುರಿಬೇಡ ನಿನ್ನ ಮೂಗನ್ನೇ ಕತ್ತರಿಸಿ ಹಾಕುತ್ತೇನೆ ನೋಡೆಂದು ಪರಸ್ಪರರು ಬಯ್ದಾಡುತ್ತಾರೆ. ಹಿರಿಯರು ಕಿರಿಯರಿಗೆ ಬುದ್ಧಿವಾದ ಹೇಳುವಾಗ ಸಿಟ್ಟಾಗೋದು ಒಳ್ಳೆಯದಲ್ಲಂತ ಹೇಳುವಾಗ 'ಸಿಟ್ಟಿನಲ್ಲಿ ಕೊಯ್ದುಕೊಂಡ ಮೂಗು ಶಾಂತಿಯಲ್ಲಿ ಮತ್ತೆ ಬರುವುದಿಲ್ಲ, ತಮ್ಮಾ ಸಿಟ್ಟಾಗೋದು ತರವಲ್ಲ' ಅಂತ ಹೇಳ್ತಾರ.

ಇಬ್ಬರು ಮಾತನಾಡುವಾಗ ನಡುವೆ ಯಾರಾದರೂ ಏನಾದರೂ ಹೇಳಲು ಬಂದರೆ ಆಗ ಅವರು ತಡೆಯಲು 'ನೀನು ಇದರಲ್ಲಿ ಮೂಗು ತೂರಿಸಬೇಡ, ಸುಮ್ಮನಿರು' ಎಂದು ಹೇಳ್ತಾರೆ ಇಲ್ಲವೇ ಗದರಿಸ್ತಾರ. ಮನುಷ್ಯರ ಮುಖವನ್ನು ಅಂದಗೆಡಿಸಲು ಮೂಗನ್ನು ಕೊಯ್ದದ್ದು ಹಿಂದಿನ ಸಂಗತಿಗಳನ್ನು ನೆನಪಿಸಿಕೊಂಡಾಗ ತಿಳಿದು ಬರುತ್ತದೆ. ಹೆಚ್ಚಾಗಿ ಹೆಂಗಸರೆ ಮೂಗು ಕೊಯ್ಸಿಕೊಂಡಿರುವ ಸಂಗತಿಗಳಿವೆ. ರಾವಣನ ತಂಗಿ ಶೂರ್ಪನಖಿ ರಾಮ ಲಕ್ಷ್ಮಣರನ್ನು ಕುರಿತು ತನ್ನನ್ನು ಮದುವೆಯಾಗೆಂದು ಪೀಡಿಸಿದಾಗ ಲಕ್ಷ್ಮಣನು ಸಿಟ್ಟಿಗೆದ್ದು ಅವಳ ಮೂಗನ್ನೇ ಕೊಯ್ದ ಪ್ರಸಂಗ ಪ್ರಸಿದ್ಧವಾಗಿದೆ. ಮನುಷ್ಯನಿಂದು ಇಷ್ಟೆಲ್ಲಾ ನಾಗರೀಕನಾಗಿದ್ದಾಗಲೂ ಇಂಥ ಘಟನೆಗಳು ಆಗೊಮ್ಮೆ ಈಗೊಮ್ಮೆ ವರದಿಯಾಗುತ್ತಲೇ ಇರುತ್ತವೆ.

ಕೆಲವರು ಮಾತನಾಡುವಾಗ ಕೇಳುವವರಿಗೆ ಅವರ ಧ್ವನಿ ಗೊಂಯ್ ಗೊಂಯ್ ಎಂದು ಕೇಳಿದಂತಾಗುತ್ತದೆ. ಆ ರೀತಿ ಮಾತನಾಡುವವರಿಗೆ ಅವ(ಳ)ನು ಮೂಗಿನಿಂದ ಮಾತನಾಡುತ್ತಾನೆ(ಳೆ) ಎಂದು ಅನ್ನುವರು. ಮೂಗಿನ ಮೂಲಕ ತಮ್ಮ ಕಲೆಯನ್ನು ವ್ಯಕ್ತಪಡಿಸುವ ಸಂಗೀತಗಾರರು ಹವ್ಯಾಸಿ ಕಲಾಕಾರರು ಇದ್ದಾರೆ. ಹೆಚ್ಚಾಗಿ ಕೊಳಲನ್ನು ಮೂಗಿನ ಮೂಲಕ ಬಾರಿಸಿ ತಮ್ಮ ಕಲಾ ಪ್ರಾವಿಣ್ಯ ತೋರಿಸುತ್ತಾರೆ. ಆ ರೀತಿ ಕೊಳಲು ಬಾರಿಸಿದ ಕಲಾಕಾರನನ್ನು ಟಿ.ವಿ ಕಾರ್ಯಕ್ರಮವೊಂದರಲ್ಲಿ ನೋಡಿದ ನೆನಪು ನನಗಿದೆ. ತಾವೂ ನೋಡಿರಬಹುದು.

ಗಂಧ ಗ್ರಹಣ ಅಂಗವಾದ ಮೂಗು ನಮಗೆ ಈ ಜಗತ್ತಿನಲ್ಲಿ ಎಲ್ಲಾ ವಸ್ತುಗಳ ಗಂಧಜ್ಞಾನ ನೀಡಿ ನಮಗೆ ಬೇಕಾದ ಪದಾರ್ಥಗಳ ಗಂಧ ಅನುಭವಿಸುವಂತೆಯೂ ಗಂಧವನ್ನು ನಿರಾಕರಿಸುವಂತೆಯೂ ಅನುಕೂಲ ಮಾಡಿಕೊಡುತ್ತದೆ. ಆಹಾರ ಪದಾರ್ಥ ಹಣ್ಣುಗಳು ಮತ್ತಿತರ ಕೆಲವು ಪದಾರ್ಥಗಳು ಹಳಸಿರುವುದು ಕೊಳೆತಿರುವುದು ಕೆಟ್ಟಿರುವುದು ನಮಗೆ ತಿಳಿಯುವುದು ಮೂಗಿನಿಂದಲ್ಲವೆ? ಮೂಗಿರುವುದರಿಂದಲೇ ವಸ್ತುಗಳು ಸುಗಂಧವಾಗಿವೆ, ದುರ್ಗಂಧವಾಗಿವೆಯೆಂದು ವಿಂಗಡಿಸಿ ಹೇಳುವುದು ನಮಗೆ ಸಾಧ್ಯವಾಗಿದೆ.

ನಮ್ಮ ಉಸಿರಾಟಕ್ಕೆ ಮೂಗು ಮುಖ್ಯವಾಗಿದೆ. ತಂಪಾಗಿ ಮುಗು ಕಟ್ಟಿದಾಗ ಉಸಿರಾಟಕ್ಕೆ ನಾವು ಪಡುವ ತೊಂದರೆ ಯಾರಿಗೂ ಬೇಡಪ್ಪ ಅನಿಸುತ್ತದೆ. ಒಮ್ಮೊಮ್ಮೆ ನಾವು ಹೇಳುವ ಮಾತು ನಿಜವೋ ಸುಳ್ಳೋ ಎಂಬುದನ್ನು ತಿಳಿಯಲು ನಮಗೆ ಗೆಳೆಯರು ನೀ ಖರೇ (ನಿಜ) ಹೇಳ್ತೀನಿಯಂತ ನಿನ್ನ ನಾಲಗೆಯಿಂದ ಮೂಗು ಮುಟ್ಟಿಕೊಂಡು ಹೇಳಾಂತ ಗೋಳಾಡಿಸುವುದೂ ಇದೆ. ಹಾಗೆ ಹೇಳಿದರೆ ಅದು ನಿಜ ಇಲ್ಲದಿದ್ದರೆ ಸುಳ್ಳು ಅನ್ನುವ ಮಾತು ಅದು ಬೇರೆ. ಗೆಳೆಯರು ಹಾಸ್ಯಕ್ಕಾಗಿ ಗೋಳಾಡಿಸುವುದಂತೂ ಇದೆ. ಮೂಗು ನಮ್ಮ ಉಸಿರಾಟದ ಪ್ರಮುಖ ಅಂಗ. ಉಸಿರಾಟ ಪ್ರಾಣಿಯ ಸಜೀವವಾಗಿರುವಿಕೆಯನ್ನು ತೋರಿಸುತ್ತದೆ. ಉಸಿರಾಟ ನಿಂತಿದ್ದರೆ

ಆ ಪ್ರಾಣಿ ನಿರ್ಜೀವ. ಒಬ್ಬ ಮನುಷ್ಯ ಬದುಕಿದ್ದಾನೋ ಸತ್ತಿದ್ದಾನೋ ಎಂಬುದನ್ನು ತಿಳಿಯಲು ಆ ಮನುಷ್ಯನ ಮೂಗಿಗೆ ಕೈ ಹಿಡಿದು ನೋಡಿ ತಿಳಿದುಕೊಳ್ಳುತ್ತಾರೆ. ಮೂಗು ನಮ್ಮ ಮುಖದಲ್ಲಿ ಉಬ್ಬಿರುವ ಎಲುಬಿನ ಒಳಗಡೆಯ ಪೊಳ್ಳಿನಲ್ಲಿರುವ ಹೊಲಸನ್ನು ಸಿಂಬಳದ ರೂಪದಲ್ಲಿ ಹೊರಹಾಕುತ್ತದೆ. ಅದು ವಿಶೇಷವಾಗಿ ನೆಗಡಿ ಬಂದಾಗ ಹೆಚ್ಚು.

ಈ ನಮ್ಮ ಜ್ಞಾನೇಂದ್ರಿಯಗಳಿಗೆ ಒಂದೊಂದಕ್ಕೂ ಒಂದೊಂದು ವ್ಯಾಧಿ ಬಂದು ನಮ್ಮನ್ನು ಬಳಲಿಸುವುದಿದೆ. ಸಾಮಾನ್ಯವಾಗಿ ಕಣ್ಣಿಗೆ ಕಣ್ಣಬೇನೆ, ಕವಿಗೆ ಕಿವಿನೋವು, ನಾಲಿಗೆಗೆ ಗುಳ್ಳೆ ಬಂದು ನೋವು, ಚರ್ಮಕ್ಕೆ ಚರ್ಮದ ನೋವು ಬಂದು ತೊಂದರೆ ಪಡುವಂತೆ ಮೂಗು ನೆಗಡಿಯಿಂದ ನಮಗೆ ಬಹಳ ತೊಂದರೆಗೀಡುಮಾಡುತ್ತದೆ. ಪ್ರತಿಯೊಬ್ಬರಿಗೆ ವರ್ಷದಲ್ಲಿ ಒಂದೆರಡು ಸಾರೆಯಾದರೂ ನೆಗಡಿ ಬಂದೇ ಬರುತ್ತದೆ. 'ನೆಗಡಿ ಜಡ್ಡ (ರೋಗ)ಲ್ಲ ಬುಗುಡಿ (ಕಿವಿಯ ಒಂದು ಆಭರಣ) ವಸ್ತು ಅಲ್ಲ' ಎಂಬ ನಾಣ್ಣುಡಿ ಇದ್ದರೂ ನೆಗಡಿಯಿಂದ ಅನುಭವಿಸುವ ತೊಂದರೆ ನಮಗೂ ನಿಮಗೂ ಎಲ್ಲರಿಗೂ ಗೊತ್ತು. ನೆಗಡಿ ಏನೇ ಮಾಡಿದರೂ ಒಂದು ವಾರದವರೆಗೆ ಇದ್ದು ತಾನೇ ಕಡಿಮೆಯಾಗುತ್ತದೆ. ಅದಕ್ಕೇಕೆ ವೈದ್ಯರ ಹತ್ತಿರ ಹೋಗಬೇಕು. ಮನೆ ಮದ್ದು ಸಾಕು ಎಂದು ಹೇಳುತ್ತಾರೆ. ಆದರೆ ನೆಗಡಿ ಬಂದಾಗ ವೈದ್ಯರ ಹತ್ತಿರ ಹೋಗದೆ ಇರುವವರು ಕಡಿಮೆ ಜನ. ಹೋಗುವವರೇ ಬಹಳ. ಒಮ್ಮೊಮ್ಮೆ ಅಲಕ್ಷಿಸಿದರೆ ಬಹಳ ತೊಂದರೆ ಕೊಡುವುದು ಇದೆ. ವರ್ಷಾನುಗಟ್ಟಲೆ ತೊಂದರೆ ಕೊಡುವುದುಂಟು. ಆಗ ತಾಳಲಾರದೆ ನಾವು ಇ.ಎನ್.ಟಿ ತಜ್ಞರಲ್ಲಿ ಹೋಗಬೇಕಾಗುತ್ತದೆ. ನನಗಂತೂ ಒಮ್ಮೆ ಈ ನೆಗಡಿ ಒಂಭತ್ತು ತಿಂಗಳು ಕಾಡಿತ್ತು. ಮನೆಮದ್ದು ಸಾಮಾನ್ಯ ವೈದ್ಯರ ಔಷಧಿ ಯಾವುದಕ್ಕೂ ಜಗ್ಗಲಿಲ್ಲ. ಕೊನೆಗೆ ನಾನು ಇ.ಎನ್.ಟಿ ತಜ್ಞರಲ್ಲಿಯೇ ಹೋಗಬೇಕಾಯಿತು. ಅವರೋ ಪರೀಕ್ಷೆ ಮಾಡಿ ಮೂಗಿನ ಪಿ.ಎನ್.ಎಸ್ ಎಕ್ಸರೇ ಮಾಡಿಸಿ ಮೂಗಿನ ಹೊರಳೆಯಲ್ಲಿ ಸೂಜಿ ಚುಚ್ಚಿ ಉಗುರುಬೆಚ್ಚಗಿನ ನೀರನ್ನು ಹಾಯಿಸಿ ಹಣೆ ಹುಬ್ಬು ಮೂಗಿನ ಎರಡೂ ಬದಿಯ ಮುಖದ ಎಲುಬುಗಳ ಟೊಳ್ಳುಭಾಗಗಳನ್ನು ತೊಳೆದು ಔಷಧ ನೀಡಿದಾಗ ಒಂದು ವಾರದ ನಂತರ ನಾನು ನೆಗಡಿ ಬಂಧನದಿಂದ ಮುಕ್ತನಾದೆ. ಈಗಂತೂ ನೆಗಡಿ ಬಂದರೆ ನನ್ನ ಎದೆಯೇ ಒಡೆದು ಹೋದಂತೆ ಹೆದರಿಕೆಯಾಗುತ್ತದೆ. ನನ್ನ ಗೆಳೆಯರೊಬ್ಬರಿಗೆ ಹೀಗೆ ನೆಗಡಿ ಬಂದು ವರ್ಷಾನುಗಟ್ಟಲೆ ಅವರನ್ನು ಕಾಡಿಸಿತ್ತು. ಅದೇ ಕೊನೆಗೂ ಆಯುರ್ವೇದ ಔಷಧದಿಂದ ಅವರು ಗುಣಹೊಂದಿದರು. ಅದಕ್ಕೆ ಅವರು ಕೂಡಾ ಈಗ ನೆಗಡಿ ಅಂದ್ರ ನನ್ನ ಜೀವಾನೇ ಹೋದಾಂಗಾಗತದ ಅಂತ ಹೇಳ್ತಾರ. ಅಂತೂ ಮೂಗಿರೋ ತನಕ ಈ ನೆಗಡಿ ಮನುಷ್ಯಾಗ ಬಿಟ್ಟದ್ದಲ್ಲ.

ಸಹಜವಾದ ಆರೋಗ್ಯವನ್ನು ಕಾಯ್ದುಕೊಂಡು ಹೋಗಲು ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ಋಷಿಮುನಿಗಳು ಪಾಲಿಸಿಕೊಂಡು ಬೋಧಿಸುತ್ತ ಬಂದಿರುವ

ಯೋಗಾಭ್ಯಾಸದಲ್ಲೂ ಮೂಗು ಒಂದು ಪೂರಕ ಅಂಗವಾಗಿದೆ. ಪ್ರಾಣಾಯಾಮ ಒಂದು ಮುಖ್ಯ ಯೋಗವಾಗಿದೆ. ಅಂಥ ಪ್ರಾಣಾಯಾಮ ಮಾಡಲು ಮೂಗೇ ಮುಖ್ಯ.

ಮೂಗಿನ ಮಹಾತ್ಮೆಯನ್ನು ಕುರಿತು ನಾನು ಇಷ್ಟೆಲ್ಲಾ ಪುರಾಣ ಹೇಳಿದ್ರು ಇನ್ನೂ ಹೇಳುವುದು ಇರಬಹುದು. ಅದು ಅವರವರ ಅನುಭವಕ್ಕೆ ಬಿಟ್ಟದ್ದು. ಅದು ಏನೆ ಇರಲಿ. ಮೂಗಿಲ್ದ ಮನುಷ್ಯಾಯಿಲ್ಲ. ಅದು ಹೇಗೆ ಇರಲಿ, ಎಂತೆ ಇರಲಿ ನನ್ನ ಮೂಗು ನನಗೆ ಇಷ್ಟ. ನಿಮ್ಮ ಮೂಗು ನಿಮಗೆ ಇಷ್ಟವಲ್ಲವೆ? ಅವರವರ ಮೂಗು ಅವರವರಿಗೆ ಇಷ್ಟ ತಾನೇ?

**ದೊಡ್ಡಬಸಪ್ಪ ಬಳೂರಗಿ**
ಸಂಕ್ರಮಣ ವಿಶೇಷಾಂಕ 2014

## ಮರಳಿನಿಂದ ಮರಳಿಗೆ

ನಾವು ಶಾಲೆಗೆ ಹೋಗುವ ಕಾಲದಲ್ಲಿ ಮೂರು ಕೆ.ಜಿ. ಗಳ ಹಾವಳಿಯಿಲ್ಲದೆ ಸೀದಾ ಶಾಲೆಯ ಮುಖ ನೋಡುವ ಭಾಗ್ಯವಿರುತ್ತಿತ್ತು. ಎಲ್ಲೋ ಅಲ್ಲೊಂದು ಇಲ್ಲೊಂದು ಇರುವ ಶಿಶುವಿಹಾರಗಳಿಗೆ ಮಕ್ಕಳನ್ನು ಕಳುಹಿಸುವವರು ಅಪರೂಪವಾಗಿದ್ದರು.

ಈಗಂತೂ ಪಾಪದ ಕಂದಮ್ಮಗಳನ್ನು ಆದಷ್ಟು ಬೇಗ ಶಾಲೆಗೆ ಸಾಗಿಹಾಕಿಬಿಟ್ಟರೆ ಮನೆಯಲ್ಲಿರುವವರಿಗೆ ಒಂದಿಷ್ಟು ನಿರಾಳ ಭಾವವೇನೋ! ಅಥವಾ ಹಾಗಿಲ್ಲವಾದರೆ ಈಗ ಶಾಲೆಗೆ ಸೇರಿಸುವುದೇ ಕಷ್ಟವಾಗುತ್ತದಲ್ಲ.....

ಹಿಂದೆ ಮನೆಯಲ್ಲಿರುವ ಹಿರಿಯರು ಚಿಕ್ಕ ಮಕ್ಕಳಿಗೆ, "ಚೆನ್ನಾಗಿ ಅಕ್ಷರ ತಿದ್ದಿರೊ......ಅಕ್ಷರವೆಂದರೆ ಗುಂಡಾಗಿ ಮುತ್ತು ಪೋಣಿಸಿದ ಹಾಗಿರಬೇಕು."ಎಂದು ಹೇಳಿ ಬರೆಯಲು ಕೂರಿಸುತ್ತಿದ್ದರು. ಶಾಲೆಗೆ ಸೇರಿಸುವ ಮೊದಲು ಮಕ್ಕಳಿಗೆ, "ಅಕ್ಷರ, ಕಾಗುಣಿತ ಕಲಿತುಕೊಳ್ಳಿ.ಇಲ್ಲದಿದ್ದರೆ ಶಾಲೆಯಲ್ಲಿ ಮೇಷ್ಟ್ರ ಹತ್ತಿರ ಪದೆ ತಿನ್ನಬೇಕಾಗುತ್ತದೆ." ಎಂದಾಗ ಬಾಲರ ಮನದಲ್ಲಿ ಮಾಸ್ತರರ ಬಗ್ಗೆ ಆಗಲೇ ಅವ್ಯಕ್ತ ಭಯ ಆವರಿಸಿರುತ್ತಿತ್ತು.

ಹೇಗೆ ಪ್ರತೀ ವ್ಯಕ್ತಿಯ ರೂಪ, ವ್ಯಕ್ತಿತ್ವ ಬೇರೆಯೇ ಇರುತ್ತದೆಯೋ ಹಾಗೇ ಪ್ರತಿಯೊಬ್ಬರ ಕೈಬರಹವೂ ವಿಭಿನ್ನ ಹಾಗೂ ವೈವಿಧ್ಯಮಯವಾಗಿರುತ್ತದೆ. ಒಂದೆರಡು ಬಾರಿ ನೋಡಿಬಿಟ್ಟರೆ, ಇದನ್ನು ಇಂತಹವರೇ ಬರೆದದ್ದು ಎಂದು ನಿಖರವಾಗಿ ಗುರುತಿಸಬಹುದು.

"ಏನು ಅಕ್ಷರವೋ....ದೊಡ್ಡ ಕುಂಬಳಕಾಯಿ ತರಹ ಇದೆಯಲ್ಲ...."ಎಂದು ಕೆಲವರ ಕೈಬರಹ ಆಪಾದನೆಗೊಳಪಟ್ಟರೆ ಇನ್ನು ಕೆಲವರದ್ದು ಎಳ್ಳುಕಾಳಿನ ತರಹದ್ದು. "ಓದುವವರು ದುರ್ಬೀನು ಇಟ್ಟುಕೊಳ್ಳಬೇಕಷ್ಟೆ."ಎನ್ನುವ ಕೊಂಕಿಗೆ ಕಿವಿಗೊಡಬೇಕಾಗುತ್ತದೆ.

"ಅವಸರ ಬೇಡ.....ಕಾಗೆ ಕಾಲು, ಗುಬ್ಬಿ ಕಾಲು ತರಹ ಗೀಚಿ ಓಡಿಹೋಗ್ಬೇಡ....ಸರಿಯಾಗಿ ಕುಳಿತುಕೊಂಡು ಅಕ್ಷರ ತಿದ್ದಬೇಕು."ಎಂದು ಹುಕುಂ ಹೊರಡಿಸುತ್ತಿದ್ದರು.

ಅದೂ ಸ್ಲೇಟಿನಲ್ಲಿ ತುಂಡು ಬಳಪವೋ, ಸೀಮೆಸುಣ್ಣದ ಚೂರೋ ಇಟ್ಟುಕೊಂಡು ಬರೆಯಬೇಕು. ಉದ್ದ ಬಳಪ ಕೈಗೆ ಸಿಕ್ಕಿಬಿಟ್ಟರೆ ನಮಗೆಲ್ಲಾ ಆನಂದವೋ ಆನಂದ...ಮನೆಯಲ್ಲಿರುವ ಏಳೋ-ಎಂಟೋ ಮಕ್ಕಳಲ್ಲಿ ಒಬ್ಬರಾದ ನಂತರ ಒಬ್ಬರಿಗೆ ಆ ಸ್ಲೇಟು ಬಳುವಳಿಯಾಗಿ ಬರುತ್ತಿತ್ತು. ಹೊಸ ಪಾಟಿ ಸಿಕ್ಕಿಬಿಟ್ಟರೆ ಖುಷಿಯೋ ಖುಷಿ!

ಗಂಡುಮಕ್ಕಳ ಅಂಗಿ,ಚಡ್ಡಿಯ ಜೇಬಿನಲ್ಲಿ ಚಿಕ್ಕ ಚಿಕ್ಕ ಬಳಪದ ಚೂರುಗಳು ಬೇಕಾದಷ್ಟಿರುತ್ತಿದ್ದವು. ಹೆಣ್ಣುಮಕ್ಕಳಿಗೆ ಆ ಅವಕಾಶ ಇರುತ್ತಿರಲ್ಲಿವಾದರೂ ಚೀಲದಲ್ಲಿಯೇ ಜೋಪಾನವಾಗಿಟ್ಟುಕೊಳ್ಳುವ ಕಲೆ ಅವರಿಗೆ ಕರಗತವಾಗಿರುತ್ತಿತ್ತು.

"ಒಂದು ನಾಲ್ಕಕ್ಷರ ರುಜು ಮಾಡೋ ಅಷ್ಟು.......ಒಂದು ನಾಲ್ಕು ಸಾಲು ಪತ್ರ ಬರೆಯೋ ಅಷ್ಟು ಕಲಿತುಕೊಂಡ್ರೆ ಧಾರಾಳವಾಗಿ ಸಾಕು......ಹೆಣ್ಣುಮಕ್ಕಳು ಕಾಲೇಜು ಓದಿ ಏನು ದೇಶ ಆಳಬೇಕಾಗಿದೆಯಾ? ಎಷ್ಟೇ ಓದಿದರೂ ಒಲೆ ಬೂದಿ ತೆಗೆಯೋದು ಏನು ತಪ್ಪುತ್ತಾ?"ಎಂದು ಅಜ್ಜಿ ಮನೆಯಲ್ಲಿ ಠರಾವು ಹೊರಡಿಸುತ್ತಿದ್ದರು.ಅಂದರೆ

ಬಾಲಕಿಯರಿಗೂ ನಾಲ್ಕಕ್ಷರ ಕಲಿಯೋ ಭಾಗ್ಯವನ್ನು ಉದಾರವಾಗಿ ಕರುಣಿಸುತ್ತಿದ್ದರು.

ಪಾಪ! ನಮ್ಮಜ್ಜಿ ಈಗ ಬದುಕಿದ್ದಿದ್ದರೆ ಬೇಕು ಅಂತ ಬಯಸಿದರೂ ತೆಗೆಯೋಕೆ ಬೂದಿಯೇ ಇಲ್ಲವಲ್ಲ ಎಂದು ಎಷ್ಟು ಬೇಸರಿಸುತ್ತಿದ್ದರೊ.......ಇನ್ನೊಂದು ನಾಲ್ಕು ವರ್ಷಗಳಲ್ಲಿ ಕೈಬರಹಕ್ಕೂ ಅದೇ ಅವಸ್ಥೆ ಬರಲಿದೆಯಲ್ಲ!

ನಮಗಾದರೂ ಬರೆಯಲು, ತಿದ್ದಲು  ಪಾಟಿ, ಬಳಪ ಸಿಗುತ್ತಿತ್ತಲ್ಲ....ನಮ್ಮ ಅಮ್ಮನೋ ಮರಳಿನಲ್ಲಿ ಗುಂಡಗೆ ತಿದ್ದಿ, ಬರೆದು ಶ್ರೀರಾಮ,. ಜಯರಾಮ ಬರೆಯಲು ಕಲಿತು ರಾಮಾಯಣ, ಮಹಾಭಾರತ ನಂತರ ದಿನಪತ್ರಿಕೆಗಳನ್ನೂ ಓದುವಂತಾಗಿದ್ದು.

ಇನ್ನು ಅಪ್ಪನದು ಮೋಡಿಯ ಅಕ್ಷರ......ಒಂದು ಅಂತರ್ದೇಶೀಯ ಪತ್ರದಲ್ಲಿ ಬರೆಯತೊಡಗಿದರೆಂದರೆ ಪತ್ರದಲ್ಲಿ ಅವಕಾಶವಿರುವ ಅಷ್ಟೂ ಸ್ಥಳವನ್ನೂ ಆಕ್ರಮಿಸಿದ ನಂತರವೇ ಲೇಖನಿಗೆ ವಿಶ್ರಾಂತಿ ಕೊಡುತ್ತಿದ್ದುದು. ಒಂದೇ ಮಾದರಿಯ ಅಕ್ಷರಗಳು, ಪದಗಳು ಮುಂದುವರೆದು ಆಪತ್ರವನ್ನು ಓದುವುದಕ್ಕೆ ಬಹಳ ಖುಷಿಯಾಗುತ್ತಿತ್ತು. ಎಲ್ಲಿಯೂ ವಿರಾಮವಿಲ್ಲದೆ ನಿರರ್ಗಳವಾಗಿ ಹರಿದುಕೊಂಡು ಹೋಗುತ್ತಿದ್ದ ಲೇಖನಿ ವಿರಮಿಸುತ್ತಿದ್ದುದು ಕಟ್ಟಕಡೆಯ ಸ್ಥಳಾವಕಾಶ ಮುಗಿದಾಗಲೆ!

ಇನ್ನು ಕೈಬರಹವನ್ನು ನೋಡಿಯೇ ಬರೆದವರ ವ್ಯಕ್ತಿತ್ವವನ್ನೂ,ಭವಿಷ್ಯವನ್ನೂ, ಗುಣ ಸ್ವಭಾವವನ್ನೂ ಹೇಳುವ ಪರಿಣತರು ನಮ್ಮಲ್ಲಿದ್ದಾರೆ.

ಈಗ ಇದ್ದಕ್ಕಿದ್ದ ಹಾಗೆ ಕೈಬರಹದ ಬಗ್ಗೆ ನನಗೇಕೆ ಕಾಳಜಿ ಅಂತೀರಾ? ಈಗ ಅದಕ್ಕೇ ಕುತ್ತು ಬರ್‍ತಿದೆಯಲ್ಲಾ ಅನ್ನೋದೇ ಚಿಂತೆ. ಹಾಗಂತ ನನ್ನ ಕೈಬರಹವೇನೂ ಮುತ್ತು ಪೋಣಿಸಿದ ಹಾಗೇನೂ ಇರುವುದಿಲ್ಲ. ಆದರೆ ನಾಲ್ಕು ಜನ ಓದಿದರೆ ಅದರಲ್ಲೂ ಪತ್ರಿಕೆಯ ಸಂಪಾದಕರಿಗಂತೂ ಖಂಡಿತ ಅರ್ಥವಾಗುವಂತಿತ್ತು. ಕೆಲವು ಸಂದರ್ಭಗಳಲ್ಲಿ

ಹೇಗಿದ್ದರೂ ಓದಲೇಬೇಕಾದ ಅನಿವಾರ್ಯತೆ ಅವರಿಗೆ ತಲೆನೋವು ತರುತ್ತಿತ್ತೇನೊ...ಅದೇನೇ ಇರಲಿ; ನಾನಂತೂ ಸಮಯ ಸಿಕ್ಕಿದಾಗ ಮನಸ್ಸಿಗೆ ತೋಚಿದ್ದನ್ನು

ಹಾಗೇ ಗೀಚಿ ಆಮೇಲೆ ಕರಡು ತಿದ್ದೋ ಹವ್ಯಾಸವನ್ನು ರೂಪಿಸಿಕೊಂಡಿದ್ದೆ. ಒಂದಿಷ್ಟು ಖಾಲಿ ಪುಟಗಳು, ಒಂದು ಪೆನ್ನೋ, ಪೆನ್ಸಿಲೋ ಹಿಡಿದು ಮೂಲೆಯಲ್ಲಿ ಕುಳಿತು ಬರೆಯುವುದು, ತಿದ್ದುವುದು, ಓದುವುದು.. ಮನಸ್ಸಿಗೆ ತೃಪ್ತಿಯೆನಿಸಿದಾಗ ಅದನ್ನು ಪತ್ರಿಕೆಗಳಿಗೆ ಕಳುಹಿಸುವುದು ಹೀಗೆ ಮಾಡುತ್ತಾ ಹಾಯಾಗಿದ್ದವಳಿಗೆ ಈಗಿನ ಪರಿಸ್ಥಿತಿಯಿಂದ ಆಘಾತವಾದಂತಾಗಿದೆ.

ನಿಮ್ಮ ಈಮೇಲ್ ಐ.ಡಿ. ಏನು ಅಂತಲೋ, ನನ್ನ ಈಮೇಲ್‌ಗೆ ಮೇಲ್ ಮಾಡಿಬಿಡಿ ಎಂದೋ ಯಾರಾದರೂ ಹೇಳಿದಾಗ ನನ್ನ ಮುಖ ಇಂಗು ತಿಂದ ಮಂಗನಂತಾಗಿ ಬಿಡುತ್ತದೆ. ಇಷ್ಟು ವರ್ಷಗಳೂ ಟೈಪಿಂಗ್, ಶಾರ್ಟ್‌ಹ್ಯಾಂಡ್, ಪ್ರಿಂಟಿಂಗ್ ಕಲಿಯದಿದ್ದರೂ ಏನೂ ಕೊರತೆಯೆಂದೆನಿಸಿರಲಿಲ್ಲ. ಈಗ ಮಾತ್ರ ಕಂಪ್ಯೂಟರ್ ಮುದ್ರಣ, ಅದರಲ್ಲೂ ಮಿಂಚಂಚೆಯ ಝಲಕ್ ಸರ್ವವ್ಯಾಪಿಯಾಗಿ ನಮ್ಮಂತಹವರಿಗೆ ಕೊರಗಾಗಿ ಪರಿಣಮಿಸಿದೆ.

ಸಂಪಾದಕರಿಗೇನೊ ಕೆಟ್ಟ ಕೈಬರಹವನ್ನು ಓದಬೇಕಾದ ಪಾಡು ತಪ್ಪುತ್ತದಾದರೂ, ಕಂಪ್ಯೂಟರ್‌ನಲ್ಲಿ ಟಪಟಪ ಅನ್ನಿಸುವ ಕಲೆ ನಮಗೆ ಕರಗತವಾಗಬೇಕಲ್ಲ.....ಈ ಆನ್ ಲೈನ್ ಯುಗದಲ್ಲಿ ಕಂಪ್ಯೂಟರ್ ಜ್ಞಾನ ಇಲ್ಲವೆಂದರೆ ಅದರಲ್ಲೂ ಮೇಲ್ ಕಳುಹಿಸಲೂ ಬರುವುದಿಲ್ಲವೆಂದರೆ ಅನಕ್ಷರಸ್ಥರಂತೆಯೇ ಇರಬೇಕಾಗುತ್ತದೆ.

"ಅದೇನು ಕಷ್ಟ ಇಲ್ಲ ಅಮ್ಮಮ್ಮ....ಸುಮ್ಮನೆ ಅಕ್ಷರ ಒತ್ತುತ್ತಾ ಇರಿ.....ಎಲ್ಲಾ ಬಟನ್ಸ್ ಇರತ್ತಲ್ಲ... ಆಮೇಲೆ ಅಭ್ಯಾಸ ಆಗತ್ತೆ. ಏನಾದರೂ ಕಂಪ್ಯೂಟರ್ ಏನೂ ಹಾಳಾಗೊಲ್ಲ.. ಹೆದರಿಕೊಳ್ಳಬೇಡಿ." ಎಂದು ಮೂರನೆಯ ತರಗತಿಯಲ್ಲಿ ಓದುತ್ತಿರುವ ಮೊಮ್ಮಗಳು ತಿಳಿಹೇಳುತ್ತಿದ್ದರೆ ನಾನು ದೀನಳಾಗಿ ಅವಳ ಮುಖ ನೋಡಬೇಕಷ್ಟೆ!

ಹಾಳಾಗುತ್ತದೆಂಬ ದಿಗಿಲಿಲ್ಲದೆ ಮಕ್ಕಳು ಕಂಪೂಟರ್ ಬಳಸಿದಂತೆ ನಮಗೆ ಮಾಡಲಾಗುತ್ತದೆಯೆ? ಅವರಿಗೆ ಶಾಲೆಯಲ್ಲೇ ಪವರ್ ಪಾಯಿಂಟ್, ಕಲರಿಂಗ್ ಹೀಗೇ ಏನೇನೊ ಹೇಳಿಕೊಡುತ್ತಾರಂತೆ!

ನಮಗೆ ಹಿಂದೆ ಪಾಟಿ ಇದ್ದ ಹಾಗೆ ಇವರಿಗೆ ಲ್ಯಾಪ್‌ಟಾಪ್....."ತುಂಬಾ ಸುಲಭ... ಎರೇಝರ್‌ಇಂದ ಅಳಿಸೋದೇ ಬೇಡ.... ಏನು ಬೇಕೋ ಹಾಗೆ ಟೈಪ್ ಮಾಡಿ, ತಕ್ಷಣ ಯಾರಿಗೆ ಕಳುಹಿಸಬೇಕೊ ಅವರಿಗೆ ಕಳಿಸಿಬಿಡಬಹುದು. ಪೋಸ್ಟ್ ಆಫೀಸ್‌ಗೆ ಹೋಗೋದೇ ಬೇಡ; ಕಲಿತುಬಿಡಿ ಅಮ್ಮಮ್ಮ..." ಎಂದು ಮೊಮ್ಮಗಳ ಪ್ರೋತ್ಸಾಹ ಬೇರೆ...

"ನೀವಿನ್ನೂ ಹಸ್ತಪ್ರತಿಯಲ್ಲೇ ಕಳುಹಿಸುತ್ತೀರಾ... ಲ್ಯಾಪ್‌ಟಾಪ್ ಇಟ್ಟುಕೊಂಡಿಲ್ಲವಾ?" ಎಂದು ಒಬ್ಬೊಬ್ಬರು ಕೇಳಿದಾಗಲೂ, "ಇನ್ನು ನೀವು ಯಾವ ಯುಗದಲ್ಲಿದ್ದೀರಿ ಎಂಬ ಅರ್ಥ ಧ್ವನಿಸಿ ಪೆಚ್ಚಾಗಿಬಿಡುತ್ತೇನೆ.

ಹೋದ ವರ್ಷ ಹಬ್ಬವೊಂದರಲ್ಲಿ ಎದುರು ಮನೆಯವರು ಅರಿಶಿನ-ಕುಂಕುಮಕ್ಕೆಂದು ಕರೆದಿದ್ದರು. ಅವರ ಮೊಮ್ಮಗ ಕೈಯಲ್ಲೊಂದು ವಿಶೇಷ ಆಟಿಕೆ ಹಿಡಿದುಕೊಂಡು ಆಟದಲ್ಲಿ ಮಗ್ನನಾಗಿದ್ದ; "ಏನು ಮಾಡ್ತಾ ಇದ್ದಿ ಪುಟ್ಟಾ..." ಎಂದು ನಾನು ಕುತೂಹಲದಿಂದ ಕೇಳಿದಾಗ, "ಟ್ಯಾಬ್ಲೆಟ್ ಆಟ,"ಎಂದಾಗ ನನಗೆ ಇನ್ನೂ ಅಚ್ಚರಿ.....

ಅಷ್ಟರಲ್ಲಿ ಅವನಮ್ಮ ಅವನ ಹತ್ತಿರ, "ನೋಡು ಚಿನ್ನೂ.. ಅತ್ತೆಗೆ ನೀನು ಟ್ಯಾಬ್ಲೆಟ್‌ನಲ್ಲಿ ಏನು ಆಡ್ತದ್ದಿ ಅಂತ ತೋರಿಸು." ಎಂದಾಗ ಆ ಹುಡುಗ ಪಟಪಟನೆ ಬಟನ್ ಒತ್ತಿ ತೋರಿಸತೊಡಗಿದ್ದ. ಮೂರು-ನಾಲ್ಕು ವರ್ಷದ ಮಕ್ಕಳಿಗೆ ಆಟಕ್ಕೆ ಟ್ಯಾಬ್ಲೆಟ್,ಕಂಪೂಟರ್‌ಗಳಾದರೆ ಹಾಳಾಗುವ ಭೀತಿಯಿಲ್ಲದೆ ನಿರಂತರ ಪ್ರಯೋಗಗಳಿಂದಾಗಿ ಅವರು ಎಷ್ಟೆಲ್ಲಾ ನೈಪುಣ್ಯ ಸಾಧಿಸಬಹುದಲ್ಲವೆ?

"ಕೈಯಲ್ಲಿ ಬರೆಯೋದಾದರೆ ಓದುವವರಿಗೆ ಅರ್ಥ ಆಗತ್ತೋ ಇಲ್ಲವೋ ಅನ್ನೋ ಚಿಂತೆ;ಕಂಪ್ಯೂಟರ್ ನಲ್ಲಿ ಟೈಪ್ ಮಾಡಿದರೆ ಆ ಯೋಚನೆಯೇ ಇರೋದಿಲ್ಲ.ನೀವೂ ಖಂಡಿತ ಕಲಿತುಕೊಳ್ಳಿ......ಅದೇನು ಮಹಾ ಕಷ್ಟ....ಮಾಡ್ತಾ ಮಾಡ್ತಾ ಅಡಿಗೆ,ಹಾಡ್ತಾ ಹಾಡ್ತಾ ರಾಗ ಹಾಗೇ ಟಪ್ ಟಪ್ ಅನ್ನಿಸ್ತಾ ಟೈಪಿಂಗ್....ಯಾವುದಾದರೂ ಅಷ್ಟೆ......ಕಲಿಯೋವರೆಗೂ ಬ್ರಹ್ಮ ವಿದ್ಯೆ; ಕಲಿತ ಮೇಲೆ ಕೋತಿ ವಿದ್ಯೆ...ಇವತ್ತಿನಿಂದಲೇ ಶುರುಮಾಡಿ."ಎಂದು ಆಪ್ತ ಗೆಳತಿ ಭರವಸೆಯನ್ನು ಬಿತ್ತಿದರು.

ಆದರೇನು....ಟೈಪಿಂಗ್ ಹುಟ್ಟು-ಮೆಟ್ಟೂ ಗೊತ್ತಿಲ್ಲದವಳಿಗೆ ಅಷ್ಟು ಸುಲಭವಾಗಿ ಬರುತ್ತದೆಯೆ? ಮೋಡಂ, ಮೌಸ್, ಕರ್ಸರ್, ಗೂಗಲ್ ಸರ್ಚ್ ಇಂತಹ ಪದಗಳು ಭಯ ಹುಟ್ಟಿಸತೊಡಗಿದವು.

"ಇನ್ನು ನನ್ನ ಲೇಖನಿ,ಬರವಣಿಗೆ ಎಲ್ಲಾ ಮೂಲೆಗುಂಪಾದ ಹಾಗೆ." ಎಂದು ಸಪ್ಪೆ ಮೋರೆ ಹಾಕಿಕೊಂಡಿದ್ದೇ ತಪ್ಪಾಯಿತೇನೊ.......

ಅಂದು ಸಂಜೆಯೇ ಮಗ ನನ್ನ ಕೈಗೊಂದು ಬಾಕ್ಸ್ ತಂದುಕೊಡುತ್ತಾ, "ಇನ್ನು ನಿನ್ನ ಸಾಹಿತ್ಯ ಕೃಷಿಯೆಲ್ಲಾ ಇದರಲ್ಲೇ ಆಗ್ಬೇಕು: ಆದಷ್ಟು ಬೇಗ ಇದರಲ್ಲಿ ಕಥೆ,ಕವನ ಟೈಪ್ ಮಾಡ್ಬೇಕು." ಎಂದು ಪ್ರೋತ್ಸಾಹಿಸುವ ದನಿಯಲ್ಲಿ ಹೇಳಿದ. ಸಾವಿರಗಟ್ಟಲೆ ಸುರಿದು ತಂದ ಲ್ಯಾಪ್‌ಟಾಪ್........ಟೈಪಿಂಗ್ ಗಂಧ ಗಾಳಿಯೇ ಗೊತ್ತಿಲ್ಲದವಳು ಇನ್ನು ಕುಟ್ಟಿ ಕುಟ್ಟಿ ಕಲಿಯಬೇಕು.......

"ಇನ್ನು ಹೈಟೆಕ್ ಅಮ್ಮ......ಸ್ವಲ್ಪ ದಿನಗಳಲ್ಲಿಯೇ ಆನ್‌ಲೈನ್,ಫೇಸ್ ಬುಕ್ ಅಂತ ಬಿಸಿಯಾಗಿಬಿಡ್ತೀಯ...." ಮಗಳಿಗೆ ನಗು.....

ಬೆಕ್ಕಿಗೆ ಚೆಲ್ಲಾಟ,ಇಲಿಗೆ ಪ್ರಾಣ ಸಂಕಟ ಎಂಬಂತಿತ್ತು ನನ್ನ ಸ್ಥಿತಿ.

"ಮಗ ಅಷ್ಟು ಹಣ ಸುರಿದು ತಂದಿದಕ್ಕಾದ್ರೂ ಮನಸ್ಸು ಮಾಡು; ಇನ್ನು ಮುಂದೆ ನಿನ್ನ ಅಮೋಘ ಸಾಹಿತ್ಯ ಸೇವೆ ಕಂಪ್ಯೂಟರ್ ಮುಖಾಂತರವೇ ಆಗಲಿ....ಆದರೆ ದಯವಿಟ್ಟು ನನ್ನನ್ನ ಟೈಪಿಸ್ಟ್ ಆಗಿ ಮಾಡ್ಬೇಡ. "ಪತಿರಾಯರ ಆದೇಶವೂ ಹೊರಬಿದ್ದಿತ್ತು.

ಜೆರಾಕ್ಸ್, ಪೋಸ್ಟ್ ಆಫೀಸ್, ಪೆನ್ನು, ಹಾಳೆಗಳ ಗೊಡವೆಯಿಂದ ಇನ್ನಾದರೂ ಮುಕ್ತಿ ಸಿಕ್ಕೀತೆಂಬ ನಿರಾಳ ಭಾವದ ನಿರೀಕ್ಷೆಯಲ್ಲಿದ್ದರವರು.

"ನಾನೂ ಪ್ರಯತ್ನಿಸ್ತೀನಿ....ಮೊದಲು ನೀವು ಚೆನ್ನಾಗಿ ಕಲಿತುಬಿಡಿ. ಆಮೇಲೆ ನೀವೇ ನನಗೆ ಕಲಿಸಬಹುದು. "ಅತಿ ವಿನಯದ ದನಿ ನನ್ನದಾಗಿತ್ತು. "ಅಂದ್ರೆ ಈಗಲೂ ನನ್ನ ಬಿಟ್ಟಿ ಕೆಲಸಕ್ಕೆ ಬಿಡುಗಡೆಯೇ ಇಲ್ಲವೇ?" ಎಂದು ನಿಟ್ಟುಸಿರಿಟ್ಟವರಿಗೆ ನಮ್ಮಿಬ್ಬರಲ್ಲಿ ನನ್ನದು–ನಿಮ್ಮದು ಎನ್ನುವ ಭೇದ ಸರಿಯೆ?" ಎಂಬ ಪ್ರಶ್ನೆ ಜಾರಿಸಿದ್ದೆ. ಪ್ರತಿಕ್ರಿಯೆಯಾಗಿ ಅವರ ತುಟಿಯಂಚಿನಲ್ಲಿ ಮೂಡಿದ ನಗುವಿಗೆ ನಾನು ವಿಶೇಷ ಅರ್ಥವನ್ನೇನೂ ಕಲ್ಪಿಸಲು ಹೋಗಲಿಲ್ಲ.

ಲ್ಯಾಪ್‌ಟಾಪನ್ನು ದೇವರ ಮುಂದಿಟ್ಟು ಭಯ ಭಕ್ತಿಯಿಂದ ಕೈಮುಗಿದಿದ್ದಾಯಿತು.

"ಅಮ್ಮ ಇದೇ ನೋಡು ಪೆನ್‌ಡ್ರೈವ್.....ನೀನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿರುವುದನೆಲ್ಲಾ ಡೌನ್‌ಲೋಡ್ ಮಾಡಿ ಇದರಲ್ಲಿ ಫೀಡ್ ಮಾಡಿಬಿಡಬಹುದು. ನಿನ್ನ ಬರಹವೆಲ್ಲಾ ಇಲ್ಲೇ ಭದ್ರವಾಗಿರತ್ತೆ." ಮಗ ತೋರಿಸಿದ

ತೆಳ್ಳನೆಯ ಕಡ್ಡಿ ಗಾತ್ರದ ಉಪಕರಣದ ಅದ್ಭುತ ಶಕ್ತಿಗೆ ಬೆರಗಾಗಿದ್ದೆನಾದರೂ, ಈ ಪೆನ್ನು, ಹಾಳೆಗಳ ಹಳೆಯ ನಂಟು ಬಿಡುವುದು ಅಸಾಧ್ಯವೆನಿಸಿತ್ತು.

"ಅಮ್ಮ ಪ್ರಾರಂಭಿಸಮ್ಮ...ಟೈಪ್ ಮಾಡು.....ಇಂದಿನ ವೇಳೆಯೇ ಶುಭವೇಳೆ......ಯಾರಿಗಾದರೂ ಇದ್ರಲ್ಲೇ ಪತ್ರ ಟೈಪ್ ಮಾಡು."ಎಂದಾಗ ನೆನಪು ಹಿಂದಕ್ಕೋಡಿತ್ತು. ಮನೆಗಳಿಗೆ ಫೋನ್ ಬರುವುದಕ್ಕೂ ಮೊದಲು ಅಪ್ಪ–ಅಮ್ಮನಿಗೆ ಬರೆಯುತ್ತಿದ್ದ ವಾರಕ್ಕೊಂದು ಪತ್ರ; ಅಪ್ಪನ ಮೋಡಿ ಅಕ್ಷರದ ಮಾರುತ್ತರ......ಅದರಲ್ಲಿ ಈಗಲೂ ಕೆಲವನ್ನು ಭದ್ರವಾಗಿಟ್ಟುಕೊಂಡು ಆಗಾಗ ಓದುತ್ತಿರುವುದನ್ನು ನೆನೆದು ಕಂಗಳು ಹನಿಗೂಡಿದ್ದವು. ಈಮೇಲ್‌ಗೆ ಪತ್ರದ ಸೆಳೆತವಿದ್ದೀತೆ? ಟೈಪ್ ಮಾಡಲು ಕುಳಿತರೆ ಅಕ್ಷರಗಳನ್ನು ತಡಬಡಾಯಿಸುತ್ತಾ ಹುಡುಕುವಷ್ಟರಲ್ಲಿಯೇ ಸಾಕುಸಾಕೆನಿಸಿತ್ತು.

"ಯಾಕೆ ಎ, ಬಿ, ಸಿ, ಡಿ....ಹೀಗೆ ಕ್ರಮ ಪ್ರಕಾರವಾಗಿಯೇ ಕೊಡಬಾರದಿತ್ತು.......ಅಥವಾ ಸೀದಾ ಅ ಆ ಇ ಈ ಅಂತ ಕನ್ನಡ ಅಕ್ಷರಗಳ ಮೂಲಕವಾಗಿಯೇ ಟೈಪ್ ಮಾಡೋ ಹಾಗೆ ಯಾಕಿಲ್ಲ? ಇಂಗ್ಲಿಷ್ ಬಂದ ಮೇಲೆ ಕನ್ನಡವೂ ಬರಲೇಬೇಕಲ್ಲ..... "ಅಂದಿದ್ದೆ ಅಸಹನೆಯಿಂದ. ಬೇಕಾದ ಅಕ್ಷರಗಳು ಬೇಗ ಬೇಗ ಸಿಗದೆ ಎಲ್ಲೆಲ್ಲೋ ಅಡಗಿ ಕುಳಿತುಬಿಡುತ್ತಿದ್ದವು. ಈಗ ಇಂಗ್ಲಿಷ್ ಅಕ್ಷರದ ಮೂಲಕ ಕನ್ನಡ ಬರತ್ತಲ್ಲಮ್ಮ.....ಅಭ್ಯಾಸ ಆದ್ರೆ ಸರಿಹೋಗತ್ತೆ."ಮಗ ಹೇಳಿದಾಗ ರೇಗಿಹೋಯಿತು.

"ಕೊಂಕಣ ಸುತ್ತಿ ಮೈಲಾರಕ್ಕೆ ಹೋದ ಹಾಗೆ......ನೀವು ಯಾರಾದ್ರೂ ಸೀದಾ ಕನ್ನಡ ಬರೋ ಕಂಪ್ಯೂಟರ್ ಯಾಕೆ ಮಾಡಬಾರದು?"

"ಕೈಲಾಗದವರು ಮೈ ಪರಚಿಕೊಂಡರಂತೆ....."ಎಂದು ನಗುತ್ತಾ ಜಾಗ ಖಾಲಿಮಾಡಿದ್ದರು ಪತಿರಾಯರು.

"ಆಗ ನಮಗೆ ದಿನಕ್ಕೆ ಇಷ್ಟು ಓದ್ಬೇಕು ಅಂತ ಹೇಳುತ್ತಿದ್ದೆಯಲ್ಲಮ್ಮ....ಈಗ ನೀನು ದಿನಕ್ಕೆ ಒಂದು ಪುಟವಾದ್ರೂ ಟೈಪ್ ಮಾಡ್ಬೇಕು......ಪ್ಲೀಸ್.....ಆಯ್ತಾ ಅಮ್ಮ..."ಮೌನವಾಗಿ ತಲೆಯಾಡಿಸಿದ್ದೆ ಮಗನ ಮಾತಿಗೆ. ಸಾವಿರಗಳನ್ನು ಸುರಿದ ಮನಸ್ಸನ್ನು ಬೇಸರಪಡಿಸಲಾದೀತೆ?

ಇನ್ನು ಅಕ್ಷರಾರಂಭವೂ ಕಂಪ್ಯೂಟರ್‌ನಲ್ಲೇ ಆಗಬಹುದು....ಪಾಠ ಆನ್‌ಲೈನ್‌ನಲ್ಲಿಯಾದರೆ, ಹೋಮ್‌ವರ್ಕ್ ಪೆನ್‌ಡ್ರೈವ್‌ನಲ್ಲಿ ಆಗಬಹುದು. ಆಮೇಲೆ ಸ್ಲೇಟು, ಬಳಪದ ಗತಿಯೇನು? ಯೋಚಿಸುತ್ತಲೇ ಬೆರಳುಗಳು ಕೀಬೋರ್ಡ್ ಒತ್ತುತ್ತಿದ್ದವು. ಡಿಲೀಟ್, ಬ್ಯಾಕ್‌ಸ್ಪೇಸ್ ಬಳಸುವುದನ್ನು ಚೆನ್ನಾಗಿ ಅಭ್ಯಾಸ ಮಾಡಿಕೊಂಡೆ. ಟೈಪ್ ಮಾಡುವುದಕ್ಕಿಂತ ಅಳಿಸುವುದೇ ಹೆಚ್ಚಾಗುತ್ತಿರುವುದನ್ನು ನಮ್ಮವರು ಗಮನಿಸುತ್ತಿದ್ದಾರೆಯೆ ಎಂಬ ಕಸಿವಿಸಿ ಬೇರೆ...ಮುಸಿಮುಸಿ ನಗುವಿಗೆ ನಿರ್ಲಕ್ಷ್ಯವನ್ನು ನಟಿಸಿದೆ. ಕೊನೆಗೂ ಅಳಿಸುತ್ತಾ ಅಳಿಸುತ್ತಾ ಒಂದು ಕವನವನ್ನು ಟೈಪಿಸಿಯೇಬಿಟ್ಟೆ ಅದೂ ಎಂಟು ವರ್ಷಕ್ಕೆ ಮಗ ದಂಟು ಎಂದ ಹಾಗೆ.

ಕಾಲವು ಬಹಳ ಬದಲಾಯ್ತು........ಎಲ್ಲಕೂ ಲ್ಯಾಪ್‌ಟಾಪ್ ಬೇಕಾಯ್ತು.
ಪೇಪರ್, ಪೆನ್ನು ಮರೆತ್ಹೋಯ್ತು;ಬರೆಯುವ ಕ್ರಮವೇ ಬಿಟ್ಹೋಯ್ತು.

ತಿದ್ದುವ ಗೋಜೇ ಈಗಿಲ್ಲ; ಗಜಿಬಿಜಿ ಆಗುವ ಭಯವಿಲ್ಲ
ಪುಟವನು ತುಂಬಿಸೋ ಗೋಳಿಲ್ಲ; ಬೆರಳಿಗೆ ಚುರುಕು ಬೇಕಲ್ಲ
ಲ್ಯಾಪ್‌ಟಾಪ್ ಇಲ್ಲದೆ ಜಗವಿಲ್ಲ; ವಿಷಯಕೆ ಅದರಲಿ ಬರವಿಲ್ಲ
ತುದಿ ಮೊದಲೆಂಬುದೆ ಇಲ್ಲಿಲ್ಲ; ಥರಥರ ಆಟಕೆ ಕೊನೆಯಿಲ್ಲ

ಆದರೆ ಬೇಕು ಮಿತಿಯಿದಕೂ; ಹೊತ್ತಿನ ಪರಿಮಿತಿ ಇರಬೇಕು
ಅತಿ ಎಂಬುದನು ಬಿಡಬೇಕು; ಹಿತಮಿತ ಎಲ್ಲಕೂ ಇರಬೇಕು
ಮಾಯಾಜಾಲಕೆ ಮರುಳಾಗಿ ನಾವೇ ಅದರಲಿ ಸಿಲುಕಿದರೆ
ಪರಿಪರಿ ಆಟಕೆ ಬೆರಗಾಗಿ ನಾವೇ ಅದರಲಿ ಮುಳುಗಿದರೆ

ಶಾಪವೇ ಆಗ ಕಂಪ್ಯೂಟರ್...ಹೊರಗಿನ ಆಟಕೂ ಚಕ್ಕರ್ರು
ಸಿಕ್ಕರು ಯಾರೂ ಸ್ನೇಹಿತರು; ಹೇಳುವ ಕೇಳುವ ಜೊತೆಯವರು
ಬೇಕೇ ಬೇಕು ಹೊರಜಗವು; ಇರಲೇಬೆಕು ನಿಜದರಿವು

ಆಡಲೇ ಬೇಕು ಬಯಲಲ್ಲಿ; ಬೆರೆತರೆ ಸುಖವು ಬಾಳಲ್ಲಿ

ಈ ಒಂದು ಕವನ ಸಿದ್ಧವಾದಾಗ ಆನಂದಾತಿರೇಕದಿಂದ ಉಬ್ಬಿಹೋದೆ. "ಅಂತೂ ನಮಗೆಲ್ಲಾ ಬುದ್ಧಿ ಹೇಳಿದ್ದೀಯ. "ಮಗ ಮತ್ತೊಂದು ಮಾತು ಸೇರಿಸಿದ್ದ.

"ಅಮ್ಮ... ಮರಳಿನಿಂದ ಮರಳಿ ಮರಳಿಗೆ. ಅಜ್ಜಿ ಮೊದಲು ಅಕ್ಷರ ತಿದ್ದಿದ್ದು ಮರಳಿನಲ್ಲಿ... ಈಗ ಕಂಪ್ಯೂಟರ್‌ನಲ್ಲಿ ಇರೋದೂ ಸಿಲಿಕಾನ್ ಚಿಪ್ಸ್... ಹೊಸ ಚಿಗುರು ಹಳೆ ಬೇರು ಕೂಡಿರಲು ಅಕ್ಷರ ಸೊಬಗು. ಅಲ್ಲವಾ ಅಮ್ಮ?" ಮಗನ ತತ್ತ್ವಜ್ಞಾನ ನಗು ತರಿಸಿತ್ತು.

**ಶಾರದಾ ವಿ ಮೂರ್ತಿ**

ಹೊಸ ದಿಗಂತ ವಿಶೇಷಾಂಕ 2014

## ಯಡತೊರೆ ಕಲ್ಲೇಶಿಯೂ... ಕವನ ಸ್ಪರ್ಧೆಯೂ...

ತರಕಾರಿ ಹೆಚ್ಚುತ್ತಾ ಕೂತಿದ್ದೆ. ಯಜಮಾನರು ಬಚ್ಚಲು ಮನೆಯಲ್ಲಿ ಗಡ್ಡ ಕರೆಯುತ್ತಿದ್ದರು. ಕಾಲಿಂಗ್ ಬೆಲ್ಲಾಯ್ತು. ಬಾಗಿಲು ತೆರೆದರೆ... ಯಡತೊರೆ ಕಲ್ಲೇಶಿ. ಬಿಳಿ ಜುಬ್ಬ–ಪಾಯಿಜಾಮ, ಕುರುಚಲು ಗಡ್ಡ, ಹೆಗಲ ಚೀಲ... ಥೇಟ್ ಬುದ್ದಿ ಜೀವಿತರಹಾನೇ! ಗೇಟಿನತ್ತ ನೋಡಿದರೆ ಹೋಂಡಸಿಟಿ! ಸ್ವಲ್ಪ ಎಡವಟ್ಟು. ಬುದ್ದಿ ಜೀವಿಯೆತ್ತ? ಹೋಂಡಸಿಟಿಯೆತ್ತ? ಎಂದುಕೊಂಡೆ. 'ನಮಸ್ಕಾರ ಮೇಡಂನೋರ್ಗೆ. ಸಾರ್ ಅವ್ರ?' ಎಂದ.

'ಹೂಂ... ಹೂಂ ಇದಾರೆ. ಕೂತ್ಕೋಳಿ ಅಂದಹಾಗೆ ಹೇಗಿದ್ದೀರಿ? ಏನ್ ಮಾಡ್ಕೋಂಡಿದ್ದೀರಿ? ತುಂಬಾ ವರ್ಷ ಆಯ್ತು ನಿಮ್ಮನ್ನು ನೋಡಿ' ಎಂದೆ.

'ಹೂಂ ಮೇಡಂನೋರೆ. ಶಾನೆ ಬಿಜಿ ಆಗ್‌ಬಿಟ್ಟಿದೀನಿ. ಕನ್ನಡದ ಕೆಲ್ಸ ತುಂಬಾ ಹಚ್ಕೋಬಿಟ್ಟಿದೀನಿ. ಸಾರ್ ಹೆಂಗೌರೆ? ನೋಡಣಾ ಅಂತ ಬಂದೆ' ಎಂದ.

'ಶೇವ್ ಮಾಡ್ಕೋತಾ ಇದಾರೆ. ಕರಿತೀನಿ ಕೂತ್ಕೋಳಿ' ಎಂದು ಒಳ ಬಂದೆ. ಅದೇ ಸಮಯಕ್ಕೆ ಗ್ಯಾಸ್ ಮೇಲಿಟ್ಟಿದ್ದ ಕುಕ್ಕರ್ ಮುಚ್ಚಳ ಒತ್ತಡ ತಡೆಯಲಾರದೆ ರಪ್ಪೆಂದು ಮೇಲೆ ಹಾರಿತು, ಬೇಳೆ, ಅನ್ನ, ತರಕಾರಿಗಳ ಸಹಿತ! ಸೂರಿನತ್ತ ನೋಡಿದರೆ ಚಿತ್ರಚಿತ್ತಾರ! ಗ್ಯಾಸ್ ಆಫ್ ಮಾಡಿ ಬಚ್ಚಲು ಮನೆಗೋಗಿ 'ರೀ ನಿಮ್ಮನ್ನು ಹುಡುಕ್ಕೊಂಡು ಕಲ್ಲೇಶಿ ಬಂದಿದ್ದಾನೆ. ಹೋಂಡಾಸಿಟಿಯಲ್ಲಿ' ಎಂದು ಪಿಸುಗಿದೆ. ಗಡ್ಡಬೋಳಿಸುತ್ತಿದ್ದ ರೇಸರ್ ತುಸು ಆಳವಾಗಿ ಸವರಿ ಕೆನ್ನೆಯಲ್ಲಿ ಚಿಲ್ಲೆಂದು ರಕ್ತಚಿಮ್ಮಿತು. ಯಾಕೋ ಟೈಂ ಸರಿಯಿಲ್ಲವೆನಿಸಿತು. ಕುಕ್ಕರ್ ಸಿಡಿಯುವುದೂ... ರೇಸರ್ ಕೆನ್ನೆಕುಯ್ಯುವುದೂ... ಈ ಎಲ್ಲಾ ಉತ್ಪಾತಗಳು ಒಟ್ಟಿಗೇ... 'ಭಗವಂತ' ಎಂದು ಒಳಹೋದೆ.

ಕೆಂಪು–ಕೆಂಪು ರಕ್ತಾಂಕಿತ ಕೆನ್ನೆಯನ್ನು ಬಿಳೀ–ಬಿಳಿ ಟವೆಲ್‌ನಲ್ಲಿ ಒರೆಸುತ್ತಾ ಹಾಲಿಗೆ ಬಂದ 'ಸಾರು' 'ಓ ಯೆಡತೊರೆ ಕಲ್ಲೇಶಿ, ಏನ್ ಸಮಾಚಾರ್?' ಎಂದರು.

ಕಲ್ಲೇಶಿ 'ಏನೋ... ಹಿಂಗೆ ನಿಮ್ಮ ನೋಡವಾ ಅಂತ ಬಂದೆ, ನೀವು ನಮ್ಮ ಗುರುಗಳು ಅಲ್ಲವ್ರ?' ಎಂದ.

'ಅದ್ಸರಿ ಕಣಯ್ಯಾ ಹೆಂಗ್ ನಡೀತಿದೆ ನಿಮ್ಮ ತಾಲ್ಲೋಕ್ ಲೆವೆಲ್ ಬುದ್ದಿ ಜೀವಿಗಳ ಸಂಘ?' ಅಂದ್ರು.

'ಅದ್ನೇ ಹೇಳಣ ಅಂತಾ ಬಂದೆ ಸಾರು. ಈಗ ಭೋ ದೊಡ್ಡದಾಗಿ ಒಂದು ಕಾರ್ಯಕ್ರಮ ಮಡಿಕ್ಕಂಡಿದ್ದೀವಿ. ಕನ್ನಡದ ಕೆಲಸ. ನೀವೆ ಮುಂದೆ ನಿಂತು ನಡೆಸಿಕೊಡಬೇಕು' ಎಂದ.

'ಅಲ್ಲ ಕಲ್ಲೇಶಿ... ನೀನು... ಕನ್ನಡದ ಕೆಲಸ' ಅನುಮಾನಿಸಿದರು 'ಸಾರು'!

'ಏ, ನಾ ನಿಮ್ಮ ಸ್ಟೂಡೆಂಟ್ ಅಲ್ಲವ್ರ? ನಾನು, ಕನ್ನಡ ಮೇಜರ್ ಅಲ್ಲವ್ರ ಓದಿದ್ದು?' ಅಂದ. 'ನೀನು ಕನ್ನಡ ಪಾಸ್ ಮಾಡಿದ್ಯ? ನಂಗೇನೋ ಹಂಗೆ ಜ್ಞಾಪಕ ಇಲ್ಲವಲ್ಲ' ಎಂದರು 'ಸಾರು' 'ಐ ಬುಡಿ ಸಾರು. ಅದ್ಯಾವ್ ನನ್ಮಗ ಪಾಸ್ ಮಾಡಿ ಉದ್ದಾರ ಆಗಿದ್ದಾನೆ? ರ್‍ಯಾಂಕ್ ಬಂದಿರೋ ನನ್ಮಕ್ಕೆಲ್ಲ ಕನ್ನಡದಕೆಲ್ಸ ಮಾಡ್‌ತಾರ? ಅದ್ಕೆ ಮನಸ್ಸಿರಬೇಕು. ಅಷ್ಟೇ' ಎಂದ.

'ನಿಜ ನಿಜ. ಈಗ ನನ್ನಿಂದೇನಾಗಬೇಕು ಹೇಳು' ಎಂದರು 'ಸಾರು' ಉಗುಳು ನುಂಗುತ್ತಾ. 'ಅದೇ ಸಾರು, ಈ ಸರ್ತಿ ರಾಜ್ಯಮಟ್ಟದಾಗೆ ಭೋ ದೊಡ್ಡದಾಗಿ ಒಂದು ಕವನ ಸ್ಪರ್ದೆ ಮಡಗಿದ್ದೀನಿ. ಎಲ್ಲಾ ಪೇಪರ್‍ಗ್ಳ ಕೊಟ್ಟದೀನಿ. ಬೇಜಾನ್ ಕವನಗಳು ಬಂದಿದಾವೆ. ನೀವು ತೀರ್ಪುಗಾರರಾಗ್ತೀರಾ ಕೇಳಾಣ ಅಂತ ಬಂದೆ' ಎಂದ. ಹಿರಿಹಿರಿ ಹಿಗ್ಗಿದ 'ಸಾರು' 'ಅದಕ್ಕೇನಯ್ಯ? ಆಗಣ ಬಿಡು. ಎಲ್ಲಿದೆ ಕವನಗಳೆಲ್ಲ?' ಎಂದ್ರು.

'ಸಾರು ತರ್ತೀನಿ. ಕಾರ್‌ನಲ್ಲಿ ಮಡಗಿದ್ದೀನಿ. ಮುನ್ನುಡೀನು ನೀವೆ ಬರೀಬೇಕು. ಮೂರು ಪ್ರೈಜು. ಒಂದು ಸಮಾಧಾನಕರ ಭೋಮಾನ. ತೀರ್ಮಾನ ಮಾಡ್ಬುಡಿ, ಜನವರಿ ಇಪ್ಪತ್ತಾರಕ್ಕೆ ಮೈಸೂರಿನ ಕಲಾಮಂದಿರದಲ್ಲಿ ಅದ್ದೂರಿ ಫಂಕ್ಷನ್. ಮಿನಿಸ್ಟ್ರು ಕರಸ್ತೀನಿ ಸಾರ್. ನೀವು ಬರಲೇಬೇಕು' ಎಂದ.

'ಆಯ್ತು ಆಯ್ತು, ಎಷ್ಟು ಕವನಗಳು ಬಂದಿದೆ?' ಎಂದರು ಕುತೂಹಲದಿಂದ,

'ನೂರ ಎಂಭತ್ತು' ಎಂದ ಚುಟುಕಾಗಿ.

'ಇದೆಲ್ಲಾ ಮೌಲ್ಯ ಮಾಪನ ಮಾಡಬೇಕಾದರೆ ಕನಿಷ್ಟ ಹದಿನೈದು ದಿನವಾದರೂ ಬೇಕು' ಎಂದರು ಸಾರು.

ಸ್ವಲ್ಪ ಉಗುಳು ನುಂಗುತ್ತಾ 'ಅದೂ... ಒಂದು ಕೆಲ್ಸ ಮಾಡಿ ಸಾರು, ಮೊದಲನೇ ಭೋಮಾನ ಯೆಡತೊರೆ ನಿಂಗಪ್ಪ ಅನ್ನೋರಿಗೆ ಕೊಟ್‌ಬುಡಿ, ಹುಡುಗ ಭೋಚಂದಾಗಿ ಬರೆದಿದ್ದಾನೆ. ತಾಲ್ಲೋಕ್ ಬೋರ್ಡ್ ಪಂಚಾಯಿತಿಯ ಮೆಂಬರು ಅವ್ನು. ಇನ್ನೂ ಮೂರ್‍ನೆ ಭೋಮಾನ ಮೈಸೂರಿನ ಜಯಮ್ಮ ಅನ್ನೋರ್‍ಗೆ. ಎರಡ್ನೇದು ಯಾರಿಗೆ ಅಂತ ನಿಕ್ಕಿ ಆಗಿಲ್ಲ. ಅದ್‌ಬೇಕಾರೇ ಯಾರ್‌ಗಾರೂ ಕೊಟ್ಕಳಿ. ಏನಾರೂ... ಯಾರಾರೂ ಬಂದ್ರೆ ನಾ ಹೇಳ್ತೀನಿ ಸಾರು' ಎಂದ. 'ಸಾರು'ಗೆ ತಲೆ ಗಿರ್‍ರನೆ ತಿರುಗಿತು. 'ಅಯ್ಯೋ ನೀ ಏನ್ ಹೇಳ್ತಿದಿಯಾ ಮಾರಾಯ? ನೀನೇ ಬಹುಮಾನ ತೀರ್ಮಾನ ಮಾಡೋದಾದ್ರೆ ನಾನು ಯಾಕೆ ತೀರ್ಪುಗಾರನಾಗ್ಲಿ?' ಎಂದರು. 'ಅದು ಹಂಗಲ್ಲ ಸಾರು, ಹಿಟ್ಟನ್ನು ಅನ್ನಾನೂ ಒಂದೇ ಮಾಡಕ್ಕಾಯ್ತದ?' ಎಂದ. ಕಕ್ಕಾಬಿಕ್ಕಿಯಾಗಿ 'ಹಂಗಂದ್ರೆ ಏನಯ್ಯ?' ಎಂದ್ರು 'ಸಾರು'. ಕಲ್ಲೇಶಿ ಈಗ ನಿಧಾನವಾಗಿ ವಿವರಿಸ ತೊಡಗಿದ. 'ನಿಮ್ಗೆ ಇದೆಲ್ಲಾ ಅರ್ಥವಾಗೋಲ್ಲಾ ಸಾರು. ಒಂದು ಫಂಕ್ಷನ್ ಮಾಡೋಕೆ ಎಷ್ಟು ಖರ್ಚು ಬತ್ತದೆ

ಏನ್ ಕಥೆ? ಸುಮ್ನೆ ಕಥೆ, ಕವನ ಬರದ್ಬುಟ್ರೆ ಕನ್ನಡದ್ ಕೆಲ್ಸ ಆಗೋಯ್ತು? ನೋಡಿ ಸಾರ್ ಮಿನಿಸ್ಟ್ರು ಕರೆಸ್ ಬೇಕು. ಎಲ್ಲಾರ್ಗೂ ನೆನಪಿನ ಕಾಣಿಕೆ ಕೊಡಬೇಕು. ಊಟ ಹಾಕಿಸಬೇಕು. ಹಾರ–ತುರಾಯಿ, ಸರ್ಟಿಫಿಕೇಟು... ಇದಕೆಲ್ಲ ದುಡ್ಡು ಒಸಿ ಖರ್ಚಾಯ್ತದ? ಇದ್ನೆಲ್ಲ ಯಾರಪ್ಪ ಕೊಡ್ತಾನೆ ಸಾರು?' ಎಂದ ಖಾರವಾಗಿ. 'ಸಾರು' ಮುಖ ಕೆಂಪಗಾದದ್ದನ್ನು ಕಂಡು 'ಕ್ವಾಪ ಮಾಡ್ಕೋಬೇಡಿ ಸಾರು. ಈಗ ಮೊದಲನೇ ಭೋಮಾನದವ್ನು ಮೂವತ್ತು ಸಾವಿರ ಕೊಟ್ಟವ್ನೆ. ಮೂರನೇ ಭೋಮಾನದ ಜಯಮ್ಮ ಹತ್ತುಸಾವಿರ ಕೊಟ್ಟವಳೆ. ಎರಡನೇ ಭೋಮಾನಕ್ಕೆ ಇಪ್ಪತ್ತು ಸಾವಿರ ಆಯ್ತದೆ. ಇನ್ನೂ ಯಾರೂ ಬಂದಿಲ್ಲ. ಇದೆಲ್ಲ ನಮ್ ಖರ್ಚು ಹೊಡಕೊಂಡ್ಹೋಯ್ತದೆ. ಒಟ್ಟು ನೂರ ಎಂಭತ್ತು ಕವನ ಬಂದದೆ. ಎಲ್ಲಾರೂ ನೂರು ನೂರು ರೂಪಾಯಿ ಕೊಟ್ಟವ್ರೆ. ಅದು ಬುಕ್ ಪ್ರಿಂಟ್ ಆಗಕ್ಕೆ ಸಾಕು, ಸರ್ಕಾರ ಮುನ್ನೂರು ಪ್ರತಿ ಲೈಬ್ರರಿಗೆ ಅಂತ ಕೊಂಡುಕೊಳ್ಳುತ್ತೆ. ಅದು ನಮ್ಮ ಫ್ರಾಫಿಟ್ಟು, ಇನ್ನೂ... ಸನ್ಮಾನದ ದುಡ್ಡು ನಮಗೇ ಉಳೀತದೆ' ಎಂದ.

'ಸಾರು' ಅಯೋಮಯವಾಗಿ 'ಸನ್ಮಾನದ ದುಡ್ಡಾ? ಅದ್ಯಾವುದು? ನಿಂಗ್ಯಾಕೆ ಅದು ಉಳಿಯುತ್ತೆ?' ಎಂದರು.

'ಸಾರ್ ಹತ್ತು ಜನಕ್ಕೆ ಇದೇ ವೇದಿಕೇಲಿ ಸನ್ಮಾನ ಇಟ್ಟುಕೊಂಡಿದೀವಿ. ಎಂಟು ಜನ ಸೆಟ್ಟಾಗೌರೆ. ತಲೆಗೆ ಹತ್ತು ಸಾವಿರ ಕೊಡ್ತಾರೆ. ಸುಮ್ನೇನ ಮತ್ತೆ? ಶಾಲು, ಹಾರ, ಹಣ್ಣಿನ ತಟ್ಟೆ, ಸನ್ಮಾನ ಪತ್ರ... ಏಟೊಂದು ಹೊಗಳಬೇಕು? ಒಂದು ಸನ್ಮಾನ ಪತ್ರ ಬರಸಕ್ಕೆ ಮುನ್ನೂರು ರೂಪಾಯಿ ಖರ್ಚಾಯ್ತದೆ. ಮಾಡಿದ್ಮೇಲೆ ಎಲ್ಲ ಅಚ್ಚುಕಟ್ಟಾಗೆ ಮಾಡ್ಬೇಕು ಅಲ್ಲವ್ರಾ?' ಎಂದ.

'ಅಂದ್ರೆ ದುಡ್ಡುಕೊಟ್ಟು ಸನ್ಮಾನ ಮಾಡಿಸ್ಕೋತ್ತಾರ?' ಎಂದರು 'ಸಾರು'.

'ಮತ್ತೇನ್ ಸಾರ್ ಸುಮ್ನೆ ಆಯ್ತಾ? ಸಾರು ದುಡ್ಡು ಎಲ್ಲರ ತಾವ ಇರ್ತದೆ. ಹತ್ತು ಸಾವಿರ ನಂತಾವು ಐತೆ ನಿಮ್ ತಾವು ಐತೆ. ಸಾವಿರಾರು ಜನರೆದುರು ಸನ್ಮಾನ ಸುಮ್ನೆ ಆಯ್ತಾ? ದುಡ್ಡು ಎದ್ದು ಬಂದು ಸನ್ಮಾನ ಮಾಡುತ್ತಾ? ಅದಕ್ಕೆ ನಮ್ಮಂತೋರು ಬೇಡವಾ?' ಎಂದ. 'ಸಾರು' ಸುಸ್ತಾಗಿ ಕುಳಿತುಬಿಟ್ಟರು. ಮಾತನ್ನು ಮುಂದುವರೆಸುತ್ತಾ ಕಲ್ಲೇಶಿ

'ಸಾರು, ನಿಮ್ಗು ಒಂದು ಸನ್ಮಾನ ಮಡಿಕಂಡೆ ಬಿಡೋಣ. ಬೇರೇವ್ರಾದ್ರೆ ಹತ್ತು ಸಾವಿರ. ನೀವ್ ನಮ್ ಗುರುಗಳು, ಎಂಟೇ ಸಾವ್ರಕ್ಕೆ ಮಾಡ್‌ಬಿಡಾಣ' ಎಂದ ಕಲ್ಲೇಶಿ.

'ಬೇಡಕಣಯ್ಯ, ನಂಗೇ ಇರೋ ಮಾನಾನೇ ಸಾಕು. ಎಂಟು ಸಾವಿರ ಕೊಟ್ಟು ನಾನು ಸನ್ಮಾನ ಮಾಡಿಸಿಕೊಳ್ಳೋದಿಲ್ಲ'. ಎಂದರು ಸಾರು.

‘ಒಂದು ನಿಮಿಷ ಕವನಗಳ ತಂದ್ಬುಡ್ತೀನಿ’ ಎಂದ ಕಲ್ಲೇಶಿ ಎರಡು ದೊಡ್ಡ ಕೈ ಚೀಲಗಳನ್ನು ಕಾರಿನಿಂದ ಹೊರಲಾರದೆ ಹೊತ್ತುಕೊಂಡು ಬಂದ. ಒಂದು ಚೀಲದ ಮೇಲುಗಡೆಗೆ ಪ್ರತ್ಯೇಕವಾಗಿ ಎತ್ತಿಟ್ಟಿದ್ದ ಎರಡು ಕವನಗಳನ್ನು ತೆಗೆದುಕೊಟ್ಟು ‘ಸಾರು ಇದು ಮೊದಲನೇ ಭೋಮಾನದ್ದು. ಇದು ಮೂರನೇ ಭೋಮಾನದ್ದು’ ಎಂದ. ‘ಸಾರು’ ನಿತ್ರಾಣರಾಗಿ ಒಂದು ಕವನದ ಮೇಲೆ ಕಣ್ಣಾಡಿಸಿ ಕೋಪದಿಂದ ‘ಅಲ್ಲಯ್ಯ ಇದು ನರಸಿಂಹಸ್ವಾಮಿ ಕವನ. ಹೆಸರು ಬದಲಾಯಿಸಿ ಬದಲಾಯಿಸಿ ಬಿಟ್ರೆ ಕವನ ಬೇರೆ ಆಗುತ್ತಾ?’ ಎಂದು ರೇಗಿದರು. ಅವನು ಶಾಂತವಾಗಿ ‘ಅದಕ್ಕೆ ಸಾರ್ ನಿಮ್ಗೆ ತಿಳುವಳಿಕೆ ಕಡಿಮೆ ಅನ್ನೋದು. ನಿಮ್ಗೆ ಅಷ್ಟು ಗೊತ್ತಾಗ್ತಿದ್ರೆ ನೀವ್ಯಾಕೆ ಇನ್ನೂ ಸ್ಕೂಟರಲ್ಲಿ ತಿರುಗ್ತಾ ಇದ್ರಿ. ನಂಥರಾ ಹೋಂಡ ಸಿಟೀಲಿ ಓಡಾಡ್ತಿದ್ರಿ. ಅಲ್ಲ ಸಾರ್... ನಾನೇನು ದಡ್ಡ ಅಂದುಕೊಂಡ್ರ ಹೆಂಗೆ? ನಾನೂ ಓದಿದೀನಿ ನರಸಿಂಹಸ್ವಾಮಿ ಕವನವಾ. ಅದರಲ್ಲಿ ಏನೈತೇ? ‘ನವಿಲೂರಿನೊಳಗೆಲ್ಲ ನೀನೆ ಬಲು ಚೆಲುವೆ’. ಇಲ್ಲೇನೈತೆ? ‘ಸಿಂಗಾನಲೂರಿನೊಳಗೆಲ್ಲಾ ನೀನೇ ಬಲು ಚೆಲುವೆ’. ಸಾರು, ನವಿಲೂರು ಎಲ್ಲೈತೇ? ಸಿಂಗಾನಲ್ಲೂರು ಎಲ್ಲೈತೆ? ಅದು ಅಣ್ಣಾವ್ರ ಊರು. ಎಷ್ಟೊಂದು ಭಗೋಳಿಕ ವ್ಯತ್ಯಾಸ ಐತೆ. ಇನ್ನೂ ಮುಂದೆ ಕೇಳಿ ಸಾರ್. ‘ಬೆಳ್ಳ ಬೆಳ್ಳಗೆ, ತೆಳ್ಳ ತೆಳ್ಳಗೆ ನೀನು...’ ನವಿಲೂರಿನ ಹುಡುಗಿ ಬೆಳ್ಳ ಬೆಳ್ಳಗೆ, ತೆಳ್ಳ ತೆಳ್ಳಗೆ ಇದ್ರೆ, ಸಿಂಗಾನಲ್ಲೂರಿನ ಹುಡುಗಿ ಹಂಗಿರಬಾರದೂ ಅಂತ ಕಾನೂನೈತಾ? ಲಕ್ಷಣವಾಗಿರೋ ಹುಡುಗೀರ್ನ ಎಲ್ಲ ಕವಿಗಳು ಹಂಗೆ ವರ್ಣನೆ ಮಾಡೋದು. ಏನು ತಿಳೀವಲ್ದು ನಿಮ್ಗೆ. ಸುಮ್ನೆ ಕೂಗಾಡ್ತೀರ. ನೋಡಿ ಸಾರ್ ಸುಮ್ನೆ ನಾಲ್ಕು ಒಳ್ಳೆಮಾತು ಬರ್ದು ಪುಸ್ತಕಕ್ಕೆ ಮುನ್ನುಡಿ ಬರೀರಿ. ಎರಡನೇ ಭೋಮಾನಾ ಯಾರಾದ್ರು ಕೇಳಿದ್ರೆ ಫೋನ್ ಮಾಡ್ತೀನಿ. ನಿಮ್ಗೆ ಸನ್ಮಾನ ಬೇಕಾ ಬೇಡ್ವ ಯೋಚನೆ ಮಾಡಿ ತಿಳ್ಸಿ. ಲಕ್ಷ ದುಡಿಯೋದು ಮುಖ್ಯ ಅಲ್ಲ ಸಾರ್, ಸನ್ಮಾನ ಮುಖ್ಯ’ ಎಂದ ಕಲ್ಲೇಶಿ ಏಳುತ್ತಾ. ‘ಬತ್ತೀನಿ ಸಾರ್. ನಾನು ಪ್ರೆಸ್ ಮೀಟ್ಗೆ ಹೋಗ್ಬೇಕು’ ಎಂದು ಹೊರಟು ಬಿಟ್ಟ.

ನವಿಲೂರಿಗೂ ಸಿಂಗಾನಲ್ಲೂರಿಗೂ ಇರುವ ಭೌಗೋಳಿಕ ವ್ಯತ್ಯಾಸಗಳನ್ನು ಲೆಕ್ಕ ಹಾಕುವವರಂತೆ ‘ಸಾರು’ ಕಕರುಮಕರಾಗಿ ಕುಳಿತಿದ್ದರು.

**ಉಷಾ ನರಸಿಂಹನ್**

ಸ್ನೇಹಬಳಗ 2014

# ನಮೋ ನಮೋ ಕಲ್ಪತರುವೇ!

“ಏನ್ರೀ, ನಿಮಗೆ ಕಣ್ಣು ಕಾಣ್ಸಲ್ವ? ಸ್ವಲ್ಪ ತಲೆ ಎತ್ತಿ ಮೇಲೆ ನೋಡ್ರಿ. ನಿಮ್ಮ ತೆಂಗಿನಮರದ ಗರಿ ಎಲ್ಲಾ ಒಣಗಿ, ಸತ್ತು ಜೇಡರ ಬಲೆಗೆ ಸಿಕ್ಕಿ ಒಂಟಿ ಕಾಲಲ್ಲಿ ನೇತಾಡೋ ಜಿರಳೆ ತರ ನೇತಾಡ್ತಾ ಇವೆ. ತೆಂಗಿನಕಾಯಿ ಗೊಂಚಲು ಒಣಗಿ ಈಗ್ಲೋ ಆಗ್ಲೋ ಕೊಂಡಿ ಕಳಚಿಕೊಂಡು ನೆಲಕ್ಕೆ ಹಾಕ್ಕೋರ್ತೀವಿ ಅಂತಿವೆ. ಅವೇ ಪ್ರಾಣ ಕಳ್ಕೋತಾವೋ ಅಥವ ನಮ್ಮ ಪ್ರಾಣ ತೆಗೀತಾವೋ ಗೊತ್ತಿಲ್ಲ. ದಿನಾ ಹೆಲ್ಮೆಟ್ ಹಾಕ್ಕೊಂಡು ಓಡಾಡಿ ಸಾಕಾಗಿಹೋಯ್ತು. ಇನ್ನೊಬ್ರಿಗೆ ಕಷ್ಟ ಕೊಡಬಾರದು ಅನ್ನೋ ಪರಿಜ್ಞಾನ ಬೇಡವೇನ್ರೀ?”

ಪಾರು ಹೊರಗೆ ಬರೋದನ್ನೇ ಕಾಯುತ್ತಿದ್ದ ಸುಬ್ಬಿ, ಪಾರುವನ್ನು ಕಂಡ ಕೂಡಲೆ ಕ್ಲಾಸ್ ತೊಗೋಳೋಕೆ ಶುರುಮಾಡಿದಳು. ತಮ್ಮ ಮನೆಯ ಮುಂದೆ ಒಂದಾದರೂ ಕಲ್ಪವೃಕ್ಷ ರಾರಾಜಿಸಲಿ, ನಿತ್ಯವೂ ಅದರ ದರ್ಶನ ಭಾಗ್ಯ ತನ್ನ ಕಂಗಳಿಗೆ ದೊರಕಲಿ ಎಂದು ಅತ್ಯಂತ ಪ್ರೀತಿಯಿಂದ  ತೆಂಗಿನ ಸಸಿಯನ್ನು ತಂದು ನೆಟ್ಟು ಬೆಳೆಸಿದ್ದಳು ಪಾರು.

ಆದರೆ ದಿನ ಬೆಳಗಾದರೆ ಪಕ್ಕದ ಮನೆ ಸುಬ್ಬಿ ಈ ಮರದ ಸಲುವಾಗಿಯೇ ಕಾಲ್ಕೆರೆದು ಜಗಳಕ್ಕೆ ಬರುತ್ತಿದ್ದಳು.

“ನಿಮ್ಮ ತೆಂಗಿನಕಾಯಿ ಬಿದ್ದು ನಮ್ಮ ಕಿಟಕಿ ಗಾಜು ಒಡೆದು ಹೋಯ್ತು. ಮರಗೆಲಸದವನನ್ನು ಕರೆದು ಗಾಜು ಹಾಕ್ಸಿ ಕೊಡ್ತೀರೋ, ಅಥವ ಕಂಪ್ಲೈಂಟ್ ಕೊಡ್ಬೇಕೋ?”

“ನಿಮ್ಮ ತೆಂಗಿನಗರಿ ಬಿದ್ದು ನನ್ನ ಆರು ಚೆಟ್ಟಿಗಳು ನೆಲ ಕಚ್ಚಿದವು. ನಿಮ್ಮ ಹಾಗೇ ನಿಮ್ಮ ಮರಕ್ಕೂ ನಮ್ಮನ್ನು ಕಂಡರೆ ಹೊಟ್ಟೆಕಿಚ್ಚು! ಮೊನ್ನೆ ತಾನೆ ಒಂದೊಂದು ಗಿಡಕ್ಕೆ ಇನ್ನೂರೈವತ್ತು – ಮುನ್ನೂರು ಕೊಟ್ಟು ತಂದಿದ್ದೆ. ಎಲ್ಲಾ ನಿರ್ನಾಮ ಆಯ್ತು. ಮೊದ್ಲು ಆ ಹಣಾನ ಎದುರಿಗಿಟ್ಟು ಮತ್ತೆ ಮಾತಾಡಿ.”

“ಅಲ್ರೀ, ನಾನು ತುಳಸೀಗಿಡಕ್ಕೆ ಪೂಜೆ ಮಾಡೋದು ನಿಮ್ಗೆ ಸಹಿಸಕ್ಕಾಗಲ್ವ? ಅದಕ್ಕೇನೇ ಈ ಮರದ ತುಂಬಾ ಒಣಗಿಕೊಂಡಿರೋದನ್ನೆಲ್ಲಾ ಹಾಗೇ ಬಿಟ್ಟಿದ್ದೀರಿ ಅಲ್ವಾ? ಗರಿನೋ, ಕಾಯೋ ತಲೆ ಮೇಲೆ ಬಿದ್ದು, ನಾನು ಸತ್ತುಹೋಗಬೇಕೂಂತ ನಿಮ್ಮ ಆಸೇನಾ? ಎಂಥಾ ಕ್ರೂರಿಕಣ್ರೀ ನೀವು!”

ಎಂಬಿತ್ಯಾದಿ ಆಪಾದನೆಗಳನ್ನು ಕೇಳೀ ಕೇಳೀ ಪಾರು ಸುಸ್ತಾಗಿಬಿಟ್ಟಿದ್ದಳು. ಆದರೇನು? ಅವಳನ್ನು ಈ ಸಂಕಷ್ಟದಿಂದ ಪಾರುಮಾಡುವ ಕರುಣಾಮಯಿ ಕಾಣೆಯಾಗಿದ್ದ.

"ತೆಂಗಿನ ಕಾಯಿ ಕೊಯ್ಯುವವನನ್ನು ಎಲ್ಲಿಂದಾದರೂ ಕರ್ಕೊಂಡು ಬನ್ನೀಪ್ಪ. ಅವನು ಕೇಳಿದಷ್ಟು ಕೊಡ್ತೀನಿ. ನಿಮಗೂ ಏನಾದರು ಭಕ್ಷೀಸು ಕೊಡ್ತೀನಿ" ಎಂದು ಕಂಡಕಂಡವರ ಬಳಿ ತಗ್ಗೀ ಬಗ್ಗೀ ಗೋಗರೆದು, ಗೋಡಂಬಿಯಂತೆ ಬಗ್ಗಿ ಹೋಗಿದ್ದಳು ಪಾರು. ಆದರೂ ಕೊಯ್ಯುವ ಕರುಣಾಳು ದೊರಕಿರಲಿಲ್ಲ.

ಈ ಮೊದಲು ಮರ ಹತ್ತಿ ತೆಂಗಿನಕಾಯಿ ಕೊಯ್ಯುತ್ತಿದ್ದವನು, ಈಗ ಮರಕ್ಕಿಂತ ಮೇಲೇರಿ, ಧರೆಗೆ ಗುಡ್ ಬೈ ಹೇಳಿ, ಯಾರ ಕೈಗೂ ಸಿಗದೆ ಸ್ವರ್ಗವಾಸಿಯಾಗಿದ್ದ. ಅವನ ಮಕ್ಕಳಿಗೆ, ಮರ ಹತ್ತುವುದಿರಲಿ, ತೆಂಗಿನ ಮರದ ಗುರುತೇ ಇರಲಿಲ್ಲ! ಅವರಿಗೆ ಕಾರ್ಖಾನೆ, ಕಂಪನಿಗಳಲ್ಲಿ ಕೆಲಸ. ಮರ ಹತ್ತುವುದಿರಲಿ, ಅದನ್ನು ಕಣ್ಣೆತ್ತಿ ನೋಡುವುದೂ ಕೂಡಾ ಮಹಾಪರಾಧ ಎಂದು ಭಾವಿಸಿರುವ 'ಫಾರ್ವರ್ಡ್'(!) ಜನಾಂಗ ಅದು. ಹಾಗಾಗಿ ತಂದೆ ಸತ್ತ ಕ್ಷಣದಿಂದ, ಮರ ಹತ್ತಲು ಕರೆದವರಿಗೆಲ್ಲಾ "ಮರವನ್ನು ಕಡಿಸಿಬಿಡಿ" ಎಂಬ ಉಚಿತ ಸಲಹೆಯನ್ನು ನೀಡುತ್ತಿದ್ದರು ಅವರು.

ಅಂತಹ ಮಾತುಗಳನ್ನು ಕೇಳಿದಾಗಲೆಲ್ಲಾ ಪಾರು ಕೋಪದಿಂದ ಗುಟುರು ಹಾಕಿ, "ಬದುಕಿರೋ ಕಲ್ಪವೃಕ್ಷವನ್ನು ಯಾರಾದರೂ ಕಡೀತಾರಾ? ಬೆಳಗಾಗೆದ್ದು ನೋಡೋಣ ಅಂದ್ರೆ ಕಾಮಧೇನು ಕೂಡಾ ಇಲ್ಲ. ಸೂರ್ಯದೇವನನ್ನಾದ್ರೂ ನೋಡೋಣ ಅಂದ್ರೆ, ಮನೆ ಸುತ್ತ ಮುತ್ತ ಹುಟ್ಟಿಕೊಂಡಿರೋ ಅಪಾರ್ಟ್ಮೆಂಟ್ ನಡುವೆ ಅವನು ಕಾಣೋದೇ ಇಲ್ಲ. ಇನ್ನೇನು ಮತ್ತೆ? ಬೆಳಗಾಗೆದ್ದು ಈ ಸುಡುಗಾದು ಸುಬ್ಬಿ ಮುಖ ನೋಡ್ಬೇಕಾ?" ಎನ್ನುತ್ತಾ, ಮನೆ ತುಂಬಾ ಅಸಮಾಧಾನದಲ್ಲಿ ಕಾಲುಸುಟ್ಟ ಬೆಕ್ಕಿನ ಹಾಗೆ ತಿರುಗುತ್ತಿದ್ದಳು.

"ಮರ ನೆಟ್ಟು ನಾಡು ಉಳಿಸಿ"

"ತಾಯಿಗೊಂದು ಮಗು. ಮನೆಗೆ ಒಂದು ಮರ"

ಎಂಬಿತ್ಯಾದಿ ಜಾಹೀರಾತುಗಳನ್ನು ಟಿ.ವಿ. ಮುಂದೆ ಠೀವಿಯಲ್ಲಿ ಕುಳಿತು ನೋಡಿದ್ದಳು. ದಾರಿಯಲ್ಲಿ ಹೋಗೋ ಲಾರಿಗಳ ಹಿಂಬದಿಯಲ್ಲಿ, ರಿಕ್ಷಾದ ಮುಂಬದಿಯಲ್ಲಿ ಓದಿದ್ದಳು. ಮರಕ್ಕಿಂತ ಹೆಚ್ಚಾಗಿ ದಾರಿಯ ಬದಿಯಲ್ಲಿ ಉದ್ದಕ್ಕೂ ನೆಟ್ಟಿದ್ದ ಫಲಕಗಳಲ್ಲಿ ಅದನ್ನೇ ಕಂಡಿದ್ದಳು. ಆಗಲೇ ಅದನ್ನು ತಾನು ಅನುಷ್ಠಾನಕ್ಕೆ ತಂದೇ ತರುತ್ತೇನೆಂದು ಸಂಕಲ್ಪಿಸಿದಳು. ಆದ್ದರಿಂದಲೇ ತುತ್ತ ತುದಿಯಿಂದ ಬೇರಿನವರೆಗೆ ಸರ್ವಾಂಗಗಳೂ ಉಪಯುಕ್ತವಾದ ಕಲ್ಪ ತರುವನ್ನೇ ತರಾತುರಿಯಿಂದ ತಂದು ನೆಟ್ಟಿದ್ದಳು.

ಈಗ ನೋಡಿದರೆ "ಮರ ಮಾರಣಾಂತಿಕ" ಎಂತು ಸುಬ್ಬಿ ಹಾರಾಡುತ್ತಿದ್ದಾಳೆ. ಶುದ್ಧ ಆಮ್ಲಜನಕವನ್ನು ನೀಡಿ, ಪ್ರಾಣ ಉಳಿಸುವ ಮರ, ಶಿರದ ಮೇಲೊರಗಿ

ಮರಣ ಮೃದಂಗವನ್ನು ಬಾರಿಸುವ ಯಮನ ಬಂಟ ಎಂದು ಚೀರಾಡುತ್ತಿದ್ದಾಳೆ. ಕಲ್ಪತರುವಿನ ಉಪಯುಕ್ತವಾದ ಒಂದೊಂದು ಅಂಗವೂ ಒಂದೊಂದು ಘೋರ ಅಸ್ತ್ರವೆಂದು ಸಾಬೀತು ಪಡಿಸುತ್ತಿದ್ದಾಳೆ. ತೆಂಗಿನ ಕಾಯಿ ಕಲ್ಲು ಗುಂಡಂತೆ ! ತೆಂಗಿನ ಗರಿ ಭರ್ಜಿ ಅಂತೆ! ಅವೆಲ್ಲವೂ ಅವಳ ಪ್ರಾಣವನ್ನು ತೆಗೆಯಲಿಕ್ಕಾಗಿಯೇ ಕಾದುಕೊಂಡಿವೆಯಂತೆ!

ಆದರೆ ಇಷ್ಟೆಲ್ಲಾ ರಾದ್ಧಾಂತ ಮಾಡುವ ಸುಬ್ಬಿ, ತನ್ನ ಮನೆಯ ಅಂಗಳದಲ್ಲಿ ಬಿದ್ದ ಗರಿಗಳನ್ನಾಗಲೀ, ಕಾಯಿಗಳನ್ನಾಗಲೀ ಎಂದಿಗೂ ಪಾರುವಿಗೆ ತಲುಪಿಸಿಲ್ಲ. ಕಾಯಿಯಲ್ಲಿ ಕೊಬ್ಬರಿ ಮಿಠಾಯಿ ಮಾಡಿ ತಿಂದು, ಗರಿಯಲ್ಲಿ ಪೊರಕೆ ಮಾಡಿ ಗುಡಿಸಿ ತನ್ನ ಮನೆಯನ್ನು ಶುದ್ಧವಾಗಿಟ್ಟುಕೊಂಡಿದ್ದಾಳೆ. ಅವಳ ಅಂಗಳದಲ್ಲಿ ಬಿದ್ದ ಹಕ್ಕಿಯ ಹಿಕ್ಕೆಯೂ ಅವಳದೇ ಅಂತೆ!! ಅವಳ ಪುಣ್ಯಕ್ಕೆ ಮರವೂ ಅವಳ ಮನೆಯ ಕಡೆಗೇ ವಾಲಿಕೊಂಡಿತ್ತು. ಹಾಗಾಗಿ ಮರದಿಂದ ದೊರೆಯುತ್ತಿದ್ದ ಕಾಯಿ, ಗರಿಗಳಲ್ಲಿ ಸಿಂಹ ಪಾಲು ಸುಬ್ಬಿಯದೇ ಆಗಿತ್ತು.

ಅದೊಂದು ದಿನ ಪಾರುವಿನ ಕೆಲಸದ ಚೆನ್ನಿ, ಒಬ್ಬ ತೆಂಗಿನ ಕಾಯಿ ಕೊಯ್ಯುವನನ್ನು ಕರೆ ತಂದಳು. ಅವನು ದಿನಕ್ಕೆ ಒಂದೇ ಮರ ಹತ್ತುವವನೆಂದೂ, ಮರ ಒಂದಕ್ಕೆ ನೂರು ರೂಪಾಯಿ ಕೊಡಬೇಕೆಂದೂ ಚೆನ್ನಿ ಹೇಳಿದಳು. ಎಷ್ಟಾದರಾಗಲಿ. ಒಮ್ಮೆ ಮರ ಕ್ಲೀನಾಗುತ್ತೆ, ಸುಬ್ಬಿಯ ರಾಗ ನಿಂತು ಹೋಗುತ್ತೆ ಎಂದು ಸಂಭ್ರಮಿಸುತ್ತಾ ಪಾರು "ಓಕೆ" ಎಂದು ಒಪ್ಪಿಬಿಟ್ಟಳು.

ಮರ ಹತ್ತುವವನು ಬಂದು ಮರವನ್ನೊಮ್ಮೆ ಕೆಳಗಿನಿಂದ ಮೇಲಿನವರೆಗೆ ಕಣ್ಣಲ್ಲೇ ಅಳೆದ. ಇನ್ನೇನು ಮರ ಹತ್ತುತ್ತಾನೆ ಎಂದು ಆಸೆ ಕಂಗಳಿಂದ ನೋಡುತ್ತಿದ್ದ ಪಾರುವಿನ ಕಡೆಗೆ ನಿರ್ಲಕ್ಷ್ಯದ ನೋಟ ಬೀರಿ, " ಮರ ತುಂಬಾ ಎತ್ತರವಿದೆ. ಹತ್ತಕ್ಕಾಗಲ್ಲ" ಎಂದು ಮರವೇ ಉದ್ದ ಆಗಿ ತಪ್ಪು ಮಾಡಿದಂತೆ ನುಡಿದು ಹೊರಟೇ ಹೋದ.

"ಎಲ ಎಲಾ ಹೀಗೂ ಉಂಟೇ ? ತೆಂಗಿನ ಮರ ಉದ್ದವಿರದೆ ಗಿಡ್ಡವಾಗಿರುವುದುಂಟೇ? ಹಾಗೆ ಗಿಡ್ಡವಾಗಿದ್ದರೆ ಅದು ತೆಂಗಿನ ಮರವಾದೀತೇ" ಎಂದು ಕಣ್ಣುಕಣ್ಣು ಬಿಟ್ಟು, ತಲೆಯ ಮೇಲೆ ಕೈ ಹೊತ್ತು ಕುಳಿತಳು ಪಾರು.

"ನೀವೇನೂ ಯೋಚನೆ ಮಾಡ್ಬೇಡಿ. ಇವನಲ್ಲದಿದ್ದರೆ ಇವನ ಅಪ್ಪನಂಥವನನ್ನು ಕರ್ಕೊಂಡು ಬರ್ತೀನಿ" ಅಂತ ಪ್ರತಿಜ್ಞೆ ಮಾಡಿದಳು ಚೆನ್ನಿ. ಹಾಗೆಯೇ ಹರಸಾಹಸ ಮಾಡಿ ಮರ ಏರುವ ಮತ್ತೊಬ್ಬ ಎಕ್ಸ್ಪರ್ಟನ್ನು ಕರೆ ತಂದಳು.

"ಈತ ಎಂಥಾ ಉದ್ದ ಮರವನ್ನಾದರೂ ಒಂದು ನಿಮಿಷದಲ್ಲಿ ಏರಿಬಿಡುತ್ತಾನೆ. ನೀವೇ ನೋಡ್ತಾ ಇರಿ" ಎಂದು ಚೆನ್ನಿ ಆಶ್ವಾಸನೆ ಕೊಟ್ಟಳು.

ಆತನೂ ಸರಸರಾಂತ ಮರ ಏರಿಯೇ ಬಿಟ್ಟ. " ಕಾಯಿ ಜೊತೆಗೇ ಏಳನೀರನ್ನೂ ಇಳಿಸಿ ಬಿಡಪ್ಪ. ಒಂದಷ್ಟು ದಿನ ತಲೆ ಬಿಸಿ ಇರಲ್ಲ" ಎಂದು ಆಣತಿಯಿತ್ತಳು ಪಾರು. ಹಾಗೇ ಎಳನೀರಿನ ಗೊಂಚಲನ್ನು ಮೇಲಿಂದ ಇಳಿಸಲಿಕ್ಕೆ ಹಗ್ಗ ತರಲು ಒಳಗೆ ಹೋದಳು.

"ದಢಾರ್" ಎಂಬ ಶಬ್ದವಾಯಿತು. ಪಾರು ಹೌಹಾರಿ ಬಿದ್ದು, ಎದ್ದು ಹೊರಗೆ ಓಡಿಬಂದಳು.

ಹತ್ತು ಹದಿನೈದು ಕಾಯಿಗಳಿದ್ದ ಇಡೀ ಎಳನೀರಿನ ಗೊಂಚಲನ್ನು ಆತ ನಿರ್ದಾಕ್ಷಣ್ಯವಾಗಿ ಕೆಳಗೆ ಎಸೆದಿದ್ದ. ಅದು ಕಾಂಪೌಂಡಿಗೆ ಅಪ್ಪಳಿಸಿತ್ತು. ಅವುಗಳಲ್ಲಿ ಕೆಲವು ಒಡೆದು ಕಾಂಪೌಂಡಿಗೆ ಅಭಿಷೇಕ ಮಾಡಿದ್ದವು. ಇನ್ನು ಕೆಲವು ರಟ್ಟಿ, ಪಕ್ಕದ ಮನೆಯ ಅಂಗಳದಲ್ಲಿ

"ಪುಟಿದು ಪುಟಿದು ಬಾರೆ..

ಕುಣಿದು ಕುಣಿದ ಬಾರೆ"

ಎಂದು ಕುಣಿದಾಡುತ್ತಿದ್ದವು. ಮತ್ತೆ ಕೆಲವು ಹಾರಿ ಸುಬ್ಬಿಯ ಮನೆಯ ಅರೆ ತೆರೆದ ಬಾಗಿಲನ್ನು ಪೂರಾ ತೆರೆದು ಒಳ ನುಗ್ಗಿದ್ದವು. ಅಲ್ಲಿದ್ದ ಗಾಜಿನ ಊಟದ ಮೇಜು ಮತ್ತು ಹೂದಾನಿಯನ್ನು ಹುಡು ಹುಡಿ ಮಾಡಿದ್ದವು.

ರೌದ್ರಾವತಾರ ತಾಳಿದ ಸುಬ್ಬಿ ಅಂಗಳಕ್ಕೆ ಚಿಮ್ಮಿ ಬಂದು ತಾಂಡವ ನೃತ್ಯ ಶುರು ಮಾಡಿದಳು. ಪಾರುವಿನ ಜೊತೆಗೆ ತೆಂಗಿನ ಮರ ಹತ್ತಿದವನ ಮೇಲೂ ತೆಂಗಿನ ಕಾಯಿಯ ಮೇಲೂ ಸಹಸ್ರ ನಾಮಾರ್ಚನೆ ಮಾಡಿದಳು.

"ಅಯ್ಯೋ, ಅವಕ್ಕೇನು ಗೊತ್ತಾಗುತ್ತೆ? ಅವುಗಳಿಗೆ ಜೀವ ಇದ್ಯಾ? ಜೀವ – ಬುದ್ಧಿ ಎಲ್ಲಾ ಇರುವ ನಿಮ್ಗೇ ಬಾಗಿಲು ಹಾಕ್ಕೋ ಬೇಕು ಅಂತ ಗೊತ್ತಾಗ್ಲಿಲ್ಲವಲ್ಲ" ಎಂದು ದೊಡ್ಡ ದನಿಯಲ್ಲಿ ಛೇಡಿಸಿದ ತೆಂಗಿನ ಕಾಯಿ ಕೊಯ್ಯುವವನು ಒಣಗಿದ ಗರಿಗಳನ್ನೂ ತೆಗೆಯದೆ ಹಾಗೇ ಇಳಿದುಬಿಟ್ಟ.

"ಅವೆಲ್ಲಾ ಆ ಬಜಾರಿ ಅಮ್ಮನ ಮನೆಕಡೆಗೇ ಇವೆ. ಅಲ್ಲೇ ಬೀಳ್ತಾವೆ. ಬೀಳಲಿ ಬಿಡಿ. ಆಯಮ್ಮಂಗೆ ಹಾಗೇ ಆಗ್ಬೇಕು" ಎಂದು ಗಹಗಹಿಸಿ ನಕ್ಕ.

ಮರ ಹತ್ತಿದ್ದಕ್ಕೆ ನೂರು, ಎರಡು ತೆಂಗಿನಕಾಯಿ ಗೊಂಚಲಿಗೆ ನೂರು + ನೂರು, ಎಳನೀರಿಗೆ ನೂರು, ಅಂತ ಮುಲಾಜಿಲ್ಲದೆ ನಾಲ್ಕು ನೂರು ರೂಪಾಯಿ ತಗೊಂಡು ಹೊರಟು ಹೋದ.

ಸುಬ್ಬಿ, ಮನೆಯ ಮೇಜಿನ ಗಾಜಿನ ಕ್ರಯ ಹತ್ತು ಸಾವಿರ, ಹೂದಾನಿಯದು ಮೂರುಸಾವಿರ ಅಂತ ಒಂದಕ್ಕೆರಡು ವಸೂಲು ಮಾಡಿದಳು. ಹಣ ತೆತ್ತು ಪಾರು

ಮೆತ್ತಗಾಗಿ ಹೋದಳು. ಇಷ್ಟು ದುಡ್ಡಲ್ಲಿ ಮುತ್ತಿನ ಬೆಂಡೋಲೆಯೇ ದಕ್ಕುತ್ತಿತ್ತೆಂದು ಮನದೊಳಗೇ ಪೇಚಾಡಿಕೊಂಡಳು.

"ನೀನೋ, ನಿನ್ನ ಲೋಕೋದ್ಧಾರ ಕೆಲಸನೋ! ನೀನು ಮರ ನೆಟ್ಟಿದ್ದೂ ಸಾಕು, ಅದಕ್ಕಾಗಿ ನಾನು ದುಡ್ಡು ತೆತ್ತಿದ್ದೂ ಸಾಕು. ನನ್ನ ಪರ್ಸನ್ನು ಖಾಲಿ ಮಾಡೋ, ನೆರೆಹೊರೆಗೆ ಮಾರೀ ಆಗೋ ಮರ ನಮಗೆ ಬೇಕಾ?" ಎಂದು ಪಾರುಪತಿ ಪರಿಪರಿಯಾಗಿ ಪಿರಿಪಿರಿ ಮಾಡತೊಡಗಿದ.

ಪಾರುವಿಗೆ ಈ ಸಂಕಷ್ಟದಿಂದ ಪಾರಾದರೆ ಸಾಕು ಎನಿಸಿತು. ಮರ ಕಡಿಯುವವನಿಗಾಗಿ ಹುಡುಕಾಡ ತೊಡಗಿದಳು. ಯಾರ ಮನೆಯ ಮೇಲೂ ಬೀಳದಂತೆ ಮರ ಕಡಿಯುವ ಆಸಾಮಿ ಕಡೆಗೂ ದೊರಕಿದ. ಆದರೆ ಒಂದು ಮರ ಕಡಿಯಲು ಮಾಮೂಲಾಗಿ ನಾಲ್ಕು ಸಾವಿರ ರೂಪಾಯಿ ಕೊಡಬೇಕು; ಇಲ್ಲಿ ಆಚೆ ಈಚೆ ಎಲ್ಲಾ ಅಷ್ಟೊಂದು ಜಾಗ ಇಲ್ಲದ್ದರಿಂದ ಯಾರ ಮನೆಗೂ ಹಾನಿಯಾಗದಂತೆ ತೆಗೀಬೇಕಾದರೆ ಇನ್ನೂ ಒಂದು ಸಾವಿರ ಜಾಸ್ತಿನೇ ಕೊಡಬೇಕೆಂದು ತಾಕೀತು ಮಾಡಿದ.

ಒಳ್ಳೆಯ ತಳಿ ಎಂದು ಐವತ್ತು ರೂಪಾಯಿ ಕೊಟ್ಟು ತೆಗೆದು ಕೊಂಡಿದ್ದ ಸಸಿಗೆ ಈಗ ಐದು ಸಾವಿರ ಕೊಟ್ಟು ತೆಗೆಸಬೇಕಾಯಿತಲ್ಲ ಅಂತ ಮನದೊಳಗೇ ಮರುಗಿದಳು ಪಾರು.

"ಛೇ! ಈ ಮರದ ನೆವದಿಂದ ಪಾರು ಕೈಯಿಂದ ಸಾಕಷ್ಟು ಹಣ ವಸೂಲು ಮಾಡಲು ಅನುಕೂಲವಾಗ್ತಿತ್ತು. ತನ್ನ ಇಡೀ ಮುಡಿ ಕರ್ಚಿಗೆಲ್ಲಾ ಅದೇ ಸಾಕಾಗ್ತಿತ್ತು. ಅಡುಗೆಗೂ ಕಾಯಿ ಸಿಗುತ್ತಿತ್ತು. ಗರಿಯ ಕಸ, ಬಿಸಿನೀರಿನ ಮಿತಾಗ್ನಿಗೆ ಸಾಕಾಗ್ತಿತ್ತು. ಅದಕ್ಕೂ ತತ್ವಾರ ಬಂತು. ಇನ್ನು ಯಃಕಶ್ಚಿತ್ ಪೊರಕೆಗೂ ನೂರು ರೂಪಾಯಿ ಕೊಟ್ಟು ತರಬೇಕು. ಎಲ್ಲಾ ನನ್ನ ಕರ್ಮ!" ಎಂದು ತಲೆ ತಲೆ ಚಚ್ಚಿಕೊಂಡಳು ಸುಬ್ಬಿ.

ಅಂದು ರಾತ್ರಿ ಭಾರೀ ಮಳೆ ಸುರಿಯಿತು. ಸುರತರು ಸುರಲೋಕ ಸೇರಿ, ಅಲ್ಲಿ ಕಲ್ಪತರುವಿಗೆ ಸಂಭ್ರಮದ ಸ್ವಾಗತ ದೊರೆತ ಕುರುಹಾಗಿ ಗುಡುಗು ಸಿಡಿಲುಗಳು ಮೊಳಗಿದವು. ಮಿಂಚುಗಳು ಫಳಫಳಿಸಿದವು. ಮೂವತ್ತಮೂರು ಕೋಟಿ ದೇವತೆಗಳ ಆನಂದಭಾಷ್ಪವೇ ಮಳೆಯ ರೂಪದಲ್ಲಿ ಧರೆಯತ್ತ ಹರಿದು ಬಂದಿತೆಂಬುದರಲ್ಲಿ ಸಂಶಯವಿರಲಿಲ್ಲ. ಕಲ್ಪತರುವನ್ನು ತವರಿಗೆ ಕಳಿಸಿದ, ತಾಯಿಕರುಳಿನ ಪಾರುವಿನ ಕಣ್ಣಿಂದ ಇಳಿದ ಜಲಪಾತವೂ ಅದರೊಂದಿಗೆ ಬೆರೆತುಹೋಯ್ತು. ಇದರಿಂದ ಊರ ಕೆರೆ–ಬಾವಿಗಳು ತುಂಬಿ, ಜನರು ಸಂತೋಷಭರಿತರಾದರು.

ದಿನಗಳು ಉರುಳಿದವು. 'ಬೆಳಗಾಗಿ ನಾನೆದ್ದು ಯಾರನ್ನ ನೋಡಲಿ ಕಲ್ಪತರುವೇ

ಹೋದ್ಮೇಲೆ' ಎಂದು ಹಾಡಿಕೊಳ್ಳುತ್ತಾ ಹೊರಬಂದ ಪಾರುವಿನ ಕಣ್ಣಿಗೆ ಬಿದ್ದ ದೃಶ್ಯ, ಆಕೆಯನ್ನು ಆನಂದಾಶ್ಚರ್ಯದ ಕಡಲಲ್ಲಿ ಮುಳುಗಿಸಿಬಿಟ್ಟಿತು.

ಆಕೆಯ ತೆಂಗಿನಕಟ್ಟೆಯಲ್ಲಿ ನಾಲ್ಕೈದು ತೆಂಗಿನ ಸಸಿಗಳು ಮೊಳೆತು ಹುಸಿನಗೆ ಬೀರುತ್ತಿದ್ದವು. ಅದಾವುದೋ ಮಾಯೆಯಲ್ಲಿ, ಒಣಗಿ ಬಿದ್ದು ಅಡಗಿ ಕುಳಿತ ತೆಂಗಿನಕಾಯಿಗಳು ಈಗ ಮೊಳಕೆ ಒಡೆದಿದ್ದವು.

"ಅಮ್ಮಾ ಸುರತರುವೇ ನಿನಗೆ ನಮೋ ನಮೋ, ದೇವೀ ಕಲ್ಪತರುವೇ ನಿನಗೆ ನಮೋ ನಮೋ" ಎಂದು ಗಡಿಬಿಡಿಯಿಂದ ನಮಿಸಿದಳು ಪಾರು. ಉದ್ವೇಗದಿಂದ ಸಸಿಗಳನ್ನು ಮುಟ್ಟೀ ಮುಟ್ಟಿ ಕಣ್ಣಿಗೊತ್ತಿಕೊಂಡಳು.

ಕಲ್ಪತರು ತನಗೆ ಒಲಿದು ಬಂದಿದ್ದು ಕಂಡು ಪಾರುಗೆ ಹೃದಯ ತುಂಬಿ ಬಂತು. ಆದರೆ..... ! ಆದರೆ ಏನು ಮಾಡುವುದು? ಆ ಸಸಿಗಳನ್ನು ಅಲ್ಲಿಯೇ ನೆಡುವಂತಿಲ್ಲವಲ್ಲ. ಹಾಗೇ ಯೋಚಿಸುವಾಗ ಹತ್ತಿರದ ಅಮ್ಮನವರ ದೇವಸ್ಥಾನದಲ್ಲಿ ಎಲ್ಲರೂ ತೆಂಗಿನ ಸಸಿಗಳನ್ನಿಟ್ಟು ಹೋಗುವುದು ನೆನಪಾಯ್ತು. ಕೂಡಲೇ ದೇವಸ್ಥಾನಕ್ಕೆ ಓಡಿದಳು. ಅಲ್ಲಿ 'ದಯವಿಟ್ಟು ಇಲ್ಲಿ ಯಾರೂ ತೆಂಗಿನಸಸಿಗಳನ್ನು ಭಂಡಾರಕ್ಕೆ ಒಪ್ಪಿಸಬಾರದು' ಎಂಬ ಫಲಕ ಅವಳ ಮುಖಕ್ಕೆ ರಾಚಿತು.

ಗಿಡಗಳನ್ನು ಮಾರುವ ನರ್ಸರಿಗೇ ಮಾರಿಬಿಟ್ಟರೆ? – ಎಂಬ ಆಲೋಚನೆ ಬರುತ್ತಿದ್ದಂತೆಯೇ, ಅಲ್ಲಿಗೆ ಧಾವಿಸಿದಳು. "ಈಗೆಲ್ಲಾ ತೆಂಗಿನ ಸಸೀನ ಯಾರು ತೊಗೋತಾರೆ ಮೇಡಂ? ಅದಕ್ಕೆ ಡಿಮ್ಯಾಂಡೇ ಇಲ್ಲ. ಬಿಟ್ಟಿ ಕೊಟ್ರೂ ಯಾರಿಗೂ ಬೇಡ. ಸಾರಿ ಮೇಡಂ" ಎಂದು ತಾರಮ್ಮಯ್ಯ ಮಾಡಿಬಿಟ್ಟ ನರ್ಸರಿ ಯಜಮಾನ.

"ತೆಂಗಿನ ತೋಟ ಮಾಡುವವರು ತೊಗೊಳಲ್ವಾ?" ಪಾರು ಆಸೆಯಿಂದ ಕೇಳಿದಳು. "ನಿಮಗೆಲ್ಲೋ ಭ್ರಾಂತು. ಕೋತಿ ಕಾಟ ಜಾಸ್ತಿ ಆಗಿ, ಅವರೇ 'ಯಾವುದಾದ್ರು ಮುಳ್ಳು ಇರೋ ಗಿಡ ಕೊಡಿ. ತೆಂಗಿನಗಿಡ ಬೇಡ' ಅಂತಿದ್ದಾರೆ. ನೀವೇ ಏನಾದ್ರು ವಿಲೇವಾರಿ ಮಾಡಿಕೊಳ್ಳಿ" ಎಂದು ಕೈ ಚೆಲ್ಲಿಬಿಟ್ಟ.

"ಒಂದು ಕಲ್ಪವೃಕ್ಷ ಕಡಿಸಿ, ಒಂದು ಸಾವಿರ ಜನ್ಮಕ್ಕೆ ಬೇಕಾದಷ್ಟು ಪಾಪದ ಫಲ ತುಂಬಿಸಿಕೊಂಡಾಯ್ತು. ಇನ್ನು ಈ ಸಸಿಗಳನ್ನು ಕೊಂದು ಪರ್ಮನೆಂಟ್ ನರಕಕ್ಕೆ ಹೋಗ್ತೀಯಾ?" ಎಂದು ಊರಿಂದ ಬಂದಿದ್ದ ಅಜ್ಜಿ ಗದರಿಸಿ ಕೇಳಿದಾಗ ಪಾರುಗೆ ದಿಕ್ಕೇ ತೋಚಲಿಲ್ಲ.

ಈಗ ದಿನಾ ಆ ಸಸಿಗಳಿಗೆ ನೀರೆರೆದು,

'ನಮೋ ನಮೋ ಕಲ್ಪತರುವೇ।

ನಮೋ ನಮೋ ಸುರತರುವೇ।

ದಾರಿ ತೋರಿಸೆ ಕರುಣಾಮಯಿಯೆ॥'

ಎಂದು ನಮಿಸಿ, ಪ್ರಾರ್ಥಿಸುತ್ತಿದ್ದಾಳೆ ಪಾರು. ಮುಂದೇನಾಗುತ್ತೋ ಕಾದು ನೋಡೋಣ...

**ಸತ್ಯವತಿ ಹರಿಕೃಷ್ಣನ್**
ತರಂಗ 13.11.2014

# ರೊಟ್ಟಿ ದೇವರ ಮುಂದೆ...

ಉತ್ತರ ಕರ್ನಾಟಕ ಭಾಗದ ಪ್ರತಿಯೊಬ್ಬರ ಬದುಕಿನಲ್ಲಿ ಖಾರ ಹೆಚ್ಚಾಗಿ, ಸಿಹಿ ಅಲ್ಪವಾಗಿರುವ ಮಿಶ್ರಣ ಹಿತವಾಗಿಯೆ ಸಮ್ಮಿಳಿತಗೊಂಡಿರುತ್ತದೆ, ಮರೆಯಲಾಗದಂತೆ. ತಿನಿಸು ಹಾಗೂ ದೈನಂದಿನ ಬದುಕಿನ ನಾನಾನುಭವಗಳ ಮಧ್ಯೆ ಸದಾ ಕಾಡುವದೆಂದರೆ, ಅವ್ವ ಮಾಡಿದ ಬಿಸಿರೊಟ್ಟಿಯ ಮೇಲೆ ಹಸಿಖಾರವನ್ನು ಹಚ್ಚಿಕೊಂಡು ತಿಂದದ್ದು. ಬೇಕಾದರೆ, ಹಳ್ಳೀಲಿ ಹುಟ್ಟಿ ಬೆಳೆದು ದೂರ ಯಾವುದೋ ಪಟ್ಟಣದಲ್ಲಿ ಬದುಕು ಕಟ್ಟಿಕೊಂಡವರನ್ನು ಕೇಳಿ ನೋಡಿ. ಬಾಲ್ಯದಲ್ಲಿ ರೊಟ್ಟಿಯ ಪ್ರಸ್ತಾಪ ಬಾರದೆ, ಅವರ ಮಾತಿಗೆ ಆರಂಭವೇ ಇರುವುದಿಲ್ಲ. ಜೋಳದ ಹಿಟ್ಟಿನ ಮುಟಿಗಿಯ ಪದರಗಳಂತೆ, ನೆನಪಿನ ಪುಸ್ತಕದ ಹಾಳೆಗಳು ಸ್ಮೃತಿ ಪಟಲದ ಮುಂದೆ ಹಾಯ್ದು, ಕಣ್ಣುಗಳಲ್ಲಿನ ಹೊಳಪು ಭವಿಷ್ಯಕ್ಕೂ ದಾರಿ ತೋರ ತೊಡಗಿರುತ್ತದೆ. ನೀವು ಹಳ್ಳಿ ಪರಿಸರದಲ್ಲಿ ಹುಟ್ಟಿ ಬೆಳೆದವರಾಗಿದ್ದರೆ, ಊರಾಚೆಯ ಅಡವಿಗೆ ದನ ಕಾಯಲು ಹೋದ ಹುಡುಗರನ್ನ ಊಟದ ವಿಚಾರವಾಗಿ ವಿಚಾರಿಸಿ ನೋಡಿ. ನಿಜಕ್ಕೂ ಆಶ್ಚರ್ಯಚಕಿತರಾಗ್ತೀರಿ. ಅವರ ಕುರಿಹಾಲು, ಸಂಕಟಿ ಊಟ ಕಳೆಗಟ್ಟುವುದೇ ರೊಟ್ಟಿಯಗಂಟು ಬಿಚ್ಚಿದಾಗ. 'ರೊಟ್ಟ್ಯಾಗ ಇರೋ ಧಮ್ ಬ್ಯಾರೆ ಎದ್ರಾಗ ಐತ್ರಿ. ಕಾಲಾಗ ನಾಯಿಗೆರಿ ಇದ್ದೋರಂಗ ಅಡಡವಿ ತಿರುಗೋ ನಮಗ ಜೋಳದರೊಟ್ಟಿನೆ ಭಾಗ್ಯೆ,ಬಂಗಾರ. ನಾಕ ರೊಟ್ಟಿ ಹೊಟ್ಟಿಗಿಳಿದ್ರ ರಾತ್ರಿತನ ನಾವ್ ಗಟ್ಟಿ. ರೊಟ್ಟಿ ತಿಂದ ಮೇಲೆಯೆ ತೃಪ್ತಭಾವ ಅವರಲ್ಲಿ ಮನೆ ಕಟ್ಟಿಕೊಂಡಿರುವ ಪರಿ ಅವರ ಮಾತುಗಳಲ್ಲಿಯೆ ವ್ಯಕ್ತ.

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಕಾವು ಹೆಚ್ಚಾಗ್ತಿರೋ ವರ್ತಮಾನದಲ್ಲಿ ರೊಟ್ಟಿ ಅಸ್ತ್ರವಾಗಿಯೆ ಬಳಕೆಯಾಗುತ್ತಿದೆ. ವಿಶ್ವಾದ್ಯಂತ ಹರಿದು ಹಂಚಿ ಹೋಗಿರುವ ಬಯಲು ಸೀಮೆ ಜನ ಸಾಮಾಜಿಕ ಜಾಲತಾಣಗಳ ಮೂಲಕ ಸ್ವಯಂ ಪ್ರೇರಿತರಾಗಿ ಹೋರಾಟಕ್ಕೆ ಬೆಂಬಲಕ್ಕಿದ್ದಾರೆ. ಕಾಮೆಂಟ್ ಆಗಿದ್ದ ಅದರಲ್ಲೊಬ್ಬರ ವಾದವಂತೂ ಬಹಳ ಚೆನ್ನಾಗಿತ್ತು. ಮತ್ತೆ ಅವರು ತೀರಾ ಅಡ್ವಾನ್ಸ್ಡ್ ಎನ್ನುವಂತೆ ಪ್ರತ್ಯೇಕ ರಾಜ್ಯದ ಧ್ವಜ ತಯಾರಿಕೆವರೆಗೂ ಮುನ್ನಡೆದಿದ್ದರು. ನಮ್ಮ ಈ ರಾಜ್ಯದ ಹೋರಾಟಕ್ಕ ಶಕ್ತಿ ಬಂದದ್ದ ರೊಟ್ಟಿಯಿಂದ. ನಮ್ಮ ಗುರಿಗಾಗಿ ನಾವು ಮನಿ ಮನಿಯಿಂದಲೂ ರೊಟ್ಟಿ ಬಡಸಿ, ಟ್ರಾಕ್ಟರನ್ಯಾಗ ವಿಧಾನಸೌಧಕ್ಕ ಒಯ್ಯೋ ಮೂಲಕ ಹರತಾಳ ಮಾಡ್ತೇವಿ. ಏನೇ ಆಗಲಿ, ನಮ್ಮ ಉತ್ತರ ಕರ್ನಾಟಕ ರಾಜ್ಯದ ಹೋರಾಟದ ಚಿಹ್ನೆ ರೊಟ್ಟಿಯೇ ಆಗಬೇಕು. ನಮ್ಮ ಹೋರಾಟಕ್ಕ ಫಲ ಸಿಕ್ಕರ ರಾಜ್ಯದ ಬಾವುಟದಾಗ ರೊಟ್ಟಿ ಬರುವಂತೆ

ನೋಡಿಕೊಳ್ಳಾಕ ಬೇಕೆಂದು ಆಗ್ರಹಿಸಿದ್ದರು. ನಮ್ಮಂತಹ ಅನೇಕರನ್ನು ಹೋರಾಟದ ಬೆಂಬಲಕ್ಕೆ ಸೆಳೆಯುವಲ್ಲಿ ಅವರ ರೊಟ್ಟಿ ಪ್ರೇಮ ಯಶಸ್ವಿಯಾಗಿತ್ತು.

ಹಳ್ಳಿಗಳ ಮನೆಗಳಲ್ಲಿ ರೊಟ್ಟಿ ಬಡಿಯುವುದರಿಂದ ಹಿಡಿದು ಊಟವಾಗುವ ತನಕ ಹೇಳತೀರದ ಸಡಗರ. ತಲೆ ತುಂಬಾ ಸೆರಗು ಹೊತ್ತು ಒಲೆಯ ಮುಂದೆ ಧಪ ಧಪ ಸಪ್ಪಳದೊಂದಿಗೆ ರೊಟ್ಟಿ ಬಡಿಯುವ ತಾಯಂದಿರನ್ನು ನೋಡಬೇಕು. ಸಂಸಾರದಲ್ಲಿನ ವೈಮನಸ್ಸು, ಹಲವಾರು ಕಾರಣಗಳಿಗೆ ಅವರಿವರ ಮೇಲೆ ಹುಟ್ಟಿಕೊಂಡ ಸಿಟ್ಟು ಒಲೆಯೊಳಗಿನ ಜ್ವಾಲೆಯಂತೆ ರೊಟ್ಟಿ ತಟ್ಟುವ ಕ್ರಿಯೆಯಲ್ಲಿ ಘಟಘಟಿಸುತ್ತಿರುತ್ತದೆ. ದ್ವೇಷ ರೋಷಗಳನ್ನೆಲ್ಲಾ ಸುಟ್ಟು ಪ್ರತಿಫಲವೆಂಬಂತೆ ರೊಟ್ಟಿಯುಬ್ಬಿ ನಿಂತಿರುವಂತೆಯೂ ಗೋಚರವಾಗುತ್ತಿರುತ್ತದೆ. ಆಗ ತಾನೆ ಬೇಯ್ದ ರೊಟ್ಟಿ ಹಬೆಯ ಘಮಲಿನೊಂದಿಗೆ ಬಾಯಿಗಳಿದರೆ ಅದರ ಸುಖವೆ ಬೇರೆ ತೆರನಾದದ್ದು. ಜೋಳದ ರೊಟ್ಟಿ ಬರೀ ಆಹಾರ ಖಾದ್ಯವಲ್ಲ, ಉತ್ತರ ಕರ್ನಾಟಕದ ಸಂಸ್ಕೃತಿಯೂ ಹೌದು. ತಲೆಮಾರುಗಳ ಇತಿಹಾಸದಿಂದ ಜನರ ಜೀವನದ ಭಾಗವಾಗಿರುವ ಜೋಳದ ರೊಟ್ಟಿ ವಿಶೇಷವಾಗಿ ಉತ್ತರ ಕರ್ನಾಟಕದ ಸಮಸ್ತ ಆಹಾರ ಖಾದ್ಯಗಳ ಪೈಕಿ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ ಎನ್ನುವಾಗ ಅದು ಈ ಭಾಗದ ಸಾಂಸ್ಕೃತಿಕ ಪ್ರತಿನಿಧಿ ಎಂಬುದನ್ನು ಹೇಳಲು ಮರೆಯಲಿಕ್ಕಾಗುತ್ತದೆಯೆ? ಮಹಿಳೆಯರು ಮನೆಯಲ್ಲಿ ರೊಟ್ಟಿ ತಟ್ಟಿದರೆ ಅವರು ಜಿಮ್‌ಗಳಿಗೆ ಹೋಗುವುದೆ ಬೇಕಾಗಿಲ್ಲ. ರೊಟ್ಟಿ ಬಡಿಯುವುದರಿಂದ ನರಗಳೆಲ್ಲವು ಹುರಿತಗೊಂಡು ರಕ್ತ ಸಂಚಾರ ಸುಗಮವಾಗಲು ಸಹಕರಿಸುತ್ತವೆ. ಇದರಿಂದ ಹೃದಯಬೇನೆ, ರಕ್ತದೊತ್ತಡ, ಬೊಜ್ಜುಗಳನ್ನು ಕೂಡ ತಹಬದಿಗೆ ತರಬಹುದು. ಅಲ್ಲದೆ ಶರೀರಕ್ಕೂ ವ್ಯಾಯಾಮ ಮನೆಯಲ್ಲಿ ಕಾರ್ಯಗಳು ಸುಗಮ. ತಂತ್ರಜ್ಞಾನ ಮನುಷ್ಯನಲ್ಲಿ ಬೆಳೆಸಿರುವ ಆಲಸ್ಯತನದ ಎಳ್ಳಷ್ಟು ಸ್ವತಃ ಅವನೂ ರೂಢಿಸಿಕೊಂಡಿಲ್ಲವೇನೊ? ರೊಟ್ಟಿ ತಯಾರಿಕಾ ಯಂತ್ರಗಳು ಮಾರ್ಕೆಟ್‌ಗೆ ಲಗ್ಗೆಯಿಟ್ಟು ಸಂಪ್ರದಾಯಬದ್ಧವಾದ ರೊಟ್ಟಿ ಘಮಕ್ಕೆ ಕೊಡಲಿ ಪೆಟ್ಟು ನೀಡತೊಡಗಿದೆ.

ಬಾಲ್ಯದಲ್ಲಿ ಮನೆಯಲ್ಲಿ ಕೆಲಸ ಮಾಡೆಂದು ದುಂಬಾಲು ಬಿದ್ದರೆ, ಅಪ್ಪಣೆ ಪಾಲಿಸದೆ ನಮಗೆ ವಿಧಿಯಿರುತ್ತಿರಲಿಲ್ಲ. ನಾಲ್ಕೈದು ಫರ್ಲಾಂಗು ನಡೆದು ನೀರು ತರಬೇಕಾದಾಗ, ಊರಾಚೆಯ ಪೊದೆಗಳಿಂದ ಒಣಕಟ್ಟಿಗೆಗಳ ಕಟ್ಟನ್ನು ಹೊತ್ತು ತರುವಾಗ ಜೀವ ಹೋಗಿಬರೋದು. ಮನೇಲಿ ಬಂದು ಉಸ್ಸಪ್ಪಾ ಎಂದು ನಿಟ್ಟುಸುರಿಡುತ್ತಾ ವಿರಮಿಸಿದಾಗ ಸಮಾಧಾನ. 'ರೊಟ್ಟಿ ತಿಂದ್ರ ಹಿಂಗ್ಯಾಕ ಆಕಿತ್ತಿದು, ಬರೀ ಎಡ ಕೊಡ ನೀರು, ನಾಲ್ಕ ಕಟಗೀನು ಇಲ್ಲದ ಹೊರಿಗೆ ತೇಕ್ಹತ್ತಿ ಸಾಯಾದು' ಸಿಟ್ಟು ಮಿಶ್ರಿತ ಉವಾಚದೊಂದಿಗೆಯೆ ಅಪ್ಪ ತಗಾದೆ ತೆಗೆಯುತ್ತಿದ್ದ. ಕೆಲಸ ಮಾಡಿದರೂ ತಪ್ಪದ ಕಿರಿಕಿರಿಗೆ ರೊಟ್ಟಿ ತಿನ್ನಲಾರದ್ದೆ ಬೈಯ್ಯಲು ದೊಡ್ಡ ಕಾರಣವಾಗಿ ಬಿಟ್ಟಿತ್ತು. ಇವತ್ತಿಗೂ ನನ್ನದು ಅತ್ತ ಮಧ್ಯಮವೊ ಇತ್ತ ತೀರಾ ಕನಿಷ್ಟವೊ ಅಲ್ಲದ ಎತ್ತರ. ಕೃಶ

ಶರೀರವಿದ್ದರೂ ತಕ್ಕಮಟ್ಟಿಗೆ ನೋಡುವಂತೆಯೂ ಇದ್ದೆ. ಬೈದರೂ ಹೊಡೆದರೂ ಅನ್ನದ ಬೆನ್ನು ಹತ್ತಿ ರೊಟ್ಟಿಯ ತಿರಸ್ಕರಿಸಿದ್ದೆ. ಇದೇ ನನ್ನ ದೇಹದ ಪ್ರಕೃತಿಗೆ ಕಾರಣವೆಂದು ಮನೆಯಲ್ಲಿ ಆಗಾಗ ಮಾತಿನ ಮಧ್ಯೆ ನನ್ನ ದೇಹದ ಬೆಳವಣಿಗೆಯ ಬಗ್ಗೆ ಹೇಳುವುದುಂಟು. ನನ್ನ ನೋಡಿದಾಕ್ಷಣ 'ವಯಸ್ಸಾದ್ರು ಹೈಸ್ಕೂಲು ವಿದ್ಯಾರ್ಥಿಯಂತೆ ಕಾಣುತ್ತಿ' ಅಂತ ಪರಿಚಯಸ್ಥರು ಭೇಟಿಯಾದಾಗೊಮ್ಮೆ ಮಾತಲ್ಲೆ ಚುಚ್ಚುತ್ತಾರೆ. ಈ ಮಾತು ಕೇಳಿದಾಗೆಲ್ಲಾ ನನಗೆ ಮಾತ್ರ ಬರೀ ಬಾಯಿ ಚಟಕ್ಕೆ ರೊಟ್ಟಿಯಿಂದ ವಿಮುಖವಾದದ್ದು, ಜೀವನ ಪೂರ್ತಿ ಕಿಚಾಯಿಸಿಕೊಂಡು ಬಾಳಬೇಕಾದ ಪರಿಸ್ಥಿತಿಗೆ ನೂಕಿತಲ್ಲಾ ಎಂಬ ಯೋಚನೆ ನನ್ನನ್ನು ಮತ್ತಷ್ಟು ಕೃಶ ಶರೀರಿಯನ್ನಾಗಿಸುತ್ತಿದೆ.

ಮಕ್ಕಳಿಗೆ ಮನೆಯಲ್ಲಿ ರೊಟ್ಟಿ ಒಲ್ಲೆನೆನ್ನುವ ತಿರಸ್ಕಾರದ ಹಠ ಮುಟಗಿಯ ರುಚಿಯೆದುರು ಮಂಗಮಾಯ. ಬರ್ಗರು ಸ್ಯಾಂಟವಿಚ್ಚೆ ರುಚಿಗೆ ಬಹಳ ಅಚ್ಚುಕಟ್ಟೆಂದು ವಾದಿಸುವವರು ಮುಟಗಿಯನ್ನು ಒಮ್ಮೆ ತಿಂದು ನೋಡಬೇಕು. ಹಸೆಕಾರದ ಚಟ್ನಿಯ ಜೊತೆಗೆ ಮೆತ್ತನೆಯ ರೊಟ್ಟಿ ಹೊಸೆದು ಚೂರು ಉಪ್ಪು, ಎಣ್ಣೆ, ಬಳ್ಳುಳ್ಳಿ ಎಸಳು ಸೇರಿಸಿ, ರೊಟ್ಟಿ ಬಡಿಯುವ ಕಲ್ಲಲ್ಲೆ ಮಗುಚಿ ಉಂಡೆಯಂತೆ ಮಾಡಿದರೆ ಸಿದ್ಧವಾಗುವ ಮುಟಗಿಯ ಮುಂದೆ ಇವತ್ತಿನ ಯಾವ ಮಾಲ್‌ಗಳ ಆಧುನಿಕ ತಿನಿಸುಗಳ ಕಳೆ ಮಂಕು ಮಂಕು. ಉದರದ ನಿತ್ಯದ ರೋಗವಾದ ಹಸಿವಿಗೆ ರೊಟ್ಟಿಯೇ ಸಮರ್ಪಕ ಮದ್ದು. ಮೂರ್ನಾಲ್ಕು ರೊಟ್ಟಿಗಳು ಮುಂಜಾನೆಯ ಹೊತ್ತಿಗೆ ಹೊಟ್ಟೆಗಿಳಿದರೆ ಸಾಯಂಕಾಲದವರೆಗೂ ಹಸಿವಿನ ಆಕ್ರಮಣಕ್ಕೆ ಬ್ರೇಕ್ ಬಿದ್ದಿರುತ್ತದೆ. ಹಸಿವು,ಕಷ್ಟ ಸಹಿಷ್ಣುಗಳಾದ ಉತ್ತರ ಕರ್ನಾಟಕದ ರೈತರ ಬುತ್ತಿಗಂಟಿನ ನಂಟಿನ ಗುಟ್ಟು ಅಡಗಿರುವುದು ಇಲ್ಲೆ.

ಮುಂಜಾನೆ ಹೊಟ್ಟೆತುಂಬ ಉಂಡರೆ ಸಂಜೆಗಿಲ್ಲದೆ ಪರದಾಡುವ ಬಡವರ ಮನೆಯ ಇಡೀ ಕುಟುಂಬ ಸದಸ್ಯರ ಹಸಿವಿನ ವೈರಿ ರೊಟ್ಟಿ. ಅವರ ಜೀವನದಲ್ಲಿ ರೊಟ್ಟಿಯೊಂದೆ ಆಹಾರ ವಿಶಿಷ್ಟವಾಗಿ ಆಪ್ತ ಸ್ಥಾನ ಪಡೆದುಕೊಂಡಿದೆ. ಕೃಷಿ ಕೂಲಿ, ಜೀತ ಮಾಡುವ ಬಹುತೇಕ ಗ್ರಾಮವಾಸಿಗಳು ಹಣದ ಮುಖ ನೋಡುವುದೆ ವಾರಕ್ಕೊಂದು ಸಾರಿ. ಪಗಾರದಲ್ಲಿ ಒಮ್ಮೆ ಜೋಳ ಖರೀದಿಸಿದರೆ ಮತ್ತೆ ವಾರದ ತನಕ ತುತ್ತಿನಚೀಲದ ಚಿಂತೆಯೇ ಇವರಲ್ಲಿ ಮಾಯ. ಪಗಾರದ ಮುಕ್ಕಾಲು ಭಾಗ ಜೋಳದ ಖರೀದಿಗೆ ಮೀಸಲು. ಈಗಲೂ ಒಂದು ಕೆ.ಜಿ ಅಕ್ಕಿ ತರುವ ರೊಕ್ಕದಲ್ಲಿ ಅದರ ಡಬ್ಬಲ್ ತೂಕದ ಜೋಳ ಕೊಳ್ಳಬಹುದು. ರೊಟ್ಟಿಯನ್ನ ಒಮ್ಮೆ ತಯಾರಿಸಿದರೆ ಮೂರ್ನಾಲ್ಕು ದಿನಗಳ ನಂತರವೂ ತಿನ್ನಲಿಕ್ಕೆ ಯೋಗ್ಯ ಹಾಗೂ ರುಚಿಕಟ್ಟು. ಈ ಕಾರಣದಿಂದಲೆ ಜೋಳದ ಖರೀದಿ ಹಾಗೂ ರೊಟ್ಟಿ ಕೆರಿಸಿ ಹಳ್ಳಿ ಮನೆಗಳಲ್ಲಿ ಸದಾ ತುಂಬಿರಲು ಕಾರಣ.

ಹಳ್ಳಿಗಾಡಿನ ಮಹಿಳೆಯರು ನಿತ್ಯ ಹೊಲದಿಂದ ಹಕ್ಕರಕಿ, ಕಿರ್ಕಸಾಲಿ, ಮೆಕ್ಕಿಕಾಯಿ, ತೊಪ್ಪಲಗಾಯಿ, ಕರ್ಚಿಕಾಯಿ, ತೊಂಡಿಕಾಯಿಗಳನ್ನು ಹೆಕ್ಕಿ ತರುತ್ತಾರೆ.

ರೊಟ್ಟಿಗೆ ಇವು ಸಾಥಿಯಾಗುವುದರಿಂದ ತರಕಾರಿ ಖರೀದಿಯ ಹಣವೊ ಉಳಿತಾಯ. ಅಸಲು ಇಂದಿಗೂ ಹಳ್ಳಿ ಜನರ ಆಹಾರ ಕ್ರಮದಲ್ಲಿ ರೊಟ್ಟಿಯ ಜೊತೆಗೆ ಪಲ್ಯ ಬೇಕೆಂದೇನೂ ಇಲ್ಲ. ಅದರೊಟ್ಟಿಗೆ ಒಣಖಾರ,ಎಣ್ಣಿ ಅಥವಾ ಈರುಳ್ಳಿ ಇದ್ದರೂ ಊಟ ಸಲೀಸು. ಸಂಪ್ರದಾಯದ ಬದ್ಧವಾಗಿ ಕೂತು ಊಟ ಮಾಡುವುದು ವಾಡಿಕೆ. ಆದರೆ ಅಂಗೈ ಆಚೀಚೆ ಜೋತುಬಿದ್ದ ಮೆತ್ತನೆಯ ರೊಟ್ಟಿಗಳನ್ನು ಹಿಡಿದು ಮನೆ ಮುಂದಿನ ಹರವಾದ ಅಂಕಣಗಳಲ್ಲಿ ತುದಿಗುಂಡಿಯಲ್ಲಿ ಕೂತು ಉಣ್ಣುವ ಸುಖ ಬಲು ಮಜವಾದದ್ದು.

'ರೊಟ್ಟಿ ಖಾನಾವಳಿ ಅಂತ ಎಲ್ಲರ ಬೋರ್ಡು ಕಂಡ್ರ ಸಾಕ. ಒಳಗ್ಹೊಕ್ಕು ಹೊಟ್ಟುಂಬ ಉಣ್ತೇವಿ. ರೊಟ್ಟಿ ಇಲ್ದ ಬದುಕಾಕ ಆಗದ ನಾವು ರೊಟ್ಟಿ ಮಾಡಿಸಿಕೊಂಡು ಹೋಗಾಕ ಅಂತ್ಹೇಳಿಯೆ ತಿಂಗಳಿಗೊಮ್ಮೆ ಊರಿಗೆ ಬರ್ತೇವೆಂದ ರೊಟ್ಟಿ ಬಾಂಧವ್ಯ ತೋರುತ್ತಾರೆ ಹೊಟ್ಟೆಪಾಡಿಗಾಗಿ ನಗರವಾಸಿಗಳಾದ ಅದೆಷ್ಟೋ ಗ್ರಾಮಸ್ಥರು. ಊರಿಗೆ ಬಂದು ವಾಪಾಸುಗುವಾಗ ನಡು ಎತ್ತರದ ಚೀಲಗಳಲ್ಲಿ ರೊಟ್ಟಿಗಳ ಘಟಘಟ.ಚಟಚಟ ಸದ್ದು ಅವರ ಕೆಲದಿನ ತಿನ್ನುಣ್ಣುವ ಚಿಂತೆಗೆ ಮಂಗಳ ಹಾಡಿರುತ್ತದೆ. ಹಾಸ್ಟೇಲುಗಳಲ್ಲಿದ್ದು ಓದುವವರದು ಇದೇ ಪಾಡು. ಶೇಂಗಾ ಚಟ್ನಿಯೋ, ಗುರೆಳ್ಳು ಚಟ್ನಿಯೋ ಮಾಡಿಸಿಕೊಂಡು ರೊಟ್ಟಿಯ ಗಂಟನ್ನು ಪುಸ್ತಕಗಳ ಬ್ಯಾಗಿನಂತೆಯೆ ಹೊತ್ತು ಹೊರಟಾಗ ಅದರ ಘಮ್ಮತ್ತೆ ಬೇರೆ. ಹಾಸ್ಟೆಲು ಜೀವನದಲ್ಲಿ ಕಿಸೆಯಲ್ಲಿ ಕಾಸಿಲ್ಲದಿದ್ದರೂ ರೊಟ್ಟಿಯ ಗಂಟಿನ ಚೀಲ ಯಾವುದಾದರೊಂದು ಚಟ್ನಿಪುಡಿಯೊಂದಿಗೆ ತಳವೊರಿದ್ದರೆ ಹೆದರಿಕೆಯ ಪ್ರಶ್ನೆಯೇ ಇಲ್ಲ.

'ಲೇ ನಿಮ್ಮೌನ ರೊಟ್ಟಿ ಸುಟ್ಟ ಹಾಕ್ಲಿಲ್ಲಾಂಸದ್ರ ನೀನೆಂಥಾ ಹೆಂಡ್ತಿ ಲೆ, ದುಡ್ದ ಬಂದ ಗಂಡಗ ಬೆಂಡಿನಂಥಾ ಅನ್ನ ಕುಚ್ಚಿ ಇಡತಿ' ರೊಟ್ಟಿ ಮಾಡಲಾರದ್ದಕ್ಕೆ ಹೆಂಡತಿಯರ ಬೈಯ್ಯುವ ಗಂಡಂದಿರ ಬಾಯಿಂದ ದಿನಾ ಹಳ್ಳಿಗಳಲ್ಲಿ ಬಹುತೇಕವಾಗಿ ಕಿವಿಗಪ್ಪಳಿಸುವ ಬೈಗುಳ ಇದು. ರೊಟ್ಟಿಗಳ ಮೇಲೆಯೆ ಅವಲಂಬಿತವಾಗಿರುವ ಉದರಗಳ ಜನಸಾಮಾನ್ಯ ಪಾಡಿದು ಎಂದರೂ ತಪ್ಪಾಗಲಿಕ್ಕಿಲ್ಲ. ರೊಟ್ಟಿ ಸುಡುವುದು ತುಸು ತ್ರಾಸದಾಯಕವೇ. ಅದರಲ್ಲೂ ಈಗಿನ ಮಹಿಳೆಯರಿಗಂತೂ ಹೆಚ್ಚಿನ ತ್ರಾಸು. ಮನೆಯ ಝಳದ ನಡುವೆ ಒಲೆಯ ಝಳವನ್ನು ಸಹಿಸಿಕೊಂಡು ರೊಟ್ಟಿ ಬೇಯಿಸುವಾಗ ಅದರ ಉಗಿ ಬೇರೆ. ಕಲ್ಲು ಕ್ವಾಣಿಗಿ ಮೇಲೆ ರಪರಪನೆ ರೊಟ್ಟಿಯ ತಟ್ಟುವಾಗ ತೋಳುಗಳಲ್ಲಿನ ಜಂಘಾಬಲವೆ ಉಡುಗಿರುತ್ತದೆ. ಈ ಮಾತಿಗೆ ತಕ್ಕಂತೆ ಉತ್ತರ ಕರ್ನಾಟಕದಲ್ಲಿ

'ರೊಟ್ಟಿಯ ತಟ್ಟಿ ತಟ್ಟಿ ನೋಯತಾವ ರಟ್ಟಿ'

ಎನುವ ಜನಪದ ಗೀತೆ ಬಲು ಪ್ರಸಿದ್ಧ. ಊಟ ಮಾಡುವಾಗ ಅತಿಥಿಗಳು, ಪರಿಚಿತರು ಆಗಮಿಸಿದರೆ 'ಊಟ ಮಾಡೋಣ ಬನ್ನಿ' ಅನ್ನುವ ಆಹ್ವಾನವಿಯ್ಯುವುದು ವಾಡಿಕೆ. ಆದ್ರೆ 'ರೊಟ್ಟಿ ತಿನ್ನಾಣ ಬರ್ರಿ' ಎನ್ನೋದು ಉತ್ತರ ಕರ್ನಾಟಕ ಭಾಗದಲ್ಲಿ

ಮಾತ್ರ ಚಾಲ್ತಿ. ನುಡಿಗಟ್ಟಿಗೇ ಪರ್ಯಾಯ ಎನ್ನುವುದಕ್ಕಿಂತ ಹೆಚ್ಚಾಗಿಯೇ ರೊಟ್ಟಿಯ ಪ್ರವರ ಚಾಲ್ತಿಯಲ್ಲಿದೆ ಎಂದರೇನೆ ಸಮಂಜಸವೆಂದು ತೋರುತ್ತದೆ. ರೊಟ್ಟಿ ನಮ್ಮ ಹಳ್ಳಿಗಾಡಿನ ಜನರ ತಿಳುವಳಿಕೆಯಲ್ಲಿ ಸ್ವಸ್ಥತೆಯ ಪ್ರಪಂಚ. ಹಳ್ಳಿಗಾಡಿನ ಜನರಲ್ಲಿ ಕೃಷಿ ಚಟುವಟಿಕೆಗಳೆಷ್ಟು ಅನಿವಾರ್ಯವೋ? ಜೋಳದ ರೊಟ್ಟಿಯೂ ಅಷ್ಟೆ ಅನಿವಾರ್ಯ. ರೊಟ್ಟಿ ಅಂದ್ರೇನೆ ಊಟ. ಊಟ ಅಂದ್ರೇನೆ ರೊಟ್ಟಿ ಎಂದು ತಿಳಿದುಕೊಂಡಿರುವ ಜನರ ಮನಸ್ಥಿತಿಗೆ ಹಿಡಿದ ಕನ್ನಡಿಯಿದು. ಜೋಳ ಬರೀ ಕಾಳಲ್ಲ, ಭೂತಾಯಿ ಕರುಣಿಸಿದ ಧಾನ್ಯ ಲಕ್ಷ್ಮೀ. ರೊಟ್ಟಿ ಬರೀ ಹೊಟ್ಟೆ ತುಂಬಿಸುವ ಖಾದ್ಯವಲ್ಲ, ಅನ್ನಪೂರ್ಣೇಶ್ವರಿ ಎನ್ನುವುದೇ ರೊಟ್ಟಿಯ ಕುರಿತು ಮಾತಿಗೆಳೆದಾಗ ಎಲ್ಲರ ಬಾಯಿಂದುರುವ ಉವಾಚ. ಒಬ್ಬರಲ್ಲ ಇಬ್ಬರಲ್ಲ ಮಾತನಾಡಿಸಿದೆಲ್ಲರ ಬಾಯಲ್ಲೂ ಈ ಮಾತುಗಳೆ ಪುನರಾವರ್ತಿತಗೊಂಡಿತೆಂದರೆ ರೊಟ್ಟಿಯ ಮಹತ್ವ ಅರಿವಾಗದಿರಲು ಸಾಧ್ಯವೆ?

ಗದಗ ಜಿಲ್ಲೆಯ ಶಿರೋಳ ಹಾಗೂ ಡಂಬಳ ಗ್ರಾಮಗಳಲ್ಲಿ ಪ್ರತೀವರ್ಷ ರೊಟ್ಟಿ ಜಾತ್ರೆಯೇ ನಡೆಯುತ್ತದೆ. ಪ್ರತಿವರ್ಷದ ಜಾತ್ರೆಯಲ್ಲಿ ಪ್ರಸಾದವಾಗಿ ಜೋಳದ ರೊಟ್ಟಿ ಊಟವನ್ನ ನೀಡಲಾಗುವುದರಿಂದ ರೊಟ್ಟಿಯ ಹೆಸರಲ್ಲೆ ಜಾತ್ರೆಯನ್ನು ಸಂಬೋಧಿಸಲಾಗುತ್ತಿದೆ. ಎರಡು ದಿನಗಳ ಈ ಜಾತ್ರೆ ನಾಡಿನಾದ್ಯಂತ ಹೆಸರು ಮಾಡಿದ್ದು ಶ್ರಮಿಕ ವರ್ಗದ ಜನರನ್ನು ಮುಖ್ಯ ವಾಹಿನಿಗೆ ತರುವುದರ ಮೂಲಕ. ಊರಿನ ಪ್ರತಿ ಮನೆಯಿಂದ ತಯಾರಾದ ರೊಟ್ಟಿಗಳು ಪ್ರಸಾದದ ರೂಪದಲ್ಲಿ ಸರ್ವರಿಗೂ ಹಂಚಲ್ಪಡುತ್ತವೆ. ರೊಟ್ಟಿ ಜಾತ್ರೆಯ ತಯಾರಿಗೆ ಕೆಲದಿನಗಳು ಉಳಿದಿರುವಂತೆಯೆ ತೋಂಟದಾರ್ಯ ಮಠದಿಂದ ಜೋಳದ ಹಿಟ್ಟನ್ನು ಗ್ರಾಮದ ಪ್ರತೀ ಮನೆ ಮನೆಗೂ ತಲುಪಿಸುವುದು ಸಂಪ್ರದಾಯ. ಹಿಟ್ಟು ತಲುಪದ ಮನೆಯವರೂ ಸಹಿತ ಇಲ್ಲಿ ರೊಟ್ಟಿ ಮಾಡಿ ಮಠಕ್ಕೆ ನೀಡುತ್ತಾರೆ. ಮಠದಿಂದ ಹಿಟ್ಟಿನ ಜೊತೆಗೆ ತಮ್ಮ ಮನೆಯ ಹಿಟ್ಟನ್ನೂ ಸೇರಿಸಿ ಹೆಚ್ಚೆಚ್ಚು ರೊಟ್ಟಿಗಳನ್ನು ಮಾಡಿ ಶ್ರೀಮಠಕ್ಕೆ ತಲುಪಿಸುವವರ ಸಂಖ್ಯೆಯೇನು ಇಲ್ಲಿ ಸಣ್ಣದಲ್ಲ. ಇಲ್ಲಿ ಇನ್ನೊಂದು ವಿಶೇಷವನ್ನು ಪರಿಗಣಿಸಲೇಬೇಕು. ಕೆಲ ಮನೆಗಳಲ್ಲಿ ಮಹಿಳೆಯರಿಲ್ಲದಾಗ್ಯೂ ಹಾಗೂ ವೃದ್ಧರಿದ್ದರೂ ರೊಟ್ಟಿ ಶ್ರೀ ಮಠದ ಆಹಾರ ಖಜಾನೆಗೆ ತಲುಪುವುದು ಬಲು ದೊಡ್ಡ ಮಾದರಿಯೇ ಸರಿ. ವರ್ಷದಿಂದ ವರ್ಷಕ್ಕೆ ರೊಟ್ಟಿಗಳಿಗಾಗಿಯೇ ಬಿಳಿ ಜೋಳದ ಚೀಲಗಳ ಸಂಖ್ಯೆ ದ್ವಿಗುಣಗೊಳ್ಳುತ್ತಿರುವುದು ರೊಟ್ಟಿಜಾತ್ರೆಯ ಜನಪ್ರಿಯತೆಗೆ ಹಿಡಿದ ಕೈಗನ್ನಡಿ. ಇನ್ನು ಬುಟ್ಟಿಯಲ್ಲಿ ಬೀಡು ಬಿಟ್ಟ ರೊಟ್ಟಿಗಳನ್ನು ಮಠಕ್ಕೆ ನೀಡಿಯಾದ ಮೇಲಿನ ಊರಿನವರ ಸಂಭ್ರಮ ಎಣೆಗೆ ಸಿಗಲಾರದಂಥದ್ದು. ಅಂದು ನೆರೆ ಮನೆಯವರೊಟ್ಟಿಗಿನ ಅವರ ಉಭಯ ಕುಶಲೋಪರಿಯಲ್ಲಿ ಅದು ಅಗ್ರಸ್ಥಾನದ ಸಂಗತಿ.

ಡಂಬಳದ ಅಕ್ಕ ಪಕ್ಕದ ಹಳ್ಳಿಗಳ ಹಾಗೂ ತಾಂಡಾಗಳ ಕೊಡುಗೆ ಜಾತ್ರೆ ವಿಚಾರದಲ್ಲಿ ಮರೆಯಲಾಗದ್ದಂಥದ್ದು. ಸ್ವಇಚ್ಛೆಯಿಂದ ಜೋಳದ ರೊಟ್ಟಿಗಳನ್ನು ಟ್ರ್ಯಾಕ್ಟರ್ ಹಾಗೂ ಚಕ್ಕಡಿಗಳ ಮೂಲಕ ಮಠಕ್ಕೆ ತಲುಪಿಸುವುದು ಇವರ ದೊಡ್ಡ ವಿಶೇಷತೆ. ಸಾಮರಸ್ಯಕ್ಕೆ ಸಂಪರ್ಕ ಕೊಂಡಿಯಾಗಿ ರೊಟ್ಟಿ ಈ ಗ್ರಾಮಗಳಲ್ಲಿ ಸಮರ್ಪಕವಾಗಿ ರೂಢಿಯಲ್ಲಿರುವುದು ಸಾಮರಸ್ಯ ಮತ್ತೊಂದು ಆಯಾಮವೆಂದು ಪರಿಗಣಿಸದಿರಲು ಹೇಗೆ ಸಾಧ್ಯ? ಊರಿನ ಪ್ರತಿ ಮನೆಯಿಂದ ಜಾತಿ,ಮತ ಭೇದಗಳ ಆಚೆಗೆಸೆದು ತಯಾರಿಸಲಾದ ರೊಟ್ಟಿಗಳು ಇಲ್ಲಿ ಪ್ರಸಾದವಾಗಿ ಹಸಿವು ಇಂಗಿಸುತ್ತವೆ. ರೊಟ್ಟಿಯ ಮೇಲಿನ ಗ್ರಾಮಸ್ಥರ ಕೈ ರೇಖೆಗಳು ಲಕ್ಷಾಂತರ ಜನರ ಹಸಿವು ಇಂಗಿಸುತ್ತಿವೆ. ಸಹಪಂಕ್ತಿ ಭೋಜನದ ಮೂಲಕ ಏಕತೆಗೂ ಕಾರಣವಾಗಿರುವುದು ಸದ್ಯದ ದರ್ದು ಕೂಡ. ಉತ್ತರ ಕರ್ನಾಟಕದ ಗಟ್ಟಿ ಆಹಾರ ಎಂದು ಕರೆಸಿಕೊಳ್ಳುವ ರೊಟ್ಟಿ ಹಲವಾರು ಆಯಾಮಗಳಲ್ಲಿ ಇಲ್ಲಿನ ಜನರ ಜೀವನದಲ್ಲಿ ಹಾಸು ಹೊಕ್ಕಾದ ಪರಿ ಇದು. 'ಅನ್ನ ದೇವರ ಮುಂದೆ ಬೇರೆ ದೇವರಿಲ್ಲ ಕಾಣಿ' ಎನ್ನುವುದನ್ನು ಉತ್ತರ ಕರ್ನಾಟಕದ ಜನ 'ರೊಟ್ಟಿ ದೇವರ ಮುಂದೆ ಅನ್ಯ ದೇವರಿಲ್ಲ ಕಾಣಿ' ಎಂದು ಬದಲಾಯಿಸುತ್ತಾ ಮಾತನಾಡುವದಂತೂ ಬಲು ದೊಡ್ಡ ಖರೆ.

ನಾಗರ ಪಂಚಮಿ ಹಬ್ಬದ ಮುನ್ನಾದಿನ ರೊಟ್ಟಿ ಪಂಚಮಿ ಆಚರಿಸುವುದು ಸಂಪ್ರದಾಯ. ಈ ಹಬ್ಬದಲ್ಲಿ ರೊಟ್ಟಿಯೇ ಅಗ್ರಸ್ಥಾನಿ. ಕರೆಎಳ್ಳು ಹಚ್ಚಿ ಬೇಯಿಸಲಾದ ರೊಟ್ಟಿಗಳು ವಿಶೇಷವಾಗಿರುತ್ತವೆ. ಮೆಂತ್ಯ ಸೊಪ್ಪು, ಜುಣಕ, ಮೂಲಂಗಿ ಸೊಪ್ಪು, ಕಾಳು ಪಲ್ಯಗಳೊಟ್ಟಿಗೆ ನೆರೆಹೊರೆಯವರಿಗೆ ಹಂಚಲಾಗುತ್ತದೆ. ಪರಸ್ಪರಲ್ಲಿ ಆಯುರಾರೋಗ್ಯ ವೃದ್ಧಿಸಿ, ಸೌಹಾರ್ದಯುತ ಜೀವನ ಆಶಿಸುವ ಪರಿಗೆ ರೊಟ್ಟಿಯೇ ಸಮರ್ಥ ಮಾಧ್ಯಮವೆಂದು ನಿರೂಪಿಸುವಲ್ಲಿ ಪದೇ ಪದೇ ಯಶಸ್ವಿಯಾಗುವುದು ರೊಟ್ಟಿಯ ಸಾರ್ಥಕತೆಯೇ ಸರಿ.

ಹಳ್ಳಿಗಾಡಿನ ಬಹುತೇಕ ಮನೆಗಳಲ್ಲಿ ಈಗಲೂ ಅನ್ನ ಕುದಿಯುವುದು ತಿಂಗಳಿಗೆ ಒಂದೋ,ಎರಡೋ ಸಾರಿ ಮತ್ತು ಹಬ್ಬ ಹರಿದಿನಗಳಲ್ಲಿ ಮಾತ್ರ. ಬರೀ ಆಹಾರ ಪದಾರ್ಥವಾಗದ ರೊಟ್ಟಿ ಗ್ರಾಮೀಣರ ಪಾಲಿಗೆ ದಿನದ ಅವಶ್ಯಕತೆ ಮತ್ತು ಅನಿವಾರ್ಯತೆಯು ಹೌದು. ನಿತ್ಯವೂ ರೊಟ್ಟಿಯ ಬುಟ್ಟಿ ಅವಿನಾಭಾವ ಸಂಬಂಧವೊಂದನ್ನ ಸದೃಢವಾಗಿ ನಮ್ಮೊಟ್ಟಿಗೆ ಹೊಂದಿರುವುದಂತೂ ಖರೆ.

ಹಳ್ಳಿಗಳ ಮುರುಕು ಮನೆ ಗುಡಿಸಲುಗಳಲ್ಲಿ ಬೆಳಗು ಹರಿಯುವುದೆ ರೊಟ್ಟಿಯ ಸಪ್ಪಳದ ಮೂಲಕ. ಅಲ್ಲಿನ ಮಹಿಳೆಯರು ನಸುಕಿನಲ್ಲಿಯೆ ಎದ್ದು ದಿನದ ಮೂರೂ ಹೊತ್ತಿಗೂ ಆಗುವಷ್ಟು ರೊಟ್ಟಿಯನ್ನು ಎಂಟು ಗಂಟೆಯೊಳಗೆ ಸುಡುತ್ತಾರೆ. ಗಂಡು ಮಕ್ಕಳು ರೊಟ್ಟಿಯ ಗಂಟನ್ನ ಪಿಕಾಸಿ,ಗುದ್ದಲಿ, ಕೊಡಲಿಯ ಜೊತೆಗೆ ಹೆಗಲಿಗೇರಿಸಿದರೆ, ಇದೇ ರೊಟ್ಟಿಗಂಟು ಮಹಿಳೆಯರು ಕೂಲಿಗೆ ಹೋಗುವಾಗ ತಲೆಯ ಮೇಲಿರುತ್ತದೆ.

ಮನೆಯ ಮಕ್ಕಳೆಲ್ಲಾ ದಿನಾ ಬೆಳಿಗ್ಗೆ ಎರಡ್ಮೂರು ರೊಟ್ಟಿ ತಿಂದು, ಮಧ್ಯಾಹ್ನಕ್ಕೆ ಬೇಕಾದ್ದಷ್ಟನ್ನ ಎಣಿಸಿಟ್ಟು ಹೊರ ಬೀಳುತ್ತವೆ. ಊರಲ್ಲಿನ ಎಲ್ಲಾ ಮನೆಗಳ ಕಥೆ ಇದಕ್ಕೆ ಭಿನ್ನವೇನಲ್ಲ.

ಕಪ್ಪಗಿದ್ದರೂ ಆನೆ ಸೊಂಡಿಲಿನಂತಹ ತೋಳುಗಳುಳ್ಳ ಜನ ಹಳ್ಳಿಗಾಡಿನ ಹಾದಿ ಬೀದಿಗಳಲ್ಲಿ ಸಾಮಾನ್ಯ. ಹೀಗೆ ದಷ್ಟ ಪುಷ್ಟ ಮೈಕಟ್ಟಿನ ಸಹಜ ಸಿಕ್ಸ್ ಪ್ಯಾಕ್‌ಗಳ ಮನುಷ್ಯರನ್ನ ಕಣ್ತುಂಬಿಕೊಳ್ಳುವುದೇ ಸೊಗಸು. ರೊಟ್ಟಿ ಕರುಣಿಸುವ ನೈಸರ್ಗಿಕ ಆರೋಗ್ಯವನ್ನು ವಿವಿಧ ಆಧುನಿಕ ತಿನಿಸುಗಳ ಕೃತಕ ಸೌಂದರ್ಯದಲ್ಲಿ ಅಳೆಯುವ ನಿಲುವು ಎಷ್ಟರದ್ದು? ರೊಟ್ಟಿಯಲ್ಲಿ ದೈನಂದಿನ ಬಳಕೆಯ ಇತರ ಆಹಾರ ಪದಾರ್ಥಗಳ ಎರಡರಷ್ಟು ಶರೀರವನ್ನು ಸ್ವಸ್ಥವಾಗಿರಿಸುವ ಅಂಶಗಳಿವೆ. ಬೊಜ್ಜು, ಕಫ, ಪಿತ್ತಗಳಿಗೆ ವೈರಿಯಾಗಿರುವ ರೊಟ್ಟಿ ರಟ್ಟೆಗೆ ಶಕ್ತಿವರ್ಧಕ. ತನ್ನ ವಯಸ್ಸು ಒಂದು ಶತಮಾನ ದಾಟಿದರೂ ಚೂರು ಆಚೀಚೆ ಅಲುಗಾಡದ ನಮ್ಮೂರ ಭರಮಜ್ಜನನ್ನ ನಿನ್ನ ಆರೋಗ್ಯದ ಗುಟ್ಟೇನೆಂದು ಮಾತಿಗೆಳೆದರೆ 'ಮೂರು ಹೊತ್ತು ಬಿಸೇ ಜ್ವಾಳದ ರೊಟ್ಟಿ ನೋಡಪಾ' ಎಂದು ಮುಗ್ಧವಾಗಿ ನಗುವಾಗ ಆತನ ಗಟ್ಟಿಮುಟ್ಟು ಹಲ್ಲುಗಳು ಫಳಫಳಿಸುತ್ತವೆ. 'ರೊಟ್ಟಿ ತಿಂದವ ಗಟ್ಟಿ, ಜಗಜಟ್ಟಿ' ನಾಣ್ಣುಡಿ ಈ ಕಾರಣಕ್ಕಾಗಿಯೆ ಚಾಲ್ತಿಗೆ ಬಂದಿರಬೇಕು.

**ಸಿದ್ದು ಸತ್ಯನ್ನನವರ**
ಚುಕ್ಕುಬುಕ್ಕು 2014

# ರಾಮಂದ್ರ

ರಾಮಮಂದಿರ ಅಂದರೆ ಏನೇನೋ ಚಿತ್ರಗಳು ಮೂಡುವ ಈ ಕಾಲದಲ್ಲಿ, ನನಗಂತೂ ನಮ್ಮ ಸೋದರತ್ತೆ ಊರಿನ ಮಧ್ಯದಲ್ಲಿದ್ದ ರಾಮಮಂದಿರವೇ ಕಣ್ಮುಂದೆ ಬರುತ್ತದೆ. ಸುಮಾರು ನೂರೈವತ್ತು ಮನೆಗಳ ಪುಟ್ಟ ಊರದು. ನನ್ನ ಬಾಲ್ಯ ಬಹುಪಾಲು ಕಳೆದಿದ್ದು ಆ ಊರಿನಲ್ಲೆ. ನನ್ನ ಬಾಲ್ಯದ ಅನೇಕ ಚಟುವಟಿಕೆಗಳು ಅದರ ಸುತ್ತಮುತ್ತ ಹರಡಿಹೋಗಿವೆ. ಆದ್ದರಿಂದ ಆ ಚಿತ್ರ ಮನಸಿನಿಂದ ಹೋಗಲೊಲ್ಲದು. ಕೆಮ್ಮಣ್ಣು ಗೋಡೆಯ ಅದರ ಒಳಭಾಗದಲ್ಲಿ ಇಪ್ಪತ್ತು ಜನ ಕೂರುವಷ್ಟು ಜಾಗ. ಈಚೆ ಪಡಸಾಲೆಯಲ್ಲಿ ಒಳಕ್ಕಿಂತ ತುಸು ಚಿಕ್ಕದಾದ ಜಾಗ. ಬೀದಿಭಾಗಕ್ಕೆ ಮರ ಮತ್ತು ಕಬ್ಬಿಣ ಬಳಸಿ ಒಂದು ಜಾಲರಿ ಮಾಡಿದ್ದರು. ಮಧ್ಯೆ ಗೋಡೆಗೂ ದೊಡ್ಡ ಎರಡು ಕಿಟಕಿಗಳು. ಹಲಗೆಸೇವೆ ಅಟ್ಟವಿದ್ದ ಈ ರಾಮಮಂದಿರದ ಮೇಲಿನ ಹೊದಿಕೆ ಮಂಗಳೂರು ಹೆಂಚಿನದು.

ರಾಮಮಂದಿರ ಎಂದರೆ ಗ್ರಂಥಸ್ಥ ಎನಿಸುತ್ತದೆ. ರಾಮಂದ್ರ ಎನ್ನುವುದು ಜನಪದೀಯ. ಹೀಗಾಗಿ ಬರಹದಲ್ಲೂ ಹಾಗೆ ಬಳಸುವೆ. ಓದುಗರು ಇದನ್ನು ಗಮನಿಸಿ, ಮನ್ನಿಸಿ, ಓದಿಕೊಳ್ಳಬೇಕು. ಈ ರಾಮಂದ್ರದ ಇನ್ನೂ ಒಂದು ವಿಶೇಷ ಏನೆಂದರೆ ನಮಗೆ ಅದು ಪಾಠಶಾಲೆ ಆಗಿತ್ತು. ಆಗ ಊರಲ್ಲಿ ಎರಡು ಕೋಣೆಗಳ ಶಾಲೇಲಿ ಏಳು ತರಗತಿಗಳು ನಡೆಯುತ್ತಿದ್ದವು. ಒಂದು ರೂಮಲ್ಲಿ ತಲಾ ಎರಡೆರಡು ಮಣೆಗಳು ಸೇರಿ ನಾಲ್ಕನೆ ಕ್ಲಾಸ್ ತನಕ ಪಾಠ ನಡೆಯುತ್ತಿದ್ದವು. ಇನ್ನೊಂದು ಕೋಣೆಯಲ್ಲಿ ಐದು–ಆರು ಕ್ಲಾಸಿನ ವಿದ್ಯಾರ್ಥಿಗಳು ಉತ್ತರಕ್ಕೆ ಮುಖ ಮಾಡಿದರೆ, ದಕ್ಷಿಣಕ್ಕೆ ಏಳನೇ ಕ್ಲಾಸಿನ ವಿದ್ಯಾರ್ಥಿಗಳು. ಅವರೆದುರು ಎಡ್ಮಾಷ್ಟ್ರು.. ಅಷ್ಟರಲ್ಲೇ ಎಡ್ಮಾಷ್ಟ್ರು ಮತ್ತು ಇನ್ನೊಬ್ಬರಾದ ಡೀಕೆ ಮಾಸ್ಟ್ರು ನಮ್ಮೆಲ್ಲರನ್ನು ನಿಭಾಯಿಸುತ್ತಿದ್ರು. ನಾನು ಮೂರನೇ ಕ್ಲಾಸ್‌ಗೆ ಬರೋತನಕ ಹೀಗೆ ನಡೆಯುತ್ತಿತ್ತು. ಅಕ್ಕಪಕ್ಕದ ಊರುಗಳಿಂದ ಓದಲು ಬರುವವರು ಹೆಚ್ಚಿದಂತೆ ಶಾಲೆ ಚಿಕ್ಕದಾಗತೊಡಗಿತು. ಎಡ್ಮಾಷ್ಟ್ರು ಬಸವೇಗೋಡ್ರು ಅದೇ ಊರಿನೋರು. ಹೀಗಾಗಿ ರಾಮಂದ್ರವನ್ನು ಮೂರು, ನಾಕನೇ ಕ್ಲಾಸಿಗೆ ಬಿಟ್ಟುಕೊಡುವಂತೆ ಊರವರ ಮನ ಒಲಿಸಿದ್ದರು.

ಇದೆಲ್ಲದರಿಂದಾಗಿ ನಾವು ರಾಮಂದ್ರಕ್ಕೆ ಹೊಸ ಮಾಸ್ಟ್ರು ಜತೆಗೆ ಬಂದಿದ್ದೆವು. ಆ ಮೊದಲ ದಿನಗಳ ಸಂಭ್ರಮ ನೆನೆಸಿಕೊಂಡರೆ ಇನ್ನೂ ಅದೇ ಸಂಭ್ರಮ ಮೈಯಲ್ಲಿ ಉಕ್ಕುತ್ತದೆ. ಊರ ಮುಂದಿನ ಶಾಲೆ ಬಳಿ ಪ್ರಾರ್ಥನೆ ಮುಗಿಸಿ, ಊರ ಮಧ್ಯದ ರಾಮಂದ್ರಕ್ಕೆ ಬರುವಾಗ ವಿದೇಶಪ್ರಯಾಣ ಮಾಡಿದವರಂತೆ ಬರುತ್ತಿದ್ದೆವು. ಪ್ರತಿದಿನ ಊರಜನ ಇದೊಂದು ವಿಶೇಷ ಎಂಬಂತೆ ನೋಡುತ್ತಿದ್ದರು. ಹೊಲ–ಗದ್ದೆಗೆ

ಹೋಗುತ್ತಿದ್ದವರೂ ಕೂಡ ನಮ್ಮನ್ನೆಲ್ಲ ಕಣ್ಣರಳಿಸಿ ನೋಡಿ ಆನಂದಿಸುತ್ತಾ ಹೋಗುತ್ತಿದ್ದರು. ದಿನವೂ ನೋಡುತ್ತಿದ್ದ ಕೆಲವು ಖಾಯಂ ಪ್ರೇಕ್ಷಕರು 'ಆ ದಿನ ಯಾರು ಬಂದಿಲ್ಲ' ಎಂಬುದನ್ನು ಪತ್ತೆ ಮಾಡಿ ಹೇಳುತ್ತಿದ್ದರು. ಮತ್ತೆ ಕೆಲವರು 'ಏ ಗೊಣ್ಣೆಯ ಶೀಟ್ಕಳಿಲ್ಲಾ. ತಲೆಯ ಸರ್ರ್ಯಾಗಿ ಬಾಚ್ಕಂಡು ಬರಕೇನ್ರಿಲ' ಅಂತ ಕಾಳಜಿ ತೋರಿಸ್ತಿದ್ರು. ಇದೆಲ್ಲ ಪುಟ್ಟ ಊರುಗಳಲ್ಲಿ ನಡೆವ ಪುಟ್ಟ ಕ್ರಿಯೆಗಳಿಗೂ ಬರುವ ಮಹತ್ವ.

ಹೊಸದಾಗಿ ಬಂದ ಅಣ್ಣೇಗೌಡ ಮಾಷ್ಟ್ರು ಮೂರು, ನಾಕನೇ ಕ್ಲಾಸನ್ನು ರಾಮಂದ್ರದ ಎರಡು ಭಾಗಕ್ಕೆ ಕೂರಿಸಿ ಪಾಠ ಮಾಡುತ್ತಿದ್ದರು. 'ಏ ಬಲ್ಲಿರ್ಲ್ಲಾ ಪಾಪ. ಏ ಓದ್ಕ್ಯಳಿರ್ಲಾ ಪಾಪ'. ಇದು ಅವರು ಯಾವಾಗಲೂ ಆಡುತ್ತಿದ್ದ ಮಾತುಗಳು. ನಾವಂತೂ ಬಿದ್ದೂ ಬಿದ್ದು ನಗುತ್ತಿದ್ದೆವು. 'ಏ ಇದ್ಯಾಕಿರ್ಲ ಪಾಪ. ಇಂಗೆ ಶಿರಿಯಾಡ್ತಿರಿ' ಅನ್ನೋರು. ನಮಗೋ ಇನ್ನೂ ನಗು. ನಾವು ಸಂಜೆ ಆಟಕ್ಕೆ ಹೋದಾಗ ನಮಗಿಂತ ಚಿಕ್ಕ ಹಾಗು ದೊಡ್ಡ ವಿದ್ಯಾರ್ಥಿಗಳ ಜತೆ ನಮ್ಮ ಸೌಭಾಗ್ಯದ ಬಗ್ಗೆ ಹೇಳಿಕೊಂಡು ಅವರಿಗೆ ಹೊಟ್ಟೆ ಉರಿಸುತ್ತಿದ್ದೆವು. ನಮಗಿಂತ ಚಿಕ್ಕವರು ಮುಂದಿನ ವರ್ಷ ಹೇಗೂ ಅಲ್ಲಿಗೆ ಬರ್ತೀವಿ ಅಂತ ಸಮಾಧಾನಪಟ್ಟುಕೊಂಡರೆ ದೊಡ್ಡವರು ಏನೋ ಕಳಕೊಂಡವರಂತೆ ಸುಮ್ಮನಾಗುತ್ತಿದ್ದರು. ಆದರೂ ಸೀನಿಯಾರಿಟಿ ಅಹಂಕಾರ ಇರುತ್ತಲ್ಲ. ಜ್ಯೂನಿಯರ್‌ಗಳು ಏನೇ ಮಾಡಿದರೂ ಒಪ್ಪದಿರೋದು, ಕೊಂಕು ತೆಗೆಯೋದು ಸೀನಿಯಾರಿಟಿಯ ಲಕ್ಷಣ ತಾನೇ? ಅದರ ದೆಸೆಯಿಂದ 'ಅದೊಳ್ಗೆ ಕುರಿದೊಡ್ಡಿ ಇದ್ದಂಗೆ ಐತೆ' ಅಂತಾನು ಒಂದು ಬಾಂಬು ಹಾಕುತ್ತಿದ್ದರು. ನಮಗದೆಲ್ಲ ತಾಕುತ್ತಿರಲಿಲ್ಲ. ಯಾಕೆಂದರೆ ರಾಮಂದ್ರ ನಮ್ಮ ಕಪಿಚೇಷ್ಟೆಗೆ ನೆಚ್ಚಿನ ಜಾಗವಾಗಿತ್ತು. ಪ್ರತಿ ವರ್ಷ ನಾಟಕಗಳ ತಾಲೀಮು ನಡೆಯುತ್ತಿದ್ದುದೇ ರಾಮಂದ್ರದಲ್ಲಿ. ಹೀಗಾಗಿ ಡೊಂಕಾದ ಬಿಲ್ಲು, ಬಾಣಗಳು. ಬಣ್ಣ ಮಾಸಿದ ಗದೆ, ಒಂದಿಷ್ಟು ರಟ್ಟಿನ ಕಿರೀಟಗಳು, ಈಟಿಗಳು ಇವೆಲ್ಲ ನಮಗೆ ಅಲ್ಲಿ ಕಾಂಪ್ಲಿಮೆಂಟರಿ.

ನಮ್ಮ ಅಣ್ಣೇಗೌಡ ಮಾಸ್ಟ್ರು ಬೀಡಿ ಹುಟ್ಟಿದ ದಿನವೇ ಹುಟ್ಟಿದ್ದರು. ಅರ್ಧಗಂಟೆ ಪಾಠ ಮಾಡಿ ಏನೋ ಒಂದು ಲೆಕ್ಕಾನೋ, ಡಿಕ್ಟೇಷನನ್ನೋ ಹೇಳಿ 'ಶೈಲೆಂಟ್ ಆಗಿರ್ಬೇಕು ಕಣ್ರೇಲಾ ಪಾಪ' ಅಂದು ಬೀಡಿ ಕಚ್ಚಿಕೊಂಡು ಹೋಗಿಬಿಡುತ್ತಿದ್ದರು. ಬಹುಶ ನಾವು ಕೇಳಿದ ಮೊದಲ ಇಂಗ್ಲೀಸು ಪದವೇ ಶೈಲೆಂಟ್. ಅಣ್ಣೇಗೌಡರ ಬೀಡಿ ವಾಸನೆಯ ದೆಸೆಯಿಂದ ಅವರು ಇರುವ ದೂರವನ್ನು ನಾವು ನಿರ್ಧರಿಸಿ ಆಟವಾಡಿಕೊಳ್ಳುತ್ತಿದ್ದೆವು. ಅವರೂ ಪಕ್ಕದೂರಿನ ರೈತಾಪಿ ಜನ. ಹೀಗಾಗಿ ಕೆಲವು ಸಲ ಕ್ಲಾಸ್‌ಮಾನೀಟರ್ ಆದ ನಂಗೆ 'ನೋಡ್ಕಳ್ಳ ಪಾಪ' ಅಂತೇಳಿ ಜಮೀನಿನ ಕಡೆ ಹೋಗಿ ಬಿಡುತ್ತಿದ್ದರು. ಇಂಥ ಸಂದರ್ಭದಲ್ಲಿ ನಮ್ಮ ಹನುಮೋಲ್ಲಾಸ ಇಮ್ಮಡಿಸುತ್ತಿತ್ತು. ರಾಮಂದ್ರದ ಅಟ್ಟದ ಮೇಲಿದ್ದ ಗದೆ, ಬಿಲ್ಲು ಬಾಣ ಇತ್ಯಾದಿಗಳು ನಮ್ಮ ಕೈ ಸೇರುತ್ತಿದ್ದವು.

ಆ ಹಿಂದಿನ ವರ್ಷ ಆಡಿದ ನಾಟಕದ ಪಾತ್ರಗಳು ನಮ್ಮ ನರ ನಾಡಿಗಳಲ್ಲಿ ಪಡಿ ಮೂಡಿರುತ್ತಿದ್ದರಿಂದ ನಾವೇ ಪಾತ್ರಧಾರಿಗಳಾಗಿ ನಾಟಕ ಶುರು ಮಾಡುತ್ತಿದ್ದೆವು. ಕೆಲವು ಸಲ ಪಾತ್ರ ಹಂಚಿಕೆಯೇ ತಲೆನೋವಾಗಿ ಬಿಡುತ್ತಿತ್ತು. ರಾವಣ, ಹನುಮಂತ, ವಿಶ್ವಾಮಿತ್ರ, ಧುರ್ಯೋಧನ, ಭೀಮ, ಶಕುನಿ, ಶನಿಮಾತ್ಮ ಪಾತ್ರಗಳಿಗೆ ಸಿಕ್ಕಾಪಟ್ಟೆ ಡಿಮ್ಯಾಂಡ್. ಕ್ಲಾಸ್‌ಮಾನೀಟರ್ ಆದ ನನಗೆ ಇದೊಂದು ಹೆಚ್ಚುವರಿ ಜಬಾದಾರಿ ಬೇರೆ. ಇಂಥ ಜಬಾದಾರೀನ–ಯಾರು ಎಷ್ಟು ಬಣ್ಣದ ಗೋಲಿ ಕೊಡ್ತಾರೆ ಎಂಬುದನ್ನು ಆಧರಿಸಿ– ಕಷ್ಟದಿಂದ ನಿಭಾಯಿಸುತ್ತಿದ್ದೆ! ಆಮೇಲೆ ನಾಟಕ ಮಾಡುತ್ತಿದ್ದೆವು. ಆಗೀಗ ಯಾರಾದರೂ ಊರವರು ನಮ್ಮ ಗಲಾಟೆ ಕೇಳಿ ಕಿಟಕಿಯಲ್ಲಿ ಬಗ್ಗಿ ಗದರಿ ಹೋಗುತ್ತಿದ್ದುದು ಬಿಟ್ಟರೆ ಯಾವ ತೊಂದರೆಯೂ ನಮಗಿರುತ್ತಿರಲಿಲ್ಲ. ಮಾಸ್ತ್ರು ಬೀಡಿ ವಾಸನೆ ಹತ್ತಿರವಾದೊಡನೆ ನಾಟಕಕ್ಕೆ ಮಂಗಳ ಹಾಡುತ್ತಿದ್ದೆವು.

ರಾಮಂದ್ರ ಊರ ನಾಟಕದ ತಾಲೀಮುಮಂದಿರ ಎಂದೆನಷ್ಟೆ. ರಾಮಂದ್ರದ ಅಟ್ಟದ ಮೇಲೆ ಒಂದೆರಡು ಚಾಪೆ, ದಿಂಬು, ಹಾಸಿಗೆ ಇಟ್ಟಿದ್ದರು. ಅದು ನಾಟಕ ಕಲಿಸಲು ಬರುವ ಮೇಷ್ಟ್ರಿಗೆ ಊರ ಕಡೆಯಿಂದ ಮಾಡಿಸಿಟ್ಟಿದ್ದ ಖಾಯಂ ಆಸ್ತಿ. ಮೇಷ್ಟು ಬದಲಾಗುತ್ತಿದ್ದರೂ ಅದೇ ಹಾಸಿಗೆ ಮಾತ್ರ ವರ್ಷದ ಹತ್ತು ತಿಂಗಳು ಅಟ್ಟದ ಮೇಲೆ ಬಿದ್ದಿರುತ್ತಿತ್ತು. ನಾಟಕದ ಮೇಷ್ಟ್ರು ಬಂದ ಎರಡು ತಿಂಗಳು ಮಾತ್ರ ಅದು ದೇವಲೋಕದ ರಂಭೆ ಧರೆಗಿಳಿದಂತೆ ಬರುತಿತ್ತು. ಈ ಹಾಸಿಗೆ ಕೂಡ ನಮ್ಮ ಹನುಮೋಲ್ಲಾಸದ ಭಾಗವಾಗಿಬಿಟ್ಟಿತು. ದಿನಾ ಸಂಜೆ ಶಾಲೆ ಮುಗಿದ ವೇಳೆ ಒಂದಿಬ್ಬರು ಹುಡುಗ–ಹುಡುಗೀರು ರಾಮಂದ್ರ ಗುಡಿಸಿ ಬೀಗ ಹಾಕಿಕೊಂಡು ಹೋಗಬೇಕಿತ್ತು. ನಾನೂ, ಎಡ್ಮಾಷ್ಟ್ರು ಮಗಳು ನಾಗವೇಣಿ, ಶಿವಣ್ಣ, ಗಂಗಾಧರ, ಪದ್ದಿ ಎಲ್ಲ ಸೇರಿ ಐದೇ ನಿಮಿಷದಲ್ಲಿ ಕಸ ಗುಡಿಸಿಬಿಡುತ್ತಿದ್ದೆವು. ಆಮೇಲೆ ಶುರು ನಮ್ಮ ಆಟ. ಅಟ್ಟದ ಮೇಲಿಂದ ದಿಂಬು, ಹಾಸಿಗೆ ಕೆಳಗೆ ಎಸೆಯೋದು. ಆ ಹಾಸಿಗೆ ಮೇಲೆ ಒಬ್ಬೊಬ್ಬರಾಗಿ ಡೈ ಹೊಡೆಯೋದು. ಹುಡುಗ–ಹುಡುಗಿ ಎಂಬ ಯಾವ ಭಿನ್ನತೆಗಳು ಆಗ ನಮಗೆ ಗೊತ್ತಾಗುತ್ತಿರಲಿಲ್ಲ. ಒಬ್ಬರ ಮೇಲೊಬ್ಬರು ಬಿದ್ದು ಹೊರಳಾಡುತ್ತಿದ್ದೆವು. ಇದು ಪುನರಾವರ್ತನೆ ಆಗುತ್ತಲೇ ಇತ್ತು. ಯಾರಾದರು ಬಂದು ಬೈಯುವವರೆಗೂ ನಾವು ಬಿದ್ದು ಹೊರಳಾಡುತ್ತಲೇ ಇರುತ್ತಿದ್ದೆವು. ಈಗ ನೆನಪಿಸಿಕೊಂಡರೆ ಏಕೆ ಹೀಗೆ ಮಾಡುತ್ತಿದ್ದೆವು ಎಂಬುದಕ್ಕೆ ಏನೂ ಹೊಳೆಯುವುದಿಲ್ಲ. ಆದರೆ ಪುಟ್ಟ ಹುಡುಗ ಹುಡುಗಿಯರು ಒಬ್ಬರ ಮೇಲೊಬ್ಬರು ಬೀಳುವುದು ಆಟವೋ, ಆನಂದವೋ, ಉಮೇದೋ? ಈ ಬಗ್ಗೆ ಫ್ರಾಯ್ಡ್ ಏನನ್ನುತ್ತಾನೋ?

ಇದು ಹೀಗೆ ನಡೆಯುತ್ತಿರುವಾಗ ರಾಮಂದ್ರದ ಚಟುವಟಿಕೆ ಇನ್ನಷ್ಟು ವಿಸ್ತಾರವಾಯಿತು. ಊರಿಗೆ ಹೊಸದಾಗಿ ಹಾಲ್ ಡೈಲಿ ಬಂತು. ಅದಕ್ಕೊಂದು ಜಾಗ ಅಂತ ಹುಡುಕುತ್ತಿದ್ದಾಗ ರಾಮಂದ್ರವೇ ಏಕಾಗಬಾರದು.ಮುಂದಿನ ಜಾಲರಿಯಲ್ಲಿ

ಹಾಲು ಅಳೆಯೋ ಕೆಲಸಕ್ಕೆ ಬಳಸುವುದು. ಲೆಕ್ಕ ಪಕ್ಕದ ಪುಸ್ತಕವನ್ನು ಒಳಭಾಗದ ಗೋಡೆಬೀರುವಿನಲ್ಲಿ ಇಡಬಹುದೆಂತಲೂ ಊರಿಗೆ ಬುದ್ಧಿವಂತರಾಗಿದ್ದ ಕಂಟ್ರಾಕ್ಟ್ರು ನಿಂಗಪ್ಪಣ್ಣನವರು ಸೂಚಿಸಿದರು. ಹೇಗಿದ್ದರೂ ಶಾಲೆ ಸಮಯ ಹತ್ತರಿಂದ ಐದು. ನಾಟಕ ನಡೆಯುತ್ತಿದುದು ಷಷ್ಟಿಜಾತ್ರೆಯ ಎರಡು ತಿಂಗಳು. ಅದೂ ರಾತ್ರಿ ಎಂಟರ ನಂತರ. ಹೀಗಿರುವಾಗ ಬೆಳಿಗ್ಗೆ ಎರಡು ಘಂಟೆ, ಸಂಜೆ ಎರಡು ಘಂಟೆಯ ಡೈರಿ ಚಟುವಟಿಕೆಯಿಂದ ಶಾಲೆಗಾಗಲಿ, ನಾಟಕಕ್ಕಾಗಲೀ ಯಾವ ತೊಂದರೆಯೂ ಇರಲಿಲ್ಲ. ಅಂದಿನಿಂದ ರಾಮಂದ್ರ ಅಧಿಕೃತ ಹಾಲಿನ ಡೈಲಿಯೂ ಆಯಿತು.

ಊರಿಗೆ ಡೈಲಿ ಬಂದ ಮೇಲೆ ರಾಸುಗಳು ನಿಧಾನವಾಗಿ ಹೆಚ್ಚಾಗತೊಡಗಿದವು. ಕಾಸುಳ್ಳವರು ಸಂತೆಲೋ, ಜಾತ್ರೆಲೋ ರಾಸು ತರತೊಡಗಿದರು. ಕಾಸಿಲ್ಲದವರು ನೆಂಟರ ಮನೆಯಿಂದಲೋ,ಬೇರೆ ಊರಿಂದಲೋ ವಾರಕ್ಕೆ ತರುತ್ತಿದ್ದರು. (ವಾರ ಅಂದರೆ; ತರುವ ರಾಸು ಒಂದು ಕರು ಹಾಕಿ, ಅದರ ಕರಾವು ಉಂಡು, ಇನ್ನೊಮ್ಮೆ ಆ ರಾಸು ಗಬ್ಬವಾಗಿ ದಿನ ತುಂಬುವ ತನಕ ನೋಡಿಕೊಂಡು ಮೂಲ ಯಜಮಾನನಿಗೆ ವಾಪಸು ಕೊಡುವ ವ್ಯವಸ್ಥೆ.) ಬೆಳಿಗ್ಗೆ ಆರೂವರೆಗೆಲ್ಲ ಹಾಲು ಕರೆದು ಡೈಲಿಗೆ ಹಾಕಿ ಬಿಡಬೇಕು. ಏಳು ಗಂಟೆಗೆ ಕರೆಕ್ಟಾಗಿ ಹಾಸನದಿಂದ ಹಾಲಿನ ವ್ಯಾನು ಬರುತ್ತಿತ್ತು. 'ರವಷ್ಟು ಲೇಟಾದರೆ ಹಾಲು ತಗಳಾಕೆ ಇಲ್ಲ. ಅಳೆಸಿಕೊಂಡ ಹಾಲೆಲ್ಲ ಲೇಸ್ಟಾಯ್ತದೆ' ಅಂತ ಗೌಡಪ್ಪಾರ ಶಿವಲಿಂಗಣ್ಣ ಹಾಲು ಹಾಕೋರಿಗೆಲ್ಲ ಹೆದರಿಸೋನು. ಈ ಗೌಡಪ್ಪಾರ ಶಿವಲಿಂಗಣ್ಣ ಊರಡೈರಿಯ ಉಸ್ತುವಾರಿ ಸಚಿವನು. 'ದಿನಾ ವ್ಯಾನು ಬಂದು ಹಾಲ ತುಂಬ್ಕ್ಯಂಡು ಹಾಸನುಕ್ಕೆ ಓತಿತಂತೆ. ಅಲ್ಲಿ ದೊಡ್ಡ ಮಿಷಿನ್‌ಗಾಕಿ ಹಾಲ್ನೆಲ್ಲ ರುಬ್ಬಿ, ಹಾಲ್ ಮಸ್ರು ಬ್ಯಾರೆ ಮಾಡ್ತಾರಂತೆ. ಅದರೊಳಗೇಯ ತುಪ್ಪನ ಕಾಸ್ಕತಾರಂತೆ' ಅಂತ ಸೇದಬಾವಿ ಬಳಿ ಎಂಗಸ್ರುಗಳು ಮಾತಾಡ್ತಿದ್ರೆ ನಮಗೆಲ್ಲ ಬೆರಗೋ ಬೆರಗು. ಈ ಬೆರಗಿಗೆ ಇನ್ನಷ್ಟು ಕಿಚ್ಚು ತುಂಬುತ್ತಿದ್ದವರು ಹಾಸನಕ್ಕೆ ಹೋಗುತ್ತಿದ್ದ ಓದೋ ಹುಡುಗ್ರು. 'ನಾವು ಡೈಲಿಗೆ ಓದ್ರೆ, ಸಾಕು ಅನ್ನಗಂಟ ಹಾಲು–ಮೊಸರು ಕೊಡ್ತಾರೆ ಕಣಿರ್ಲಾ. ದ್ಯಾವೇಗೌಡ್ರು ವಾರಕ್ಕೊಂದು ದಿನಾ ಅಲ್ಲಿಗೆ ಬಂದು ಎಲ್ಲ ಚಕ್ ಮಾಡ್ತರೆ ಕಣಿರ್ಲಾ' ಅನ್ನುತ್ತಿದ್ದರು.

ರಾಮಂದ್ರಕ್ಕೆ ಹಾಲಿನ ಡೈಲಿ ಬಂದ ಮೇಲೆ ನಮ್ಮ ಹನುಮೋಲ್ಲಾಸಕ್ಕೆ ಮತ್ತಷ್ಟು ಪುಷ್ಠಿ ದೊರೆಯಿತು. ಬೆಳಿಗ್ಗೆ ಹಾಲಿನ ವಿಲೇವಾರಿ ಮುಗಿದ ಮೇಲೆ ಡಬ್ಬ ತೊಳೆದು ಗೌಡಪ್ಪಾರ ಶಿವಲಿಂಗಣ್ಣ ಹೋಗಿರುತ್ತಿದ್ದ. ನಮಗೆ ಅಲ್ಲಿದ್ದ ವಸ್ತುಗಳಲ್ಲಿ ಹಾಲು ಅಳೆಯುವ ಲ್ಯಾಕ್ಟೊಮೀಟ್ರು ಮಹಾ ಕುತೂಹಲಕಾರಿಯಾಗಿ ಕಾಣುತ್ತಿತ್ತು. ಪೂರ ಹಾಲಿನೊಳಗೆ ಮುಳುಗದೇ, ಛಂಗನೇ ಮೇಲೆ ಹಾರುವ ಓತಿಕ್ಯಾತನಂತೆ ಕತ್ತು ಹಾಕುತ್ತಿತ್ತು ಆ ಲ್ಯಾಕ್ಟೊಮೀಟ್ರು. ಹಾಲಿನ ಡಿಗ್ರಿ ಇಂತಿಷ್ಟು ಎಂದು ತೋರಿಸುವ ಅದರ ಕರಾಮತ್ತು ನಮಗೆ ವಿಸ್ಮಯ. ಜತೆಗೆ ಇಡೀ ರಾಮಂದ್ರಕ್ಕೆ ಹರಡಿದ ಹಸಿ

ಹಾಲಿನ ವಾಸನೆ ವಿಚಿತ್ರವಾಗಿ ಆಕರ್ಷಿಸುತ್ತಿತ್ತು. ಈ ಡ್ಯೆಲಿ ಶುರುವಾದಾಗಿಂದ ಕೆಲವು ಕಂತ್ರಿ ನಾಯಿಗಳು ರಾಮಂದ್ರದ ಬಳಿಯೇ ವಾಚ್‌ಮನ್‌ಗಳ ಥರಾ ಬಿದ್ದುಕೊಂಡಿರುತ್ತಿದ್ದವು. ಈ ಸ್ವಯಂನೇಮಕಾತಿಗೆ ಹಾಲು ಅಳೆಯುವಾಗ ಕೆಳಕ್ಕೆ ಚೆಲ್ಲುತ್ತಿದ್ದ ಹಾಲಿನ ಆಕರ್ಷಣೆಯೇ ಮುಖ್ಯ ಕಾರಣ. ಅವುಗಳಿಗೆ ಹಾಲಿನ ಆಕರ್ಷಣೆಯಾದರೆ, ನಮಗೆ ಹಾಲಿನ ಕ್ಯಾನು, ಸ್ಯಾಂಪಲ್ ಬಾಟಲ್‌ಗಳ ವಾಸನೆಯೇ ಆಕರ್ಷಣೆ. ತುಡಿತದ ದೃಷ್ಟಿಯಿಂದ ನಮಗೂ, ಆ ನಾಯಿಗಳಿಗೂ ವ್ಯತ್ಯಾಸವೇನೂ ಇರಲಿಲ್ಲ. ಸ್ಯಾಂಪಲ್‌ಗಾಗಿ ಇಟ್ಟಿದ್ದ ಪ್ಲಾಸ್ಟಿಕ್‌ನ ಚಿಕ್ಕ ಬಾಟಲನ್ನು ನಾವು ಮೂಸುವುದು. ಈ ಮೂಸಾಟ ವಾಕರಿಕೆ ಬರುವ ತನಕ ನಡೆಯುತ್ತಿತ್ತು. ಸ್ಕೂಲಲ್ಲಿ ನಮಗಾಗದವರ ಮೂಗಿಗೆ ಈ ಬಾಟಲು ಹಿಡಿದು ಶತ್ರು ಸಂಹಾರ ಮಾಡುತ್ತಿದ್ದೆವು.

ಊರ ಗಣಪತಿಗೂ ಈ ರಾಮಂದ್ರವೇ ಆಶ್ರಯತಾಣ. ಆಗ ಊರಿಗೊಂದೇ ಗಣಪತಿ ಇಡುತ್ತಿದುದು. ಹೀಗಾಗಿ ಅದು ಊರೊಟ್ಟು ಸೇರಿಯೇ ಮಾಡುತ್ತಿತ್ತು. ಹಾಸನದಿಂದ ಗಣಪತಿ ತರುವ ಜಬಾದಾರಿ ಯಾರದು? ಮೈಕ್ ಸೆಟ್, ಚಪ್ಪರ ಹಾಕಿಸೋದು ಯಾರು? ಗಣಪತಿ ಲಾಟರಿಗೆ ಏನೇನು ಬಹುಮಾನ ಇಡಬೇಕು ಇಂಥವೆಲ್ಲ ಹಂಚಿಕೆಯಾಗುತ್ತಿದ್ದವು. ಊರೊಟ್ಟು ಸೇರಿದ್ದರೂ ಕಂಟ್ರಾಕ್ಟ್ರು ನಿಂಗಪ್ಪಣ್ಣನವರ ಮಾತುಗಳೇ ಹೆಚ್ಚಾಗಿರುತ್ತಿದ್ದವು. ಗಣಪತಿ ಇಟ್ಟ ದಿನದಿಂದ ಬಿಡುವ ತನಕವೂ ನಮ್ಮ ಡೀಕೆ ಮಾಸ್ಟ್ರು 'ಕೈಲಾಸೇಷನ ಪ್ರೀತಿಯ ತನುಜ ಗಣೇಶ ದೇವನ ಪೂಜಿಸಿರಿ' ಅಂತ ಹಾಡು ಹೇಳಿಕೊಡೋರು. ಗಣಪತಿ ಎಷ್ಟು ದಿನ ಇಡಬೇಕು ಅಂತ ಅಯ್ನಾರು ರಾಮಣ್ಣಾರು ಹೇಳೋರು. ಅವರೇ ದಿನಾಲೂ ಪೂಜೆ ಮಾಡೋರು. ಪ್ರತಿದಿನ ಸೇವಾರ್ಥ ಒಬ್ಬೊಬ್ಬರದು. ಸೇವಾರ್ಥದಾರರು ಉಸುಲಿ, ಚರ್ಪಿಗೆ ಬೇಕಾದ ಸಾಮಾನುಗಳನ್ನು ರಾಮಣ್ಣಾರ ಎಂಗಸ್ರು ಲೀಲಮ್ಮಾರಿಗೆ ಬೆಳಿಗ್ಗೇನೆ ಕೊಟ್ಟುಬಿಡೋರು. ಸಂಜೆ ನಮಗೇನು ಸಿಗುತ್ತೋ ಅನ್ನೋ ಕಳವಳ–ಕಾತರದಲ್ಲಿ ಮೈಕಿನಿಂದ ಬರುತ್ತಿದ್ದ 'ಮೂಷಕ ವಾಹನ ಮೋದಕ ಹಸ್ತ' ಕೇಳಿಕೊಂಡು ರಾಮಂದ್ರದ ಬಳಿ ನಾವು ಕಾಲಯಾಪನೆ ಮಾಡುತ್ತಿದ್ದೆವು. ಕೊನೇದಿನ ಗಣಪತಿ ಊರನ್ನೆಲ್ಲ ಒಂದು ಸುತ್ತಾಕಿ ಹೋಗಿ ಕೆರೇಲಿ ಮುಳುಗಿಬಿಡುತ್ತಿದ್ದ. ಇದಾದ ಮೇಲೆ ಗಣಪತಿ ಲಾಟರಿ ನಡೆಯುತ್ತಿತ್ತು. ರಿಸ್ಟ್‌ವಾಚು ಮೊದಲ ಬಹುಮಾನ. ಆವರೆಗೆ ಹೆಚ್‌ಎಂಟಿ ವಾಚಿನ ಹೆಸರು ಮಾತ್ರ ಕೇಳಿದ್ದ ನಮಗೆ ರಿಸ್ಟ್‌ವಾಚು ಅಂದರೆ ವಿದೇಶಿ ಮಾಲಿರಬಹುದು ಅಂತ ಊಹೆ ಮಾಡ್ತಿದ್ದೆವು. ಆ ವರ್ಷ ಮೊದಲ ಬಹುಮಾನ ರಿಸ್ಟ್‌ವಾಚು ಗೆದ್ದ ಆಲದಳ್ಳಿಕಾಳಪ್ಪಣ್ಣ ಮೂರು ತಿಂಗಳ ಕಾಲ ಅತಿ ಮಾನ್ಯನಾಗಿ ಓಡಾಡುತ್ತಿದ್ದ. ಅವನ ಕೈಲಿದ್ದ ರಿಸ್ಟ್‌ವಾಚು

ನಮ್ಮ ವಿದೇಶಿಮಾಲಿನ ಕಲ್ಪನೆಯನ್ನು ಕೊಂಚ ಅಲುಗಾಡಿಸಿದರೂ ಉತ್ಸಾಹಕ್ಕೇನೂ ಕುಂದು ತರಲಿಲ್ಲ.

ಒಂದು ಸಲ ಸಂಪೂರ್ಣ ರಾಮಾಯಣ ಕಲಿಯಬೇಕು ಅಂತ ತೀರ್ಮಾನವಾಯಿತು. ಆ ಸಲ ಕಲಿಸೋಕೆ ಬಂದ ನಾಟಕದ ಮೇಷ್ಟ್ರು ಮಲ್ಲೇನಳ್ಳಿ ರಾಜಣ್ಣಾರು ನಮಗೆ ಪರಿಚಿತರು. ಅವರು ನಮ್ಮನೆಯಲ್ಲೇ ಮೊಕ್ಕಾಂ ಮಾಡಿದ್ದರು. ನಮ್ಮಮ್ಮ, ಸೋದರತ್ತೆ, ಮಾವ ಎಲ್ಲರೂ ಅವರಿಗೆ ಹೇಳಿ ನನಗೂ ಒಂದು ಪಾತ್ರ ಕೊಡಿಸಿದ್ದರು. ಶಾಲೆಯಲ್ಲಿ ಯಾರಿಗೂ ಇಲ್ಲದ ಅದೃಷ್ಟ ನನ್ನದಾಗಿತ್ತು. ನಾಟಕದ ಸೂತ್ರಧಾರನ ಪಾತ್ರ ನನ್ನದೇ. ಆಡುತ್ತಿದುದು ರಾಮಾಯಣವಾಗಿದ್ದರಿಂದ ಮೊದಲಿಗೇ 'ರಘುವಂಶ ಸುಧಾಂಬುದಿ ಚಂದ್ರಶ್ರೀ...' ಅಂತ ನಾಂದಿಗೀತೆ. ಆಮೇಲೆ 'ಮಹಾಜನಗಳೇ, ಈದಿನ ನಮ್ಮೂರಲ್ಲಿ ಈತರಕಿತರಾ... ಅಂತೆಲ್ಲ ಹೇಳುವ ಕೆಲಸ. ಅದಾದ ಮೇಲೆ 'ಕಂಜದಳಾಯತಾಕ್ಷಿ ಕಾಮಾಕ್ಷಿ' ಸ್ತುತಿಗೀತೆ. ವಾರೊಪ್ಪತ್ತಿನಲ್ಲಿ ಇದನ್ನು ಕಲಿತ ನನಗೆ ಆಮೇಲೆ ಕೆಲಸವೇ ಇರಲಿಲ್ಲ. ರಿಹರ್ಸಲ್ ಬೇರೆ ನಿಧಾನವಾಗುತ್ತಿತ್ತು. ನಾನು ಇನ್ನೊಂದು ಪಾತ್ರ ಬೇಕೆಂದು ಹಠ ಹಿಡಿದೆ. ಪುಟ್ಟ ಊರುಗಳಲಿ ಪುಟ್ಟ ಹುಡುಗರ ಮಾತಿಗೂ ಬೆಲೆ ಬರುವುದುಂಟು. ಸಮುದ್ರರಾಜನ ಪಾತ್ರ ಸಿಕ್ಕಿತು. ರಾಮ ಸೇತುವೆ ಕಟ್ಟಲು ಮುಂದಾದಾಗ ಸಮುದ್ರರಾಜ ಮೊದಲಿಗೆ ಒಪ್ಪುವುದಿಲ್ಲ. ಆಮೇಲೆ ರಾಮ ಬಾಣ ಬಿಡ್ತೀನಿ ಅಂದಾಗ 'ಕ್ಷಮಿಸು ರಾಮ. ಜಾಗ ಬಿಡ್ತೀನಿ' ಅಂತಾ ಒಪ್ಕೋತಾನೆ. ಎರಡು ತಿಂಗಳಲ್ಲಿ ಎರಡು ಲಕ್ಷ ಸಲ ಪ್ರಾಕ್ಟೀಸ್ ಮಾಡಿದ್ದೆ.

ರಾತ್ರಿ ನಾಟಕಕ್ಕೂ ರಾಮಂದ್ರವೇ. ಬೆಳಿಗ್ಗೆ ಸ್ಕೂಲಿಗೂ ರಾಮಂದ್ರವೇ. ಅಣ್ಣೇಗೌಡ ಮೇಷ್ಟ್ರು ಬೀಡಿ ಕಚ್ಚಿಕೊಂಡು ಹೋದ ತಕ್ಷಣ ಅಭಿಮಾನಿ ದೇವರುಗಳು–ದೇವತೆಯರು ನನ್ನ ಮುತ್ತಿಕೊಂಡು ಹಾಡು, ಡೈಲಾಗು ಹೇಳಿಸೋರು. ದಿನಾ ರಿಹರ್ಸಲ್ ನೋಡಿ ನೋಡಿ ಹೆಚ್ಚುಕಮ್ಮಿ ನಾಟಕವೇ ಬಾಯಿಗೆ ಬಂದುಬಿಟ್ಟಿತ್ತು. ಹೀಗಾಗಿ ಅಭಿಮಾನಿ ದೇವರುಗಳು–ದೇವತೆಯರಿಗೆ ನನ್ನ ಬಗ್ಗೆ ಖುಷಿ. ನಾಟಕದ ದಿನ ಬಂತು. ಮೂರನೇ ಕ್ಲಾಸಿನ ಹುಡುಗನೊಬ್ಬ ಪಾತ್ರ ಮಾಡುತ್ತಿರುವುದು ಮೂಲೋಕಕ್ಕೆಲ್ಲ ಪ್ರಚಾರವಾಗಿತ್ತು. ಮೂಲೋಕದವರೆಲ್ಲ ಆ ನಾಟಕ ನೋಡಲು ಬಂದಿದ್ದರು. ನಾನು ಹೋಗಿ ನಿಂತುಕೊಂಡು 'ರಘುವಂಶ ಸುಧಾಂಬುದಿ' ಹಾಡಿ, 'ಮಹಾಜನಗಳೇ....ಹಂಸಕ್ಷೀರ ನ್ಯಾಯದಂತೆ ವರ್ತಿಸಬೇಕು' ಅಂತ ಕೋರಿದೆ. ಅಭಿಮಾನಿ ದೇವರು–ದೇವತೆಗಳು ಶಿಳ್ಳೆ ಹಾಕಿದರು. ಜೋರಾಗಿ ಕೈಬೀಸಿ ಏನೋ ಸೂಚಿಸಿದರು. ಆಕಡೆ ನೋಡಿದರೆ ಎಡ್ಮಾಷ್ಟ್ರು ಬಸವೇಗೋಡ್ರು ಸೈಡ್‌ವಿಂಗ್‌ನಿಂದ ಕೈಬೀಸಿ ಕರಿತಾ ಇದಾರೆ. ನನಗೆ ಗಲಿಬಿಲಿ ಆಯಿತು. ಇನ್ನೂ ಎರಡನೇ ಹಾಡು ಬಾಕಿ ಇದೆ. ಇವರ್‍ಯಾಕೆ ಕರಿತಿದಾರೋ

ಎಂಬ ಗೊಂದಲದಲ್ಲೇ ಹೇಗೋ ಹಾಡು ಮುಗಿಸಿದೆ. ಮೂಲೋಕದ ಜನರೆಲ್ಲ ಈ ಅಮೋಘ ಅಭಿನಯಕ್ಕೆ ನಿಬ್ಬೆರಗಾಗಿದ್ದರು. ಒಳಗೆ ಹೋದರೆ ಬಸವೇಗೋಡ್ರು 'ಎರಡನೇ ಹಾಡಿಗೆ ಇನ್ನೊಂದು ಮೈಕ್‌ತಾವ ಹಾಡು ಅಂತ ಯೇಳಿರ್‍ನಿಲ್ವೇನ್ಲ' ಅಂತ ಕೋಪಿಸಿಕೊಂಡರು. ನಾನು ಪೆಚ್ಚಾಗಿ ಕೂತೆ. ತಕ್ಷಣ ತರೂರು ಸೀನಿನ ಮೇಕಪ್‌ಮ್ಯಾನ್ ನನ್ನ ಮುಂದಿನ ಪಾತ್ರವಾದ ಸಮುದ್ರರಾಜನ ವೇಷ ಹಾಕಿದ. ನಾನು ಕಾಯುತ್ತ ಕೂತೆ, ಕೂತೆ. ನಾಟಕ ಸುರುವಾಗಿದ್ದೇ ಹತ್ತುಗಂಟೆಗೆ. ಅದರಲ್ಲಿ ಮಧ್ಯೆ ಮಧ್ಯೆ ಪಾತ್ರಧಾರಿಗಳಿಗೆ ಹಾರ ಹಾಕೋರು. ಒನ್ಸ್‌ಮೋರ್ ಹಾಕಿ ಮತ್ತೆ ಹಾಡು ಹೇಳಿಸೋದು ನಡೆದೇ ಇತ್ತು. ನಾನು ಸೈಡ್‌ವಿಂಗ್‌ನಿಂದ ನೋಡ್ತನೇ ಇದ್ದೆ: 'ಭೂಮಿಜಾತೆ ಭಾಮೆಸೀತೆ ಎಲ್ಲಿ ಪೋದೆ..' ಎಂದು ಕರುಣಾಜನಕವಾಗಿ ಹಾಡಿದ ರಾಮ ಒಳಗೆ ಬಂದು ನೆವಿಬ್ಲು ಸಿಗ್ರೇಟ್ ಸೇದಿದ. 'ಪಿಡಿಯಿರಿ ಆ ಕಪಿಯ..' ಎಂದು ವೀರರಸದಿಂದ ಹಾಡಿದ ರಾವಣ ಒಳಗೆ ಬಂದು ಪೋಟುಕೊಂಡ. ಇವೆಲ್ಲ ನೋಡುತ್ತಾ ಹೇಗೋ ನಿದ್ದೆ ತಡೆದಿದ್ದವನು, ಕೊನೆಗೂ ನಿದ್ದೆ ತಡೆಯಲಾಗದೇ 'ರಾಮಸೇತುವೆ ಮನೆ ಹಾಳಾಗ' ಎಂದು ಮನೆಗೆ ಹೋದೆ. ಸೀದಾ ಅಟ್ಟ ಹತ್ತಿ ಮಲಗಿಬಿಟ್ಟೆ.

ಯಾರೋ ಏಳೋ, ಏಳೋ ಅಂತ ಕೂಗುತ್ತಿದ್ದಾರೆ ಅನಿಸಿ, ನಿದ್ದೆಗಣ್ಣಲ್ಲೇ ಅಟ್ಟ ಇಳಿದು 'ರಾಮಚಂದ್ರ' ಅಂತ ಕೈಮುಗಿದುಕೊಂಡು ಬಂದೆ. ಬಿಸಿಲು ರವರವ ಹೊಡೆಯುತ್ತಿತ್ತು. ಕಣ್ಣು ಬಿಡೋಕೆ ಆಗುತ್ತಿರಲಿಲ್ಲ. ತರೂರು ಸೀನಿನ ಮೇಕಪ್‌ಮ್ಯಾನ್ ಅಲ್ಲೇ ಸಮುದ್ರರಾಜನ ಬಟ್ಟೆ ಬಿಚ್ಚಿಕೊಂಡು, ಬೈಯ್ಕೊಂಡು ಹೋದ. ಆ ಊರಿನಲ್ಲಿ, ಆ ಬೆಳಗಿನ ಬಿಸಿಲಿನಲ್ಲಿ, ಆ ಬೀದಿಯಜನರೆಲ್ಲ ಸಮುದ್ರರಾಜನನ್ನು ನೋಡಿ ಆನಂದಿಸಿದ ಆ ಪರಿಯ ನಾನೆಂತು ಪೇಳಲಿ, ರಾಮಚಂದ್ರ?

* * *

ಆ ರಾಮಂದ್ರದ ಚಿತ್ರ ಈಗಲೂ ನನ್ನೊಳಗೆ ಹಾಗೆ ಇದೆ. ಆ ರಾಮಂದ್ರದಲ್ಲಿ ಒಂದು ಹಳೆಯ ರಾಮನ ಫೋಟೋ ಇತ್ತು. ಆ ರಾಮ ಕುಟುಂಬೀರಾಮ. ಈಗಿನ ರಾಮನಂತೆ ಬಿಲ್ಲು ಹಿಡಿದು, ಕಾಲು ಕೆದರಿಕೊಂಡು ವೀರಾಗ್ರಣಿಯಂತಿರಲಿಲ್ಲ. ಆ ಫೋಟೊಗೆ ಪೂಜೆ ಕೂಡ ಮಾಡುತ್ತಿದ್ದುದು ನೆನಪಾಗುತ್ತಿಲ್ಲ. ರಾಮಂದ್ರದ ಮುಂದೆ ನ್ಯಾಯ ನಡೆದಾಗ ಯಾರಿಗಾದರೂ ಆಣೆ–ಭಾಷೆ ಹಾಕಿಸುವಾಗ ರಾಮನ ಮುಂದೆ ಕರ್ಪೂರ ಹಚ್ಚುತ್ತಿದ್ದರು. ಅದು ಬಿಟ್ಟರೆ, ಗಣಪತಿ ಇಟ್ಟಾಗ ಈ ರಾಮನಿಗೂ ಒಂದಷ್ಟು ಉಪಚಾರ ಬಿಟ್ರೆ ಬೇರೇನೂ ಇಲ್ಲ. ರಾಮನ ನೆಪದ ಆ ರಾಮಂದ್ರ ಊರಿನ ಎಷ್ಟೊಂದು ಚಟುವಟಿಕೆಗೆ ಮೂಲಧಾತುವಾಗಿತ್ತು, ಒಂದು ಊರಿನ ಸಾಂಸ್ಕೃತಿಕ, ಸಾಮುದಾಯಿಕ ಬದುಕಿನೊಳಗೆ ಹೇಗೆ ಬೆರೆತುಹೋಗಿತ್ತು ಎಂಬುದು ಕಾಡುತ್ತದೆ.

ಜನ ರಾಮನನ್ನು ಆಗಲೂ ನಂಬಿದ್ದರು. ಪೂಜೆ, ಪುನಸಾರಗಳನ್ನು ಬೇಡದ ಆ ರಾಮ ಕುಟುಂಬದ, ನ್ಯಾಯದ ಪ್ರತೀಕವೆ? ಈಗಿನ ರಾಮ ಯಾವುದರ ಪ್ರತೀಕ?....

ಈಚೆಗೊಮ್ಮೆ ನಾನು ಆ ಊರಿಗೆ ಹೋಗಿದ್ದೆ.

ಈಗ ಆ ರಾಮಂದ್ರ ಬಿದ್ದುಹೋಗಿದೆಯೇ? ಅಲ್ಲಿ ಪುಂಡುಪೋಕರಿಗಳು ಇಸ್ಪೀಟಾಡುತ್ತಿದ್ದಾರೆಯೆ? ಶಾಲೆ ನಡೆಯುತ್ತಿಲ್ಲವೇ? ಹಾಲಿನ ಡೈರಿ ನಿಂತುಹೋಯಿತೇ? ಅಂತೆಲ್ಲ ಕೇಳಬಹುದು ನೀವು. ಇಲ್ಲ, ಹಾಗೇನೂ ಆಗಿಲ್ಲ. ಆ ರಾಮಂದ್ರ ಇನ್ನೊಂದಿಷ್ಟು ಹಳತಾಗಿ ಮಾಸಿದೆ ಅಷ್ಟೆ. ಶಾಲೆಗೆ ಪ್ರತ್ಯೇಕ ಕೊಠಡಿಗಳಿವೆ. ಡೈರಿಯೂ ಸ್ವಂತ ಕಟ್ಟಡ ಹೊಂದುವಷ್ಟು ಬೆಳೆದಿದೆ. ನಾನು ಹೋದ ದಿನ ಇಂಡಿಯಾ– ಪಾಕಿಸ್ತಾನ ಕ್ರಿಕೆಟ್ ಮ್ಯಾಚ್ ಇತ್ತು. ನಾನು ಊರೊಳಗೆ ಎಲ್ಲಾದರೂ ಟೀವಿ ನೋಡೋಣ ಅಂತ ಹೋದೆ. ಹಿಂದೆ ಡೈರಿ ಸಚಿವನಾಗಿದ್ದ ಗೌಡಪ್ಪಾರ ಶಿವಲಿಂಗಣ್ಣನ ಮನೆ ಬಳಿ ಸಾಕಷ್ಟು ಜನವಿದ್ದರು. ಆವತ್ತು ಇಂಡಿಯಾ ಗೆಲ್ಲಲು 270 ರನ್ನು ಮಾಡಬೇಕಿತ್ತು. ಆಗಲೇ 70 ರನ್ನಿಗೆ 5 ವಿಕೆಟ್ ಕಳಕೊಂಡು, ಜನರೆಲ್ಲ ಪೆಚ್ಚಾಗಿ ಕೂತಿದ್ದರು. ನಿಧಾನವಾಗಿ ಲಕ್ಷ್ಮಣ್ ಮತ್ತು ಯುವರಾಜ್ ಪಂದ್ಯದ ಗತಿ ಬದಲಿಸಲು ನಿಂತರು. ಜನರಲ್ಲೂ ಉತ್ಸಾಹ ಗರಿಗೆದರಿತು. ಅವರ ಒಂದೊಂದು ಹೊಡೆತಕ್ಕೂ ಮುದುಕರು–ಹೆಂಗಸರು–ಮಕ್ಕಳಾದಿಯಾಗಿ 'ಒಡಿರ್ಲಾ ಅವ್ರಿಗೆ, ಕೆಚ್ಚಿರ್ಲಾ ಅವ್ರಿಗೆ' ಅಂತ ದೇಶಪ್ರೇಮ ಮೆರೆಯತೊಡಗಿದರು. ಪಂದ್ಯ ಒಂದು ಹಂತಕ್ಕೆ ಬರುತ್ತಿದೆ ಅನಿಸುವಾಗಲೇ ಯುವರಾಜ್ ಔಟಾದ, ಮತ್ತೆ ಮೌನ. ಇರ್ಫಾನ್ ಪಠಾಣ್ ಬಂದು ಅವನೂ ನಿಧಾನಕ್ಕೆ ಒಂದೆರೆಡು ಸಿಕ್ಸರ್ ಬಾರಿಸಿದೊಡನೆ ಮತ್ತೆ ಆವೇಶದಿಂದ ಕೂಗಾಡತೊಡಗಿದರು. 'ನೀನೆ ಸರಿ ಕಣ್ಲಾ ಅವ್ರಿಗೆ. ಕೆಚ್ಲಾ, ಕೆಚ್ಲಾ. ಬಿಡ್‌ಬ್ಯಾಡ ಕಣ್ಲಾ ಅವರ್ನ' ಅಂತ ಎಲ್ಲರೂ ಟೀವಿ ಮುಂದೆ ಕುಣಿಯಲಾರಂಭಿಸಿದರು.

ಆ ಪುಟ್ಟ ಊರಲ್ಲಿ ಹಿಂದಿನಿಂದಲೂ 'ಅವರು' ಇರಲಿಲ್ಲ. ಈಗಲೂ ಇಲ್ಲ. ನಾವು ಚಿಕ್ಕವರಿದ್ದಾಗ ಆಗೀಗ ಕಲಾಯಿ ಮಾಡೋದಿಕ್ಕೋ, ಎತ್ತುಗಳ ಲಾಳ ಕಟ್ಟೋದಿಕ್ಕೋ 'ಅವರು' ಬರುತ್ತಿದರು. ಅದು ಬಿಟ್ಟರೆ ಯುಗಾದಿಯ ಮಾರನೇಗೆ ಮುಖಕ್ಕೆಲ್ಲ ಮಸಿ ಬಳಕೊಂಡು, ಕೋಡಂಗಿ ಟೋಪಿ ಧರಿಸಿ, ಗೋಣಿಚೀಲ ಸುತ್ಕೊಂಡು, ತಮಟೆ ಬಡ್ಕೊಂಡು ಬರುತ್ತಿದ್ದರು. ಚಿಕ್ಕ ಹುಡುಗರಾದ ನಾವೆಲ್ಲ ಆ ತಮಟೆ ಸದ್ದಿಗೆ ಓಡಿಹೋಗುತ್ತಿದ್ದೆವು. 'ಅವರ' ಕೈಯಲ್ಲಿ ಬಡಿಗೆಯೊಂದು ಇರುತ್ತಿತ್ತು. ಆ ಬಡಿಗೆಯಲ್ಲಿ ಹೊಡೆಸಿಕೊಂಡರೆ ಒಳ್ಳೆಯದಾಗುತ್ತದೆಂಬ ಪ್ರತೀತಿಯಿತ್ತು. ಅವರು ನಮ್ಮನ್ನು ಅಟ್ಟಿಸಿಕೊಂಡು ಹೊಡೆಯುವಂತೆ ಬರುತ್ತಿದ್ದರು. ನಾವು ತಪ್ಪಿಸಿಕೊಳ್ಳಲು ಓಣಿ, ಗಲ್ಲಿಗಳಲ್ಲಿ ಓಡಾಡುತ್ತಿದ್ದೆವು. ಕೊನೆಗೆ ಐದೋ, ಹತ್ತೋ ಪೈಸೆ ಅವರಿಗೆ ಕೊಟ್ಟು, ಮೆಲ್ಲಗೆ

ಹೊಡೆಸಿಕೊಳ್ಳುತ್ತಿದ್ದೆವು. ಹೀಗೆ ಒಂದಷ್ಟು ಕಾಲ ಆಟದಂತೆ ಇದು ನಡೆಯುತ್ತಿತ್ತು. ನಂತರ 'ಅವರು' ಮುಂದಿನ ಊರಿಗೆ ಹೋಗುತ್ತಿದ್ದರು.

ಈಗ ವಿಚಾರಿಸಿದರೆ, ಯುಗಾದಿಯ ಮಾರನೇಗೆ 'ಅವರು' ಬರುತ್ತಿಲ್ಲವಂತೆ.

'ಅವರು' ಯಾಕೆ ಬರುತ್ತಿಲ್ಲ?

ನಿಮಗೇನಾದರೂ ಗೊತ್ತಿದ್ದರೆ ಹೇಳಿ, ಪ್ಲೀಸ್.

**ಹರಿಪ್ರಸಾದ್ ಕೆ.ಆರ್.**
ಪಂಜು 2014

## ಅರವಿಂದರ ಏಕಾಂತ ಮತ್ತು ಭಾನುವಾರವೆಂಬ ಕಾಕ್‌ಟೇಲ್

ರವಿವಾರ, ಆಯ್ತವಾರ(ಆದಿತ್ಯವಾರ), ಸಾಫ್ಟ್‌ವೇರ್ ನಗರಿಗಳ ಜಾಬಿಗರಿಗೆ ಮಸ್ತ್ ಮೋಜಿನ ವಿಕೇಂಡ್ ಹೀಗೆ ಭಾನುವಾರಕ್ಕೆ ವಿವಿದ ಹೆಸರುಗಳಿವೆ. ಜಾಬಿಗರಿದ್ದು ಸಮಾಜ ಬದಲಾವಣೆ ಎಂತೆಲ್ಲಾ ಮಾತಾಡುವವರಿಗೆ 'ಭಾನುವಾರದ ಕ್ರಾಂತಿಕಾರಿಗಳು' ಎಂದು ಕರೆಯುವ ವಾಡಿಕೆಯೂ ಇದೆ. ಒಂದಂತೂ ಸತ್ಯ, ಪ್ರತಿದಿನದಲ್ಲೂ ಇರುವ ಏಕತಾನತೆ ಭಾನುವಾರಕ್ಕಿರಲಾರದು. ಸಾಹಿತ್ಯಪ್ರಿಯರಿಗೆ ಸಾಹಿತ್ಯಗೋಷ್ಠಿ, ಪಾನಪ್ರಿಯರಿಗೆ ಪಾನಗೋಷ್ಠಿ, ಸೌಂದರ್ಯಪ್ರಿಯರು ಮುಖಕ್ಕೆ ಜೇಡಿಮಣ್ಣಿನ ಪ್ಯಾಕ್, ಸಗಣಿ ಪ್ಯಾಕ್, ಮುಲ್ತಾನ್ ಮಿಟ್ಟಿ ಚಿಟ್ಟಿಯೆಂದು ರಾಡಿಯನ್ನು ಬಳಿದುಕೊಂಡು ಅಂತಹುದೇ ರಾಡಿಯನ್ನು ತಲೆಗೂ ಬಳಿದುಕೊಂಡು ಕಾಣಲಾರದ ದೆವ್ವವನ್ನು ಕಾಣಿಸುವ ದಿನ. ಉದ್ಯೋಗಸ್ಥ ಸಂಬಂಧಿಗಳಿಗೆಂದು ಬಲೆಬೀಸಿದ ಮದುವೆ ಪೋಂಕ್ಷನ್ನುಗಳು, ಮಹೂರ್ತವಿದ್ದರೆ ಮನೆ ಹೊಕ್ಕುವ ಗೃಹಪ್ರವೇಶಗಳು, ಹೆಸರಲ್ಲದ ಹೆಸರಿಗಾಗಿ ಸಜ್ಜುಗೊಳ್ಳುವ ನಾಮಕರಣಗಳು, ಪೆಪ್ಪರ್‌ಮೆಂಟಿನಂತಹ ಯಂಗೇಜುಮೆಂಟುಗಳು ಇತ್ಯಾದಿ ಇತ್ಯಾದಿಗಳಿಗೆ ಪ್ರಶಸ್ತ ದಿನ. ಟಿವಿ ಚಾನೆಲ್ಗಳಲ್ಲಿ ಹೊಸ ಹೊಸ ಸಿನಿಮಾಗಳು, ರಂಗು ರಂಗೇರಿದ ರಿಯಾಲಿಟಿ ಶೋಗಳು, ಹಣ ಕೀಳುವ ಬಜಾರುಗಳು ಹೀಗೆ ಭಾನುವಾರವೆಂಬುದು ದಣಿವಾರಿಸಿಕೊಳ್ಳುವ ಮತ್ತು ವಿಪರೀತ ದಣಿವಾಗುವ ದಿನ. ಇಂತಿಪ್ಪ ಭಾನುವಾರವನ್ನು ನಮ್ಮ ಅರವಿಂದ ಮಾಸ್ತರರು ಹೇಗೆ ಕಳೆಯುತ್ತಿದ್ದರು?

ಅರವಿಂದ ಮಾಸ್ತರರಿಗೆ ಭಾನುವಾರವೆಂದರೆ ವಾರವಿಡೀ ಬಳಸಿದ ಬಟ್ಟೆಗಳನ್ನು ರಾಶಿ ಹಾಕಿಕೊಂಡು ಅಂಗಿ ಪ್ಯಾಂಟುಗಳ ಕಿಸೆಯಲ್ಲಿ ಅಳಿದುಳಿದ ಚಿಲ್ಲರೆ ನೋಟು ನಾಣ್ಯಗಳನ್ನು ತಡಕಾಡಿ ತೆಗೆದು, ಸೋಪು ನೀರಿನಲ್ಲಿ ನೆನೆಹಾಕಿ ಒಂದು ಕಲೆಯು ಉಳಿಯದಂತೆ ನೀಟಾಗಿ ಉಜ್ಜಿದಾಗ ಮೈ ಮೇಲೆ ಬೆರಳಾಡಿಸಿದಂತೆ ಪುಳಕಗೊಳ್ಳುತ್ತಾ, ನೀರಲ್ಲಿ ಅದ್ದಿ ತೆಗೆದು ತಾವು ತೇವವಾಗಿಬಿಡುತ್ತಿದ್ದರು. ತನ್ನ ಒತ್ತೊಯ್ಯುವ ಅಂಬಾರಿಯನ್ನು ಶುಭ್ರಗೊಳಿಸುವ ಕೆಲಸ. ಅಂಬಾರಿ ಲಕ ಲಕ ಎನ್ನುವುದನ್ನು ಕಂಡು ನಸುನಕ್ಕು ತಾವು ಬಚ್ಚಲ ಮನೆ ಸೇರಿಬಿಡುತ್ತಿದ್ದರು. ಕನ್ನಡಿ ಮುಂದೆ ನಿಂತು ಬಿಳಿಕೂದಲಿನ ಜಾಡು ಹಿಡಿದು ಕೀಳುತ್ತಾ, ನನಗೂ ವಯಸ್ಸಾಗುತ್ತಿದೆಯಲ್ಲಾ ಎಂದುಕೊಂಡು ಆಶ್ಚರ್ಯಚಕಿತರಾಗಿ ಮುಖವನ್ನೊಮ್ಮೆ ದಿಟ್ಟಿಸಿ ನೋಡಿಕೊಳ್ಳುತ್ತಿದ್ದರು. ಕಟುಕನ ಕೈಗೆ ಐವತ್ತು ರೂಪಾಯಿಯಿಟ್ಟು ಕೋಳಿಯ ದೇಹದ ಯಾವ್ಯಾವ ಭಾಗ ಎಷ್ಟೆಷ್ಟು ರುಚಿಯಾಗಿರುತ್ತದೆಂದು ವಿವರಿಸಿ ತಾನು ಹೇಳಿದ ಭಾಗಗಳನ್ನೇ ಕೊಡುವಂತೆ ಪಟ್ಟಿಡಿದು ವ್ಯವಹರಿಸುತ್ತಿದ್ದರು. ಬೆಳ್ಳುಳ್ಳಿ , ಹಸಿಶುಂಟಿ, ಈರುಳ್ಳಿ, ಕೋತುಂಬ್ರಿಯಿಂದ

ತಯಾರಿಸಿದ ಪೇಸ್ಟನ್ನು ಒಂದೆಡೆಯಿಟ್ಟು, ಕೊಬರಿ, ಲಾವಂಗ, ಚಕ್ಕೆ, ಚಕ್ರಮಗ್ಗ, ಗಸಗಸೆಯನ್ನು ಹದವಾಗಿ ಬೆರೆಸಿ ರುಬ್ಬಿ ಅಡುಗೆಗೆ ನಿಂತರೆ ಎಲ್ಲರ ಮನೆಯ ನಾಸಿಕ ರಂಧ್ರಗಳು ಮಾಸ್ತರರ ಮನೆಯ ಅಡುಗೆ ಕೋಣೆಗೆ ಮುಖಮಾಡಿ ಅರಳುತ್ತಿದ್ದವು. ತಿನ್ನಲಾಗದಿದ್ದರೂ ಮಾಸ್ತರರು ಮಾಡುತ್ತಿದ್ದ ಬಾಡೂಟದ ಘಮಘಮದಿಂದಲೇ ತಿಂದಷ್ಟೂ ಸುಖಸಿಗುತ್ತಿತ್ತು. ಮೃದುವಾದ ಸಂಗೀತದ ಹಿನ್ನೆಲೆಯಲ್ಲಿ ರಾಗಿಮುದ್ದೆ ಕೋಳಿಮಾಂಸ ಮೆಲ್ಲುತ್ತಾ, ಮೂಳೆಯಲ್ಲಡಗಿದ ರಸವನ್ನೊಮ್ಮೆ ಸೊರ್ ಅಂತ ಹೀರಿಕೊಂಡು ಮೂಗಿನಲ್ಲಿ ನೀರೂರಿಸುತ್ತ ಭಾನುವಾರದ ಭೋಜನ ಮುಗಿಸುತ್ತಿದ್ದರು. ಸವಿಯೂಟದ ಮೆಲುಕಲ್ಲಿ ಪುಸ್ತಕ ತಿರುವಿ ಹಾಕುತ್ತ ಒಂದು ಜೊಂಪು ನಿದ್ದೆ ತೆಗೆದುಬಿಡುತ್ತಿದರು. ಚಾರಣ ಊರಣಗಳ ವ್ಯಸನವಿಲ್ಲದ ಮಾಸ್ತರ್ರು ಎಲ್ಲಿಗೆ ಹೋದರು ಏನೇ ಮಾಡಿದರೂ ಸದಾ ಏಕಾಂತದಲ್ಲಿದ್ದು ಸರ್ವಸ್ವವನ್ನು ಸವಿಯುವ ಜಾಯಮಾನದವರಾಗಿದ್ದರು. ಯಾರ ಜೊತೆ ಕೂಡುವವರಲ್ಲ, ತಿರುಗಾಡುವವರಲ್ಲ ಅಗತ್ಯವಿದ್ದಷ್ಟು ಮಾತು. ತಾನಾಯಿತು ತನ್ನ ಕೆಲಸವಾಯಿತು ಸದಾ ಏಕಾಂತವಾಸಿ.

ಏಕಾಂತವಾಸಿ ಎಂದ ಮಾತ್ರಕ್ಕೆ ಬ್ರಹ್ಮಚಾರಿಯೇನಲ್ಲ. ಕಲಿತ ಹುಡುಗಿಯನ್ನೇ ಮದುವೆಯಾಗಿದ್ದರು. ಮದುವೆಯಾದ ಹೊಸತರಲ್ಲಿ ಅನ್ಯರ ಕಾಟದಿಂದ ತಪ್ಪಿಸಿಕೊಂಡಿದ್ದರಾದರೂ ಹೆಂಡತಿ ಕಾಟ ಶುರುವಿಟ್ಟುಕೊಂಡಿತ್ತು. ಹೆಂಡತಿಗೆ ತಿರುಗಾಡುವ ಬಯಕೆ. ಮಾಸ್ತರ್ರಿಗೆ ಪುಸ್ತಕದೊಳಗೆ ಧ್ಯಾನಸ್ಥನಾಗಿ ಕಳೆದು ಹೋಗುವ ಬಯಕೆ. 'ನೀವು ಎಲ್ಲರಂತೆ ಇರುವುದಿಲ್ಲ, ಅಕ್ಕಪಕ್ಕದವರನ್ನ ನೋಡಿ ಸ್ವಲ್ಪ ಕಲಿತುಕೊಳ್ಳಿ, ನಿಮ್ಮಂತೆ ಮಾಡಿದರೆ ಸುಖ ಸಿಕ್ಕೀತೆ ? ಎಲ್ಲಿಗೂ ಬರೋಲ್ಲ ಅಂತೀರಿ, ಬಂದರೂ ಕೈ ಕೈ ಹಿಡಿದು ನಡೆಯೋಲ್ಲ ಅಂತೀರಿ, ನಾಲ್ಕು ಗೋಡೆ ಬೋರು' ನೀನೂ ಬೋರು ಎನ್ನುವಷ್ಟು ಸ್ವಾತಂತ್ರ ಸಿಕ್ಕಿರಲಿಕ್ಕಿಲ್ಲ ಅದನ್ನೊಂದು ಬಿಟ್ಟು ಎಲ್ಲ ರೀತಿಯ ಮಾತುಗಳು ಜಗಳದ ರೂಪದಲ್ಲಿ ಬಂದು ಹೋಗುತ್ತಿದ್ದವು. ಬಯಕೆಗಳಿಗೆ ತಾಳೆ ಬರದಾಗಿ ಹೆಂಡತಿಯ ಓದಿಗೆ ಒದಗಿದ್ದ ತಾತ್ಕಲಿಕ ತಡೆಯನ್ನು ತೆರವುಗೊಳಿಸಿ ಮಾಸ್ತರ್ರು ಬಿಸೋ ದೊಣ್ಣೆಯಿಂದ ತಪ್ಪಿಸಿಕೊಂಡಿದ್ದರು. ಆಗೊಮ್ಮೆ ಈಗೊಮ್ಮೆ ಹೆಂಡತಿಯ ಬಳಿಗೆ ಹೋಗಿ ಬರಬೇಕಲ್ಲ. ಜಪ್ಪಯ್ಯ ಅಂದರೂ ಅತ್ತ ಕುಂಡಿ ತಿರುಗಿಸಿ ಮಲಗುತ್ತಿದ್ದರು.

ಹೀಗೆ ಭಾನುವಾರ ಬಂತೆಂದರೆ ಅಡುಗೆ ಮಾಡುವುದರಲ್ಲೋ ಮುಸುರಿ ತೊಳೆಯುವುದರಲ್ಲೋ ಮನೆಗಿಡಿದ ದೂಳು ಹೊದರುವುದರಲ್ಲೋ ಓದುವುದರಲ್ಲೋ ತದ್ಯಾತ್ಮ ಕಂಡುಕೊಂಡಿದ್ದ ಅರವಿಂದರು ಪಕ್ಕದ ಮನೆ ಕುಟ್ಟಪ್ಪನ ಕಾಟಕ್ಕೆ ಬಾಗಿಲು ಜಡಿದುಕೊಂಡು ಕೆಲಸಕ್ಕಿಳಿಯುತ್ತಿದ್ದರು. ಆದರೂ ಬಾಗಿಲು ಬಡಿದು ಒಳನುಗ್ಗುತ್ತಿದ್ದ ಓಣಿಕವಿ ಅರ್ಥವಾಗದ ಶಬ್ದಗಳನ್ನು ಗುಡ್ಡೆ ಹಾಕಿ 'ಅಣಾ ಕವಿತೆ ಬರೆದಿದೀನಿ ಸ್ವಲ್ಪ

ಓದ' ಎಂದು ಬೇತಾಳನಂತೆ ನಿಂತುಬಿಡುತ್ತಿದ್ದ. ಓಣಿಕವಿ, ಬೀದಿಕವಿ, ಊರಕವಿ, ಹೋಬಳಿಕವಿ, ತಾಲೂಕಕವಿ, ಜಿಲ್ಲಾಕವಿ, ರಾಜ್ಯಕವಿ, ರಾಷ್ಟ್ರಕವಿ ಎಂಬೆಲ್ಲಾ ಪ್ರಕಾರದ ಕವಿಗಳಿದ್ದಾರೆಂದು ತಾನು ರಾಷ್ಟ್ರಕವಿಯಾಗದಿದ್ದರೂ ರಾಜ್ಯಕವಿಯಾಗುವೆ ಎಂಬ ವಿಶ್ವಾಸ ಇಟ್ಟುಕೊಂಡಿರುವುದಾಗಿಯೂ ಅದಕ್ಕಾಗೇ ಕುಟ್ಟಪ್ಪ ಎಂದು ಹೆಸರು ಬದಲಾಯಿಸಿಕೊಂಡಿರುವುದಾಗಿಯೂ ಹೇಳುತ್ತಿದ್ದ. ಓಣಿಕವಿ ಬಾರೀ ಶಬ್ದಗಳೊಂದಿಗೆ ಹೀಗೆ ಎದುರಾದಾಗಲೆಲ್ಲಾ ಯಾವ ದಾಟಿಯಲ್ಲಿ ಓದಬೇಕೆಂದು ತಿಳಿಯದೆ, ನೀನೆ ಓದು ಮಾರಾಯ ಎಂದು ಕೊಟ್ಟರೆ ತಾಳೆಗರಿಯಂತೆ ಹಾಳೆಯನ್ನಿಡಿದು,ವಿಶೇಷ ಠೀವಿಯಲ್ಲಿ ನಿಂತು ಗಂಟುಮೋರೆ ಹಾಕಿಕೊಂಡು ಆಕಾಶವೇ ತಲೆಮೇಲೆ ಬಿದ್ದಂತೆ ಓದತೊಡಗುತ್ತಿದ್ದ. ಕೇಳಿಸಿಕೊಂಡು ಸುಮ್ಮನೆ ಕೂರಲು ಬಿಡುತ್ತಿರಲಿಲ್ಲ. ಹಲ್ಲು ಕಿರಿದುಕೊಂಡು ಹೇಗಿದೆ? ಎಂದು ಏನನ್ನಾದರೂ ಹೇಳುವವರೆಗೂ ಬಿಡುತ್ತಿರಲಿಲ್ಲ. ವಿಧಿಯಿಲ್ಲವೆಂಬಂತೆ 'ಈ ಎರಡು ಶಬ್ದಗಳು ಅರ್ಥವಾಗುತ್ತಿಲ್ಲ' ಎಂದರೆ ತನಗೂ ಅರ್ಥವಾಗದವನಂತೆ ಒದ್ದಾಡಿ ಆ ಸಾಲಿಗೆ ಮತ್ತೆರಡು ಅಂತದ್ದೇ ಶಬ್ದಗಳನ್ನು ಸೇರಿಸಿಬಿಡುತ್ತಿದ್ದ. ಒಟ್ಟಿನಲ್ಲಿ ಕುಟ್ಟಪ್ಪನ ಪ್ರವೇಶವಾದರೆ ಭಾನುವಾರಕ್ಕೂ ಅರವಿಂದರ ಏಕಾಂತವ್ರತಕ್ಕೂ ಭಂಗವೇ.

ಕುಟ್ಟಪ್ಪನಿಂದ ಭಾನುವಾರದ ಶೀಲವನ್ನು ಕಾಪಾಡುವ ಕೈಂಕರ್ಯ ಮಾಡಿ ದಡಬಡ ಕೆಲಸ ಮುಗಿಸಿಕೊಂಡವರೇ ಮೋನಪ್ಪಯ್ಯನ ಗುಡಿಗೆ ಹೋಗಿ ಕುಳಿತುಬಿಡುತ್ತಿದ್ದರು. ಗುಡಿಗೆ ಹೋದರೂ ಗಯ್ಯಾಳಿ ಕಾಟ ತಪ್ಪಲಿಲ್ಲ ಎಂಬಂತೆ ಘಂಟೆಯ ಕರ್ಕಶ, ದೇವರು ದೆವ್ವಗಳ ನಡುವಿನ ಸಂಭಾಷಣೆ, ನಡೆಯುವಾಗ ನಡುವಿನಿಂದ ಜಾರುತ್ತಿದ್ದ ಸೆರಗನ್ನು ಸರಿಮಾಡಿಕೊಳ್ಳುತ್ತ ದಿಂಡು ಉರುಳುವ ಭಕ್ತರು ಕಾಲಿಗೆ ಬಂದಂತಾಗಿ ನಿಂತುಬಿಡುತ್ತಿದ್ದ. ಬಿಕ್ಷುಕರ ಕಾಟ, ಸಾಧುಗಳು ಸೇದುತ್ತಿದ್ದ ಚಿಲುಮೆಯ ವಾಸನೆಗೆ ತಲೆ ಚಿಟ್ಟೆಂದು 'ಅಯ್ಯೋ ದೇವರನ್ನು ಕಾಪಾಡುವವರ್‍ಯಾರು? ತನಗೊಳೆದ ಉಪಾಯಕ್ಕೂ ವ್ಯಾಲಿಡಿಟಿ ಟೈಮ್ ಮುಗಿದಿದೆ ಎಂದುಕೊಂಡು ಮನೆ ಸೇರುತ್ತಿದ್ದರು.

ಹೀಗೊಂದು ಭಾನುವಾರ ಬಾಜ ಭಜಂತ್ರಿಯೊಂದಿಗೆ ಬಂದ ಕುಪೇಂದ್ರ, ಯಾರೋ ಹೇಳಿದರು ನೀವಿಲ್ಲಿದ್ದೀರೆಂದು, ನಿಮ್ಮ ಜಿಲ್ಲೆಗೆ ವೈದ್ಯಾಧಿಕಾರಿಯಾಗಿ ವರ್ಗವಾಗಿದೆ ನೋಡಿ, ಮಾತನಾಡಿಸಿಕೊಂಡು ಹೋದರಾಯ್ತೆಂದು ಬಂದೆ. ತುಂಬಾ ಓದಿಕೊಂಡಿದ್ದೀರಂತೆ , ನನಗಷ್ಟು ಪುರಸೊತ್ತಿಲ್ಲ; ಸುಮಾರಾಗಿ ಓದಿಕೊಂಡಿದ್ದೇನೆ. ಅರವಿಂದರ ಪ್ರತಿಕ್ರಿಯೆಗೂ ಕಾಯದೇ ಹಳ್ಳಿಯಿಂದ ದಿಲ್ಲಿಯವರೆಗೂ ಮಾತನಾಡಿ ಚಾ ಹೀರಿ ಹೋಗಿದ್ದ. ಒಬ್ಬ ಜಿಲ್ಲಾ ಮಟ್ಟದ ಅಧಿಕಾರಿ ತನ್ನ ಮನೆ ಬಾಗಿಲಿಗೆ ಬಂದು ಹೋಗುತ್ತಾರೆಂದರೆ ಇಮೇಜು ಉಲ್ಬಣಗೊಳ್ಳುತ್ತದೆ. ಮುಂದೆ ಕೆಲಸಕ್ಕೆ ಬರುತ್ತಾನೆಂದು

ನಗುನಗುತ್ತಾ ಸತ್ಕರಿಸಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಕುಟ್ಟಪ್ಪನ ಕಾಟದಿಂದ ತಪ್ಪಿಸಿಕೊಳ್ಳಲು ಒಬ್ಬ ಸಿಕ್ಕನೆಂದು ಈಡೀ ದಿನ ಸಂತೋಷದಿಂದ ಕಳೆದರು

ಭಾನುವಾರಕ್ಕೊಮ್ಮೆ ಸದ್ದಿಲ್ಲದೇ ಮಾರುತಿ ಸ್ವಿಫ್ಟ್‌ನಲ್ಲಿ ಬಂದಿಳಿಯುತ್ತಿದ್ದ ಕುಪೇಂದ್ರ 'ಅಯ್ಯೋ ಬನ್ನಿ ಅರವಿಂದ್, ಜೀವನದಲ್ಲಿ ಇದೆಲ್ಲಾ ಇದ್ದದ್ದೇ ಬರೀ ಬಟ್ಟೆ ತೊಳೀತಾ ಕುಂತ್ರೆ ಯಂಗೆ? ಸ್ವಲ್ಪ ತಿರುಗಾಡಿಕೊಂಡು ಬರೋಣ ಎಂದು ಕೃಷ್ಣಾನದಿಯ ತೀರಕ್ಕೋ, ತಿಂಥಣಿ ಮೋನಪ್ಪಯ್ಯನ ಗುಡಿಗೋ, ವೆಂಕಟಪ್ಪ ನಾಯಕನ ದರ್ಬಾರಿಗೋ ಕರೆದುಕೊಂಡು ಹೋಗುತ್ತಿದ್ದ. ಹೋಗಿರುವ ಸ್ಥಳ ಸಂದರ್ಭ ಎಲ್ಲ ಮರೆತವನಂತೆ ಜಗತ್ತಿನ ಕ್ರಾಂತಿಗಳು ಸಮಾನತೆ, ಸಮಾಜವಾದ, ಮೇಲು ಕೀಳು , ಬಡವ ಬಲ್ಲಿದ ಶೋಷಣೆ ಎಂತೆಲ್ಲಾ ಮಾತನಾಡಿ ಮಾರ್ಕ್ಸ, ಲೆನಿನ್, ಬುದ್ಧ , ಬಸವ, ಅಂಬೇಡ್ಕರರ ಹಿತೋಪದೇಶಗಳನ್ನೆಲ್ಲ ಮಾತಿನ ಸಮರ್ಥನೆಗೆ ಬಳಸಿಕೊಳ್ಳುತ್ತ ತನ್ನ ಹಿಂದೆ ಬಾಲದಂತೆ ಬಂದಿದ್ದ ಗುಮಾಸ್ತನ ಕಡೆ ಕೈ ಮಾಡಿ 'ಇವಕ್ಕೆಲ್ಲಾ ತಿಳಿಯಾಕಿಲ್ಲ ದಂಡ ಮುಂಡೇವು' ಎಂದು ಶಪಿಸುವುದನ್ನು ಮರೆಯುತ್ತಿರಲಿಲ್ಲ. ಉಪಚಾರಕ್ಕೆಂಬಂತೆ ನಿಮ್ಮಷ್ಟೇನು ತಿಳಿದವನಲ್ಲ, ನೀವು ಮಾತಾಡುವುದಿಲ್ಲ ಅಷ್ಟೇ ಎಂದು ಅರವಿಂದರ ಸುತ್ತ ದೂಮದ ವ್ಯೋಮವನ್ನೇ ಸೃಷ್ಟಿಸಿಬಿಡುತ್ತಿದ್ದ. ಮೊದಮೊದಲು ಕುಪೇಂದ್ರನ ಆಗಮನ ಸಿನಿಮಾ ಇಂಟರ್‌ವಿಲ್ ನಂತಿದ್ದರೂ ಬರಬರುತ್ತ ದುರಂತ ಸಿನಿಮಾದ ಕಥೆಯಂತಾಗಿತ್ತು. ಮಾಸ್ತರರ ಹೆಂಡತಿ ಮನೆಯಲ್ಲಿದ್ದರೆ ಕುಪೇಂದ್ರನ ಹಾಜರಾತಿ ಹೇಗಿರುತ್ತಿತ್ತೋ? ಟೆಂಪರರಿ ಬ್ಯಾಚುಲರ್ ಆಗಿರುವುದು ಮಾತ್ರ ಕುಪೇಂದ್ರನ ಉಪಟಳ ಹೆಚ್ಚಲು ಕಾರಣವಾಗಿತ್ತು. ಭಾನುವಾರದ ಭೋಗ್ಯವನ್ನು ಅನುಭವಿಸಲಾಗುತ್ತಿಲ್ಲ ವೆಂಬ ಸಂಕಟ ಒಂದೆಡೆಯಾದರೆ ಈ ವಿಚಿತ್ರವಾದಿಯ ಜೊತೆ ಕಾಲ ಕಳೆಯುವ ಸಂಕಟ ಇನ್ನೊಂದೆಡೆ.

ಹೀಗೆ ಕಳೆದ ವಾರ ಜೊತೆಗೂಡಿ ಕೃಷ್ಣಾ ನದಿಯ ದಂಡೆಗೆ ಹೋಗಿದ್ದರು. ಹಸಿರು ಹೊದಿಕೆಯನೊದ್ದ ಬೆಟ್ಟಗಳ ಸಾಲು ನಡುವೆ ಜುಳು ಜುಳು ಹರಿವ ಕೃಷ್ಣೆ ಸಂಗೀತದ ನಿನಾದದಂತೆ ಕರ್ಣಪಟಲವನ್ನು ಆವರಿಸಿಕೊಳ್ಳುತ್ತಾಳೆ, ಬೆಟ್ಟದಂತೆ ಕುಳಿತಿರುವ ಮೌನೇಶನ ತಪೋಮೂರ್ತಿ, ತಪೋಶಕ್ತಿಗೆ ಕೈಜೋಡಿಸಿದ ಕೃಷ್ಣೆಯ ಶಿಲಾ ಸೌಂಧರ್ಯ ನೋಡಲು ಅತೀವ ಆನಂದ. ಆದರೆ ನದಿ ದಂಡೆಗೆ ಹೋದಾಗಲೆಲ್ಲ ಅರವಿಂದನಿಗೆ ಕೃಷ್ಣೆ ಮೋಹಿನಿಯಂತೆ ಕಾಡಿದ್ದಾಳೆ. ಸಣ್ಣವನಿದ್ದಾಗ ಕಾಲುವೆಯೊಂದರಲ್ಲಿ ಮುಳುಗಿ ನೀರು ಕುಡಿದು ಹೊಟ್ಟೆ ಊದಿಕೊಂಡಾಗಲೇ ಆವರಿಸಿದ ಭಯದ ತೇವ ಇನ್ನು ಆರಿಲ್ಲ. ದಂಡೆಯಲ್ಲಿ ನಿಂತರೂ ಆರ್ದ್ರಗೊಳ್ಳುವ ಮನಸ್ಸು ಅರವಿಂದನದು. ಚರಿಗೆ, ಬಿಂದಿಗೆ , ಬಕೀಟು, ಘಟಾರದ ನೀರು ಬಿಟ್ಟು ಉಳಿದೆಲ್ಲ ನೀರಿನ ಆಕರಗಳೊಂದಿಗೆ ವ್ಯವಹರಿಸುವುದೆಂದರೆ ಕೊರಳಿಗೆ ಕುಣಿಕೆ ಬಿಗಿದು ಮಾತನಾಡುವ ಯಮನೊಂದಿಗಿನ

ಸಂಭಾಷಣೆಯೆಂದೇ ಭಾವಿಸಿದ್ದರು. ಐದಾರು ವರ್ಷಗಳ ಹಿಂದೆ ನೆರೆಬಂದಾಗ ಮನೆಬಿಟ್ಟು ಗುಡ್ಡ ಸೇರಿದ್ದವರು ನಾಲ್ಕೈದು ದಿನಗಳವರೆಗೆ ಕೆಳಗಿಳಿದಿರಲಿಲ್ಲ. ನೆರೆ ಇಳಿದ ಮೇಲೆ ಊರಿಗೆ ಬಂದ ಅರವಿಂದರು ಊಡಿದ ಮಹಾನ್ ಉಪಾಯದಿಂದ ತಾನೊಬ್ಬನೇ ಬದುಕಿರುವಂತೆ ಊರವರೆಲ್ಲ ನೀರಲ್ಲಿ ಕೊಚ್ಚಿ ಹೋಗಿರುವಂತೆ ಓಡಾಡಿದ್ದರು. ಇದಾವುದರ ತಿಳಿವಿಲ್ಲದ ಕುಪೇಂದ್ರ ' ನೋಡು ಮಾನಿನಿಯ ನಡಿಗೆ, ಆ ಬಿಂಕ ಬಯಲು ಬೆತ್ತಲು ಒಳಗೂ ಹೊರಗೂ ಎಂದೆಲ್ಲಾ ಶುರು ಮಾಡಿದವನು 'ಭಾರತೀಯರ ಕಾಮದ ಭಂಗಿ ಮತ್ತು ಸ್ತ್ರೀ ಶೋಷಣೆ' ಎಂಬ ಪ್ರಬಂಧ ಮಂಡಿಸಿ ವಿವಿಧ ದೇಶದ ಜನರ, ಪ್ರಾಣಿಗಳ ಕಾಮಭಂಗಿಗಳನ್ನು ಕಣ್ಮುಂದಿರಿಸಿ, ವಿಶ್ವವಿದ್ಯಾಲಯದ ವಿದ್ವತ್‌ಪ್ರಾಣಿಯಂತೆ ಗ್ರಂಥಋಣ ತೀರಿಸುವುದನ್ನು ಮರೆಯಲಿಲ್ಲ'. ಪಿಳಪಿಳನೆ ಕಣ್ಣುಬಿಡುತ್ತ ನದಿನೀರಲ್ಲಿ ಮುಳಿಗೇಳುತ್ತಿದ್ದ ಸಾಧುವಿಗೆ ಕಾವೇರಿದಂತಾಗಿ ತನ್ನೂರಿನ ಮಾಸ್ತರನ ಕಡೆ ಆಶ್ಚರ್ಯಕರ ನೋಟ ಬೀರಿದ. ಅರವಿಂದ ಮಾಸ್ತರನಿಗೆ ನದಿ ದಂಡೆಯಲ್ಲಿ ನಿಂತು ಕೃಷ್ಣೆಯ ಸೌಂದರ್ಯ ಸವಿಯಬೇಕೋ ಕುಪೇಂದ್ರನ ಮಾತಿನಿಂದಾಗಿ ತನ್ನ ಸ್ತ್ರೀವಾದವನ್ನೇ ಸಂಶಯಿಸಿ ನೋಡುತ್ತಿರುವ ಸಾಧುವಿನ ನೋಟ ಎದುರಿಸಬೇಕೋ? ಸಾಧು ಊರಮಂದಿಯ ಮುಂದೆ ಏನಾದರೂ ಬಡಬಡಾಯಿಸಿದರೆ ಎಂಬಿತ್ಯಾದಿ ವಿಚಾರಗಳಿಂದ ಹೊಟ್ಟೆ ತೊಳೆಸಿದಂತಾಗಿ ಮರೆ ಹುಡುಕಿಕೊಂಡು ಹೊರಟ.

ಭಾನುವಾರ ಮತ್ತೆ ಬಂತು. ಅಕ್ಕಪಕ್ಕದ ರಜಾ ದಿನಗಳನ್ನು ಹೊಂದಿಸಿಕೊಂಡು ಹೆಂಡತಿಯೂ ಬಂದಿದ್ದಳು. ಕುಪೇಂದ್ರ ಕುಟ್ಟಪ್ಪ ಎಂಬ ಮಹಾನ್ ಪ್ರೀತಿಪೀಡಕರಿಂದ ತಪ್ಪಿಸಿಕೊಳ್ಳಲು ಹಿಂದಿನ ದಿನವೇ ಸುತ್ತಮುತ್ತಲಿನ ಪಿಕ್ನಿಕ್ ಸ್ಪಾಟ್‌ಗಳಾದ ಬ್ರಿಟಿಷ್ ಕಾಲದ ಟೇಲರ್ ಮಂಜಿಲ್, ಅದೇ ಕಾಲದ್ದೆನ್ನಲಾದ ವಾಗಣಗೇರಾ ಕೋಟೆ, ಪ್ರಾಗೈತಿಹಾಸಿಕ ಕಾಲದ ಬುಡ್ಡರ ಸಮಾಧಿಗಳು, ಬೋನಾಳ ಪಕ್ಷಿಧಾಮ, ಜಲದುರ್ಗ ಇತ್ಯಾದಿ ಇತ್ಯಾದಿ ಸ್ಥಳಗಳನ್ನು ಪಟ್ಟಿ ಮಾಡಿ ಅವುಗಳ ವಿಶೇಷತೆ ಹೋಗುವ ಮಾರ್ಗ, ದೂರ, ವಾಹನಗಳ ಸೌಕರ್ಯ ಇತ್ಯಾದಿ ವಿವರಗಳನ್ನು ಕಲೆಹಾಕಿದ್ದರು. ಪಟ್ಟಿಯ ಕೊನೆಯಲ್ಲಿರುವ ಜಲದುರ್ಗದ ಹೆಸರು ಕೇಳಿ ಏನೋ ಕೋಟೆ ಊರಿರಬೇಕು ಹೊಸದಾಗಿ ಕಾಣದಿದ್ದರೂ ಹೊಸದುರ್ಗ ಎಂದಿಲ್ಲವೇ ಅಂತೆಯೇ ಇರಬೇಕೆಂದು ಮತ್ತು ಸ್ಥಳನಾಮದೊಳಗಿರುವ ಜಲ ಎಂಬ ಎರಡಕ್ಷರದ ಮಹಿಮಾಶಕ್ತಿಗೆ ಅಂಜಿ ಅದರ ಮಾಹಿತಿ ಕೇಳುವ ಗೋಜಿಗೆ ಹೋಗಿರಲಿಲ್ಲ. ಸರ್ವದಸರೊಳಗೆ ಯಾವುದು ಉತ್ತಮ, ಎಲ್ಲಿಗೆ ಹೋಗುವುದು? ಹಾಗೇ ನೋಡಿದರೆ ಅರವಿಂದರ ಒಳಮನಸಿಗೆ ಎಲ್ಲೂ ಹೋಗಬೇಕಂದಿಲ್ಲ . ತಪ್ಪಿಸಿಕೊಳ್ಳಬೇಕಲ್ಲ. ನಿಮಗೇನು ತಿಳಿತದೆ ಅದರಾಗ, ತಿರುಗಿದವರಲ್ಲ ಬಿಟ್ಟೋರಲ್ಲ, ತಿರುಗೋದ್ರಲ್ಲಿ ಪಿ.ಹೆಚ್ಡಿ ಆಗೇದ ನಂದು ಡಾಕ್ಟರೇಟ್

ಕೊಡೋದು ಒಂದೇ ಬಾಕಿ ಎಂದು ಅರವಿಂದರ ಕೈಯಲ್ಲಿದ್ದ ಪಟ್ಟಿ ಕಿತ್ತುಕೊಂಡು ತಳಬುಡ ತಿರುವಿ ಹಾಕಿ 'ಜಲದುರ್ಗ'ಕ್ಕೆ ಹೋಗುವುದೆಂದಳು. ಜೀವ ದಸಕ್ಕೆಂತು. ಚಂಡಿಕಾಯಾಗಕ್ಕೆ ಮಣಿದು ವಿವರಗಳನ್ನು ಕಲೆ ಹಾಕುತ್ತಿದರೆ 'ಅದೊಂದು ದುರ್ಗಮ ದಾರಿ' ಜೋಡಿ ಸಿಕ್ಕರೆ ಅಷ್ಟೇ! ಪಕ್ಕದಲ್ಲಿ ಕೈಲಾಗದ ಗಂಡಸ್ಸಿದ್ದರೆ ಮುಗೀತು ಕಥೆ, ಒಂದ ಎರಡ ಸಾವಿರ ಸರ್ಪಗಳು ಒಮ್ಮೆಲೆ ಎಡೆ ಎತ್ತಿ ಬಸುಗುಟ್ಟಿದಂತಾಯ್ತು. ಅಯ್ಯೋ ಅದಕ್ಕೇನು ನಮ್ಮ ಕುಟ್ಟಪ್ಪ ಇಲ್ವಾ, ಮಿಲಿಟರಿ ಮನುಷ್ಯ ಗಣೇಶಪ್ಪ ಇಲ್ವಾ ? ಜೊತೆ ಕರೆದೊಯ್ದರಾಯ್ತು. ಹೆಂಡತಿಯ ಉತ್ಸಾಹಕ್ಕೆ ಮರು ಮಾತಾಡಲು ಉಸುರಿಲ್ಲದೆ ಎಲ್ಲರೂ ಹೊರಡುವೆಂದಾಯ್ತು. ಅವರವರ ಹೆಂಡತಿಯರನ್ನೂ ಕರೆದುಕೊಂಡು ಬರುವುದೆಂದಾಯ್ತು.

ಕಿರಿದಾದ ಕಾಡು ದಾರಿ , ಕಲ್ಲು ಮುಳ್ಳು ಎಚ್ಚರ ತಪ್ಪಿದ್ದರೆ ಮೈಯೆಲ್ಲಾ ಪರಚಿಬಿಡುವ ಯಾತನೆ

ದಾರಿ ದಾರಿ ದಾರಿ

ಕಂಟಕದಾರಿ

ಇದು ವೈಕುಂಠದ ದಾರಿ

ಕುಟ್ಟಪ್ಪನ ಕವಿತೆಗೆ 'ಇದೇನು ಬಾರೋ ನಾನು ಮಿಲ್ಟ್ರಿಲಿದ್ದಾಗ ಎಂತೆಂತದ್ದು ನೋಡಿಲ್ಲ' ಎಂಬ ಗಣೇಶಪ್ಪನ ಮಾತುಗಳು, ಇದನ್ನೆಲ್ಲಾ ಸಹಿಸಿಕೊಂಡು ದಾರಿಯಲ್ಲಿ ಸಿಗುವ ಕಾರೆಹಣ್ಣು ಬಾರೆಹಣ್ಣುಗಳನ್ನು ಮೆಲ್ಲುತ್ತಾ ಎರಡು ಕಿಲೋಮೀಟರ್ ರಸ್ತೆ ಸವೆಸಿದರೆ ಬೆಟ್ಟದ ಮೇಲಿಂದ ವಜ್ರದ ಹೊಳಪಿನಲ್ಲಿ ಹಾಲಾಹಲವೋ, ಅಮೃತದ ನೊರೆಯೋ ದುಮ್ಮಿಕ್ಕುವಂತೆ ಸುರಿವ ನೀರು. ನೀರು ನುಗ್ಗುವ ರಭಸಕ್ಕೆ ಒಳಗೆ ನುಗ್ಗಿದಂತಾಗಿ ಹೆಜ್ಜೆಗಳು ಹಿಂದಾಗತೊಡಗಿದವು. ಎಲ್ಲರೂ ಬೆರಗಿನಿಂದ ನೋಡತೊಡಗಿದ್ದರೆ ಅರವಿಂದನ ಹೆಂಡತಿ ನೊರೆಯಂಥ ನೀರ ಕಂಡೊಡನೆ ನಿಧಿ ಸಿಕ್ಕವರಂತೆ ಜಿಗಿದಾಡತೊಡಗಿದಳು. ಮಿಲ್ಟ್ರಿ ಗಣೇಶಪ್ಪ ಐವತ್ತಾದರೂ ಹರೆಯ ಬತ್ತದೆ ನೀರು ಬರುವ ಮೂಲ ಹಿಡಿಯಬೇಕೆಂಬ ಉತ್ಸಾಹದಲ್ಲಿ ನೀರ ಮಧ್ಯದ ಬಂಡೆಗಳನ್ನು ಏರುತ್ತ ಹೊರಟ. ಇದೇ ಉತ್ಸಾಹವನ್ನು ನೀರೆಯರ ವಿಷಯದಲ್ಲೂ ತೋರಿದ್ದರಿಂದ ಮೂರು ಮದುವೆಗಳಾಗಿದ್ದವು. ಎಲ್ಲರ ಹೆಂಡಂದಿರು ಕೆಳಗೆ ನಿಂತು ನೋಡಿದರಾಯ್ತು ಎಂಬ ನಿರ್ಧಾರಕ್ಕೆ ಬಂದಿದ್ದರು. ಆದರೆ ಅರವಿಂದರ ಹೆಂಡತಿಗೆ ಎತ್ತರದಲ್ಲಿರುವ ಸಪುರಾದ ಬಂಡೆಯ ಮೇಲೆ ದುಮ್ಮಿಕ್ಕುವ ನೀರಿಗೆ ಬೆನ್ನು ಕೊಡಬೇಕೆಂಬ ಬಯಕೆ. ಸಾವಿಗೆ ತಲೆ ಕೊಡುವುದೆಂದರೆ ಇದೆ ಇರಬೇಕೆಂದುಕೊಳ್ಳುವಷ್ಟರಲ್ಲಿ 'ಅದೆಷ್ಟು ಅಂಜುತ್ತೀರಿ ಬನ್ರೀ ನಾನಿದೆನಲ್ಲಾ ಕೈ ಹಿಡ್ಕೊಂಡು ಕರ್ಕೊಂಡು ಹೋಗ್ತಿನಿ'ಇನ್ನು ಏನೇನು

ಅಂದುಬಿಡುತ್ತಾಳೆಂಬ ಭಯದಲ್ಲಿ ಹೆಂಡತಿಯ ಕೈಗೆ ತಲೆಕೊಟ್ಟು ನಡೆಯತೊಡಗಿದ. ಅರವಿಂದನ ಸ್ಥಿತಿಗೆ ಕುಟ್ಟಪ್ಪ ಮುಸಿಮುಸಿ ನಗತೊಡಗಿದ. ಇದೆ ಒಳ್ಳೆ ಸಂದರ್ಭವೆಂದು ಮಿಲ್ಟ್ರಿ ಗಣೇಶಪ್ಪ ಬಂದು 'ಹೆಣ್ಮಕ್ಕಳಿಗೆ ಖುಷಿಪಡಿಸಬೇಕು ಮೇಷ್ಟ್ರೆ ಇಲ್ಲಂದ್ರೆ ಮೂರು ಮದುವೆ ಆಗ್ಲಿಕ್ಕಾಗ್ತಿತ್ತ ಎಂದು ಮಾರುದ್ದ ಭಾಷಣ ಬಿಟ್ಟ.'

ಬೆನ್ನ ಮೇಲಿನ ಬೋರ್ಗರೆತವನ್ನು ಸಹಿಸಿಕೊಂಡು ಹೆಂಡತಿ ಪಕ್ಕ ಕೂತು ಒತ್ತಾಯದಿಂದ ಹಲ್ಲು ಕಿರಿದರು. ಈಗಪ್ಪ ಜೋಡಿ ನೋಡೋಕೆ ಸ್ವರ್ಗದಾಗ ಕೂತ ಪಾರ್ವತಿ ಪರಮೇಶ್ವರರಂತಿದ್ದರೆಂದು ಎಲ್ಲರೂ ಕೇಕೆ ಹಾಕುವ ಹೊತ್ತಿಗೆ ತಾನು ಪಾರ್ವತಿ ಪಕ್ಕ ಕೂತ ಪರಮೇಶ್ವರನೋ ಗಣಪನ ಭಾರ ಸಹಿಸಿಕೊಂಡ ಮೂಷಕನೋ ತಿಳಿಯದಾಯಿತು ಅರವಿಂದರಿಗೆ. ಇದು ಜೀವನದಲ್ಲಿ ಮತ್ತೆಂದು ಸಾಧ್ಯವಿಲ್ಲವೆನಿಸಿ ಈ ದೃಶ್ಯವನ್ನೇ ಕ್ಲಿಕ್ಕಿಸಿಕೊಂಡು 2*3 ರ ಸೈಜಿನ ಫೋಟೋ ಮಾಡಿಸಿ ತನ್ನ ವಂಶದವರಿಗೆ ನನ್ನ ವಿಕ್ನೇಸ್ ತಿಳಿಯದಿರಲೆಂದು ಅನ್ನಿಸಿ ಗಣೇಶಪ್ಪನಿಗೆ ಸ್ಟಿಲ್ ತೆಗೆಯಲು ಹೇಳಿದರು.

'ಕೊರೆತ ಕೊರೆತ ಭೋರ್ಗರೆತ

ಒಳಗೂ ಹೊರಗೂ

ನೆಲದೊಳಗೂ ಮುಗಿಲೊಳಗೂ' ಎಂದು ಜೋರುದನಿಯಲ್ಲಿ ಕುಟ್ಟಪ್ಪ ಹಾಡತೊಡಗಿದ. ಸುತ್ತಲಿದ್ದವರು ವ್ಹಾ ವ್ಹಾ ಎಂದದ್ದೆ ಉನ್ಮಾದಿತನಾಗಿ

'ಜನ ಅಂತಾರೆ ನನ್ನ ಕುಟ್ಟಪ್ಪ ಕುಟ್ಟಪ್ಪ

ನಾ ಬಿಡೋದಿಲ್ಲ ಬಿಡೋದಿಲ್ಲ

ಆಗೋವರೆಗೂ ಪುಟ್ಟಪ್ಪ' ಎಂದು ತನ್ನ ಬತ್ತಳಿಕೆಯಲ್ಲಿದ್ದ ಅಷ್ಟು ಅಸ್ತ್ರಗಳನ್ನು ಪ್ರಯೋಗಿಸಿಬಿಟ್ಟ. ಕುಟ್ಟಪ್ಪನ ಬಾಣ ಪ್ರಯೋಗಕ್ಕೆ ಎಲ್ಲರ ಉದರದಲ್ಲಿ ಕೈಯಾಡಿಸಿದಂತಾಗಿ ಊಟ ಮಾಡುವ ಮಾತನಾಡಿದರು. ಅರೆಗಳಿಗೆಯಲ್ಲೇ ಅವಸರದಿಂದೆದ್ದ ಅರವಿಂದರು ಕಾಲು ಕಿತ್ತು ಪಾಚಿಗಟ್ಟಿದ ಬಂಡೆಯ ಮೇಲಿಟ್ಟು ಕಾಲು ಜಾರಿ ನೀರೊಳಗೆ ನೀರಾದರು. ಅಯ್ಯೋ ಹೋದರು! ಹೋದರು! ಎಂದು ದಂಡೆಯಲ್ಲಿದ್ದವರೆಲ್ಲ ಅಬ್ಬರಿಸುತ್ತಿರುವಾಗ, ನೀರಿಗೆ ಜಿಗಿದ ಹೆಂಡತಿ ಸೆಳವಿಗೆ ಸಿಗುವ ಮುನ್ನ ಹಿಡಿದೆಳೆದು ದಡ ಮುಟ್ಟಿಸಿದಳು. ಮಾನ ಕಳೆದ ಹೆಂಡತಿ ಪ್ರಾಣ ಉಳಿಸಿದಳಲ್ಲಾ ಎಂದು ನಿಟ್ಟುಸಿರು ಬಿಡುತ್ತಾ ಒದ್ದೆ ಬಟ್ಟೆಯಲ್ಲಿ ಹೆಜ್ಜೆ ಇಡುತ್ತ ದಡದಲ್ಲಿದ್ದ ಹೆಣ್ಣುಮಕ್ಕಳನ್ನು ಕಂಡು ತಲೆತಗ್ಗಿಸಿದ. ಕುಚ್ಚೆಳ್ಳು ಚಟ್ನಿ, ಸಜ್ಜಿ ರೊಟ್ಟಿ, ಕರಿದ ಅವಲಕ್ಕಿ ರುಚಿ ಬಾಯಲ್ಲಿ ನೀರೂರಿಸುವಂತಿದ್ದರೂ ಅರವಿಂದರಿಗೆ ಹೊಟ್ಟೆ ತುಂಬಿದ್ದು ಮಾತ್ರ ಅರಿವಿಗೆ ಬಂತು.

ಉಸ್ಸಪ್ಪ ಎಂದು ಎಲ್ಲರೂ ಮನೆ ಕಡೆಗೆ ದಾರಿ ಹಿಡಿದರು. ಸಂಭವಿಸಿದ ಅವಘಡಗಳನ್ನು ನೆನೆಯುತ್ತ ಹೆಜ್ಜೆ ಕಿತ್ತಿಡುತ್ತಿದ್ದ ಅರವಿಂದರ ಎದುರಿಗೆ ಕುಪೇಂದ್ರ

ದೆವ್ವದಂತೆ ನಿಂತಿದ್ದ. 'ನಂಗೆ ಹೇಳದೆ ಬಂದುಬಿಟ್ಟಿದ್ದೀರಿ, ಬನ್ನೀ ನಂಜೊತೆ ತುಸು ಹೊತ್ತು ಕಾಲ ಕಳೆಯುವಿರಂತೆ' ಎಂದ ಕುಪೇಂದ್ರನ ಮಾತಿಗೆ ಏನು ಹೇಳಲು ತೋಚದೆ ತುಟಿಬಿಚ್ಚಿದರು. ಹೆಂಡತಿ, ಕುಟ್ಟಪ್ಪ , ಕುಪೇಂದ್ರ ಎಂಬ ವಿವಿದ ಬ್ರಾಂಡುಗಳ ದ್ರಾಕ್ಷರಸಗಳಿಂದ ತನ್ನ ಬದುಕಿನ ಭಾನುವಾರಗಳು ಕಾಕ್‌ಟೈಲ್ ಆಗಿರುವುದನ್ನು ನೆನೆಯುತ್ತ ಕುಪೇಂದ್ರನ ಮಾತುಗಳಿಗೆ ಸಾಕ್ಷಿಯಾದರು.

**– ಕೈದಾಳ್ ಕೃಷ್ಣಮೂರ್ತಿ**
ಬ್ಲಾಗ್‌ನಿಂದ

# ಅಪ್ಪನ ಸ್ಕೂಟರ್

ನನ್ನಪ್ಪ ಡಾಕ್ಟರರಾಗಿದ್ದರೂ, ಅವರ ಕೈಯಲ್ಲಿ ಸ್ಟೆತೋಸ್ಕೋಪಿಗಿಂತ ಹೆಚ್ಚಾಗಿ ನಾನು ನೋಡಿದ್ದು ಸ್ಕ್ರೂ ಡ್ರೈವರ್, ಸ್ಪಾನರುಗಳನ್ನೆ. ಇದಕ್ಕೆ ಅಪ್ಪನ ನಿತ್ಯದ ಪೇಶಂಟ್ ಆಗಿದ್ದ ಅವರ ಪ್ರೀತಿಯ ದ್ವಿಚಕ್ರಿಯೇ ಕಾರಣ ಎಂದು ಬೇರೆ ಹೇಳಬೇಕಿಲ್ಲ. ಪೆಟ್ರೋಲ್ ಇದ್ದರೂ ತಳ್ಳಿಸಿಕೊಳ್ಳುವುದನ್ನೆ ಹೆಚ್ಚು ಇಷ್ಟ ಪಡುತ್ತಿದ್ದ ಅದು ಹೊರೆ ಹೊರಲು ಹಠ ಮಾಡುವ ಅಗಸನ ಕತ್ತೆಯಂತೆ ಯಾವಾಗೆಂದರೆ ಆವಾಗ ನಿಂತು ಬಿಡುತ್ತಿತ್ತು.ಅಪ್ಪನೋ ಅದಕಿಂತ ಹಠವಾದಿ. ಅದೆಷ್ಟು ಮೊಂಡು ಮಾಡಿದರೂ ಬಿಡದೆ ರಿಪೇರಿ ಮಾಡಿ ಸವಾರಿ ಮಾಡಿಕೊಂಡೆ ಮನೆ ಸೇರುತ್ತಿದ್ದರು.

ಬೆಳಗ್ಗೆ ಹಾಸಿಗೆ ಬಿಟ್ಟ ಕೂಡಲೇ ಅಪ್ಪನ ಮೊದಲ ಕೆಲಸ ಸ್ಕೂಟರಿನ ಬಳಿ ಹೋಗುವುದು. ಅದರ ಹೊದಿಕೆಯನ್ನು ಸರಿಸಿ, ಪ್ರೀತಿಯಿಂದ ಸವರಿ ತಡವಿ ಮೃದುವಾಗಿ ಕಿಕ್ ಮಾಡಿ ನೋಡುತ್ತಿದ್ದರು. ಆಗೇನೋ ಮದುವೆಯಾದ ಹೊಸದರಲ್ಲಿ 'ಕೂಗಿದೊಡನೆ ಬರುವ ಶಾರದೆ' ಯಂತೆ ಒಂದೇ 'ಕಿಕ್' ಗೆ ಸ್ಟಾರ್ಟ್ ಆಗುತ್ತಿತ್ತು. ಆದರೆ ಅಪ್ಪ ಯಾವಾಗ ತಿಂಡಿ ತಿಂದು ಬ್ಯಾಗ್ ಹಿಡಿದು ಹೊರಟರೋ ಆಗ ಶುರುವಾಗುತ್ತಿತ್ತು ಅದರ ಮುನಿಸು. ಅಪ್ಪ ಮಾತ್ರ ನಿತ್ಯವೂ ತಮ್ಮ ಪ್ರೀತಿಯ ಸ್ಕೂಟರಿನೊಂದಿಗೆ ತಾಳ್ಮೆಯಿಂದ, ಪೇಷಂಟ್‌ಗಳೊಂದಿಗೆ ವ್ಯವಹರಿಸುವಷ್ಟೇ ನಾಜೂಕಾಗಿ ವರ್ತಿಸುತ್ತಿದ್ದರು. ಮೊದಲಿಗೆ ಕ್ಲಿನಿಕ್ ಗೆ ಕೊಂಡೊಯ್ಯುವ ಬ್ಯಾಗನ್ನು ಕಾಲಿರಿಸುವ ಜಾಗದಲ್ಲಿದ್ದ ಅದರ ಬಾಕ್ಸಿನೊಳಗೆ ಭದ್ರವಾಗಿಟ್ಟು, ಅದಕ್ಕೆ ಸ್ವಲ್ಪವೂ ಅರಿವಾಗದಂತೆ ಸ್ಟ್ಯಾಂಡ್ ತೆಗೆದು ಆಸೀನರಾಗುತ್ತಿದ್ದರು. ನಂತರ ಕುಳಿತಲ್ಲಿಂದಲೇ ಲಘುವಾಗಿ ಕಿಕ್ಕರ್ ತುಳಿಯುತ್ತಿದ್ದರು. ಅದು ಡುರ್ ಡುರ್ ಎಂಬ ಶಬ್ಧ ಹೊರಡಿಸುತ್ತಿತ್ತೇ ವಿನಹ ಹೊರಡುತ್ತಿರಲಿಲ್ಲ. ಇದೂ ಕೂಡಾ ನಿತ್ಯವಿಧಿಯೇ ಎಂಬಂತೆ, ಸ್ವಲ್ಪವೂ ಬೇಸರ ಪಡದೆ ಇಳಿದು ಅದರ ಹ್ಯಾಂಡಲನ್ನು ಹಿಡಿದುಕೊಂಡು ಸ್ವಲ್ಪ ವಾಲಿಸಿ ಬಲ ಹಾಕಿ ಒದೆಯುತ್ತಿದ್ದರು. ಉಹುಂ .. ಎಷ್ಟೇ ಜೋರಾಗಿ ತುಳಿದರೂ ಫಲ ಕೊಡದೆ, ವಿಲನ್ ಕೈಯಲ್ಲಿ ಪೆಟ್ಟು ತಿಂದರೂ ಕೊಂಚವೂ ನಲುಗದಿರುವ ಹೀರೋ ತರಹ ಫೋಸ್ ಕೊಡುತ್ತಿತ್ತು.

ಈಗ ಮುಂದಿನ ಆಪರೇಷನ್ ಪ್ರಾರಂಭ.. !! ಅಪ್ಪ ಅದರ ಶೀಲ್ಡ್ ತೆಗೆದು ಇಂಜಿನ್ ತಲೆಯ ಮೇಲಿನ 'ಪ್ಲಗ್' ಬಿಚ್ಚುತ್ತಿದ್ದರು. ಅದನ್ನು ಕಣ್ಣ ಮುಂದೆ ಹಿಡಿದುಕೊಂಡು ಬೆರಳುಗಳಿಂದ ಮೆಲ್ಲನೆ ತಿರುಗಿಸುತ್ತಾ ಗಂಭೀರವಾಗಿ ಪರೀಕ್ಷಿಸುತ್ತಿದ್ದರೆ, ಅಮ್ಮ ಪಕ್ಕದಲ್ಲೇ ನರ್ಸಿನ ಭಂಗಿಯಲ್ಲಿ ನಿಂತಿರುತ್ತಿದ್ದಳು. ಅಪ್ಪ ಈಗ ಕೈ ಚಾಚಿದರೆ ಸಾಕು, ಅದನ್ನೇ

ಕಾದಿದ್ದವಳಂತೆ ಅಮ್ಮ, ತನ್ನ ಕರಿಮಣಿ ಸರದಲ್ಲಿ ತಾಳಿ ಕಾಣದಷ್ಟು ಪೋಣಿಸಿಕೊಂಡಿರುತ್ತಿದ್ದ ಪಿನ್‌ಗಳಲ್ಲಿ ಒಂದನ್ನು ಜಾಗ್ರತೆಯಾಗಿ ಅಪ್ಪನ ಕೈಯಲ್ಲಿರಿಸುತ್ತಿದ್ದಳು. ಅದರ ಮೊನಚನ್ನು ಬೆರಳುಗಳಲ್ಲೇ ಪರೀಕ್ಷಿಸಿ, ನಿಧಾನಕ್ಕೆ ಪ್ಲಗ್ಗಿನಲ್ಲಿ ತುಂಬಿಕೊಂಡಿದ್ದ ಮಸಿಯನ್ನು ತೆಗೆಯುವ ಕೆಲಸ ನಡೆಯುತ್ತಿತ್ತು. ದಿನಕ್ಕೆರಡು ಸಲ ಇದೇ ಕೆಲಸ ಮಾಡುತ್ತಿದ್ದುದರಿಂದ ಅದರಲ್ಲೇನೂ ಇರುತ್ತಿರಲಿಲ್ಲ. ಆದರೂ ಅಪ್ಪ ಅದನ್ನೊಮ್ಮೆ ಸ್ಕೂಟರ್ ಒರೆಸುವ ಬಟ್ಟೆಗೆ ತಿಕ್ಕಿ ನೋಡುತ್ತಿದ್ದರು. ಬಟ್ಟೆಯ ಬಣ್ಣ ಸ್ವಲ್ಪ ಬದಲಾದರೆ ಸಾಕು ! 'ನೋಡಿದೆಯಾ ಎಷ್ಟು ಮಸಿ ಇತ್ತು ! ಈಗ ನೋಡು ಒಂದೇ ಪೆಟ್ಟಿಗೆ ಸ್ಟಾರ್ಟ್..!!'ಎಂದು ಪ್ಲಗ್ಗನ್ನು ಯಥಾಸ್ಥಾನದಲ್ಲಿ ಅಳವಡಿಸಿ ಮತ್ತೊಮ್ಮೆ ಮೊದಲಿನಂತೆ ತುಳಿತ..!!

ಆಗಲೂ ಸ್ಟಾರ್ಟ್ ಆಗದಿದ್ದರೆ ಅಪ್ಪನ ಬತ್ತಳಿಕೆಯಿಂದ ಇನ್ನಷ್ಟು ಬಾಣಗಳು ಸ್ಕ್ರೂ ಡ್ರೈವರ್,ಸ್ಪಾನರ್ ಗಳ ರೂಪ ಹೊತ್ತು ಹೊರ ಬರುತ್ತಿದ್ದವು. ಅವುಗಳನ್ನು ಬಳಸಿ ಕೆಲವನ್ನು ಸಡಿಲಿಸಿ , ಇನ್ನು ಕೆಲವನ್ನು ಬಿಗಿಗೊಳಿಸಿ, ಮತ್ತೊಂದೆರಡು ಬಾರಿ ತುಳಿದಾಗ, ಸ್ಕೂಟರ್ ಮೈ ಕೊಡವಿಕೊಂಡು ಸ್ಟಾರ್ಟ್ ಆಗುತ್ತಿತ್ತು. ಅದರ ಇಂಜಿನ್ ಆಫ್ ಆಗದಂತೆ ಕಿವಿ ಹಿಂಡುತ್ತಿರುವಂತೆ ಅಮ್ಮನಿಗೆ ಹೇಳಿ, ಕೈ ಮೈಯಲ್ಲಿರುವ ಮಸಿ, ಆಯಿಲ್‌ಗಳನ್ನೊಮ್ಮೆ ತೊಳೆದುಕೊಂಡು ಅಪ್ಪ ಅದನ್ನೇರಿ ಕ್ಲಿನಿಕ್‌ಗೆ ಸಾಗುತ್ತಿದ್ದರು. ದಾರಿಯಲ್ಲಿ ಸಿಕ್ಕವರು ಯಾರಾದರು ಕೈಯೆತ್ತಿ ನಮಸ್ಕಾರ ಡಾಕ್ಟ್ರೇ ಅಂದ್ರೆ ಅವರಿಗೆ ಕುತ್ತಿಗೆ ಬಗ್ಗಿಸಿ ನಮಸ್ಕಾರ ಎಂಬಂತೆ ಸೂಚಿಸುತ್ತಿದ್ದರು. ಕೈ ಬಿಟ್ಟರೆ ಎಲ್ಲಿ ಗಾಡಿ ಪುನಃ ನಿಂತು ಬಿಡುತ್ತದೊ ಎಂಬ ಭಯ. ಅಮ್ಮನಂತೂ ಅಪ್ಪ ಹೊರಟ ಕೂಡಲೆ ಕ್ಲಿನಿಕ್ ತಲುಪುವವರೆಗೆ ಇಂಜಿನ್ ಆಫ್ ಆಗದಿರಲಪ್ಪ ಎಂದು ಗೋಡೆಯ ಮೇಲಿದ್ದ ದೇವರುಗಳಿಗೆಲ್ಲ ಕೈ ಮುಗಿಯುತ್ತಿದ್ದಳು.

ಅಪ್ಪನ ಈ ಸ್ಕೂಟರ್ ಎಷ್ಟೊಂದು ಪ್ರಸಿದ್ಧಿ ಹೊಂದಿತ್ತೆಂದರೆ, ಯಾರಾದರು 'ವಿಸಿಟ್' ಗೆ ಕರೆದರೆ, ಅಪ್ಪ, 'ನೀವು ಹೋಗಿ ನಾನು ಸ್ಕೂಟರಿನಲ್ಲಿ ಬರುತ್ತೇನೆ' ಅಂದರೆ ಸಾಕು ! ಕೂಡಲೇ ' ಬೇಡ ಡಾಕ್ಟ್ರೇ, ಜೀಪ್ ಮಾಡಿದ್ದೀವಿ' ಅನ್ನುವ ಉತ್ತರ ಬರುತ್ತಿತ್ತು. 'ರಸ್ತೆ ಬೇರೆ ಸರಿ ಇಲ್ಲ, ಜೀಪಲ್ಲೇ ಹೋಗೋಣ ಬನ್ನಿ..' ಅಂತ ಒತ್ತಾಯದಿಂದ ಅಪ್ಪನನ್ನು ಜೀಪಿಗೆ ಹತ್ತಿಸುತ್ತಿದ್ದರು. ಡಾಕ್ಟರ್ ಸ್ಕೂಟರಿನಲ್ಲಿ ತಲುಪುವವರೆಗೆ ಜೀವ ಉಳಿಸಿಕೊಳ್ಳುವಷ್ಟು ಪೇಶೆಂಟ್ ಪುಣ್ಯ ಮಾಡಿರಬೇಕಲ್ಲವೆ!

ಒಮ್ಮೆ ಹತ್ತಿರದವರೊಬ್ಬರ ಮದುವೆಗೆ, ಅಪ್ಪನ ಸೊಂಟ ಹಿಡಿದು ಜುಮ್ಮೆಂದು ಸಾಗುವ ಕನಸು ಕಟ್ಟಿಕೊಂಡು ಅಮ್ಮ ಸ್ಕೂಟರ್ ಏರಿದ್ದಳು. ಸ್ವಲ್ಪ ದೂರವೇನೋ ಎಲ್ಲವೂ ಚೆನ್ನಾಗಿಯೇ ನಡೆಯುತ್ತಿತ್ತು. ಇದ್ದಕ್ಕಿದ್ದಂತೆ ಸ್ಕೂಟರ್ ನಿಂತು ಬಿಟ್ಟಿತು. ಅಪ್ಪನ ಎಲ್ಲಾ ರೀತಿಯ ಟ್ರೀಟ್‌ಮೆಂಟ್‌ಗಳೂ ನಡೆದವು. ಆದರೂ ಸ್ಕೂಟರ್ ಜಪ್ಪಯ್ಯ

ಅನ್ನಲಿಲ್ಲ. ಈಗ ಅಪ್ಪ ಅದರ ಹ್ಯಾಂಡಲ್ ಹಿಡಿದುಕೊಂಡು ದೂಡುತ್ತಾ ಸಾಗಿದರೆ ಅಮ್ಮ ಅವರ ಹಿಂದಿನಿಂದ ನಡೆಯುತ್ತಾ ಹೋಗುತ್ತಿದ್ದಳು. ಇಳಿಜಾರು ಬಂದಾಗ ಇಬ್ಬರೂ ಸ್ಕೂಟರನ್ನೇರುತ್ತಿದ್ದರು. ಹೀಗೆ ಮದುವೆ ಮನೆ ತಲುಪಿದಾಗ ನೆಂಟರಿಷ್ಟರೆಲ್ಲ ಉಂಡು ಹೋಗಿ ಆಗಿತ್ತು. ಇದರ ನಂತರ ಅಮ್ಮ ಎಲ್ಲಿಗಾದರೂ ಪ್ರಯಾಣ ಎಂದಾಗ 'ಸ್ಕೂಟರಿನಲ್ಲಾದರೆ ನಾನು ಬರಲ್ಲ' ಅಂತ ಮೊದಲೇ ಹೇಳುತ್ತಿದ್ದಳು. ಹಾಗೆಂದು ಅಮ್ಮನಿಗೆ ಈ ಸ್ಕೂಟರ್ ಮೇಲೆ ಪ್ರೀತಿ ಇರಲಿಲ್ಲವೆಂದೇನೂ ಅಲ್ಲ. ಅಮ್ಮನಿಗೂ ಅದರ ಮೇಲೆ ಅಪಾರ ಮಮತೆ. ಇದಕ್ಕೆ ಕಾರಣವೂ ಘನವಾಗಿಯೇ ಇತ್ತೆನ್ನಿ..!!

ಅಮ್ಮನ ತವರು ಮನೆಯಲ್ಲಿ ಪೂಜಾ ಕಾರ್ಯಕ್ರಮವಿತ್ತು. ನಮಗೆಲ್ಲ ಶಾಲೆಗೆ ರಜೆ ಇದ್ದುದರಿಂದ ವಾರ ಮುಂಚಿತವಾಗಿಯೇ ಅಮ್ಮನೊಂದಿಗೆ ಹೋಗಿ ಡೇರೆ ಹೂಡಿದ್ದೆವು. ಅಪ್ಪ ಮಾತ್ರ ಪೂಜೆಯ ಮುನ್ನಿನ ದಿನ ಸ್ಕೂಟರ್‌ನಲ್ಲಿ ಬರುವುದೆಂದು ಮೊದಲೇ ನಿಶ್ಚಿತವಾಗಿತ್ತು. ಅಮ್ಮನಿಗಂತೂ ಸಂಭ್ರಮವೋ ಸಂಭ್ರಮ. ಜೊತೆಗೆ ಇದ್ದ ಅಕ್ಕ ತಂಗಿಯರೊಂದಿಗೆ ಪೂಜೆಯ ಸಿದ್ಧತೆಗಳಿಗಾಗಿ ಅತ್ತಿತ್ತ ಓಡಾಡುತ್ತಿದ್ದರು. ಅಜ್ಜ ಅಜ್ಜಿಗೂ ಎಲ್ಲಾ ಮಗಳಂದಿರು, ಮೊಮ್ಮಕ್ಕಳೊಂದಿಗಿನ ಒಡನಾಟದಲ್ಲಿ ದಿನ ಕಳೆಯುತ್ತಿದ್ದುದೇ ತಿಳಿಯುತ್ತಿರಲಿಲ್ಲ. ಹೀಗೆ ಗೌಜು ಗದ್ದಲಗಳೊಂದಿಗೆ ಪೂಜೆಯ ಮುನ್ನಾ ದಿನವೂ ಬಂತು. ಜೊತೆಗೆ ದೂರದೂರಿನ ನೆಂಟರಿಷ್ಟರ ಆಗಮನವೂ ಆಗತೊಡಗಿತು.

ರಸ್ತೆಯಿಂದ ದೂರ ಅಡಕೆ ತೋಟದ ನಡುವಿನಲ್ಲಿದ್ದ ಮನೆ. ಅಮ್ಮನಿಗೆ ಈಗ ಕುತ್ತಿಗೆ ಎತ್ತರಿಸಿ ಅಪ್ಪ ಬರುವ ದಾರಿಯನ್ನು ನೋಡುವುದೇ ಕೆಲಸ. ದೂರದಲ್ಲೆಲ್ಲೋ ವಾಹನಗಳ ಶಬ್ಧ ಕೇಳಿದರೆ ಸಾಕು, ಅಂಗಳದ ತುದಿಗೆ ಓಡಿ ಬಂದು ಆಲಿಸಿಕೊಂಡು ನಿಲ್ಲುತ್ತಿದ್ದರು. ಸಂಜೆಯಾಗುತ್ತಿದ್ದಂತೆ ತಳಮಳ ಹೆಚ್ಚಾಯಿತು. ಆದರೆ ಅಪ್ಪ ರಾತ್ರಿಯಾದರೂ ಬರಲಿಲ್ಲ. ಅಮ್ಮನ ಮ್ಲಾನ ಮುಖವನ್ನು ನೋಡಿದ ಅಜ್ಜ ಅಜ್ಜಿ 'ಇವತ್ತೇನಾದರೂ ಅನಾನುಕೂಲವಾಗಿ ಹೊರಡಲಿಲ್ಲವೋ ಏನೋ..? ನಾಳೆ ಬಂದಾರು..' ಎಂದು ಅಮ್ಮನನ್ನು ಸಮಾಧಾನಿಸತೊಡಗಿದರು.

ಮರುದಿನ ಬೆಳಗಾಯಿತು. ಅಲ್ಲಿಯವರೆಗೆ ಎಲ್ಲಾ ಕೆಲಸ ಕಾರ್ಯಗಳಲ್ಲಿ ಮುಂದಾಳತ್ವ ವಹಿಸಿದ್ದ ಅಮ್ಮ ಪೆಚ್ಚು ಮೋರೆಯಲ್ಲಿ ಯಾಕೋ ದೂರ ನಿಂತು ಅಕ್ಕ, ತಂಗಿಯರಿಗೇನೋ ಸನ್ನೆ ಮಾಡಿ ಹೇಳಿದಳು. ಸ್ವಲ್ಪ ಹೊತ್ತಿಗೆ ಅಮ್ಮನಿಗೆ ಕಾಗೆ ಮುಟ್ಟಿದೆಯಂತೆ ಎಂಬ ಸುದ್ದಿ ಹರಡಿತು. ಅದಾದ ಸ್ವಲ್ಪ ಹೊತ್ತಿನಲ್ಲಿ ಆ ಹಾಳು ಕಾಗೆ ದೊಡ್ಡಮ್ಮನನ್ನೂ ಮುಟ್ಟಬೇಕೆ! ಕಾಗೆ ಮುಟ್ಟಿದ ನಂತರ ದೇವರ ಕೆಲಸ ಮಾಡುವಂತಿಲ್ಲವಲ್ಲ! ಇಬ್ಬರೂ ಹಿಂದಿನ ಕೊಟ್ಟಿಗೆಯ ಬಳಿ ಮಂಡಿಗೆ ಕೈಯ್ಯೂರಿ ಕುಳಿತರು. ಈಗ ಎಲ್ಲಾ ಕೆಲಸಗಳು ಅಜ್ಜ ಅಜ್ಜಿ ಚಿಕ್ಕಮ್ಮನ ತಲೆಯ ಮೇಲೆ ಬಿದ್ದಿತು.

ಅವರೆಲ್ಲ ಒಂದಿಷ್ಟೂ ಬಿಡುವಿಲ್ಲದಂತಾದರು. ಪೂಜೆಗೆ ಬಂದಿದ್ದ ಯಾರೋ ಪುಣ್ಯಾತಿಗಿತ್ತಿಯೊಬ್ಬರು ಅಮ್ಮ ಮತ್ತು ದೊಡ್ಡಮ್ಮನನ್ನು ನೋಡಿ, ಅಯ್ಯೋ..ಒಳ್ಳೆ ದಿವಸವೇ ಹೀಗಾಗ ಬೇಕೆ.. ಅಷ್ಟು ದೂರದಿಂದ ಬಂದು ದೇವರಿಗೆ ಕೈ ಮುಗಿದು ಹೂವು ಅಕ್ಷತೆ ತೆಗೆದುಕೊಳ್ಳುವ ಯೋಗ ಇಲ್ಲದಂತಾಯ್ತಲ್ಲ ನಿಮಗೆ' ಅಂತ ಕೊಂಕು ನುಡಿದರು. ದೊಡ್ಡಮ್ಮನಿಗೇನೋ ದೊಡ್ಡಪ್ಪ ಬಂದಿದ್ದರಿಂದ 'ಗಂಡ ಪ್ರಸಾದ ತೆಗೆದುಕೊಂಡರೆ ಹೆಂಡತಿಗೂ ಸಿಕ್ಕಿದ ಹಾಗೇ' ಎಂದು ಕೊಂಚ ದಾರಾಳತನ ತೋರಿದರು. ಇಷ್ಟರವರೆಗೆ ಅಪ್ಪ ಬಾರದ ಚಿಂತೆಯಲ್ಲೇ ಸಣ್ಣ ಮುಖ ಮಾಡಿಕೊಂಡಿದ್ದ ಅಮ್ಮ ಈ ಮಾತಿಗೆ , ಮುಸು ಮುಸು ಅಳಲು ಪ್ರಾರಂಭಿಸಿದಳು.

ಅಷ್ಟರಲ್ಲಿ ಕೇಳಿತು ನೋಡಿ. ಎಂತಹ ಗಾಢ ನಿದ್ದೆಯಲ್ಲಿದ್ದ ಕುಂಭಕರ್ಣನನ್ನೂ ಬೆಚ್ಚಿ ಬೀಳಿಸುವಂತಹ ಸದ್ದು..!! ಎಲ್ಲರೂ ಈ ವಿಚಿತ್ರ ಸ್ವರ ಕೇಳಿ ಯಾವುದೋ ಹೆಲಿಕಾಪ್ಟರ್ ದಿಕ್ಕು ತಪ್ಪಿ ಅಡಿಕೆ ಅಂಗಳದಲ್ಲೇನಾದರೂ ಇಳಿಯುತ್ತಿದೆಯೇನೋ ಎಂದು ಆಗಸದತ್ತ ಕಣ್ಣೆತ್ತರಿಸಿ ನೋಡತೊಡಗಿದರು.ಆದರೆ ಕಂಡ ದೃಶ್ಯವೇ ಬೇರೆ..!! ಕೊಂಚ ದೂರದಲ್ಲಿ,ಮಣ್ಣಿನ ರಸ್ತೆಯಲ್ಲಿ ದೂಳೆಬ್ಬಿಸುತ್ತಾ, ಸೈಲೆನ್ಸರ್ ಕಳಚಿಕೊಂಡಿದ್ದ ಅಪ್ಪನ ಸ್ಕೂಟರ್ ಬಂದು ತಲುಪಿತು. ಅಮ್ಮನ ಮೊಗದಲ್ಲೀಗ ಸಾವಿರ ಮಿಂಚು ಬಳ್ಳಿಗಳ ಬೆಳಕು. ಅಷ್ಟರವರೆಗೆ ಚುಚ್ಚು ಮಾತಾಡುತ್ತಿದ್ದ ಹೆಂಗಸು ಈಗ ಮೆಲ್ಲನೆದ್ದು ಬೇರೆ ಹೆಂಗಳೆಯರ ಗುಂಪಿನೊಡನೆ ಸೇರಿ ಹೋದಳು. ಶ್ರೀ ಕೃಷ್ಣ ಪರಮಾತ್ಮ ತುಂಬಿದ ಸಭೆಯಲ್ಲಿ ದ್ರೌಪತಿಯ ಮಾನ ಕಾಯಲು ಅಕ್ಷಯಾಂಬರ ದಯಪಾಲಿಸಿದ ಹಾಗೆ, ಅಮ್ಮನ ದುಮ್ಮಾನ ಪರಿಹರಿಸಲು ಸಮಯಕ್ಕೆ ಸರಿಯಾಗಿ ಅಪ್ಪನನ್ನು ಮನೆಯ ಮುಂದೆ ತಂದು ನಿಲ್ಲಿಸಿದ ಸ್ಕೂಟರಿನ ಮೇಲೆ ಅಮ್ಮನಿಗೆ ಪ್ರೀತಿ ಹುಟ್ಟದೆ ಇದ್ದೀತೆ..!! ಕುಶಲೋಪರಿಗಳೆಲ್ಲ ಕಳೆದ ಮೇಲೆ ಒಂಟಿಯಾಗಿ ಸಿಕ್ಕ ಅಪ್ಪನನ್ನು , ಅಮ್ಮ 'ನಿನ್ನೆಯೇ ಏಕೆ ಬರಲಿಲ್ಲ..? ಇವತ್ತು ಎಷ್ಟೊತ್ತಿಗೆ ಹೊರಟಿರಿ' ಎಂದು ವಿಚಾರಿಸಿದಳು. ಅತ್ತಿತ್ತ ನೋಡುತ್ತ ಅಪ್ಪ, ತಗ್ಗಿದ ಸ್ವರದಲ್ಲಿ 'ಹೊರಟಿದ್ದು ನಿನ್ನೆಯೇ.. ದಾರಿಯಲ್ಲಿ ಗಾಡಿ 'ಸ್ವಲ್ಪ' ಕೈ ಕೊಟ್ಟಿತು. ಹಾಗಾಗಿ 'ಸ್ವಲ್ಪ' ತಡವಾಯಿತು ಎಂದರು. ಆ 'ಸ್ವಲ್ಪ' ಎಂಬುದು ಕೇವಲ ಒಂದು ದಿನದ್ದಾಗಿತ್ತು..!!

ಇಷ್ಟೆಲ್ಲ ಗುಣ ವಿಶೇಷಣಗಳಿದ್ದ ಸ್ಕೂಟರಿನಿಂದ ಪ್ರಯೋಜನಗಳೂ ಇಲ್ಲದಿರಲಿಲ್ಲ. ಇಷ್ಟರವರೆಗೆ ಯಾರೊಬ್ಬರೂ 'ನಿಮ್ಮ ಗಾಡಿ ಸ್ವಲ್ಪ ಕೊಡ್ತೀರ, ಅರ್ಜೆಂಟ್ ಕೆಲ್ಸ ಇದೆ' ಎಂದು ಅಪ್ಪನ ಸ್ಕೂಟರನ್ನು ಕೇಳಿದವರಿಲ್ಲ. ಅವರು ಬಿಡಿ, ಅಪುರೂಪಕ್ಕೊಮ್ಮೆ ಮನೆಗೆ ಬಾರದೇ ಮಾರ್ಗದ ಬದಿಯಲ್ಲಿ ರಾತ್ರಿಯನ್ನು ಕಳೆಯುತ್ತಿದ್ದ ಇದನ್ನು ಯಾವ ಕಳ್ಳನೂ ಹೊತ್ತೊಯ್ಯುವ ಪ್ರಯತ್ನ ಕೂಡ ಮಾಡಿಲ್ಲ ಎಂದರೆ ಅಚ್ಚರಿಯಾಗದೇ ಇದ್ದೀತೆ..?

ಅಪ್ಪ ಮಾತ್ರ ಅಶ್ವಹೃದಯವನ್ನು ಬಲ್ಲ ನುರಿತ ವೀರನಂತೆ ಇದಕ್ಕೆ ಏನು ತೊಡಕು ಬಂದರೂ ಅಳುಕದೆ ಸ್ವತಃ ಸರಿ ಪಡಿಸಿಕೊಂಡು ಸವಾರಿ ಮಾಡುತ್ತಿದ್ದರು. ಹಾಗೆಂದು ಇದು ಗ್ಯಾರೇಜಿಗೆ ಹೋಗುತ್ತಲೇ ಇರಲಿಲ್ಲ ಎಂದೇನೂ ಅಲ್ಲ. ಅಪ್ಪ ಅಪರೂಪಕ್ಕೊಮ್ಮೆ ಅನಿವಾರ್ಯ ಕಾರಣಗಳಿಂದ ಇದನ್ನು ಮೆಕ್ಯಾನಿಕ್ ಬಳಿ ಕೊಂಡೊಯ್ಯುತ್ತಿದ್ದರು. ಮೆಕ್ಯಾನಿಕ್ ಗಳ ಪರಿಣತಿಯನ್ನು ಅಳೆಯುವ ಮಾನದಂಡವೆಂಬ ಹೆಗ್ಗಳಿಕೆ ಇದಕ್ಕಿತ್ತು. ಡಾಕ್ಟ್ರ ಸ್ಕೂಟರನ್ನು ಚಾಲನೆಯ ಸ್ಥಿತಿಗೆ ತಂದು ತೋರಿಸಿದರೆ ಅವನು ಅತ್ಯುತ್ತಮ ಮೆಕ್ಯಾನಿಕ್ ಎಂದು ಪರಿಗಣಿಸಲ್ಪಡುತ್ತಿದ್ದ. ಇದರಿಂದಾಗಿ ಅರೆಬರೆ ತಿಳುವಳಿಕೆಯ ಅಡ್ಡ ಕಸುಬಿಗಳು ತಮ್ಮ ಬಣ್ಣ ಬಯಲಾದೀತೆಂದು ಹೆದರಿ ಇದನ್ನು ಮುಟ್ಟಲು ಹಿಂದೇಟು ಹಾಕುತ್ತಿದ್ದರು. ಇದನ್ನು ವಿಧಿಪೂರ್ವಕವಾಗಿ ಮಣಿಸಬಲ್ಲ ಮೆಕ್ಯಾನಿಕ್ ಗಳ ಗ್ಯಾರೇಜಿಗೆ ರಿಪೇರಿಗಾಗಿ ಬರುವ ವಾಹನಗಳ ಸಂಖ್ಯೆಯೂ ವೃದ್ಧಿಯಾಗುತ್ತಿತ್ತು. ಹಾಗಾಗಿ ಅಪ್ಪನ ಸ್ಕೂಟರ್ ಮೆಕ್ಯಾನಿಕ್‌ಗಳ ವಲಯದಲ್ಲೂ ಕೊಂಚ ಭಯ ಭಕ್ತಿ ಮಿಶ್ರಿತ ಹಿರಿಯ ಸ್ಥಾನವನ್ನೇ ಗಿಟ್ಟಿಸಿಕೊಂಡಿತ್ತು.

ಹೀಗೆ ಅಪ್ಪನಿಗೊಂದು ಐಡೆಂಟಿಟಿ ದೊರಕಿಸಿದ ಸ್ಕೂಟರಿನ ನೆನಪು, ಈಗಿಲ್ಲದ ಅಪ್ಪನ ನೆನಪಿನೊಂದಿಗೇ ನಮ್ಮನ್ನು ಸದಾ ಕಾಡುತ್ತಲೇ ಇರುತ್ತದೆ ಎಂದರೆ ಉತ್ಪ್ರೇಕ್ಷೆಯಂತೂ ಖಂಡಿತಾ ಅಲ್ಲ..!!

**ಅನಿತಾ ನರೇಶ್ ಮಂಚಿ**

ಬ್ಲಾಗ್‌ನಿಂದ

# ನನ್ನ ಗೋವಾ ಪ್ರವಾಸ

ಪ್ರವಾಸ ಯಾರಿಗೆ ತಾನೆ ಇಷ್ಟವಿಲ್ಲ? ಮಗುವಿನಿಂದ ಹಿಡಿದು ಮುದುಕರವರೆಗೆ ಎಲ್ಲರೂ ಪ್ರವಾಸವನ್ನು ಆನಂದಿಸುವವರೇ. ಅಮ್ಮನ ಸೊಂಟದಲ್ಲಿ ವಿರಾಜಮಾನವಾಗಿರುವ ವರ್ಷ ತುಂಬದ ಪುಟ್ಟ ಮಗುವನ್ನು 'ಟಾಟಾ ಬರ್ತೀಯ, ಪೇಂ ಪೇಂ, ಡುರ್ರ್, ಬಸ್ಸಲ್ಲಿ ಹೋಗೋಣ್ವಾ?' ಎಂದು ಎರಡೂ ಕೈ ಮುಂದೆ ಮಾಡಿ ಕೇಳಿ. ನಿಮ್ಮ ಕೈಗೆ ಹಾರದಿದ್ದರೆ ಮತ್ತೆ ಹೇಳಿ. ನಾನೂ ಪ್ರವಾಸಪ್ರಿಯೆ. ನನ್ನ ಪ್ರವಾಸಕ್ಕೆ ಇಂಥದ್ದೇ ಜಾಗವಾಗಬೇಕು ಎಂದೇನೂ ಇಲ್ಲ. ಆದರೆ ಬಂಧುಗಳ ಮನೆ, ಧಾರ್ಮಿಕ ಜಾಗಗಳಿಗೆ ಅನಿವಾರ್ಯವಾದರೆ ಮಾತ್ರ ಹೋಗುತ್ತೇನೆ. ದಲಿತರ, ಕಾಡಿನ ಬುಡಕಟ್ಟು ಜನಾಂಗದವರ ಮನೆಗೆ ಹೋಗಿ ಅವರ ಜೀವನವನ್ನು ಗಮನಿಸುವುದು ದೇವಾಲಯಕ್ಕೆ ಹೋಗಿ ಪ್ರಾರ್ಥನೆ ಮಾಡುವುದಕ್ಕಿಂತ ಹೆಚ್ಚು ನನ್ನ ಮನಸ್ಸಿಗೆ ಸಮಾಧಾನ ತರುತ್ತದೆ. ಸುಮ್ಮನೆ ನಮ್ಮ ಹಳ್ಳಿಯಲ್ಲೊಂದು ರೌಂಡ್ ಹೊಡೆಯುವುದೂ ಖುಷಿ ಕೊಡುತ್ತದೆ.

ಪ್ರವಾಸದಂತೆ ಪ್ರವಾಸ ಸಾಹಿತ್ಯ ಓದುವುದೂ ನನಗೆ ಇಷ್ಟ. ನಾನು 'ಅಲೆಮಾರಿಯ ಪ್ರವಾಸ ಕಥನ' ಎಂದು ಬರೆದ ಗಂಡಸರ ಪ್ರವಾಸ ಪುಸ್ತಕಗಳನ್ನು ಬೇಕಾದಷ್ಟು ಓದಿದ್ದೇನೆ. ಆದರೆ ಭಾರತೀಯ ಸ್ತ್ರೀ ತಾನು ಅಲೆಮಾರಿ ಎಂದು ಘೋಷಿಸಿಕೊಂಡು ಪ್ರವಾಸ ಸಾಹಿತ್ಯ ಬರೆದುದನ್ನು ಎಲ್ಲೂ ಓದಿಲ್ಲ. ಬಹುಶಃ ನನ್ನ ತಿಳಿವಳಿಕೆಯ ಕೊರತೆ ಇರಲೂಬಹುದು. ಹೆಣ್ಣುಮಕ್ಕಳಿಗೆ ಪ್ರವಾಸ ಹೋಗಲು ಗಂಡ ಅಥವಾ ಗೆಳೆಯ ಜೊತೆಗಿರಬೇಕು. ಇಲ್ಲವೇ ಇನ್ಯಾರೋ ಜೊತೆಗೆ ಬರಬೇಕು. ಪುರುಷ ಮತ್ತು ಸ್ತ್ರೀಯರು ಸಮಾನರು ಎಂಬ ಹೇಳಿಕೆ ಇದ್ದರೂ ಈ ವಿಷಯದಲ್ಲಿ ಸಮಾನತೆ ಸಾಧಿಸಲು ಹೆಣ್ಣಿಗೆ ಇನ್ನೂ ಸಾಧ್ಯವಾಗಿಲ್ಲ ಎಂಬುದು ನನ್ನ ಸಂಶೋಧನೆ. ಕೆಲವು ದೇಶಗಳಲ್ಲಿ ಇದು ಸಾಧ್ಯವಾಗಿದೆ; ಅದು ಬೇರೆ ವಿಷಯ. 'ಹೆಣ್ಣು ಹೊರಗೆ ಹೋಗಿ ಕೆಟ್ಟಳು. ಗಂಡು ಮನೆಯಲ್ಲಿದ್ದು ಕೆಟ್ಟನು' ಎಂಬ ಮಾತನ್ನು ನನ್ನ ಅತ್ತೆ ಆಗಾಗ ಹೇಳುತ್ತಿರುತ್ತಾರೆ. ಹೆಣ್ಣನ್ನು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ವೃದ್ಧಾಪ್ಯದಲ್ಲಿ ಮಗ ನೋಡಿಕೊಳ್ಳಬೇಕೆಂಬ ಮನುಸ್ಮೃತಿಯ ಮಾತನ್ನು ಪಾಲಿಸುವ ಕಾಲದಲ್ಲಿ ಅವರಿದ್ದುದರಿಂದ ಹಾಗೂ ಅವರಿಗೆ ಹೊರಗೆ ಹೋಗುವ ಅವಕಾಶ ಇಲ್ಲದೆ ಇದ್ದುದರಿಂದ ಈ ಮಾತನ್ನು ಅವರು ಹೇಳುತ್ತಿರಬಹುದು. ನಾನದನ್ನು ಈ ಕಿವಿಯಲ್ಲಿ ಕೇಳಿ ಆ ಕಿವಿಯಲ್ಲಿ ಬಿಡುತ್ತೇನೆ. ವಾದ ಮಾಡಲು ಹೋಗುವುದಿಲ್ಲ.

ಪ್ರವಾಸದ ಬಗ್ಗೆ ಇಷ್ಟೆಲ್ಲ ಹೇಳಿದ ಮೇಲೆ ನಾನು ದೇಶವಿದೇಶ ಪ್ರವಾಸ ಮಾಡಿ ಅನುಭವ ಪಡೆದುಕೊಂಡಿರಬಹುದು ಎಂದು ನೀವು ಅಂದುಕೊಂಡರೆ ಅದು ನಿಮ್ಮ

ತಪ್ಪು ತಿಳಿವಳಿಕೆ. ಹೇಳಿಕೇಳಿ ನಾನು ರೈತಮಹಿಳೆ. ನಮ್ಮದು ಸ್ಥಾವರ ವೃತ್ತಿ. ಮನೆ, ತೋಟ, ಕೂಲಿ ಕೆಲಸದವರು, ಜಾನುವಾರುಗಳೇ ನಮ್ಮ ಪ್ರಪಂಚ. ಇವುಗಳನ್ನು ಬಿಟ್ಟು ದೂರ ಹೋಗುವುದು ಕಷ್ಟ. ಹೋದರೂ ಒಂದು ದಿನದಿಂದ ಹೆಚ್ಚು ಹೋದಲ್ಲಿ ನಿಲ್ಲಲು ಆಗುವುದಿಲ್ಲ. ಹೀಗಿರುವಾಗ ನಾನು ವಿಮಾನದಲ್ಲಿ ಹಾರುವುದು, ಹಡಗಿನಲ್ಲಿ ತೇಲುವುದು ಬಿಡಿ; ಕಣ್ಣಿಂದಲೂ ನೋಡಿಲ್ಲ. ವೋಲ್ವೋ ಬಸ್ಸಲ್ಲೂ ಕೂತಿಲ್ಲ. ಸ್ಲೀಪಿಂಗ್ ಕೋಚ್ ಬಸ್ಸಿನ ಮೆತ್ತನೆ ಹಾಸಿಗೆಯಲ್ಲಿ ನಿದ್ರಾಸುಖ ಅನುಭವಿಸಿಲ್ಲ. ಒಂದೆರಡು ಬಾರಿ ರೈಲು ಪ್ರಯಾಣ ಮಾಡಿದ್ದೇನೆ ಅಷ್ಟೆ. ನನ್ನ ಬಹುತೇಕ ಪ್ರವಾಸ ಗಡಗಡ ಅಲುಗಾಡುವ ಜೀಪಿನಲ್ಲಿ ಮನೆಯಿಂದ 8 ಕಿ.ಮೀ. ದೂರದ ಕಲ್ಲುಗುಂಡಿ ಪೇಟೆಗೆ; ಅದು ಬಿಟ್ಟರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸಲ್ಲಿ ಸುಳ್ಯ, ಪುತ್ತೂರು, ಮಡಿಕೇರಿ ಇಲ್ಲಿಗೆ ಮುಗಿದುಹೋಗುತ್ತದೆ. ರಾಜ್ಯದ ರಾಜಧಾನಿ ಬೆಂಗಳೂರನ್ನು ಇಡಿಯಾಗಿ ನೋಡದಿದ್ದರೂ ನಾಲ್ಕೈದು ಸಾರಿ ಬಿಡಿಬಿಡಿಯಾಗಿ ನೋಡಿದ್ದೇನೆ ಎಂಬ ಹೆಮ್ಮೆ ನನಗಿದೆ.

ಈಗ ವಿಷಯಕ್ಕೆ ಬರುತ್ತೇನೆ. ಗೋವಾಕ್ಕೆ ಪ್ರವಾಸ ಹೋಗಬೇಕು ಎಂಬುದು ನನ್ನ ಬಹುದಿನಗಳ ಕನಸು. ಮಗನಿಗೆ ರಜೆ ಕೂಡ ಸಿಕ್ಕಿತ್ತು. ಹಸುವಿಗೆ ಗಬ್ಬವಾದುದರಿಂದ ಹಾಲು ಕೊಡುವುದನ್ನು ನಿಲ್ಲಿಸಿತ್ತು. ಕರು ಹಾಕಲು ಇನ್ನೂ ಹದಿನೈದು, ಇಪ್ಪತ್ತು ದಿವಸ ಬೇಕು. ಪ್ರವಾಸ ಹೋಗಲು ಇದೇ ಸುಸಮಯ ಅಂದುಕೊಂಡು, ರಾತ್ರಿ ಮಲಗುವ ವೇಳೆ ಮೆಲ್ಲನೆ ಗಂಡನ ಬಳಿ ವಿಷಯ ತೆಗೆದೆ 'ನಾನು ಗೋವ ನೋಡಬೇಕು. ಅಲ್ಲಿಯ ಬೀಚ್‌ನಲ್ಲಿ ನಿಮ್ಮ ಜೊತೆ ಚಡ್ಡಿ, ಬನಿಯನ್ ಹಾಕಿಕೊಂಡು ತಿರುಗಾಡಬೇಕು. ನುಣ್ಣನೆ ಮರಳಲ್ಲಿ ನಿಮ್ಮನ್ನು ತಬ್ಬಿ ಮಲಗಬೇಕು' ಎಂದೆ. ನನ್ನ ಬಯಕೆಗಳನ್ನು ಈಡೇರಿಸಲು ಪ್ರತಿ ಸಾರಿ ಹಿಂದೆಮುಂದೆ ನೋಡುವ ಗಂಡ ಈ ಸಾರಿ ಮಾತ್ರ ಮರುಮಾತಿಲ್ಲದೆ ಹೂಂ ಅಂದರು. ಚಡ್ಡಿ, ಬನಿಯನ್‌ನ ಪ್ರಭಾವ ಇರಬಹುದು ಅಂದುಕೊಂಡೆ. ದಿನಾ ಸೀರೆ, ಎದೆ ತುಂಬ ಸೆರಗು ಹೊದ್ದು ಇರುವ ನನ್ನನ್ನು ನೋಡಿ ನೋಡಿ ಅವರಿಗೆ ಬೇಜಾರಾಗಿರಲೂಬಹುದು. ಎಷ್ಟೆಂದರೂ ಮನುಷ್ಯ ಹೊಸತನಕ್ಕೆ ಹಾತೊರೆವ ವ್ಯಕ್ತಿ ಅಲ್ಲವೇ? ಮಾರನೆ ದಿನವೇ ಪುತ್ತೂರಿಗೆ ಹೋಗಿ ಯಾವುದೋ ಒಂದು ಟ್ರಾವೆಲ್ ಏಜೆನ್ಸಿಯಲ್ಲಿ ಬಸ್ ಬುಕ್ ಮಾಡಿದರು. ನನಗೂ ಅವರಿಗೂ ಬೀಚ್‌ನಲ್ಲಿ ಧರಿಸಲು ಚಡ್ಡಿ, ಬನಿಯನ್ ಖರೀದಿಸಿ ತಂದರು.

ನನಗೆ ಸಂಭ್ರಮವೋ ಸಂಭ್ರಮ. ಜೀವಮಾನದಲ್ಲಿ ಮೊದಲ ಪ್ರವಾಸ. ಮಧುಚಂದ್ರಕ್ಕೂ ಹೋದವಳಲ್ಲ. ಶಾಲಾ ದಿನಗಳಲ್ಲಿ ಟೂರ್ ಹೋಗಿದ್ದೆನಾದರೂ ಅದು ಈಗ ನನ್ನ ನೆನಪಿನ ಕೋಶದಿಂದ ಸಂಪೂರ್ಣ ಅಳಿಸಿ ಹೋಗಿದೆ. ಮಿತಿ ಮೀರಿದ ಖುಷಿಯನ್ನು ಹತ್ತಿಕ್ಕಿಕೊಳ್ಳಲಾರದೆ ನೆಂಟರು, ಸ್ನೇಹಿತರು, ಕೊನೆಗೆ ಮನೆ ಸುತ್ತಮುತ್ತ ಇರುವ ಗಿಡ–ಮರ–ಬಳ್ಳಿಗಳಲ್ಲಿಯೂ ನಾನು ಗೋವಾ ಟೂರ್

ಹೋಗಲಿರುವ ಬಗ್ಗೆ ಹೇಳಿದೆ. ಹೋಗುವಾಗ, ಬರುವಾಗ ಧರಿಸಲೆಂದು ಎರಡು ಹೊಸ ಚೂಡಿದಾರ್ ಹೊಲಿಸಿದೆ. ದಾರಿಯಲ್ಲಿ ತಿನ್ನಲೆಂದು ಚಕ್ಕುಲಿ, ಕೋಡುಬಳೆ, ಚಿಪ್ಸ್, ರವೆ ಉಂಡೆ ಇನ್ನೂ ಏನೇನೋ ತಿಂಡಿಗಳನ್ನು ಮಾಡಿದೆ.

ಕಾಯುತ್ತಿರುವ ಆ ದಿನವೂ ಬಂತು. ನಾವಿರದ ಅಷ್ಟೂ ದಿನ ಮನೆ, ತೋಟವನ್ನು ನೋಡಿಕೊಳ್ಳಲು ನೇಮಿಸಿದ ಕೆಲಸಗಾರರಿಗೆ ಟಾಟಾ ಹೇಳಿ ಇನ್ನೇನು ವಾಹನ ಏರಬೇಕು... ಅಷ್ಟರಲ್ಲಿ ಹಟ್ಟಿಯಿಂದ ಅಂಬಾ ಎಂಬ ದನಿ ಕೇಳಿಸಿತು. ನಾವು ಹೋಗುತ್ತಿರುವ ವಿಷಯ ಹಸುವಿಗೂ ಗೊತ್ತಾಗಿದೆ. ಪಾಪ! ಬೇಜಾರು ಮಾಡಿಕೊಂಡಿದೆ. ರಮಿಸಿ ಬರೋಣ ಎಂದು ಹಟ್ಟಿಯ ಬಳಿ ಸಾರಿದೆ. ನೋಡುತ್ತೇನೆ, ಹಸುವಿನ ಕಾಲ ಕೆಳಗೆ ಪುಟ್ಟ ಜೀವವೊಂದು ಮಿಡುಕಾಡುತ್ತಿದೆ. ಅದನ್ನು ನೆಕ್ಕುವುದಕ್ಕಾಗಿ ಹಸು ಅತ್ತಿತ್ತ ಕುತ್ತಿಗೆ ಆಡಿಸುತ್ತಿದೆ. ಅವಧಿಗಿಂತ ಮೊದಲೇ ಕರು ಹಾಕಿದ ಹಸುವಿನ ಮೇಲೆ ಆ ಕ್ಷಣದಲ್ಲಿ ಎಲ್ಲಿಲ್ಲದ ಕೋಪ ಬಂತು. ಆದರೆ ಕಪ್ಪು, ಬಿಳಿ ಬಣ್ಣದ, ರೇಷ್ಮೆ ಮೈಯ ಮುದ್ದಾದ ಕರುವನ್ನು ನೋಡಿ ಮನಸ್ಸು ಮೆತ್ತಗಾಯಿತು. ಮನೆಯೊಳಗೆ ಓಡಿ ಹೋಗಿ ಬಟ್ಟೆ ಬದಲಾಯಿಸಿ ಹಟ್ಟಿಗೆ ಬಂದೆ. ಹಾಲು ಕುಡಿಯಲು ಕಾತರಿಸುತ್ತಿರುವ ಕರುವಿನ ಬಾಯನ್ನು ಕೆಚ್ಚಲಿನ ಬಳಿ ತಂದು ಮೊಲೆಯನ್ನು ಅದರ ಬಾಯೊಳಗಿರಿಸಿದೆ. ಅದು ಮುಖವನ್ನು ಕೆಚ್ಚಲಿಗೆ ಗುದ್ದಿ ಗುದ್ದಿ ಆನಂದದಿಂದ ಪುಚು ಪುಚು ಮೊಲೆ ಚೀಪಲು ಶುರು ಮಾಡಿತು. ಹಾಲು ಕುಡಿದು ಹೊಟ್ಟೆ ತುಂಬಿದ ಕರು ಅತ್ತಿಂದಿತ್ತ, ಇತ್ತಿಂದತ್ತ ಚಿಗರೆಯಂತೆ ಜಿಗಿಯತೊಡಗಿತು. ಹಸು ಮಾತ್ರ 'ಈ ಸಮಯದಲ್ಲಿ ನಮ್ಮನ್ನು ಬಿಟ್ಟು ಹೋಗಬೇಡ' ಎಂಬಂತೆ ದೈನ್ಯದಿಂದ ನನ್ನನ್ನೇ ನೋಡುತ್ತ ನಿಂತಿತ್ತು.

ಹೌದಲ್ಲ, ನಾನು ಈಗ ಪ್ರವಾಸ ಹೋದರೆ ಹಸುವಿನ ಬಾಣಂತನ ಯಾರು ಮಾಡುತ್ತಾರೆ? ನಂಜು ಆಗಿ ಏನಾದರೂ ತೊಂದರೆಯಾದರೆ ಏನು ಮಾಡುವುದು... ಎಂದು ನನ್ನ ಅಂತರಾತ್ಮ ಕೂಗಿ ಕೂಗಿ ಪ್ರಶ್ನಿಸಿತು. ಬಾಣಂತಿ ಹಸುವಿಗೆ ಕಾಳುಮೆಣಸು, ಓಮ ಹಾಗೂ ಬೆಲ್ಲವನ್ನು ಪುಡಿ ಮಾಡಿ ತಿನ್ನಲು ಕೊಡಬೇಕು. ಹಸು, ಕರುವನ್ನು ಸ್ನಾನ ಮಾಡಿಸಬೇಕು. ಅದಕ್ಕಾಗಿ ಬಚ್ಚಲಿಗೆ ಬೆಂಕಿ ಹಾಕಬೇಕು. ಅಬ್ಬ! ಒಂದೇ, ಎರಡೇ? ಎಷ್ಟೆಲ್ಲ ಕೆಲಸಗಳಿವೆ!

ಮನಸ್ಸು ಗಟ್ಟಿ ಮಾಡಿ ಗಂಡನೊಡನೆ ಹೇಳಿದೆ– 'ನಾನು ಪ್ರವಾಸಕ್ಕೆ ಬರುವುದಿಲ್ಲ. ನೀವು, ಮಗ ಹೋಗಿಬನ್ನಿ'.

**ಸಹನಾ ಕಾಂತಬೈಲು**

ಪ್ರಜಾವಾಣಿ 01.04.2014

# ದೆವ್ವದೊಂದಿಗೆ ನನ್ನ ಹೆಣಗಾಟ

ದೆವ್ವಗಳೊಂದಿಗೆ ನನ್ನ ಹೆಣಗಾಟ ನಾನು ಭೂಪ್ರವೇಶ ಮಾಡಿದ ದಿನದಿಂದಲೇ ಪ್ರಾರಂಭವಾಯಿತೆಂದು ಹೇಳಬಹುದು. ಹುಟ್ಟಿದ ಗಳಿಗೆ ಚಲೋ ಅಲ್ಲವೆಂದು ನನ್ನ ಅಜ್ಜಿ ನನ್ನನ್ನು ವಾರಗಟ್ಟಲೇ ಸ್ನಾನ ಮಾಡಿಸದೆ ಒಂದು ಬಟ್ಟೆಯಿಂದ ಕೇವಲ ಮೈ ಒರೆಸಿ  ಅದೆ ಬಟ್ಟೆಯಲ್ಲಿ ಸುತ್ತಿ ವಾರದ ನಂತರ ಊರ ಮಾರಿಗುಡಿಗೆ ಒಯ್ದು ಆ ಕೆಟ್ಟ ಗಳಿಗೆಯಿಂದಾಗುವ ಭೂತದ ಅನಾಹುತಗಳನ್ನು ತಪ್ಪಿಸಿದಳಂತೆ.

ಅಂಗಾತ ಇದ್ದವನು, ದಬ್ಬ ಬಿದ್ದು,  ಮುಂದೆ ನುಸುಳಿ, ಅಂಬೆಗಾಲಲ್ಲಿ ತಪ್ಪ ಹೆಜ್ಜೆ ಇಟ್ಟು ಮನೆಯ ಹಿತ್ತಿಲಿನಲ್ಲಿ ಇರುವೆ ಸಾಲು ಮತ್ತು ದನದ ಕೊಟ್ಟಿಗೆಯಲ್ಲಿ ಸಗಣಿ ತುಳಿದು ಅಲೆದಾಡುತ್ತಾ ದೊಡ್ಡವನಾಗಲೇಂದು ನಾನು ಶತಪ್ರಯತ್ನ ಪಡುತ್ತಿದ್ದರೆ ನನ್ನ ಅವ್ವ ಮಾತ್ರ ಅಲ್ಲೆಲ್ಲಾ ಹೋಗಬೇಡ, ಗುಮ್ಮ ಬರತೈತಿ ಎನ್ನುತಾ ನನ್ನ ಪ್ರಯತ್ನಕ್ಕೆ ಅಡ್ಡಗಾಲು ಹಾಕುತ್ತಿದ್ದಳು. ಆಗೆಲ್ಲಾ ಗುಮ್ಮನೆಂದರೆ ಎನು, ಅದು ಹೇಗಿರುತ್ತೆ, ಅದು ಕುಡುಕ ಅಪ್ಪನ ತರಾನಾ ಎಂದೆಲ್ಲಾ ಅವ್ವನನ್ನು ಕೆಳುತ್ತಾ ಅವಳನ್ನು ಮುಜಗರಕ್ಕಿಡು ಮಾಡುತ್ತಿದ್ದೆ.

ಚೊಣ್ಣ ಹಾಕುವಷ್ಟು ದೊಡ್ಡವರಾದ ನಾವು ಓಣಿಯ ಹುಡುಗರೆಲ್ಲ ಅಂಗಳದಲ್ಲೊ ಹಿತ್ತಲದಲ್ಲೋ ಸೇರಿ,  ಈ ದೆವ್ವಗಳ ಬಗ್ಗೆ ತುಂಬಾ ಭಯಾನಕವಾಗಿ ಚರ್ಚಿಸುತ್ತಿದ್ದೇವು. ದೆವ್ವ ಎಂದರೆ ಅದಕ್ಕೆ ನಮ್ಮ ಹೊಲದಲ್ಲಿನ ನೇಗಿಲಿಗಿರುವುಷ್ಟು ದೊಡ್ಡ ಮೂಗು, ನಗದಷ್ಟು ದೊಡ್ಡ ಉದ್ದದ ಕಾಲುಗಳು, ಮರದ ಹಾಗೆ ಕಿವಿಗಳು, ಹಿತ್ತಾಳೆ ಕೊಡದಂತಹ ಕಿವಿಗಳು. ಹೀಗೆ ನಮ್ಮ ಹೋಲಿಕಾ ಉಪಮೆಗಳ ಪ್ರಯೋಗ ಸಾಗುತ್ತಿತ್ತು. ದೆವ್ವ ನಮ್ಮ ಆಕಳನ್ನು ಹೊತ್ತುಕೊಂಡು ಹೋಗಿತ್ತು, ದಿನಾಲು ಹುಣಸೆ ಗಿಡದಲ್ಲಿ ಕುಳಿತಿರುತ್ತೆ, ನಮ್ಮಪ್ಪನನ್ನು ದಾರಿ ತಪ್ಪಿಸಿ ಹೊತ್ತುಕೊಂಡು ಹೋಗಿತ್ತು ಎಂದೆಲ್ಲಾ ಚಡ್ಡಿ ದೋಸ್ತರು ಭಯಾನಕ ರಸದಲ್ಲಿ ತಮ್ಮ ಮುಖವನ್ನು ಅದ್ದಿ ದೆವ್ವದ ಕತೆ ಹೇಳುತ್ತಿದ್ದರು. ಅವರ ಕತೆ ಕೇಳಿದಂತೆಲ್ಲ ನನಗೆ ದೆವ್ವವನ್ನು ನೋಡಬೇಕೆಂದು ಕುತೂಹಲ ಹೆಚ್ಚುತ್ತಲೆ ಇತ್ತು. ಆದರೆ ನನ್ನ ಶಾಲಾದಿನಗಳಲ್ಲಿ ದೊಡ್ಡಮನಿ ಎನ್ನುವ ಮಾಸ್ತರರೊಬ್ಬರು 'ಯಾವ ದೆವ್ವನು ಇಲ್ಲ, ದೇವರು ಇಲ್ಲ, ನಾವ ಒಂದ ರೀತಿ ದೆವ್ವಗಳಿದ್ದಂಗ' ಎಂದು ಎಲ್ಲೆಲ್ಲೊ ನೋಡುತ್ತಾ ಹೇಳಿದಾಗ  ನನಗೆ ಅವರೇ ಒಂದು ರೀತಿಯಲ್ಲಿ ದೆವ್ವದಂತೆ ಕಂಡಿದ್ದರು.

ನಾವೆಲ್ಲಾ ಹುಡುಗರು ಓದಿಕೊಳ್ಳಲು ರಾತ್ರಿ ಅವರು ಉಳಿದುಕೊಂಡಿದ್ದ ರೂಮಿಗೆ ಹೋಗುತ್ತಿದ್ದೆವು ಆಗ ಅವರು ಊರ ಹತ್ತಿರದ ಸ್ಮಶಾನಕ್ಕೆ ನನ್ನಂತ ಕೆಲವು ಧೈರ್ಯದ ಹುಡುಗರನ್ನು ಕರೆದುಕೊಂಡು ಹೋಗುತ್ತಿದ್ದರು. ಕೆಲವೊಮ್ಮೆ ಹುಡುಗರ ಮಧ್ಯೆಯೇ

'ಯಾರು ರಾತ್ರಿ 10ಕ್ಕೆ ಸ್ಮಶಾನಕ್ಕೆ ಹೋಗಿ ಬರುತ್ತಾರೆಯೋ ಅವರಿಗೆ ಒಂದು ಸೀಸ್ ಪೆನ್ಸಿಲ್ಲು ಬಹುಮಾನ'ಎಂದು ಘೋಷಿಸಿ ಹುಡುಗರ ಮಧ್ಯೆಯೇ ಸ್ಪರ್ಧೆ ಒಡ್ಡುತ್ತಿದ್ದರು. ನಾನು ಮಾಸ್ತರರ ಮೆಚ್ಚುಗೆಯನ್ನು ಗಳಿಸಲು ಹೊರಗೆ ಧೈರ್ಯವಂತನಂತೆ ಪೋಜು ಕೊಟ್ಟು ಸ್ಪರ್ಧೆಯಲ್ಲಿ ಭಾಗವಹಿಸತ್ತಿದ್ದರೂ ಕೂಡ ಕೆಲವೊಮ್ಮೆ ಸ್ಮಶಾನವನ್ನು ಪೂರ್ಣ ಮುಟ್ಟದೆ  ಚಡ್ಡಿಯನ್ನು ತೊಯಿಸಿಕೊಂಡು ಮರಳಿ ಹಿಂದಕ್ಕೆ ಬಂದು ಗೆಳೆಯರ ನಗುವಿಗೆ ಕಾರಣವಾದದ್ದು ಇದೆ. ಹಲವೊಮ್ಮೆ ಸ್ಮಶಾನಕ್ಕೆ ಓಡೊಡುತ್ತಾ ಹೋಗಿ ಓಡೋಡುತ್ತಾ ಬಂದು ಮಾಸ್ತರರಿಂದ ಶಹಬ್ಬಾಷಗಿರಿ ಪಡೆದುಕೊಂಡದ್ದು ಇದೆ.

ಹೈಸ್ಕೂಲು ಸೇರಿಕೊಂಡ ಮೇಲೆ ನಮ್ಮ ತಂದೆ ಊರಲ್ಲಿನ ಮನೆ ಬಾಡಿಗೆ ಕೊಟ್ಟು ತೋಟದ ಮನೆಗೆ ನೆಲೆಸಿದರು. ಒಂದು ದಿನ ಹೈಸ್ಕೂಲು ಬಿಟ್ಟಮೇಲೆ ನೇರವಾಗಿ ತೋಟಕ್ಕೆ ಬರದೆ ಅಲ್ಲಲ್ಲಿ ಸುತ್ತಾಡಿ ತೋಟಕ್ಕೆ ಬಂದಾಗ ಸೂರ್ಯ ಮರೆಯಾಗಿ ಕತ್ತಲು ಸುರಿಯತೊಡಗಿತ್ತು. ದಿನದ ರೂಢಿಯಂತೆ ಸವತೆಕಾಯಿಯ ಮಡಿಗೆ ಹೋಗಿ ಬಗ್ಗಿ ಒಂದೆರಡು ಎಳೆ ಸವತೆಕಾಯಿ ಹರಿದುಕೊಂಡು ಮೇಲೇಳಬೇಕೆಂದಿದ್ದೆ. ಅಲ್ಲಿ ಒಬ್ಬ ನಿಂತಿದ್ದ! ಬೋಳು ತಲೆಯ, ಡೊಳ್ಳು ಹೊಟ್ಟೆಯ, ಕೋರೆಹಲ್ಲಿನ, ಉದ್ದ ಮೀಸೆಯ ಸೊಂಟದ ಮೇಲೆ ಕೈಯಿಟ್ಟುಕೊಂಡಿದ್ದ ಆ ವ್ಯಕ್ತಿ ಮನುಷ್ಯರಿಗಿಂತಲೂ ಸ್ವಲ್ಪ ಎತ್ತರಕಿದ್ದುದರಿಂದ ನಾನು ಸುಲಭವಾಗಿ ಇದು ದೆವ್ವವೆ ಎಂದು ತಿರ್ಮಾನಿಸಿಬಿಟ್ಟೆ.

ಆ ಕ್ಷಣದಲ್ಲಿನನಗೆ ಹಿರೇಮಠ ಮಾಸ್ತರನ ನೆನಪಾಗಿ ಇದು ದೆವ್ವ ಹೌದೋ ಅಲ್ಲವೋ ಎಂದು ಪರೀಕ್ಷಿಸಬೇಕೆಂದು ಕೊಂಡೆನಾದರೂ ಧೈರ್ಯ ಸಾಲುತ್ತಿಲ್ಲ. 'ಯಾರಪ ನೀನು ಎಂದೆ. ದೆವ್ವ ಮಾತಾಡಲಿಲ್ಲ. ಯಾಕೋ ಚಡ್ಡಿ ಬಹುದಿನಗಳ ನಂತರ ಮತ್ತೆ ಒದ್ದೆಯಾಯಿತು. ಹಿಂದಕ್ಕೆ  ಓಡಬೇಕೆಂದು ಕೊಂಡೆ.  ಅಷ್ಟರಲ್ಲಿ ನನ್ನ ನೆಚ್ಚಿನ ನಾಯಿ ಬೀಮ್ಯಾ ಬಂತು. ಮಾಸ್ತರ ದೆವ್ವದ ಕುರಿತು ಹೇಳಿದ್ದು ನೆನಪಾಗಿ ದೇಹದ ನರನಾಡಿಗಳಲ್ಲಿ ಶಕ್ತಿ ಬಂದಂತಾಯಿತು. ಎಲ್ಲ ಶಕ್ತಿ ಎಡ ತೋಳಿಗೆ ಹರಿದು, ತೋಳಿನಿಂದ ಮುಂಗೈಗೆ ಹರಿದು, ಅದು ಕಲ್ಲುಗಳನ್ನು ತೆಗೆದುಕೊಂಡು ಬಲಗೈಗೆ ಸರಬರಾಜು ಮಾಡಿತು. ಒಮ್ಮೆಲೆ ಧೈರ್ಯ ತೆಗೆದುಕೊಂಡ ಬಲಗೈ ಕಲ್ಲು ಬೀಸೆ ಬಿಟ್ಟಿತು. ಕಾಲುಗಳು ಓಟ ಕೀಳಬೇಕು. ಅಷ್ಟರಲ್ಲಿ ಫಳ್ ಎನ್ನುವ ಶಬ್ದ ಆ ದೆವ್ವ ನಿಂತಿದ್ದ ದಿಕ್ಕಿನಿಂದ! ದೆವ್ವದ ತಲೆ ಒಡೆದಿತ್ತು.

ಪಾಪ, ನಮ್ಮವ್ವ ಸವತೆಕಾಯಿ ಮಡಿ ಮೇಲೆ ಯಾವುದೆ ನಾಯಿ ನರಿಗಳು ದಾಳಿ ಮಾಡಿ ಹಾಳು ಮಾಡಬಾರದು ಎಂದು ಮುಂಜಾನೆಯಿಂದ ಕಷ್ಟಪಟ್ಟು ಆ ಬೆದರುಬೊಂಬೆ ತಯಾರಿದ್ದಳಂತೆ. ಬೊಂಬೆಗೆ ದೊಡ್ಡದೊಂದು ಮಣ್ಣಿನ ಮಡಿಕೆಯನ್ನು ತಲೆಯನ್ನಾಗಿಸಿ ಅದಕ್ಕೆ ಸುಣ್ಣ ಬಳಿದು ಮೀಸೆ ಕೊರೆದು ಥೆಟ್ ದೆವ್ವವನ್ನಾಗಿಸಿದ್ದಳು. ನಾನು ಹೋಗಿ

ನನ್ನ ವೀರತನವನ್ನು ಮನೆಯಲ್ಲಿ ಹೇಳಿದೆ ಅವ್ವ ಬೈಗುಳಗಳ ಮಂಗಳಾರುತಿ ಮಾಡಿ ದೊಣ್ಣೆ ಪ್ರಸಾದ ನೀಡಿದಳು.

ಮುಂದೊಂದು ದಿನ ನಮ್ಮ ಪಕ್ಕದ ತೋಟದ ಶಂಕ್ರಪ್ಪ ಮಾಮ ಎಂಬವನೊಬ್ಬ ನಮ್ಮ ತೊಟದ ದಾರಿಯಲ್ಲಿ ಕೊಳ್ಳಿ ದೆವ್ವ ಇದೆಯಂದು ಸುದ್ದಿ ಹಬ್ಬಿಸಿದ. ಎಂತೆಂತ ಅತಿರಥ ಮಹಾರಥ ದೈರ್ಯವಂತರೆಲ್ಲ ಆ ದಾರಿಯಲ್ಲಿ ರಾತ್ರಿ ವೇಳೆಯಲ್ಲಿ ಅಡ್ಡಾಡುವುದನ್ನು ನಿಲ್ಲಿಸಿದರು. ಆತ ನನಗೆ ಬಂದು ಆ ದೆವ್ವದ ಹತ್ತಿರ ಹೋದರೆ ನಿನಗೆ ಕೋಳಿ ಊಟ ಹಾಕಿಸುತ್ತೇನೆ ಎಂದು ಸವಾಲು ಹಾಕತೊಡಗಿದ. ನಾನು ಕೋಳಿ ಊಟದ ಆಸೆಗಿಂತಲೂ ಆದೆವ್ವ ಎಂಥದ್ದಿರಬಹುದು ಎಂಬ ಕುತೂಹಲದಿಂದ ನಾನು ಆ ಸವಾಲನ್ನು ಹುರುಪಿನಿಂದಲೇ ಸ್ವೀಕರಿಸಿದೆ. ಆದರೆ ರಾತ್ರಿಯಾಗುತ್ತಿದ್ದಂತೆ ಯಾಕೋ ಭಯ ಸುರುವಾಗಿ ಈ ಸಲ ಚೊನ್ನದ ಬದಲು ಲುಂಗಿ ಒದ್ದೆಯಾಗಬಹುದೇ ಆತಂಕವಾಗಿತ್ತು.

ಎನಾದರೂ ಹೆಚ್ಚು ಕಡಿಮೆಯಾದರೆ ಇರಲಿ ಎಂದು ಅವ್ವ ಈರುಳ್ಳಿ ಕತ್ತರಿಸಲು ಇಟ್ಟುಕೊಂಡಿದ್ದ ಚಾಕುವೊಂದನ್ನು ಸೊಂಟದಲ್ಲಿ ಇಟ್ಟುಕೊಂಡೆ. ಶಾಲೆಯ ಬೂಟುಗಳನ್ನೆ ಧರಿಸಿ, ದೇವರಿಗೆ ಕಾಪಾಡಪ್ಪಾ ದೇವರೇ ನಿನಗೆ ಒಂದು ಕಾಯಿ ಒಡೆಸುತ್ತೇನೆ ಎಂದು ಮನಸ್ಸಿನಲ್ಲಿ ಬೇಡಿಕೊಂಡು ದೇವಗರ ಮುಂದಿದ್ದ ನಿಂಬೆಕಾಯಿಯೊಂದನ್ನು ಕಿಸೆಯಲ್ಲಿ ಇಟ್ಟುಕೊಂಡು ಆ ಅಮಾವಾಸ್ಯೆ ಕತ್ತಲ ರಾತ್ರಿಯಲ್ಲಿ ಹೊರಬಿದ್ದೆ.

ದಾರಿಯ ಆ ಒಂದು ಗಿಡದ ಕೆಳಗೆ ನಿಜಕ್ಕು ಒಂದು ಕೊಳ್ಳಿ ಅಡ್ಡಾಡುತ್ತಿತ್ತು. ಆಗಾಗ ಅದರ ಮುಖದಲ್ಲಿ ದೀಪದಂತೆ ಉರಿ ಹೊತ್ತಿಕೊಂಡು ಸುರ್ರ.. ಎಂದು ಶಬ್ದಮಾಡಿ ಮಿನುಗುತ್ತಾ ಉರಿದು ನಂದುತ್ತಿತ್ತು. ಯಾಕೋ ಕಾಲುಗಳು ಮುಂದೆ ಹೊಗಲಿಕ್ಕೆ ಒಪ್ಪುತ್ತಿಲ್ಲ. ಹತ್ತಿರ ಹೋದರೆ ಕೊಳ್ಳಿ ದೆವ್ವ ಮೈಮೇಲೆ ಜಗಿದು ಸುಟ್ಟು ಹಾಕತ್ತದೆ ಎಂದು ಶಂಕ್ರಪ್ಪ ಮಾಮಾ ಹೇಳಿದ್ದು ನೆನಪಾಗಿ ಮೈಯಲ್ಲಾ ಭಯ ಆವರಿಸಿ ಆ ಚಳಿ ರಾತ್ರಿಯಲ್ಲಿಯೂ ಬೇವರತೊಡಗಿದೆ.

ಪುಣ್ಯಕ್ಕೆ ನನ್ನ ಜೊತೆ ಬೀಮ್ಯಾ(ನಾಯಿ) ಬಂದಿತ್ತು. ಅದು ಕೂಡಾ ಮುಂದೆ ಹೊಗಲಾರದೇ ನನ್ನನ್ನು ಬಿಟ್ಟು ಹಿಂದಕ್ಕೂ ಹೋಗಲಾರದೇ ಬೌ ಬೌ ಎಂದು ಬೊಗಳತೊಡಗಿತು. ನಾನು ದೈರ್ಯ ವಹಿಸಿ ಮತ್ತೆ ಹಿಡಿಗಲ್ಲು ಆರಿಸಿಕೊಂಡು ಕಲ್ಲು ಬೀಸತೊಡಗಿದೆ. ಆದರೆ ಆ ಕೊಳ್ಳಿ ದೆವ್ವ ಬಹಳ ಶ್ಯಾನಾ ಇದ್ದಂತಿತ್ತು. ಅತ್ತಿತ್ತ ಸರಿದಾಡಿ ಕಲ್ಲು ಬಿಳುವುದನ್ನು ತಪ್ಪಿಸಿಕೊಳ್ಳತೊಡಗಿತು. ನಾನು ಕಲ್ಲು ಬೀಸುವುದನ್ನು ಮುಂದುವರೆಸಿದೆ. ಕೊನೆಗೊಮ್ಮೆ ಕಲ್ಲು ದೆವ್ವಿಗೆ ಬಡಿಯಿತೆಂದು ಕಾಣುತ್ತದೆ. ದೆವ್ವ ಕೊಳ್ಳಿ ಸಮೇತ ನೇಲಕ್ಕೆ ಬಿತ್ತು. ಬೀಮ್ಯಾ ದೆವ್ವದ ಹತ್ತಿರ ಓಡಿ ಹೋಗಿ ನೆಲಕ್ಕೆ ಬಿದ್ದ ದೆವ್ವವನ್ನು ಮೂಸಿ ನೋಡಿ ಬೊಗಳತೊಡಗಿತು.

ಎಲ್ಲಿದ್ದನೊ ಎನೋ, ಶಂಕ್ರಪ್ಪ ಮಾಮಾ ಓಡಿಬಂದು ನೀನು ನಿಜಕ್ಕು ಧೈರ್ಯವಂತ ಕಣಪ್ಪಾ ಎಂದು ಹೊಗುಳುತ್ತಾ ಆ ಕೊಳ್ಳಿ ದೆವ್ವದ ತಯಾರಿಕೆಯ ಹಿಂದಿನ ಗಮ್ಮತ್ತನ್ನು ಬಿಚ್ಚಿಟ್ಟ. ಉದ್ದದ ತೆಂಗಿನ ನಾರಿನ ಹಗ್ಗ ತೆಗೆದುಕೊಂಡು ಅದರಲ್ಲಿ ಅಲ್ಲೊಂದು ಇಲ್ಲೊಂದು ದೀಪದ ಕಡ್ಡಿಗಳನ್ನು ತುರುಕಿ ಆ ಹಗ್ಗವನ್ನು ಗಿಡದ ಟೊಂಗೆಗೆ ಕಟ್ಟುವುದಂತೆ. ಕೆಳಗೆ ಆ ಹಗ್ಗಕ್ಕೆ ಬೆಂಕಿ ಹಚ್ಚಿ ಬಿಡುವುದು. ಬೆಂಕಿ ಮೇಲಕ್ಕೆ ಉರಿಯುತ್ತಾ ಹೋಗುತ್ತದೆ ಮತ್ತು ತನ್ನ ಸ್ಪರ್ಶಕ್ಕೆ ಬರುವ ಬೆಂಕಿ ಕಡ್ಡಿಗಳನ್ನು ಹೊತ್ತಿಸಿ ಬೆಳಗಿಸುತ್ತದೆ ಅದೇ ವೇಳೆಯಲ್ಲಿ ಗಾಳಿಗೆ ಅಲುಗಾಡುತ್ತಾ ಅದು ಅಡ್ಡಾಡಿದಂತೆ ಬಾಸಾವಾಗುತ್ತದೆ. ಈ ಸರಳ ತಂತ್ರವನ್ನು ಹುಡಿ ಶಂಕ್ರಪ್ಪ ಮಾಮಾ ನನ್ನನ್ನು ದೆವ್ವದ ಬಲಿಗೆ ಕೆಡುವುಲು ನೋಡಿದ. ಆ ಕೊಳ್ಳಿ ದೆವ್ವವನ್ನು ಕೊಂದ ನಂತರ ನನಗೆ ಮತ್ತಷ್ಟು ಆನೆಬಲ ಬಂದಂತಾಗಿದೆ. ಮುಂದೆ ಇನ್ನಾವ ದೆವ್ವದ ಜೊತೆ ಹೆಣಗಾಡಬೇಕಾಗಿದೆಯೋ ಆ ದೇವ್ವಕ್ಕೆ ಗೊತ್ತು.

**ಹನುಮಂತ ಹಾಲಿಗೇರಿ**
ಸಂಸ ಪತ್ರಿಕೆ ಜೂನ್ 2014

# ಆಮಂತ್ರಣ ಮಾಡಿದ ಅವಾಂತರ

ಮಟ ಮಟ ಮದ್ಯಾನ ಪೋಸ್ಟಮನ್ ಲಕೋಟಿಯೊಂದನ್ನು ಹಿಡಿದುಕೊಂಡು ಮನೆಯತ್ತ ಬರುವುದು ನೋಡಿ "ಮತ್ತೇನು ಲಾಟ್ರೀ ಹೋಡಿತ್ರಿ ನಿಮಗ" ಅಂತ ನನ್ನ ಶ್ರೀಮತಿ ಉಲಿದಳು. ನಾ ನಗತೊಡಗಿದೆ. ಯಾವುದಾದರು ಕಾರ್ಯಕ್ರಮದ ಆಹ್ವಾನ ಪತ್ರಿಕೆಯೋ, ಇಲ್ಲವೆ ಗೆಳೆಯರು ತಾವು ಬರೆದ ಹೊಸ ಕೃತಿ ಕಳಿಸಿರಬಹುದು ಎಂದು ಹೆಂಡತಿಯ ಪ್ರಶ್ನೆಗೆ ಉತ್ತರ ಕೊಡುತ್ತ, ಆ ಮನುಷ್ಯ ಬರುವ ಮುಂಚೆ ಶ್ರೀರಂಗಪಟ್ಟನದ ಶ್ರೀರಂಗನಾಥನಂತೆ ಹೆಂಡತಿಯ ತೊಡೆಯ ಮೇಲೆ ತಲೆಯಿಟ್ಟು ಮಲಗಿದವನು ಚಕ್ಕನೆ ಮೇಲೆದ್ದೆ. "ಸರ್ ನಿಮಗೊಂದು ಪೋಸ್ಟ ಬಂದೈತ್ರೀ" ಎಂದು ನನ್ನ ಮಾತಾಡಿಸುತ್ತ ತನ್ನ ಗೂಬೆ ಕಣ್ಣುಗಳಿಂದ ಹತ್ತಿರವಿದ್ದ ನನ್ನ ಶ್ರೀಮತಿಯನ್ನು ನೋಡಿ ಹಲ್ಲು ಕಿರಿದ. ನನ್ನ ಶಬ್ದಕೋಶದ ಪದ ಸಂಪತ್ತಿನಿಂದ ಬಂಡಾಯ ಕಾವ್ಯ ಕಟ್ಟಿ ಅವನನ್ನು ಅಟ್ಟಿಸಬೇಕೆಂದೆ. ಅಷ್ಟೊತ್ತಿಗಾಗಲೇ ನನ್ನ ಶ್ರೀಮತಿ ಅವನ ಕೈಯಲ್ಲಿ ಮಜ್ಜಿಗೆ ಲೋಟ ಇಟ್ಟಿದ್ದಳು. "ಅಮ್ಮಾವ್ರು ಬಾಳ ಚಲೋ ರೀ" ಎಂದ. ಎಲಾ ಲಫಂಗಾ! ಎಂದು ಸೆಟೆದು ಕುಳಿತು ನನ್ನ ಶ್ರೀಮತಿಯ ಮೋತಿ ನೋಡಿದೆ. ಅವಳೋ ಆ ಮನುಷ್ಯ "ಅಮ್ಮವ್ರು ಚಲೋ" ಎಂಬ ಮಾತು ನೆನೆದು ನಾಲ್ವತ್ತರ ತನ್ನ ವೈಯಸ್ಸು ಹದಿನೆಂಟಕ್ಕೆ ಇಳಿಸಿಕೊಂಡಿದ್ದಳು.

ಅವನು ಹೋದ ಮೇಲೆ "ಆ ಪೋಸ್ಟಮನ್ ಹೆಂತಾ ಪೆದ್ದ ಅಲ್ವೇನ್ರೀ, ಎಂದಳು. ಯಾಕೇ? ಅಂದೆ. ಮತ್ತೆ..? ನನ್ನ ಹತ್ತು ಗಂಡುಗಳು ನೋಡಲು ಬಂದು ನನ್ನ ಸೌಂದರ್ಯ ನೋಡಿ ಮೂಗುಮುರಿದು ಹೋಗಿದ್ದರು. ಹನ್ನೊಂದನೆಯ ಆಸಾಮಿ ನಿಂವು ಮಾತ್ರ ನನ್ನ ಬಿಡಲೇ ಇಲ್ಲ..! ಎಂದು ಹೇಳುತ್ತ ನಾಚಿ ನೀರಾದಳು.

ಅಯ್ಯೋ ಪುಣ್ಯಾತಗಿತ್ತಿ "ಅಂವ ನೀ ಮಜ್ಜಿಗೆ ಕೊಟ್ಟದ್ದಕ್ಕೆ ಚಲೋ ಅಂದಾನ" ಎಂದು ನನ್ನ ನಗೆಯನ್ನು ಹತೋಟಿಯಲ್ಲಿಟ್ಟುಕೊಂಡು ಹೇಳಿದಾಗ "ನನ್ನ ಶ್ರೀಮತಿಗೆ ಮನ್ನೆ ಮನ್ನೆ ತಮಗೆ ಕರ್ನಾಟಕ ಸಾಹಿತ್ಯ ಪರಿಷತ್ತು ಕೊಡಮಾಡಿದ ಪ್ರಶಸ್ತಿ ಮತ್ತು ಹಣ ಹಿಂದಿರುಗಿಸಿದ ಸಾಹಿತಿಗಳ ಮನಸಿಗಾದಷ್ಟು ನೋವು ನನ್ನವಳಿಗಾಯಿತೆನೋ.

ನಗೆ ನಿಂತ ಮೇಲೆ ಆ ಲಕೋಟಿ ಬಿಚ್ಚಿ ನೋಡಿದೆ. ಪುಸ್ತಕ ಬಿಡುಗಡೆ ಕಾರ್ಯಕ್ರಮ ಇದೆ ಶನಿವಾರ ಹತ್ತು ಮೂವತ್ತಕ್ಕೆ, ಸ್ಥಳ ಸಾಹಿತ್ಯ ಪರಿಷತ್ತು ಬೆಂಗಳೂರು ಎಂದು ಬರದಿತ್ತು.

ನನ್ನ ಬಾಲ್ಯದ ಗೆಳೆಯನೊಬ್ಬ ನಾವೆಲ್ಲ ಬರೆಯುವುದ ಕಂಡು ನಾನೇನ ಕಮ್ಮಿ ಅನ್ನುವಂಗ ಒಂದ ತಿಂಗಳದಾಗ ಐವತ್ತು ಕವಿತೆ ಬರೆದು ಪುಸ್ತಕ ಮಾಡಿದ್ದ. ಈ ಪುಸ್ತಕ ಬಿಡುಗಡೆ ಆಮಂತ್ರಣ ಕಳಿಸಿಕೊಡುವ ಮುಂಚೆ "ದೊಸ್ತಾ ನೀ ಕಂಡಿತಾ

ಬರ್ಬೇಕಾ ಮತ್ತ" ಎಂದು ನಮ್ಮ ಬಾಗಲಕೋಟಿ ಜವಾರಿ ಭಾಷೆಯಲ್ಲಿ ತಾಸುಗಟ್ಟಲೇ ಪೋನಿನಲ್ಲಿ ಮಾತಾಡಿ ತಲೆ ತಿಂದಿದ್ದ. ಕವಿತೆ ಅವನೌವ್ನ ಬಾಳ ಚಲೋ ಅದಾವ ಅಂತ ಈ ಬೆಂಗಳೂರನ್ಯಾಗ ಮಂದಿ ಗಲ್ಲಿಗಲ್ಲಿಗೂ ಮಾತಾಡ್ತಾರ, ನನ್ನ ಕವಿತೆ ಓದಿ ದೊಡ್ಡ ದೊಡ್ಡ ಕವಿಗಳು ಹೊಚ್ಚಿಕಿಟ್ಟ ಪಟಗೊಂದು ಸೆಟಗೊಂದ ಕುಂತಾರ. ನಾನರ ಏನ ಮಾಡಾಕ ಅಕೈತಿ, ಎಂದು ತನ್ನ ಕವಿತೆಯ ಗುಣಗಾಣ ಮಾಡಿದ್ದ. ಇಷ್ಟೆಲ್ಲ ಹೇಳಿದ ನಂತ್ರ ನನಗೂ ಅಂವ್ನ ಮ್ಯಾಲ ಸಣ್ಣಂಗ ಹೊಟ್ಟಿಕಿಚ್ಚ ಚಲೂ ಆತ.

ನಾವೆಲ್ಲ ನಾಕಾರ ಪುಸ್ತಾಕ ಬರದ್ರು ಕವಿ ಅಂತ ಇನ್ನ ಈ ಮಂದಿ ಯಾರೂ ಸರಿಯಾಗಿ ಒಪೊಗೊಳ್ಳಾಕ ತೈಯಾರಿಲ್ಲ ಇಂವರಾ ತಾಬಡ ತೋಬಡ ಒಂದ ತಿಂಗಳದಾಗ ಐವತ್ತ ಕವಿತಾ ಬರದನಲಾ ಅಂತ ಮನಸಿಗೆ ನಾನೂ ಹಳಹಳಿ ಮಾಡಕೊಂಡ್ಯಾ.

ಜಿಂವಾ ಗಟ್ಟಿಮಾಡಕೊಂಡ ಬೆಂಗಳೂರಿಗೆ ಹೋಗಾಕ ತಯ್ಯಾರಾದೆ. "ಹುಷ್ಯಾರೀ ಬೆಂಗಳೂರಂದ್ರ ನಮ್ಮ ರಾಜ್ಯದ ರಾಜದಾನಿ. ಸರೂಸಾದಾರ್ಣಾ ಆ ಊರ ನಮ್ಮೂರ ಗೌಡರ ಹೊಲದಷ್ಟ ದೊಡ್ಡದ ಇರಬೇಕ. ಅಲ್ಲಿ ಮಂದಿ ಬಾಳ ಬೆರಿಕಿ ಇರ್ತಾರಂತ. ಅದೂ ಬ್ಯಾರೆ ಅವರ ಮಾತಾಡೂ ಕನ್ನಡ ಪದಗೊಳು ಒಂದ ನಮೂನಿ ಕೂಸ ಅತ್ತಂಗ ಇರತಾವ. ಮನ್ನೆ ಒಬ್ಬ ಆ ಕಡೆ ಮನಿಷ್ಯಾ ಮಾತಾಡೂದ ಟಿವ್ಯಾಗ ನಾ ಕೇಳಸ್ಕೊಂಡಿನಿ" ಎಂದು ನನ್ನ ಶ್ರೀಮತಿ ಮಾರೂದ್ದದ ಉಪನ್ಯಾಸ ಕುಟ್ಟತೊಡಗಿದಳು. ಹೂಂ.. ಹೂಂ.. ಅಂತ ಅಕೀ ಮನಸಿಗೆ ಬ್ಯಾಸರ ಆಗದಂಗ ತಲೆ ಅಲ್ಲಾಡಿಸಿ ಟ್ರೇನ್ ಇನ್ನ ಅರ್ದಾ ಗಂಟೇಕ ಬರ್ತೈತಿ ನಾ ಹೋಗಿಬರ್ತಿನಿ ಅಂತ ವರ್ಷ ಆರತಿಂಗಳಿಗೆ ತನ್ನ ಹಳ್ಳಿಗೆ ಬಂದ ಗಡಿ ಕಾಯುವ ಸೈನಿಕ ಮರಳಿ ಗಡಿ ಕಾಯಲೂ ಹೋಗುವಾಗ ತನ್ನ ಹೆಂತಿಗೆ ಕೈ ಬಿಸಿ ಹೋದಂಗ ನಾನೂ ಹೋದೆ.

ಟ್ರೇನು ಪ್ಲಾಟಪಾರ್ಮನಲ್ಲಿ ನಾಕನೂರ ಮೀಟರ ರನ್ನಿಂಗ ರೇಸ್ ನಲ್ಲಿ ಓಡಿಬಂದ ಕ್ರಿಡಾ ಪಟುವಿನಂತೆ ಉಸ್ ಉಸ್ ತೇಕೂತ್ತ ಬಂದು ನಿಂತಿತ್ತು. ನಾನು ಯಾರದೋ ಪೋನ್ ಕರೆಯಲ್ಲಿ ತಲ್ಲಿನಗೊಂಡು ರಿಸರ್ವ ಮಾಡಿದ ಸೀಟಿನಲ್ಲಿ ಕೂಡುವ ಬದಲು ಮಾತಾಡುತ್ತ ಮಾತಾಡುತ್ತ ಜರ್ನಲ್ ಬೋಗಿ ಹೊಕ್ಕಿದ್ದೆ. ಹತ್ತೇ ನಿಮಿಷದಲ್ಲಿ ನನಗೆ ತುಳಸಿಗೇರಿ ಹನಮಪ್ಪನ ಜಾತ್ರೆಯಲ್ಲಿ ಇದ್ದಂತೆ ಅನಿಸತೊಡಗಿತು. ನಾ ಮಾತಾಡೂವ ಪೋನು ಮಾರೂದ್ದ ದೂರ ಹೋಗಿ ಬಿದ್ದು ವಿಲಿವಿಲಿ ವದ್ದಾಡತೊಡಗಿತ್ತು. ಹಂತ ಗದ್ದಲದಲ್ಲಿ ಹರ ಸಾಹಸ ಮಾಡಿ ನನ್ನ ಪೋನ ತಗೆದುಕೊಳ್ಳದೆ ಬಿಡಲಿಲ್ಲ.

ತಾಸೊಪ್ಪತ್ತಿನಲ್ಲಿ 'ಹೇ ವಾಾವಾ..' ಎಂದು ಚಪ್ಪಾಳೆ ಬಾರಿಸುತ್ತ ಮಂಗಳಮುಖಿಯೊಬ್ಬಳು ನನ್ನ ಎದೆಯ ಮೇಲೆ ಕೈಯಾಡಿಸಿ ಲಗೂನ ತಗಿ ಎಂದಳು. ಸುತ್ತಲಿದ್ದ ಜನರೆಲ್ಲರೂ 'ಗೊಳ್' ಎಂದು ನಕ್ಕರು. ಮನ್ನೆ ಕಿರಾಣಿ ಅಂಗಡಿಯಲ್ಲಿ ನಭಿಸಾಬ ಕೊಟ್ಟ ಹರಕು ನೋಟು ಕಿಸೆಯಲ್ಲಿದ್ದದ್ದು ಖಾತ್ರಿ ಮಾಡಿಕೊಂಡೆ.

ಹೆಂಗಾದರೂ ಮಾಡಿ ಆ ನೋಟ ನೆಡಿಸಬೇಕೆಂದು ಹಟ ಹಿಡಿದ ಕುಳಿತ ನನ್ನ ಮನದ ಆಸೆ ಪೂರೈಸಿತು. ಸಾವುಕಾಶ ಕಿಸೆಯಿಂದ ನೋಟನ್ನು ಹೊರ ತಗೆದು ಆ ಚಲವೇ ಮಂಗಳಮುಖಿಯ ಕೈಗಿಟ್ಟು ಅವಳ ಮೇಲೆ ಸೇಡು ತೀರಿಸಿಕೊಂಡೆ.

ನಿದ್ದೆ ಜೋರಾಗಿ ಬಂದಿತ್ತು ಆ ಬೋಗಿಯಲ್ಲಿ ಎಲ್ಲಿ ಮಲಗಿದ್ದೆ ಎಂಬ ಮಾಹಿತಿಯನ್ನು ನಾನು ತೊಟ್ಟ ಬಟ್ಟೆಗಳು ಸಾರಿ ಸಾರಿ ಹೇಳುತ್ತಿದ್ದವು. ನಿದ್ದೆ ಬಂದರೆ ತಿಪ್ಪೆ ದಂಡಿಯೂ ಸ್ವರ್ಗವಾಗಬಲ್ಲುದು ಎಂಬ ಶಿವಶರಣರ ವಾಣಿ ಆಗ ನನ್ನೆದೆಗೆ ತಾಕಿತ್ತು.

ಟ್ರೇನ್ ಇಳಿದು ಬೆಂಗಳೂರಿನ ಬಿ ಎಮ್ ಟಿ ಸಿ ಬಸ್ಟಾಡಿಂಗೆ ಬರೂದರಲ್ಲಿ ನನ್ನನ್ನು ಬೆಂಗಳೂರಿನ ಮಂದಿ ಹುಳುಹುಳು ನೋಡುತ್ತಲೇ ಸಾಗಿದ್ದರು. ನಾನು ಸಾಹಿತಿ ಅನ್ನೋದು ಇವರಿಗೆ ಗೊತ್ತಿರಬಹುದು ಅದಕ್ಕೇ ಅವರಿಗೆ ನನ್ನ ಮೇಲೆ ಈ ತರ ಅಭಿಮಾನ ಎಂದು ನನ್ನ ಮನ ಜಂಬಪಡುತ್ತಿತ್ತು.

ಪುಸ್ತಕ ಬಿಡುಗಡೆಗೆ ಬಾ ಎಂದು ತಿಂಗಳಿಂದ ಜಿಂವ ತಿನ್ನುತ್ತಿದ್ದ ಗೆಳೆಯನಿಗೆ ಪೋನು ಹಚ್ಚಿ ಹಚ್ಚಿ ಸುಸ್ತಾದೆ. ಎರಡು ತಾಸಾದರೂ ಅವನ ಪೋನು 'ಸ್ವಿಚ್ ಆಪ್' ಎಂದು ಬೊಗಳುತ್ತಿತ್ತು. ಆಮಂತ್ರಣ ಪತ್ರಿಕೆಯಲ್ಲಿ ಸ್ಥಳ ಚಾಮರಾಜಪೇಟೆ ಎಂದು ಇರುವುದು ಕಚಿತ ಪಡಿಸಿಕೊಂಡೆ. ಚಾಮರಾಜ ಪೇಟೆ ಬಸ್ಸು ಎಲ್ಲಿ ನಿಲ್ಲುತ್ತಾವೆ ಎಂದು ತಿಳಿಯಲು ಗುದ್ದಾಡದೆ ಆನತಿ ದೂರದಲ್ಲಿ ಒಂದು ಕಾಲೇಜ ಹುಡುಗಿ ಕಿವಿಯಲ್ಲಿ ಏರ್ಪೋನ್ ಹಾಕಿಕೊಂಡು ಗೋನು ಅಲ್ಲಾಡಿಸುತ್ತಿದ್ದಳು. ಈ ಹುಡಿಗಿಯರು ಬೆಂಗಳೂರ ಸೀಟಿನೇ ಸ್ಟಡಿ ಮಾಡಿರ್ತಾರೆ ಇವಳನ್ನೇ ಕೇಳಿದರಾಯ್ತು ಎಂದು ಅವಳ ಹತ್ತಿರ ಹೋಗಿ ಚಾಮರಾಜ ಪೇಟೆಯ ಬಸ್ಸು ಎಲ್ಲಿ ನಿಲ್ಲುತ್ತವೆ ಎಂದು ಅವಳನ್ನು ನಗುನಗುತ್ತಲೇ ಕೇಳಿದೆ. ಅವಳು ಒಂದು ಕ್ಷಣ ನನ್ನ ಮೋತಿಯನ್ನು ನೋಡುತ್ತ ಜೇಬಿನಿಂದ ಹತ್ತುರೂಪಾಯಿ ನೋಟನೊಂದು ತಗೆದು ನನ್ನ ಕೈಗಿಡುತ್ತ "ಎಲ್ಲಿ ಹೋದ್ರೂ ನಿಮ್ಮಂತ ಭಿಕ್ಷುಕರ ಕಾಟನೇ" ಎಂದು ಗೊಣಗಿದಾಗ..ನನಗೆ ಆ ಶಾಖ್‌ನಿಂದ ಸುದಾರಿಸಿಕೊಳ್ಳಲು ಆ ಕಾಲಕ್ಕೆ ಬಾರ್ ಅಂಗಡಿನೇ ಗತಿಯಾಯ್ತು.

ಗೆಳೆಯನ ಪುಸ್ತಕ ಬಿಡುಗಡೆ ಸಮಾರಂಭ ಹೆಂಗಾತೋ ದೇವರೇ ಬಲ್ಲ.

**ತಿರುಪತಿ ಭಂಗಿ**

ಸಂಯುಕ್ತ ಕರ್ನಾಟಕ

ಜೂನ್ ೬ ೨೦೧೪

# ಗಣೇಶ ಪೆಂಡಾಲಿನ ಮೈಕಾಸುರರು

ಆ ಬೀದಿಯಲ್ಲಿ ನಿಂತಿದ್ದ ಗಣಪ, ಈ ಬೀದಿಯಲ್ಲಿ ಮಲಗಿದ್ದ. ಹಿಂದಿನ ಬೀದಿಯ ಗಣೇಶ ಮೋದಿಯೊಂದಿಗೆ ಮಾತನಾಡುತ್ತಿದ್ದರೆ, ಮುಂದಿನ ಬೀದಿಯ ವಿಘ್ನೇಶ ಪಿತೃಪೂಜೆಯಲ್ಲಿ ತಲ್ಲೀನನಾಗಿದ್ದ. ಪೂಜೆ ಆರಂಭಗೊಳ್ಳುವ ಮೊದಲು ತಣ್ಣಗಿದ್ದ ಎಲ್ಲ ಗಜಮುಖರಿಗೂ ಪೂಜೆ ಎಂದರೆ ದಿಗಿಲಿಗಿಟ್ಟುಕೊಂಡಿತು. ಡಂ ಡಂ ಡಂ... ಶುರುವಾಯಿತು ಮೈಕಾಸುರನ ಅಟ್ಟಹಾಸ.

'ಗಜಮುಖನೇ ಗಣಪತಿಯೇ ನಿನಗೆ ವಂದನೆ, ನಂಬಿದವರ ಪಾಲಿನ ಕಲ್ಪತರು ನೀನೆ...' ಎಂದು ಶಾಂತವಾಗಿ, ಮೈಕ್ ಸೆಟ್‌ನ ಶಾಶ್ವತ ಓಂ ಪ್ರಥಮದಂತಿರುವ ಎಸ್. ಜಾನಕಿ ಅವರ ಕಂಠಸಿರಿಯ ವಿಘ್ನನಾಶಕನ ಗೀತೆ ಹೆಚ್ಚು ಹೊತ್ತು ಉಳಿಯಲಿಲ್ಲ. ಶಾಸ್ತ್ರಕ್ಕೆಂಬಂತೆ ಆರಂಭವಾದ ಗಜಮುಖ ಸ್ತುತಿ ನಿಮಿಷಗಳ ಕಾಲ ಹಾಡಿ ತಣ್ಣಗಾಯಿತು. ಹಿಂದೆಯೇ ಬಾಲಿವುಡ್, ಟಾಲಿವುಡ್, ಕಾಲಿವುಡ್, ಸ್ಯಾಂಡಲ್‌ವುಡ್ ಯಾವ ವುಡ್‌ಗಳ ತರತಮವೂ ಇಲ್ಲದಂತೆ ಅಬ್ಬರದಲೆಯ ಮೊರೆತ ಎದ್ದಿತು.

ಪೆಂಡಾಲಿನೊಳಗೆ ನಿಂತು, ಕುಂತು, ಮಲಗಿದ್ದ ಗಣೇಶರ ತಲೆ ಚಿಟ್ಟುಹಿಡಿಯಲು ಶುರುವಾಯಿತು. 'ನಿಲ್ಲಿಸ್ರೋ ಸಾಕು' ಎಂಬ ಗಣಪನ ಕೂಗು ಮೈಕಾಸುರನ ಅಬ್ಬರದಲ್ಲಿ ಯಾವ ಭಕ್ತರಿಗೂ ಕೇಳಲಿಲ್ಲ. ಬೀದಿಗೊಬ್ಬ ಗಣಪರಂತೆ ಬೀದಿಗೊಬ್ಬೊಬ್ಬ ಮೈಕಾಸುರರೂ ಹುಟ್ಟಿ ಅವರ ಹಾವಳಿ ಹೆಚ್ಚಾಗಿದ್ದು, ಕರ್ಣವೆಂಬ ಜೀವಗಳು ಇನ್ನ್ಯಾರಲ್ಲಿ ಮೊರೆ ಇಡುವುದೆಂದು ದಿಕ್ಕು ಕಾಣದಂತಾಗಿವೆ, ಏನೂ ಕೇಳದಂತಾಗಿವೆ.

* * *

ನಗರದಲ್ಲಿ ಬೀದಿಗೊಬ್ಬ ಗಣಪರನ್ನು ಕಂಡು ನಮಿಸುವವರಿಗೆ ಬೀದಿ ಬೀದಿಗೊಂದರಂತೆ ಅರುಚುವ ಮೈಕಾಸುರರನ್ನು ಸಹಿಸಿಕೊಳ್ಳುವುದು ಕಷ್ಟ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಶಬ್ದ ಮಾಲಿನ್ಯಕ್ಕೆ ಈಗ ಮೈಕಾಸುರರ ಕೊಡುಗೆಯೇ ಹೆಚ್ಚು. ಆಗಸ್ಟ್ ಕಳೆದು, ಸೆಪ್ಟೆಂಬರ್ ಬಂದರೂ ಅಕ್ಟೋಬರ್‌ವರೆಗೂ ಗಣೇಶನ 'ಕೂರಿಸಲು' ಯಾವುದೇ ಅಡ್ಡಿಯಿಲ್ಲ.

ಬೀದಿಯ ಗಾತ್ರ, ಕೂರಿಸುವವರ ಗಾತ್ರ, ಅವರ ಜೇಬಿನ ಗಾತ್ರ, ಕಡ್ಡಾಯ 'ದಾನಿ'ಗಳ ಪಾತ್ರಕ್ಕೆ ಅನುಗುಣವಾಗಿ ಗಣಪನ ಗಾತ್ರವೂ ದೊಡ್ಡದಾಗುತ್ತದೆ. ಗಣಪ ದೊಡ್ಡವನಾದಷ್ಟೂ ಪೆಂಡಾಲ್ ಕೂಡ ದೊಡ್ಡದಾಗುತ್ತದೆ. ಪೆಂಡಾಲ್ ದೊಡ್ಡದಾದ ಮೇಲೆ ಮೈಕಾಸುರರ ಗಾತ್ರವೂ ದೊಡ್ಡದಾಗಲೇ?ಬೇಕಲ್ಲ. ಸ್ಪೀಕರ್‌ಗಳೆಂಬ ಅರ್ಧಾಂಗಿಯರೊಡನೆ ಮೈಕಾಸುರ ಅರುಚುತ್ತಿದ್ದರೆ ಅಲ್ಲಿಗೆ ಕರ್ಣಕಠೋರ ರಾಗದ ಆಲಾಪ ಶುರು.

'ವರ್ಷಕ್ಕೊಂದು ಸಲ ಕೂರಿಸೋದು ಬಿಡ್ರಿ. ಏನು ನಿಮ್ಮದು ತಗಾದೆ. ಹುಡುಗರು ಏನೋ ಮಾಡ್ಕೋತಾರೆ. ಹಳೇ ಹಾಡಿನಂಗೆ ಈಗಿನ ಹಾಡುಗಳಲ್ಲಿ ಸೈಲೆಂಟು ಇಲ್ಲ ಕಣ್ರೀ' ಎಂದು ಬೀದಿಯ ಹುಡುಗರ ಬೆನ್ನಿಗೆ ನಿಂತರು ಬೀದಿಯ ಒಬ್ಬ ಹಿರಿಯರು.

'ಬಿಡಿ ಸಾರ್. ಒಂದು ಮೂರು ದಿನ ತಾನೆ. ಈಗ ಬಿಟ್ರೆ ಇನ್ನು ಅಣ್ಣಮ್ಮಂಗೆ ತಾನೆ ಹಾಕೋದು. ಸೌಂಡು ಇಲ್ಲದಿದ್ರೆ ನಾವು ಇಲ್ಲಿದ್ದೀವಿ ಅಂತ ಹೆಂಗೆ ಗೊತ್ತಾಗ್ಬೇಕು ಸಾರ್ ಜಗತ್ತಿಗೆ' ಎಂದ ಹುಡುಗ, 'ನಿಮ್ದು ಎಷ್ಟು ಬರೀಲಿ' ಎಂದು ಚಂದಾ ರಸೀದಿ ಪುಸ್ತಕದ ಹಾಳೆ ತಿರುವಿದ.

* * *

ಕೈಗಾರಿಕೆ ಪ್ರದೇಶಗಳಿಗೆ ಅನುಮತಿ ನೀಡಿರುವ ಮಿತಿಗಿಂತ (ಹಗಲಿನಲ್ಲಿ 75 ಡೆಸಿಬಲ್, ರಾತ್ರಿಗೆ 70 ಡೆಸಿಬಲ್) ಹೆಚ್ಚಿನ ಡೆಸಿಬಲ್ ಶಬ್ದವನ್ನು ಮೈಕಾಸುರರು ಹೊರ ಹಾಕುತ್ತಾರೆ. ಕೆಲವು ಮೈಕಾಸುರರು 100 ಡೆಸಿಬಲ್‌ಗಿಂತ ಹೆಚ್ಚಿನ ಸದ್ದು ಮಾಡಿ, ಕಿವಿ ತೂತು ಮಾಡುತ್ತಾರೆ.

ವಸತಿ ಪ್ರದೇಶದಲ್ಲಿ ಲೌಡ್ ಸ್ಪೀಕರ್‌ಗಳು ವಯಸ್ಸಾದವರ, ರೋಗಿಗಳ ಪಾಲಿಗೆ ಮಾರಕವಾಗುತ್ತವೆ ಎಂಬ ಅರಿವೂ ಇಲ್ಲದಂತೆ ಮೈಕ್‌ನ ಸದ್ದು ಹೆಚ್ಚಿಸುವುದು ಸರಿಯಲ್ಲ. ಕಿವಿಗಡಚಿಕ್ಕುವಂತೆ ಮೈಕ್‌ಗಳನ್ನು ಹಾಕುವುದು ನಿಷಿದ್ಧ ಎಂಬ ಸುಪ್ರೀಂಕೋರ್ಟ್ ಆದೇಶಕ್ಕೂ ಮೈಕಾಸುರನ ಹಾವಳಿ ತಡೆಯುವ ಶಕ್ತಿ ಇಲ್ಲದಾಗಿದೆ.

1986ರ ಪರಿಸರ ರಕ್ಷಣೆ ಕಾಯಿದೆಯ ಸೆಕ್ಷನ್ 3ರಲ್ಲಿರುವ ಶಬ್ದ ನಿಯಂತ್ರಣ ನಿಯಮಾವಳಿಗಳು ಲೌಡ್ ಸ್ಪೀಕರ್‌ನ ಅಬ್ಬರದ ಸದ್ದಿನ ನಡುವೆ ಅಡಗಿಹೋಗಿವೆ. ಈಗ ಮೈಕಾಸುರನಿಗೆ ಯಾವುದೇ ಕಡಿವಾಣವಿಲ್ಲ. ಅಂಕುಶ ಹಿಡಿದಿರುವ ಮೂಷಿಕವಾಹನನಿಗೆ ಮೈಕಾಸುರನ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಗಿಲ್ಲ.

'ನಾವು ಕಡಿಮೆ ಸೌಂಡ್ ಇಟ್ಟರೆ ಕಾರ್ಯಕ್ರಮದ ಆಯೋಜಕರು 'ಮೈಕ್ ಸರಿ ಇಲ್ವಾ' ಎಂದು ಪ್ರಶ್ನಿಸುತ್ತಾರೆ. ಕಾರ್ಯಕ್ರಮ ಮುಗಿಯುವವರೆಗೂ ಆಯೋಜಕರು ಹೇಳಿದಂತೆ ಕೇಳಬೇಕಾದ್ದು ನಮಗೆ ಅನಿವಾರ್ಯ' ಎನ್ನುವುದು ಸೌಂಡ್ಸ್ ಸಿಸ್ಟಮ್ಸ್‌ನ ಅಸಹಾಕತೆಯ ನುಡಿ.

ಹಾಗಾದರೆ ಈ ಮೈಕಾಸುರರನ್ನು ತಡೆಯುವುದು ಯಾರು?

**ದಯಾನಂದ**

ಪ್ರಜಾವಾಣಿ 08.09.2014

# ಕಳ್ಳರಪ್ಪ ಕಳ್ಳರು!

ಆಕೆ ಊರಿನ ಪ್ರತಿಷ್ಠಿತರ ಪತ್ನಿ. ಪತಿ ಸಾಕಷ್ಟು ಹಣವಂತರು. ಇವರಿಲ್ಲದೆ ಊರಿನ ಯಾವುದೇ ಮನೆಯ ಒಲೆ ಉರಿಯುವುದಿಲ್ಲ ಎಂದು ತಮಾಶೆಯಾಗಿ ಹೇಳಬಹುದಾದಂತಹ ಉದ್ಯಮವೊಂದನ್ನು ನಡೆಸುವವರಾದ್ದರಿಂದ ಎಲ್ಲರಿಗೂ ಬೇಕಾದವರು. 'ಇಂಥವರ ಪತ್ನಿಯಾಗಿದ್ದು ತರಕಾರಿ ಅದೂ ಇದೂ ಸಿಕ್ಕಿದ್ದೆಲ್ಲ ಕದಿಯುತ್ತಾರೆ ಮಾರಾಯ್ರೆ ಗೊತ್ತಾದ್ರೂ ಹೇಳೋ ಹಂಗಿಲ್ಲ ಬಿಡೋ ಹಂಗಿಲ್ಲ' ಎಂದು ಒಬ್ಬರು ಹೇಳಿದ್ದು ಕೇಳಿ ನಗಬೇಕೋ ಅಳಬೇಕೋ ತಿಳಿಯಲಿಲ್ಲ.

ಕದಿಯುವುದು ಅರವತ್ತನಾಲ್ಕು ವಿದ್ಯೆಗಳಲ್ಲಿ ಒಂದೆನ್ನುತ್ತಾರೆ. ಆದರೆ ಕ್ಲೆಪ್ಟೋಮೇನಿಯಾ ಖಾಯಿಲೆಯಿದ್ದವರೂ ಕದಿಯುತ್ತಾರಂತೆ. ಒಂದೆರಡು ವರ್ಷದ ಹಿಂದೆ ಪಶ್ಚಿಮ ಬಂಗಾಳದಿಂದ ಬೆಂಗಳೂರಿಗೆ ಬಂದ ಸಿರಿವಂತ ಕುಟುಂಬದ ಒಬ್ಬಾಕೆ ತಾನುಳಿದ ಗೆಳತಿಯ ಮನೆಯಲ್ಲಿಂದ ವಜ್ರಾಭರಣವನ್ನು ಕದ್ದು ಧರಿಸಿ ಫೇಸ್ ಬುಕ್ಕಲ್ಲಿ ಫೋಟೋ ಹಾಕಿಕೊಂಡು ಸಿಕ್ಕಿಬಿದ್ದಮೇಲೆ ಆಕೆ ಕ್ಲೆಪ್ಟೋಮೇನಿಯಾ ರೋಗಿ ಎಂಬ ಆ ಕಳ್ಳಿಯ ಪಿಳ್ಳೆ ನೆವ ಜಗಜ್ಜಾಹೀರಾಗಿತ್ತು. ಪ್ರಖ್ಯಾತ ನಟಿ ಮಣಿಯೊಬ್ಬಳು ವಿದೇಶದಲ್ಲಿ ಶಾಪಿಂಗ್ ಮಾಡುವಾಗ ಕದಿಯಬಾರದ್ದನ್ನು ಕದ್ದು ಸಿಕ್ಕಿಬಿದ್ದು ಸುದ್ದಿಯಾಗಿದ್ದಳಂತೆ.

ನಗರ ಪ್ರದೇಶಗಳಲ್ಲಿ ಹಾಡುಹಗಲೇ ಮಹಿಳೆಯರ ಮಾಂಗಲ್ಯ ಸರ(ಪುರುಷರ ಮಾಂಗಲ್ಯ ಸರವೂ ಇರುತ್ತದೆಯೇ ಎನ್ನಬೇಡಿ. ರೂಢಿ ಮಾತಿಗೆ ಬರೆಯಬೇಕಾಯಿತು) ಎಗರಿಸುತ್ತಾರಂತೆ. ಕೆಲ ಪೋಲಿಸ್ ವೇಷಧಾರಿಗಳು ನಿಮ್ಮ ಮಾಂಗಲ್ಯಸರ ಕೊಡಿ ಪ್ಯಾಕ್ ಮಾಡಿಕೊಡುತ್ತೇವೆ. ಕತ್ತಿನಲ್ಲಿದ್ದರೆ ನಿಮ್ಮ ಕತ್ತಿಗೇ ಸಂಚಕಾರ ಎಂದು ಚೆನ್ನಾಗಿ ಪ್ಯಾಕ್ ಮಾಡಿದ ಕಲ್ಲನ್ನು ಮಾಂಗಲ್ಯಸರಕ್ಕೆ ಬದಲಾಗಿ ಕೊಟ್ಟ ಉದಾಹರಣೆಗಳೂ ಇವೆ. ಪಿಕ್ ಪಾಕೆಟ್ ಅಂತೂ ಸರ್ವವ್ಯಾಪಿ.

ನಮ್ಮ ರಾಜ್ಯದ ರಾಜಧಾನಿಯ ಕಳ್ಳರ ಕತೆಗಳನ್ನು ಕೇಳುವುದೇ ಬೇಡ. ಇತ್ತೀಚೆಗೆ ಬೆಂಗಳೂರಿನಿಂದ ನಮ್ಮೂರಿಗೆ ಕೆಲವರು ಬಂದಿದ್ದರು. ಅವರೆಲ್ಲ ಅವರ ವಸ್ತುಗಳನ್ನು ಮುಚ್ಚಿ ಮುಚ್ಚಿ ಇಡುತ್ತಿದ್ದುದನ್ನು ನೋಡಿ, 'ನಿಶ್ಚಿಂತರಾಗಿರಿ ನಮ್ಮೂರಲ್ಲಿ ಯಾವುದೇ ಕಳ್ಳತನವಾಗುವುದಿಲ್ಲ. ಮೊಬೈಲ್ ಫೋನು ಮುಂತಾದ ವಸ್ತುಗಳು ಸಿಕ್ಕರೂ ಮಾಲಿಕರಿಗೆ ತಲುಪಿಸುತ್ತಾರೆ, ಮಣ ಬಂಗಾರ ತೊಟ್ಟು ತಿರುಗಿದರೂ ನಿರಾತಂಕವಾಗಿ ಮನೆ ತಲುಪುತ್ತಾರೆ, ಕೀಯನ್ನು ಬೈಕು–ಕಾರಿನಲ್ಲೇ ಬಿಟ್ಟು ವಾರಗಳ

ತನಕ ರಸ್ತೆ ಪಕ್ಕ ನಿಲ್ಲಿಸಿದರೂ ಕಳ್ಳರು ಕದಿಯುವುದಿರಲಿ ಪೋಲೀಸರೂ ಬಂದು ಟೋ ಮಾಡಿಕೊಂಡು ಹೋಗುವುದಿಲ್ಲ, ಮನೆಗೆ ಬೀಗ ಹಾಕುವುದು ಬಿಡಿ ಬಾಗಿಲನ್ನೇ ತೆರೆದಿಟ್ಟರೂ ಯಾರೂ ಕಳ್ಳರು ನುಗ್ಗುವುದಿಲ್ಲ' ಎಂದೆಲ್ಲ ನಮ್ಮೂರಿನ ವಿಚಾರ ಹೇಳಿ ಅವರ ಭಯವನ್ನು ಕಡಿಮೆ ಮಾಡಿ ಮನುಷ್ಯರ ಮೇಲೆ ನಂಬಿಕೆ ಹುಟ್ಟಿಸಲು ಪ್ರಯತ್ನಿಸಿದೆವಾದರೂ ಎಡವಟ್ಟೇ ಆಯಿತು. ಎಲ್ಲರೂ ನಮ್ಮನ್ನೇ ಮೋಸಗಾರರೆಂದು ಅನುಮಾನಪಟ್ಟು ಇನ್ನೂ ಜಾಸ್ತಿ ಭಯಭೀತರಾದಂತೆ ಗೋಚರಿಸತೊಡಗಿದರು! ತಾನು ಕಳ್ಳ ಪರರನ್ನು ನಂಬ ಎಂಬ ಮಾತಿನಂತೆ ಒಬ್ಬ ವ್ಯಕ್ತಿ ನಮ್ಮ ಗೆಸ್ಟ್ ರೂಮಿನಲ್ಲಿ ಹಗಲಿಗೇ ಲೈಟು, ಫ್ಯಾನು ಹಾಕಿ, ಯಾರೋ ಈ ಬಿಸಿಲ ಧಗೆಯ ದಿನಗಳಲ್ಲಿ ದಪ್ಪನೆಯ ಎರಡು ರಗ್ಗು ಹೊದ್ದು ಉದ್ದೂದ್ದಕ್ಕೆ ಮಲಗಿದ್ದಂತಿತ್ತು. ನಾವು, ಎಲ್ಲರೂ ಹೊರಗಿರುವಾಗ ಇಲ್ಲಿ ಮಲಗಿರುವ ಭೂಪನಾರು ಎಂದು ಮೆಲ್ಲನೆ ರಗ್ಗು ತೆಗೆದರೆ ರಗ್ಗಲ್ಲ ಯಾರೂ ಕಳ್ಳತನ ಮಾಡಬಾರದೆಂದು ಮುಚ್ಚಿಟ್ಟ ಬ್ಯಾಗುಗಳು!

ಕಳ್ಳತನಕ್ಕೆ ದೊಡ್ಡದು ಚಿಕ್ಕದೆಂಬ ಭೇದವಿಲ್ಲ. ಆನೆ ಕದ್ದರೂ ಕಳ್ಳ ಅಡಿಕೆ ಕದ್ದರೂ ಕಳ್ಳ ಎನ್ನುತ್ತಾರಲ್ಲವೇ? ಹಾಗೆಯೇ ಕದಿಯುವುದಕ್ಕೆ ವಸ್ತು ವಿಷಯ ಅಂತೇನಿಲ್ಲ. ಏನು ಬೇಕಾದರೂ ಕಳ್ಳತನವಾಗಬಹುದು. ಪ್ರೇಮಿಗಳು ಹೃದಯ ಕದಿಯುತ್ತಾರಂತೆ, ಕೆಲವರು ಕಿಡ್ನಿ ಮುಂತಾದ ಅಂಗಾಗಗಳಿಗೇ ಕತ್ತರಿ ಹಾಕಿ ಎಗರಿಸಿಬಿಡುತ್ತಾರಂತೆ. ಆದರೆ ಸಾಹಿತಿಗಳಿಗೆ ಕೃತಿ ಚೌರ್ಯದ್ದೇ ಭೀತಿ! ಇಲ್ಲೊಬ್ಬಾಕೆ ಬೇಂದ್ರೆ, ಕುವೆಂಪುರವರ ಪ್ರಸಿದ್ಧ ಕವಿತೆಗಳನ್ನೇ ಕದ್ದು ಪುಸ್ತಕ ಪ್ರಕಟಿಸಿದ್ದರೂ ಜಾಣ ಕುರುಡು ಪ್ರದರ್ಶಿಸುತ್ತಿರುವ ಕೆಲ ಸಾಹಿತಿಗಳನ್ನು ನೋಡುವಾಗ ನಿಜವಾಗ ಕಳ್ಳ ಮನಸ್ಸು ಯಾರದ್ದೆಂದು ಗೊಂದಲವಾಗುತ್ತದೆ. ಎರಡು ವರ್ಷಗಳ ಹಿಂದೆ ಪ್ರಕಟವಾದ ಕವನ ಸಂಕಲನವೊಂದರಲ್ಲಿ ಕವಿ ಪುಂಗವನೊಬ್ಬ ಕವಿ ನಿಸಾರ ಅಹಮದ್‌ರವರ ನಿತ್ಯೋತ್ಸವ ಕವಿತೆಯನ್ನೇ ಕದ್ದು ಪ್ರಕಟಿಸಿದ್ದ! ನಾನು ನಾಲ್ಕನೇ ತರಗತಿಯಲ್ಲಿ ಬರೆದ ಹನಿ ಕವಿತೆಗಳನ್ನು ಪದವಿ ವಿದ್ಯಾರ್ಥಿನಿಯೊಬ್ಬಳು ಕದ್ದು, ಅವು ಕಾಲೇಜಿನ ಸ್ಮರಣ ಸಂಚಿಕೆಯಲ್ಲಿ ಆಕೆಯ ಹೆಸರಿನಲ್ಲಿ ಪ್ರಕಟವಾಗಿದ್ದವು. ಹಾಗಂತ ಸಾಹಿತಿಗಳ ಮನೆಗೆ ದರೋಡೆಗೆ ಹೋದರೆ ಅಲ್ಲೇನೂ ಗಿಟ್ಟುವುದಿಲ್ಲ. ಬದಲಿಗೆ ಕಳ್ಳರೇ ಅನುಕಂಪ ತೋರಿ ಏನಾದರೂ ಇಟ್ಟು ಹೋಗಬೇಕಾಗುತ್ತದೆ! ಫೇಸ್ ಬುಕ್ ಕಳ್ಳತನದ ಬಗ್ಗೆ ಕೇಳುವುದೇ ಬೇಡ. ಹೆಣ್ಣುಮಕ್ಕಳ ಫೋಟೋಗಳು, ಕವಿತೆಗಳು, ಜೋಕುಗಳು, ವಿಚಾರಗಳು ಗೊತ್ತೇ ಆಗದಂತೆ ದುರುಪಯೋಗವಾಗುವುದಿದೆ.

ಹಾಗಾದರೆ ಈ ಕಳ್ಳತನ ಮೊಳಕೆ ಒಡೆಯುವುದಾದರೂ ಹೇಗೆ? ಚಿಕ್ಕ ಮಕ್ಕಳನ್ನು ಛೀ ಕಳ್ಳ ಎಂದು ಮುದ್ದಿಸುತ್ತಾರೆ. ಮಕ್ಕಳು ಆರಂಭದಲ್ಲಿ ಆಡುವ ಆಟವೇ ಕಳ್ಳ ಪೋಲಿಸ್. ಚಿಕ್ಕಂದಿನಲ್ಲಿ ಪೋಲಿಸ್ ಆದವರೇ ಮುಂದೆ ಕಳ್ಳರಾಗಿಬಿಡುವುದು ವಿಪರ್ಯಾಸವೇ ಸರಿ. ಚಿಕ್ಕವರಿರುವಾಗ ಅವರಿವರ ಬೇಲಿಯಲ್ಲಿನ ಪೇರಲೆ, ಮಾವಿನ ಮಿಡಿ ಕದಿಯುವುದು ಸಾಮಾನ್ಯ. ಆದರೆ ಈಗಿನ ಖಾಸಗಿ ಶಾಲೆಯಲ್ಲಿ ಕಲಿಯುವ ಮಕ್ಕಳಿಗೆ ಅದಕ್ಕೆಲ್ಲ ಪಾಪ ಪುರುಸೊತ್ತೇ ಇರುವುದಿಲ್ಲ. ಶಾಲೆಗಳಲ್ಲಿ ಮಕ್ಕಳು ಪೆನ್ಸಿಲ್ಲು ರಬ್ಬರು ಏನೇನೋ ಕದಿಯುವುದು ನೋಡುತ್ತೇವೆ. ಪರೀಕ್ಷೆಗೆ ನಾಲ್ಕು ದಿನ ಇದೆಯೆನ್ನುವಾಗ ಯಾರೋ ಕಿಲಾಡಿಗಳು ನನ್ನ ನೋಟ್ಸನ್ನು ಕದ್ದು ಕೊನೆಗೆ ಸಿಕ್ಕಿಬೀಳುವ ಸಂದರ್ಭ ಬಂದಾಗ ಪಾಪದ ಹುಡುಗಿಯೊಬ್ಬಳ ಬ್ಯಾಗಿನಲ್ಲಿ ಹಾಕಿಟ್ಟಿದ್ದರು. ಇದ್ದವರು ಮೂರು ಕದ್ದವರು ಯಾರು ಎಂಬಂತಾಗಿ ಕಳ್ಳರು ಯಾರೆಂದು ಕೊನೆಗೂ ತಿಳಿಯಲೇ ಇಲ್ಲ!

ನಾಲ್ಕು ವರ್ಷಗಳ ಕೆಳಗೆ ನಮ್ಮ ಅಕ್ಕ ಪಕ್ಕದಲ್ಲೆಲ್ಲ ಕಟ್ಟಡ ಕಾಮಗಾರಿ ನಡೆಯುತ್ತಿತ್ತು. ಆಗ ಅದು ಯಾವ ಮಾಯೆಯಲ್ಲಾದರೂ ನಮ್ಮ ಬಡಾವಣೆಯ ಹೆಂಗಸರ ಒಳ ಉಡುಪುಗಳು ಮಂಗಮಾಯವಾಗುತ್ತಿದ್ದವು. ಕಳ್ಳ ಚಿಗುರು ಮೀಸೆಯ ಕಾರ್ಮಿಕನಾಗಿದ್ದ. ಕುಂಬಳ ಕಾಯಿ ಕಳ್ಳ ಎಂದರೆ ಹೆಗಲುಮುಟ್ಟಿ ನೋಡಿಕೊಂಡಿದ್ದರಿಂದ ಇವನೇ ಕಳ್ಳ ಎಂದು ಗೊತ್ತಾಗಿತ್ತು. ನಂತರ ನಮ್ಮ ರಸ್ತೆಯ ಕೆಲ ಮಕ್ಕಳು ಅವನನ್ನು ಕಂಡಾಕ್ಷಣ "ಆಂಟಿ ನಾನು ದೇವರಾಣೆ ಬಟ್ಟೆ ಕದ್ದಿಲ್ಲಾ.. ಎಲ್ಲ ಸೇರಿ ನನ್ನ ಬ್ಯಾಗಿಗೆ ಬಟ್ಟೆಯ ತುರುಕಿದರಾಂಟಿ..." ಎಂದು ಹಾಡತೊಡಗಿದ್ದವು. ಇದನ್ನು ಕೇಳಿದ ಬಟ್ಟೆ ಕಳ್ಳ ಮುಖ ಹುಳ್ಳುಳ್ಳಗೆ ಮಾಡಿಕೊಳ್ಳುತ್ತಿದ್ದ.

ಕಳ್ಳರನ್ನು ನಂಬಿದರೂ ಕುಳ್ಳರನ್ನು ನಂಬಬಾರದು ಎಂಬ ಮಾತಿದೆ. ಹಾಗೆಂದು ಕಳ್ಳರಾದವರೆಲ್ಲ ಉದ್ದುದ್ದಕ್ಕೆ ಇರುತ್ತಾರೆ ಎನ್ನುವಂತಿಲ್ಲ. ಧೂಮ್ ತ್ರೀ ಸಿನೆಮಾದಲ್ಲಿ ನಟ ಮಿಸ್ಟರ್ ಪರ್ಫೆಕ್ಷನಿಸ್ಟ್ ಆಮೀರ್ ಖಾನ್ ಕಳ್ಳನಾಗಿರುವುದನ್ನು ನೋಡಿದರೆ ನಿಮಗೆ ನನ್ನ ಮಾತಿನ ಮೇಲೆ ನಂಬಿಕೆ ಬರಬಹುದು! ಕಳ್ಳತನದ ಕುರಿತೇ ಇರುವ ಈ ಧೂಮ್ ಸಿನಿಮಾ ಸರಣಿ ಹಣ ಕೊಳ್ಳೆಹೊಡೆದದ್ದು ನಾವು ಕಣ್ಣಾರೆ ನೋಡಿದ್ದೇವೆ.

ರಾಬಿನ್ ಹುಡ್ ಎಂಬ ಪ್ರಖ್ಯಾತ ಕಳ್ಳನ ಕುರಿತ ದಂತಕತೆಗಳನ್ನು ನಾವೆಲ್ಲ ಕೇಳಿ ಬಲ್ಲೆವು. ನಮ್ಮೂರಲ್ಲಿ ಚೋರ್ ಗುಂಡು ಎಂಬ ಕಳ್ಳನಿದ್ದನಂತೆ. ಅವನು ನಿನ್ನ ಮನೆಯಲ್ಲಿ ಇಂಥ ಹೊತ್ತಲ್ಲಿ ಇಂಥದ್ದನ್ನೇ ಕದಿಯುತ್ತೇನೆ ಎಂದು ಹೇಳಿಯೇ ಹೋಗಿ ಕದ್ದುಬಿಡುವ ಚಾಣಾಕ್ಷನಿದ್ದನಂತೆ. ಹಾಗೆ ಹೋಗುವ ಮುನ್ನ ಚರ್ಚಿನ ಸಂತ ಅಂತೋನಿಯವರ ಪ್ರತಿಮೆಗೆ ನಾನು ಸಿಕ್ಕಿಬೀಳದಂತೆ ನೋಡಿಕೋ ಎಂದು ಎಚ್ಚರಿಕೆ

ಕೊಟ್ಟು ಹೋಗುತ್ತಿದ್ದನಂತೆ. ಒಮ್ಮೆ ಪೋಲೀಸರ ಕೈಗೆ ಸಿಕ್ಕಿಬಿದ್ದಾಗ ಸಂತ ಅಂತೋನಿಯವರ ಪ್ರತಿಮೆಯ ಕೈ ಮುರಿದುಹಾಕಿದ್ದನಂತೆ. ಆ ಕಳ್ಳ ಕದ್ದು ನೆಲದಲ್ಲಿ ಹುಗಿದಿಟ್ಟ ಒಡವೆಗಳು ಇಲ್ಲಿನ ಬಹಳಷ್ಟು ಮಂದಿಗೆ ನೆಲ ಅಗಿಯುವಾಗ ಸಿಕ್ಕಿವೆ ಎಂಬ ಪ್ರತೀತಿಗಳೂ ಅವನ ಕಳ್ಳತನದ ರೋಚಕ ದಂತಕತೆಗಳೂ ಕೂಡ ಚಾಲ್ತಿಯಲ್ಲಿವೆ. ಇನ್ನು ದಂತ ಚೋರ ವೀರಪ್ಪನ್ ನಮ್ಮ ಕಾಲದ ದಂತಕಥೆ ಎಂದರೆ ತಪ್ಪಲ್ಲ.

ಬೆಣ್ಣೆ ಕದ್ದ ನಮ್ಮ ಕೃಷ್ಣ ಬೆಣ್ಣೆ ಕದ್ದನಮ್ಮ ಎನ್ನುವ ಹಾಡನ್ನು ಕೇಳುವಾಗ ಕೃಷ್ಣ ಪರಮಾತ್ಮನೂ ಬೆಣ್ಣೆ ಕದ್ದು ತರಬೇತಿ ಹೊಂದಿ ಆಮೇಲೆ ಗೋಪಿಕೆಯರ ಹೃದಯ ಕದಿಯುವುದರಲ್ಲಿ ಪರಿಣತನಾದ ಎನಿಸುತ್ತದೆ.

ಒಬ್ಬಾಕೆ ಸಂತೆಗೆ ಹೋದಳೆಂದರೆ ಹಣ ಕೊಟ್ಟು ಕೊಂಡ ಸಾಮಾನಿಗಿಂತ ಕದ್ದ ಮಾಲೇ ಜಾಸ್ತಿ ಇರುತ್ತಿತ್ತಂತೆ. ಚೋರ್ ಗುರುವಿಗೆ ಚಂಡಾಳ ಶಿಷ್ಯ ಎಂಬ ಮಾತಿನಂತೆ ಈಕೆಯ ಜೊತೆ ಸಂತೆಗೆ ಹೋಗುತ್ತಿದ್ದ ಒಂದಿಬ್ಬರು ಹುಡುಗಿಯರು ತಾವೂ ಕಳ್ಳತನ ಕಲಿತು ಗುರುವನ್ನೇ ಮೀರಿಸಿದರಂತೆ.

ನಮ್ಮೂರಿನ ಬಟ್ಟೆ ಅಂಗಡಿಯಲ್ಲಿ ಒಬ್ಬಾಕೆ ಸೀರೆ ಹುಡುಕಿ ಆರಿಸಿ ಸೋಸಿ ಒಂದು ಸೀರೆಯನ್ನು ಕೌಂಟರಿಗೆ ತಂದುಕೊಟ್ಟು ಬಿಲ್ ಹಾಕಲು ಹೇಳಿದಾಗ ಅಂಗಡಿಯವ ಎರಡು ಸೀರೆಯ ಬಿಲ್ ಹಾಕಿದನಂತೆ. ಅವಳು ಅದೇಕಿಷ್ಟು ಬಿಲ್ಲು ಎಂದು ಜಗಳವಾಡಿದಳಂತೆ. ಅಂಗಡಿಯಾತ ತಣ್ಣಗೆ ಸಿ.ಸಿ.ಟಿವಿ ಕಡೆ ಬೆರಳು ತೋರಿಸಿದಾಗ ಮರುಮಾತಿಲ್ಲದೆ ಮಹಿಳೆ ಹಣ ಕೊಟ್ಟು ಹೋದಳಂತೆ. ಅವಳ ಚೀಲದಲ್ಲಿ ಇನ್ನೊಂದು ಸೀರೆ ಮುದುರಿ ಅಡಗಿ ನಡುಗುತ್ತಿತ್ತಂತೆ!

ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬರದು ಎಂಬ ಮಾತಿದೆ. ಆದರೆ ಕಲಿತಿದ್ದು ಬಿಡೇ ಕಳ್ಳ ಮುಂಡೆ ಅಂದ್ರೆ ಅರ್ಧಕ್ಕೆ ಬಿಟ್ಟು ಮಣ್ಣು ತಿನ್ನಲೇ ಅಂದಳಂತೆ ಎನ್ನುವ ಗಾದೆಯಂತೆ ಕೆಲವರು ಜೈಲು ಸೇರಿದರೂ ಒಳ್ಳೆಯತನ ಕಲಿಯುವುದೇ ಇಲ್ಲ. ಹೀಗಾಗಿ ಅದಿರೇ ಇರಲಿ, ಭೂಮಿಯೇ ಇರಲಿ ಕಬಳಿಸುತ್ತಾರೆ. ಮಾಹಿತಿಗಳನ್ನು ಹ್ಯಾಕ್ ಮಾಡುವುದಿರಲಿ ವಿಮಾನಗಳನ್ನೇ ಹೈಜಾಕ್ ಮಾಡುವುದಿರಲಿ ಲೀಲಾಜಾಲವಾಗಿ ಮಾಡಿಬಿಡುತ್ತಾರೆ.

ಆಸ್ಪತ್ರೆಗಳಲ್ಲಿ ನವಜಾತ ಶಿಶುಗಳ ಕಳ್ಳತನ ನಡೆಯುತ್ತಿರುವುದೂ ಇಂದಿನ ಮಾಮೂಲು ಸುದ್ದಿಗಳಲ್ಲಿ ಒಂದು. ಆಸ್ಪತ್ರೆ ಎಂದಾಕ್ಷಣ ನೆನಪಾಯಿತು. ಒಮ್ಮೆ ವೈದ್ಯರೊಬ್ಬರು, 'ಕೆಲ ಒಳ ರೋಗಿಗಳು ಆಸ್ಪತ್ರೆಯ ಹೊದಿಕೆ, ದಿಂಬು, ಕತ್ತರಿ, ಕಿಡ್ನಿ ಟ್ರೇ(ಕಿಡ್ನಿಯಾಕಾರದ ಟ್ರೇ) ಇತ್ಯಾದಿಗಳನ್ನೂ ಕದ್ದೊಯ್ಯುತ್ತಾರೆ' ಎಂದಿದ್ದರು. ಮನೆಗೆ ಬಂದ ಅತಿಥಿಗಳಿಗೆ

ಕತ್ತರಿಸಿದ ಪಿತ್ಥ ಕೋಶ, ಕಿಡ್ನಿ ಕಲ್ಲು ಇತ್ಯಾದಿ ಹಾಕುವ ಈ ಕಿಡ್ನಿ ಟ್ರೇಗಳಲ್ಲಿ ಊಟಕ್ಕೆ ಪಲ್ಯವನ್ನೋ, ಸಾರನ್ನೋ, ಬಿಸ್ಕತ್ತು–ಖಾರಾವನ್ನೋ ಬಡಿಸಿಕೊಟ್ಟರೆ ಹೇಗಿರಬಹುದು ಒಮ್ಮೆ ಊಹಿಸಿಕೊಳ್ಳಿ!

ಹೀಗೆ ಕಳ್ಳರು ಮಹಾ ಮಳ್ಳರಂತಿದ್ದು ಕದಿಯುವ ಉಪಾಯಗಳನ್ನು ಬರಹಗಾರರಾದ ನಾವು ಕದ್ದು ಬರೆಯುವುದು ಅಷ್ಟು ಸುಲಭವಲ್ಲ. ಕಳ್ಳತನಕ್ಕೆ ಕಾರಣ ನಮ್ಮ ದೌರ್ಬಲ್ಯವೇ. ಒಬ್ಬ ಪೋಲೀಸು ನಿನ್ನ ಬಳಿ ರಿವಾಲ್ವರ್ ಇದ್ದರೂ ಕಳ್ಳ ನಿನ್ನ ಮನೆಯ ದರೋಡೆ ಹೇಗೆ ಮಾಡಿದ ಎಂದರೆ ಆತ, ರಿವಾಲ್ವರನ್ನೂ ಕದಿಯಬಹುದೆಂದು ಬಚ್ಚಿಟ್ಟಿದ್ದೆ ಎಂದನಂತೆ! ಸರ್ವರೂ ಸಂಪದ್ಭರಿತವಾಗಿರಲಿ ಎಂದು ನಿಜವಾದ ಕಾಳಜಿಯಿಂದ ಬಯಸುವವರು ಕಳ್ಳರು ಮಾತ್ರ ಎಂಬ ತಮಾಶೆಯ ಮಾತಿನೊಂದಿಗೆ ಈ ಕಳ್ಳರ ಕತೆ ಮುಗಿಸುವೆ.

**ಮುದ್ದು ತೀರ್ಥಹಳ್ಳಿ**

ಎಚ್ಚರಿಕೆ ಪತ್ರಿಕೆ, ೨೦೧೪

# ಕಡು ಬೇಸಿಗೆ ಅಮಲ್ತಾಸ್

ಫಾಲ್ಗುಣಕ್ಕಲ್ಲವೇ ನಾನು ಬಂದಿದ್ದು ಇಲ್ಲಿ. ಫಾಲ್ಗುಣ ಕಳೆದು ವಸಂತದ ಆಗಮನದ ಮುನ್ಸೂಚನೆಯಂತೆ ಅಕ್ಕಪಕ್ಕದ ಬೇವಿನ ಮರ, ಅರಳೀಮರದಲ್ಲಿ ಎಲೆಗಳೆಲ್ಲಾ ಉದುರಿ ಬೋಳಾಗಿ ಮತ್ತೆ ಕೊನರಿಕೊಳ್ಳುವ ಸಂಭ್ರಮ. ಅಲ್ಲಲ್ಲಿ ಹಸಿರೆಲೆ ಕಾಣದಷ್ಟು ಅಮಲ್ಟಾಸ್ ಮರದಲ್ಲಿ ಹಳದಿಹೂಗಳ ಗೊಂಚಲು ಗೊಂಚಲು ತೊನೆದಾಟ. ಗುಲ್ ಮೊಹರ್ ಜಾತಿಗೆ ಸೇರಿದ ಅಮಲ್ಟಾಸ್ ವಸಂತದ ಸ್ವಾಗತಕ್ಕೆಂದೇ ಅರಳಿಕೊಂಡಂತಿದ್ದು ಮೇ, ಜೂನ್, ಕಡು ಬಿಸಿಲಲ್ಲಿ ಹಳದೀ ಬಣ್ಣದ ದ್ರಾಕ್ಷಿ ಗೊಂಚಲು ಗೊಂಚಲಿನಂತೆ ತೂಗುವ ಮರ ಕಣ್ಣಿಗೆ ಹಬ್ಬ. ಕೆಟ್ಟ ಬಿಸಿಲಲ್ಲಿ ಇದಕ್ಕೇನು ಸಂಭ್ರಮವೋ ಗೊತ್ತಿಲ್ಲ. ಎಲೆಗಳನ್ನೆಲ್ಲ ಕಳಚಿಕೊಂಡು ಬರೀ ಹಳದೀ ಗೊಂಚಲು ತೂಗಾಡುವ ಝೂಮರ್ ನಂತೆ ಒಮ್ಮೆ, ಗೆಜ್ಜೆಗಳ ಗೊಂಚಲು ತೆರ ತೊನೆದಾಡುತ್ತಿರುತ್ತವೆ. ಇದರ ಜೊತೆಗೆ ಗುಲ್ ಮೊಹರಿನ ಸಾಮ್ರಾಜ್ಯ. ಮೈ ತುಂಬಾ ಹೂ ಹೊದ್ದ ಬೊಗನ್ ವಿಲ್ಲಾಗಳ ಬಣ್ಣದ ಮೆರವಣಿಗೆಯೂ ಈ ಬೇಸಿಗೆಗೆ ಎಲ್ಲಿಲ್ಲದ ಮೆರಗು ನೀಡಿರುತ್ತವೆ. ಈ ಮರಗಳಿಗೆ ಹಳೆ ಎಲೆಗಳನ್ನುದುರಿಸಿ ಚಿಗುರೊಡೆಯುವ ಹೊಸತನ ಹೀಗೆ ಈ ವಸಂತ ಋತು ಒಂದು ರೀತಿಯ ಯಾತನೆ–ಉಲ್ಲಾಸ ಒಟ್ಟೊಟ್ಟಿಗೆ. ನನ್ನೂರಿನ ಮನೆ ಹತ್ತಿರದ ಉರ್ದು ಶಾಲೆಯ ಪಕ್ಕದ ಗುಲ್ ಮೊಹರ್ ಕೆಂಪುಹೂಗಳ ರಾಶಿ ಮತ್ತು ಅಲ್ಲೇ ಹತ್ತಿರದ ಮನೆಯ ನನ್ನ ಬಾಲ್ಯದ ಹುಡುಗನ ನೆನಪು ಸುಳಿಯುತ್ತಿತ್ತು. ಮರೆತೇ ಬಿಟ್ಟಿರಬಹುದಲ್ಲ ಈಗವ. ಎಲ್ಲೋ ಅಂಕೋಲೆಯೋ. ಕಾರವಾರದಲ್ಲೋ ಇದ್ದಾನೆ ಎಂದು ಅವ್ವ ಹೇಳಿದ್ದ ನೆನಪು. ಆದರೂ ಇಷ್ಟು ದೊಡ್ಡವಳಾದರೂ ನನಗೆ ನೆನಪಾಗುವುದು ಅದೇ ಖಾಕಿ ಚಡ್ಡಿ, ಮಾಸಲು ಬಣ್ಣದ ಬುಶ್ ಶರಟಿನ ಎಣ್ಣೆಗೆಂಪಿನ, ಚೂಪು ಮೂಗಿನ ಹದಿಮೂರೋ ಹದಿನಾಲ್ಕೋ ವರುಷದ ಅವ. ಅದೇ ರೂಪು ಮತ್ತು ದೆಹಲಿಯ ಬಿರು ಬಿಸಿಲ ಧಗೆಯಲ್ಲಿ ಗುಲ್ ಮೊಹರ್ ಕೆಂಪಿನ ತಂಪು ನೆರಳು ಕಣ್ಣಲ್ಲಿ ಗೂಡುಕಟ್ಟಿದಂತಿದೆ.

ಈಗ ಮುಂದೆಲೆ ಕೂದಲೆಲ್ಲ ಉದುರಿ ತಲೆಬೋಳಾಗಿ, ಕುರುಚಲು ಗಡ್ಡ ಬಿಟ್ಟುಕೊಂಡು ಸಾಬಿಯಂತಾದ ಅವನನ್ನು ನೋಡಿ ಅಯ್ಯೋ ಹೇಗಾಗಿಬಿಟ್ಟ ಇವ ಎಂದು ನಕ್ಕಿದ್ದೆನಾದರೂ ಯಾಕೋ ಸಂಕಟವಾಗಿತ್ತು. ನಮ್ಮ ವಯಸ್ಸೂ ಸಂಜೆ ಬಿಸಿಲಿನಂತೆ ಇಳಿಯುತ್ತಿದೆಯೆಂಬ ಸಾಕ್ಷಿಪ್ರಜ್ಞೆಯೂ ಕಾಡತೊಡಗಿತ್ತು. ನೀನು ಮಾತ್ರ ಹಂಗ ಇದ್ದೀಯಲ್ಲ ಮಾರಾಯತೀ ಎಂದಾಗ ನಿಜಕ್ಕೂ ಬೀಗಿದ್ದೆ ಎನಿಸಿರಲಿಲ್ಲವೇ? ಅವನ ಹೆಂಡತಿ ಕಮಲೆ ನನ್ನ ಶಾಲಾ ಗೆಳತಿ. ಒಮ್ಮೆ ಅವಳಿಗೂ ಮಗುವಾದ ಕಾಲಕ್ಕೆ ನನಗೂ ಮಗುವಾದ ಸಮಯಕ್ಕೆ, ತವರಿನಲ್ಲಿರುವ ಹೆಂಡತಿಯನ್ನೂ, ತನ್ನ ಮಗುವನ್ನು ಪದೇ ಪದೇ ಹೋಗಿ ನೋಡಲಾರದ್ದಕ್ಕೋ, ಮಗುವಿನ ವ್ಯಾಮೋಹಕ್ಕೋ ನಮ್ಮ

ಮನೆಗೆ ಬಂದು, ಬಾಣಂತಿ ಕೋಣೆಯಲ್ಲೇ ಕುಳಿತು ಮಲಗಿದ ನನ್ನ ಮಗುವನ್ನು ತೊಡೆ ಮೇಲಿಟ್ಟುಕೊಂಡು ಗಂಟೆಗಟ್ಟಲೆ ಕುಳಿತು ಮಾತಾಡುತ್ತಿದ್ದ ಅವನನ್ನು, ಮನದಲ್ಲಿ ಮಾಸದೇ ಉಳಿದ ಹೆಸರಿಲ್ಲದ ಆ ನೆನಪುಗಳನ್ನು ಏನೆಂದು ವಿವರಿಸಲಿ? ಅವ್ವ ಬೈಯುತ್ತಿದ್ದಳು 'ನೀನು ಬಾಣಂತಿ ಮಲಗಿ ಆರಾಮ ತಗೋಳ್ಳದೇ ಕೂರಿಸಿಕೊಂಡು ಕೂರ್ತಿಯಲ್ಲ' ಎಂದು. ಹೋಗು– ಎಂದು ಹೇಗೆ ಯಾವ ಬಾಯಿಂದ ಹೇಳಲಿ? ಅವ ಹಾಗೇ ಕೂತಿರಲಿ ಇಲ್ಲೇ ಎಂದು ಒಮ್ಮೊಮ್ಮೆ ಬಯಸುವ ಕಳ್ಳ ಮನಸ್ಸನ್ನು ಅವ್ವ ಅರಿತಿದ್ದಳೇ?

ಸುಡು ಬೇಸಿಗೆಯ ಕಡು ಮಧ್ಯಾಹ್ನದ ಹೊತ್ತು, ಸಂಜೆ ಯಾವಾಗೆಂದರೆ ಆವಾಗ ಎದುರು ಮನೆಯ ಮೇಜರ್ ನ ಹೆಂಡತಿ ಟೆರೇಸ್ ಮೇಲೆ ಟೇಪ್ ರೆಕಾರ್ಡರ್ ಹಾಕಿ ಊರಿಗೆಲ್ಲ ರಫಿ, ಲತಾ ಹಾಡುಗಳನ್ನು ಕೇಳಿಸುತ್ತಿರುತ್ತಾಳೆ. "ಬೇಖುದೀ ಮೇ ಸನಂ, ಉಠ ಗಯೇ ಜೋ ಕದಂ....", "ಆ ಗಯೇ ಪಾಸ ಹಂ..., ಭಂವರಾ ಬಡಾ ನಾದಾನ್ ಹೈ...." ಮತ್ತಿನ್ನೇನೋ. ಇಲ್ಲಿ ಜುಲೈ ತಿಂಗಳು ಹತ್ತಿರವಾದರೂ ಒಂದು ಹನಿ ಮಳೆ ಇಲ್ಲ. ಆಷಾಢದ ಗಾಳಿಯನ್ನು ಮೀರಿಸಿ ಆಂಧೀ ಎಂಬ ಧೂಳಿನ ಸುಂಟರಗಾಳಿಯೋ, ಬಿರುಗಾಳಿಯೋ ಎದ್ದು ಎಲ್ಲವನ್ನೂ ಹಾರಿಸಿಕೊಂಡು ಹೋಗುತ್ತದೆ. ಮನೆತುಂಬ ರಾಜಸ್ಥಾನದ ಮರುಭೂಮಿಯ ಮರಳು ತುಂಬಿಕೊಂಡಂತಾಗಿ ಹಸನುಗೊಳಿಸುವುದರಲ್ಲಿಯೇ ಸಾಕಾಗುತ್ತದೆ. ಹೊರಗಡೆ ಹೋದರೆ ಲೂಊ.. ಎಂಬ ಬಿಸಿಹವೆ ಮುಖಕ್ಕೆ ಅಡರಿ ಬೇನೆ ಬೀಳಬಹುದು. ಅಕ್ಕ ಪಕ್ಕದವರನ್ನು ನಾನು ಇಲ್ಲಿ ಮಳೆಯಾಗುವುದಿಲ್ಲವೇ? ಮಳೆಗಾಲ ಯಾವಾಗ ಎಂದೆಲ್ಲ ಮುಗ್ಧ ನಿರಾಸೆಯಿಂದ ಕೇಳುವಾಗ ಅವರೆಲ್ಲರ ಮುಖಭಾವ ಕನಿಕರ ತೋರುತ್ತಿದ್ದಾರೆಂಬಂತೆ ಕಾಣುತ್ತಿತ್ತು. ಓಹೋ ಯಾಕಿಲ್ಲ? ಆಗುತ್ತದೆ ಇಲ್ಲಿ ಜುಲೈ 7 ಕ್ಕೆ ಇಲ್ಲಿ ಮನ್ಸೂನ್ ಎಂದಿದ್ದರು. ಇಲ್ಲಿನ ಸೆಕೆ, ಬೇಗೆಗೆ ಉಣ್ಣುವ, ತಿನ್ನುವ ಬಯಕೆಯನ್ನು ತಣಿಸದ ತರಕಾರಿಗಳು ನಾನು ನಮ್ಮೂರಿನ ಶಾಲ್ಮಲೆಯನ್ನೂ, ಮಳೆಗಾಲವನ್ನೂ ಹಂಬಲಿಸುವಂತೆ ಮಾಡಿದ್ದವು. ಬಾಲ್ಯದಲ್ಲಿ ಗೋಕರ್ಣ ಹಾಗೂ ಗೋವೆಯ ಕಡಲನ್ನು, ಮಳೆಗಾಲದ ಭೋರ್ಗರೆಯುವ ರೌದ್ರತೆವನ್ನೂ, ಬೇಸಿಗೆಯ ಹೊಂಬಣ್ಣದ ಸೊಬಗು, ಇಳಿಸಂಜೆಗೆ ಕಡಲ ಒಡಲಲ್ಲಿ ಲೀನವಾಗುವ ರವಿ, ಮೇಲೆ ಶುಭ್ರ ಆಗಸದಲ್ಲಿ ಬೆಳ್ಳಿಯ ಹಾಲು ನೊರೆಯುವ ಚಂದ್ರನ ಬೆಳದಿಂಗಳ ಸ್ವಪ್ನಲೋಕವನ್ನೇ ಕಟ್ಟಿಕೊಂದ ನನಗೆ ಈ ಊರು ಬೆಂಗಾಡು, ಶಾಪಗ್ರಸ್ತ ಊರು ಎನಿಸುತ್ತಿತ್ತು. ಕುರುಕ್ಷೇತ್ರದ ಯುದ್ಧದ ಸರ್ವನಾಶ, ರಕ್ತದ ಹೊಳೆಯ ರೌರವವನ್ನು ಕಲ್ಪಿಸಿಕೊಳ್ಳುತ್ತಿದ್ದೆ. ಇದೆಲ್ಲ ಸ್ಮಶಾನ ಭೂಮಿಯೇ ಎನಿಸುತ್ತಿತ್ತು.

ಇಂಥ ಬಿರು ಬೇಸಿಗೆಯಲ್ಲೇ ಅವ ಮತ್ತು ಕಮಲೆ ದೆಹಲಿಗೆ ಆಗಮಿಸಿದ್ದರು.

ಅವನಿಗೆ ಯಾವುದೋ ಕಛೇರಿ ಕೆಲಸದ ನಿಮಿತ್ತವಂತೆ. ನಮ್ಮ ಮನೆಯ ಹತ್ತಿರವೇ ಇನ್ನೊಂದು ಕನ್ನಡದ ಕುಟುಂಬ ಸುಜಾತಾ ಮತ್ತು ಪ್ರಕಾಶ್ ಹಡಗಲಿ ಎಂಬವರು. ಹುಬ್ಬಳ್ಳಿಯವರು ಮತ್ತು ಅವನ ಆಪ್ತ ಗೆಳೆಯ. ಆಗ ಪ್ರಕಾಶ್ ಒಬ್ಬನೇ ಇದ್ದುದರಿಂದ ಇವರು ಅಲ್ಲೇ ಉಳಿದುಕೊಂಡಿದ್ದರು. ಕಮಲೆಗೆ ದೆಹಲಿ ತೋರಿಸುವ ಸುತ್ತಿಸುವ ಕೆಲಸ ನನಗೆ ವಹಿಸಿಕೊಟ್ಟಿದ್ದ ಅವ ನಿಶ್ಚಿಂತೆಯಿಂದ ತನ್ನ ಕೆಲ್ಸಕ್ಕೆ ಹೊರಟುಬಿಡುತ್ತಿದ್ದ. ನಾನು ಕಮಲೆ ಹೈಸ್ಕೂಲ್ ಗೆಳತಿಯರಾದರೂ ಅವಳ ಗೆಳತಿಯರ ಗುಂಪೇ ಬೇರೆ, ನನ್ನ ಗುಂಪೇ ಬೇರೆ. ನಾವೆಂದೂ ಹೆಚ್ಚು ಬೆರೆತವರಲ್ಲ. ಇಲ್ಲಿ ನಾವಿಬ್ಬರೂ ಮತ್ತೆ ಮರಳಿ ಶಾಲಾ ದಿನಗಳನ್ನು, ಗೆಳತಿಯರನ್ನು, ನಮಗೆ ಕಲಿಸಿದ ಟೀಚರು, ಮೇಷ್ಟ್ರನ್ನು ನೆನಪಿಕೊಳ್ಳುವಂತಾದೆವು. ಬೆಳಿಗ್ಗೆ ತಿಂಡಿ ಮನೆಗೆಲಸ ಮುಗಿಸಿ ಹೊರಟುಬಿಡುತ್ತಿದ್ದೆವು. ಅವಳಿಗೆ ಮೆಹರೋಲಿಯ ಕುತುಬ್ ಮಿನಾರ್, ಚಿರಾಗ ದಿಲ್ಲಿ, ನೆಹರೂ ಪ್ಲೇಸಿನಲ್ಲಿನ ಲೋಟಸ್ ಟೆಂಪಲ್ ಸುತ್ತಾಡಿಸಿದೆ. ಪ್ರತಿಯೊಂದು ಗಲ್ಲಿ, ಇಮಾರತ್ತು, ಗುಮ್ಮಟ, ಪಾಳುಬಿದ್ದ ಕೋಟೆ ಕೊತ್ತಲಗಳ ಐತಿಹಾಸಿಕ ಹಿನ್ನೆಲೆ, ವಿವರ ನನಗೆ ಗೊತ್ತಿದ್ದನ್ನು ತಿಳಿಸಿ, ಲೋಧಿ, ಕುತ್ಬುದ್ದೀನ ಐಬಕ್ ಕಾಲದಲ್ಲಿ ಹೀಗಿದ್ದಿರಬಹುದು, ಹಾಗಿದ್ದಿರಬಹುದು ಎಂಬೆಲ್ಲ ಚರ್ಚೆಗಳೂ ನಡೆದವು. ಹೈಸ್ಕೂಲ್ ಹುಡುಗಿಯರಂತೆ ಗೋಲಾ ಬರ್ಫ್, ಐಸ್ ಕ್ರೀಂ ಇತ್ಯಾದಿ ಮೆಲ್ಲುತ್ತಾ ಬಿಸಿಲಿನ ಪರಿವೆಯಿಲ್ಲದೇ ಕಮಲೆ ದಣಿಯುವಂತೆಲ್ಲ ಓಡಾಡಿಸಿದೆ. ಅಂದಿನ ಆ ಹುರುಪು, ಉತ್ಸಾಹ ನೆನೆದರೆ ಈಗ ಆಶ್ಚರ್ಯವೆನಿಸುತ್ತದೆ. ನಾಲ್ಕು ದಿನ ಇದ್ದಷ್ಟೂ ನಾನು ಅವಳು ಸಣ್ಣ ಮಕ್ಕಳು ಕಲ್ಲು ಮಣ್ಣಿನಲ್ಲಿ ಅಡುಗೆ ಆಟ ಆಡುವಂತೆ ಕಮಲೆ ಒಮ್ಮೆ ಮನೆಯೆಂಬ ಒಂದೇ ಕೋಣೆಯ ತುಂಬ ಸಾಮಾನುಗಳನ್ನು ಹರಡಿಕೊಂಡು ಸಂಕಷ್ಟಿಯ ಗಣಪನಿಗೆ ಮೋದಕ ಮಾಡುತ್ತಿದ್ದ ಚಿತ್ರ ನೆನಪಲ್ಲಿ ಉಳಿದಿದೆ. ನೆನೆದು ನಗುವೂ ಬರುತ್ತದೆ. ಸಾಕಷ್ಟು ಬಾರಿ ಮಾತಿನಲ್ಲಿ ಅವನ ವಿಷಯ ಬರುತ್ತಿತ್ತು. ಜೊತೆಯಲ್ಲೇ ಸಾಕಷ್ಟು ಬಾರಿ ಆಕೆ ನಿನ್ನ ಸ್ವಭಾವ, ಅವನ ಸ್ವಭಾವ ಒಂದೇ ಸಮ ಇದೆ ನೋಡು ಎಂದು ನಾನು ಹುಬ್ಬೇರಿಸುವಂತೆ ಮಾಡಿದ್ದಳು.

ನನಗೆ ಬಾಲ್ಯದ ಸವಿನೆನಪುಗಳೆಲ್ಲ ಲಗ್ಗೆ ಇಡುತ್ತಿದ್ದವು. ಕಮಲೆಗೆ ಇದನ್ನೆಲ್ಲ ಹೇಳಿದೆನೋ ಇಲ್ಲೋ ಗೊತ್ತಿಲ್ಲ. ನನ್ನ ಫ್ರಾಕಿಗೆ ಅವನ ಅಂಗಿ ಮ್ಯಾಚ್ ಆದರೆ ಹಿಗ್ಗುತ್ತಿದ್ದ ಸಂತಸವನ್ನು, ಎಲ್ಲಮ್ಮನ ಗುಡ್ಡಕ್ಕೆ ನಾಲ್ಕಾರು ಮನೆಯವರೆಲ್ಲ ಸೇರಿ ಹೋದಾಗ ನಾವು ಮಕ್ಕಳು ಅಡುಗೆಗೆ ಗುಡ್ಡ ಗುಡ್ಡ ಹತ್ತಿ ಸೌದೆ, ಕುಳ್ಳು ಹುಡುಕಿ ತರುತ್ತಿದ್ದುದು. ಯಾವಾಗಲೂ ಅವನ ಜೊತೆಯಾಗಿಯೇ ಓಡಾಡಿಕೊಂಡಿದ್ದದ್ದಕ್ಕೆ ಅವ್ವ ಊದುಕೊಳವೆಯಿಂದ ಕಾಲಿಗೆ ಬಾರಿಸಿದ್ದು ಎಲ್ಲ ಮರೆತೆ ಇಲ್ಲ. ಅದು ಅವನಿಗೂ ನೆನಪಿದೆ. ನೆನೆದುಕೊಂಡು ಸಾಕಷ್ಟು ನಕ್ಕಿದ್ದೇವೆ. 'ಪಾಪ ನನ್ನಿಂದಾಗಿ ನೀನು ವಿನಾಕಾರಣ ಪೆಟ್ಟು ತಿಂತಿದ್ದೆ' ಎನ್ನುವಾಗ ಮಾತುಗಳು ಮೂಕವಾಗುತ್ತವೆ. 'ಹೌದು ಮಾರಾಯ, ಚೂರು ಬುದ್ಧಿ ಇದ್ದಿದ್ದರೇ ಆ ಊದುಗೊಳವೆಯನ್ನು ನೆನಪಿಗೆಂತ

ಕದ್ದು ತರುತ್ತಿದ್ದೆ' ಅಲ್ಲಾ? ಎನ್ನುವಾಗೆಲ್ಲ ಬದುಕು ಎಲ್ಲಿಂದೆಲ್ಲಿಗೆ ಕರೆದೊಯ್ಯಿತೆಂಬ ನಿಗೂಢತೆಯನ್ನು ಇನ್ನೂ ಅರಿತಿಲ್ಲವೆನಿಸುತ್ತದೆ.

ಅವನಿಗೆ ಕಮಲೆಗೆ ಅದೊಂದು ಪ್ರವಾಸ ಮಾತ್ರವಾಗಿರಲಿಕ್ಕೆ ಸಾಕು. ಬೇಸಿಗೆಯ ಸೂರ್ಯ ಪ್ರಖರವಾದಷ್ಟೂ ಮೈತುಂಬ ಅರಳಿ ತೂಗುವ ಅಮಲ್ತಾಸ್. ದೆಹಲಿಯ ಮೆಲುಕಾಡುವ ಶೂನ್ಯದಲ್ಲಿ ಹಳದಿ ರೇಕನ್ನು, ಗುಲ್ ಮೊಹರಿನ ಕೆಂಪನ್ನು ಬೆರೆಸುವ ಕಡು ಬೇಸಿಗೆಯಲ್ಲಿ ಬಿಸಿಲು ಮಳೆ ಸುರಿಯುವ ದಿನಗಳನ್ನು ಸಹ್ಯವಾಗಿಸುವ, ಮನವನ್ನು ಮೋಹಗೊಳಿಸುವ ಅಮಲ್ತಾಸ್ ಮರವನ್ನು ನೋಡಿದಷ್ಟೂ ಮನ ತಣಿಯುವುದಿಲ್ಲ.

**ರೇಣುಕಾ ನಿಡಗುಂದಿ**

ಓ ಮನಸೇ,

## ಈಗ ಟೈಮ್ ಎಷ್ಟು? ಪ್ಲೀಸ್ ಹೇಳಿ...

ಈಗ ಸಮಯವೆಷ್ಟು? ಗೊತ್ತಿಲ್ಲ.

ಅದು ಅವರವರ ಸಮಯಕ್ಕೆ.. ಅವರವರ ಗಡಿಯಾರಗಳಿಗೆ ಬಿಟ್ಟದ್ದು ಅಲ್ಲವೇ? ಈ ಲೇಖನವನ್ನು ಓದುವ ಸಮಯದಲ್ಲಿ ಅವರ ಗೋಡೆ ಗಡಿಯಾರದಲ್ಲೋ ಕೈ ಗಡಿಯಾರದಲ್ಲೋ ಮೊಬೈಲಿನ ಡಿಜಿಟಲ್ ಯಾ ಅನಾಲಾಗ್ ಗಡಿಯಾರದಲ್ಲೋ ಸಮಯ ಎಷ್ಟು ತೋರಿಸುತ್ತಿರುತ್ತದೆಯೋ – ಅದೇ ಅವರ ಟೈಮ್ ಆಗಿರುತ್ತದೆ ಎಂದು ಅವರೂ ನಂಬಿರುತ್ತಾರೆ...ಕೇಳಿಸಿಕೊಂಡ ನಾವೂ ನಂಬಬೇಕು... ನಂಬೋಣ. ಗಡಿಯಾರದಲ್ಲಿ ತೋರಿಸುವ ಟೈಮ್ ಜಾಸ್ತಿಯೂ, ಕಡಿಮೆಯೂ ಆಗಿರುವುದಿಲ್ಲ.. ಅದು ನಾವು ನಿಗದಿಪಡಿಸಿಕೊಂಡಿರುವ ಕೆಲಸದ ಅವಧಿಗನುಗುಣವಾಗಿ ಭಿನ್ನವಾಗಿ ಗೋಚರಿಸುತ್ತದಷ್ಟೇ.

ಗಡಿಯಾರದ ಸಮಯವನ್ನು ಮುಂದಿರಿಸಿಕೊಳ್ಳುವ ಜನರಿಗೇನು ನಮ್ಮಲ್ಲಿ ಕಮ್ಮಿಯಿಲ್ಲ. ನಮ್ಮ ಬುದ್ದಿಯನ್ನೇ ಫೂಲ್ ಮಾಡಿಕೊಂಡು ನಮ್ಮ ಕೆಲಸ ಮಾಡಿಕೊಳ್ಳುವ ಒಳ್ಳೆಯ ಅಭ್ಯಾಸವೆಂದೂ ಸಾಬೀತಾಗಿದೆ. ಇಂತಹವರಿಗೆ ನೀವು ಟೈಮ್ ಎಷ್ಟಾಯಿತೆಂದು ಕೇಳಿದಿರೋ.. ಅವರು ತಮ್ಮ ಆ ಕ್ಷಣದ ಸಮಯವನ್ನು ಹತ್ತು ಹದಿನೈದು ನಿಮಿಷ ಕಳೆದುಕೊಂಡೇ ಲೆಕ್ಕ ಹಾಕಿ ಹೇಳುತ್ತಾರೋ.. ಈಗಿನದ್ದೇ ಸರಿ ಎಂದು ವಾದಿಸುತ್ತಾರೋ ಅವರಿಗೇ ಗೊತ್ತು.

ಟೈಮ್ ಎಷ್ಟಾಯಿತೆಂಬ ಪ್ರಶ್ನೆ ನಮಗೆ ಹೆಚ್ಚಾನೆಚ್ಚು ರಸ್ತೆಯಲ್ಲೇ ಸಿಗುವುದುಂಟು. ಕೇಳುವವರ ಧೋರಣೆ, ದನಿ, ದಾಟಿಯನ್ನು ಅನುಸರಿಸಿ, ನಮ್ಮ ಮೂಡಿಗನ್ವಯ ಟೈಮು ಎಷ್ಟಾಯಿತೆಂದು ಹೇಳುವ ನಾವು ಒಂದು ಅಪರಿಚಿತ ಭೇಟಿಯನ್ನು ಅಲ್ಲಿಗೆ ಮುಗಿಸಿಬಿಡುತ್ತೇವೆ. ಕೇಳುವ ವ್ಯಕ್ತಿ ಕೂಲಿ ಕಾರ್ಮಿಕನಾಗಿದ್ದು.. ಅವನು ಸಮಯ ಕೇಳಿದಾಕ್ಷಣ ದುಪ್ಪಟ್ಟು ವೇಗದಿಂದ ತನ್ನ ಊಟದ ಡಬ್ಬಿಯೊಂದಿಗೆ ದಾಟಿಕೊಂಡರೆ ಅರೆಕ್ಷಣ ಮರುಕ ಸುಯ್ಯುತ್ತದೆ. ಕೇಳಿದವನ ಕೈಯಲ್ಲೂ ವಾಚ್ ಇದ್ದರೆ ಇದು ಚೇಷ್ಟೆಯ ಪರಾಕಾಷ್ಟೆ ಅನ್ನಿಸಿ ಹುಬ್ಬುಗಂಟಿಕ್ಕಿಬಿಡುತ್ತದೆ. ಆದರೆ ಕೆಲವೊಮ್ಮೆ ಸಮಯ ಕೇಳಿದಾಕ್ಷಣ ನಮಗೆ ಸಮಯ ಹೇಳಲಾಗದಂತಹ ಕನ್‌ಫ್ಯೂಷನ್ ಸ್ಥಿತಿಯಲ್ಲಿ ನಾವಿದ್ದು ಕೆಲಕ್ಷಣ ರಸ್ತೆಯಲ್ಲೇ ಮುಜುಗರದ ಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ.

ಅಪರಿಚಿತರನ್ನು ಮಾತನಾಡಿಸಲು ಬಹುತೇಕ ಜನರಿಗೆ ಇರುವ ಏಕೈಕ ದಾರಿ ಟೈಮ್ ಕೇಳುವುದೇ ಆಗಿದೆ. 'ಸರ್ ಟೈಮೆಷ್ಟಾಯಿತು?' ಅಂತಾ ವಿನಯಶೀಲನಾಗಿ ಕೇಳಿದರೆ ಎಂತಹ ಕ್ರೂರಿಯೂ ಸಮಯ ಹೇಳದೇ ಇರಲಾರ. ಅದು ಬಿಟ್ಟು 'ಸರ್ ಎಲ್ಲಿಗೆ ಹೊರಟಿದ್ದೀರ?' 'ಸರ್ ಏನು ಕೆಲಸ ಮಾಡುತ್ತಿದ್ದೀರಿ?' ಹೀಗೆ ಯಾವ ಪ್ರಶ್ನೆ

ಕೇಳಿದರೂ ಅಪರಿಚಿತತೆ ನಿರ್ದಿಷ್ಟವಾಗಿ ಕೆಲಸ ಮಾಡಿ 'ನಿಮಗ್ಯಾಕ್ರಿ ಅದೆಲ್ಲ..' ಅನ್ನುವ ಒಂದೇ ಮಾತು ಎಲ್ಲ ಸ್ನೇಹ ಸೇತುವೆಯನ್ನು ಮುರಿದು ಬಿಡುತ್ತದೆ. ಇನ್ನು 'ಆಂಟೀ, ಟೈಮೆಷ್ಟು?' ಅಂತಾ ಆಂಟಿಯಂತೆ ಗೋಚರಿಸುವ ಹೆಂಗಸಿಗೆ ಕೇಳಿದರೆ ವಿವಿಧ ರೀತಿಯ ಪ್ರತಿಕ್ರಿಯೆಗಳನ್ನು ಪಡೆದು ಪ್ರಸನ್ನರಾಗಬಹುದು, ಪ್ರಸಾದ ಗಿಟ್ಟಿಸಬಹುದು, ಕೆನ್ನೆ ಬಿಸಿಯೂ ಮಾಡಿಕೊಳ್ಳಬಹುದು.

ಟೈಮ್ ಎಷ್ಟಾಯಿತು ಎಂದು ವ್ಯಕ್ತಿಯೊಬ್ಬನ ಕೆಟ್ಟ ಸಮಯದಲ್ಲಿ ಕೇಳಿದರೆ.. 'ನನ್ ಟೈಮೇ ಸರಿ ಇಲ್ಲ.. ನಿನಗೇನು ಟೈಮ್ ಹೇಳ್ಲಿ' ಅಂತಲೋ, 'ನನ್ನ ವಾಚ್ ನಿಂತು ಎಷ್ಟೋ ತಿಂಗ್ಳಾಯ್ತು..ನೀನೇ ಹೇಳಿ ಹೋಗಪ್ಪಾ..' ಅನ್ನುವ ಉತ್ತರಗಳನ್ನೋ ಪಡೆಯಬೇಕಾದೀತು. ಹೀಗೆ ಈ 'ಟೈಮೆಷ್ಟು?' ಪ್ರಶ್ನೆ ಕಾಲಾತೀತವಾಗಿ ನಿಲ್ಲುವುದನ್ನು ಕಾಣಬಹುದು. ಈ ಟೈಮ್ ಅನ್ನು ಟೇಮ್ ಮಾಡಲು ಯಾರ ಕೈಯಿಂದಲೂ ಸಾಧ್ಯವಿಲ್ಲದಿದ್ದರೂ ಅದರ ಜೊತೆ ಆಟ ಆಡುತ್ತಲೇ ಇರುತ್ತೇವೆ. ಟೈಮ್ ಮೀರಿ ಕೆಲಸಕ್ಕೆ ಹೋಗುವುದು ನಮ್ಮ ಅನಿವಾರ್ಯತೆ – ಅಸಹಾಯಕತೆಯಾದರೆ, ಸಮಯವನ್ನು ಮೀರಿ ಹೋಗಿಯೇ ವರ್ಚಸ್ಸು ತೋರಿಸುವ ಗಣ್ಯವ್ಯಕ್ತಿಗಳಿಗೇನು ಕಮ್ಮಿಯಿಲ್ಲ.

ಟೈಮ್ ಎಷ್ಟೆಂದು ರೈಲ್ವೆ ಉದ್ಯೋಗಿಗಳಿಗೆ ಕೇಳಿ ಹದಿನಾಲ್ಕು ಗಂಟೆ ಅಂತಲೋ ಇಪ್ಪತ್ತೆರಡು ವರೆ ಅಂತಲೋ ಉತ್ತರ ಪಡೆದು ಬೇಸ್ತು ಬಿದ್ದವರಿದ್ದಾರೆ.. ಅವರದ್ದೇ ಇಪ್ಪತ್ನಾಲ್ಕು ಗಂಟೆಗಳ ಸಮಯ ಅವರ ಬದುಕಲ್ಲೂ ಹಾಸು ಹೊಕ್ಕಾಗಿರುತ್ತದೆ. ಇನ್ನು ಕೆಲವು ಭೇಟಿಗಳು ಎಎಮ್ಮೋ ಪಿಎಮ್ಮೋ ಸ್ಪಷ್ಟವಾಗದೇ ತಪ್ಪಿ ಹೋಗಿವೆ. ಪ್ರಿಯಕರ ಪ್ರೇಯಸಿಗೆ ಏಳು ಗಂಟೆಗೆ ಪಾರ್ಕಿನಲ್ಲಿ ಕಾಯುತ್ತಿರು ಎಂದು ಹೇಳಿ, ಆತ ಬೆಳಗ್ಗೆ ಹೋಗಿ ಕಾದರೆ ಆಕೆ ಸಂಜೆ ಹೋಗಿ ಕಾಯುತ್ತ ಇಬ್ಬರೂ ಭಯಂಕರವಾಗಿ ಜಗಳವಾಡುವ ಸಂದರ್ಭಗಳು ಅನೇಕ.

ನಿಂತು ಹೋಗಿರುವ ವಾಚುಗಳನ್ನು ಕಟ್ಟಿಕೊಂಡು ತಿಂಗಳುಗಟ್ಟಲೆ ಓಡಾಡುವ ಮಂದಿಗೆ ಈ ಪ್ರಶ್ನೆ ಬಹಳ ಮುಜುಗರದ್ದು. ನಿಂತ ಗಡಿಯಾರ ಅವರ ಜೊತೆ ಅವರು ಹೋದಲೆಲ್ಲ 'ಚಲಿಸು'ತ್ತಿರುತ್ತದೆಯೇ ಹೊರತು ವೇಳೆ ತೋರಿಸುತ್ತಿರುವುದಿಲ್ಲ. ಅಂತವರಿಗೆ ಟೈಮೆಷ್ಟು ಕೇಳಿದಾಕ್ಷಣ ಅವರು 'ನಿಂತಿದೆ' ಅಂದರೆ ಕೇಳಿದವನ ಮುಂಚೆ ಚೀಪ್ ಆಗಿಬಿಡುವ ಸ್ಥಿತಿಯಲ್ಲಿ ಮೊಬೈಲಿಗೆ ಮೊರೆ ಹೋಗುತ್ತಾರೆ. ಇಲ್ಲವೇ ಕೇಳಿದವರ ಎದುರು ಒಂದೆರೆಡು ಬಾರಿ ಕೈಗಡಿಯಾರಕ್ಕೆ ಕುಟ್ಟಿದರೆ, ಅವರೇ ಅರ್ಥ ಮಾಡಿಕೊಂಡು ಮುಂದೆ ಹೋಗುತ್ತಾರೆ. ಆದರೆ ಈ ನಿಂತ ಗಡಿಯಾರ ಎಂತೆಂತಹ ಸಮಯದಲ್ಲಿ ಮಾನವನ್ನು ಹರಾಜು ಹಾಕುತ್ತದೆಂದು ಕಟ್ಟಿಕೊಂಡು ಹೆಣಗಿದವರಿಗೇ ಗೊತ್ತು.

ಆದರೆ ನಮ್ಮ ಬಿಡುವಿಲ್ಲದ ದಿನಚರಿಯಲ್ಲಿ ಇನ್ನೊಬ್ಬರಿಗೆ ಟೈಮ್ ಹೇಳುವ ಸಮಯಕ್ಕೂ ಜಿಪುಣತನ ಮಾಡುತ್ತ.. ಕೇಳಿಸಿಯೂ ಕೇಳಿಸದಂತೆ ದಾಟುವ ಜನರೂ ನಮ್ಮ ನಡುವೆ ಇದ್ದಾರೆ.  ಅಂತೆಯೇ ಹೊಸ ವಾಚ್ ಕಟ್ಟಿಕೊಂಡ ಮಕ್ಕಳಿಗೆ ಟೈಮೆಷ್ಟೆಂದು ಕೇಳದಿದ್ದರೆ ಮುಗಿದೇ ಹೋಯಿತು.. ಅವರಿಗೆ ಟೈಮು ಕೇಳಿ.. ಅವರು ಒಂಭತ್ತು ಮುಕ್ಕಿಯೋ, ಹತ್ತಿಪ್ಪತ್ತು ಕಾಲು ಅಂದ್ರೋ.. ನಗೆಚಾಟಿಕೆ ಹಾರಿಸದಿದ್ದರೆ.. ಹೊಸ ಆಟಿಕೆ ವಾಚು ಕಟ್ಟಿಕೊಂಡದ್ದೂ ವೇಸ್ಟು. ಇನ್ನು.. 'ಪಂಡಿತರೇ ನಮಗೊಂದು ಟೈಮ್ ಕೊಡಿ..' ಅಂತಾ ಮಂಗಳ ಮುಹೂರ್ತಕ್ಕೆ ಜನ ಸಮಯ ಕೇಳಿದರೆ, ಸುಪಾರಿ ಕಿಲ್ಲರ್ ಕೂಡಾ ಟೈಮ್ ಕೇಳುತ್ತಾನೆ.. ಆಯಾ ಟೈಮುಗಳು ಮಿಸ್ಸಾದರೆ ಏನೋ ಹೋಗಿ ಏನೋ ಆಗುತ್ತದೆ.. ಎಷ್ಟೆಲ್ಲ ಸಿನಿಮಾಗಳಲ್ಲಿ ನೋಡಿಲ್ಲ?  ಏನೆಲ್ಲ ಆಗಿಲ್ಲ ಈ ಸಮಯದ ಮಿಸ್ಸಾಟಕ್ಕೆ? ಅದಕ್ಕೇ ನಮ್ಮ ವಾಚುಗಳು, ಅದರಲ್ಲಿ ತೋರಿಸುವ ಸಮಯಗಳೂ ಸರಿಯಾಗಿದ್ದು ಕೇಳುವವರಿಗೆ ಸರಿಯಾದುದ್ದನ್ನೇ ಮುಗುಳ್ನಗೆಯೊಂದಿಗೆ ಹೇಳೋಣ.  ಟೈಮು ಎಷ್ಟಾದರೆ ಏನಂತೆ.. ಒಂದರೆ ಕ್ಷಣ ನಿಂತು ಮುಗುಳ್ನಗೆಯೊಂದಿಗೆ ಹೇಳಿದರಾಯಿತಷ್ಟೇ.. ಅದೆಲ್ಲಾ ಸರಿ.. ಈಗ ಟೈಮೆಷ್ಟು ಹೇಳ್ತೀರಾ?

**ಇಂದ್ರಕುಮಾರ್ ಎಚ್.ಬಿ.**

ಸಖಿ ಮೇ ೨೦೧೪

## ಲೇಖಕರ ವಿಳಾಸಗಳು

**೧. ಎಚ್.ಎಸ್. ವೆಂಕಟೇಶಮೂರ್ತಿ**
#೯೧, 'ಸಖಿ',
೩ನೇ ಕ್ರಾಸ್, ಪುಷ್ಪಗಿರಿ ನಗರ,
ಬೆಂಗಳೂರು.

**೨. ಕೃಷ್ಣಮೂರ್ತಿ ಹನೂರು**
#2, 'ಎಚ್' ಬ್ಲಾಕ್, ರಾಮಕೃಷ್ಣ ನಗರ,
ಮೈಸೂರು 570 022
ಮೈಸೂರು

**೩. ಸತ್ಯನಾರಾಯಣ ಕೆ.**
#೯, 'ಪ್ರಕೃತಿ' ೧೩ನೇ ಮೇನ್,
೬ನೇ ಕ್ರಾಸ್, ಪದ್ಮನಾಭನಗರ,
ಬೆಂಗಳೂರು –೭೦
kssatya600@gmail.com

**೪. ಚಿಂತಾಮಣಿ ಕೊಡ್ಲೆಕೆರೆ**
#೫೫, ಶ್ರೀಗುರುಚರಣಂ
೩ನೇ ಕ್ರಾಸ್,
ಬ್ಯಾಡರಹಳ್ಳಿ ಟೆಲಿಕಾಂ ಲೇಔಟ್,
ಸಿಐಐ–ಐಕ್ಯು
ಬೆಂಗಳೂರು –೯೧
ckodlekere@gmail.com

**೫. ಕಲೀಮ್ ಉಲ್ಲಾ**
ಮನೆ ನಂ. 50, 'ಅಬ್ಬು ನಿಲಯ'
1ನೇ ತಿರುವು, 1ನೇ ಮಹಡಿ,
ಬಾಪೂಜಿ ನಗರ, ಶಿವಮೊಗ್ಗ.
kaleemullakm@gmail.com

**೬. ಪ್ರಹ್ಲಾದ ಡಿ.ವಿ.**
'ಸಂಚಯ'
#೧೦೦, ೨ನೇ ಮುಖ್ಯ ರಸ್ತೆ, ೬ನೇ ಬ್ಲಾಕ್, ಬನಶಂಕರಿ ೩ ನೇ ಹಂತ,
ಬೆಂಗಳೂರು ೫೬೦೦೮೫

**೭. ಬೇದ್ರೆ ಮಂಜುನಾಥ**
ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ,
ಹಾಸನ – 573 202
ಫೋ: 94485 – 89089
bedre.manjunath@gmail.com

**೮. ಎಚ್. ರಮೇಶ್ ಕೆದಿಲಾಯ**
#೬–೧೫೦/೨೨, 'ಶ್ರೀಗುರು'
ಕೊಟ್ಟಾರ ಚೌಕಿ, ಬೆ.ಬಿ.ಲೋಬೋ ರಸ್ತೆ, ೫ನೇ ಕ್ರಾಸ್, ಮಂಗಳೂರು ೫೭೫೦೦೬

**೯. ಚಿದಾನಂದ ಸಾಲಿ**
೭–೫–೧೪೮/೪, ಜವಾಹರ್ ನಗರ, ರಾಯಚೂರು ೫೮೪೧೦೩
chidusali@gmail.com

**೧೦. ಎ.ಆರ್. ಮಣಿಕಾಂತ್**
#689, 5ನೇ ಮೇನ್, 8ನೇ ಕ್ರಾಸ್, ಕೆಂಗೇರಿ ಸ್ಯಾಟಲೈಟ್ ಟೌನ್, ಬೆಂಗಳೂರು 60
armanikanth@gmail.com

**೧೧. ಡಿ. ರಾಮನಮಲಿ**
'ಹೊಂಬೆಳಕು'
ಆಚಾರ್ಯ ಬಡಾವಣೆ,
ಹರಪನಹಳ್ಳಿ
ದಾವಣಗೆರೆ ಜಿಲ್ಲೆ
ramanamali.d@gmail.com

**೧೨. ಛಾಯಾ ಭಗವತಿ**
#೨೧೨೩, ೭ನೇ ಕ್ರಾಸ್,
ಮೊದಲನೇ ಮುಖ್ಯ ರಸ್ತೆ,
ಆರ್.ಪಿ.ಸಿ. ಲೇ ಔಟ್,
ವಿಜಯನಗರ ೨ನೇ ಹಂತ,
ಬೆಂಗಳೂರು– ೪೦
chayaguru@gmail.com

**೧೩. ಡಿ.ಎಂ.ಕುರ್ಕೆ ಪ್ರಶಾಂತ**
ಡಿಎಂಕುರ್ಕೆ ಅಂಚೆ,
ಅರಸೀಕೆರೆ ೫೭೩೧೧೭
ಹಾಸನ ಜಿಲ್ಲೆ
prashantha.m69@gmail.com

**೧೪. ಶ್ರೀನಿಧಿ ಡಿ.ಎಸ್.**
ಭೋಜರಾಜ ಭವನ,
ತಾಳಿಪಾಡಿ, ಕಿನ್ನಿಗೋಳಿ ಪೋಸ್ಟ್,
ಮಂಗಳೂರು ತಾಲೂಕು,
ದಕ್ಷಿಣ ಕನ್ನಡ–೫೭೪೧೫೦
shreenidhids@gmail.com

**೧೫. ಮಧುರಾ ಕರ್ಣಮ್**
#೨೭, ಮಾತೃಸ್ಫೂರ್ತಿ, ೮ನೇ ಮೇನ್,
ಶಂಕರ್ ನಗರ, ಬೆಂಗಳೂರು ೯೬
madhurakarnam@yahoo.in

**೧೬. ಸಂತೆಬೆನ್ನೂರು ಫೈಜ್ನಟ್ರಾಜ್**
ಬ್ರಾಹ್ಮಣರ ಬೀದಿ,
ಸಂತೇಬೆನ್ನೂರು, ಚನ್ನಗಿರಿ ತಾ
ದಾವಣಗೆರೆ ಜಿಲ್ಲೆ.
faiznatraj@gmail.com

**೧೭. ವೈಶಾಲಿ ಹೆಗಡೆ**
ಬಾಸ್ಟನ್, ಅಮೇರಿಕ
vaishalimadhu@gmail.com

**೧೮. ಪದ್ಮನಾಭ ಭಟ್, ಶೇವ್ಕಾರ**
ಹೊನ್ನೆಬೇಣ,
ಗುಳ್ಳಾಪುರ ಅಂಚೆ,
ಅಂಕೋಲ ತಾಲ್ಲೂಕು
ಉತ್ತರ ಕನ್ನಡ ೫೮೧೩೩೭
padmanabh.shevkar@gmail.com

**೧೯. ಪ್ರಸಾದ್ ಶೆಣೈ ಆರ್.ಕೆ.**
ಶಾರದಾ ನಿವಾಸ್,
ಮಾರ್ಕೆಟ್ ರೋಡ್,
ಕಾರ್ಕಳ ೫೭೪೧೦೪,
ಉಡುಪಿ ಜಿಲ್ಲೆ
prasad.shenoy93@gmail.com

**೨೦. ಟಿ.ಎಸ್. ಗೊರವರ**
ರಾಜೂರ ಅಂಚೆ,
ರೋಣ ತಾಲೂಕು
ಗದಗ ಜಿಲ್ಲೆ ೫೮೨೨೧೪
tsgoravar@gmail.com

**೨೧. ಗೋವಿಂದರಾಜು ಟಿ**
#೭೬೫, ೪ನೇ ಮುಖ್ಯರಸೆ,
ಕಿರ್ಲೋಸ್ಕರ್ ಲೇಔಟ್,
ಹೆಸರಘಟ್ಟ ರಸ್ತೆ,
ಬೆಂಗಳೂರು – ೭೩
folklore.tgovindaraju@gmail.com

**೨೨. ಜಾಹ್ನವಿ ಹಳ್ಳೂರ**
#೩೦೧, 'ಎ ಬ್ಲಾಕ್, ಎಸ್‌ಎಮ್ ಆರ್ ವಿನಯ್ ಕಾಸ್ಕೇಡ್ಸ್, ಜಗದೀಶ ನಗರ,
ಎನ್‌ಟಿ ಸಂದ್ರ ಅಂಚೆ,
ಬೆಂಗಳೂರು ೫೬೦೦೭೫
januhallur@gmail.com

**೨೩. ಅಕ್ಷಯ್ ಪಂಡಿತ್**
#೪೦೮, ಮೊದಲ ಮಹಡಿ, ೧೫ನೇ ಕ್ರಾಸ್, ೫ನೇ ಮೇನ್, ಎಚ್.ಎಸ್.ಆರ್ ಲೇ
ಔಟ್, ಸೆಕ್ಟರ್ ೬, ಬೆಂಗಳೂರು ೫೬೦೧೦೨
akshaygp@gmail.com

**೨೪. ನಾಗೇಂದ್ರಪ್ಪ ದಾಗಿನಕಟ್ಟೆ**
#೫೯, 'ಶ್ರೀರಂಗ'
ಗೋಪಾಳ, ಕೆ.ಎಚ್.ಬಿ. ಕಾಲೋನಿ,
ಶಿವಮೊಗ್ಗ.
೯೯೬೪೪೮೮೪೭೪

**೨೫. ವಿಜಯಾ ಶ್ರೀಧರ್**
'ಶ್ರೀವಿಜಯ' ೬ನೇ ಕ್ರಾಸ್,
ರಾಜೇಂದ್ರ ನಗರ,
ಶಿವಮೊಗ್ಗ ೫೭೭೨೦೪
sridhar.vijaya@rediffmail.com

**೨೬. ಸುಶ್ರುತ ದೊಡ್ಡೇರಿ**
ಬಿ ದೊಡ್ಡೇರಿ,
ಸೊರಬ ತಾಲ್ಲೂಕು
ಶಿವಮೊಗ್ಗ ೫೭೭೪೩೪
hisushrutha@gmail.com

**೨೭. ತುರುವೇಕೆರೆ ರವಿಶಂಕರ್**
ಇ/ಮ ನಂಜಪ್ಪ ಎಂ.
#೧೦೫, ಮಹಾವೀರ ಸ್ಕ್ವೇರ್,

ವಿಜಯಶ್ರೀ ಲೇಔಟ್,
ಕೋಡಿಚಿಕ್ಕನಹಳ್ಳಿ,
ಬೆಂಗಳೂರು – ೭೬
ravishankar354@gmail.com

**೨೮. ಕೆ.ಎಸ್. ಚೈತ್ರ**
'ಅನುಗ್ರಹ'
ಜಿ–೧೯೫, ೧೭ನೇ ಮೇನ್,
೭ನೇ ಕ್ರಾಸ್, ಶಂಕರ್ ನಗರ, ಬೆಂಗಳೂರು೫೬೦೦೯೨
kschaitra@hotmail.com

**೨೯. ಕಾವೇರಿ ಎಸ್.ಎಸ್.**
ಕುಶಾಲನಗರ ಬಡಾವಣೆ,
ಸಕಲೇಶಪುರ, ಹಾಸನ ಜಿಲ್ಲೆ–೫೭೩೧೩೪
ಮೊಬೈಲ್: ೮೦೫೦೪೩೦೬೮೮
sskaavu@gmail.com

**೩೦. ರಶ್ಮಿ ಎಸ್**
#೭೫, ಮಹಾತ್ಮಾ ಗಾಂಧಿ ರಸ್ತೆ,
ಪ್ರಜಾವಾಣಿ
ಬೆಂಗಳೂರು

**೩೧. ಸ್ಮಿತಾ ಅಮೃತ್‌ರಾಜ್ ಸಂಪಾಜೆ**
'ಹಸಿರು' ಬಾಲಂಬಿ ಅಂಚೆ
ಚೆಂಬು ಗ್ರಾಮ,
ಮಡಿಕೇರಿ ೫೭೪೨೩೪
ಕೊಡಗು
smitha.hasiru@gmail.com

**೩೨. ದೀಪ್ತಿ ಭದ್ರಾವತಿ**
'ಸ್ನಿಗ್ಧ ನಿಲಯ'
೨ನೇ ಕ್ರಾಸ್,

ಶಂಕರಮಠ ರಸ್ತೆಯ ಬಲಬದಿ,
ಸಿದ್ಧಾರೂಢ ನಗರ,
ಭಧ್ರಾವತಿ ೫೭೭೩೦೧
deepthibdvt@gmail.com

**೩೩. ಎಚ್.ಕೆ. ಶರತ್**
#೩೨, ಡೆಂಟಲ್ ಕಾಲೇಜು ಹಿಂಭಾಗ, ವಿವೇಕಾನಂದ ರಸ್ತೆ, ವಿದ್ಯಾನಗರ,
ಹಾಸನ, ೫೭೩೨೦೧
hksharu@gmail.com

**೩೪. ರೂಪ ಹಾಸನ**
**'ಪ್ರೇರಣ',**
**ಸೆಂಟ್ ಜೋಸೆಫ್ ಕಾಲೇಜು ರಸ್ತೆ,**
**ಉತ್ತರ ಬಡಾವಣೆ, ಹಾಸನ** 573201
rupahassan@gmail.com

**೩೫. ಧರ್ಮಶ್ರೀ ಬಿ. ಅಯ್ಯಂಗಾರ್**
ನಂ ೯೬, 'ಧರ್ಮಗಿರಿ'
೨ನೇ ಮುಖ್ಯರಸ್ತೆ, ಜಯನಗರ
ಮೈಸೂರು-೧೪
dharmashree.iyengar@gmail.com
**೩೬.ವಿದ್ಯಾರಶ್ಮಿ ಪೆಲತ್ತಡ್ಕ**
ವಿಜಯಕರ್ನಾಟಕ
ಬೆಂಗಳೂರು
vrpelathadka@gmail.com

**೩೭. ದೊಡ್ಡಬಸಪ್ಪ ಬಳೂರಗಿ**
ಪ್ರೇಮಕುಂಜ,
ಬಸವೇಶ್ವರ ನಗರ ಕೋರ್ಟ್ ರಸ್ತೆ,
ಶಹಾಪೂರ ೫೮೫೨೨೩
ಯಾದಗಿರಿ ಜಿಲ್ಲೆ

**೩೮. ಶಾರದಾ ವಿ ಮೂರ್ತಿ**
೨೦೨, ೬ನೆ ಕ್ರಾಸ್,೩ನೆ ಮೈನ್,
ಮೈಕೊ ಲೇಔಟ್,ಬಿ ಟಿ ಎಂ ಲೇಔಟ್ ೨ನೆ ಹಂತ,
ಬೆಂಗಳೂರು ೫೬೦ ೦೭೬
sharada.v.murthy@gmail.com

**೩೯. ಉಷಾ ನರಸಿಂಹನ್**
#೭೬, ೪ನೇ ಮೇನ್,
ಎನ್–ಬ್ಲಾಕ್, ಕುವೆಂಪು ನಗರ,
ಮೈಸೂರು–೨೩
ushanarasimhan64@gmail.com

**೪೦. ಸತ್ಯವತಿ ಹರಿಕೃಷ್ಣನ್**
ಸತ್ಯವತಿ ಹರಿಕೃಷ್ಣನ್
‘ಕೌಸ್ತುಭ’
ಮೈದಾನ ರಸ್ತೆ, ಸುರತ್ಕಲ್
ಮಂಗಳೂರು – ೫೭೫೦೧೪
sathyavathi.h.rao@gmail.com

**೪೧. ಸಿದ್ದು ಸತ್ಯನ್ನನವರ**
ಡಂಬಳ ಅಂಚೆ,
ಮುಂಡರಗಿ ತಾಲ್ಲೂಕು,
ಗದಗ ಜಿಲ್ಲೆ, ೫೮೨೧೧೩
siddumcj@gmail.com

**೪೨. ಹರಿಪ್ರಸಾದ್ ಕೆ.ಆರ್.**
‘ನಿರಂತರ’, ೧ನೇ ಮೇನ್,
ಸರಸ್ವತಿಪುರ, ಮೈಸೂರು–೯
lokayatha@gmail.com

**೪೩. ಕೈದಾಳ್ ಕೃಷ್ಣಮೂರ್ತಿ**
ಕೈದಾಳೆ,
ದಾವಣಗೆರೆ ತಾ, ಜಿ
ಮೊ : ೯೯೭೨೮೯೯೧೩೧
kaidal1982@gmail.com

**೪೪. ಅನಿತಾ ನರೇಶ್ ಮಂಚಿ**
ಮಂಚಿ ಅಂಚೆ,
ಬಂಟ್ವಾಳ ತಾಲ್ಲೂಕು,
ದಕ್ಷಿಣ ಕನ್ನಡ ಜಿಲ್ಲೆ ೫೭೪೩೨೩
aninaresh.manchi760@gmail.com

**೪೫. ಸಹನಾ ಕಾಂತಬೈಲು**
ಬಾಲಂಬಿ ಅಂಚೆ
ಮಡಿಕೇರಿ ತಾಲೂಕು– ೫೭೪೨೩೪
ಮೊ: ೯೦೦೮೧೯೬೫೨೨

**೪೬. ಹನುಮಂತ ಹಾಲಿಗೇರಿ**
ತುಳಸಿಗೇರಿ
ಬಾಗಲಕೋಟೆ ೫೭೫೨೦೪
haligeri2009@gmail.com

**೪೭. ತಿರುಪತಿ ಭಂಗಿ**
ದೇವನಾಳ
ಬಾಗಲಕೋಟ ೫೮೭೨೦೪
tirupatibhangi@gmail.com

**೪೮. ದಯಾನಂದ**
ಅಂಗನವಾಡಿ ಕೇಂದ್ರದ ಪಕ್ಕ,
ದರೋಗೌಡನಹಳ್ಳಿ ಪಾಳ್ಯ,
ಸಂಪಿಗೆ ಹೊಸಹಳ್ಳಿ ಅಂಚೆ,
ತುರುವೆಕೆರೆ ೫೭೨೨೨೫
ತುಮಕೂರು ಜಿಲ್ಲೆ.
chamrajdaya@gmail.com

**೪೯. ಮುದ್ದು ತೀರ್ಥಹಳ್ಳಿ**
'ಪ್ರಶಮ'
ಬೆಟ್ಟಮಕ್ಕಿ ಹೊಸ ಬಡಾವಣೆ,
ಸೀಬಿನಕೆರೆ ಅಂಚೆ
ತೀರ್ಥಹಳ್ಳಿ ೫೭೭೪೩೨
ಶಿವಮೊಗ್ಗ.
muddhutheerthahalli@gmail.com

**೫೦. ರೇಣುಕಾ ನಿಡಗುಂದಿ**
ಬಿ–೧೮, ಪಾಕೆಟ್–೭,
ಕೇಂದ್ರೀಯ ವಿಹಾರ್ –೨,
ಸೆಕ್ಟರ್ –೮೨, ನೋಯ್ಡಾ,
೧೧೦, ಮಾರ್ಕೆಟ್ ಎದುರು,
ಉತ್ತರ ಪ್ರದೇಶ.

**೫೧. ಇಂದ್ರಕುಮಾರ್ ಎಚ್.ಬಿ.**
#**೧೬೪,** ಮಾತೃಪಿತೃ ನಿಲಯ,
ಡಿ.ಸಿ.ಎಂ ಟೌನ್‌ಶಿಪ್, ಸಿ–ಬ್ಲಾಕ್,
ದಾವಣಗೆರೆ ೫೭೭೦೦೩
indrakumarhb@gmail.com